ರಾಯಚೂರು ಜಿಲ್ಲೆಯ ದೊಡ್ಡಿಗಳ ತೌಲನಿಕ ಅಧ್ಯಯನ

(ಸಮಾಜಶಾಸ್ತ್ರ ವಿಷಯದಲ್ಲಿ ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕ
ಯಲ್ಲಪ್ಪ ಭೀಮಣ್ಣ

ಮಾರ್ಗದರ್ಶಕರು
ಡಾ. ತಾರಿಹಳ್ಳಿ ಹನುಮಂತಪ್ಪ
ಸಹಾಯಕ ಪ್ರಾಧ್ಯಾಪಕರು

ಮಾನವಶಾಸ್ತ್ರ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ. ಹಂಪಿ
ವಿದ್ಯಾರಣ್ಯ- ೫೮೩ ೨೭೬

೨೦೧೬

718

718

ರಾಯಚೂರು ಜಿಲ್ಲೆಯ ದೊಡ್ಡಿಗಳ ತೌಲನಿಕ ಅಧ್ಯಯನ

(ಸಮಾಜಶಾಸ್ತ್ರ ವಿಷಯದಲ್ಲಿ ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ

ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕ

ಯಲ್ಲಪ್ಪ ಭೀಮಣ್ಣ

ಮಾರ್ಗದರ್ಶಕರು

ಡಾ. ತಾರಿಹಳ್ಳಿ ಹನುಮಂತಪ್ಪ

ಸಹಾಯಕ ಪ್ರಾಧ್ಯಾಪಕರು

ಮಾನವಶಾಸ್ತ್ರ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೬

ದೃಢೀಕರಣ ಪತ್ರ

ಶ್ರೀ ಯಲ್ಲಪ್ಪ ಭೀಮಣ್ಣ ಅವರು ಪಿಎಚ್.ಡಿ ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ **ರಾಯಚೂರು ಜಿಲ್ಲೆಯ ದೊಡ್ಡಿಗಳ ತೌಲನಿಕ ಅಧ್ಯಯನ** ಎಂಬ ವಿಷಯಕ್ಕೆ ಸಂಬಂಧಿಸಿದ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಸಮಾಜ ವಿಜ್ಞಾನಗಳ ನಿಕಾಯದ ಮಾನವಶಾಸ್ತ್ರ ವಿಭಾಗಕ್ಕೆ ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಮಹಾಪ್ರಬಂಧವು ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

T. Hanumanthappa

ದಿನಾಂಕ : 21.9.2016

ಸ್ಥಳ : ವಿದ್ಯಾರಣ್ಯ.

(ಡಾ. ತಾರಿಹಳ್ಳಿ ಹನುಮಂತಪ್ಪ)
ಮಾರ್ಗದರ್ಶಕರು
ಸಹಾಯಕ ಪ್ರಾಧ್ಯಾಪಕರು
ಮಾನವಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ಪ್ರಮಾಣ ಪತ್ರ

ರಾಯಚೂರು ಜಿಲ್ಲೆಯ ದೊಡ್ಡಿಗಳ ತೌಲನಿಕ ಅಧ್ಯಯನ ಎಂಬ ವಿಷಯಕ್ಕೆ ಸಂಬಂಧಿಸಿದ ಮಹಾಪ್ರಬಂಧವನ್ನು ಪಿಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಸಮಾಜ ವಿಜ್ಞಾನಗಳ ನಿಕಾಯದ ಮಾನವಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ.ತಾರಿಹಳ್ಳಿ ಹನುಮಂತಪ್ಪ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧವು ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

[signature]
(ಯಲ್ಲಪ್ಪ ಭೀಮಣ್ಣ)
ಪಿಎಚ್.ಡಿ ಸಂಶೋಧನಾ ವಿದ್ಯಾರ್ಥಿ
ಮಾನವಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ದಿನಾಂಕ : 21-4-2016
ಸ್ಥಳ : ವಿದ್ಯಾರಣ್ಯ

ರಾಯಚೂರು ಜಿಲ್ಲೆಯ ದೊಡ್ಡಿಗಳ ತೌಲನಿಕ ಅಧ್ಯಯನ

ಪರಿವಿಡಿ

ಅಧ್ಯಾಯ ಒಂದು : ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ ೧/೨೪

೧.೧. ಪ್ರಸ್ತಾವನೆ

೧.೨. ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

೧.೩. ಅಧ್ಯಯನದ ಮಹತ್ವ ಮತ್ತು ಸ್ವರೂಪ

೧.೪. ಅಧ್ಯಯನದ ವಿಧಾನಗಳು

೧.೫. ಅಧ್ಯಯನಗಳ ಸಮೀಕ್ಷೆ

ಅಧ್ಯಾಯ ಎರಡು : ರಾಯಚೂರು ಜಿಲ್ಲೆಯ ಚಾರಿತ್ರಿಕ ಹಿನ್ನೆಲೆ ೨೫/೫೬

೨.೧. ರಾಯಚೂರು ಜಿಲ್ಲೆಯ ಚಾರಿತ್ರಿಕ ಹಿನ್ನೆಲೆ

೨.೨. ರಾಯಚೂರು ಜಿಲ್ಲೆಯ ಭೌಗೋಳಿಕ ಹಿನ್ನೆಲೆ

ಅಧ್ಯಾಯ ಮೂರು : ದೊಡ್ಡಿಗಳ ಪರಿಚಯ ೫೭/೧೦೯

೩.೧. ದೊಡ್ಡಿಯ ಪರಿಕಲ್ಪನೆ

೩.೨. ದೊಡ್ಡಿಯ ಹಿನ್ನೆಲೆ

೩.೩. ದೊಡ್ಡಿ ಪದ ನಿಷ್ಪತ್ತಿ

೩.೪. ದೊಡ್ಡಿಗಳ ಸ್ವರೂಪ

ಅಧ್ಯಾಯ ನಾಲ್ಕು : ಸಮುದಾಯಗಳ ಸ್ಥೂಲ ಪರಿಚಯ ೧೧೦/೧೯೬

೪.೧. ಬೇಡ ಸಮುದಾಯ

೪.೨. ಕುರುಬ ಸಮುದಾಯ

೪.೩. ಕಬ್ಬಲಿಗ ಸಮುದಾಯ

ಅಧ್ಯಾಯ ಐದು : ಸಮುದಾಯಗಳ ಜನಜೀವನ ೧೯೭/೨೩೪

೫.೧. ದೊಡ್ಡಿಗಳ ಸ್ಥಿತಿಗತಿ

೫.೨. ಕ್ಷೇತ್ರಕಾರ್ಯದ ಕೋಷ್ಟಕಗಳು

ಅಧ್ಯಾಯ ಆರು : ದೊಡ್ಡಿಗಳ ಸಮಸ್ಯೆಗಳು ೨೩೫/೨೫೭

೬.೧. ಸಾಮಾಜಿಕ ಸಮಸ್ಯೆಗಳು

೬.೨. ಆರ್ಥಿಕ ಸಮಸ್ಯೆಗಳು

೬.೩. ಶೈಕ್ಷಣಿಕ ಸಮಸ್ಯೆಗಳು

೬.೪. ರಾಜಕೀಯ ಸಮಸ್ಯೆಗಳು

೬.೫. ಸಾರಿಗೆ ಸಮಸ್ಯೆ

ಅಧ್ಯಾಯ ಏಳು : ಸಮುದಾಯಗಳ ನಡುವಿನ ಸಾಮ್ಯತೆ ಮತ್ತು ವ್ಯತ್ಯಾಸಗಳು ೨೫೮/೨೮೬

೭.೧. ಬೇಡ ಮತ್ತು ಕುರುಬ ಸಮುದಾಯದ ನಡುವಿನ ಹೋಲಿಕೆ ಮತ್ತು ವ್ಯತ್ಯಾಸಗಳು

೭.೨. ಕಬ್ಬಲಿಗ ಮತ್ತು ಬೇಡ ಸಮುದಾಯದ ನಡುವಿನ ಹೋಲಿಕೆ ಮತ್ತು ವ್ಯತ್ಯಾಸಗಳು

೭.೩. ಕುರುಬ ಮತ್ತು ಕಬ್ಬಲಿಗ ಸಮುದಾಯದ ನಡುವಿನ ಹೋಲಿಕೆ ಮತ್ತು ವ್ಯತ್ಯಾಸಗಳು

ಅಧ್ಯಾಯ ಎಂಟು : ಸಮಾರೋಪ ೨೮೭/೨೯೩

೮.೧. ಅಧ್ಯಯನದ ಫಲಿತಗಳು

೮.೨. ಸಲಹೆಗಳು

ಅನುಬಂಧಗಳು ೨೯೪

ಪರಾಮರ್ಶನ ಗ್ರಂಥಗಳು

ವಕ್ತೃಗಳ ವಿವರ

ಪತ್ರಿಕಾ ವರದಿಗಳು

ಛಾಯಾಚಿತ್ರಗಳು

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ

೧.೧. ಪ್ರಸ್ತಾವನೆ

೧.೨. ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

೧.೩. ಅಧ್ಯಯನದ ಮಹತ್ವ ಮತ್ತು ಸ್ವರೂಪ

೧.೪. ಅಧ್ಯಯನದ ವಿಧಾನಗಳು

೧.೫. ಅಧ್ಯಯನಗಳ ಸಮೀಕ್ಷೆ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ

ಪ್ರಸ್ತಾವನೆ

ಸಮುದಾಯಗಳ ಆರಂಭದ ಮೂಲವನ್ನು ನೋಡಿದರೆ ಸಮುದಾಯಗಳು ಅವರು ಮಾಡುವ ವೃತ್ತಿಯಿಂದ ಗುರುತಿಸಿಕೊಳ್ಳುತ್ತವೆ. ಬೇಟೆ ಆಡಿ ಬೇಡನಾದ, ಬಲೆ ಬೀಸಿ ಬೆಸ್ತನಾದ, ಕುರಿಕಾಯ್ದು ಕುರುಬನಾದ ಎಂದು ತಿಳಿದು ಬರುತ್ತದೆ. ಮುಖ್ಯವಾಗಿ ಈ ಸಮುದಾಯಗಳ ನೆಲೆಗಳನ್ನು ನೋಡಿದರೆ ಅವರು ಮಾಡುವ ಕೆಲಸಗಳಿಗೆ ಅನುಕೂಲವಾಗುವ ಸ್ಥಳಗಳನ್ನು ಆಯ್ಕೆ ಮಾಡಿಕೊಂಡು ನೆಲೆಸಿರುವುದು ಕ್ಷೇತ್ರಕಾರ್ಯಕ್ಕೆ ಹೋದಾಗ ಕಂಡುಬಂದಿರುವ ಸಂಗತಿಯಾಗಿದೆ. ಇವರು ನೆಲೆಸಿರುವ ವಾಸಸ್ಥಳಗಳಿಗೆ ದೊಡ್ಡಿಗಳು ಎಂದು ಕರೆಯುತ್ತಾರೆ. ಈ ದೊಡ್ಡಿಗಳ ಹಳ್ಳಿ ಮತ್ತು ನಗರ ಪ್ರದೇಶವನ್ನು ಹೊರತುಪಡಿಸಿ ತಮ್ಮ ತಮ್ಮ ಹೊಲಗದ್ದೆಗಳನ್ನು ತಮ್ಮ ರಕ್ತಸಂಬಂಧದ ಸಮುದಾಯಗಳನ್ನು ಒಳಗೊಂಡಿತೆ ಇರುವ ವಾಸಸ್ಥಳಗಳನ್ನು ರಾಯಚೂರು ಜಿಲ್ಲೆಯಾದ್ಯಂತ ನೆಲೆ ನಿಂತಿರುವುದು ಕಂಡುಬರುತ್ತದೆ. ಇಂತಹ ಸ್ಥಳಗಳಿಗೆ ಈ ಪ್ರದೇಶದಲ್ಲಿ ದೊಡ್ಡಿ ಎಂದು ಕರೆಯುತ್ತಾರೆ. ಆಧುನಿಕ ಯುಗದಲ್ಲಿ ಕೆಲವು ದೊಡ್ಡಿಗಳು ಹಳ್ಳಿಗಳಾಗಿ ಪರಿವರ್ತನೆ ಹೊಂದಿದ್ದರೆ ಇನ್ನೂ ಹಲವು ದೊಡ್ಡಿಗಳು ನಾಗರೀಕ ಪ್ರಪಂಚವನ್ನು ಬಿಟ್ಟು ಅಡವಿಗಳಲ್ಲಿ ತಮ್ಮ ಮೂಲ ವೃತ್ತಿಯನ್ನು ಮಾಡಿಕೊಂಡು ಸಮಾಜದ ಕಟ್ಟಕಡೆಯ ಸಮುದಾಯವಾಗಿ ಜೀವನ ಮಾಡುತ್ತಿರುವುದು ಕಂಡುಬರುತ್ತದೆ. ಇಲ್ಲಿಯವರೆಗೂ ಯಾವುದೇ ಮೂಲಭೂತ ಸೌಲಭ್ಯಗಳು ಇಲ್ಲದೆ ಮತ್ತು ಅದರಲ್ಲೂ ಸೌಲಭ್ಯಗಳೂ ಸಿಕ್ಕರು ಅಲ್ಪಸ್ವಲ್ಪ ಅವುಗಳನ್ನು ಲೆಕ್ಕಿಸದೆ ತಮ್ಮದೇ ಆದ ಅರಣ್ಯ ಜೀವನ ಸಾಗಿಸುತ್ತಿರುವ ಸಮುದಾಯಗಳನ್ನು ಆಯ್ಕೆ ಮಾಡಿಕೊಂಡು ಅಧ್ಯಯನಕ್ಕೆ ಒಳಪಡಿಸಲಾಗಿದೆ. ರಾಯಚೂರು ಜಿಲ್ಲೆಯ ಅಡವಿಯಲ್ಲಿ ಇರುವ ದೊಡ್ಡಿಗಳನ್ನು ವಿಶಿಷ್ಟವಾದ ಹೆಸರುಗಳಿಂದ ಇಲ್ಲವೆ ವ್ಯಕ್ತಿಯ ಹೆಸರಿನಿಂದ ಕರೆಯಲಾಗುತ್ತದೆ. ಸಮುದಾಯಗಳ ಹೆಸರಿನಿಂದ ಮತ್ತು ಸಮುದಾಯದ ಬೆಡುಗುಗಳಿಂದ ಕರೆಯುತ್ತಾರೆ. ಮುಖ್ಯವಾಗಿ ಇವರಿಗೆ ಸಂಬಂಧಪಟ್ಟರೂ ಆಧುನಿಕ ಜೀವನಕ್ಕೆ ಅನುಗುಣವಾಗಿ ಬದುಕುತ್ತಿದ್ದರೆ ಇವರು ಅಡವಿಯಲ್ಲಿ ಇರಲು

ಕಾರಣವೇನು ಮತ್ತು ಇವರ ನೆಲೆಗಳಿಗೂ ಹಾಗೂ ಇತರೇ ಸಮುದಾಯ ದೊಡ್ಡಿ ದೊಡ್ಡಿಗಳಿಗೆ ಇರುವ ಹೋಲಿಕೆ ಮತ್ತು ವ್ಯತ್ಯಾಸವನ್ನು ತೌಲನಿಕ ಅಧ್ಯಯನದ ಮುಖಾಂತರ ತಿಳಿದುಕೊಳ್ಳಲಾಗಿದೆ.

ಪಶುಪಾಲನೆ ವೃತ್ತಿ ಬೇಸಾಯ ಕಸುಬುಗಳನ್ನು ಅವಲಂಬಿಸಿದ ಅನೇಕ ಸಮುದಾಯಗಳು ಗುಂಪು ಗುಂಪುಗಳಾಗಿ ಪ್ರತ್ಯೇಕವಾಗಿ ತಮಗೆ ಅನುಕೂಲವಾಗುವ ಹೊಲಗದ್ದೆಗಳಿಗೆ ಸಮೀಪ ಇರುವ ಪ್ರದೇಶವನ್ನು ಆಯ್ಕೆ ಮಾಡಿಕೊಂಡು ವಾಸಿಸುತ್ತಾರೆ. ಈ ಸಮುದಾಯದವರು ನಿಸರ್ಗದೊಂದಿಗೆ ಸಂಬಂಧ ಬೆಸೆಯುತ್ತಾ ತಮ್ಮದೇ ಆದ ಜೀವನ ಕ್ರಮವನ್ನು ರೂಢಿಸಿಕೊಂಡಿರುವುದು ಕಂಡುಬರುತ್ತದೆ. ಮೇಲೆ ಹೇಳಿದ ಜೀವನೋಪಾಯದ ಉದ್ಯೋಗವನ್ನು ಗಮನಿಸಿದಾಗ ಜೊತೆಗೆ ಅವರು ನೆಲೆಸಿರುವ ಸ್ಥಳಗಳನ್ನು ನೋಡಿದಾಗ ಗೊತ್ತಾಗುವುದೇನೆಂದರೆ ಈ ಕಸುಬುಗಳಿಂದ ಎಂದೂ ಸುಖ ಸಂತೋಷದಿಂದ ಬದುಕಲು ಸಾಧ್ಯವಿಲ್ಲ. ಈ ಕೆಲಸಗಳಿಂದ ತಾತ್ಕಾಲಿಕ ಬದುಕನ್ನು ಸಾಗಿಸಲು ಮಾತ್ರ ಸಾಧ್ಯವಾಗುತ್ತವೆ. ಈ ಕುಲಕಸುಬು ಮತ್ತು ಪಾರಂಪರಿಕ ವೃತ್ತಿ ಮುಂದಿನ ಜೀವನ ಭದ್ರತೆ ಕಾಣಲು ಸಾಧ್ಯವಿಲ್ಲವೆಂದು ದೊಡ್ಡಿ ಜನರು ಹೇಳುತ್ತಾರೆ. ಇವರು ಮಾಡುವ ವೃತ್ತಿಗಳಾದ ಒಕ್ಕಲುತನ, ಕುರಿಸಾಕಾಣಿಕೆ, ಹಸು, ಸಾಕಾಣಿಕೆ, ಹಳೆಯ ಕಾಲದ ಬೇಸಾಯ ಪದ್ಧತಿ ಜೊತೆಗೆ ಇವರ ವಾಸಸ್ಥಳ ಹೆಚ್ಚು ಆಪತ್ತಿನಿಂದ ಕೂಡಿದ ಸ್ಥಳವಾಗಿದೆ. ಕಾಡು ಪ್ರಾಣಿಗಳಾದ ತೋಳ, ಕರಡಿ, ಹಾವು, ಚೇಳು ಕಡಿತದಿಂದ ಅನೇಕ ಸಾವು ಸಾಧ್ಯತೆಗಳಿರುತ್ತವೆ. ಹೀಗಾಗಿ ದೊಡ್ಡಿಗಳಲ್ಲಿ ವಾಸಿಸುವ ಸಮುದಾಯದವರ ಬದುಕು ನಿರಂತರವಾಗಿ ಅತಂತ್ರ ಸ್ಥಿತಿಯಲ್ಲಿರುತ್ತದೆ.

ಇತ್ತೀಚಿಗೆ ದೇಶದ್ಯಾಂತ ಸುದ್ದಿಯಾಗಿರುವ ಅಪೌಷ್ಠಿಕತೆ ಮೊದಲಿಗೆ ಕರ್ನಾಟಕ ರಾಜ್ಯದ ರಾಯಚೂರು ಜಿಲ್ಲೆಯ ದೊಡ್ಡಿಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಕಾರಣ ಕಿತ್ತು ತಿನ್ನುತ್ತಿರುವ ಬಡತನ. ಈ ದುಸ್ಥಿತಿಯಿಂದ ನರಳುತ್ತಾ ಯಾವುದೇ ಮೂಲಭೂತ ಸೌಲಭ್ಯ ಇಲ್ಲದೇ ಅತ್ಯಂತ ನಿಕೃಷ್ಟವಾಗಿ ಹೀನಾಯ ಸ್ಥಿತಿಯಲ್ಲಿ ಜೀವನ ನಡೆಸುತ್ತಿರುವುದು ರಾಯಚೂರು ಜಿಲ್ಲೆಯ ಬಹುತೇಕ ದೊಡ್ಡಿಗಳಲ್ಲಿ ಕಾಣಬಹುದಾಗಿದೆ. ಇಡೀ ದೇಶದಲ್ಲಿ ಭತ್ತದ ಕಣಜ ಎಂದು ಹೆಸರುವಾಸಿಯಾದ ರಾಯಚೂರು ಜಿಲ್ಲೆ ಒಂದು ಕಡೆಯಾದರೆ ಒಂದು ಹೊತ್ತಿನ ಊಟಕ್ಕೂ ಪರದಾಡುವ ಸಮುದಾಯದವರು ಈ ಜಿಲ್ಲೆಯ ದೊಡ್ಡಿಗಳಲ್ಲಿ ಸಿಗುತ್ತಾರೆ. ಚುನಾಯಿತ ಪ್ರತಿನಿಧಿಗಳು ದೊಡ್ಡಿಯ ಜನರನ್ನು ಅತ್ಯಂತ ನಿಕೃಷ್ಟವಾಗಿ ಕಾಣುವ ಪರಿಸ್ಥಿತಿ ಮೊದಲಿನಿಂದಲೂ ನಡೆದುಕೊಂಡು ಬಂದಿದೆ ಎಂದು ದೊಡ್ಡಿಯ ಹಿರಿಯರು ಹೇಳುತ್ತಾರೆ.

ರಾಯಚೂರು ಜಿಲ್ಲೆಯ ದೊಡ್ಡಿಗಳಲ್ಲಿ ವಾಸಿಸುವ ಸಮುದಾಯಗಳಲ್ಲಿ ಪರಂಪರೆ ಮತ್ತು ಧಾರ್ಮಿಕ ಹೆಸರಿನಲ್ಲಿ ಇಂದಿಗೂ ಬಾಲ್ಯ ವಿವಾಹ, ವಿಧವಾ ವಿವಾಹ ಪದ್ದತಿ, ಉಡುವುದು ಹೆಣ್ಣು ಮಕ್ಕಳ ಅರೆಬೆತ್ತಲ ಸೇವೆ ಮುಂತಾದ ಅನಿಷ್ಟ ಪದ್ದತಿಗಳ ಸಂಪ್ರದಾಯದ

ಹೆಸರಿನಲ್ಲಿ ಉಳಿದಿವೆ. ಪ್ರಸ್ತುತ ಸಂದರ್ಭದಲ್ಲಿ ಅವೈಜ್ಞಾನಿಕ ಅನಿಷ್ಟ ಪದ್ದತಿಗಳೆಂದು ಸಂಬಂಧಿಸಿದ ಕುಟುಂಬಗಳಿಗೆ ಮನನ ಮಾಡುವ ಪ್ರಯತ್ನಗಳು ನಡೆಯುತ್ತಿವೆಯಾದರೂ ಸಂಸ್ಕೃತಿಯ ಹೆಸರಿನಲ್ಲಿ ಮಹಿಳೆಯರ ಮೇಲೆ ದೌರ್ಜನ್ಯ ಶೋಷಣೆ ನಿರಂತರವಾಗಿ ದೊಡ್ಡಿಗಳಲ್ಲಿ ನಡೆಯುತ್ತಿದೆ. ಇದನ್ನು ಅಪಮಾನವೆಂದು ವಿದ್ಯಾವಂತರು ಮತ್ತು ತಿಳುವಳಿಕೆ ಉಳ್ಳವರು ಪರಿಗಣಿಸಿದರೆ ಅನಕ್ಷರಸ್ಥರು ಅಡವಿಯಲ್ಲಿ ಇರುವವರು ಇದನ್ನು ಸಂಪ್ರದಾಯದ ಹಿರಿಮೆ ಎಂದು ಹೇಳಿಕೊಳ್ಳುತ್ತಾರೆ. ಇದರ ಮನವರಿಕೆಯಾಗಬೇಕಾದರೆ ಶಿಕ್ಷಣ ಅಗತ್ಯವಾಗಿದೆ.

ರಾಯಚೂರು ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಅನೇಕ ಸಮುದಾಯಗಳು ಬಹಳ ಕಾಲದಿಂದಲೂ ಬೆಟ್ಟಗುಡ್ಡಗಳ ಸಾಲಿನಲ್ಲಿ ದೊಡ್ಡಿಗಳನ್ನು ಕಟ್ಟಿಕೊಂಡು ಜೀವನ ಸಾಗಿಸುತ್ತಿರುವುದು ಕಂಡುಬರುತ್ತದೆ ಆದರೂ ಜಿಲ್ಲೆಯಲ್ಲಿ ಮಾತ್ರ ಇದರ ಪರಿಚಯ ಬೇರೆಯವರಿಗೆ ಈ ಸ್ಥಳಗಳ ಬಗ್ಗೆ ಅಷ್ಟಾಗಿಗೊತ್ತಿಲ್ಲದೆ ನಾಗರೀಕ ಜೀವನದಿಂದ ಬಹುದೂರ ಉಳಿದಿದ್ದಾರೆ. ದೊಡ್ಡಿಗಳಲ್ಲಿ ನೆಲೆನಿಂತವರಲ್ಲಿ ವಿಶೇಷವಾಗಿ ಬೇಡ, ಕುರುಬ, ಕಬ್ಬಲಿಗ ಸಮುದಾಯಗಳನ್ನೊಳಗೊಂಡ ದೊಡ್ಡಿಗಳ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಜೊತೆಗೆ ಇವುಗಳಿಗೆ ತೌಲನಿಕ ಅಧ್ಯಯನದ ಮೂಲಕ ಹೋಲಿಕೆ ವ್ಯತ್ಯಾಸಗಳನ್ನು ಕಂಡುಕೊಳ್ಳಲಾಗುವುದು. ರಾಯಚೂರು ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ದೊಡ್ಡಿಗಳನ್ನು ಕಾಣಬಹುದು. ಜಿಲ್ಲೆಯಲ್ಲಿ ಹಳ್ಳಿಗಳನ್ನು ಹೊರತುಪಡಿಸಿ ಇರುವ ದೊಡ್ಡಿಗಳಲ್ಲಿ ವಾಸ ಮಾಡುತ್ತಿರುವ ಸಮುದಾಯ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯ ಹೋಲಿಕೆ ಮತ್ತು ವ್ಯತ್ಯಾಸ ಹಾಗೂ ಸೌಲಭ್ಯದಲ್ಲಿ ಆಗಿರುವ ತಾರತಮ್ಯವನ್ನು ಕಂಡುಕೊಳ್ಳಲಾಗುವುದು. ದೊಡ್ಡಿಗಳಲ್ಲಿ ನೆಲೆಸಿದವರನ್ನು ಮಲತಾಯಿ ದೊರಣೆಗೆ ಒಳಗಾಗಿ ಯಾವುದೇ ಸೌಲಭ್ಯ ಒದಗಿಸದೇ ಅತ್ಯಂತ ದುಸ್ಥಿತಿಗೆ ಬರಲು ಕಾರಣವಾಗಿದೆ ಎಂದು ಹೇಳುತ್ತಾರೆ. ಪಕ್ಕದ ಹಳ್ಳಿಗಳಿಗೆ ಸಕಲ ಸೌಲಭ್ಯಗಳನ್ನು ಒದಗಿಸುತ್ತಾರೆ. ದೊಡ್ಡಿಗಳ ದುಸ್ಥಿತಿ ಇದಕ್ಕೆ ಮುಖ್ಯ ಕಾರಣ. ನಾಗರೀಕ ಸಮೂಹವನ್ನು ಬಿಟ್ಟು ದೂರ ಉಳಿದುಕೊಂಡಿರುವುದು ಮೂಲ ಕಾರಣಣವಾಗಿದೆ. ಅನಕ್ಷರತೆ, ಬಡತನ ಅಪೌಷ್ಟಿಕತೆ ಫಲವತ್ತಾದ ಭೂಮಿ ಕೊರತೆ ರಾಜಕಾರಣಿಗಳ ನಿರ್ಲಕ್ಷ್ಯ ಸಂಘಟನೆಯ ಕೊರತೆ ಜೀವನ ನಿರ್ವಹಣೆಯ ತೊಂದರೆ, ರೋಗರುಜೀನಗಳು ಭಾದೆ, ಮಂಕು ಕವಿದ ಹಬ್ಬ-ಹರಿದಿನಗಳು, ಅಧಿಕಾರಿಗಳ ದಿವ್ಯ ನಿರ್ಲಕ್ಷ್ಯ ಸರಕಾರದ ಯೋಜನೆಗಳ ಮಾಹಿತಿ ಕೊರತೆ, ನಿರುದ್ಯೋಗ, ಹೆಚ್ಚುತ್ತಿರುವ ತಾಪಮಾನ, ಭರಡುಭೂಮಿ ಎಂದು ಹೇಳಬೇಕಾಗುತ್ತದೆ. ಜಿಲ್ಲೆಯಲ್ಲಿರುವ ಒಟ್ಟು ಅನಕ್ಷರಸ್ಥರು ಬಹುತೇಕ ಜನರು ಬಡತನ ರೇಖೆಗಿಂತ ಕೆಳಗೆ ವಾಸಿಸುತ್ತಿರುವವರಾಗಿದ್ದಾರೆ. ಅದರಲ್ಲಿಯೂ ಮುಖ್ಯವಾಗಿ ದೊಡ್ಡಿಗಳಲ್ಲಿ ವಾಸಮಾಡುತ್ತಿರುವ ಸಮುದಾಯಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಅನಕ್ಷರಸ್ಥರು ಬರುತ್ತಾರೆ. ಪ್ರಮುಖ ಮಹಿಳಾ ಸಾಕ್ಷರತೆಯಂತೂ ಅತ್ಯಂತ ತೀರ ಕಡಿಮೆ ಪ್ರಮಾಣದಲ್ಲಿ ಸಿಗುತ್ತದೆ. ಇಂತಹ ಸ್ಥಳಗಳಲ್ಲಿ ವಾಸಿಸುವ ಸಮುದಾಯಗಳ ಮಹಿಳೆಯರು

ಹೆಚ್ಚಿನ ಸಂಖ್ಯೆಯಲ್ಲಿ ಹೆರಿಗೆಗಳು ತೀರಾ ಅವೈಜ್ಞಾನಿಕ ಅಸುರಕ್ಷಿತ ರೀತಿಯಲ್ಲಿ ಹೆರಿಗೆಗಳಾಗುತ್ತಿವೆ ಎಂದು ಹೇಳುತ್ತಾರೆ. ಸಂಬಂಧ ಪಟ್ಟ ವೈದ್ಯರು ಯಾವುದೇ ಸ್ತ್ರೀಯು ಗರ್ಭಿಣಿಯಾದರೆ ಯಾವುದೇ ರೀತಿ ವೈದ್ಯಕೀಯ ಸೌಲಭ್ಯ ಸಿಗುವುದಿಲ್ಲ. ಸಿಗಬೇಕಾದರೆ ದೂರದ ತಾಲೂಕ ಕೇಂದ್ರಗಳಿಗೆ ಹೋಗಬೇಕಾಗುತ್ತದೆ. ಆದರಿಂದ ಸಂದರ್ಭಕ್ಕೆ ತಕ್ಕಂತೆ ಆರೋಗ್ಯ ಕಾಪಾಡಿಕೊಳ್ಳದೇ ಸ್ಥಳೀಯವಾಗಿ ಸಿಗುವ ಸೂಲಗಿತ್ತಿರನ್ನು ಕಂಡು ಹೆರಿಗೆಯನ್ನು ಮಾಡಿಸಿಕೊಳ್ಳುತ್ತಾರೆ. ಯಾವುದೇ ಮುಂಜಾಗ್ರತೆ ಇಲ್ಲದೇ ಹೆರಿಗೆಗಳನ್ನು ಮಾಡುತ್ತಾರೆ. ಇದರಿಂದ ಗರ್ಭಿಣಿ ಮಹಿಳೆಯರ ಸಾವು, ನವಜಾತ ಶಿಶುಗಳ ಮರಣ. ಅಪೌಷ್ಠಿಕತೆಯಿಂದ ಬಳಲುತ್ತಿರುವ ಮಕ್ಕಳ ಸಾವು. ಇಂತಹ ಸಾವು ನೋವುಗಳು ದೊಡ್ಡಿಗಳಲ್ಲಿ ವಾಸಿಸುವವರ ಪಾಲು ಹೆಚ್ಚು ದೊಡ್ಡಿಗಳಲ್ಲಿ ವಾಸಿಸುವವರಿಗೆ ಆಸ್ಪತ್ರೆ ಎಂದರೆ ನಿಲುಕದ ವಿಷಯವಾಗಿದೆ. ಯಾಕೆಂದರೆ ಅವರು ಇರುವ ಸ್ಥಳ ತುಂಬಾ ಇಕ್ಕಟ್ಟಾದ ರಸ್ತೆ ಸಾರಿಗೆ ತೊಂದರೆ ನಡೆದುಕೊಂಡು ೪-೫ ಕಿಲೋ ಮೀಟರ್ ಹೋಗಬೇಕಾದ ಪರಿಸ್ಥಿತಿ ಕಂಡುಬರುತ್ತದೆ. ಕ್ಷೇತ್ರಕಾರ್ಯಕ್ಕೆ ಹೋದಾಗ ಕಂಡುಕೊಂಡಿರುವ ನಿಜವಾದ ಸಂಗತಿಯಾಗಿದೆ. ಜೊತೆಗೆ ಇವರು ಪಡೆದುಕೊಂಡಿರುವ ಮೂಲಭೂತ ಸೌಕರ್ಯಗಳು ತುಂಬಾ ಒಂದುಕಡೆಯಾದರೆ ಇಂತಹ ಸ್ಥಳಗಳಲ್ಲಿ ವಾಸಿಸುವ ಸಮುದಾಯದವರಿಗೆ ಶೇ ೯೦ರಷ್ಟು ಅಸುರಕ್ಷಿತವಾದ ಕುಡಿಯುವ ನೀರು ಸೇವಿಸುವುದರಿಂದ ಸಾಂಕ್ರಮಿಕ ರೋಗರುಜನಗಳಿಂದ ಬಳಲುತ್ತಿದ್ದಾರೆ. ಯಾವುದೇ ತಿಳಿವಳಿಕೆಯಿಲ್ಲದೆ ನಾಗರೀಕತೆಯ ಸೌಲಭ್ಯ ಇಲ್ಲದೇ ಎಷ್ಟೇ ತೊಂದರೆಯಾದರೂ ಇಂತಹ ನೆಲೆಗಳು ಅವರಿಗೆ ಆಧಾರ ಸ್ತಂಭವಾಗಿವೆ.

ಮಾನವ ನಿರ್ಮಿತ ಸೌಲಭ್ಯವಂಚಿತ ಅಮಾನವೀಯ ಬದುಕಿನಲ್ಲಿದ್ದರೂ ಸಾಮಾನ್ಯವಾಗಿ ಹೊಲಗದ್ದೆಗಳಲ್ಲಿ ಬೆವರು ಸುರಿಸುತ್ತಾ ಸ್ವಚ್ಛಗಾಳಿ ಸೇವಿಸುತ್ತಾ, ಬಿಸಿಲಿಗೆ ಮೈ ಒಡ್ಡುತ್ತಾ ರಾತ್ರಿ ಚುಕ್ಕೆಗಳನ್ನು ಎಣಿಸುತ್ತಲೇ ಇರುವರು ಒಬ್ಬರನ್ನೊಬ್ಬರು ವಿಶ್ವಾಸವಿಡುವ ಹಾಗೂ ಆತ್ಮೀಯ ವಾತಾವರಣದ ಹಿನ್ನೆಲೆಯಲ್ಲಿ ಸುಂದರ ಪರಿಸರದಲ್ಲಿ ಉಸಿರಾಡುತ್ತಿದ್ದಾರೆ. ಗಾಳಿ ಬೆಳಕಿಲ್ಲದ ಗುಡಿಸಲುಗಳ ಮನೆ ಇರಬಹುದು, ಈ ನೆಲೆಗಳಿಗೆ ರಸ್ತೆ ಯದ್ವಾತದ್ವಾ ಇರಬಹುದು, ಇಲ್ಲಿಗೆ ಬಸ್ಸು ಓಡಾಡುವಂತಿಲ್ಲ. ಕೆಲವು ಕಡೆ ನೀರು ನಲ್ಲಿಯಲ್ಲಿ ಬರಲಿಕ್ಕಿಲ್ಲದಿರಬಹುದು, ಇನ್ನು ಹಲವು ಕಡೆ ನಲ್ಲಿ ಸಂಪರ್ಕ ಇಲ್ಲದೇ ಇರಬಹುದು, ಆಧುನಿಕತೆಯಿಂದ ರಸ್ತೆಗೆ ಹೊಂದಿಕೊಂಡಿರುವ ಕೆಲವು ದೊಡ್ಡಿಗಳಿಗೆ ಬಸ್ಸು ಸಂಪರ್ಕವಿದ್ದರೆ ಇನ್ನು ಕೆಲ ದೊಡ್ಡಿಗಳಿಗೆ ಬಸ್ಸು ಸಂಪರ್ಕವಿಲ್ಲ. ದೇವದುರ್ಗಾ, ಲಿಂಗಸ್ಗೂರು ತಾಲೂಕಿನ ಹೆಚ್ಚಿನ ಸಂಖ್ಯೆಯಲ್ಲಿ ದೊಡ್ಡಿಗಳಿಗೆ ಹೋಗುವುದಕ್ಕೆ ದಾರಿಗಳಲ್ಲಿ ವಿದ್ಯುತ್ ದೀಪಗಳೇ ಇಲ್ಲ. ಆದರೂ ದೊಡ್ಡಿ ಎಂದರೆ ಒಂದು ತೆರನ ಮುಗ್ಧತೆ, ವಿಶ್ವಾಸಾರ್ಹತೆ ಸಹಬಾಳುವೆಯಂತಹ ಜೀವನ ಸೌಲಭ್ಯಗಳನ್ನು ಇಟ್ಟುಕೊಂಡಿವೆ ಎಂದು ಹೇಳಬಹುದು. ಸರ್ಕಾರ ದೊಡ್ಡಿಗಳನ್ನು ಅಭಿವೃದ್ಧಿ ಪಡಿಸಿ ಸಮಾಜದ ಮುಖ್ಯವಾಹಿನಿಗೆ ತರಬೇಕೆಂಬ

ನಿಟ್ಟಿನಲ್ಲಿ ಕ್ರಿಯಾಶೀಲವಾಗಿದೆ. ಆದರೆ ಈ ದಿಸೆಯಲ್ಲಿ ಯಾವುದೇ ಪ್ರಯೋಜನವಾಗಿಲ್ಲ ಎನ್ನುತ್ತಾರೆ. ಸ್ಥಳೀಯರು ಶಾಲೆ, ಕುಡಿಯುವ ನೀರು, ವಸತಿ, ಸಾರಿಗೆ ಸಂಪರ್ಕ ಶೌಚಾಲಯ, ಆಸ್ಪತ್ರೆ ವಿದ್ಯುತ್ ಇವೆ ಮೊದಲಾದ ಸೌಕರ್ಯಗಳ ಕೊರತೆಯಿಂದ ನರಕ ಯಾತನೆಯನ್ನು ಅನುಭವಿಸುತ್ತಿದ್ದಾರೆ. ಈ ಬಗ್ಗೆ ಸುದ್ದಿ ಮಾಧ್ಯಮಗಳಾದ ಟಿ.ವಿ. ಪತ್ರಿಕೆಯಲ್ಲಿ ಈ ಕುರಿತು ವರದಿ ಬಂದಾಗ ಮಾತ್ರ ಜನಪ್ರತಿನಿದಿಗಳು ಎಲ್ಲಾ ಸಮಸ್ಯೆಯನ್ನು ಬಗೆಹರಿಸಿದ್ದೇವೆ ಎಂದು ಜಾಣತನದಿಂದ ನುಣಿಚಿಕೊಳ್ಳುತ್ತಾರೆ. ಇದರಿಂದ ಬದುಕು ಮತ್ತಷ್ಟು ದುಸ್ತರವಾಗಿದೆ.

ಆಧುನಿಕರಣದ ಕಾಲಘಟ್ಟದಲ್ಲಿಯೂ ಆಧುನಿಕ ವರ್ಣರಂಜಿತ ಬದುಕು ಕಣ್ಣಿಗೆ ಕಾಣಿಸುತ್ತಿದ್ದರೂ ನಾಗರೀಕತೆಯ ಸವಲತ್ತುಗಳನ್ನು ತನ್ನ ನೆರೆಹೊರೆಯವರು ಅನುಭವಿಸುತ್ತಿದ್ದರೂ ದೊಡ್ಡಿಗಳು ಮಾತ್ರ ಯಾವುದೇ ಮೂಲಭೂತ ಸೌಲಭ್ಯ ಕಾಣದೇ ದುಸ್ಥಿತಿಯಲ್ಲಿವೆ. ಬುಡಕಟ್ಟಿನ ಸಂಸ್ಕೃತಿಯನ್ನು ಬಿಗಿಯಾಗಿ ಅಪ್ಪಿಕೊಂಡಿರುವ ಕೆಲವು ಸಮುದಾಯಗಳಾದರೆ, ಇನ್ನುಳಿದ ಸಮುದಾಯಗಳು ವೃತ್ತಿಗಳನ್ನು ಕಳೆದುಕೊಂಡು ನಿರ್ಗತಿಕರಾಗುವ ಭಯದ ವಾತಾವರಣದಲ್ಲಿ ಸಿಕ್ಕು ಒದ್ದಾಡುತ್ತಿವೆ. ಬುಡಕಟ್ಟಿನ ಪರಂಪರೆಯನ್ನು ಹೊಂದಿರುವ ಸಮುದಾಯಗಳು ತಾವು ವಾಸಿಸುತ್ತಿರುವ ವಾಸಸ್ಥಳವನ್ನು ಬಿಟ್ಟು ಹೋಗುವಾಗ ತಮಗರಿವಿಲ್ಲದೆ ಸ್ವಂತಿಕೆ ಇಲ್ಲದೆ ಯಾವುದೋ ಅನಾಥ ಪ್ರಜ್ಞೆಗೆ ಒಳಗಾಗುತ್ತಿವೆ. ಏನೋ ಕಳೆದುಕೊಂಡತ್ತೆ ಆತಂಕವನ್ನು ಅನುಭವಿಸುತ್ತವೆ. ಈ ಅನಾಥ ಪ್ರಜ್ಞೆಗೆ, ಆತಂಕಕ್ಕೆ ತನ್ನ ಸಂಸ್ಕೃತಿಯ ಮೇಲಿನ ವ್ಯಾಮೋಹವೇ ಕಾರಣವೆಂದೆನಿಸಿದರೂ ಈ ಮನೋಧರ್ಮಕ್ಕೆ ಇನ್ನು ಅನೇಕ ಬಗೆಯ ಕಾರಣಗಳು ತಿರಸ್ಕರಿಸಲಾಗದು. ಸ್ವತಂತ್ರ ಬಂದ ೬೬ ವರ್ಷ ಕಳೆದರೂ ದೊಡ್ಡಿಗಳಲ್ಲಿ ವಾಸಿಸುವ ಸಮುದಾಯಗಳ ಬದುಕು ರೀತಿ ನೀತಿ ಮತ್ತು ವಾಸ್ತವವಾಗಿ ಇನ್ನು ಅತ್ಯಂತ ತಳಮಟ್ಟದಲ್ಲಿ ಜೀವನ ಸಾಗಿಸುತ್ತಿದ್ದಾರೆ. ಅಡವಿಗಳಲ್ಲಿ ಇದೇ ರೀತಿಯಾಗಿ ಬೇರೆ ಸಮುದಾಯಗಳು ವಾಸಿಸುತ್ತಿವೆ. ಮತ್ತು ಜೊತೆಗೆ ಇರುವ ದೊಡ್ಡಿಗಳ ವಾಸ್ತವಿಕತೆಯನ್ನು ತೌಲನಿಕ ಅಧ್ಯಯನ ಮುಖಾಂತರ ಈ ಸ್ಥಳಗಳಲ್ಲಿ ವಾಸಿಸುವ ಸಮುದಾಯದವರ ಜೀವನ ಶೈಲಿ ಮತ್ತು ಅವರು ಪಡೆದುಕೊಂಡಿರುವ ಅನುಕೂಲ ಬಗ್ಗೆ ಹೋಲಿಕೆ ಮಾಡುವುದರ ಮುಖಾಂತರ ದೊಡ್ಡಿಗೆ ನೈಜ ಸ್ಥಿತಿಗತಿ ನಂತರ ಜೀವನ ಮಟ್ಟವನ್ನು ತಿಳಿದುಕೊಳ್ಳಲಾಗಿದೆ.

ದೊಡ್ಡಿ ಪದದ ಅರ್ಥ

ಹಟ್ಟಿ ಮತ್ತು ದೊಡ್ಡಿ ಪದಗಳು ಸಮನಾರ್ಥಕಗಳಾಗಿವೆ. ಒಂದು ಕನ್ನಡದ್ದಾದರೆ ಇನ್ನೊಂದು ತೆಲುಗಿನದು. ದೊಡ್ಡಿ ಮೂಲತಃ ತೆಲುಗು ಪದವಾಗಿದೆಯಾದರೂ, ಶಬ್ದಕೋಶದಲ್ಲಿ ವಿವಿಧಾರ್ಥಗಳನ್ನು ನೀಡಲಾಗಿದೆ.

ಕನ್ನಡ ನಿಘಂಟು ಪ್ರಕಾರ

ಹಸು, ಕುರಿ ಮುಂತಾದುವನ್ನು ಕೂಡಿಹಾಕುವ ಸ್ಥಳ ಎಂದು ಅರ್ಥೈಸಲಾಗಿದೆ. ಈ ಕಾರಣಗಳಿಂದ ದೊಡ್ಡಿ ಎಂದರೆ ಜನ ಮತ್ತು ದನಗಳ ಬಿಡಾರ ದನಗಾಹಿ ಮತ್ತು

ಕುರಿಗಾಹಿಗಳ ನಿವಾಸವೆಂದು ಸ್ಪಷ್ಟವಾಗಿ ಹೇಳಬಹುದು. ದೊಡ್ಡಿಗಳು ಎಂದರೆ ದನಗಳನ್ನು ಕೂಡಿಸುವ ಸ್ಥಳ ಎಂದು ಕರೆಯುತ್ತಿದ್ದರು. ಕಾಲನಂತರದಲ್ಲಿ ಬೇಡ, ಕುರುಬ, ಕಬ್ಬಲಿಗ ಸಮುದಾಯದವರು ಕೆಲವರು ವ್ಯವಸಾಯ ವೃತ್ತಿಗಳಿಗೆ ಅನುಕೂಲಕ್ಕಾಗಿ ಮಾಡಿಕೊಂಡರೆ ಇನ್ನು ಕೆಲವು ಸಮುದಾಯಗಳ ಮೂಲ ನೆಲೆ ಎಂದು ತಿಳಿದುಬರುತ್ತದೆ. ಇಲ್ಲಿ ನೆಲೆ ನಿಂತಿರುವ ಸಮುದಾಯಗಳು ಮೀನು ಬೇಟೆಯಾಡಲು ಅನುಕೂಲಕ್ಕಾಗಿ ಕಂಡುಬಂದರೆ ಕೆಲವರು ಕುಲ ಕಸುಬು ಮತ್ತು ಪರ್ಯಾಯವಾಗಿ ಕುರಿ ಸಾಕಾಣಿಕೆ ಹಸು ಸಾಕಾಣಿಕೆ ಮತ್ತು ಮೇಕೆ ಸಾಕಾಣಿಕೆಗೆ ಅನುಕೂಲದಿಂದ ಕೂಡಿರುವ ಪ್ರದೇಶಗಳಾದ ಇಂತಹ ನೆಲೆಗಳಲ್ಲಿ ವಸತಿಯನ್ನು ನಿರ್ಮಿಸಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಇಂತಹ ಸ್ಥಳಗಳನ್ನು ದೊಡ್ಡಿ ಎಂದು ಕರೆಯುತ್ತಾರೆ. ಅಧ್ಯಯನ ಕ್ಷೇತ್ರ ರಾಯಚೂರು ಜಿಲ್ಲೆಯಲ್ಲಿ ಬರುವ ದೇವದುರ್ಗಾ ಲಿಂಗಸ್ಗೂರು, ಮಾನ್ವಿ, ಸಿಂಧನೂರು ಈ ಪ್ರದೇಶದಲ್ಲಿ ಬರುವ ದೊಡ್ಡಿಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ದೊಡ್ಡಿ : ದೊಡ್ಡಿ ಎಂದರೆ ಹಟ್ಟಿ, ಕೊಟ್ಟಿಗೆ, ದನಕಟ್ಟುವ ಜಾಗ ಎಂಬ ಪ್ರಸ್ತುತ ಅರ್ಥವಿದೆ. ಸಾಮಾನ್ಯವಾಗಿ ದೊಡ್ಡಿಗಳು ಊರುಗಳಿಂದ ಎರಡು ಮಾರು ದೂರದಲ್ಲಿರುತ್ತವೆ. ಇಲ್ಲಿ ಹೆಚ್ಚಾಗಿ ಬೇಡರು, ಗೊಲ್ಲರು, ಕುರುಬರು ವಾಸವಾಗಿರುತ್ತಾರೆ.

ಹಟ್ಟಿ : ಹಟ್ಟಿ ಎಂದರೆ ಪಟ್ಟಿ ಪಾಡಿ–ಪಾಡ–ವಾಡ ಹಟ್ಟಿ ಮೊದಲಾದ ಗ್ರಾಮನಾಮದ ರೂಪಕಗಳು ಸಮುದಾಯದ ವಾಸಸ್ಥಾನ ಸೂಚಕಗಳಾಗಿವೆ. ಹಟ್ಟಿ ಎಂಬುದು ಹಟ್ಟಿಕಾರ ಇಲ್ಲವೇ ದನಗಾಹಿ ಸಂಸ್ಕೃತಿಯನ್ನು ಪ್ರತಿನಿಧಿಸುತ್ತದೆ. ಈ ಹಟ್ಟಿಗಳು ಮಧ್ಯ ಕರ್ನಾಟಕದಲ್ಲಿ ಕಂಡುಬರುತ್ತವೆ. ಈ ಸ್ಥಳಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಗೊಲ್ಲರು, ಬೇಡರು ವಾಸಿಸುವುದು ಕಂಡುಬರುತ್ತದೆ. ಶಂಬಾ ಅವರ ಅಭಿಪ್ರಾಯವು ಹಟ್ಟಿಗಳಲ್ಲಿ ಇವರು ಒಂದು ನಿರ್ದಿಷ್ಟ ಕುಲದ ಹಟ್ಟಿ ಅಥವಾ ಪಾಡಿಯಲ್ಲಿ ವಾಸಿಸುತ್ತಿದ್ದರು ಎಂದು ಖಚಿತಪಡಿಸುವುದಿಲ್ಲ. ಕುರಿಗಾಹಿಗಳು ಎನ್ನುವುದರಿಂದ ವ್ಯಕ್ತವಾದರೆ ಕುರುಬನು ಇರಬಹುದೆಂಬ ಅನುಮಾನ ಬರುತ್ತದೆ.

ಕ್ಯಾಂಪ್ : ಇದು ಇಂಗ್ಲೀಷ್ ಪದ ಗುಂಪಾಗಿ ನೆಲೆಸುವುದು ಎಂಬರ್ಥವನ್ನು ನೀಡುತ್ತದೆ. ಗಡಿಭಾಗದಲ್ಲಿ ಆಂಧ್ರದ ಕೆಲವು ಸಮುದಾಯಗಳ ವಲಸೆ ಬಂದು ರಾಯಚೂರಿನಲ್ಲಿ ತಮ್ಮ ನೆಲೆಗಳಿಗೆ ಕ್ಯಾಂಪ್‌ಗಳೆಂದು ಕರೆದುಕೊಂಡಿದ್ದಾರೆ.

ದೊಡ್ಡಿ : ವಾಸ್ತವ್ಯವಾಚಕ ಹಟ್ಟಿ ಕೊಟ್ಟಿಗೆ, ಯಜಮಾನರಿಲ್ಲದಂತಹ ದನ ಕರುಗಳನ್ನು ಕಟ್ಟುವ ಮನೆ ಮೂಲದ ಮನೆ ತೆಲಗಿನಲ್ಲಿ ಇದೇ ಅರ್ಥದಲ್ಲಿ ಬಳಕೆಯಲ್ಲಿದೆ.

ಉದಾ : ಕಾಟೇ ದೊಡ್ಡಿ

ಕಾಮನದೊಡ್ಡಿ

ಗುರ್ರಲ ದೊಡ್ಡಿ

ಗೋತುಲ ದೊಡ್ಡಿ

ಚಿರುಮಾನ ದೊಡ್ಡಿ

ತಿಪ್ಪಲ ದೊಡ್ಡಿ

ದಿಬ್ಬನ ದೊಡ್ಡಿ

ಬಸಲ ದೊಡ್ಡಿ

ಬಾಪುಲ ದೊಡ್ಡಿ

ಕನ್ನಡ ಮತ್ತು ಇಂಗ್ಲಿಷ್ ಶಬ್ದಕೋಶದ ಪ್ರಕಾರ : ಅನುವಾದ ವಸಾಹತು ವಾಸಸ್ಥಾನ ಎಂಬ ಅರ್ಥ ಕೊಡುತ್ತದೆ. ಅಂದರೆ ಜನರು ವಾಸಮಾಡುವ ಸ್ಥಳ ಅಥವಾ ಪ್ರದೇಶ ಎಂದು ಅರ್ಥೈಸಬಹುದು.

ಸಿರಿಗನ್ನಡ ಶಬ್ದಕೋಶದ ಪ್ರಕಾರ

ದೊಡ್ಡಿ ಕೆಡ್ಡ, ಹಟ್ಟಿಕೊಟ್ಟಿಗೆ ಯಜಮಾನರಿಲ್ಲದಂಥ ದನಕರುಗಳನ್ನು ಕಟ್ಟುವ ಮನೆ. ಮೂಲದ ಮನೆ ಎಂಬ ಅರ್ಥವಿದೆ.

ಗ್ರಾಮನಾಮ ದೀಪಿಕೆಯಲ್ಲಿ ವಿಶ್ವನಾಥರವರ ಪ್ರಕಾರ

ದೊಡ್ಡಿ : ತೊಂಡು ದನಗಳನ್ನು ಕಟ್ಟುವ ಸ್ಥಳ. ಆನೆಯನ್ನು ಹಿಡಿಯಲು ಮಾಡಿದ ಕುಳಿ ಹೆಳೆದೊಡ್ಡಿ. ಆಂಧ್ರ ಕರ್ನಾಟಕ ಗಡಿ ಪ್ರದೇಶದ ಸ್ಥಳನಾಮಗಳು ಎಂಬ ಪ್ರಬಂಧದಲ್ಲಿ ಜಾಜಿ ದೇವೇಂದ್ರಪ್ಪರವರು ಪ್ರಸ್ತಾಪಿಸಿದ್ದಾರೆ.

ದೊಡ್ಡಿ : ವಸತಿ ವಾಚಕ ಹಟ್ಟಿ, ಕೊಟ್ಟಿಗೆ ಯಜಮಾನರಿಲ್ಲದಂತಹ ದನ ಕರುಗಳನ್ನು ಕಟ್ಟುವ ಮನೆ ಎಂದಿರುತ್ತದೆ. ತೆಲುಗಿನಲ್ಲಿ ಇದೆ ಅರ್ಥದಲ್ಲಿ ಬಳಕೆಯಲ್ಲಿದೆ.

ಕನ್ನಡ ಶಬ್ದಕೋಶದ ಪ್ರಕಾರ

ದೊಡ್ಡಿ : ದನಕಟ್ಟುವ ಸ್ಥಳ, ಕೊಂಡವಾಡೆ, ಮೂಲದ ಮನೆ ಎಂಬ ಅರ್ಥವನ್ನು ಕೊಡುತ್ತದೆ. ಕನ್ನಡ-ಕನ್ನಡ ಡಿಕ್ಷನರಿ ಪ್ರಕಾರ

ದೊಡ್ಡಿ : ದನ ಕಟ್ಟುವ ಕೊಟ್ಟಿಗೆ, ಹಟ್ಟಿ, ಮಾನವನ ಆರಂಭಿಕ ನೆಲೆ ಎಂಬ ಅರ್ಥವನ್ನು ಕೊಡುತ್ತದೆ.

ಸಾಮಾನ್ಯ ಅರ್ಥದಲ್ಲಿ : ದೊಡ್ಡಿ ಎಂದರೆ ಒಂದು ಗುಂಪಿನವರು ವಾಸಿಸುವ ಸ್ಥಳ ಮನೆ, ಚಿಕ್ಕಹಳ್ಳಿ ಎಂದು ಅರ್ಥೈಸಿಕೊಳ್ಳಲಾಗಿದೆ.

ಮಾನವನು ಮೊದಲಿಗೆ ಬೆಟ್ಟಗುಡ್ಡ ಕಾಡುಮೇಡುಗಳಲ್ಲಿ ಅಲೆಮಾರಿಯಾಗಿ ಜೀವನ ಸಾಗಿಸುತ್ತಿದ್ದು, ನಂತರ ದಿನಗಳಲ್ಲಿ ನೆಲೆ ನಿಲ್ಲುವುದಕ್ಕೆ ಪ್ರಾರಂಭಿಸಿದ. ಮೊದಲಿಗೆ ಗುಡಿಸಲುಗಳನ್ನು ಕಟ್ಟಿಕೊಂಡು ಸರಳವಾಗಿ ಜೀವನ ಆರಂಭಿಸಿದ. ಇಂಥ ನೂರಾರು ಗುಡಿಸಲುಗಳ ಸಮೂಹಕ್ಕೆ ಯಾದಗಿರಿ, ರಾಯಚೂರು ಜಿಲ್ಲೆಗಳಲ್ಲಿ ದೊಡ್ಡಿ ಎಂದು ಕರೆಯುತ್ತಾರೆ. ದೊಡ್ಡಿ ಎಂದರೆ ವಾಸದ ಸ್ಥಳ ಮೇಕೆ, ದನ, ಕುರಿ ಮೊದಲಾದವುಗಳನ್ನು ಕೂಡಿಹಾಕುವ ಸ್ಥಳ ಎನ್ನುತ್ತಾರೆ. ದೊಡ್ಡಿಗೆ ಸಮಾನವಾದ ಪದಗಳಿವೆ. ಅವುಗಳಲ್ಲಿ ಸಹ ದೊಡ್ಡಿಗಳ ಹೋಲಿಕೆ ಕಂಡುಬರುತ್ತದೆ. ಅವು ಯಾವುವು ಎಂದರೆ ಗುಡಿಸಲು ಹಳ್ಳಿ, ಪಲ್ಲಿ, ದಿನ್ನಿ, ಹಟ್ಟಿ ಜೋಪಡಿ, ಕೇರಿ, ಪಾಳ್ಯ, ಹಾಡಿ, ವಾಡಿ, ವಾಡೆ ಮುಂತಾದ ಪದಗಳಿಂದ ಕರೆಯುತ್ತಾರೆ. ದೊಡ್ಡಿ ಎನ್ನುವ ಪದವು ತೆಲುಗಿನ ದಡ್ಡಿ ಎನ್ನುವ ಪದದಿಂದ ಬಂದಿದೆ ಎಂದು ವಿದ್ವಾಂಸರ ಅಭಿಪ್ರಾಯವಾಗಿದೆ. ರಾಯಚೂರು ಜಿಲ್ಲೆಯಲ್ಲಿ ನೂರಕ್ಕೂ ಹೆಚ್ಚು ದೊಡ್ಡಿಗಳು ಕಂಡುಬರುತ್ತವೆ. ಇದಕ್ಕೆ ಸಾಕ್ಷಿಯಾಗಿ ದೊಹಬ್ ಪ್ರದೇಶದಲ್ಲಿ ಬೇಡರ ದೊಡ್ಡಿ ಕುರುಬರದೊಡ್ಡಿ ಅಂಬಿಗರ ದೊಡ್ಡಿಗಳು ಎಂದು ಗುರುತಿಸಬಹುದು.

ಬದಲಾದ ಕಾಲಕ್ಕನುಗುಣವಾಗಿ ನಿಸರ್ಗದತ್ತವಾಗಿ ಲಭ್ಯವಾಗುವ ಸಂಪನ್ಮೂಲಗಳಾದ ಕಟ್ಟಿಗೆ ಹಳ್ಳದಲ್ಲಿ ಹಾಸು ಬಿಂಕಿಗಳು ಬಳಸಿಕೊಂಡು ಮನೆಗಳನ್ನು ಕಟ್ಟಿಕೊಳ್ಳುತ್ತಾರೆ. ನೆಲೆನಿಂತ ಸ್ಥಳಗಳಲ್ಲಿ ತಮ್ಮ ಜಾತಿ ಹೆಸರು ಇಲ್ಲವೇ ಆ ದೊಡ್ಡಿಯ ಪೂರ್ವಿಕರ ಹೆಸರು ಅಥವಾ ಬೆಡಗಿನಿಂದ ದೊಡ್ಡಿಗಳ ಹೆಸರನ್ನು ಕರೆಯುವುದುಂಟು.

ದೊಡ್ಡಿ ಎಂದರೆ ದನಕರುಗಳನ್ನು ಕಟ್ಟುವ ಸ್ಥಳ, ಗುಡಿಸಲು, ಸಣ್ಣಹಳ್ಳಿ ಅದು ಪಾಶುಪಾಲನೆ ವೃತ್ತಿಯಿಂದ ಒಕ್ಕಲುತನದ ಜೀವನ ಕ್ರಮದವರೆಗಿನ ವಿಕಾಸ ಸ್ಥಿತಿಯನ್ನು ಸೂಚಿಸುತ್ತದೆ. ಪ್ರಾಚೀನ ಕನ್ನಡ ಸಾಹಿತ್ಯದ ಕೃತಿಗಳಲ್ಲಿಯೂ ನಿಘಂಟುಗಳಲ್ಲಿಯೂ ಸಹ ಬಳಕೆಯಾಗಿದೆ. ಅಲ್ಲಿಯೂ ವಸತಿ ಸೂಚಕವಾಗಿಯೇ ಬಳಕೆಯಾಗಿದೆ.

ಊರು, ಗ್ರಾಮ, ಪುರ ಎಂಬುದು ಅಷ್ಟು ಪುರಾತನವಲ್ಲ ಎಂದು ಹೇಳುವ ಶಂಬಾ ಅವರು ಮಾನವನು ಪ್ರಾಥಮಿಕ ಸ್ಥಿತಿಯಲ್ಲಿ ಆಹಾರ ಸಂಚಯನಕ್ಕಾಗಿ ಅಲೆಮಾರಿಯಾಗಿದ್ದ ಅವನ ವಸತಿ ಸೂಚಕವಾದ ಹೆಸರು ದೊಡ್ಡಿ ಎಂದು ಗ್ರಹಿಸುವರು. ಈ ಶಬ್ದವು ದನಗಾಯಿ, ಕುರಿಗಾಯಿಗಳ ಬಾಳಿನ ದ್ಯೋತಕ, ದೊಡ್ಡಿ, ನಮ್ಮ ಪ್ರದೇಶ ಆರಂಭದ ವಸತಿಗಳೆಂದು ಊಹಿಸಿರುವರು. ದೊಡ್ಡಿ ಎನ್ನುವ ಪದವು ಯಾದಗಿರಿ, ರಾಯಚೂರು, ಜಿಲ್ಲೆಗಳಲ್ಲಿ ಅಷ್ಟೇ ಅಲ್ಲದೇ ಮೈಸೂರು, ಮಂಡ್ಯ, ರಾಮನಗರ ಜಿಲ್ಲೆಯಲ್ಲಿಯೂ ಕಾಣಬಹುದು. ಹಾಡಿ ವಾಡಿ, ಪಾಡಿ, ದಿನ್ನಿ, ಪಲ್ಲಿ, ಹಟ್ಟಿ, ದೊಡ್ಡಿ ಮೊದಲಾದವು ಗ್ರಾಮನಾಮದ ರೂಪಗಳು ಸಮುದಾಯಗಳ ವಾಸಸ್ಥಾನ ಸೂಚಕಗಳು ಎಂದು ಶಂಬಾ ಹೇಳುತ್ತಾರೆ. ಎಡೆಗಳು ಹೇಳುವ ಕಂನಾಡ ಕತೆ ಶಂಬಾ ಅವರ ಮಹತ್ವದ ಕೃತಿಯಲ್ಲಿ ಎಡೆಗಳ

ಹೆಸರಿನ ಹಿನ್ನೆಲೆಯನು ನಮ್ಮ ನಾಡಿನ ಮಾನವನು ನಡೆದು ಬಂದ ದಾರಿ ಜೊತೆಗೆ ಅವನ ನೆಲೆ, ಮಾನವ ವಿಕಾಸದ ಕುರಿತು ಹೇಳುತ್ತಾರೆ.

೧.೨ ಅಧ್ಯಯನದ ಉದ್ದೇಶ

ರಾಯಚೂರು ಜಿಲ್ಲೆಯಲ್ಲಿ ಬರುವ ದೊಡ್ಡಿಗಳಲ್ಲಿ ವಾಸಿಸುವ ಸಮುದಾಯಗಳಾದ ಬೇಡ, ಕುರುಬ, ಕಬ್ಬಲಿಗ ಸಮುದಾಯಗಳ ಸಾಮಾಜಿಕ ಸ್ಥಿತಿಗತಿ ಮತ್ತು ಸಮುದಾಯಗಳ ನೆಲೆಗಳಿಗೆ ಇರುವ ಹೋಲಿಕೆ ವ್ಯತ್ಯಾಸಗಳನ್ನು ಅಧ್ಯಯನ ಮಾಡುವ ಮೂಲ ಉದ್ದೇಶವಾಗಿದೆ. ಜೊತೆಗೆ ಸಮುದಾಯಗಳು ಎದುರಿಸುತ್ತಿರುವ ನೋವು ನಲಿವುಗಳನ್ನು ತಿಳಿದುಕೊಳ್ಳುವುದು ನಾಗರೀಕ ಪ್ರಪಂಚವನ್ನು ಬಿಟ್ಟು ಈ ಸಮುದಾಯದವರು ದೊಡ್ಡಿಗಳಲ್ಲಿ ವಾಸಿಸುವುದಕ್ಕೆ ಹಿನ್ನೆಲೆ ಏನು ಎಂಬುದನ್ನು ಅರಿತುಕೊಂಡು ಸಮುದಾಯಗಳ ಒಟ್ಟಾರೆ ಜೀವನ ಕ್ರಮವನ್ನು ತೌಲನಿಕವಾಗಿ ಅಧ್ಯಯನ ನಡೆಸಲಾಗಿದೆ. ಜೊತೆಗೆ ಈ ನೆಲೆಗಳ ಬಗ್ಗೆ ಇಲ್ಲಿಯವರೆಗೆ ಈ ಜಿಲ್ಲೆಯಲ್ಲಿ ಅಧ್ಯಯನ ನಡೆದಿರುವುದಿಲ್ಲ ಆ ಹಿನ್ನೆಲೆಯಲ್ಲಿ ದೊಡ್ಡಿಗಳನ್ನು ಅಧ್ಯಯನವು ಹೆಚ್ಚು ಪ್ರಸ್ತುತವಾಗಿದೆ.

ಈ ಅಧ್ಯಯನದ ಉದ್ದೇಶಗಳು

೧. ದೊಡ್ಡಿಗಳಲ್ಲಿ ವಾಸಿಸುವ ಸಮುದಾಯಗಳ ಹಿನ್ನೆಲೆಯನ್ನು ಗುರುತಿಸಲಾಗಿದೆ.

೨. ದೊಡ್ಡಿಗಳ ಲಕ್ಷಣ ಮತ್ತು ಸ್ಥಳನಾಮಗಳನ್ನು ಚರ್ಚಿಸಲಾಗಿದೆ.

೩. ದೊಡ್ಡಿಗಳಲ್ಲಿ ವಾಸಿಸುವ ಸಮುದಾಯಗಳ ಸಮಸ್ಯೆಗಳನ್ನು ತಿಳಿದುಕೊಳ್ಳಲಾಗಿದೆ.

೪. ದೊಡ್ಡಿಗಳಲ್ಲಿ ನೆಲೆಸಿರುವ ಸಮುದಾಯಗಳ ಸ್ಥಿತಿಗತಿಗಳನ್ನು ತೌಲನಿಕವಾಗಿ ವಿಶ್ಲೇಷಿಸಲಾಗಿದೆ.

ಅಧ್ಯಯನದ ವ್ಯಾಪ್ತಿ

ಬೇಡ, ಕುರುಬ, ಕಬ್ಬಲಿಗ ಸಮುದಾಯಗಳು ರಾಯಚೂರು ಜಿಲ್ಲೆಯಲ್ಲಿ ವಿಶೇಷವಾಗಿ ಜನವಸತಿ ಸ್ಥಳಗಳಿಂದ ದೂರವಿರುವ ನಾಗರೀಕ ಪ್ರಪಂಚವನ್ನು ಬಿಟ್ಟು ದೂರದ ಪ್ರದೇಶವಾದ ಕುರುಚಲು ಗುಡ್ಡಗಳ ಸಾಲುಗಳಲ್ಲಿ ಹೊಲಗದ್ದೆಗಳಲ್ಲಿ ಹತ್ತಿರ ಇರುವ ಸ್ಥಳಗಳನ್ನು ಆಯ್ಕೆ ಮಾಡಿಕೊಂಡು ನೆಲೆಸಿರುವುದು. ಇಂತಹ ನೆಲೆಗಳಿಗೆ ರಾಯಚೂರು ಜಿಲ್ಲೆಯಲ್ಲಿ ದೊಡ್ಡಿಗಳು ಎಂದು ಕರೆಯುತ್ತಾರೆ. ದೊಡ್ಡಿಗಳು ಹಳ್ಳಿಗಳನ್ನು ಬಿಟ್ಟು ೨-೩ ಕಿಲೋ ಮೀಟರ್ ದೂರದಲ್ಲಿ ಪ್ರತ್ಯೇಕವಾಗಿ ವಾಸಿಸುತ್ತಿರುವುದು ಕಂಡುಬರುತ್ತದೆ. ಈ ಸಮುದಾಯಗಳು ನೆಲೆಸಿರುವ ಸ್ಥಳಗಳಿಗೆ ಯಾವುದೇ ಸಂಪರ್ಕವಿಲ್ಲ. ಈ ನೆಲೆಯಲ್ಲಿ ಇರುವ ಸಮುದಾಯಗಳ ಒಟ್ಟಾರೆ ಜೀವನ ವಿಧಾನಗಳನ್ನು ತೌಲನಿಕವಾಗಿ ಅಧ್ಯಯನ ಮಾಡಲು ಮಾಹಿತಿ ಪಡೆದುಕೊಳ್ಳಲು ತುಂಬಾ ಅನಿವಾರ್ಯವಾಗಿದೆ. ನನ್ನ ಅಧ್ಯಯನ ವ್ಯಾಪ್ತಿಯನ್ನು ರಾಯಚೂರು ಜಿಲ್ಲೆಗೆ ಸಂಬಂಧಿಸಿದಂತೆ ಅದರಲ್ಲಿ ಬರುವ ದೇವದುರ್ಗಾ, ಲಿಂಗಸ್ಗೂರು, ಸಿಂಧನೂರು,

ಮಾನವಿ ಮತ್ತು ರಾಯಚೂರು ತಾಲೂಕುಗಳನ್ನು ಪ್ರಸ್ತುತ ಅಧ್ಯಯನದ ವ್ಯಾಪ್ತಿಗೆ ಸೇರಿಸಿಕೊಳ್ಳಲಾಗಿದೆ.

ದೊಡ್ಡಿಗಳನ್ನು ಆರಿಸಿದ ಕ್ರಮ

ರಾಯಚೂರು ಜಿಲ್ಲೆಯಲ್ಲಿ ಪ್ರಮುಖವಾಗಿ ದೊಡ್ಡಿಗಳಲ್ಲಿ ನೆಲೆಸಿರುವ ಸಮುದಾಯಗಳಾದ ಬೇಡ, ಕುರುಬ ಮತ್ತು ಕಬ್ಬಲಿಗ ಈ ಮೂರು ಪ್ರಮುಖ ಸಮುದಾಯಗಳ ಸಾಮಾಜಿಕ ಸ್ಥಿತಿಗತಿಗಳ ನಡುವಿನ ವೈರುದ್ಯಗಳನ್ನು ತಿಳಿದುಕೊಳ್ಳಲು ಈ ಮೂರು ಸಮುದಾಯದ ಪ್ರತಿ ತಾಲೂಕಿನಿಂದ ೪೫ ಕುಟುಂಬಗಳಂತೆ ಒಟ್ಟು ೨೨೫ ಕುಟುಂಬಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ.

ಸಮೀಕ್ಷೆಗೊಳಪಟ್ಟ ತಾಲೂಕುವಾರು ದೊಡ್ಡಿಗಳ ವಿವರ

ದೇವದುರ್ಗಾ :	ಕುರ್ಲೆರದೊಡ್ಡಿ
	ಗಾಲೇರದೊಡ್ಡಿ
	ಹಳ್ಳದ ರಾಯನದೊಡ್ಡಿ
	ಕೊತ್ತದೊಡ್ಡಿ
	ಬುಂಕಲದೊಡ್ಡಿ
ಲಿಂಗಸ್ಗೂರು :	ಅಂಬಿಗೇರದೊಡ್ಡಿ
	ಕುರುಬರ ದೊಡ್ಡಿ
	ಕಲ್ದೆರ ದೊಡ್ಡಿ
	ಮುತ್ಲೆರ ದೊಡ್ಡಿ
ಸಿಂಧನೂರು :	ಉಪ್ಪಲದೊಡ್ಡಿ
	ಚಿಂತಮಾನದೊಡ್ಡಿ
	ಯದ್ದಲದೊಡ್ಡಿ
ಮಾನವಿ :	ಗೋವಿಂದದೊಡ್ಡಿ
	ತಪ್ಪಲದೊಡ್ಡಿ
	ಯರಮಲದೊಡ್ಡಿ
ರಾಯಚೂರು:	ಕೊತ್ತದೊಡ್ಡಿ
	ಮಾಮಡದೊಡ್ಡಿ
	ಮಾಲದೊಡ್ಡಿ
	ಹನುಮಾನದೊಡ್ಡಿ

ನಮ್ಮ ನಾಡಿನಲ್ಲಿ ನೂರಾರು ಸಮುದಾಯಗಳಿವೆ ಅವುಗಳಲ್ಲಿ ಕೆಲವು ಅಡವಿಯಲ್ಲಿ ಪ್ರತ್ಯೇಕ ನೆಲೆಗಳಲ್ಲಿ ನೆಲಸಿವೆ. ಇಲ್ಲಿ ಮುಖ್ಯವಾಗಿ ಊರಲ್ಲಿ ಇರಲಿ ಅಡವಿಯಲ್ಲಿರಲಿ ಅವರು ತಮ್ಮದೇ ಆದ ಪರಂಪರೆಯನ್ನು ಉಳಿಸಿಕೊಂಡು ಬಂದಿದ್ದಾರೆ. ಈ ದೃಷ್ಟಿಯಿಂದ ಜಿಲ್ಲೆಯಲ್ಲಿ ಪ್ರತ್ಯೇಕವಾಗಿ ದೊಡ್ಡಿಗಳಲ್ಲಿ ಉಳಿದುಕೊಂಡ ಬೇಡ, ಕುರುಬ ಮತ್ತು ಕಬ್ಬಲಿಗ ಸಮುದಾಯಗಳನ್ನು ಒಂದೊಂದು ಕುಲದ ನೆಲೆಯ ಬಗೆಗೂ ವಿಶೇಷ ಗಮನವನ್ನು ನೀಡಲಾಗಿದೆ. ಇಂತಹ ಅಧ್ಯಯನದಿಂದ ಆಗುವ ಪ್ರಯೋಜನವಾದರೂ ಏನು ಎಂದು ಕೆಲವರು ಕೇಳಬಹುದು. ಇಲ್ಲಿ ವಾಸ್ತವವಾಗಿ ನಮ್ಮ ನಾಗರೀಕತೆ ಬೆಳೆದ ಬಗೆಯನ್ನು ಗುರುತಿಸಲು, ದಾರಿಮಾಡಿಕೊಟ್ಟಿದೆ. ಎಂಬುದನ್ನು ಕಂಡುಕೊಳ್ಳಲು ಒಂದು ವೃಷ್ಟಿ ಮತ್ತು ಸಮಷ್ಟಿಯ ಸ್ವಭಾವಗಳನ್ನು ಅರಿತುಕೊಳ್ಳಲು ಮತ್ತು ಅವರ ನೆಲೆಗಳ ವೈರುಧ್ಯತೆ ಹೊಂದಿದೆ ಮತ್ತು ಸೌಲಭ್ಯ ಎಷ್ಟರ ಮಟ್ಟಿಗೆ ಪಡೆದುಕೊಂಡಿದೆ. ಎಂಬುದನ್ನು ಅಧ್ಯಯನ ಮಾಡಲು ದೊಡ್ಡಿಗಳ ತೌಲನಿಕ ಅಧ್ಯಯನ ಕೈಗೊಳ್ಳಲಾಗಿದೆ. ಇದರಿಂದ ರಾಜ್ಯದಲ್ಲಿ ಕಟ್ಟಕಡೆಯ ನೆಲೆಗಳು ಎಂದು ಬಿಂಬಿತವಾಗಿರುವ ಸ್ಥಳ ಮತ್ತು ಅಲ್ಲಿನ ಸಮುದಾಯಗಳ ಕುರಿತು ಅಧ್ಯಯನ ಮಾಡಲಾಗಿದೆ.

೧.೩ ಅಧ್ಯಯನದ ಮಹತ್ವ

ಈ ಅಧ್ಯಯನದ ಮೂಲ ಗುರಿ ದೊಡ್ಡಿಗಳಲ್ಲಿ ವಾಸಿಸುವ ಬೇಡ, ಕುರುಬ ಮತ್ತು ಕಬ್ಬಲಿಗ ಸಮುದಾಯದವರು ನೆಲೆಸಿರುವ ಸ್ಥಳಗಳು ಸೇರಿದಂತೆ ಒಟ್ಟಾರೆ ಜೀವನ ಮಟ್ಟವನ್ನು ತೌಲನಿಕ ಅಧ್ಯಯನದ ಮುಖಾಂತರ ಈ ಸಮುದಾಯಗಳು ಅನುಭವಿಸುವ ನೋವು ನಲಿವು ಸುಖ ದುಃಖ ಮತ್ತು ಸಮಸ್ಯೆಗಳು ಸಮುದಾಯಗಳ ನಡುವೆ ಇರುವ ಸಾಮ್ಯತೆ ಮತ್ತು ವೈರುಧ್ಯತೆಗಳನ್ನು ತಿಳಿದುಕೊಳ್ಳಲಾಗಿದೆ. ಅಧ್ಯಯನದ ಕ್ಷೇತ್ರ ರಾಯಚೂರು ಜಿಲ್ಲೆಯಾದುದರಿಂದ ಜಿಲ್ಲೆಯಲ್ಲಿ ಬರುವ ಲಿಂಗಸ್ಗೂರು, ದೇವದುರ್ಗಾ, ಮಾನ್ವಿ, ಸಿಂಧನೂರು, ರಾಯಚೂರು ತಾಲ್ಲೂಕುಗಳಲ್ಲಿ ಬರುವ ದೊಡ್ಡಿಗಳ ಬಗ್ಗೆ ಕ್ಷೇತ್ರಕಾರ್ಯ ಕೈಗೊಳ್ಳಲಾಗಿದೆ. ಅಲ್ಲಿನ ಎಲ್ಲಾ ಮಾಹಿತಿಯನ್ನು ಸೂಕ್ತವಾದ ರೀತಿಯಲ್ಲಿ ದಾಖಲಿಸಿಕೊಳ್ಳಲಾಗಿದೆ. ಆ ನೆಲೆಯಲ್ಲಿ ವಾಸಿಸುವ ಸಮುದಾಯಗಳ ನಡುವೆ ಹೋಲಿಕೆ ಮಾಡಿ ವ್ಯತ್ಯಾಸವನ್ನು ತಿಳಿದುಕೊಳ್ಳಲು ತುಂಬಾ ಅನುಕೂಲವಾಗಿದೆ.

ಅಧ್ಯಯನದ ಸ್ವರೂಪ

ರಾಯಚೂರು ಜಿಲ್ಲೆಯ ದೊಡ್ಡಿಗಳ ತೌಲನಿಕ ಅಧ್ಯಯನ ಎನ್ನುವ ಅಧ್ಯಯನಕ್ಕೆ ಸಂಬಂಧಪಟ್ಟಂತೆ ಎಂಟು ಅಧ್ಯಾಯಗಳನ್ನು ಮಾಡಿಕೊಳ್ಳಲಾಗಿದೆ. ಇದರಲ್ಲಿ ಮೊದಲನೆಯ ಅಧ್ಯಾಯನಕ್ಕೆ ಸಂಬಂಧಿಸಿದಂತೆ ಅಧ್ಯಯನಗಳ ಉದ್ದೇಶ, ವ್ಯಾಪ್ತಿ, ವಿಧಾನಗಳ ಜೊತೆಗೆ ಅಧ್ಯಯನದ ಸ್ವರೂಪವನ್ನು ವಿವರಿಸಲಾಗಿದೆ.

ಎರಡನೇಯ ಅಧ್ಯಾಯದಲ್ಲಿ ರಾಯಚೂರು ಜಿಲ್ಲೆಯ ಚಾರಿತ್ರಿಕ ಹಿನ್ನಲೆಯನ್ನು ಹೇಳುವುದರ ಜೊತೆಗೆ ಭೌಗೋಳಿಕ ನೆಲೆ, ಜನಸಂಖ್ಯೆ ಇಲ್ಲಿ ಬೆಳೆಯುವ ಬೆಳೆಯ ಬಗ್ಗೆ ವಿವರಿಸಲಾಗಿದೆ.

ಮೂರನೇಯ ಅಧ್ಯಾಯದಲ್ಲಿ ದೊಡ್ಡಿಗಳ ಪರಿಕಲ್ಪನೆ, ದೊಡ್ಡಿಯ ಹಿನ್ನೆಲೆ ಮತ್ತು ದೊಡ್ಡಿಗಳ ಸ್ಥಳನಾಮ ಹಾಗೂ ದೊಡ್ಡಿಯ ಪರಿಚಯ ಸ್ವರೂಪಗಳ ಬಗ್ಗೆ ಚರ್ಚಿಸಲಾಗಿದೆ.

ನಾಲ್ಕನೇ ಅಧ್ಯಾಯದಲ್ಲಿ ದೊಡ್ಡಿಗಳಲ್ಲಿ ನೆಲೆಸಿರುವ ಸಮುದಾಯಗಳಾದ ಬೇಡ, ಕುರುಬ, ಕಬ್ಬಲಿಗ ಸಮುದಾಯಗಳ ಕುರಿತು ಸಂಕ್ಷಿಪ್ತವಾಗಿ ಪರಿಚಯ ಮಾಡಲ್ಾಗಿದೆ. ಹಾಗೂ ಈ ಸಮುದಾಯಗಳ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ರಾಜಕೀಯ ಸ್ಥಿತಿಗತಿಗಳ ಕುರಿತು ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

ಐದನೇ ಅಧ್ಯಾಯದಲ್ಲಿ ದೊಡ್ಡಿಯಲ್ಲಿ ವಾಸಿಸುವ ಬೇಡ, ಕುರುಬ ಮತ್ತು ಕಬ್ಬಲಿಗ ಸಮುದಾಯಗಳ ದೈನಂದಿನ ಜೀವನಕ್ರಮ ಕೃಷಿಪದ್ಧತಿ ವಿವಿಧ ಬಗೆಯ ಬೆಳೆಗಳು ಆಹಾರ ಪದ್ಧತಿ ಕುರಿತು ವಿಶ್ಲೇಷಿಸಲಾಗಿದೆ. ಕ್ಷೇತ್ರಕಾರ್ಯದ ಕೋಷ್ಟಕಗಳನ್ನು ಒಳಗೊಂಡಿದೆ.

ಆರನೇ ಅಧ್ಯಾಯದಲ್ಲಿ ದೊಡ್ಡಿಗಳಲ್ಲಿ ವಾಸಿಸುವ ಸಮುದಾಯಗಳು ಎದುರಿಸುತ್ತಿರುವ ಸಾಮಾಜಿಕ ಆರ್ಥಿಕ, ರಾಜಕೀಯ, ಶೈಕ್ಷಣಿಕ, ಭೌಗೋಳಿಕ ಸಮಸ್ಯೆಗಳ ಕುರಿತು ವಿಶ್ಲೇಷಿಸಲಾಗಿದೆ.

ಅಧ್ಯಾಯ ಏಳರಲ್ಲಿ ದೊಡ್ಡಿಗಳಲ್ಲಿ ನೆಲೆನಿಂತಿರುವ ಸಮುದಾಯಗಳಾದ ಬೇಡ, ಕುರುಬ, ಕಬ್ಬಲಿಗ ಸಮುದಾಯಗಳ ನಡುವೆ ಇರುವ ಹೋಲಿಕೆ ಮತ್ತು ವ್ಯತ್ಯಾಸಗಳ ಕುರಿತು ಚರ್ಚಿಸಲಾಗಿದೆ.

ಅಧ್ಯಾಯ ಎಂಟರಲ್ಲಿ ಉಪಸಂಹಾರವನ್ನು ಕುರಿತು ವಿವರಿಸಲಾಗಿದೆ. ಈ ಅಧ್ಯಾಯದಲ್ಲಿ ಅಧ್ಯಯನದ ಫಲಿತಗಳು ಮತ್ತು ಸಲಹೆಗಳ ಕುರಿತು ವಿವರಿಸಲಾಗಿದೆ. ಅನುಬಂಧದಲ್ಲಿ ಪರಾಮರ್ಶನ ಗ್ರಂಥಗಳು ವಕ್ತೃವಿವರ, ಪತ್ರಿಕಾ ವರದಿಗಳು, ಛಾಯಾಚಿತ್ರಗಳು, ಕ್ಷೇತ್ರಕಾರ್ಯದ ಅಂಕಿ ಅಂಶಗಳ ಪಟ್ಟಿಯನ್ನು ಒಳಗೊಂಡಿದೆ.

೧.೪ ಅಧ್ಯಯನದ ವಿಧಾನಗಳು

ನಮೂನೆ Sampling

ರಾಯಚೂರು ಜಿಲ್ಲೆಯ ದೊಡ್ಡಿಗಳಲ್ಲಿ ವಾಸಿಸುವ ಬೇಡ, ಕುರುಬ ಮತ್ತು ಕಬ್ಬಲಿಗ ಸಮುದಾಯಗಳನ್ನು ಒಳಗೊಂಡಂತೆ ೨೦೦೦ ಕುಟುಂಬಗಳಿದ್ದು, ಅವುಗಳಲ್ಲಿ Simple Random Sampling (ಸರಳ ಯಾದೃಚ್ಛಿಕ ಮಾದರಿ) ಆಧಾರದ ಮೇಲೆ ೨೨೫ (ಶೇ. ೧೧ರಷ್ಟು) ಕುಟುಂಬಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ.

ತೌಲನಿಕ ವಿಧಾನ

ತೌಲನಿಕ ವಿಧಾನವು ಬಹುಕಾಲದಿಂದಲೂ ಸಮಾಜ ವಿಜ್ಞಾನಗಳಲ್ಲಿ ಪ್ರಚಲಿತವಾಗಿದೆ. ಸಮಾಜಶಾಸ್ತ್ರದ ಅಧ್ಯಯನದಲ್ಲಿ ಪ್ರಯೋಗಕ್ಕೆ ಹೆಚ್ಚು ಅವಕಾಶವಿಲ್ಲದೇ ಅವಲೋಕನದಿಂದಲೇ ಅನೇಕ ಮಾಹಿತಿಯನ್ನು ಸಂಗ್ರಹಿಸಲು ಸಾಧ್ಯವಾಗಿದೆ. ಸಮಾಜದ ಪ್ರಕ್ರಿಯೆಗಳು ಹಲವು ಬಾರಿ ಹತ್ತಾರು ವರ್ಷಗಳ ಅಂತರಕ್ಕೆ ಪಸರಿಸುತ್ತವೆ. ನಾವು ಹತ್ತಾರು ವರ್ಷಗಳವರೆಗೆ ಕಾದು ಕುಳಿತು, ಸಾಮಾಜಿಕ ಘಟನೆಗಳನ್ನು ಅವಲೋಕಿಸಲು ಸಾಧ್ಯವಿಲ್ಲ. ಆದುದರಿಂದ ವಿವಿಧ ಸಂದರ್ಭಗಳನ್ನೊಳಗೊಂಡ ಸಮಾಜಗಳನ್ನು ಹೋಲಿಸಿ ಆ ಸಂದರ್ಭಗಳ ವ್ಯತ್ಯಾಸಕ್ಕೆ ಕಾರಣಗಳನ್ನು ನಿರ್ಣಯಿಸಲಾಗಿದೆ.

ಅಧ್ಯಯನ ಕ್ಷೇತ್ರ ರಾಯಚೂರು ಜಿಲ್ಲೆಯ ದೊಡ್ಡಿಗಳಾಗಿದ್ದರಿಂದ ಇವುಗಳ ಜೊತೆಗೆ ಇಲ್ಲಿ ವಾಸಿಸುವವ ಸಮುದಾಯಗಳ ನಡುವಿನ ಸಾಮ್ಯತೆ ಮತ್ತು ವ್ಯತ್ಯಾಸವನ್ನು ಅರಿತುಕೊಳ್ಳುವ ತೌಲನಿಕ ವಿಧಾನವನ್ನು ಅಳವಡಿಸಲಾಗಿದೆ.

ಪ್ರಶ್ನಾವಳಿ ವಿಧಾನ

ಅಧ್ಯಯನ ಕೈಗೊಳ್ಳುವ ಪೂರ್ವದಲ್ಲಿ ಆಯ್ಕೆ ಮಾಡಿಕೊಂಡಿರುವ ಸಮುದಾಯಗಳ ಬಗ್ಗೆ ಮತ್ತು ಸ್ಥಳದ ಕುರಿತು. ಪೂರ್ವಾಪರ ತಿಳಿದುಕೊಂಡು ಆ ಸಮುದಾಯಗಳಿಗೆ ಸಂಬಂಧಿಸಿದಂತೆ ಹಾಗೂ ನೆಲೆಸಿರುವ ಸ್ಥಳದ ಬಗ್ಗೆ ಮಾಹಿತಿ ಪಡೆದುಕೊಳ್ಳಲು ಅವರಿಗೆ ಸಂಬಂಧಿಸಿದ ಪ್ರಶ್ನಾವಳಿಯನ್ನು ಪೂರ್ವದಲ್ಲಿ ರಚಿಸಿಕೊಂಡು ನಂತರ ಸಂದರ್ಶನವನ್ನು ಮಾಡಲಾಗಿದೆ. ಅಧ್ಯಯನಕ್ಕೆ ಒಳಪಟ್ಟ ಸಮುದಾಯದವರನ್ನು ನೇರವಾಗಿ ವಕ್ತೃಗಳಿಂದ ಸಂಪೂರ್ಣ ಮಾಹಿತಿಯನ್ನು ಪಡೆದುಕೊಳ್ಳಲಾಗಿದೆ. ಪ್ರಶ್ನಾವಳಿ ವಿಧಾನದ ಮುಖಾಂತರ ಜೊತೆಗೆ ಮೌಖಿಕವಾಗಿ ದೊಡ್ಡಿಗಳ ಜನರಿಂದ ಮಾಹಿತಿಯನ್ನು ಅಚ್ಚುಕಟ್ಟಾದ ಜವಾಬ್ದಾರಿಯಿಂದ ಸಂಗ್ರಹಿಸಲಾಗಿದೆ.

ಸಂದರ್ಶನ ವಿಧಾನ

ಅಧ್ಯಯನ ವಿಷಯಕ್ಕೆ ಸಂಬಂಧಪಟ್ಟಂತೆ ಮೊದಲಿಗೆ ನೆಲೆಗಳನ್ನು ಸಂಪೂರ್ಣವಾಗಿ ಪರಿಚಯ ಮಾಡಿಕೊಳ್ಳಲಾಯಿತು. ನಂತರ ದೊಡ್ಡಿಗಳಲ್ಲಿ ವಾಸಿಸುವ ನಿವಾಸಿಗರಿಗೆ ಮುಖಾಮುಖಿ ಭೇಟಿಯಾಗುವುದರ ಮೂಲಕ ಮೌಖಿಕ ದಾಖಲೆ/ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಆ ಸಮುದಾಯದವರ ದೊಡ್ಡಿಗಳ ಸಮಗ್ರ ಮಾಹಿತಿಯನ್ನು ಪ್ರಾಥಮಿಕವಾಗಿ ದಾಖಲಿಸಿಕೊಳ್ಳಲಾಗಿದೆ. ಇದರಿಂದ ಸಂದರ್ಶನ ಬಳಸಿಕೊಂಡು ಆ ದೊಡ್ಡಿಗಳಲ್ಲಿ ನೆಲೆಸಿರುವ ಸಮುದಾಯಗಳ ಜನರಿಂದ ವಿವಿಧ ರೀತಿಯ ಮಾಹಿತಿಯನ್ನು ಪಡೆದುಕೊಳ್ಳಲು ಈ ವಿಧಾನವನ್ನು ಬಳಸಿಕೊಳ್ಳಲಾಗಿದೆ.

ಅವಲೋಕನ ವಿಧಾನ

ಅವಲೋಕನ ವಿಧಾನವನ್ನು ಬಳಸಿಕೊಂಡು ದೊಡ್ಡಿಗಳಲ್ಲಿ ಸಮುದಾಯಗಳ ಜನರ ಜೀವನ ಮಟ್ಟ, ದೊಡ್ಡಿಗಳಲ್ಲಿ ಎದುರಿಸುತ್ತಿರುವ ಸಮಸ್ಯೆಗಳು, ಒಟ್ಟು ಮಾಹಿತಿಯನ್ನು ಪೂರ್ವಕವಾಗಿ ಅವರು ನೆಲೆನಿಂತಿರುವ ಸ್ಥಳಗಳನ್ನು ಅವಲೋಕನ ಮಾಡುವುದರ ಮುಖಾಂತರ ಈ ಸಮುದಾಯ ಮತ್ತು ಬೇರೊಂದು ನೆಲೆಯಲ್ಲಿ ನಿಂತಿರುವ ಸಮುದಾಯಗಳ ನಡುವೆ ಹೋಲಿಕೆ ಮತ್ತು ವ್ಯತ್ಯಾಸದ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ವಿಷಯ ಅಧ್ಯಯನದ ವಿಧಾನ

ಅಧ್ಯಯನ ವಿಷಯಕ್ಕೆ ಸಂಬಂಧಿಸಿದಂತೆ ಸಂಶೋಧನಾ ಸಮಯದಲ್ಲಿ ರಾಯಚೂರು ಜಿಲ್ಲೆಯಾದ್ಯಂತ ಸಂಪೂರ್ಣವಾಗಿ ಕ್ಷೇತ್ರಕಾರ್ಯ ಮಾಡಲಾಗಿದೆ. ದೊಡ್ಡಿಗಳಲ್ಲಿ ವಾಸಿಸುವ ಸಮುದಾಯಗಳಾದ ಬೇಡ, ಕುರುಬ ಮತ್ತು ಕಬ್ಬಲಿಗ ಸಮುದಾಯದವರಿಂದ ಸಂಪೂರ್ಣ ಮಾಹಿತಿಯನ್ನು ಪಡೆದುಕೊಳ್ಳಲಾಯಿತು. ಹೆಚ್ಚಿನ ಮಾಹಿತಿಯನ್ನು ಮಾರ್ಗದರ್ಶಕರು, ವಿದ್ವಾಂಸರಿಂದ ಸಲಹೆಯನ್ನು ಪಡೆದುಕೊಂಡು ಅಧ್ಯಯನದ ಸಾಧಕ ಬಾಧಕಗಳ ಕುರಿತು, ಮಾರ್ಗದರ್ಶಕರು, ಮುಖ್ಯಸ್ಥರ ಜೊತೆಯಲ್ಲಿ ಈ ವಿಷಯಕ್ಕೆ ಸಂಬಂಧಪಟ್ಟಂತೆ ಚರ್ಚಿಸಿ ಅಧ್ಯಯನ ಪೂರ್ಣಗೊಳಿಸಲಾಗಿದೆ.

ಸಹಭಾಗಿತ್ವ ಅವಲೋಕನ ವಿಧಾನ

ಸಹಭಾಗಿತ್ವ ಅವಲೋಕನದಿಂದ ದೊಡ್ಡಿ ನಿವಾಸಿಗಳಾದ ಬೇಡ, ಕುರುಬ ಮತ್ತು ಕಬ್ಬಲಿಗ ಸಮುದಾಯದವರ ವಾಸ್ತವ ಸ್ಥಿತಿಗತಿಯನ್ನು ಅರಿತುಕೊಳ್ಳಲು ಸಾಧ್ಯವಾಯಿತು. ದೊಡ್ಡಿಗಳಲ್ಲಿ ಇರುವ ಜನರ ಜೊತೆಯಲ್ಲಿ ಬೆರೆತುಕೊಳ್ಳುವುದರ ಮೂಲಕ ಸಂಪೂರ್ಣ ಮಾಹಿತಿಯನ್ನು ಪಡೆದುಕೊಳ್ಳಲು ಈ ವಿಧಾನ ಅನುವು ಮಾಡಿಕೊಟ್ಟಿದೆ. ಜೊತೆಗೆ ಅವರ ಕಷ್ಟನಷ್ಟಗಳನ್ನು ತಿಳಿದುಕೊಳ್ಳುವುದರ ಮೂಲಕ ಅವರು ಎದುರಿಸುವ ಗಂಭೀರ ಸಮಸ್ಯೆಗಳ ಬಗ್ಗೆ ಸ್ವತಃ ಆ ಸಮುದಾಯಗಳಿಂದ ಮಾಹಿತಿಯನ್ನು ಪಡೆದುಕೊಳ್ಳಲಾಗಿದೆ.

ದತ್ತಾಂಶ ವಿಶ್ಲೇಷಣೆ

ರಾಯಚೂರು ಜಿಲ್ಲೆಯಾದ್ಯಂತ ಕ್ಷೇತ್ರಕಾರ್ಯ ಕೈಗೊಂಡು ಮಾಹಿತಿಯನ್ನು ಪಡೆದುಕೊಳ್ಳಲಾಯಿತು. ದೊಡ್ಡಿಗಳಲ್ಲಿ ವಾಸಿಸುವ ಸಮುದಾಯದವರನ್ನು ಬೇಟಿ ಮಾಡಿ ಅವರಿಂದ ದೊರೆತ ಮಾಹಿತಿ ಅಂಕಿ ಅಂಶಗಳನ್ನು ಒಟ್ಟುಗೂಡಿಸಿ ವಿಶ್ಲೇಷಣೆ ಮಾಡಿ ಫಲಿತಾಂಶವನ್ನು ಪ್ರಾಮಾಣಿಕವಾಗಿ ವಿವರಿಸಲು ಈ ವಿಧಾನವು ತುಂಬಾ ಅನುಕೂಲವಾಗಿದೆ.

ದತ್ತಾಂಶ ಸಂಗ್ರಹಣೆ

"ರಾಯಚೂರು ಜಿಲ್ಲೆಯ ದೊಡ್ಡಿಗಳ ತೌಲನಿಕ ಅಧ್ಯಯನ" ಎಂಬ ಅಧ್ಯಯನಕ್ಕೆ ಸಂಬಂಧಿಸಿದಂತೆ ಮುಖ್ಯವಾಗಿ ಪ್ರಾಥಮಿಕ ಮೂಲಗಳಾದ ಕ್ಷೇತ್ರಕಾರ್ಯ, ವೃತ್ತಪತ್ರಿಕೆ ಲೇಖನಗಳು, ವಿವಿಧ ಅಧ್ಯಯನ ಪ್ರಬಂಧಗಳ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

೧.೫ ಅಧ್ಯಯನಗಳ ಸಮೀಕ್ಷೆ

ಕರ್ನಾಟಕದಲ್ಲಿ ನೈಸರ್ಗಿಕ ಸಂಪನ್ಮೂಲಗಳನ್ನು ಹೊಂದಿರುವ ಈ ನಾಡಿನ ಬೆಟ್ಟಗುಡ್ಡ, ಗಿರಿಶಿಖರ, ಅರಣ್ಯ ಅಂಚಿನಲ್ಲಿ ಹಾಗೂ ಅಡವಿಗಳಲ್ಲಿ ಅನೇಕ ಆದಿವಾಸಿ ಸಮುದಾಯಗಳು ಉಳಿದಿರುವುದನ್ನು ಕಾಣಬಹುದಾಗಿದೆ. ಕರ್ನಾಟಕದಲ್ಲಿ ಸುಮಾರು ೫೦ ಅನುಸೂಚಿತ ಬುಡಕಟ್ಟುಗಳು ಇವೆ. ಇವರಲ್ಲಿ ಕೆಲವು ಬುಡಕಟ್ಟುಗಳು ಮಾತ್ರ ಅರಣ್ಯದಲ್ಲಿ ವಾಸಿಸುತ್ತಿದ್ದಾರೆ. ಅವರಲ್ಲಿ ಸೋಲಿಗ, ಹಕ್ಕಿ ಪಿಕ್ಕಿ, ಸಿದ್ದಿ, ಪಣಿಯಾ, ಬೇಡರ, ಕಾಡುಕುರುಬ, ಜೇನುಕುರುಬ, ಮೇದರು ಇನ್ನು ಅನೇಕ ಸಮುದಾಯಗಳು ನೆಲೆಗೊಂಡಿರುವುದು ಕಂಡುಬರುತ್ತದೆ. ರಾಜ್ಯದಲ್ಲಿನ ಬುಡಕಟ್ಟು ಸಮುದಾಯಗಳ ಅಧ್ಯಯನವನ್ನು ಅನೇಕ ವಿದ್ವಾಂಸರು, ಮಾನವ ಶಾಸ್ತ್ರಜ್ಞರು, ಸಮಾಜಶಾಸ್ತ್ರಜ್ಞರು, ಜಾನಪದ ವಿದ್ವಾಂಸರು ಮೊದಲಾದವರು ಅಧ್ಯಯನ ಮಾಡಿದ್ದಾರೆ.

ಭಾರತ ಹಾಗೂ ಕರ್ನಾಟಕ ಸೇರಿದಂತೆ ಹಲವಾರು ಬುಡಕಟ್ಟು ಸಮುದಾಯಗಳ ಅಧ್ಯಯನವನ್ನು ಸ್ವಾತಂತ್ರ್ಯ ಪೂರ್ವದಲ್ಲಿಯೇ ಆರಂಭಿಸಲಾಗಿದೆ. ವೆರಿಯರ್ ಎಲ್ವಿನ್ ರಂತಹ ಧರ್ಮ ಪ್ರಚಾರಕರು ಸಹ ಬುಡಕಟ್ಟುಗಳ ಆಚರಣೆ ಸಂಸ್ಕೃತಿಗಳಿಗೆ ಮಾರುಹೋಗಿ ಸಮುದಾಯದ ಒಬ್ಬ ಪ್ರಜೆಯಾಗಿ ಪರಿವರ್ತನೆಗೊಂಡು ಆ ಮೂಲಕ ಬುಡಕಟ್ಟು ಅಧ್ಯಯನ ಮಾಡಿದ ರೀತಿ ವಿಸ್ಮಯವಾಗಿದೆ.

ಆಂತ್ರೋಪೋಲೋಜಿಕಲ್ ಸರ್ವೆ ಆಫ್ ಇಂಡಿಯಾ ಸಂಸ್ಥೆಯು ಕರ್ನಾಟಕದಲ್ಲಿ ಇರುವ ಕೆಲವು ಪರಿಶಿಷ್ಟ ಬುಡಕಟ್ಟುಗಳನ್ನು ಪರಿಚಯ ಮಾಡಿಕೊಡುವ ಪುಸ್ತಕಗಳನ್ನು ಹೊರತಂದಿದ್ದಾರೆ. ಹಾಗೂ ಬೆಂಗಳೂರಿನ ಐ.ಬಿ.ಎಚ್ ಪ್ರಕಾಶನದವರು ಕೆಲವು ಜಾತಿ ಮತ್ತು ಬುಡಕಟ್ಟುಗಳನ್ನು ಕುರಿತು ಪರಿಚಯಾತ್ಮಕವಾದ ಕೃತಿಗಳನ್ನು ಪ್ರಕಟಿಸಿದ್ದಾರೆ. ಅವುಗಳಲ್ಲಿ ಒಡಿಗ, ಕಚ್ಚೆಗೌಳಿಗರು, ಸೋಲಿಗರು, ಹಸಲರು, ಬೇಡರು, ಕೊರಗರು ಕಾಡುಗೊಲ್ಲರು, ಹಾಲಕ್ಕಿ ಮುಂತಾದ ಬುಡಕಟ್ಟು ಸಮುದಾಯಗಳ ಬಗ್ಗೆ ಕಿರು ಪರಿಚಯ ಮಾಡಿದ್ದಾರೆ.

ಭಾರತೀಯ ಗ್ರಾಮ ಎನ್ನುವ ಪುಸ್ತಕ ಅನೇಕ ಲೇಖನಗಳ ಭಾರತೀಯ ಅನೇಕ ಗ್ರಾಮಗಳನ್ನು ಅಧ್ಯಯನ ಮಾಡಿದ ವಿದ್ವಾಂಸರು ಪ್ರಪ್ರಥಮವಾಗಿ ವೈಜ್ಞಾನಿಕ ನೆಲೆಗಟ್ಟಿನಲ್ಲಿ ತಿಳುವಳಿಕೆ ಕೊಡುವ ಉತ್ತಮ ಕೆಲಸವನ್ನು ಸಮಾಜಶಾಸ್ತ್ರಜ್ಞರು ಮಾಡಿದ್ದಾರೆ.

ವಸತಿ ಜಾನಪದ ಎನ್ನುವ ಪುಸ್ತಕ ಅನೇಕ ಲೇಖಕರು ವಸತಿ ನೆಲೆಯ ಬಗ್ಗೆ ಪ್ರಾಣಿ ವಸತಿ ಮತ್ತು ಮಾನವ ಆರಂಭಿಕ ನೆಲೆಗಳ ಮೇಲೆ ಜೊತೆಗೆ ಗ್ರಾಮ ವಿನ್ಯಾಸದ ಸವಿಸ್ತಾರವಾಗಿ ಅಧ್ಯಯನ ಮಾಡಿ ಗ್ರಾಮಗಳ ಅಧ್ಯಯನಕ್ಕೆ ಪೂರಕವಾಗುವಂತೆ ಕೆಲಸ ಮಾಡಿದ್ದಾರೆ.

ಬುಡಕಟ್ಟು ಸಂಪುಟಗಳಲ್ಲಿ ಅನೇಕ ಸಮುದಾಯದ ಜ್ವಲಂತ ಸಮಸ್ಯೆಗಳನ್ನು ಕುರಿತು ಪ್ರಾಸ್ತಾಪಿಸಿರುವುದು ಕಂಡುಬರುತ್ತದೆ. ಕರ್ನಾಟಕ ಪ್ರತ್ಯೇಕವಾಗಿ ಉಳಿದ ಸಮುದಾಯ ಮತ್ತು ನೆಲೆಗಳ ಕುರಿತು ಬಿಡಿ ಬಿಡಿ ಲೇಖನಗಳಲ್ಲಿ ಪ್ರಸ್ತಾಪಿಸಿರುವುದು ಕಾಣಬಹುದಾಗಿದೆ.

ಕರ್ನಾಟಕ ಬುಡಕಟ್ಟು ಸಂಪುಟ-೨ರಲ್ಲಿ ಟೊಕ್ರಿಕೋಳಿ ಬಗ್ಗೆ ಚನ್ನಣವಾಲೀಕಾರ ಅವರು ಸಮುದಾಯ ಯಾವ ರೀತಿ ವಿಕಾಸವಾಗಿ ಕವಲು ಒಡೆಯಿತು ಎಂದು ಅನೇಕ ವಿಷಯಗಳ ಬಗ್ಗೆ ಪ್ರಸ್ತಾಪಿಸಿದ್ದಾರೆ. ಆಗಿನ ಮೈಸೂರಿನ ಬುಡಕಟ್ಟುಗಳ ಬಗ್ಗೆ ಎಚ್.ವಿ.ನಂಜುಂಡಯ್ಯ ಹಾಗೂ ಎಲ್.ಕೆ. ಅನಂತಕೃಷ್ಣ ಅಯ್ಯರ್ ಒಂದು ದಶಕಗಳ ಅವಧಿಯಲ್ಲಿ ಆ ಪ್ರದೇಶದಲ್ಲಿ ಕ್ಷೇತ್ರಕಾರ್ಯ ಕೈಗೊಂಡು ದಿ ಮೈಸುರು ಟ್ರೈಬ್ಸ್ ಅಂಡ್ ಕ್ಯಾಸ್ಟ ಎಂಬ ಗ್ರಂಥವನ್ನು ನಾಲ್ಕು ಸಂಪುಟಗಳಲ್ಲಿ ಹೊರತಂದಿದ್ದಾರೆ. ಇದು ಮಾನವ ಶಾಸ್ತ್ರೀಯ ಅಧ್ಯಯನದ ಸಮೀಕ್ಷೆಗೆ ಮತ್ತು ಸಂಶೋಧನೆ ಮಾಡುವವರಿಗೆ ಅನುವು ಮಾಡಿಕೊಡುತ್ತದೆ.

೧೯೬೩ರಲ್ಲಿ ಎ.ಎ.ಡಿ. ಲೂಯಿಸ್ ಅವರು ತಮ್ಮ ಟ್ರೈಬ್ಸ ಆಫ್ ಮೈಸೂರು ಎಂಬ ಕೃತಿಯಲ್ಲಿ ಮೈಸೂರಿನಲ್ಲಿ ೨೭ ಬುಡಕಟ್ಟುಗಳನ್ನು ಕುರಿತು. ತಮ್ಮದೇ ಆದ ವಿಚಾರವನ್ನು ವ್ಯಕ್ತಪಡಿಸಿದ್ದಾರೆ. ಇದಲ್ಲದೇ ಎಡ್ಗರ್ ಥರಸ್ಟನ್ ಮತ್ತು ಕೆ. ರಂಗಚಾರಿ ಅವರು ಕ್ಯಾಸ್ಟ್ ಅಂಡ್ ಟ್ರೈಬ್ಸ್ ಆಫ್ ಸೌತ್ ಇಂಡಿಯಾ ಎಂಟಿ ಏಳು ಸಂಪುಟಗಳ ಗ್ರಂಥವನ್ನು ಪ್ರಕಟಿಸಿ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ಕುರಿತು ಸ್ಪಷ್ಟ ನಿಲುವು ವ್ಯಕ್ತಪಡಿಸಿದ್ದಾರೆ.

ಎಲ್.ಜಿ.ಹಾವನೂರು ಅವರು ಸಿದ್ದಪಡಿಸಿರುವ ಕರ್ನಾಟಕ ಬ್ಯಾಕ್‌ವರ್ಡ್ ಕಮಿಶನ್ ರಿಪೋರ್ಟ್ (೧೯೭೩)ರ ವರದಿಯಲ್ಲಿ ಹಿಂದುಳಿದ ವರ್ಗಗಳು ಸಾಮಾಜಿಕವಾಗಿ ಆರ್ಥಿಕವಾಗಿ, ರಾಜಕೀಯವಾಗಿ ಅಭಿವೃದ್ಧಿಯನ್ನು ಕೈಗೊಳ್ಳಲು ಸಲಹೆ ಸೂಚನೆಗಳನ್ನು ನೀಡಿದ್ದಾರೆ. ಅವರಿಗೆ ಸರಿಯಾದ ರೀತಿಯಲ್ಲಿ ಸೌಲಭ್ಯಗಳನ್ನು ಕಲ್ಪಿಸಿಕೊಡುವ ಕುರಿತು ನಿರ್ದೇಶನ ನೀಡಿದ್ದಾರೆ. ಡಾ.ತಿ.ನಂ.ಶಂಕರನಾರಾಯಣ ಅವರು ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು ಎಂಬ ಪ್ರೌಢ ಪ್ರಬಂಧವನ್ನು ಬರೆದಿದ್ದಾರೆ. ಪ್ರೊ.ಹಿ.ಚಿ.ಬೋರಲಿಂಗಯ್ಯ ಬುಡಕಟ್ಟುಗಳ ದೃಷ್ಟಿಕೋನ ಎಂಬ ವಿಷಯದ ಮೇಲೆ ಪ್ರೌಢ ಪ್ರಬಂಧವನ್ನು ಬರೆದಿದ್ದಾರೆ.

ಡಾ ಎಸ್.ಕೆ. ಸಣ್ಣ ಓಬಯ್ಯನವರು ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳು ಒಂದು ಸಮಾಜಶಾಸ್ತ್ರೀಯ ಅಧ್ಯಯನ ಎಂಬ ಮಹಾಪ್ರಬಂಧವನ್ನು ೨೦೦೨ರಲ್ಲಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದಾರೆ. ಇದರಲ್ಲಿ ಈ ಎರಡು ಸಮುದಾಯದ ಪ್ರತ್ಯೇಕ ನೆಲೆಗಳ ಬಗ್ಗೆ ಸಾಕಷ್ಟು ಮಾಹಿತಿಯನ್ನು ಅಧ್ಯಯನ ಮುಖಾಂತರ ಗುರುತಿಸಿದ್ದಾರೆ.

ಬಿ.ಎ.ನಾಗರಾಜುರವರು ಗೊಲ್ಲರ ಹಟ್ಟಿ ಎಂಬ ಪುಸ್ತಕ ಬರೆದಿದ್ದಾರೆ. ಅದರಲ್ಲಿ ಮಧ್ಯ ಕರ್ನಾಟಕದ ಪ್ರತ್ಯೇಕವಾಗಿ ಉಳಿದ ಕಾಡುಗೊಲ್ಲರ ಸಾಮಾಜಿಕ ಆರ್ಥಿಕ ಮತ್ತು ರಾಜಕೀಯ ಜೀವನದ ಜೊತೆಗೆ ಪ್ರತ್ಯೇಕ ನೆಲೆಯ ಮೇಲೆ ಬೆಳಕು ಚೆಲ್ಲಿದ್ದಾರೆ.

ಆದಿವಾಸಿ ಆಖ್ಯಾನ ಎನ್ನುವ ಭಾಗದ ಲೇಖನಗಳು ಬುಡಕಟ್ಟು ಸಮುದಾಯಗಳನ್ನು ಕುರಿತು ಅಧ್ಯಯನ ಮಾಡಿದ ವಿದ್ವಾಂಸರ ಮಾಹಿತಿಗಳನ್ನು ತಿಳವಳಿಕೆಯನ್ನಾಗಿ ಕೊಡುವ ಉತ್ತಮ ಪ್ರಯತ್ನಗಳನ್ನು ಮಾಡಿದ್ದಾರೆ. ಆಯ್ದ ಲೇಖನಗಳಲ್ಲಿ ಕರ್ನಾಟಕದ ಬುಡಕಟ್ಟು ನೆಲೆಗಳು ಎಂಬ ಲೇಖನದಲ್ಲಿ (ವಿಜಯಲಕ್ಷ್ಮಿ ಆರ್) ಸಮುದಾಯ ಪ್ರತ್ಯೇಕ ನೆಲೆಗಳ ಬಗ್ಗೆ ಬೆಳಕು ಚೆಲ್ಲಿದ್ದಾರೆ ಅರಣ್ಯದೊಳಗಿನ ಬುಡಕಟ್ಟು : ಒಂದು ವಿವೇಚನೆ (ಹಿ.ಚಿ.ಬೋರಲಿಂಗಯ್ಯ) ಅರಣ್ಯದಲ್ಲಿ ಇರುವ ಸಮುದಾಯದ ವಾಸ್ತವ ಜೀವನದ ಬಗ್ಗೆ ಪ್ರಸ್ತಾಪಿಸಿದ್ದಾರೆ.

ಅಡ್ಲಟಿ ಮ್ಯಾಸಬೇಡರು ಒಂದು ಸಮಾಜಶಾಸ್ತ್ರೀಯ ಅಧ್ಯಯನ (ಎನ್ ಕಲ್ಲಪ್ಪ)ರವರು ಸಮುದಾಯದ ಆರ್ಥಿಕ, ಸಾಮಾಜಿಕ ಸ್ಥಿತಿಗತಿಗಳ ಗುರುತಿಸಿದ್ದಾರೆ. ಬೇಡ ಬುಡಕಟ್ಟಿನ ಬೇಟೆ ಆಚರಣೆಗಳು (ಜಗದೀಶ ಕುಮಮಾರ) ಬೇಡ ಸಮುದಾಯದ ಆಚರಣೆಗಳ ಕುರಿತು ಬೆಳಕು ಚೆಲ್ಲಿದ್ದಾರೆ.

ಎಲ್.ಕೆ. ಅನಂತಕೃಷ್ಣ ಅಯ್ಯರ್‌ರವರು ತಮ್ಮ ಕೃತಿ ಮೈಸೂರು ಕ್ಯಾಸ್ಟ ಅಂಡ್ ಟ್ರೈಬ್ ಸಂಪುಟ-೪ರಲ್ಲಿ ಕುರುಬರ ಸಮುದಾಯದ ಬಗ್ಗೆ ತಿಳಿಸಿದ್ದಾರೆ. ಇದು ಮೈಸೂರು ಪ್ರದೇಶದ ಸಂಬಂಧಿಸಿದ ಕೆಲವು ಜನಸಮುದಾಯಗಳೊಂದಿಗೆ ಕುರುಬರ ಬಗ್ಗೆ ತಿಳಿಸಿದ್ದಾರೆ.

ಆರ್. ಹಮುಮಂತಯ್ಯನವರು ರಚಿಸಿದ ಕುರುಬರ ಚರಿತ್ರೆ ಇದು ಕುರುಬರ ರಾಜಕೀಯ ಧಾರ್ಮಿಕ ಜೀವನದ ಬಗ್ಗೆ ವಿವರಿಸುತ್ತದೆ.

ಶಂಭಾ ಜೋಷಿ ರಚಿಸಿದ ಕುರುಬರ ಸಂಸ್ಕೃತಿ ಪರಂಪರೆಯನ್ನು ತಮ್ಮ ಹಾಲುಮತ ದರ್ಶನ ಕೃತಿಯಲ್ಲಿ ವಿವರಿಸಿದ್ದಾರೆ.

ಶಿವಾನಂದ ಗುಬ್ಬಣ್ಣವರ ಕರ್ನಾಟಕದ ಕುರುಬರು ಈ ಕೃತಿಯು ಕುರುಬರ ಪೌರಾಣಿಕ ಹಿನ್ನೆಲೆಯೊಂದಿಗೆ ಧಾರ್ಮಿಕ ಸಾಮಾಜಿಕ ಜೀವನವನ್ನು ನಿರೂಪಿಸುತ್ತದೆ.

ಬಿರಾದರ ವಿಠ್ಠಲ್‌ರವರು ಬೀದರ ಜಿಲ್ಲೆಯ ಕುರುಬರ ಸಾಂಸ್ಕೃತಿಕ ಅಧ್ಯಯನ ಅವರ ಸಂಸ್ಕೃತಿಯ ಮೇಲೆ ಬೆಳಕು ಚೆಲ್ಲುತ್ತದೆ.

ಕೇಶವನ್ ಪ್ರಸಾದ. ಕೆ ರವರು ಬುಂಡೆ ಬೆಸ್ತರು ಕುರಿತು ಅವರ ಆರ್ಥಿಕ ಸಾಮಾಜಿಕ ಸ್ಥಿತಿಗತಿ ಅಧ್ಯಯನ ಮಾಡಿ ಸಮುದಾಯಕ್ಕೆ ಬೆಳಕು ಚೆಲ್ಲಿದ್ದಾರೆ.

ಕೊಂತಮ್ ಸತೀಶರವರು ಬೇಡ ಗಂಪಣ ಸಮುದಾಯದ ಸಾಮಾಜಿಕ ಸ್ಥಿತಿಗತಿಗಳು ಕುರಿತು ಎನ್ನುವ ತಮ್ಮ ಲೇಖನದಲ್ಲಿ ಬೇಡ ಗಂಪಣರ ನೆಲೆಗಳಾದ ಕೆರೆದೊಡ್ಡಿ.

ಮುನಿಗುಡಿದೊಡ್ಡಿ, ವಿ.ಎಸ್.ದೊಡ್ಡಿ, ಆಲೋಸಪ್ಪನ ದೊಡ್ಡಿ, ಹುಣಸೆ ಮರದ ದೊಡ್ಡಿ, ಜಗಲಿಯೂರು ದೊಡ್ಡಿ ಎನ್ನುವ ನೆಲೆಗಳನ್ನು ಗುರುತಿಸಿದ್ದಾರೆ. ಮೈಸೂರು ಭಾಗದಲ್ಲಿ ಬುಡಕಟ್ಟುಗಳು ವಾಸಿಸುವ ನೆಲೆಗಳಿಗೆ ದೊಡ್ಡಿ ಎಂಬ ಹೆಸರಿಸಿರುವುದು ಅನೇಕ ಲೇಖನಗಳಲ್ಲಿ ಗುರುತಿಸಿದ್ದಾರೆ.

(ಡಾ.ಕಾಳೇಗೌಡ ನಾಗವಾರ ಅವರು ಕಾಡುಗೊಲ್ಲರ ಜಾನಪದ ಒಂದು ಅಧ್ಯಯನ ಎಂಬ ವಿಷಯದ ಮೇಲೆ ಪ್ರಬಂಧವನ್ನು) ಬರೆದಿದ್ದಾರೆ. ಹತ್ತೊಂಬತ್ತರ ದಶಕದಿಂದೀಚೆಗೆ ಮಾನವಶಾಸ್ತ್ರಜ್ಞರು, ಸಮಾಜಶಾಸ್ತ್ರಜ್ಞರು ಜಾನಪದ ವಿದ್ವಾಂಸರು ಬುಡಕಟ್ಟು ಅಧ್ಯಯನವನ್ನು ಹೆಚ್ಚಾಗಿ ಕೈಗೊಂಡಿದ್ದಾರೆ.

ಕರ್ನಾಟಕ ಸಾಹಿತ್ಯ ಅಕಾಡೆಮಿಯವರು ಕನ್ನಡದಲ್ಲಿ ಉಪ ಸಂಸ್ಕೃತಿಗಳ ಅಧ್ಯಯನವನ್ನು ೧೯೪೩ರಲ್ಲಿ ಬುಡಕಟ್ಟು ಕುರಿತು ವಿಶಿಷ್ಟ ರೀತಿಯಲ್ಲಿ ಅಧ್ಯಯನ ಕೈಗೊಂಡು ಸುಮಾರು ೩೬ ಕೃತಿಗಳನ್ನು ಹೊರ ತಂದಿದ್ದಾರೆ. ಬರಗೂರು ರಾಮಚಂದ್ರಪ್ಪನವರು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ವಿಶೇಷ ಕಾಳಜಿ ಜೊತೆಗೆ ವೈಯಕ್ತಿಕ ಪ್ರಯತ್ನದ ಫಲವಾಗಿ ಉಪಸಂಸ್ಕೃತಿ ಮಾಲೆಗಳನ್ನು ಹೊರತಂದರು ಅವುಗಳು ಈ ಕೆಳಗಿನಂತಿವೆ.

೧. ಹಲಸರ ಸಂಸ್ಕೃತಿ

೨. ಸುಡುಗಾಡು ಸಿದ್ದರ ಸಂಸ್ಕೃತಿ

೩. ಸಿದ್ದಿಯರ ಸಂಸ್ಕೃತಿ

೪. ಹಗಲು ವೇಷದವರ ಸಂಸ್ಕೃತಿ

೫. ಯಳವರ ಸಂಸ್ಕೃತಿ

೬. ಮ್ಯಾಸಬೇಡರ ಸಂಸ್ಕೃತಿ

೭. ಯರವರ ಸಂಸ್ಕೃತಿ

೮. ಗೊಂಡರ ಸಂಸ್ಕೃತಿ

೯. ಜೋನುಕುರುಬರ ಸಂಸ್ಕೃತಿ

೧೦. ಕಾಡುಕುರುಬರ ಸಂಸ್ಕೃತಿ

೧೧. ಟೋಕ್ರಿಕೋಳಿ ಸಂಸ್ಕೃತಿ

ಹೀಗೆ ಇನ್ನು ಮುಂತಾದ ಸುಮಾರು ೩೬ ಬುಡಕಟ್ಟು ಸಮುದಾಯಗಳನ್ನು ಕುರಿತು ಬುಡಕಟ್ಟುಗಳ ಉಪಸಂಸ್ಕೃತಿ ಮಾಲೆ ಎಂಬ ಶೀರ್ಷಿಕೆಯಡಿಯಲ್ಲಿ ಹೊರತಂದಿದ್ದಾರೆ.

ಕಬ್ಬಲಿಗ ಸಮುದಾಯದ ಬಗ್ಗೆ ನಡೆದಿರುವ ಅಧ್ಯಯನಗಳು ಕಡಿಮೆ. ಕಬ್ಬಲಿಗರನ್ನು ಬೆಸ್ತ, ಮೊಗವೀರ, ಅಂಬಿಗ, ಬೋಯಿ, ಬಾರಿಕ, ಪರಿವಾರ, ಕಬ್ಬೇರ, ಬಾರಿಕ ಮುಂತಾದ ನಾನಾ ಹೆಸರುಗಳಿಂದ ವಿವಿಧ ಪ್ರದೇಶಗಳಲ್ಲಿ ಕರೆದರೂ ಸಹ ಈ ಸಮುದಾಯದ ಕುರಿತು ಸಂಶೋಧನೆಗಳು ನಡೆದಿರುವುದು ಕೇವಲ ಬೆರಳೆಣಿಕೆಯಷ್ಟು ಎಂದು ಹೇಳಬಹುದು. ಅದರಲ್ಲಿ ಉಪಸಂಸ್ಕೃತಿಯ ಅಧ್ಯಯನ ಮಾಲೆಯಡಿಯಲ್ಲಿ ಮೋಗವೀರರ ಸಂಸ್ಕೃತಿ ಬುಡಕಟ್ಟು ಸಂಪುಟ-೨ರಲ್ಲಿ ಕೋಳಿ ಸಮುದಾಯ ವಿವರ ಪ್ರಪ್ರಥಮ ಬಾರಿಗೆ ಸರ್ಕಾರದ ಯೋಜನೆಗಳಲ್ಲಿ ಈ ಸಮುದಾಯ ಕುರಿತು ವರದಿ ಸಿದ್ದಪಡಿಸಲು ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಮಾನವಶಾಸ್ತ್ರ ಅಧ್ಯಯನ ವಿಭಾಗ ಮುಖ್ಯಸ್ಥರಾದ ಡಾ.ಎಲ್. ಶ್ರೀನಿವಾಸರವರ ನೇತೃತ್ವದಲ್ಲಿ ಕಬ್ಬಲಿಗ ಸಮುದಾಯ ಕುರಿತು ಸಮಗ್ರ ಅಧ್ಯಯನ ಮಾಡಿ ಸರ್ಕಾರಕ್ಕೆ ವರದಿಯನ್ನು ನೀಡಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಪ್ರಾಧ್ಯಾಪಕರಾದ ಪ್ರೋ.ಸಿ.ಪಿ.ಸಿದ್ಧಾಶ್ರಮರವರು ತಮ್ಮ ದಿಟದ ದಿಟ್ಟೆಯ ಪಯಣ ಎಂಬ ಕೃತಿಯಲ್ಲಿ ಉತ್ತರ ಕರ್ನಾಟಕದ ಗಂಗಾಮತಸ್ಥರ ಸಂಪ್ರದಾಯಗಳು ಎಂಬ ಒಂದು ಸಂಶೋಧನಾ ಲೇಖನ ಬರೆದಿದ್ದಾರೆ.

ಕಬ್ಬಲಿಗ ಸಮುದಾಯವನ್ನು ಕುರಿತು ಇದುವರೆಗೆ ದೊರೆತ ಸಂಶೋಧನಾ ಲೇಖನಗಳು ಅತ್ಯಲ್ಪವಾದವುಗಳು ನನ್ನ ಸಂಶೋಧನಾ ಅವಧಿಯಲ್ಲಿ ದೊರೆತ ಕೆಲವು ಕೃತಿಗಳು ಮಾಹಿತಿಯನ್ನು ಮೇಲೆ ಹೆಸರಿಸಿದ್ದೇನೆ. ಈ ಜನಾಂಗಕ್ಕೆ ಸಂಬಂಧಿಸಿದ ಕೆಲವೊಂದು ಸರ್ಕಾರದ ವರದಿಗಳು ಮತ್ತು ಪ್ರಾಥಮಿಕ ಮಾಹಿತಿಗಳು ಮಾತ್ರ ದೊರಕಿವೆ.

ಡಾ. ಎಲ್. ಶ್ರೀನಿವಾಸರವರ ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯಕ್ಕೆ ಕರ್ನಾಟಕದ ಬೆಸ್ತರ (ಗಂಗಾಮತ) ಸಮುದಾಯ ಕುಲಶಾಸ್ತ್ರೀಯ ಅಧ್ಯಯನ ವರದಿಯಲ್ಲಿ ಕರ್ನಾಟಕದಲ್ಲಿ ವಿವಿಧ ಹೆಸರುಗಳಿಂದ ಕರೆಯಿಸಿಕೊಳ್ಳುವ ಬೆಸ್ತರ ಒಳಪಂಗಡ ಮತ್ತು ಅವರ ಸಾಮಾಜಿಕ ಸ್ಥಿತಿಗತಿಗಳನ್ನು ಗುರುತಿಸಿದ್ದಾರೆ.

ಆರ್.ಇ. ಎಂಥೋವೆನ್‌ರವರ ದಿ ಟ್ರೈಬ್ಸ್ ಅಂಡ್ ಕ್ಯಾಸ್ಟ ಆಫ್ ಬಾಂಬೆ ಸಂಪುಟ-೨ರಲ್ಲಿ ದಕ್ಷಿಣ ಪ್ರದೇಶದ ಕುರುಬರ ಬಗ್ಗೆ ವಿವರಿಸಿದ್ದಾರೆ. ಇಲ್ಲಿ ಕುರುಬರ ಜೀವನ ಸಂಸ್ಕೃತಿಯೊಂದಿಗೆ ರಾಜಕೀಯ ವಿಷಯಗಳ ಬಗ್ಗೆ ಉಲ್ಲೇಖಿಸಲಾಗಿದೆ. ನಂತರ ಸಚ್ಚಿದಾನಂದರವರ ಎನ್‌ಸೈಕ್ಲೋಪೆಡಿಕ್ ಪ್ರೋಫೈಲ್ ಆಫ್ ಇಂಡಿಯನ್ ಟ್ರೈಬ್-೨ರಲ್ಲಿ ಕುರುಬರ ಬಗ್ಗೆ ವಿವರಿಸಿದ್ದಾರೆ.

ಆರ್. ಹನುಮಂತಯ್ಯನವರ ರಚಿಸಿದ ಕುರುಬರ ಚರಿತ್ರೆ ಈ ಕೃತಿ ಕುರುಬರ ರಾಜಕೀಯ ಧಾರ್ಮಿಕ ಜೀವನದ ಬಗ್ಗೆ ತಿಳಿದುಕೊಳ್ಳಲು ಅನುವುಮಾಡಿಕೊಡುತ್ತವೆ. ಕುರುಬ ಸಂಸ್ಕೃತಿ ಪರಂಪರೆಯನ್ನು ಶಂಬಾ ಜೋಶಿಯವರು ತಮ್ಮ ಹಾಲುಮತ ದರ್ಶನ

ಕೃತಿಯಲ್ಲಿ ವಿವರಿಸಿದ್ದಾರೆ. ಬಸವಣ್ಣೆಪ್ಪ ನೀಲಪ್ಪ ಹಳಹಳ್ಳಿಯವರ ಹಾಲುಮತ ಪುರಾಣ ಅಪ್ಪಣ ಪೂಜಾರಿಯವರ ಶ್ರೀಸಿದ್ದಬೀರೇಶ್ವರ ಪುರಾಣ ಅಡಿವೆಪ್ಪ ಮಾಳಪ್ಪ ಸೋಮುತ್ತೆ ಒಡೆಯರ್‌ರವರ ಸುಕ್ಷೇತ್ರ ಹುಲಿಜಂತಿ ಮಹಾಲಿಂಗರಾಜರ ಹಾಲುಮತ ಪುರಾಣ ಗಂಗಾಧರ ದೈವಜ್ಞರು ಸಂಪಾದಿಸಿದ ಅಡಿವೆಪ್ಪ ಒಡೆಯರಹಾಡಿದ ಮಳಿಂಗರಾಯನ ಕಾವ್ಯ ಮೊದಲಾದವರು ಕುರುಬರ ಮೂಲವನ್ನು ಪೌರಾಣಿಕವಾಗಿ ಉಲ್ಲೇಖಿಸುತ್ತವೆ.

ಉತ್ತರ ಭಾರತದ ಡಾ.ಶ್ಯಾಂಸಿಂಗ್ ಶಶಿಯವರು ದಿ ಶೆಪರ್ಡ್ಸ್ ಆಫ್ ಇಂಡಿಯಾ ಕೃತಿಯನ್ನು ರಚಿಸಿದರು. ಈ ಕೃತಿಯನ್ನು ಬಿ.ಕೆ. ರವಿಯವರು ಕನ್ನಡಕ್ಕೆ ಅನುವಾದ ಮಾಡಿದ್ದಾರೆ. ಈ ಕೃತಿ ಭಾರತದಾದ್ಯಂತ ನೆಲೆಸಿರುವ ವಿವಿಧ ಹೆಸರಿನ ಕುರುಬರನ್ನು ವಿಶ್ಲೇಷಿಸುತ್ತವೆ. ಕುರುಬರ ಸಾಮಾಜಿಕ, ಆರ್ಥಿಕ ಶೈಕ್ಷಣಿಕ ವಿವರ ನೀಡುವುದಿಲ್ಲ. ಶಿವಾನಂದ ಗುಬ್ಬಣ್ಣನವರ ಕರ್ನಾಟಕದ ಕುರುಬರು ಕೃತಿಯು ಕೇವಲ ಕುರುಬರ ಪೌರಾಣಿಕ ಹಿನ್ನೆಲೆಯೊಂದಿಗೆ ಧಾರ್ಮಿಕ ಜೀವನವನ್ನು ನಿರೂಪಿಸುತ್ತದೆ.

ಬೋನಾ ಬಸವರಾಜರವರ ಹಾಲುಮತದ ಹುಟ್ಟು ಬ.ಪ.ನಾಯ್ಕರವರ ಹಾಲಮತಸ್ಥರು ಎಂ.ಬಿ.ನೇಗಿನಾಳರ ಮೈಲಾರ ಮತ್ತು ಖಂಡೋಬ ಎಂ. ಕರಿಯಪ್ಪನವರ ಹಾಲತೊರೆ ಎಂ.ಜೈ.ಕುಮಾರ ಅವರ ಪಾವನ ಡಾ. ಎಂ.ಬಿ. ಕೊಬ್ರಿಶೆಟ್ಟಿಯವರ ಮೈಲಾರಲಿಂಗ ಮಲ್ಲೇಪುರಂ ಜಿ.ವೆಂಕಟೇಶ್‌ರವರ ಶಂಬಾ ಕೃತಿ ಸಂಪುಟಗಳು ಕುರುಬರ ಕುರಿತು ಲೇಖನಗಳನ್ನು ಒಳಗೊಂಡಿರುವುದು ಕಂಡುಬರುತ್ತದೆ.

ಕುರುಬರ ಬಗ್ಗೆ ಅಧ್ಯಯನ ಮಾಡಿ ಲೇಖನ ಪುಸ್ತಕ ಬರೆದವರಲ್ಲಿ ಡಾ.ಕೆ.ಎಂ.ಮೇತ್ರಿ ಡಾ.ಎಫ್.ಟಿ.ಹಳ್ಳಿಕೇರಿ ಡಾ. ಪುರುಷೋತ್ತಮ ಬಿಳಿಮಲೆ, ಡಾ.ಮಲ್ಲಿಕಾ ಘಂಟಿ, ಡಾ. ಚಿದಾನಂದಮೂರ್ತಿ, ದೊಡ್ಡಣ್ಣ ಗದ್ದನಕೇರಿ, ಡಾ.ಎಚ್.ಜೆ.ಲಕ್ಕಪ್ಪಗೌಡ, ಡಾ.ರಾಜಪ್ಪ ದಳವಾಯಿ, ಡಾ.ಶಿವಾನಂದ ಗುಬ್ಬಣನವರ, ಡಾ.ಮೀರಾಸಾಬಿಹಳ್ಳಿ ಶಿವಣ್ಣ, ಮೊದಲಾ ದವರಾಗಿದ್ದಾರೆ.

ಪುರಾಣ–ಪುಣ್ಯಕಥೆಗಳು, ವೇದಗಳಷ್ಟೇ ಪ್ರಾಚೀನತೆಯನ್ನು ಹೊಂದಿದ ಬೇಡ ಸಮುದಾಯ ಕುರಿತಂತೆ ನಡೆದಿರುವ ಅಧ್ಯಯನ ಮತ್ತು ಸಂಶೋಧನೆಗಳು ಅತ್ಯಂತ ಕಡಿಮೆಯೆಂದು ಹೇಳಬಹುದು ವಡ್ಡರಾಧನೆಯಲ್ಲಿ ಬೇಡರಿಗೆ ಸಂಬಂಧಿಸಿದ ಹಲವು ಮಾಹಿತಿಗಳಿವೆ. ಅಲ್ಲದೇ ರಾಮಾಯಣ, ಮಹಾಭಾರತದಲ್ಲಿ ಬೇಡರಿಗೆ ಸಂಬಂಧಿಸಿದ ಉಲ್ಲೇಖಗಳು ಸಿಗುತ್ತವೆ. ಸೈಯದ್ ಸಿರಾಜ್ ಉಲ್ ಹಸನ್ ಅವರ 'ದಿಕ್ಯಾಸ್ಟ್ ಅಂಡ್ ಟ್ರೈಬ್ಸ್ ಆಫ್ ಎಚ್.ಇ.ಎಚ್. ದಿ ನಿಜಾಮ್ಸ್ ಡೋಮಿನಿಯನ್ಸ್ (೧೯೨೦) ಎಂಬ ಪುಸ್ತಕದಲ್ಲಿ ಹೈದ್ರಾಬಾದ್ ಕರ್ನಾಟಕದಲ್ಲಿ ಬೇಡರ್ ಬಗೆಗಿನ ರಾಯಕೀಯ ಕುರಿತು ಚಿತ್ರಣವನ್ನು ನೀಡಿದ್ದಾರೆ. ಅದೇ ರೀತಿ ಎಚ್.ವಿ.ನಂಜುಂಡಯ್ಯ ಮತ್ತು ಎಲ್.ಕೆ. ಅಯ್ಯರ್ ಅವರ ೧೯೩೫ರಲ್ಲಿ ನಾಲ್ಕು ಸಂಪುಟಗಳಲ್ಲಿ ಪ್ರಕಟಿಸಿತು. ದ ಮೈಸೂರು ಟ್ರೈಬ್ಸ್ ಆಂಡ್

ಕ್ಯಾಸ್ಟ್ ಎಂಬ ಕೃತಿಗಯಲ್ಲಿ ಬೇಡ ಶಬ್ದದ ವಿವರಣೆಗಳಿವೆ. ಚಿತ್ರದುರ್ಗಾ ಗ್ಯಾಜೆಟಿಯರ್‌ನಲ್ಲಿ ಈ ಸಮುದಾಯ ಕುರಿತು ಸಂಕ್ಷಿಪ್ತವಾದ ಮಾಹಿತಿ ಸಿಗುತ್ತವೆ. ೧೯೭೫ರಲ್ಲಿ ಎಲ್.ಜಿ.ಹಾವನೂರು ಅವರು ಕರ್ನಾಟಕ ಬ್ಯಾಕ್ ವರ್ಡ್ ಕ್ಲಾಸ್ ಕಮಿಷನ್ ರಿಪೋರ್ಟ್‌ನಲ್ಲಿ ಬೇಡ ಸಮುದಾಯಕ್ಕೆ ಸಂಬಂಧಿಸಿದಂತೆ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗಳು ಹಾಗೂ ಇದರ ಸಂಕ್ಷಿಪ್ತ ಮಾಹಿತಿಯನ್ನು ಗಮನಿಸಲಾಗಿದೆ.

ಡಾ.ಕೊಂತಮ್ ಸತೀಶ ಬೇಡ ಗಂಪಣ್ಣ ಸಮುದಾಯದ ಸಾಮಾಜಿಕ ಸ್ಥಿತಿಗತಿಗಳು ಕುರಿತು ತಮ್ಮ ಲೇಖನದಲ್ಲಿ ಅವರ ನೆಲೆಗಳಾದ ಕೆರೆದೊಡ್ಡಿ ಮುನಿಗುಡ್ಡಿದೊಡ್ಡಿ, ವಿ.ಎಸ್.ದೊಡ್ಡಿ ಆಲೇಸಪ್ಪನ ದೊಡ್ಡಿ ಹುಣಸೆ ಮರದ ದೊಡ್ಡಿ ಜಗಲಿಯೂರು ದೊಡ್ಡಿ ವಾಸಸ್ಥಾನವನ್ನು ಗುರುತಿಸಿದ್ದಾರೆ.

ಕೆ.ಎಂ.ಮೇತ್ರಿ ಅವರು ಸಂಪಾದಿಸಿದ ಕುಮಾರರಾಮ ಮತ್ತು ಕೃಷ್ಣಗೊಲ್ಲರ ಮಹಾಕಾವ್ಯ ೧೯೯೭ರಲ್ಲಿ ಕಾಡುಗೊಲ್ಲರ ಸಮುದಾಯದ ಕಲಾವಿದರನ್ನು ಪರಿಚಯಿಸುವುದರ ಜೊತೆಗೆ ಕಾಡುಗೊಲ್ಲರ ಸಮುದಾಯದಲ್ಲಿರುವ ಮೌಖಿಕ ಕಥನಗಳಲ್ಲಿ ಅವರ ಸಾಂಸ್ಕೃತಿಕ ನಾಯಕರ ಮತ್ತು ಆರಾಧ್ಯ ದೈವಗಳ ಮಹಿಮೆಯನ್ನು ಕೊಂಡಾಡಿದ್ದಾರೆ.

ಎ.ಎಸ್.ಪ್ರಭಾಕರ ಸಂಪಾದಿಸಿದ ಆದಿವಾಸಿ ಆಖ್ಯಾನ ಎಂಬ ಗ್ರಂಥದಲ್ಲಿ ಬುಡಕಟ್ಟು ಪ್ರಾರಂಭದಲ್ಲಿ ನೆಲೆಗಳು, ಬೇಟೆ ಪಶುಪಾಲನೆ ಮಾಡುತ್ತಿದ್ದು ನಂತರ ವ್ಯವಸಾಯ ಕೈಗೊಳ್ಳತೊಡಗಿದರು. ತಮ್ಮ ವೃತ್ತಿಗಳಲ್ಲಿ ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಪರಿಹಾರಗಳನ್ನು ಕುರಿತು ವಿವರಿಸಿದ್ದಾರೆ.

ಆರ್.ರಾಜಣ್ಣನವರ ನಾಯಕ ಸಮುದಾಯದ ಇತಿಹಾಸ ಎಂಬ ಪುಸ್ತಕದಲ್ಲಿ ಬೇಡರ ಹಿನ್ನೆಲೆಯನ್ನು ಗುರುತಿಸಿದ್ದಾರೆ.

ಶ್ರೀನಿವಾಸ ನಾಯಕ ಅವರು ಚಿತ್ರದುರ್ಗಾ ಕಾಮಗೇತಿ ಅರಸರು ಎಂಬ ಪುಸ್ತಕದಲ್ಲಿ ಈ ಪರಿಸರದ ಅರಸು ಕುಟುಂಬಕ್ಕೆ ಸಂಬಂಧಿಸಿದಂತೆ ಐತಿಹಾಸಿಕ ಘಟನೆಗಳ ಬಗ್ಗೆ ಮಾಹಿತಿ ನೀಡಿದ್ದಾರೆ.

ಎಚ್.ವಿ.ವೀರನಾಯಕ ಅವರು ೧೯೮೭ರಲ್ಲಿ ಕ್ಷಾತ್ರಾಂಶ ಪ್ರಭೇದ ಎಂಬ ಪುಸ್ತಕದಲ್ಲಿ ಬೇಡ ನಾಯಕ ಸಮುದಾಯಕ್ಕೆ ಸಂಬಂಧಿಸಿದ ಮಾಹಿತಿಯನ್ನು ನೀಡಿದ್ದಾರೆ. ಪ್ರೊ.ಲಕ್ಷ್ಮಣ್ ತೆಲಗಾವಿ (ಸಂ) ಅವರ ಹರತಿ ಸಿರಿ ಎಂಬ ಎಚ್.ವಿ.ವೀರನಾಯಕ ಹರತಿ ನೆನಪಿನ ಸಂಪುಟದ ಒಟ್ಟು ೯೮ ಲೇಖನಗಳಲ್ಲಿ ಕೆಲವೊಂದು ಬೇಡರಿಗೆ ಸಂಬಂಧಿಸಿದ ಉಪಯುಕ್ತವಾದ ಮಾಹಿತಿಯನ್ನು ಒದಗಿಸಿವೆ. ಎಂ.ಜಿ.ಈಶ್ವರಪ್ಪನವರ ಮ್ಯಾಸಬೇಡರು ಎಂಬ ಪುಸ್ತಕದಲ್ಲಿ ಮ್ಯಾಸಬೇಡರ ಪರಿಚಯ ಪ್ರತ್ಯೇಕವಾಗಿ ಇರುವ ಹಟ್ಟಿಗಳ ವಿವರ ವೃತ್ತಿ ಆಹಾರ ಪದ್ಧತಿ, ಕುಟುಂಬ ಪದ್ಧತಿ, ಸಾಮಾಜಿಕ ಸ್ಥಾನಮಾನ ಕುರಿತು ಸಾಕಷ್ಟು ವಿವರಣೆ ನೀಡಿದ್ದಾರೆ.

ಕರಿಶೆಟ್ಟಿ ರುದ್ರಪ್ಪ ಅವರ ಮ್ಯಾಸ ನಾಯಕರು ಒಂದು ಜನಾಂಗಿಕ ಅಧ್ಯಯನ ಎಂಬ ಕೃತಿಯಲ್ಲಿ ಬೇಡರಿಗೆ ಸಂಬಂಧಿಸಿದ ಸಾಮಾಜಿಕ, ಧಾರ್ಮಿಕ ವಿಷಯಗಳ ಕುರಿತು ಮಾಹಿತಿ ಸಿಗುತ್ತದೆ. ೨೦೦೨ರಲ್ಲಿ ಕೆ.ಎಂ. ಮೇತ್ರಿ ಅವರ ಬುಡಕಟ್ಟು ಕುಲಕಸುಬುಗಳು ಎಂಬ ಪುಸ್ತಕದಲ್ಲಿ ಬೇಡ ಸಮುದಾಯಕ್ಕೆ ಸಂಬಂಧಿಸಿದ ಮಾಹಿತಿಯನ್ನು ಗಮನಿಸಲಾಗಿದೆ. ಎಂ.ಎಸ್.ಪುಟ್ಟಣನವರ ಚಿತ್ರದುರ್ಗದ ಪಾಳೆಯಗಾರರು ಮತ್ತು ಕಪಟರಾಳ ಕೃಷ್ಣರಾವ್ ಅವರ ಸುರಪುರ ಸಂಸ್ಥಾನದ ಇತಿಹಾಸ ಫ್ಲೀಟರ್ ಸಂಗ್ರಹಿಸಿದ ಹಲಗಲಿ ಬೇಡರ ಲಾವಣಿಗಳು ಇವುಗಳಲ್ಲಿ ಅಂದಿನ ಸಂದರ್ಭದ ರಾಜಕೀಯ ಇತಿಹಾಸವನ್ನು ಕುರಿತು ವಿವರಣೆ ನೀಡಿವೆ. ಎ.ಆರ್.ನಾಯಕ ಅವರ ಸಗರನಾಡಿನ ಬೇಡರ ಸಂಪ್ರದಾಯಗಳು ಮತ್ತು ನಂಬಿಕೆಗಳು ಎಂಬ ಎಂ.ಫಿಲ್ ಪ್ರಬಂಧವು ಗುಲ್ಬರ್ಗಾ ಪರಿಸರದ ಬೇಡರ ಸಾಮಾಜಿಕ ಜೀವನವನ್ನು ಕುರಿತು ಕೊಟ್ಟಿದ್ದಾರೆ. ಪುರುಷಕಾರಿ ಲೋಕಯ್ಯನ ಸುರಪುರ ರಾಜರ ಚರಿತ್ರೆ ಹಸ್ತಪ್ರತಿ ರಾಜಪುರೋಹಿತ ಜಯತೀರ್ಥರವರ ಸುರಪುರದ ಶೂರ ನಾಯಕರು, ಡಾ.ಮಂಜುನಾಥ ಬೇವಿನಕಟ್ಟಿ, ಡಾ.ತಾರಿಹಳ್ಳಿ ಹನಮಂತಪ್ಪರವರ ವಾಲ್ಮೀಕಿ ಸಂಪದ (೨೦೦೬) ಡಾ.ವಿರೂಪಾಕ್ಷಿ ಪೂಜಾರಿಹಳ್ಳಿಯವರ ಬೇಟೆ ಮತ್ತು ಬೇಡರ ಡಾ.ಮಂಜುನಾಥ ಬೇವಿನಕಟ್ಟಿ ಅವರ ವ್ಯಾದ ಚರಿತೆ ಹಾಗೂ ಆದಿವಾಸಿ (೨೦೦೭) ಮತ್ತು ರಾಮಾಯಣದ ಮರುದರ್ಶನ, ಡಾ.ಅಮರೇಶ ಯತಗಲ್‌ರವರ ವಾಲ್ಮೀಕಿ ಮಂದಾರ (೨೦೦೮) ಮುಂತಾದ ಗ್ರಂಥಗಳಲ್ಲಿ ಬೇಡ ಸಮುದಾಯದ ಇತಿಹಾಸ ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ ಇನ್ನಿತರ ಮಾಹಿತಿಯನ್ನು ಒದಗಿಸಿವೆ. ಅಮರೇಶ ಯತಗಲ್‌ರವರ ನಾಯಕ ಅರಸು ಮನೆತನಗಳು, ಡಾ.ರಂಗರಾಜ ವನದುರ್ಗರವರ ಸುರಪುರ ಸಂಸ್ಥಾನ ಒಂದು ಅಧ್ಯಯನ, ಅಮರೇಶ ಅಲ್ಕೋಡರವರ ದೇವದುರ್ಗ ಚಾರಿತ್ರಿಕ ಅಧ್ಯಯನ, ಅಮರೇಶ ಯತಗಲ್ (ಸಂ) ದೊ ಅಚ್ ಯೋಗೀಶ್ವರಪ್ಪ ಡಿ ಎಸ್ ಮಧ್ಯಕಾಲೀನ ಕರ್ನಾಟಕದ ಪಾಳೆಯಗಾರರು ೨೦೦೯, ಡಿ.ಬಿ. ಡಂಗ್‌ರವರ ಜನಾಂಗ ಪರಿಚಯ (೧೯೮೮) ಒಟ್ಟು ಎಂಟು ಜನಾಂಗಗಳ ಪರಿಚಯವನ್ನು ಮಾಡಿಕೊಡಲಾಗಿದೆ. ಮೊದಲ ಲೇಖನವೇ ನಾಯಕ ಸಮುದಾಯಕ್ಕೆ ಸಂಬಂಧಪಟ್ಟಿದೆ. ನಾಯಕ ಸಮುದಾಯವು ವೇದಗಳ ಕಾಲದಿಂದ ಆಸ್ತಿತ್ವದಲ್ಲಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಡಂಗ್ ಅವರು ಬೇಡ, ನಾಯಕ, ತಳವಾರ, ವಾಲ್ಮೀಕಿ, ವಾಲ್ಮೀಕಿಮಕ್ಕಳು ಕನ್ನಯ್ಯನ ಮಕ್ಕಳು ಇತ್ಯಾದಿ ಹೆಸರುಗಳ ಜನಪದ ಕಥೆಗಳನ್ನು ಕೊಟ್ಟಿದ್ದಾರೆ. ಇಂಥ ಕಾರಣಕ್ಕಾಗಿ ಈ ಹೆಸರು ಬಂದಿತು ಎಂದು ವಿವರಿಸುತ್ತಾರೆ. ಹೆಸರೇ ಹೇಳುವಂತೆ ಇದು ಕೇವಲ ಸಮುದಾಯದ ಪರಿಚಯವನ್ನು ಮಾತ್ರ ಮಾಡಿಕೊಡುತ್ತದೆ. ಚಿತ್ರಲಿಂಗಯ್ಯ ಎಂ.ವಿ. ಅವರ ಲೇಖನಗಳು ನಾಯಕ ಸಮುದಾಯದ ಬೆಡಗಿನ ಅವರ ಸಪ್ತಮಾತೃಕೆ ಮತ್ತು ಪೋತರಾಜನ ಆರಾಧನೆ ಇತ್ಯಾದಿಗಳ ಮೇಲೆ ಬೆಳಕು ಚಲ್ಲುತ್ತವೆ. ವೆಂಕಟಸ್ವಾಮಿ ವರದಿ ಮತ್ತು ಚಿನ್ನಪ್ಪರೆಡ್ಡಿ ಆಯೋಗದ ವರದಿಗಳು ಬೇಡ, ಕುರುಬ ಮತ್ತು ಕಬ್ಬಲಿಗ

ಸಮುದಾಯದಗಳು ಒಟ್ಟು ಜನಸಂಖ್ಯೆ ಬಗ್ಗೆ ಮಾಹಿತಿ ನೀಡುತ್ತವೆ. ಜಾಜಿ ದೇವೇಂದ್ರಪ್ಪ ಅವರ ಆಂಧ್ರ-ಕರ್ನಾಟಕ ಗಡಿ ಪ್ರದೇಶದ ಸ್ಥಳನಾಮಗಳು ಬಗ್ಗೆ ಮಾಹಿತಿ ನೀಡುತ್ತವೆ. ಪ್ರತ್ಯೇಕ ನೆಲೆಗಳ ಬಗ್ಗೆ ವಿವರವನ್ನು ನೀಡಿದ್ದಾರೆ. ಇಷ್ಟೆಲ್ಲ ಅಧ್ಯಯನಗಳು ನಡೆದಿದ್ದರೂ ಅವು ಸಾಹಿತ್ಯ ಜನಪದ ಚರಿತ್ರೆ ನೆಲೆಯಲ್ಲಿ ನಡೆದಿವೆ. ಆದರೂ ಆಳವಾದ ಅಧ್ಯಯನದ ಅವಶ್ಯಕತೆ ಇದೆ. ಮನೆಯಲ್ಲಿರುವ ದನಕರು, ಕುರಿಮರಿ ಇತರ ಸಮಸ್ತ ಸಂಪತ್ತನ್ನು ದೊಡ್ಡಿ ಎಂಬ ಅರ್ಥದಲ್ಲಿ ಬಳಕೆಯಾಗಿವೆ. ದೊಡ್ಡಿಗಳ ಮೂಲಕ ಅವರ ವಾಸದ ನೆಲೆ ಸಮುದಾಯದ ನೆಲೆಯಿಂದ ಇನ್ನೊಂದು ಸಮುದಾಯದ ನೆಲೆಗಳಿಗೆ ಇರುವ ಸಾಮ್ಯತೆ ಮತ್ತು ವ್ಯತ್ಯಾಸಗಳ ಕುರಿತು ತೌಲನಿಕವಾಗಿ ಅಧ್ಯಯನ ಮಾಡಲಾಗಿದೆ.

ಅಧ್ಯಾಯ ಎರಡು

ರಾಯಚೂರು ಜಿಲ್ಲೆಯ ಐತಿಹಾಸಿಕ ಹಿನ್ನೆಲೆ

೨.೧. ರಾಯಚೂರು ಜಿಲ್ಲೆಯ ಚಾರಿತ್ರಿಕ ಹಿನ್ನೆಲೆ

೨.೨. ರಾಯಚೂರು ಜಿಲ್ಲೆಯ ಭೌಗೋಳಿಕ ಹಿನ್ನೆಲೆ

ಅಧ್ಯಾಯ ಎರಡು

ರಾಯಚೂರು ಜಿಲ್ಲೆಯ ಐತಿಹಾಸಿಕ ಹಿನ್ನೆಲೆ

ಕೃಷ್ಣೆ–ತುಂಗೆಯರ ಮಧ್ಯದಲ್ಲಿರುವ ರಾಯಚೂರು ಜಿಲ್ಲೆ, 'ಎಡದೊರೆ ನಾಡು', 'ದೋ–ಆಬ್' ಪ್ರದೇಶವೆಂದು ಹೆಸರಾಗಿದೆ. ಕರ್ನಾಟಕದ ವಿಶಿಷ್ಟ ಜಿಲ್ಲೆಗಳ ಸಾಲಿನಲ್ಲಿ ಪ್ರಮುಖವಾದ ಸ್ಥಾನವನ್ನು ಪಡೆದ ಇದು, ಕರ್ನಾಟಕ ಈಶಾನ್ಯ ಭಾಗದಲ್ಲಿದೆ. ೧೬ಲಿ ೧೨ ಉತ್ತರ ಅಕ್ಷಾಂಶ ಮತ್ತು ೭೭ಲಿ ೨೧ ಪೂರ್ವ ರೇಖಾಂಶವನ್ನು ಹೊಂದಿದೆ. ರಾಜನೂರು, ರಾಯರ ಊರು, ಪೆರ್ಮನ ರಾಚೂರು, ರಾಚವೂರು ಮತ್ತು ರಾಚೂರು ಸೀಮೆ ಎಂಬ ಹೆಸರುಗಳಿಂದ ಕರೆಯಲ್ಪಡುವ ಈ ಜಿಲ್ಲೆ, ಕ್ರಿ.ಪೂ.೩೦೦೦ ವರ್ಷಗಳ ಹಿಂದಿನ ಚರಿತ್ರೆಯನ್ನು ಹೊಂದಿದೆ. ಪ್ರಾಗೈತಿಹಾಸಿಕ ಕಾಲದಿಂದ ಪ್ರಾರಂಭವಾಗುವ ಇಲ್ಲಿಯ ಇತಿಹಾಸ ಮೌರ್ಯರು, ಶಾತವಾಹನರು, ಮಾನ್ಯಖೇಟದ ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ಕಲ್ಯಾಣದ ಕಲಚೂರಿಗಳು, ವಿಜಯನಗರದ ಅರಸರು, ಬಹಮನಿ ಸುಲ್ತಾನರು, ಬಿಜಾಪುರ ಅದಿಲ್‌ಷಾಹಿಗಳು, ಮೊಘಲರು, ಮರಾಠರು, ಹೈದರಾಬಾದ್ ನಿಜಾಮ ಹಾಗೂ ಆಂಗ್ಲರು ಈ ಜಿಲ್ಲೆಯಲ್ಲಿ ಆಡಳಿತ ಮಾಡಿರುವುದು ತಿಳಿದು ಬರುತ್ತದೆ. ಅಲ್ಲದೆ ಕೆಲವು ಸಾಮಂತ ಅರಸರೂ ಆಳ್ವಿಕೆ ಮಾಡಿದ್ದುಂಟು. ಇವರನ್ನು ಸ್ಥಳೀಯ ಪ್ರಭುಗಳೆಂದು ಕರೆಯುತ್ತಾರೆ. ಅವರಲ್ಲಿ ಸಿಂಧನೂರು ತಾಲ್ಲೂಕಿನ ಸಾಲಗುಂದದ ಸಿಂಧರು, ಅಯ್ಯಣವಾಡಿಯ ಹೈಹಯರು, ಲಿಂಗಸೂಗೂರು ತಾಲ್ಲೂಕಿನ ಕರಡಿಕಲ್ಲಿನ ಕದಂಬರು, ಗುಡಗುಂಟಿಯ ನಾಯಕರು, ಗುಂತಗೋಳದ ನಾಯಕರು, ಎಡದೊರೆ ನಾಡಿನ ಹೈಹಯರು, ಮಾನವಿ ತಾಲ್ಲೂಕಿನ ಮೊರಟ (ಮಲ್ಲಟ)ದ ಹೈಹಯರು, ದೇವದುರ್ಗದ ನಾಯಕರು ಮುಂತಾದವರು ಪ್ರಮುಖರಾಗಿದ್ದಾರೆ.

೨.೧ ಚಾರಿತ್ರಿಕ ಹಿನ್ನೆಲೆ

ಜಿಲ್ಲೆಯನ್ನು ಆಳಿದ ಪ್ರಮುಖ ಅರಸುಮನೆತನಗಳು

ಮೌರ್ಯರು

"ಮೌರ್ಯರು ಪಾಟಲೀಪುತ್ರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಡಳಿತ ಮಾಡಿದರೂ, ದಕ್ಷಿಣ ಭಾರತದವರೆಗೂ ಅವರ ಆಳ್ವಿಕೆ ವ್ಯಾಪಿಸಿತ್ತು. ರಾಯಚೂರು ಜಿಲ್ಲೆ ಕ್ರಿ.ಪೂ. ೩೦೦ರಲ್ಲಿ ಅಶೋಕನ ಅದಿನಕ್ಕೆ ಒಳಪಟ್ಟಿತ್ತು ಎಂಬ ಉಲ್ಲೇಖ ಮಸ್ಕಿ ಶಾಸನದಲ್ಲಿ ಲಭ್ಯವಾಗಿದೆ. ಕ್ರಿ.ಶ.೧೯೧೫ರಲ್ಲಿ ಈ ಭಾಗದ ಚಿನ್ನದ ನಿಕ್ಷೇಪದ ಇಂಜಿನಿಯರ್, ಸಿ.ಬಿಡನ್

ಚಿನ್ನದ ಶೋಧನೆಗಾಗಿ ಮಸ್ಕಿಯ ಗುಡ್ಡದಲ್ಲಿ ತಿರುಗಾಡುತ್ತಿದ್ದಾಗ, ಈತನ ಕಣ್ಣಿಗೆ ಈ ಶಾಸನ ಬಿತ್ತು. ಇದು ಬ್ರಾಹ್ಮಿ ಲಿಪಿ ಹಾಗೂ ಪಾಳಿ ಭಾಷೆಯಲ್ಲಿದೆ. ಈ ಶಾಸನ ಪ್ರಮುಖವಾದುದು. ಏಕೆಂದರೆ ಪ್ರಥಮ ಬಾರಿಗೆ ಸಿಕ್ಕ ಶಾಸನಗಳಲ್ಲಿ ಅಶೋಕನ ಹೆಸರು 'ದೇವನಾಂಪ್ರಿಯ', 'ಪ್ರಿಯದರ್ಶಿ ಅಶೋಕ' ಎಂಬ ಮಾಹಿತಿ ನೀಡುತ್ತದೆ. ಈ ಶಾಸನ ದೊರೆಯುವುದಕ್ಕಿಂತ ಮೊದಲು 'ದೇವನಾಂಪ್ರಿಯ', 'ಪ್ರಿಯದರ್ಶಿ' ಅಶೋಕನಿರಬಹುದೆಂದು ಸಂಶೋಧಕರು ಊಹೆ ಮಾಡಿದ್ದರು. ಆದರೆ ಈ ಶಾಸನ ದೊರೆತ ನಂತರದಲ್ಲಿ ಅಶೋಕನಿಗೆ 'ದೇವನಾಂಪ್ರಿಯ', 'ಪ್ರಿಯದರ್ಶಿ' ಎಂದು ಕರೆಯುತ್ತಿದ್ದರೆಂದು ದೃಢಪಟ್ಟಿದೆ. ಇಂತಹ ಇನ್ನೊಂದು ಶಾಸನ ನಂತರದಲ್ಲಿ ಮಧ್ಯಪ್ರದೇಶದ ಗುಜರ್ರಾ ಎಂಬಲ್ಲಿ ದೊರೆತಿದೆ."[೧]

ಮಾನ್ಯಖೇಟದ ರಾಷ್ಟ್ರಕೂಟರು

ದಂತಿದುರ್ಗನು ಕ್ರಿ.ಶ ೭೫೭ರಲ್ಲಿ ಬಾದಮಿ ಚಾಲುಕ್ಯರ ಆಡಳಿತವನ್ನು ತೊರೆದು ಸಾಮ್ರಾಜ್ಯ ಸ್ಥಾಪನೆಯನ್ನು ಮಾಡಿದನು. ಮಾನ್ಯಖೇಡದ ರಾಷ್ಟ್ರಕೂಟರು ಈ ಜಿಲ್ಲೆಯನ್ನು ಆಳಿದ್ದಾರೆ. ಇಮ್ಮಡಿಕೃಷ್ಣನ ಅಧಿಕಾರಾವಧಿಯಲ್ಲಿ ಈತನ ಪುತ್ರ ಜಗತ್ತುಂಗ ಎಡದೊರೆ ೨೦೦೦ ನ್ನು ಆಳುತ್ತಿದ್ದನೆಂದು ಮಾನ್ವಿ ತಾಲೂಕಿನ ಭೋಗಾವತಿಯಲ್ಲಿಯ ಅಕಾಲವರ್ಷ ನೃಪತುಂಗನ ಆಳ್ವಿಕೆಯನ್ನು ತಿಳಿಸುವ ಶಾಸನ ವಿವರವನ್ನು ಒದಗಿಸುತ್ತದೆ. ಅಲ್ಲದೆ ಇದೇ ಮಾನ್ವಿ ತಾಲೂಕಿನ ಬಲ್ಲಟಗಿ, ಲಿಂಗಸೂಗೂರು ತಾಲ್ಲೂಕಿನ ತಲೆಖಾನ್‌ದಲ್ಲಿ ದೊರೆತ ಶಾಸನಗಳು ೩ನೆಯ ಇಂದ್ರ (ಕ್ರಿ.ಶ.೯೧೪-೯೨೬)ನ ಕುರಿತಾಗಿ ಮಾಹಿತಿಯನ್ನು ನೀಡುತ್ತವೆ.

ಕಲ್ಯಾಣ ಚಾಲುಕ್ಯರು

"ಕರ್ನಾಟಕವನ್ನಾಳಿದ ಪ್ರಮುಖ ಅರಸು ಮನೆತನವೆಂದರೆ ಕಲ್ಯಾಣದ ಚಾಲುಕ್ಯರ ಅರಸು ಮನೆತನ ಈ ವಂಶದ ಸಾಮ್ರಾಜ್ಯದ ಸ್ಥಾಪಕನಾದ ಇಮ್ಮಡಿ ತೈಲಪ ಈತನು ಕ್ರಿ ಶ.೯೭೩ರಲ್ಲಿ ರಾಷ್ಟ್ರಕೂಟರ ಆಳ್ವಿಕೆಯನ್ನು ಕೊನೆಗೊಳಿಸಿ ಈ ಸಮ್ರಾಜ್ಯವನ್ನು ಸ್ಥಾಪಿಸುತ್ತಾನೆ. ಕಲ್ಯಾಣ ಚಾಲುಕ್ಯರ ಕಾಲ ರಾಯಚೂರು ಜಿಲ್ಲೆಯ ಚರಿತ್ರೆಯಲ್ಲಿ ಮಹತ್ವದ ಘಟ್ಟವಾಗಿದೆ. ಇವರ ಕಾಲದ ಅತೀ ಹೆಚ್ಚು ಶಾಸನಗಳು ಲಭ್ಯವಿದ್ದು, ಇವರ ಇತಿಹಾಸವನ್ನು ಕಟ್ಟುವಲ್ಲಿ ಸಹಕಾರಿಯಾಗಿವೆ."[೨]

ಇರಿವೆಬೆಡಂಗ ಸತ್ಯಾಶ್ರಯ, ಅರಿಕೇಸರಿ, ಕೇತವಿಕಲ್ಲು ನೆಲೆವೀಡಿನಲ್ಲಿದ್ದಂತೆಯೂ ಅವನ ಕೈಕೆಳಗೆ ಅಜವರ್ಮ ಎಂಬುವವನು ಕೆಳವಾಡಿ ೩೭೦ರ ಬಾಡವನ್ನು ಆಳುತ್ತಿದ್ದನು. ಮೊಸಂಗಿ ಎಂದರೆ ಈಗಿನ 'ಮಸ್ಕಿ'. ೫ನೆಯ ವಿಕ್ರಮಾದಿತ್ಯನ ಕಿರಿಯ ಸಹೋದರ ಜಯಸಿಂಹ ಮೊಸಂಗಿಯಿಂದ ಆಳುತ್ತಿದ್ದನು. ಈಗ ಈತನು ಮಸ್ಕಿಯನ್ನೇ ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದನು. ಅಲ್ಲದೆ ಎಡತೊರೆ-೨೦೦೦ ವೂ ಈತನ ಆಳ್ವಿಕೆಗೆ ಸಂಬಂಧಿಸಿದ್ದುದಾಗಿತ್ತು. ಈತನ ಪುತ್ರ ಒಂದನೆಯ ಸೋಮೇಶ್ವರನ ಕುಂದುರುಗೆ-೭೦ರ ಬಳಿಯ ಮೊದಗನೂರು ನೆಲೆವೀಡಿನಲ್ಲಿದ್ದನೆಂದು ಈತ ಕುಮ್ಮಟದುರ್ಗದ ಮೇಲೆ ದಾಳಿ ಮಾಡಿ ರಾಜೇಂದ್ರಚೋಳನನ್ನು ಸೋಲಿಸುತ್ತಾನೆ. ಆಗ ಈತನ ರಾಣಿ ಕೇತಲದೇವಿ, ಲಿಂಗಸೂಗೂರು ತಾಲೂಕಿನ ಬನ್ನಿಗೋಳವನ್ನು ಕ್ರಿ.ಶ. ೧೦೫೫ರಲ್ಲಿ ಆಳುತ್ತಿದ್ದಳು.

ದೇವಗಿರಿಯ ಸೇವುಣರು

ಕಲ್ಯಾಣ ಕಳಚುರಿಗಳ ನಂತರ ರಾಯಚೂರು ಜಿಲ್ಲೆ ದೇವಗಿರಿ ಯಾದವರ ಆಳ್ವಿಕೆಗೆ ಒಳಪಟ್ಟಿತು. ಕ್ರಿ.ಶ.೧೧೯೧ ರಿಂದ ಸೇವುಣರು ಅರಸ ಸಿಂಹಣನು ದೇವಗಿರಿಯಲ್ಲಿ ಆಳುತ್ತಿದ್ದನು. ಗಬ್ಬೂರಿನ ಬ್ರಾಹ್ಮಣರಿಗೆ ದಾನವನ್ನು ನೀಡುತ್ತಾನೆ. ಈತನ ದಂಡನಾಯಕ ದಾಮೋದರನಾಗಿದ್ದು, ಈ ಭಾಗದ ಉಸ್ತುವಾರಿ ಈತನಿಗೆ ಸಂಬಂಧಿಸಿದ್ದಿತು. ಈ ಅರಸರ ಪ್ರಭಾವ ಕಡಿಮೆ ಇದ್ದುದರಿಂದ ಯಾದವಭಿಲ್ಲಮನ ಸಾಮಂತನಾದ ಕರಡಿಕಲ್ಲಿನ ಕದಂಬ ರಾಜ ಬಿಜ್ಜರಸನು ಮುದಗಲ್ಲನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ಮಾಡಿದನು. ಈತನ ನಂತರ ಮುದಗಲ್ಲು ಸಿಂಘಣ ದೇವನ ಆಳ್ವಿಕೆಗೆ ಒಳಪಟ್ಟಿತ್ತು. ಆಗ ಮಂಡಳೇಶ್ವರನಾಗಿ ಚಾಮುಂಡರಸನು ಆಳ್ವಿಕೆ ನಡೆಸಿದನು. ಈತನನ್ನು 'ಸುವರ್ಣಪುರವರಾಧೀಶ್ವರ' ಎಂದು ಕರೆಯುತ್ತಿದ್ದರೆಂದು ತಿಳಿದುಬರುತ್ತದೆ.

ಕಾಕತೀಯರು

"ದೇವಗಿರಿ ಸೇವಣರ ನಂತರ ರಾಯಚೂರು ಜಿಲ್ಲೆ ವಾರಂಗಲ್ ಕಾಕತೀಯರ ಆಳ್ವಿಕೆ ಒಳಪಟ್ಟಿತು. ರಾಯಚೂರಿನಲ್ಲಿ ಕಾಕತೀಯರ ಶಾಸನದ ಪ್ರಕಾರ ರಾಯಚೂರನ್ನು ಕ್ರಿ.ಶ.೧೨೯೪ರ ಸುಮಾರಿನಲ್ಲಿ ರುದ್ರದೇವನೆಂಬುವವನು ಆಳುತ್ತಿದ್ದನು."[೩] ಈತನ ಮಾಂಡಳೀಕ ಗೋನಗಂನಯರೆಡಡಿಯು ವಧುಮಾನಪುರದಿಂದ ಆಳುತ್ತಿದ್ದನು. ಆಗ ಈತನ ರಾಜ್ಯದ ರಕ್ಷಕನಾದ ವಿಶಾಲನಾಥ ಭೂಪಾಲ ರಾಚೂರಿ ಪಟ್ಟಣದಿಂದ ರಾಜ್ಯಭಾರ ಮಾಡುತ್ತಿದ್ದನು. ಈತನು 'ಸರ್ವರಾಷ್ಟ್ರ ಪ್ರಜಾರಕ್ಷಕ'ನೆಂದು ಕರೆಯಿಸಿಕೊಂಡಿರುವನಲ್ಲದೆ ರಾಯಚೂರು ಕೋಟೆಯನ್ನು ನಿರ್ಮಿಸಲು ಪ್ರಾರಂಭಿಸಿದನು.

ಕಲ್ಯಾಣಿ ಕಳಚೂರರು

"ಕಲ್ಯಾಣಿ ಕಳಚೂರರು ಮುಖ್ಯ ಸಾಮಂತ ಅರಸರಲ್ಲಿ ಒಬ್ಬರಾದ ಕಳಚುರಿಗಳು ಸ್ವಾತಂತ್ರವಾಗಿ ರಾಜಭಾರ ಮಾಡಿದ್ದು ಕಡಿಮೆ ಕಾಲವೆಂದು ಹೇಳಬಹುದು. ಚಾಲುಕ್ಯರ ಸಾಮಂತರಾದ ಕಲ್ಯಾಣಿ ಕಳಚೂರರು ರಾಯಚೂರು ಜಿಲ್ಲೆಯ ಲಿಂಗಸೂಗೂರು ತಾಲೂಕಿನ ತಲೇಖಾನ ಗ್ರಾಮದಿಂದ ಕ್ರಿ.ಶ.೧೧೭೫ರಲ್ಲಿ ಚಂದ್ರನೆಂಭ ಆಡಳಿತಗಾರನು ಆಳ್ವಿಕೆ ಮಾಡಿದ ಉಲ್ಲೇಖವಿರುವ ಶಾಸನಗಳಿವೆ.

ವಿಜಯನಗರದ ಅರಸರು

ರಾಯಚೂರು ಜಿಲ್ಲೆಯ ಇತಿಹಾಸದಲ್ಲಿ ವಿಜಯನಗರದರಸರ ಆಳ್ವಿಕೆಯು ಪ್ರಮುಖವಾದ ಘಟ್ಟ. ಒಂದೆಡೆ ವಿಜಯನಗರ, ಇನ್ನೊಂದೆಡೆ ಬಹುಮನಿ ಮನೆತನಗಳು ಇಲ್ಲಿಯ ಫಲವತ್ತಾದ ಪ್ರದೇಶಕ್ಕಾಗಿ ಹಲವಾರು ಯುದ್ಧಗಳನ್ನು ಮಾಡಿದವು. ಸುಮಾರು ೧೩ ಯುದ್ಧಗಳಿಂದ ಕೂಡಿರುವ ಈ ನೆಲೆ ಒಂದು ರಣರಂಗವಾಗಿಯೇ ಮಾರ್ಪಟ್ಟಿತ್ತು. ಈ ಜಿಲ್ಲೆಯ ಮುದಗಲ್ಲು ೨ನೇ ದೇವರಾಯನ ಅಧೀನದಲ್ಲಿತ್ತು. ಆ ಸಂದರ್ಭದಲ್ಲಿ ವರದಣ್ಣನಾಯಕನು ಮುದಗಲ್ಲನ್ನು ಆಳುತ್ತಿದ್ದನು. ಆಗ ರಾವುತ ಈರಣ್ಣನೆಂಬುವನು

ಮುದಗಲ್ಲು ಬೆಟ್ಟದ ಕೋಟೆಯಲ್ಲಿಯ ಬಂಗಾರದ ಕಳಸವನ್ನು ತೆಗೆದುಕೊಂಡು ಬಂದಾಗ ಹರ್ಷಿತನಾದ ೨ನೆಯ ದೇವರಾಯನು ಈರಣ್ಣನಿಗೆ ಭೂದಾನ ನೀಡುತ್ತಾನೆ.

ನಂತರ ಕೃಷ್ಣದೇವರಾಯನ ಕಾಲಕ್ಕೆ ಆತನ ಘನತೆಯನ್ನು ಹೆಚ್ಚಿಸಿದುದೇ ರಾಯಚೂರು ಅಂದು ಪ್ರಬಲವೆನಿಸಿದ್ದ ಇಸ್ಮಾಯಿಲ್ ಅದಿಲ್‌ಶಾಹನನ್ನು ಕ್ರಿ.ಶ.೧೫೨೦ರಲ್ಲಿ ಸೋಲಿಸಿ, ರಾಯಚೂರು ಕೋಟೆಯನ್ನು ವಶಪಡಿಸಿಕೊಂಡನು. ಅದೇ ಸಂದರ್ಭದಲ್ಲಿ ಮಾನುವೆ, ಹಾನಗಲ್ಲು, ಅಲಂಪೂರು, ರಾಚೂರು, ಮಾಗಡೆದುರ್ಗಗಳನ್ನು ಗೆದ್ದನು. ಭೀಮಾ ಮತ್ತು ಕೃಷ್ಣಾ ನದಿಗಳ ಸಂಗಮ ಸ್ಥಳದಲ್ಲಿ 'ರತ್ನಧೇನು' ಮಹಾದಾನವನ್ನು ಮಾಡಿ, ತನ್ನ ಹೆಂಡತಿ ಚಿನ್ನಾದೇವಿಯಿಂದ ಕನಕದಾನವನ್ನು ಕೊಡಿಸಿದನು. ಅದೇ ಸಂದರ್ಭದಲ್ಲಿ ಸಿಂಧನೂರು ತಾಲ್ಲೂಕಿನ ರವುಡಕುಂದಿಯ ಸೇನಭೋವ ಸೋಮರಸ ಹಾಗೂ ಆತನ ಪುತ್ರರಾದ ಸಿಂಗರಸ, ಸೋಮರಸ ಮತ್ತು ನಾಗರಸರುಗಳು ಮಾತಾಪಿತೃಗಳಿಗೆ ಪುಣ್ಯವಾಗಲೆಂದು ವಿರೂಪಾಕ್ಷ ವಿಠಲ ದೇವರನ್ನು ಬೇಡಿಕೊಂಡು ಅರವಟ್ಟಿಗೆಯನ್ನು ನಿರ್ಮಿಸಿದರು.

ನಂತರ ಕ್ರಿ.ಶ.೧೫೩೦ರಲ್ಲಿ ಅಚ್ಯುತದೇವರಾಯನ ಕಾಲದಲ್ಲಿ ಮಸ್ಕಿ ಸೀತೆಯನ್ನು ಇಮ್ಮಡಿ ಮೇದಿನಿರಾಯನಿಗೆ ನೀಡಲಾಗಿತ್ತು. ಈತನು ಇಲ್ಲಿಯ ನಾಯಿಂದರಿಗೆ ಕೆಲವು ವಿನಾಯಿತಿಗಳನ್ನು ನೀಡಿದ್ದನು. ಅಲ್ಲದೆ ಮಸ್ಕಿಯ ಮಲ್ಲಿಕಾರ್ಜುನ ದೇವಾಲಯಕ್ಕೆ ದಾನ ಮಾಡಿದ್ದಾನೆ. ಈತನ ಅವಧಿಯಲ್ಲಿ ಮುದಗಲ್ಲನ್ನು 'ಮುದಗಲ್ಲು ನಾಡು' ಎಂದು ಕರೆಯಲಾಗುತ್ತಿತ್ತು. ನಂತರ ಕ್ರಿ.ಶ.೧೫೪೩ರಲ್ಲಿ ಸದಾಶಿವರಾಯನು ನಾಯಿಂದರಿಗೆ ದಾನ ಮಾಡಿದ್ದಾನೆ."[೪]

ಬಹುಮನಿ ಅರಸರು

ಬಹಮನಿ ರಾಜ್ಯವು ಕ್ರಿ.ಶ.೧೩೪೭ರಲ್ಲಿ ಹಸನ್‌ಗಂಗು ಎಂಬುವವನಿಂದ ಸ್ಥಾಪಿಸಲ್ಪಟ್ಟಿತು. ಆದರೆ ರಾಯಚೂರು ಜಿಲ್ಲೆಯಲ್ಲಿ ಕ್ರಿ.ಶ.೧೪೦೬ರಲ್ಲಿ ಇವರ ಆಳ್ವಿಕೆಯು ಅಬ್ದುಲ್‌ಫತ್ ಫಿರೋಜ್‌ಷಹ ಬಹ್ಮನಿಯು ಮಾನ್ವಿಯನ್ನು ಜಯಿಸುವುದರೊಂದಿಗೆ ಆರಂಭವಾಗುತ್ತದೆ. ಇಲ್ಲಿಯ ದೇವಾಲಯವನ್ನು ಮಸೀದಿಯನ್ನಾಗಿ ಪರಿವರ್ತಿಸುತ್ತಾನೆ. ನಂತರ ಮಹಮದ್‌ಷಾನು ಈ ಪ್ರದೇಶವನ್ನು ಆಳಿದನು. ಈತನ ಅವಧಿಯಲ್ಲಿ ರಾಯಚೂರಿನಲ್ಲಿ ಖಾನ್-ಇ-ಆಜಮ್ ಎಂಬುವನು ಕ್ರಿ.ಶ. ೧೪೯೮ರಲ್ಲಿ ರಾಯಚೂರಿನ ಮಸೀದಿಯ ನಿರ್ವಹಣೆಯ ಗಬ್ಬೂರಿನಲ್ಲಿ ೮ ಚದುರಗಳಷ್ಟು ಭೂಮಿಯನ್ನು ದಾನವಾಗಿ ನೀಡಿದನು ಎಂದು ತಿಳಿದುಬರುತ್ತದೆ.

ಕ್ರಿ.ಶ.೧೫೦೩ರಲ್ಲಿ ಲಿಂಗಸೂಗೂರು ಮುದಗಲ್ಲು ಪ್ರದೇಶಗಳು ವಿಜಯನಗರದ ಆಳ್ವಿಕೆಗೆ ಒಳಪಟ್ಟಿದ್ದವು. ನಂತರದಲ್ಲಿ ಕ್ರಿ.ಶ.೧೫೧೩ರಲ್ಲಿ ಬಹುಮನಿ ಅರಸರ ವಶಕ್ಕೆ ಬರುತ್ತವೆ. ಆಗ ಮುದಗಲ್ಲನ್ನು 'ಮುದಗಲ್ಲುಸೀಮೆ' ಎಂದು ಕರೆಯುತ್ತಿದ್ದರು. ಕ್ರಿ.ಶ.

೧೫೧೫ರಲ್ಲಿ ರಾಯಚೂರನ್ನು ಇಸ್ಮಾಯಿಲ್ ಆದಿಲ್‌ಖಾನನು ವಶಪಡಿಸಿಕೊಂಡನು. ನಂತರ ೧೫೪೯-೫೭ರಲ್ಲಿ ಇಬ್ರಾಹಿಂಆದಿಲ್‌ಷಾ ಆಳುತ್ತಿದ್ದನು. ಈತನನ್ನು ಶಾಸನಗಳು ಭೂಲೋಕ ಚಕ್ರವರ್ತಿ, ಪರದಳ ವಿಭಾಡ, ಅರಿರಾಯ ಭಯಂಕರ, ಕದನ ವಿಜಯ ಎಂದು ಕರೆದಿವೆ.

ಮುದಗಲ್ಲು ಕೋಟೆಯ ಕೆಲವು ಭಾಗಗಳನ್ನು ಆ ಸಂದರ್ಭದಲ್ಲಿ ಮಲಿಕ ಮುರಾದ ಎಂಬ ಈ ಪ್ರದೇಶದ ಅಧಿಕಾರಿಯು ಕಟ್ಟಿಸಿರುವ ಕುರಿತು ಅಲ್ಲಿರುವ ಶಾಸನಗಳು ಬೆಳಕನ್ನು ಚೆಲ್ಲುತ್ತವೆ. ಅಲ್ಲದೆ ಈತನ ಸಾಧನೆಯನ್ನು ಅರಹುತ್ತವೆ. ರಾಯಚೂರು ಕೋಟೆಯ ಅನೇಕ ಭಾಗಗಳು ೨ನೆಯ ಇಬ್ರಾಹಿಂ ಆದಿಲ್‌ಷಾನ ಕಾಲದಲ್ಲಿ ಕಟ್ಟಲ್ಪಟ್ಟಿವೆ. ಕ್ರಿ.ಶ.೧೬೨೮ರಲ್ಲಿ ಮುಹಮದ್ ಇಬ್ರಾಹಿಂನ ಆಳ್ವಿಕೆ ಪ್ರಾರಂಭವಾಗುತ್ತದೆ. ನಂತರ ಮಹಮದ್‌ನ ಮೊಮ್ಮಗ ಔರಂಗಜೇಬನು ಅರಸನಾಗುತ್ತಾನೆ. ಕ್ರಿ.ಶ.೧೬೮೬ರಲ್ಲಿ ಮೊಘಲ್‌ರ ಔರಂಗಜೇಬನು ಬಿಜಾಪುರವನ್ನು ತನ್ನ ವಶಕ್ಕೆ ಪಡೆದುಕೊಂಡು ಆಳ್ವಿಕೆ ನಡೆಸಿದನು.

ಸಾಮಂತ ಅರಸರು

ರಾಯಚೂರು ಜಿಲ್ಲೆಯಲ್ಲಿ ಅನೇಕ ಸಾಮಂತ ಅರಸರು ಆಳ್ವಿಕೆಯನ್ನು ಮಾಡಿದ್ದಾರೆ. ಇಲ್ಲಿಯ ವಿವಿಧ ಪ್ರಾಂತಗಳಿಗೆ ಒಡೆಯರಾಗಿದ್ದವರು ಆಳ್ವಿಕೆಯ ದೃಷ್ಟಿಯಿಂದ ಸ್ವತಂತ್ರವಾದರೂ, ತಮ್ಮ ಮೇಲಿನ ಒಡೆಯರಿಗೆ ನಿಷ್ಠರಾಗಿದ್ದುಕೊಂಡು ಅವರಿಗೆ ಕಪ್ಪಕಾಣಿಕೆಯನ್ನು ಸಲ್ಲಿಸುತ್ತಿದ್ದರು. ಹೀಗಾಗಿ ಇವರ ನಿಷ್ಠೆಗಳನ್ನು ಗಮನಿಸುತ್ತಿದ್ದ ಅರಸರು ಸಾಮಂತರಿಗೆ ಮಹಾಸಾಮಂತ, ಮಹಾಮಂಡಳೇಶ್ವರರೆಂದು ಬಡ್ತಿಯನ್ನು ನೀಡುತ್ತಿದ್ದರು. ಈ ಸಾಮಂತ ಅರಸರಲ್ಲಿ ಪ್ರಮುಖರಾದವರು ಈ ಕೆಳಗಿನಂತಿದ್ದಾರೆ.

ಕರಡಿಕಲ್ಲು ಕದಂಬರು

“ಕರಡಕಲ್ಲಿನ ಕದಂಬರು ಲಿಂಗಸೂಗೂರು ತಾಲ್ಲೂಕಿನ ಕರಡಿಕಲ್ಲನ್ನು ಕೇಂದ್ರವನ್ನಾಗಿ ಮಾಡಿಕೊಂಡು ಆಳ್ವಿಕೆ ಮಾಡಿದ್ದಾರೆ. ಇವರದು ಕದಂಬ ಅರಸರ ಒಂದು ಶಾಖೆಯಾಗಿದ್ದಿತು. ಇವರನ್ನು ಬನವಾಸಿ ಪುರವೇಶ್ವರ, ಕದಂಬರಾಮ, ನನ್ನಿಕದಂಬರೆಂದು ಕರೆಯಲಾಗುತ್ತಿತ್ತು. ಇವರ ಅರಸ ನಾಗವರ್ಮನು ತ್ರೈಲೋಕ್ಯಮಲ್ಲನ ಸಾಮಂತನಾಗಿ ಕರಡಿಕಲ್ಲು-೩೦೦ ನ್ನು ಆಳ್ವಿಕೆ ಮಾಡುತ್ತಿದ್ದನು. ನಂತರ ಕ್ರಿ.ಶ.೧೧೦೦ರಲ್ಲಿ ವಿಕ್ರಮಾದಿತ್ಯನ ಸಾಮಂತನಾಗಿ ಕಂದಬ ಬಾಚರಸನು ಆಳ್ವಿಕೆಯನ್ನು ಮಾಡಿದನು. ಕೆಳವಾಡಿ-೩೦೦ ಈತನಿಗೆ ಸೇರಿತ್ತು. ನಂತರದಲ್ಲಿ ಈ ಮನೆತನದ ಮಾಧವತ್ತಿಯರಸ, ಬಿಜ್ಜರಸ, ಕಾಚರಸ, ಬಾಚರಸ, ಕಾಚೋರ್ವಿಪ, ಬಿಜ್ಜರಸರು ಕ್ರಮವಾಗಿ ಆಳ್ವಿಕೆಯನ್ನು ಮಾಡುತ್ತಾರೆ. ಇವರ ಅಧೀನದಲ್ಲಿ ಲಿಂಗಸೂಗೂರು ತಾಲ್ಲೂಕಿನ ಪಿರಿಯಹೆಸರೂರು, ನವಿಲೆ, ಜಲದುರ್ಗ, ಲಿಂಗ, ಕರಡಿಕಲ್ಲು ಗ್ರಾಮಗಳು ಪ್ರಮುಖ ಆಡಳಿತದ ಶಾಖೆಗಳಾಗಿದ್ದವು.

ಹೈಹಯರು

ಹೈಹಯರು ಮಾಂಡಳೀಕ ಅರಸರಾಗಿ ಎಡದೊರೆಯ ನಾಡಿನಲ್ಲಿ ಆಳ್ವಿಕೆ ಮಾಡಿದ್ದಾರೆ. ಹೈಹಯರ ವಂಶದಲ್ಲಿ ಲೋಕರಸನು ಆರಂಭದ ಅರಸನಾಗಿದ್ದನು. ನಂತರ ತ್ರೈಲೋಕ್ಯನ ಆಳ್ವಿಕೆಯಲ್ಲಿ ನಂಗ್ಯಪರಸನು ಆಳಿದನು. ನಂತರದಲ್ಲಿ ಅನುಕ್ರಮವಾಗಿ ಲೋಕರಸ, ದೇವರಸರು

ಎಡದೊರೆ-೨೦೦೦ನ್ನು ಆಳಿದ್ದಾರೆ. ದೇವರಸನಿಗೆ ಮಾವಡಿಗಂಡ, ಕಾರ್ತಿವೀರ್ಯ, ಕುಲತಿಳಕ, ಮಂಡಳೀಕ ಭೀಮ, ರಾಯಕಂಟಕ, ಮುನ್ನಿರವ ಎಂದು ವಿವಿಧ ಹೆಸರುಗಳಿದ್ದವು. ಕ್ರಿ.ಶ.೧೦೬೯ರಲ್ಲಿ ಭುವನೈಕಮಲ್ಲನ ಕಾಲದಲ್ಲಿ ಮಳೆಯರಸ, ಕ್ರಿ.ಶ.೧೦೭೮ರಲ್ಲಿ ಘಟ್ಟದೇವ, ಕ್ರಿ.ಶ.೧೦೯೬ರಲ್ಲಿ ಚಂದರಸ, ಕ್ರಿ.ಶ.೧೧೩೪ರಲ್ಲಿ ಭೋಲೋಕಮಲ್ಲನ ಸಾಮಂತನಾಗಿ ಬೂಚಿದೇವ, ಕ್ರಿ.ಶ.೧೧೪೮ರಲ್ಲಿ ಘಟ್ಟಿಯರಸ, ಕ್ರಿ.ಶ.೧೧೭೮ರಲ್ಲಿ ಹಿರಿಯ ಮಲ್ಲರಸ, ಕ್ರಿ.ಶ.೧೧೯೧ರ೮ರಲ್ಲಿ ಹೊಲ್ಲರಸ, ಕ್ರಿ.ಶ.೧೧೯೬ರಲ್ಲಿ ಹಲ್ಲೆಗದೇವ, ಕ್ರಿ.ಶ.೧೨೧೮ರಲ್ಲಿ ಮಲ್ಲರಸ, ಬಯಿರುಗಿದೇವ, ಇಮ್ಮಡಿ ಮಲ್ಲಿದೇವರು ಆಳ್ವಿಕೆಯನ್ನು ಮಾಡಿದ್ದಾರೆ. ಇಮ್ಮಡಿ ಮಲ್ಲಿದೇವ ಮೊರಟದ ಮಲ್ಲಿಕಾರ್ಜುನ ದೇವರ ಭಕ್ತನಾಗಿದ್ದನು.

ಸಿಂಧರು

'ಸಿಂಧರು' ಮನೆತನ ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನ ಸಾಲಗುಂದಿಯಲ್ಲಿ ಆಳ್ವಿಕೆ ಮಾಡಿದೆ. ಕ್ರಮವಾಗಿ ಕ್ರಿ.ಶ.೧೦೨೪ರಲ್ಲಿ ಒಂದನೆಯ ಕಣ್ಣರಸ, ಕ್ರಿ.ಶ.೧೦೪೫ ರಿಂದ ೧೦೫೨ರವರೆಗೆ ಗೋನರಸ, ಕ್ರಿ.ಶ.೧೦೫೨-೧೦೮೮ರವರೆಗೆ ನೆಲಕುತ್ತಿಗ ಕಣ್ಣರಸ, ಕ್ರಿ.ಶ.೧೦೮೯-೧೧೧೦ರವರೆಗೆ ಬಾಚಭೂಪ, ಕ್ರಿ.ಶ.೧೧೧೦-೧೧೩೦ರವರೆಗೆ ಕಣ್ಣರಸ, ಕ್ರಿ.ಶ.೧೧೩೦-೧೧೫೪ರವರೆಗೆ ಬಾಚಿದೇವ ಆಳ್ವಿಕೆಯನ್ನು ಮಾಡಿದ್ದಾರೆ. ಇವರಲ್ಲ ಬಾಚಭೂಪ ಸಿಂಧನೂರು ತಾಲ್ಲೂಕಿನ ಮುಕ್ಕುಂದಿಯಲ್ಲಿ ವಿಷ್ಣು ದೇವಾಲಯವನ್ನು ಕಟ್ಟಿಸಿದ್ದಾನೆಂದು ತಿಳಿದುಬರುತ್ತದೆ.

ದೇವಗಿರಿಯ ಯಾದವರು

ದೇವಗಿರಿಯ ಯಾದವರು ೧೩ನೇ ಶತಮಾನದಲ್ಲಿ ರಾಯಚೂರು ಜಿಲ್ಲೆಯ ಕೆಲವೆಡೆ ಆಳ್ವಿಕೆ ಮಾಡಿದ್ದಾರೆ. ಕ್ರಿ.ಶ.೧೨೧೬ರಲ್ಲಿ ಸಿಂಘಣನ ಗೊಬ್ಬೂರು ಶಾಸನದಲ್ಲಿ ಇಂಗಳಹಳ್ಳಿಯೊಳಗಿನ ೪ ಮತ್ತು ಭೂಮಿಯನ್ನು ಮುಮ್ಮರಿದಂಡರು ಹಿರಿಯ ಗೊಬ್ಬೂರಿಗೆ ಬಿಟ್ಟರು ಹಾಗೂ ಮೊಸಳಿಕಲ್ಲಿನ ೩೦೦ ಮಹಾಜನರು ಅದನ್ನು ಸ್ವೀಕರಿಸಿದರೆಂಬ ವಿವರವಿದೆ."[೫]

ನಾಯಕ ಅರಸರು

ರಾಯಚೂರು ಜಿಲ್ಲೆಯಲ್ಲಿ ನಾಯಕ ಅರಸರೂ ತಮ್ಮ ಆಳ್ವಿಕೆಯನ್ನು ಮಾಡಿದುದರ ಕುರಿತಾಗಿ ಸಾಕಷ್ಟು ಆಧಾರಗಳು ಲಭ್ಯವಿವೆ. ಇವರಲ್ಲಿ ಗುಡಗುಂಟಿ, ಗುಂತಗೋಳ ಹಾಗೂ ದೇವದುರ್ಗದ ನಾಯಕ ಅರಸು ಮನೆತನಗಳು ಪ್ರಮುಖವಾಗಿವೆ.

ಗುಡಗುಂಟಿ ನಾಯಕ ಅರಸರು

"ರಾಯಚೂರು ಜಿಲ್ಲೆಯ ಲಿಂಗಸೂಗೂರು ತಾಲೂಕಿನಿಂದ ೧೯ ಕಿ.ಮೀ. ದೂರದಲ್ಲಿರುವ ಗುಡಗುಂಟಿಯು ನಾಯಕ ಅರಸು ಮನೆತನವಾಗಿತ್ತು. ಸುರಪುರ ಹಾಗೂ ಗುಡಗುಂಟಿ ಅರಸರು ಒಂದೇ ವಂಶಕ್ಕೆ ಸೇರಿದವರು. ಇವರು ಗೋಸಲ ವಂಶದವರು. ಪ್ರಾಚೀನ ಕೈಫಿಯತ್ತುಗಳ ಪ್ರಕಾರ ಇವರ ಪೂರ್ವಜರು ದಕ್ಷಿಣದಿಂದ ಬಂದವರೆಂದು ಇವರ ಮೂಲಪುರುಷ ನರಸಿಂಹನಾಯಕನೆಂದು ಇತಿಹಾಸದಿಂದ ತಿಳಿಯುತ್ತದೆ."[೬] ಇವರ ವಂಶಾವಳಿ ಇಂತಿದೆ.

"ನರಸಿಂಹ ನಾಯಕ

|

ವೀರಬೊಮ್ಮನಾಯಕ

|

ಸಿಂಗಪ್ಪನಾಯಕ

|

ಒಡೇರನಾಯಕ

|

ಕಲ್ಲಪ್ಪನಾಯಕ

|

ಚಿನ್ನಹಣಮನಾಯಕ

|

ಹಾವಿನಾಯಕ

|

ಪೆದ್ದಸೋಮನಾಯಕ

|

ಎಗ್ರಸಿಂಗನಾಯಕ

|

ಮದಕರಿನಾಯಕ

|

ವೀರಝುಂಪನಾಯಕ

|

ಬಲಿಸೋಮನಾಯಕ

|

ಹಿರೇಪಾಮನಾಯಕ

|

ಜಕ್ಕಪ್ಪದೇಸಾಯಿ"[೭]

ಜಕ್ಕಪ್ಪ ದೇಸಾಯಿಗೆ ಇಬ್ಬರು ಮಕ್ಕಳು. ಗಡ್ಡಿಲಿಂಗನಾಯಕ ಮತ್ತು ಗಡ್ಡಿಪಿಡ್ಡನಾಯಕ. ಜಕ್ಕಪ್ಪ ದೇಸಾಯಿ ಕಛೇರಿಯಲ್ಲಿರುತ್ತಿದ್ದ. ಈತನ ಮಕ್ಕಳು ಕಕ್ಕೇರಿಯ ಹತ್ತಿರ ಕೃಷ್ಣಾ

ನದಿಯನ್ನು ಹರಿಗಡಿದು ಮಾಡಿದ ಸಣ್ಣ ನಡುಗಡ್ಡೆಗಳಲ್ಲಿರುತ್ತಿದ್ದರು. ಅಲ್ಲಿ ಆರು ನಡುಗಡ್ಡೆಗಳಿದ್ದವು. ಅವುಗಳ ಭೂವಿಸ್ತಾರ ಎರಡುಮೂರು ಮೈಲುಗಳಷ್ಟಿದ್ದಿತು. ಅವು ನೀರದೇವರಗಡ್ಡಿ, ದೇವರಗಡ್ಡಿ, ಜಂಗಿನಗಡ್ಡಿ, ಮೇಲಿನಗಡ್ಡಿ, ನೀಲಕಂಠರಾಯನಗಡ್ಡಿ, ಬೆಣಚಿನಗಡ್ಡಿಗಳಾಗಿದ್ದವು. ಈ ಗಡ್ಡಿಯಲ್ಲಿ ಇವರು ವಾಸಮಾಡುತ್ತಿರುವುದರಿಂದ ಇವರಿಗೆ ಗಡ್ಡಿ ಎಂಬ ಹೆಸರು ಬಂದಿತೆಂದು ಹೇಳುತ್ತಾರೆ.

"ಜಕ್ಕಪ್ಪ ದೇಸಾಯಿಯ ಹಿರಿಯ ಮಗನಾದ **ಗಡ್ಡಿಲಿಂಗನಾಯಕನೇ** ಗುಡಗುಂಟಿ ಸಂಸ್ಥಾನದ ಸ್ಥಾಪಕ. ಈ ಮೊದಲು ಕಕ್ಕೇರಿ ಭಾಗವು ವಿಜಾಪುರ ಆದಿಲ್‌ಷಾಹಿಗಳ ಸಾಮ್ರಾಜ್ಯದ ವ್ಯಾಪ್ತಿಗೆ ಒಳಪಟ್ಟಿದ್ದರಿಂದ ಲಿಂಗನಾಯಕ ಗುಡಗುಂಟಿ ಪರಗಣೆಯ ಸರದೇಸಾಯಿಯಾಗಿ ಬಡ್ತಿ ಹೊಂದಿ ಅಲ್ಲಿ ಆಳ್ವಿಕೆ ಪ್ರಾರಂಭಿಸಿದ. ಈತನ ಆಡಳಿತದಲ್ಲಿ ೪೪ ಹಳ್ಳಿಗಳು ಸೇರಿದ್ದವು. ಈತ ತನ್ನ ರಾಜ್ಯವನ್ನು ವಿಸ್ತರಿಸುವುದಕ್ಕಾಗಿ ಬಿಜಾಪುರದ ಆದಿಲ್‌ಷಾಹಿಗಳೊಂದಿಗೆ ಚರ್ಚಿಸಲು ಹೋದಾಗ ಷೇಖಮಿನ ಹಾಜ ಸರದಾರನಿಂದ ಕೊಲ್ಲಲ್ಪಟ್ಟನು. ಈತನಿಗೆ ಏಳು ಜನ ಮಕ್ಕಳಿದ್ದರು. ಆಗ ಸುರಪುರದ ಗಡ್ಡಿ ಪಿಡ್ಡನಾಯಕನಿಗೆ ಮಕ್ಕಳಾಗದ ಕಾರಣ ಗುಡಗುಂಟಿಯು ತನ್ನ ಅಣ್ಣ ಲಿಂಗಾಯನಾಯಕನ ಮಗನಾದ ಪಾಮನಾಯಕನನ್ನು ದತ್ತು ತೆಗೆದುಕೊಂಡನು. ಈತನೇ ಸುರಪುರದ ಹಸರಂಗಿ ಪಾಮನಾಯಕ. ಗಡ್ಡಿ ಲಿಂಗನಾಯಕ ಮರಣವನ್ನಪ್ಪಿದ ತರುವಾಯ ಆತನ ಮಗ ಜಡಿ ಸೋಮಪ್ಪನಾಯಕ ಬಿಜಾಪುರದ ಸುಲ್ತಾನರಲ್ಲಿ ತನ್ನ ಶೌರ್ಯ, ಸಾಹಸಗಳನ್ನು ತೋರಿಸಿದ್ದಕ್ಕಾಗಿ 'ಸರ್ಜಾಬಹದ್ದೂರ' ಎಂಬ ಬಿರುದನ್ನು ಪಡೆದಿದ್ದಾನೆ. ಜೊತೆಗೆ ಕ್ರಿ.ಶ.೧೬೬೯ರಲ್ಲಿ ಇಮ್ಮಡಿ ಅಲಿ ಆದಿಲ್‌ಶಾಹನಿಂದ (ಷಹೂರಸನ್ ಬನಯೀನವ ಅಲಫ ೧೦೭೦) ಒಂದು ಫಾರಸಿ ಸನ್ನದ್ದು ದೊರಕಿದೆ. ಈ ಸನದಿನಲ್ಲಿ ಸಮತ ಬೈಚಬಾಳು ಮತ್ತು ಕಕ್ಕೇರಿಯ ಗುಡಗುಂಟಿಯ ಕೆಲವು ಹಳ್ಳಿಗಳನ್ನು ಜಡಿಸೋಮನಾಯಕನಿಗೆ ಇನಾಮು ಕೊಡಲಾಗಿದ್ದು ಇದನ್ನು ಗುಂಡಗುಂಟಿ ಅಥವಾ ಮಾದರಾಯನ ಕೋಟೆಯ (ಇಂದಿನ ಕೋತಾ ಗ್ರಾಮ) ದೇಸಾಯಿ ಮತ್ತು ನಾಡಗೌಡರಿಗೆ ಸಂಬೋಧಿಸಲಾಗಿದೆ. ಹೀಗಾಗಿ ಗುಡಗುಂಟಿ ಸಂಸ್ಥಾನವು ಕ್ರಿ.ಸ.೧೬೬೯ರಲ್ಲಿ ಸ್ಥಾಪನೆಯಾಗಿದೆ.

ಈತನ ನಂತರ ಇಮ್ಮಡಿ ಲಿಂಗನಾಯಕನು ಅಧಿಕಾರಕ್ಕೆ ಬಂದನು. ಈತನ ಆಳ್ವಿಕೆಯ ಕುರಿತಾಗಿ ಯಾವುದೇ ಆಧಾರಗಳು ಲಭ್ಯವಿಲ್ಲ. ಮುಂದೆ ಸೋಮಪ್ಪನಾಯಕನು ಅಧಿಕಾರಕ್ಕೆ ಬರುತ್ತಾನೆ. ಸುರಪುರದ ಹಸರಂಗಿ ಪಾಮನಾಯಕನಿಗೆ ಮಕ್ಕಳಿಲ್ಲದ ಕಾರಣ ಗುಡಗುಂಟಿಯ ಸೋಮಪ್ಪನಾಯಕನ ಆರು ಮಕ್ಕಳೊಳಗೆ ಪಿಡ್ಡನಾಯಕನೆಂಬುವನನ್ನು ದತ್ತು ಮಗನಾಗಿ ತೆಗೆದುಕೊಂಡನು.

ವಾಗಿನಗೇರಿ ಔರಂಗಜೇಬನ ವಶವಾದಾಗ ಪೀತಾಂಬರಿ ಪಿಡ್ಡನಾಯಕನು ತಪ್ಪಿಸಿಕೊಂಡು ಕೃಷ್ಣಾ ನದಿಯನ್ನು ದಾಟಿ ಗುಂಡಗುಂಟಿಗೆ ಹೋದನು. ಗುಡಗುಂಟಿ ಸೋಮಪ್ಪನಾಯಕನು ಈತನನ್ನು ರಕ್ಷಿಸಿದನು. ಆಗ ಈತನ ವೈರಿ ದೇವದುರ್ಗದ ಕುಂಟು ವಾಸುವೇವನಾಯಕನು ಮೊಗಲರ ಸಹಾಯ ಪಡೆದು ಪೀತಾಂಬರಿ ಪಿಡ್ಡನಾಯಕನನ್ನು ಬೆನ್ನಟ್ಟಿದನು. ದೇವದುರ್ಗ ನಾಯಕನೊಡನೆ ಪಿಡ್ಡನಾಯಕನು ಹೋರಾಡಿ ಸೋಲಿಸಿದನು.

ನಂತರ ಗುಡಗುಂಟಿ ಸೋಮಪ್ಪನಾಯಕನನ್ನು ಕರೆದುಕೊಂಡು ಕನಕಗಿರಿಯ ಅರಸ ಉಡಚನಾಯಕನ ರಕ್ಷಣೆಗೆ ತೆರಳಿದರು. ಉಡಚನಾಯಕನ ಬೆಂಬಲದಿಂದ ಗಂಗಾವತಿಯ ಎಮ್ಮಿಗುಡ್ಡವನ್ನು ಸೇರಿದನು. ಒಂದು ವರ್ಷ ಅಲ್ಲಿದ್ದು ಪುನಃ ತನ್ನ ಪರಿವಾರದೊಡನೆ ಗುಡಗುಂಟಿಗೆ ಬಂದನು. ಅಷ್ಟೊತ್ತಿಗೆ ಬಿಜಾಪುರವನ್ನು ಮೊಗಲ್ ರಾಜ್ಯದ ಒಂದು ಸುಭೆ (Division)ಯನ್ನಾಗಿ ಮಾಡಲಾಗಿತ್ತು. ಚೀನಕುಲಿಚ ಖಾನನು ಸುಭೇದಾರನಾಗಿದ್ದನು. ಅವನ ನಂತರ ಈ ಸುಭೆಯ ಅಸಫಜಾಹನ ವಶದಲ್ಲಿತ್ತು. ಅವನು ಗುಡಗುಂಟಿಯಲ್ಲಿ ಹಿಮ್ಮತ ಯಾರಖಾನ ಎಂಬುವವನನ್ನು ನೇಮಿಸಿದ್ದನು. ಆಗ ಪಿಡ್ಡನಾಯಕನು ತನಗೆ ಸಹಾಯ ನೀಡಿದ ಗುಡಗುಂಟಿಯವರಿಗೆ ಸಹಾಯ ಮಾಡಿದನು. ಹಿಮ್ಮತ ಯಾರಖಾನನನ್ನು ಸೋಲಿಸಿ ಗುಡಗುಂಟಿಯನ್ನು ಅವನಿಂದ ಕಸಿದು ತನ್ನ ಬಂಧುವಾದ ಸೋಮಸರ್ಜನಾಯಕನಿಗೆ ಕೊಡಿಸಿ ಪೀತಾಂಬರಿ ಬಹರಿ ಪಿಡ್ಡನಾಯಕನು ವೀರಗೊಟಕ್ಕೆ ಬಂದು ನಿಂತನು.

ರಾಜಾ ಸೋಮಲಿಂಗನಾಯಕರಿಗೆ ಮಕ್ಕಳಿರಲಿಲ್ಲ. ಅಷ್ಟೊತ್ತಿಗೆ ನಿಜಾಮ ಸರ್ಕಾರ ಗುಡಗುಂಟಿಯನ್ನು ಆಕ್ರಮಿಸಿಕೊಂಡಿತು. ಆಗ ಅವರ ಆಜ್ಞೆಯ ಪ್ರಕಾರ ರಾಜಾ ಸೋಮಲಿಂಗನಾಯಕರ ಪತ್ನಿ ರಾಣಿ ಕಾಟಮ್ಮ ಅಧಿಕಾರವನ್ನು ನೋಡಿಕೊಂಡು ಹೋದಳು. ನಿಜಾಂ ಸರ್ಕಾರಕ್ಕೆ ದತ್ತು ತೆಗೆದುಕೊಳ್ಳುವ ಕುರಿತಾಗಿ ಹರಕೆ ಮಾಡಿಕೊಂಡಳು. ಅವರ ಆಜ್ಞೆಯ ಮೇರೆಗೆ ರಾಣಿ ಕಾಟಮ್ಮ ತನ್ನ ಮೈದುನನ ಮಗನಾದ ರಾಜ ಜಡಿಸೋಮಪ್ಪ ನಾಯಕನನ್ನು ದತ್ತು ತೆಗೆದುಕೊಂಡಳು. ಈತ ಚಿಕ್ಕವನಿದ್ದ ಕಾರಣಕ್ಕೆ ಸಂಸ್ಥಾನದ ಎಲ್ಲಾ ಕೆಲಸವನ್ನು ರಾಣಿಯವರೆ ನೋಡಿಕೊಂಡು ಹೋಗುತ್ತಿದ್ದರು. ಆಗ ನಿಜಾಂ ಸರ್ಕಾರ ಸಂಸ್ಥಾನದ ಆಡಳಿತದ ವ್ಯವಸ್ಥೆಗಾಗಿ ಒಬ್ಬ ಸರ್ಕಾರಿ ಅಧಿಕಾರಿಯನ್ನು ನೇಮಿಸಿದರು. ಅವರಿಗೆ 'ನಾಜಿಮ್' ಎನ್ನುತ್ತಿದ್ದರು. ನಂತರ ಅರಸ ವಯಸ್ಸಿಗೆ ಬಂದ ಮೇಲೆ ಆಡಳಿತವನ್ನು ನೋಡಿಕೊಂಡು ಹೋದನು. ಈತ ತೀರಿಕೊಂಡ ತರುವಾಯ ಈ ಸಂಸ್ಥಾನವನ್ನು ನಿಜಾಂ ಸರ್ಕಾರ ತನ್ನ ವಶಕ್ಕೆ ತೆಗೆದುಕೊಂಡಿತು. ೮ ತಿಂಗಳಿನ ನಂತರ ಈ ಮನೆತನದ ರಾಣಿ ಗೌರಮ್ಮನವರಿಗೆ ಸಂಸ್ಥಾನದ ಆಡಳಿತವನ್ನು ವಹಿಸಿಕೊಟ್ಟರು."[೮]

ರಾಣಿ ಗೌರಮ್ಮ ನಿಜಾಂ ಸರ್ಕಾರದ ಒಪ್ಪಿಗೆಯ ಮೇರೆಗೆ ತನ್ನ ಮೊಮ್ಮಗನಾದ ರಾಜಾ ತಿಪ್ಪರಾಜ ಜಡಿಸೋಮನಾಯಕ (ಕ್ರಿ.ಶ.೧೯೦೧ ರಿಂದ ೧೯೫೬) ನನ್ನು ದತ್ತು ತೆಗೆದುಕೊಂಡಳು. ಈತನೇ ಈ ಸಂಸ್ಥಾನದ ಕೊನೆಯ ದೊರೆ. ಈತನಿಗೆ ಶ್ರೀ.ತಿಪ್ಪರಾಜ ಸರ್ಜಾಬಹದ್ದೂರ ಎಂದು ಕರೆಯುತ್ತಿದ್ದರು. ಈತ ತನ್ನ ಅಧಿಕಾರಾವಧಿಯಲ್ಲಿ ೪೪ ಹಳ್ಳಿಗಳಾದ ಗೋನವಾರ, ಬಸ್ಸಾಪುರ, ಸೈದಾಪುರ, ಅಮರಾವತಿ, ಸರ್ಜಾಪುರ, ಚಿಕ್ಕಹೆಸರೂರು, ಹಿರೇಹೆಸರೂರು, ಗೆಜ್ಜಲಗಟ್ಟಿ, ವೀರಾಪುರ, ನಿಲೋಗಲ್, ಹಿರೇನಗನೂರು, ಚಿಕ್ಕನಗನೂರು, ಆನ್ವರಿ, ಮೇದಿನಾಪುರ, ಗುಡದನಾಳ, ಯರಡೋಣಿ, ಭೂಪೂರ, ಪರಾಂಪುರ, ಟಣಮನಕಲ್, ರಾಯದುರ್ಗ, ಗೊಲಪಲ್ಲಿ, ಗದ್ದಗಿ, ಪೈದೊಡ್ಡಿ, ಹೊಸಗುಡ್ಡ, ಬಂಡಭಾವಿ, ರೋಡಲಬಂಡಾ, ಮಾಚನೂರು, ರೋಡಲಬಂಡಾ ತವಗಾ, ಕಡ್ಡೋಣಿ,

ಕೋತಾ, ಹಟ್ಟಿ, ಹೊಸೂರು, ಚಿಕಲದೊಡ್ಡಿ, ಬೆಂಚಲದೊಡ್ಡಿ, ಚುಕ್ಕನಟ್ಟಿ, ಮಲ್ಲಾಪುರ, ಯಲಗಟ್ಟಾ, ದೇವತಗಲ್, ಹೂವಿನಬಾವಿ, ಜಂಗರಹಳ್ಳಿಹಾಳ, ಚಿಕ್ಕಕಾರ್ಲಕುಂಟೆ ಮತ್ತು ಅಮರೇಶ್ವರ ಹಳ್ಳಿಗಳ ಉಸ್ತುವಾರಿಯನ್ನು ನೋಡಿಕೊಂಡು ಹೋಗಲು ಸಣ್ಣಪುಟ್ಟ ಜಮೀನುದಾರರನ್ನು ನೇಮಕ ಮಾಡಿದನು. ಅವರಲ್ಲಿ ಗೆಜ್ಜಲಗಟ್ಟಿ ಆನ್ವರಿ, ಐದಬಾವಿ, ನಗನೂರು, ರೋಡಲಬಂಡಾ ಜಮೀನುದಾರರು ಪ್ರಮುಖರಾದರು. ಇವರನ್ನು ನಾಡಗೌಡರು, ದೇಸಾಯಿಗಳು ಎಂದು ಕರೆಯುತ್ತಿದ್ದರು. ಇವರಿಂದ ಸಂಸ್ಥಾನಕ್ಕೆ ಬರುವ ಅಂದಾಜು ರೂ.೫೦,೦೦೦ ಕಂದಾಯದಲ್ಲಿ ನಿಜಾಂ ಸರ್ಕಾರಕ್ಕೆ ವರ್ಷಕ್ಕೆ ರೂ.೭೦೦೦ ಗಳನ್ನು ಕೊಡಬೇಕಾಗಿತ್ತು.

"ಈ ದೊರೆಗಳು ತಮ್ಮ ಅಧಿಕಾರಾವಧಿಯಲ್ಲಿ ವಿನೋಬಾಭಾವೆಯವರ ಭೂದಾನ ಚಳುವಳಿಗೆ ಸ್ಪಂದಿಸಿ ೨೦೦ ಎಕರೆ ಭೂಮಿಯನ್ನು ಭೂದಾನ ಮಾಡಿದ್ದಾರೆ. ಹೀಗೆ ತಮ್ಮ ಅಧಿಕಾರವನ್ನು ಇವರು ಮುಂದುವರೆಸಿದರು. ದೇಶ ಸ್ವಾತಂತ್ರ ಗಳಿಸಿದ ನಂತರ ದೇಶದ ಎಲ್ಲಾ ಅರಸೊತ್ತಿಗೆಗಳು ಭಾರತದ ಒಕ್ಕೂಟದಲ್ಲಿ ಲೀನವಾದರೂ ಹೈದ್ರಾಬಾದ್ ಸಂಸ್ಥಾನದ ಸಮಕಾಲೀನ ಸಂಸ್ಥಾನವಾದ ಗುಡಗುಂಟಿ ೧೯೪೮ ಸೆಪ್ಟೆಂಬರ್ ೧೮ರವರೆಗೆ ಅಧಿಕಾರವನ್ನು ಬಿಟ್ಟುಕೊಟ್ಟಿರಲಿಲ್ಲ. ಗುಡಗುಂಟಿ ವಂಶಸ್ಥರು ಇಂದು ಗುಡಗುಂಟಿಯ ಅರಮನೆಯಲ್ಲಿ ವಾಸಿಸುತ್ತಿದ್ದಾರೆ. ರಾಜಾ ಅಮರಪ್ಪ ನಾಯಕರು ೧೯೮೩ರಲ್ಲಿ ಮಾನ್ವಿ ಕ್ಷೇತ್ರದಿಂದ, ೧೯೮೫ರಲ್ಲಿ ಲಿಂಗಸೂಗೂರು ಕ್ಷೇತ್ರದಿಂದ ವಿಧಾನಸಭಾ ಸದಸ್ಯರಾಗಿ ಆಯ್ಕೆಯಾದರು. ಅಂದು ರಾಜಕೀಯ ಕ್ಷೇತ್ರದಲ್ಲಿ ಗುರುತಿಸಿಕೊಂಡವರಾಗಿದ್ದರು. ನಂತರ ರಾಯಚೂರು ಲೋಕಸಭಾ ಕ್ಷೇತ್ರಕ್ಕೆ ಸ್ಪರ್ಧಿಸಿ ಕೆಲವೇ ಮತಗಳಿಂದ ಸೋತರು. ಹಟ್ಟಿ ಚಿನ್ನದಗಣಿಯ ನಿರ್ದೇಶಕರಾಗಿಯೂ ಸೇವೆ ಸಲ್ಲಿಸಿದ್ದಾರೆ. ಸದ್ಯ ಇವರ ಪುತ್ರ ರಾಜಾ ಸೋಮನಾಥನಾಯಕನು ಗುಡಗುಂಟಿ ಗ್ರಾಮಪಂಚಾಯಿತಿಯ ಅಧ್ಯಕ್ಷರಾಗಿದ್ದಾರೆ. ಮೊದಲಿನಿಂದಲೂ ಈ ಮನೆತನ ರಾಜಕೀಯ ಕ್ಷೇತ್ರದೊಂದಿಗೆ ಉತ್ತಮ ಸಂಪರ್ಕವನ್ನಿಟ್ಟುಕೊಂಡಿದ್ದರಿಂದ ಇವರು ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಸಬಲರಾಗಿದ್ದಾರೆ. ಇಂದು ಇವರು ನಿರ್ಧರಿಸಿದ ರಾಜಕಾರಣಿ ಶಾಸಕನಾಗುವಷ್ಟು ಸಾಮರ್ಥ್ಯ ಇವರಲ್ಲಿದೆ. ಹೀಗಾಗಿ ರಾಜಾ ಅಮರಪ್ಪನಾಯಕರನ್ನು ಈ ಭಾಗದ ರಾಜಕೀಯ ಗುರು ಎಂದು ಕರೆಯುತ್ತಾರೆ. ಈ ಭಾಗದ ಪ್ರಜೆಗಳು, ಮಠಾಧೀಶರು, ಅಧಿಕಾರಿಗಳು, ರಾಜಕಾರಣಿಗಳು ಇವರನ್ನು ರಾಜಮರ್ಯಾದೆಯಿಂದ ಕಾಣುತ್ತಾರೆ. ತಾಲ್ಲೂಕಿನ ಎಲ್ಲಾ ಜಾತಿಯ ಜನ ಇವರನ್ನು ದಣಿಗಳೆಂದು ಸಂಬೋಧಿಸುತ್ತಾರೆ. ಪ್ರೀತಿಯಿಂದ ಕಾಣುತ್ತಾರೆ. ಈ ಭಾಗದ ನಾಯಕ ಸಮುದಾಯಕ್ಕೆ ನಾಯಕ ಗುರುಗಳಾಗಿಯೇ ಗುರುತಿಸಿಕೊಂಡಿದ್ದಾರೆ.

೨.೫ ಗುಂತಗೋಳದ ನಾಯಕ ಅರಸರು

ಗುಂತಗೋಳ ರಾಯಚೂರು ಜಿಲ್ಲೆಯ ಲಿಂಗಸೂಗೂರು ತಾಲ್ಲೂಕಿನಿಂದ ಸುಮಾರು ೩೦ ಕಿ.ಮೀ. ದೂರದಲ್ಲಿದೆ. ಇಲ್ಲಿ ನಾಯಕ ಸಮುದಾಯದ ಅರಸರು ಆಳ್ವಿಕೆ ಮಾಡಿದ್ದಾರೆ.

ಈ ಮನೆತನದ ಕುರಿತಾಗಿ ಆಕರಗಳು ಲಭ್ಯವಿಲ್ಲ. ಹೀಗಾಗಿ ಸ್ಥಳೀಯ ಸ್ಮಾರಕಗಳನ್ನು, ಜನಪದ ಹಾಡುಗಳನ್ನು ಅವಲೋಕಿಸಿದಾಗ ವ್ಯಕ್ತಗೊಳ್ಳುವ ಅಭಿಪ್ರಾಯಗಳನ್ನು ಆಧರಿಸಿ ಈ ಮನೆತನದ ವಂಶಸ್ಥರನ್ನು ಗುರುತಿಸಲಾಗಿದೆ ಹಾಗೂ ಗುಂತಗೋಳ ಪರಿಸರದಲ್ಲಿರುವ ಅನೇಕ ಹಿರಿಯ ತಲೆಮಾರಿನವರನ್ನು ಸಂದರ್ಶಿಸಿ ಮಾಹಿತಿಯನ್ನು ಸಂಗ್ರಹಿಸಲಾಗಿದೆ."[೯]

'ಗುಂತ' ಎಂದರೆ ತಗ್ಗಾದ ಪ್ರದೇಶ. 'ಗುಳೆ' ಎಂದರೆ ವಿಪ್ಲವ ಕಾಲದಲ್ಲಿ ಹೋಗಿ ನೆಲೆಸಿರುವುದು. ತಗ್ಗಾದ ಪ್ರದೇಶದಲ್ಲಿ ಯಾವುದೇ ವಿಪ್ಲವ ಕಾಲದಲ್ಲಿ ಹೋಗಿ ಅಲ್ಲಿ ನೆಲೆಯೂರಿರುವುದರಿಂದ ಈ ಹೆಸರು ಬಂದಿದೆ. ಮೊದಮೊದಲು ಇದನ್ನು ಗುಂತಗುಳೆ ಎಂದು ಕರೆಯುತ್ತಿದ್ದರು. ಗುಂತಗೋಳ ನಾಯಕರು ಕ್ರಿ.ಶ.೧೯೪೧ ರಿಂದ ೧೯೪೮ರವರೆಗೆ ಆಳ್ವಿಕೆ ಮಾಡಿದ್ದಾರೆ. ಇವರು ಮೂಲತಃ ಕಂಚಿಯಿಂದ ಬಂದವರು. ಬರುವಾಗ ತಮ್ಮೊಂದಿಗೆ ಅನೇಕ ಜನರನ್ನು ಕರೆದುಕೊಂಡು ಬಂದಿದ್ದಾರೆ. ಇವರೊಂದಿಗೆ ಬಂದ ಮನೆತನದವರಿಗೆ ಕಂಚಿಯವರು ಎಂದು ಕರೆಯುತ್ತಾರೆ. ಇವರ ಕುಟುಂಬಗಳು ಇಂದಿಗೂ ಗುಂತಗೋಳದಲ್ಲಿವೆ.

ಗುಂತಗೋಳದ ನಾಯಕರು ಬಿಜಾಪುರದ ಆದಿಲ್‌ಶಾಹಿಗಳ ಆಡಳಿತಾವಧಿಯಲ್ಲಿ (ಕ್ರಿ.ಶ.೧೪೮೯–೧೬೮೬) ನಿರ್ಲಕ್ಷಿಸಲ್ಪಟ್ಟ ಪ್ರದೇಶದಲ್ಲಿ ಒಂದು ಸಂಸ್ಥಾನವನ್ನು ಸ್ಥಾಪಿಸಿದರು. ಬ್ರಿಟಿಷ್ ಮತ್ತು ಹೈದ್ರಾಬಾದ್ ನಿಜಾಮರ (ಕ್ರಿ.ಶ.೧೭೨೪–೧೯೪೮) ದಬ್ಬಾಳಿಕೆಯ ಮಧ್ಯೆ ಸಮರ್ಥವಾಗಿ ಆಳ್ವಿಕೆ ನಡೆಸಿದುದು ವಿಶೇಷವಾಗಿದೆ. ಗುಂತಗೋಳದ ನಾಯಕರು ಮೊದಲಿಗೆ ಬಿಜಾಪುರದ ಆದಿಲ್‌ಶಾಹಿಗಳ ಅಧೀನರಾಗಿದ್ದರು. ಆದಿಲ್‌ಶಾಹಿಗಳು ತಮ್ಮ ಅಧೀನದವರಿಗೆ ಜಹಗೀರು ಹಾಕಿಕೊಡುತ್ತಿದ್ದರು. ಹೀಗಾಗಿ ಇವರು ಮೊದಲ ಜಹಗೀರುದಾರರಾಗಿದ್ದರು. ನಂತರ ಔರಂಗಜೇಬನು ಬಿಜಾಪುರವನ್ನು ಮುತ್ತಿ ಸಿಕಂದರನನ್ನು ಸೆರೆಹಿಡಿದು ಆದಿಲ್‌ಶಾಹಿಗಳ ಆಳ್ವಿಕೆಯನ್ನು ಅಂತ್ಯಗೊಂಡಾದ ಮೇಲೆ ಇವರು ಸ್ವತಂತ್ರವಾಗಿ ಆಳ್ವಿಕೆ ಮಾಡಿದರು. ಇವರು ಮೊದಲು ಕೃಷ್ಣಾನದಿಯ ನಡುಗಡ್ಡೆಯಾದ ಜಲದುರ್ಗದಲ್ಲಿ ಆಳ್ವಿಕೆ ಪ್ರಾರಂಭಿಸಿದರು. ಜಲದುರ್ಗವೇ ಇವರ ಮೊದಲ ರಾಜಧಾನಿ. ಗುಂತಗೋಳ ಆದಿಲ್‌ಶಾಹಿಗಳ ಕಾಲದಲ್ಲಿ ಖೈದಿಗಳಿಗೆ ಶಿಕ್ಷೆ ನೀಡುವ ಸ್ಥಳವಾಗಿ ಪರಿವರ್ತನೆಯಾದ ತರುವಾಯ ಇವರು ಗುಂತಗೋಳಕ್ಕೆ ಬಂದು ನೆಲಸಬೇಕಾಯಿತು.

ಗುಂತಗೋಳ ಸಂಸ್ಥಾನದ ಮೂಲಪುರುಷ ಕಾಳಭೈರವನಾಯಕ. ಈತನ ಸಮಾಧಿ ಗುಂತಗೋಳದಲ್ಲಿದೆ. ಅದನ್ನು ಈಗಲೂ ಕಾಳಭೈರನಾಯಕನ ಗಚ್ಚಿನಕಟ್ಟೆ ಎಂದು ಕರೆಯುತ್ತಾರೆ. ಗುಂತಗೋಳದ ನಾಯಕರ ಅರಸರಲ್ಲಿ ರಾಜಾ ಅಮರಪ್ಪನಾಯಕ, ರಾಜಬಸಪ್ಪನಾಯಕ, ರಾಜಾ ಇಮ್ಮಡಿ ಅಮರಪ್ಪನಾಯಕ, ರಾಜಾಶ್ರೀನಿವಾಸನಾಯಕ, ರಾಜಾ ಇಮ್ಮಡಿಬಸಪ್ಪನಾಯಕ, ರಾಜಾ ರಾಯಪ್ಪನಾಯಕ, ರಾಜಾ ಮುಮ್ಮಡಿ ಅಮರಪ್ಪನಾಯಕ, ರಾಜಾ ಇಮ್ಮಡಿ ರಾಯಪ್ಪನಾಯಕ, ರಾಜಾ ನರಸಿಂಹನಾಯಕ ಇವರುಗಳು ಪ್ರಮುಖರಾಗಿದ್ದಾರೆ.

ಈ ಸಂಸ್ಥಾನದ ಅರಸರಿಗೆ 'ಬಹರಿ ಬಹದ್ದೂರ್', 'ನಾಯಕಾಚಾರ್ಯ', 'ಮಹಾನಾಯಕ' ಎಂಬ ಬಿರುದುಗಳಿವೆ. ಇವರಿಗೆ ಆದಿಲ್‌ಶಾಹಿಗಳು 'ಬಹರಿಬಹದ್ದೂರ್' ಎಂಬ ಬಿರುದನ್ನು ನೀಡಿ ಗೌರವಿಸಿದ್ದಾರೆ. ಈ ಭಾಗದ ನಾಯಕ ಸಮುದಾಯಕ್ಕೆ ಗುರುಗಳಾದ ಇವರನ್ನು

'ನಾಯಕಾಚಾರ್ಯರು' ಎಂದು ಕರೆಯುವರು. ಇವರು ಬಿರುದಿನ ಸಂಕೇತವಾಗಿ ಮಹಾನಾಯಕನ ದೊಡ್ಡಿ ಎನ್ನುವುದು ಗುಂತಗೋಳದ ಒಂದು ಭಾಗವಾಗಿತ್ತು. ಈಗಲೂ ಈ ಮನೆತನವನ್ನು ಗುರು ಮತ್ತು ದೊರೆ ಮನೆತನ ಎಂದು ಕರೆಯುತ್ತಾರೆ.

ಈ ಸಂಸ್ಥಾನಿಕರ ರಾಜಲಾಂಛನ ಆನೆಯಾಗಿದ್ದು, ಹಸಿರು ಬಣ್ಣದ ಧ್ವಜಕ್ಕೆ ಬೆಳ್ಳಿಯ ಮೊಹರಿದೆ. ಶೈವಪಂಥದವರಾದ ಇವರು ಭಾರದ್ವಜ ಗೋತ್ರದವರು. ಇವರ ಆಡಳಿತಕ್ಕೆ ಸುಮಾರು ೧೩೦ ಹಳ್ಳಿಗಳು ಸೇರಿದ್ದು, ಇವರ ಗಡಿಯನ್ನು ಸೂಚಿಸುವ ಜನಪದ ನುಡಿಯೊಂದು ಇಂತಿದೆ.

ಮಾಮಲೆ ಮುದಗಲ್, ಕಿಲ್ಲೆ ಜಲದುರ್ಗ

ಸಮತ್‌ಗೋನವಾಟ್ಲ ಸಂಸ್ಥಾನ ಗುಂತಗೋಳ

ನಮ್ಮ ರಾಜರದು.

ಆಡಳಿತ ವ್ಯವಸ್ಥೆಯಲ್ಲಿ ಪಾಟೀಲ, ಕುಲಕರ್ಣಿ, ನಾಡಗೌಡ, ಮಾಲೀಗೌಡ, ದೇಸಾಯಿ, ಪೊಲೀಸ್, ಪಾಟೀಲ್ ಎಂಬ ಅಧಿಕಾರಿಗಳಿದ್ದರು. ಇವರಲ್ಲಿ ಕಾಳಾಪುರದ ದಣಿಗಳು, ನೀರಲಕೇರಿಯ ನಾಡಗೌಡರು, ಬೆಲ್ಲದ ಮರಡಿಯ ದೇಸಾಯಿಗಳು ಪ್ರಮುಖರಾದವರು. ಇವರು ತಮ್ಮ ಭಾಗದ ಕಂದಾಯವನ್ನು ವಸೂಲಿ ಮಾಡಿ ಗುಂತಗೋಳದ ಅರಸರಿಗೆ ಸಲ್ಲಿಸುತ್ತಿದ್ದರು. ಗುಂತಗೋಳದ ಅರಸರು ಹೈದ್ರಾಬಾದ್ ನಿಜಾಮನಿಗೆ ವಾರ್ಷಿಕ ಕಪ್ಪಕಾಣಿಕೆಯನ್ನು ಸಲ್ಲಿಸುತ್ತಿದ್ದರು.

ಈ ಸಂಸ್ಥಾನದ ಕಾವಲುಗಾರನ ಹೆಂಡತಿ ಮಾಳಗುಂಡಮ್ಮಳೆಂಬ ಮಹಿಳೆ ಸಂಸ್ಥಾನದ ರಕ್ಷಣೆಗಾಗಿ ಹೋರಾಡಿ ಮಡಿದ ಕತೆ ಜನಜನಿತವಾಗಿದೆ. ಈಕೆಯನ್ನು ಚಿತ್ರದುರ್ಗದ ಒನಕೆ ಓಬವ್ವನಿಗೆ ಹೋಲಿಸುತ್ತಾರೆ. ಒಂದು ಸಲ ೨೦ ಜನ ವೈರಿ ಸೈನಿಕರು (ಆದಿಲ್‌ಶಾಹಿಗಳೋ, ಸುರಪುರದ ನಾಯಕರೋ) ಗುಂತಗೋಳಕ್ಕೆ ರಾತ್ರೋರಾತ್ರಿ ಮುತ್ತಿಗೆ ಹಾಕಲು ಪ್ರಯತ್ನಿಸಿ ಕಾವಲುಗಾರರನ್ನು ಕೊಲೆಗೈದರು. ಮಡದಿ ಮಾಳಗುಂಡಮ್ಮ ಸುದ್ದಿ ತಿಳಿದು ವೀರಾವೇಶದಿಂದ ಕೈಯಲ್ಲಿ ಖಡ್ಗ ಹಿಡಿದು ಅವರನ್ನು ಕೊಚ್ಚಿ ಹಾಕುವುದರೊಂದಿಗೆ ವೀರಮರಣವನ್ನಪ್ಪುತ್ತಾಳೆ. ಹೀಗಾಗಿ ಊರನ್ನು ರಕ್ಷಿಸಿದ ಈಕೆಯ ಹೆಸರಿನಲ್ಲಿ ಜನ ದೇವಾಲಯವನ್ನು ಕಟ್ಟಿಸಿ ಪೂಜಿಸುತ್ತಿದ್ದಾರೆ. ಈ ಮನೆತನದವರಿಗೆ ಅರಸರು ಇನಾಮುಗಳನ್ನು ನೀಡಿದ್ದರು.

ಲಿಂಗಸೂಗೂರು ತಾಲ್ಲೂಕಿನ ಗುಂತಗೋಳದ ಭಾಗದಲ್ಲಿ ಮಾತ್ರ ನಮಗೆ ಅತೀ ಹೆಚ್ಚು ವೀರಗಲ್ಲುಗಳು ಸಿಗುತ್ತವೆ. ಇವುಗಳಿಗೆ ಅಗಸೀಕಟ್ಟೆಯ ವೀರಗಲ್ಲುಗಳು, ತಿಮ್ಮಣ್ಣನ ಹೊಲದ ವೀರಗಲ್ಲುಗಳು, ಗೋನವಾಟ್ಲದ ವೀರಗಲ್ಲುಗಳೆಂದೇ ಜನ ಕರೆಯುತ್ತಾರೆ. ಬಹುಶಃ ಇವುಗಳು ಈ ಭಾಗದ ಬೇಡ ಸೈನಿಕರು ವೀರ ಹೋರಾಟದಲ್ಲಿ ಮಡಿದ ಸವಿನೆನಪಿಗಾಗಿ ಕೆತ್ತಿಸಿರಬಹುದಾದ ಸಾಧ್ಯತೆಗಳಿವೆ.

ಈ ಸಂಸ್ಥಾನದ ಅರಸ ರಾಜಾರಾಯಪ್ಪನಾಯಕನು ಆಧ್ಯಾತ್ಮಿಕ ಒಲವಿನ ಪುರುಷರಾಗಿದ್ದರು. ದರಬಾರಿನಲ್ಲಿ ಪ್ರತಿವರ್ಷ ನಡೆಯುವ ನವರಾತ್ರಿಯ ಸಮಯದಲ್ಲಿ

ದೇವಿಪುರಾಣವನ್ನು ಸ್ವತಃ ತಾವೇ ಪಾರಾಯಣ ಮಾಡುತ್ತಿದ್ದರು. ಕಲಾ ಪ್ರೇಮಿಗಳು ಹಾಗೂ ಕಲಾಕಾರರಾಗಿದ್ದರು. ನಾಟಕ ಕಂಪನಿಯೊಂದನ್ನು ಹುಟ್ಟುಹಾಕಿ ಕಲಾಕಾರರಿಗೆ ತರಬೇತಿಯನ್ನು ನೀಡುವ ವ್ಯವಸ್ಥೆ ಮಾಡಿದ್ದರು. ಈ ಸಂಸ್ಥಾನಿಕರು ಸುರಪುರ, ದೇವದುರ್ಗ, ಗುಡಗುಂಟೆ, ಕನಕಗಿರಿ, ಗುಡೇಕೋಟೆ, ರತ್ನಗಿರಿ ಮನೆತನಗಳೊಂದಿಗೆ ವೈವಾಹಿಕ ಸಂಬಂಧವನ್ನು ಬೆಳೆಸಿದ್ದಾರೆ.

ಇಂದು ಈ ಮನೆತನದ ವಂಶಸ್ಥರು ಗುಡಗುಂಟೆಯಲ್ಲಿ ವಾಸವಾಗಿದ್ದಾರೆ. ಗುಂತಗೋಳದಲ್ಲಿ ಸುಸಜ್ಜಿತ ಅರಮನೆ ಇದೆ. ಅಲ್ಲಿಗೆ ವಾರಕ್ಕೊಂದು ದಿನ ಹೋಗಿ ಬರುತ್ತಾರೆ. ಹಬ್ಬ ಹರಿದಿನಗಳಲ್ಲಿ ಭಾಗವಹಿಸುತ್ತಾರೆ. ಈ ಮನೆತನದವರು ಪ್ರಸ್ತುತ ರಾಜಕೀಯದೊಂದಿಗೆ ಉತ್ತಮ ಸಂಬಂಧ ಹೊಂದಿದ್ದಾರೆ. ರಾಜಾ ಅಮರೇಶ್ವರನಾಯಕ ೧೯೮೯ರಲ್ಲಿ ಲಿಂಗಸುಗೂರು ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಆಯ್ಕೆಯಾಗಿ, ರಾಜ್ಯ ತೋಟಗಾರಿಕೆ ಸಚಿವರಾಗಿಯೂ ನಂತರ ಬಂಧಿಖಾನೆ, ಗೃಹರಕ್ಷಕ ದಳ ಮತ್ತು ಕಾನೂನು ಮಾಪನ ಸಚಿವರಾಗಿ ಸೇವೆ ಸಲ್ಲಿಸಿದ್ದಾರೆ. ಕಳೆದ ೨೦೦೪ರ ಚುನಾವಣೆಯಲ್ಲಿ ಕಲ್ಮಲಾ ವಿಧಾನಸಭೆಗೆ ಸ್ಪರ್ಧಿಸಿ ಕೆಲವೇ ಮತಗಳಿಂದ ಪರಾಭವಗೊಂಡರು. ಇವರ ಹಿರಿಯ ಸಹೋದರರಾದ ರಾಜಾ ರಾಯಪ್ಪನಾಯಕರು ರಾಯಚೂರು ಜಿಲ್ಲಾಪಂಚಾಯಿತಿಯ ಸದಸ್ಯರಾಗಿದ್ದರು. ಇಂದು ರಾಜಕೀಯದಲ್ಲಿ ಗುರುತಿಸಿಕೊಂಡಿದ್ದಾರೆ. ಇವರ ಕಿರಿಯ ಸಹೋದರ ರಾಜಾ ಶ್ರೀನಿವಾಸನಾಯಕ ಅವರು ದೇವರಭೂಪೂರದ ಮಂಡಲ ಪ್ರಧಾನರಾಗಿ, ಗುಂತಗೋಳ ಗ್ರಾಮಪಂಚಾಯಿತಿಯ ಅಧ್ಯಕ್ಷರಾಗಿಯೂ, ಜಿಲ್ಲಾ ಯುವ ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿಗಳಾಗಿ ಹಾಗೂ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಈಗಲೂ ರಾಜಕೀಯದಲ್ಲಿ ಮುಂಚೂಣಿಯಲ್ಲಿದ್ದಾರೆ. ಹೀಗೆ ಈ ಮನೆತನದ ವಂಶಸ್ಥರು ರಾಜಕೀಯವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಈ ಭಾಗದಲ್ಲಿ ಗುರುತಿಸಿಕೊಂಡಿದ್ದಾರೆ. ಅನೇಕ ಜನೋಪಯೋಗಿ ಕೆಲಸಗಳಲ್ಲಿ ಇಂದಿಗೂ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ.

ದೇವದುರ್ಗ ನಾಯಕರು

"ನಾಯಕ ಎಂಬ ಪದವು ದಂಡಿನ ನಾಯಕ , ಸೈನ್ಯದ ಮುಖ್ಯಸ್ಥ, ಸೇನಾಪತಿ, ದಳಪತಿ ದೇಸಾಯಿ ಎಂಬ ಇತ್ಯಾದಿ ಅರ್ಥಗಳನ್ನು ಸೂಚಿಸುತ್ತದೆ. ಅದರ ಮುಖ್ಯಸ್ಥರೇ ಪಾಳೆಯಗಾರರು. ಆದರೆ ಕರ್ನಾಟಕದಲ್ಲಿ ಸಂಭವಿಸಿದ ಕೆಲವು ಚಾರಿತ್ರಿಕ ಆಗುಹೋಗುಗಳಿಂದ ಚಿಕ್ಕ ಪ್ರದೇಶಗಳಲ್ಲಿ ಒಡೆತನವನ್ನು ನಡೆಸುತ್ತಿದ್ದ ನಾಯಕರಿಗೆ ಪಾಳೆಯಗಾರರು ಎಂಬ ಹೆಸರು ರೂಢಿಯಲ್ಲಿ ಬಂದಿದೆ.

೧೫ ಮತ್ತು ೧೬ನೆಯ ಶತಮಾನದಲ್ಲಿ ವಿಜಯನಗರ ಅರಸರು ಅನೇಕ ಪಾಳೆಯಗಾರರಿಗೆ ಚಿಕ್ಕಪುಟ್ಟ ಪಾಳೆಪಟ್ಟು ಕೊಟ್ಟು ಅವರು ಕಾಲಕಾಲಕ್ಕೆ ನಿಗದಿಯಾದ ಕಪ್ಪಕಾಣಿಕೆ ಸಲ್ಲಿಸುತ್ತಾ ಬರಬೇಕೆಂದೂ, ಅವಶ್ಯಬಿದ್ದಾಗ ಸೈನ್ಯ ಸಹಾಯ ನೀಡಬೇಕೆಂದೂ

ನಿಯಮಗಳನ್ನು ವಿಧಿಸಿದ್ದರು. ಈ ಷರತ್ತಿಗೆ ಅನುಗುಣವಾಗಿ ರಾಜನಿಗೆ ಸೈನ್ಯ ಅವಶ್ಯಕತೆ ಬಂದಾಗ ಸಹಾಯವನ್ನು ಒದಗಿಸಬೇಕಾಗುತ್ತಿತ್ತು. ಈ ವ್ಯವಸ್ಥೆಯೇ ಮುಂದುವರೆದು ಪಾಳೆಯಪಟ್ಟುಗಳ ಸ್ಥಾಪನೆಗೆ ನಾಂದಿಯಾಯಿತು. ಕ್ರಿ.ಶ.೧೫೬೫ ರ ತಾಳಿಕೋಟೆಯ ಯುದ್ಧದ ನಂತರ ಹೆಚ್ಚು ಕಡಿಮೆ ಕರ್ನಾಟಕದಲ್ಲಿ ಎಲ್ಲ ಪಾಳೆಯಗಾರರು ಸ್ವತಂತ್ರರಾದರು. ಈ ರೀತಿಯಾಗಿ ಸ್ವತಂತ್ರರಾದ ಪಾಳೆಯಗಾರರಲ್ಲಿ ದೇವದುರ್ಗದ ಪಾಳೆಯಗಾರರು ಒಬ್ಬರಾಗಿದ್ದಾರೆ.

ಈ ಪಾಳೆಯಗಾರರು ಬೇಡ ಸಮುದಾಯದವರಾಗಿದ್ದು, ಜಂಪಲ ಗೋತ್ರಕ್ಕೆ ಸೇರಿದವರಾಗಿದ್ದಾರೆ. ಈ ಮನೆತನದವರು "ಬಲವಂತ ಬಹಿರಿ ಬಹಾದ್ದೂರ್" ಎಂಬ ಬಿರುದನ್ನು ಧರಿಸುತ್ತಿದ್ದರು. ಮೊದಲಿಗೆ ಕಾಕತೀಯರು ನಂತರ ವಿಜಯನಗರ ಸಾಮ್ರಾಜ್ಯದ ಮಾಂಡಲಿಕರಾಗಿದ್ದು ಅನಂತರ ಸ್ವತಂತ್ರರಾಗಿದ್ದರು. ವಿಜಯನಗರದ ಪತನದ ನಂತರ ಸ್ವತಂತ್ರರಾದರೂ ಬಿಜಾಪುರದ ಅದಿಲ್‌ಶಾಹಿಗಳ ವ್ಯಾಪ್ತಿಗೆ ಈ ಪ್ರದೇಶ ಸೇರಿತು. ಈ ಭಾಗದ ರಕ್ಷಣೆಗಾಗಿ ಸುರಪುರದ ಪಾಳೆಯಗಾರರಿಗೆ ಇದರ ಉಸ್ತುವಾರಿಯನ್ನು ವಹಿಸಲಾಯಿತು. ಹಾಗಾಗಿ ಸುರಪುರದ ಸಂಸ್ಥಾನ ಅಧೀನನಾಗಿ ಈ ಸಂಸ್ಥಾನ ಆಳ್ವಿಕೆ ಮಾಡಿತು. ಕಾಲಾನಂತರದಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ಹೈದರಾಬಾದ್ ನಿಜಾಮನ ಆಳ್ವಿಕೆಗೊಳಪಟ್ಟಿತು. ಮೊದಲಿಗೆ ಇವರ ರಾಜಧಾನಿ ಚಂದನಕೇರಿಯಾಗಿತ್ತು. ಹಿಂದೆ ಇದನ್ನು ಚಂದನಗಿರಿ ಎಂದು ಕರೆಯುತ್ತಿದ್ದರು. ಅನಂತರ ದೇವದುರ್ಗ ಇವರ ರಾಜಧಾನಿಯಾಯಿತು. ಆದ್ದರಿಂದ ಇವರಿಗೆ ದೇವದುರ್ಗದ ಪಾಳೆಯಗಾರರು ಎಂಬ ಹೆಸರು ಬಂದಿತು. ಈ ಪಾಳೆಯಗಾರರು ವೈಷ್ಣವ ಪಂಥದವರಾದ್ದರು. ಮಾನಸಗಲ್ ಶ್ರೀ ರಂಗನಾಥಸ್ವಾಮಿ ಇವರ ಕುಲದೈವ ಅವರ ರಾಜಧ್ವಜ **"ಹನುಮಾನ್"** ಧ್ವಜವಾದರೆ, ಜೋಡು ಛತ್ರಿ ರಾಜಲಾಂಛನವಾಗಿತ್ತು."[೧೦]

ದೇವದುರ್ಗದ ನಾಯಕರ ಮೂಲ

"ದೇವದುರ್ಗ ಸಂಸ್ಥಾನವು ವಿಜಯನಗರ ಸಾಮ್ರಾಜ್ಯಕ್ಕಿಂತಲೂ ಮುಂಚಿತವಾಗಿ ಅಥವಾ ಮೊದಲು ಸ್ಥಾಪನೆಯಾಗಿರಬಹುದೆಂದು ಕಂಡುಬರುತ್ತದೆ. ಆದರೆ ಮುಂಚಿತವಾಗಿ ಸಂಸ್ಥಾನವಿರಲಿಲ್ಲ. ಬೇಡರ ಪಡೆಯಿತ್ತು. ಈ ಬೇಡರ ಪಡೆ ಕಾಕತೀಯ ಬೆಂಬಲದಲ್ಲಿತ್ತೆಂದು ತಿಳಿದುಬರುತ್ತದೆ. ಆಗ ಸಂಸ್ಥಾನವಾಗಿ ರೂಪುಗೊಂಡಿರಲಿಲ್ಲ. ಕೇವಲ ಬೇಡರ ಪಡೆಯಾಗಿತ್ತು. ಈ ಬೇಡರ ಪಡೆಯ ವಾಸಸ್ಥಾನ ಚಂದನಕೇರಿಯಾಗಿತ್ತು. ಈ ಬೇಡರ ಪಡೆಯ ಮುಖ್ಯಸ್ಥ ಮತ್ತು ದೇವದುರ್ಗ ಸಂಸ್ಥಾನದ ಮೂಲ ಪುರುಷ ಸೋಮಜಂಪಲ ಭೂಪತಿ ರಂಗಪ್ಪನಾಯಕನಾಗಿದ್ದನು. ಈತನು ಬೇಡ ಕುಲಕ್ಕೆ ಸೇರಿದವನಾಗಿದ್ದನು."[೧೧]

ಬೇಡರಲ್ಲಿರುವ ಬೆಡಗುಗಳಲ್ಲಿ ಜಂಪಲವರು ಎನ್ನುವುದು ಒಂದು ಬೆಡಗಿನ ಹೆಸರಾಗಿದೆ. ಕನಗಿರಿಯವರನ್ನು ಗುಜ್ಜಲದವರೆಂದು, ಸುರಪುರದವರನ್ನು ಗೋಸಲರು ಎಂದು ಕರೆಯುವುದು ಇದರಂತೆ ಇತರ ಬೆಡಗುಗಳನ್ನು ಅಂದರೆ ಮಿನುಗುಲವರು, ಮಸಗಲವರು, ಮುಮ್ಮಡಲವರು, ಕುರ್ಲೆಯವರು, ಗುಜಲರು ಎಂದೂ ಉದಾಹರಿಸಬಹುದು. ಈ ಬೆಡಗು ಮೂಲಕವಾಗಿಯೂ ದೇವದುರ್ಗದ ಅರಸರನ್ನು 'ಜಂಪಲ'ವರು ಎಂದು ಹೇಳಲಾಗಿದೆ.

ದೇವದುರ್ಗದ ರಾಜವಂಶೀಯ ಬೇಡರು ಮೇಲೆ ಉದಾಹರಿಸಿದ "ಭಾರ್ಗವ ಪುರಾಣ"ದಲ್ಲಿ (ಕ.ಸಂ.೬) ಬೇಡ ಶಬ್ದವನ್ನೂ ವಿವರಿಸುತ್ತ ಕೀ.ಶೇ.ಡಾ.ಶ್ರೀ ತಿರುಮಲ ರಾಮಚಂದ್ರರವರು "ವ್ಯಾಧ" ಶಬ್ದವು ವ್ಯಾಧಬ್ಯಾಡ ಎಂದು ಮಾರ್ಪಾಟುಗೊಂಡಂತೆ ತರ್ಕಿಸಿದ್ದಾರೆ. ಈ ಬೇಡರ ಪರಾಕ್ರಮಗಳನ್ನೂ, ಸಾಹಸಗಳನ್ನು ಕುರಿತಂತೆ "ಗಾಥಸಪ್ತಸತಿ" ಕೃತಿಯಲ್ಲಿ ಅನೇಕ ವರ್ಣನೆಗಳು ಬಂದಂತೆ ವಿವರಿಸುತ್ತದೆ. ಸುಮಾರು ಎರಡು ಸಾವಿರ ವರ್ಷಗಳಿಂದ ಈ ಬೇಡ ಸಮುದಾಯವು ಸೇನಾನಾಯಕರಾಗಿ, ದುರ್ಗಪಾಲಕರಾಗಿ ಪ್ರಸಿದ್ಧಿ ಪಡೆದಿದ್ದರೆಂದೂ, ಭಾರತವನ್ನಾಳಿದ ಪ್ರತಿ ರಾಜವಂಶವೂ ಈ ಬೇಡ ಜನಾಂಗವನ್ನಾಧರಿಸಿದಂತೆ ತಿಳಿಸುತ್ತಾರೆ. ಚಾಲುಕ್ಯ, ರಾಷ್ಟ್ರಕೂಟ, ವಿಜಯನಗರ, ಬಹುಮನಿ, ಕುತುಬ್‌ಷಾಹಿ ರಾಜ್ಯಗಳ ಸೇನೆಗಳಲ್ಲಿ ಈ ಬೇಡರು ಪ್ರಬಲ ದಳಗಳಾಗಿದ್ದವು. ವಿಜಯನಗರದ ಅರಸನಾದ ಶ್ರೀ ಕೃಷ್ಣದೇವರಾಯನು ಇವರನ್ನು ಸೇನಾನಾಯಕರನ್ನಾಗಿ, ರಾಜಪ್ರತಿನಿಧಿಗಳನ್ನಾಗಿ ನೇಮಿಸಿದ್ದನ್ನು ತನ್ನ ಅಂಗರಕ್ಷಕ ಹಾಗೂ ಛತ್ರಪಾಲಕರನ್ನಾಗಿ ದೊಣ್ಣೆ ನಾಯಕರಾದ ಈ ಬೇಡರನ್ನೇ ನಿಯುಕ್ತಿಗೊಳಿಸಿದ್ದನು. ದುರ್ಗ ರಕ್ಷಿಸುವವರೇ ಆದ ಇವರು ಪಾಳೆಯಗಾರರೂ ಹೌದು. ಈ ಬೇಡರ ಮೂಲಸ್ಥಾನವು ಕರ್ನಾಟಕದ ಗುಲ್ಬರ್ಗಾ, ವಿಜಾಪುರ, ಬೆಳಗಾವಿ, ರಾಯಚೂರು, ಬಳ್ಳಾರಿ, ಚಿತ್ರದುರ್ಗ ಜಿಲ್ಲೆಗಳು. ಆಂಧ್ರಪ್ರದೇಶದ ಕರ್ನೂಲು, ಕಡಪ, ಅನಂತಪುರ ಜಿಲ್ಲೆಗಳು. ತಮಿಳುನಾಡಿನ ಅರ್ಕಾಟ್ ಮತ್ತು ಚೆಂಗಲ್‌ಪೇಟೆ ಜಿಲ್ಲೆಗಳು. ಈ ಪ್ರದೇಶಗಳಲ್ಲಿ ಬೇಡರು ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುತ್ತಾರೆ.

ಸುಪ್ರಸಿದ್ಧ ಚರಿತ್ರೆಕಾರರಾದ ಜಾದುನಾಥ ಸರ್ಕಾರ್ ಅವರು ಈ 'ಬೇಡ' ಶಬ್ದದ ಉಚ್ಚಾರಣೆ ತಿಳಿಯದ ಮುಸ್ಲಿಮರ ಬಾಯಿಗೆ ಬಿದ್ದು ವಿಕಾರ ರೂಪಗಳನ್ನು ಹೊಂದಿದೆ. ಬೇಡರ್, ಬಿರ್ಕಿ, ಬಿರ್ದಿ, ಬೇಂಡರ್ ಎಂದು ಕರೆಯಲ್ಪಟ್ಟಿದೆ. ಇವರು ಅರ್ಥೈಸಿದಂತೆ ಬೇಡರ್ ಎಂದರೆ ಭಯವಿಲ್ಲದವರು ಎಂದಾಗುತ್ತದೆ. ಔರಂಗಜೇಬನ ಕಾಲದಲ್ಲಿ ಈ ಬೇಡರನ್ನು ಕರ್ನಾಟಕದ ಪಾಳೆಯಗಾರರೆಂದು ಕರೆಯಲಾಗಿದೆ.

ಡಿ.ಬಿ.ಢಂಗ ಅವರು 'ಬೇಡರ' ಎಂಬುದು ಉರ್ದು ಶಬ್ದ. ಉರ್ದು ಭಾಷೆಯಲ್ಲಿ 'ಬೇಡರ' ಅಂದರೆ ಯಾರಿಗೂ ಹೆದರದವನು ಎಂದರ್ಥ ಎಂದು ಹೇಳಿದ್ದಾರೆ. ಕ್ರಿ.ಶ.೧೬೭೦ರಲ್ಲಿ ಮೊಗಲ್ ಸೈನ್ಯದಲ್ಲಿ ಎದುರಿಗೆ ಬಂದಾಗ ಬೇಡರ ಜನಾಂಗದ ಸೈನ್ಯ ಸ್ವಲ್ಪ ಪ್ರಮಾಣದಲ್ಲಿ ಇದ್ದರೂ ಕೂಡ ಅವರ ಶೂರತನ ಹಾಗೂ ಸಾಹಸಗಳನ್ನು ಕಂಡಾಗ ಔರಂಗಜೇಬನು "ಏಕ್ ಸತೋನಹಿಡರನೇ ವಾಲಾ ಲೋಕ ಬೇಡರ್ ಲೋಕ್" ಎಂದು ನುಡಿದನು. ಅಂದಿನಿಂದ ಈ ಜನಾಂಗಕ್ಕೆ ಉರ್ದು ಶಬ್ದದಿಂದ 'ಬೇಡರ' ಎಂದು ಕರೆಯುತ್ತಾರೆ. ಬೇಡರ್ ಎಂದರೆ ಮರಾಠಿಯಲ್ಲಿ 'ಎಂದಿಗೂ ಅಳದವನು" ಎಂದರ್ಥವಾಗುವುದು. ಆದ್ದರಿಂದ ಈ ಜನಾಂಗಕ್ಕೆ ಮರಾಠಿಯಲ್ಲಿ 'ಬೇಡರ' ಎಂದು ಕರೆಯುತ್ತಾರೆ. ಛತ್ರಪತಿ ಶಿವಾಜಿ ಕಾಲಕ್ಕೆ ಬೇಡರ ಜನಾಂಗದ ಅನೇಕರು ಸೈನ್ಯದಲ್ಲಿ ಸಹಾಯ ಮಾಡಿದ್ದರಿಂದ ಮಹಾರಾಷ್ಟ್ರದಲ್ಲಿ 'ಬೇಡರ' ಎಂದು ಕರೆಯುತ್ತಾರೆ.

ಜಿಲ್ಲೆಯ ಪ್ರಾಗೈತಿಹಾಸಿಕ ನೆಲೆಗಳು

"ಹಿಂದಿನ ಎಡತೊರೆನಾಡಿನ ಭಾಗವಾಗಿದ್ದ ರಾಯಚೂರು ಜಿಲ್ಲೆಯು ಹಳೆಯ ಶಿಲಾಯುಗದ ಸಂಸ್ಕೃತಿಯಿಂದ ಪ್ರಾರಂಭವಾಗಿ ಬ್ರಿಟಿಷರ ವಿರುದ್ಧ ಹಾಗೂ ಹೈದರಾಬಾದಿನ ನಿಜಾಮನ ಸರಕಾರದ ದಬ್ಬಾಳಿಕೆಯ ವಿರುದ್ಧ ನಡೆದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ರಾಯಚೂರು ಜಿಲ್ಲೆ ಪ್ರಮುಖ ಪಾತ್ರವಹಿಸಿದೆ.

ರಾಯಚೂರು ಪ್ರಾಗೈತಿಹಾಸಿಕ ಅವಶೇಷಗಳ ಗೂಡಾಗಿತ್ತೆಂದು ಬೇರೆ ಬೇರೆ ಹಂತಗಳ ಪ್ರಾಗೈತಿಹಾಸಿಕ ಕುರುಹುಗಳಿಂದ ತಿಳಿದುಬರುತ್ತದೆ. ಪ್ರಾಗೈತಿಹಾಸಿಕ ಗುರುತುಗಳನ್ನು ಮೊದಲ ಬಾರಿಗೆ ಕರ್ನಲ್ ಮೆಡೋಸ್ ಟೇಲರ್, ಇವರು ಬಾಂಬೆ ಬ್ರಾಂಚ್ ಆಫ್ ರಾಯಲ್ ಏಸಿಯೋಟಿಕ್ ಸೊಸೈಟಿ ಎಂಬ ಪುರವಣಿಯಲ್ಲಿ ಬೆಳಕಿಗೆ ತಂದರು. ಈ ಜಿಲ್ಲೆಯ ಅನೇಕ ಭಾಗಗಳಲ್ಲಿ ದೊರೆತ ಶಿಲಾಚಿತ್ರಗಳು, ಶಿಲಾಶಾಸನಗಳು, ಅಳಿದುಳಿದು ನಿಂತಿರುವ ಕೋಟೆ ಕೊತ್ತಲಗಳು ಹಾಗೂ ದೇವಾಲಯಗಳು ಈ ಜಿಲ್ಲೆಯ ಇತಿಹಾಸದ ರಚನೆಯಲ್ಲಿ ಪ್ರಮುಖ ಪಾತ್ರ ವಹಿಸಿವೆ. ರಾಯಚೂರು ಜಿಲ್ಲೆಯನ್ನೊಳಗೊಂಡಂತೆ ಅನೇಕ ಪ್ರದೇಶಗಳನ್ನು ಅನೇಕ ಅರಸು ಮನೆತನಗಳು ಆಳಿದ್ದು ಅವುಗಳಲ್ಲಿ ಮೌರ್ಯರು, ಶಾತವಾಹನರು, ಕದಂಬರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು, ಸೇವುಣರು, ವಿಜಯನಗರದ ಅರಸರು, ಅದಿಲ್‌ಶಾಹಿಗಳು, ಮೊಗಲರು, ನಿಜಾಮರಲ್ಲದೆ, ಮಾಂಡಳಿಕ ಅರಸರಾದ ನೊಳಂಬರು, ಸಿಂದರು, ಹೈಹೆಯ ವಂಶದ ಅರಸರು ಮತ್ತು ನಾಯಕರು ಪ್ರಮುಖರಾಗಿದ್ದಾರೆ.

ಪ್ರಾಗೈತಿಹಾಸಿಕ ಕುರುಹುಗಳು

ಸಾಮಾನ್ಯವಾಗಿ ಪ್ರಾಗೈತಿಹಾಸಿಕ ಕಾಲವೆಂದರೆ ನಮಗೆ ಲಿಖಿತ ದಾಖಲೆ ಸಿಕ್ಕುವವರೆಗೆ ಇರುವ ಕಾಲಾವಧಿಯನ್ನು ಪ್ರಾಗೈತಿಹಾಸಿಕ ಅವಧಿ ಎಂದು ಕರೆಯಲಾಗುತ್ತದೆ. ಅಂದರೆ ಬರೆದಿಡಲ್ಪಟ್ಟ ಇತಿಹಾಸವು ಹುಟ್ಟುವ ಮುನ್ನ ಇದ್ದ ಕರ್ನಾಟಕ ಚರಿತ್ರೆಯೆಂದೇ ಅರ್ಥ. ಇಂತಹ ಕಾಲದಲ್ಲಿ ವ್ಯಕ್ತಿ ಬಂಡೆಗಳ ಆಸರೆಯಲ್ಲಿ, ಗುಹೆಯಲ್ಲಿ, ನದಿಗಳ ದಡದಲ್ಲಿ ವಾಸಿಸುತ್ತಿದ್ದ. ಪ್ರಾಣಿಗಳ ಬೇಟೆಯಿಂದ ತನ್ನ ಆಹಾರವನ್ನು ಗಳಿಸುತ್ತಿದ್ದ. ಪ್ರಾಣಿಗಳ ಚರ್ಮ, ಗಿಡಗಳ ತೊಗಟೆಗಳೇ ಅವನ ವಸ್ತ್ರಗಳಾಗಿದ್ದವು. ಈ ಸಾಧನೆ ಗಳಿಕೆಯಲ್ಲಿ ಕಲ್ಲಿನ ಆಯುಧಗಳನ್ನು ಅಧಿಕವಾಗಿ ಬಳಕೆಯಲ್ಲಿ ತಂದಿದ್ದ. ಆದ್ದರಿಂದ ಮನುಷ್ಯನ ಬದುಕಿನ ಈ ಕಾಲವನ್ನು ನಾವು ಮೂರು ವಿಧಗಳಲ್ಲಿ ಕಾಣಬಹುದಾಗಿದೆ."[೨]

೧. ಹಳೆಯ ಶಿಲಾಯುಗ

"ಕರ್ನಾಟಕದಲ್ಲಿ ಹಳೆಯ ಶಿಲಾಯುಗವು ಕ್ರಿ.ಪೂ.೨೦,೦೦೦ ದಿಂದ ಕ್ರಿ.ಪೂ ೧೦,೦೦೦ ವರ್ಷಗಳವರೆಗೆ ಜಾರಿಯಲ್ಲಿತ್ತು. ಈ ಅವಧಿಯಲ್ಲಿ ಮನುಷ್ಯ ಕಾಡು ಮನುಷ್ಯನಾಗಿದ್ದು, ಅರಣ್ಯದಲ್ಲಿ ಅಲೆದಾಡುತ್ತಾ ಪ್ರಾಣಿಗಳ ಹಸಿಮಾಂಸವನ್ನು ತಿನ್ನುತ್ತಿದ್ದನು.

ಇದರ ಜೊತೆಗೆ ಕಾಡುಗಳಲ್ಲಿ ದೊರೆತ ಹಣ್ಣುಗಳು, ಗಡ್ಡೆಗೆಣಸುಗಳು ಇವನ ಆಹಾರವಾಗಿದ್ದವು ಮತ್ತು ಪ್ರಾಣಿಗಳ ಚರ್ಮ ಮತ್ತು ಗಿಡಗಳ ತೊಗಟೆಗಳೇ ಇವನ ವಸ್ತ್ರಗಳಾಗಿದ್ದವು. ಗುಡ್ಡಗಳ ಗವಿ ಮರದ ಪೊಟರೆಗಳೇ ಇವನ ಮನೆಗಳಾಗಿದ್ದವು.

ಪ್ರಾಗೈತಿಹಾಸಿಕ ನಿವೇಶನಗಳಲ್ಲಿ ಮಸ್ಕಿಯು ಅತ್ಯಂತ ಪ್ರಮುಖವಾದದ್ದು, ಏಕೆಂದರೆ ಅಲ್ಲಿ ೧೭ ನಿವೇಶನಗಳನ್ನು ಕಂಡುಹಿಡಿಯಲಾಗಿದೆ. ಮಸ್ಕಿಯ ಬೆಟ್ಟದ ಗುಹೆಗಳು, ಪಕ್ಕದಲ್ಲಿರುವ ಹಳ್ಳವು ಪ್ರಾಗೈತಿಹಾಸಿಕ ಕಾಲದ ನೆಲೆಯಾಗಿತ್ತೆಂದು ತಿಳಿದುಬರುತ್ತದೆ. ಟೆರೆಕೋಟದ ಪ್ರಾಣಿಚಿತ್ರಗಳು ಕಂಡುಬಂದಿವೆ. ಅಲ್ಲಿ ಮಾನವ ಚಿತ್ರಗಳು ತುಣುಕು ಹಾಗೂ ಗುಂಪುಗಳೊಂದಿಗೆ ಸಹ ಚಿತ್ರಿಸಲಾಗಿದೆ. ಈ ಮಾನವ ಚಿತ್ರಗಳು ಬೇರೆ ಬೇರೆ ಕಾಲಕ್ಕೆ ಸೇರಿದವುಗಳಾಗಿವೆ. ಕೆಲವು ಮಾನವರ ಚಿತ್ರಗಳು ಉತ್ತಮ ವಿನ್ಯಾಸ ಮತ್ತು ಆಭರಣದ ಕಾರ್ಯವನ್ನು ತೋರಿಸುತ್ತವೆ ಹಾಗೂ ಬೆಣಕಲ್ ಎಂಬಲ್ಲಿ ಕೆಲ ವರ್ಣಚಿತ್ರಗಳು ಕಂಡುಬಂದಿವೆ. ಇವುಗಳಲ್ಲಿ ಬೇಟೆಯಾಡುವ ದೃಶ್ಯವನ್ನು ಹೊಂದಿವೆ. ಈ ಮನುಷ್ಯರಲ್ಲಿ ಒಬ್ಬನು ಕೊಡಲಿಯನ್ನು ಹಿಡಿದಿದ್ದಾನೆ. ಅಲ್ಲದೆ ಇಬ್ಬರು ಮನುಷ್ಯರ ಚಿತ್ರ ಮತ್ತು ಕೆಲ ಪ್ರಾಣಿಗಳ ಚಿತ್ರಗಳಿವೆ. ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಗಬ್ಬೂರು ಗ್ರಾಮದಲ್ಲಿ ಪ್ರಾಗೈತಿಹಾಸಿಕ ಕಾಲದಲ್ಲಿ ಕೊರೆದ ರೇಖಾಚಿತ್ರಗಳನ್ನು ಕಾಣಬಹುದಾಗಿದೆ. ಬೆಟ್ಟದ ಮೇಲೆ ಇರುವ ಚಾಚು ಬಂಡೆಗಳ ಒಳ ಮುಖದಲ್ಲಿ ಈ ಕೊರೆದ ರೇಖಾ ಚಿತ್ರಗಳನ್ನು ಕಲ್ಲಿನ ತುದಿಯಿಂದ ತಿದ್ದಿ ಆಳವಾಗಿ ಕೊರೆಯಲಾಗಿದೆ. ಈ ಕೊರದ ರೇಖಾಚಿತ್ರಗಳಲ್ಲಿ ಗೂಳಿ, ಜಿಂಕೆ, ಕೋಣ ಮತ್ತು ಇತರೆ ಪ್ರಾಣಿಗಳ ಚಿತ್ರಗಳನ್ನು ಕಾಣಬಹುದಾಗಿದೆ. ಈ ರೇಖೆಗಳ ಬಳಿ ಬಂಡೆಯ ಮೇಲೆ ಪ್ರಾಗೈತಿಹಾಸಿಕ ಕಾಲದಲ್ಲಿ ಮಾಡಿರಬಹುದಾದ ಕುಳಿಗಳಿವೆ."[೧೩]

ಗಬ್ಬೂರು ಗ್ರಾಮದಿಂದ ಪಶ್ಚಿಮ ಭಾಗದಲ್ಲಿರುವ ಒಂದು ಸಣ್ಣ ಗ್ರಾಮ ಮಲದಕಲ್ಲು. ಈ ಗ್ರಾಮವು ಪ್ರಾಗೈತಿಹಾಸಿಕ ಕಾಲದ ನೆಲೆವೀಡು ಆಗಿತ್ತೆಂಬುದಕ್ಕೆ ಇಲ್ಲಿ ದೊರೆತ ಅನೇಕ ಕುರುಹುಗಳೇ ಸಾಕ್ಷಿ. ಇಲ್ಲಿಯ ಬೆಟ್ಟದಲ್ಲಿ ಅನೇಕ ದೊಡ್ಡ ದೊಡ್ಡ ಬಂಡೆಗಳಲ್ಲಿ ಕುಟ್ಟಿ ಬಿಡಿಸಿದ ರೇಖಾ ಚಿತ್ರಗಳಿವೆ. ಈ ರೇಖಾಚಿತ್ರಗಳಲ್ಲಿ ಹಳೇ ಶಿಲಾಯುಗಕ್ಕೆ ಹಾಗೂ ಹೊಸ ಶಿಲಾಯುಗಕ್ಕೆ ಸಂಬಂಧಪಟ್ಟ ಅನೇಕ ರೇಖಾಚಿತ್ರಗಳಿವೆ. ಒಂದು ದೊಡ್ಡದಾದ ಬಂಡೆಯಲ್ಲಿ ಹಳೇ ಶಿಲಾಯುಗದ ರೇಖಾಚಿತ್ರಗಳಿದ್ದು, ಅದರಲ್ಲಿ ಜಿಂಕೆಯ ತಂಡವೇ ಇದೆ. ಒಂದು ಕುಟುಂಬದಂತಿರುವ ಜಿಂಕೆಯ ತಂಡಕ್ಕೆ ಹುಲಿಯ ಪ್ರವೇಶವಾದಾಗ ಜಿಂಕೆಯ ಸ್ಥಿತಿಯನ್ನು ವಿವರಿಸುವ ದೃಶ್ಯವನ್ನು ಇಲ್ಲಿ ಬಿಡಿಸಲಾಗಿದೆ. ಇಲ್ಲಿ ಒಂದು ದೊಡ್ಡ ಹುಲಿಯನ್ನು ಕೊರೆಯಲಾಗಿದೆ. ಇದರ ಸುತ್ತಲು ಅನೇಕ ಜಿಂಕೆಗಳು ಭಯದಿಂದ ಚೆಲ್ಲಾಪಿಲ್ಲಿಯಾಗಿ ಓಡುತ್ತಿರುವುವು. ಇದಲ್ಲದೆ ಅನೇಕ ಬಂಡೆಗಳಲ್ಲಿ ಬೇರೆ ಬೇರೆಯಾದ ರೀತಿಯಲ್ಲಿ ಎತ್ತುಗಳು ಜಿಂಕೆಗಳ ರೇಖಾಚಿತ್ರಗಳನ್ನು ಬಿಡಿಸಲಾಗಿದೆ. ಕಲ್ಲೂರು ಗ್ರಾಮದ ಎಮ್ಮೆಗುಡ್ಡದ ಹತ್ತಿರ ಸಹ ಈ ಪ್ರಾಗೈತಿಹಾಸಿಕ ಚಿತ್ರಗಳಿವೆ. ಎರಡು ಎಮ್ಮೆಗಳ ಚಿತ್ರಗಳಿದ್ದ ಕಾರಣಕ್ಕಾಗಿ ಆ

ಗುಡ್ಡಕ್ಕೆ "ಎಮ್ಮೆಗುಡ್ಡ" ಎಂಬ ಹೆಸರು ಬಂದಿದೆ. ಲಿಂಗಸೂಗೂರಿನ ತೋಗಲಗುಡ್ಡದಲ್ಲಿ ಅನೇಕ ಚಿತ್ರಗಳು ಕಂಡುಬಂದಿವೆ. ಅವುಗಳಲ್ಲಿ ಒಂದು ಜಿಂಕೆಯು ಒಬ್ಬ ವ್ಯಕ್ತಿಯಿಂದ ಭರ್ಚಿ ಹಿಡಿಯಲ್ಪಟ್ಟು ಆಕ್ರಮಣಕ್ಕೊಳಗಾದಂತೆ ಕೆತ್ತಲಾಗಿದೆ ಹಾಗೂ ಹಿರೇಬೆಣಕಲ್‌ನಲ್ಲಿ ಗೂಳಿಗಳ ಚಿತ್ರ, ಹುಲಿಗಳ ಚಿತ್ರಗಳು ಕಲ್ಲಿನ ಅಡಿಯಲ್ಲಿ ಕಂಡುಬಂದಿವೆ.

೨. ಮಧ್ಯಶಿಲಾಯುಗ:

"ಹಳೆಯ ಮತ್ತು ಹೊಸ ಶಿಲಾಯುಗದ ಮಧ್ಯದಲ್ಲಿ ಬರುವುದೇ ಮೆಸೋಲಿಥಿಕ್ ಯುಗ. ಕರ್ನಾಟಕದಲ್ಲಿ ಮೆಸೋಲಿಥಿಕ್ ಯುಗವು ಸುಮಾರು ಕ್ರಿ.ಪೂ.೧೦,೦೦೦ ಎಂದು ಹೇಳಲಾಗಿದೆ. ಈ ಯುಗವು ಮನುಷ್ಯ ಸ್ವಲ್ಪಮಟ್ಟಿಗೆ ಸುಧಾರಿಸಿದ್ದನು. ಈ ಯುಗದಲ್ಲಿ ನುಣುಪಾಗಿ ಮಾಡಿದ ಕಲ್ಲಿನ ಚಾಕು, ಬೈರಿಗೆ, ಕುರುಷಿ ಮುಂತಾದ ಆಯುಧಗಳನ್ನು ಬಳಸಿದ್ದಾನೆ. ಮಧ್ಯ ಹಳೆಶಿಲಾಯುಗಕ್ಕೆ ಸಂಬಂಧಿಸಿದಂತೆ ದೇವದುರ್ಗ ತಾಲ್ಲೂಕಿನ ಪ್ರಮುಖ ಗ್ರಾಮಗಳಾದ ಅಂಚೆಸೂಗೂರು, ಅಂಜಾಳ, ಕರ್ಕಿಹಳ್ಳಿ, ಕೊಂಚಪಡಿ, ಕೊಂಣಚೆಪ್ಲಿ, ಗೂಗಲ, ಗೋಪಾಲಪುರ, ಚಿಕ್ಕರಾಯಕುಂಪಿ, ಹಿರೇರಾಯಕುಂಪಿ, ದೊಂಡಂಬ್ಲಿ, ಬೆಣಕಲ್ಲು, ಯಾಟಗಲ್ಲು ಇವು ಮಧ್ಯ ಶಿಲಾಯುಗಕ್ಕೆ ಸಂಬಂಧಿಸಿದ ನೆಲೆಗಳಾಗಿದ್ದು, ಇಲ್ಲಿ ವಿವಿಧ ಮಾದರಿಯ ಉಪಕರಣಗಳು ದೊರೆತಿವೆ.

"ರಾಯಚೂರು ಪ್ರದೇಶವನ್ನು ಹೈದ್ರಾಬಾದ್ ನಿಜಾಮನ ಪುರಾತತ್ವ ಇಲಾಖೆಯ ನಿರ್ದೇಶಕರಾದ ಶ್ರೀ.ಜಿ.ಯಾಜಿದಾನಿ ಎಂಬುವರು ಅದೇನ್‌ಹಾಳ್, ಆನೆಹೊಸೂರು, ಗೌಡೂರು, ಹೊನಹಳ್ಳಿ, ಕೂಡೆಕಲ್, ಮಾಚನೂರು, ಮಸ್ಕಿ, ವೆಂಕಟಾಪುರ, ವಂದಹಳ್ಳಿ, ಕಲ್ಲೂರು, ಕವಿತಾಳ್, ಸಿರಿವಾರ, ವಟಗಲ್, ಕಾಡಕುಂದ, ಕುರುಕುಂದಿ, ಸಾಲಗುಂದ ಇನ್ನೂ ಮುಂತಾದ ಪ್ರಾಗೈತಿಹಾಸಿಕ ನಿವೇಶನಗಳನ್ನು ಪತ್ತೆ ಹಚ್ಚಿದ್ದಾರೆ." ಮಸ್ಕಿಯ ಪಶ್ಚಿಮ ದಿಕ್ಕಿನಲ್ಲಿ ಅನೇಕ ಕುಲುಮೆಗಳನ್ನು ಕಂಡುಹಿಡಿಯಲಾಗಿದೆ. ಕಬ್ಬಿಣವನ್ನು ಕರಗಿಸಿ ಆಯುಧಗಳನ್ನು ಮಾಡಿದ ಕುರುಹುಗಳಿವೆ. ಅಲ್ಲಿ ಶಿಲಾಯುಗದ ಮಡಿಕೆಗಳು, ಮಣ್ಣಿನ ಪಾತ್ರೆಗಳು ಕಾಣುತ್ತವೆ. ಕಲ್ಲೂರಿನಲ್ಲಿ ಇತ್ತೀಚೆಗೆ ತಾಮ್ರದ ಕುಲುಮೆಗಳು, ಮುರಿದ ತಾಮ್ರದ ಕೊಡಲಿಗಳನ್ನು, ಸುತ್ತಿಗೆಗಳು, ಒಂದು ತರಹದ ಖನಿಜಗಳು ಮತ್ತು ಸಣ್ಣ ಸಣ್ಣ ಕಲ್ಲಿನ ವಸ್ತುಗಳು ಸಾಕಷ್ಟು ಸಂಖ್ಯೆಯಲ್ಲಿ ಶೋಧಿಸಲ್ಪಟ್ಟಿವೆ. ಅನೇಕ ಸ್ಥಳಗಳು ಬೂದಿದಿಬ್ಬವನ್ನು ಹೊಂದಿದ್ದು, ಈ ಬೂದಿ ದಿಬ್ಬಗಳು ಕಬ್ಬಿಣದ ಅಥವಾ ತಾಮ್ರದ ಅದಿರುಗಳನ್ನು ಹೊಂದಿರುವ ಸ್ಥಳಗಳಲ್ಲಿವೆ. ಇವು ಅವರು ಲೋಹ ಕ್ರಿಯೆಗಳೊಂದಿಗೆ ಹೊಂದಿದ್ದ ಸಂಬಂಧವನ್ನು ಸೂಚಿಸುತ್ತವೆ. ಈಗಲೂ ಈ ದಿಬ್ಬಗಳಲ್ಲಿ ಲೋಹದ ಚಿಕ್ಕ ಚಿಕ್ಕ ವಸ್ತುಗಳು ಸಹ ತೆಗೆಯಲ್ಪಡುತ್ತವೆ. ಇವುಗಳಲ್ಲಿ ಮುಖ್ಯವಾದವುಗಳೆಂದರೆ ಗೌಡೂರು, ಯೆಲ್‌ಗುಂಟಿ, ವಂದಳ್ಳಿ, ಕವಿತಾಳ್ ಪ್ರಮುಖ ಸ್ಥಳಗಳಾಗಿವೆ. ಅಲ್ಲದೆ ಲಿಂಗಸೂಗೂರು ಮತ್ತು ಮುದಗಲ್‌ಗಳಲ್ಲಿ ಪ್ರಾಗೈತಿಹಾಸಿಕ ಕಾಲಕ್ಕೆ ಸೇರಿದ ಕಲ್ಲಿನ ಸೂರುಗಳು ಕಂಡುಬಂದಿವೆ."[೧೪]

೩. ಹೊಸ ಶಿಲಾಯುಗ

"೧೮೮೦ರ ಮಧ್ಯದಲ್ಲಿ ಭಾರತೀಯ ಭೂವಿಜ್ಞಾನ ಸರ್ವೇಕ್ಷಣದ ಭ್ರೋಸ್ ಘುಟೆ ಎಂಬುವರು ರಾಯಚೂರು ಜಿಲ್ಲೆಯ ಭೌಗೋಳಿಕ ಅಧ್ಯಯನದ ಸಮಯದಲ್ಲಿ ಬಹಳ ಸಂಖ್ಯೆಯ ಆಧುನಿಕ ಶಿಲಾಯುಗದ ಸ್ಥಳಗಳನ್ನು ಪತ್ತೆ ಹಚ್ಚಿದರು. ಮಸ್ಕಿ, ವಂದಳ್ಳಿ, ವಟಗಲ್, ಕವಿತಾಳ್ ಮುಂತಾದ ಸ್ಥಳಗಳಲ್ಲಿ ಶಿಲಾಯುಗದ ಗೋರಿಗಳನ್ನು ಕಾಣುತ್ತೇವೆ. ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಗಬ್ಬೂರಿನಲ್ಲಿ ಗೋರಿಗಳಿಂದ ಆವೃತ್ತವಾಗಿರುವ ದಿಬ್ಬವನ್ನು ಕಾಣಬಹುದು. ಆದ್ದರಿಂದ ಇದನ್ನು ನೂತನ ಶಿಲಾಯುಗವೆಂದು ಸೂಚಿಸಬಹುದಾಗಿದೆ. ಇವುಗಳಲ್ಲದೆ ಗಬ್ಬೂರಿನ ಬೆಟ್ಟದಲ್ಲಿ ನೀರಿನ ಬುಗ್ಗೆಯಿದೆ. ಇದರ ಪಕ್ಕದಲ್ಲಿ ಕಪ್ಪು ಶಿಲಾ ಪದರಿನ ಅವಶೇಷವನ್ನು ಕಾಣಬಹುದು. ಗಬ್ಬೂರಿನ ನಾಗರ ಬೆಟ್ಟದ ಬಳಿ ಮಣ್ಣಿನ ಮಡಿಕೆ ಕುಡಿಕೆ ಹಾಗೂ ಗುಹೆಗಳನ್ನು ಕಾಣಬಹುದಾಗಿದೆ."[೧೩]

ಮಲದಕಲ್ಲು ಬೆಟ್ಟದಲ್ಲಿ ಕೆಲವು ರೇಖಾಚಿತ್ರಗಳು ಹೊಸ ಶಿಲಾಯುಗಕ್ಕೆ ಸಂಬಂಧಿಸಿವೆ. ಅದರಲ್ಲಿ ಒಂದು ಎತ್ತು ಆಧುನಿಕ ಯುಗದ ರೀತಿಯಲ್ಲಿ ಬಿಡಿಸಿದೆ. ಮತ್ತೊಂದು ಬಂಡೆಯಲ್ಲಿ ಮೂರು ಎತ್ತುಗಳನ್ನು ಬಿಡಿಸಲಾಗಿದೆ. ಮಸರಕಲ್ಲಿನ ಬೆಟ್ಟದಲ್ಲಿ ೧೦-೧೬ನೇ ಶತಮಾನದ ಕೆಲವು ರೇಖಾಚಿತ್ರಗಳಿವೆ. ಒಂದು ಈಶ್ವರ ಹಾಗೂ ಆಂಜನೇಯ ಶಿಲ್ಪಗಳಿವೆ. ಮತ್ತೊಂದು ಪದ್ಮಾಸನದಲ್ಲಿ ಕುಳಿತಿರುವ ರೇಖಾಚಿತ್ರಗಳಿವೆ. ಈ ಎಲ್ಲಾ ಅಂಶಗಳಿಂದ ರಾಯಚೂರು ಜಿಲ್ಲೆಯ ಅನೇಕ ಪ್ರದೇಶಗಳು ಪ್ರಾಗೈತಿಹಾಸಿಕ ನೆಲೆಗಳಾಗಿದ್ದವು ಎಂದು ತಿಳಿದುಬರುತ್ತದೆ. ಇನ್ನೂ ಈ ಜಿಲ್ಲೆಯ ಪ್ರಾಗೈತಿಹಾಸಿಕ ಸ್ಥಳಗಳ ಮೇಲೆ ಹೆಚ್ಚಿನ ಸಂಶೋಧನೆ ನಡೆಯಬೇಕಾಗಿದೆ.

೨.೨ ಭೌಗೋಳಿಕ ಹಿನ್ನೆಲೆ

"ಕರ್ನಾಟಕ ರಾಜ್ಯದ ಉತ್ತರ ಭಾಗದಲ್ಲಿರುವ ಪ್ರಮುಖ ಜಿಲ್ಲೆ ರಾಯಚೂರು ರಾಜ್ಯದ ೧೮ನೇ ದೊಡ್ಡ ಜಿಲ್ಲೆ ಎಂಬ ಖ್ಯಾತಿಯಿದೆ. ಈ ಜಿಲ್ಲೆಯು ಐದು ತಾಲೂಕುಗಳನ್ನು ಹೊಂದಿದೆ. ರಾಯಚೂರು, ಸಿಂಧನೂರು, ದೇವದುರ್ಗ, ಲಿಂಗಸ್ಗೂರು ಮತ್ತು ಮಾನವಿ. ಈ ಜಿಲ್ಲೆಯು ರಾಜ್ಯದ ರಾಜಧಾನಿಯಿಂದ ೪೮೯ ಕಿ.ಮೀ. ದೂರದಲ್ಲಿದೆ. ರಾಯಚೂರು ಜಿಲ್ಲೆಯಲ್ಲಿ ೨೦೧೨-೧೩ ರಲ್ಲಿ ಭೌಗೋಳಿಕ ಪ್ರದೇಶ ೮.೩೫ ಲಕ್ಷ ಹೆಕ್ಟರು ಆಗಿದ್ದು, ಆ ಪಕಿ ಕೃಷಿ ಸಾಗುವಳಿಗೆ ಬಳಕೆಯಾದ ೬.೭೯.೮೯೫ ಹೆಕ್ಟರ್ ಮತ್ತು ಬೀಳು ಭೂಮಿ ೨.೧೯ ಲಕ್ಷ ಆಗಿದೆ. ರಾಯಚೂರು ದೋ-ಆಬ್ ಎಂದು ಜನಪ್ರಿಯ ತುಂಗಾಭದ್ರ, ಕೃಷ್ಣಾ ನದಿಗಳು ಜಿಲ್ಲೆಯ ಜೀವನಾಡಿ. ಜನವರಿಯಿಂದ ಸೆಪ್ಟಂಬರ್‌ವರೆಗೆ ೫೦ ಸೆ.ಮೀ. ವಾಡಿಕೆ ಮಳೆ ಬೀಳುತ್ತದೆ. ಆದರೆ ಇತ್ತೀಚೆಗೆ ಮಳೆಯ ಪ್ರಮಾಣ ಕಡಿಮೆಯಾಗಿದೆ. ಕೃಷಿ ಇಲಾಖೆಯ ಪ್ರಕಾರ ೨೦೧೨ ರ ಮುಂಗಾರಿನಲ್ಲಿ ೩ ಲಕ್ಷ ಹೆಕ್ಟರ್ ಬಿತ್ತನೆ ಗುರಿಯಿದ್ದರೂ, ಮಳೆಯ ಕೊರತೆಯಿಂದ ೨.೧೨ ಲಕ್ಷ ಹೆಕ್ಟರ್‌ನಷ್ಟೆ ನೋಡಬಹುದಾಗಿದೆ.

ಜಿಲ್ಲೆಯ ವಿಸ್ತೀರ್ಣ : ೫.೫೫೯ ಚ.ಕಿ.ಮೀ

ಜನಸಂಖ್ಯೆ : ೧೯.೨೪.೭೭೩. ೨೦೧೧ ಜನಗಣತಿಯ ಪ್ರಕಾರ

ಸಾಕ್ಷರತೆಯ ಪ್ರಮಾಣ : ಶೇ ೬೦.೪೪

ಲಿಂಗಾನುಪಾತ : ೯೯೭/೧೦೦೦

ನೈಸರ್ಗಿಕ ಸಂಪತ್ತು : ೧೮.೧೬೨ ಹೆಕ್ಟರು ಅರಣ್ಯ"[೧೫]

ಜಲ ಸಂಪತ್ತು

ಕರ್ನಾಟಕದ ಜೀವನದಿಗಳಲ್ಲಿ ಒಂದಾಗಿರುವ ಕೃಷ್ಣನದಿಯು ಉತ್ತರ ಕರ್ನಾಟಕದ ಭಾಗಕ್ಕೆ ಅತೀ ಉಪಯುಕ್ತವಾದ ನದಿಯಾಗಿದೆ. ಇದು ಪವಿತ್ರ ನದಿಯೆಂದು ಸ್ಥಳೀಯರಲ್ಲಿ ಇದಕ್ಕೆ ಹಿರೆಹೊಳೆ ಎಂಬ ಹೆಸರಿದೆ. ಸಹ್ಯಾದ್ರಿ ಶ್ರೇಣಿಯಲ್ಲಿ ಮಹಾರಾಷ್ಟ್ರದ ಸತಾರ ಜಿಲ್ಲೆಯಲ್ಲಿ ಹುಟ್ಟಿ ರಾಜ್ಯದ ಬೆಳಗಾವಿ ಜಿಲ್ಲೆಯ ಮೂಲಕ ಕರ್ನಾಟಕವನ್ನು ಪ್ರವೇಶಿಸುವುದು. ಅಥಣಿ ತಾಲೂಕಿನ ವಾಯುವ್ಯದ ಅಂಚಿನಲ್ಲಿ(ಖಾನವಾಡ) ಇಲ್ಲಿಂದ ಬೆಳಗಾವಿ, ವಿಜಾಪುರ, ಯಾದಗಿರಿ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಹರಿದು ರಾಯಚೂರು ತಾಲೂಕಿನ ಈಶಾನ್ಯದಲ್ಲಿರುವ ಬುಡದಿಪಾಡ್ ಗ್ರಾಮದ ಬಳಿ ರಾಜ್ಯದ ಗಡಿಯನ್ನು ದಾಟುತ್ತದೆ. ರಾಜ್ಯದ ಪ್ರಮುಖ ನೀರಾವರಿ ಯೋಜನೆಯಾದ ಕೃಷ್ಣ ಮೇಲ್ದಂಡೆ ಯೋಜನೆ ರಾಯಚೂರು ಜಿಲ್ಲೆಯ ದೇವದುರ್ಗ, ಲಿಂಗಸ್ಗೂರು ತಾಲೂಕುಗಳಿಗೆ ಕಾಲುವೆಗಳ ಮುಖಾಂತರ ನೀರಾವರಿ ಸೌಲಭ್ಯವನ್ನು ಒದಗಿಸುತ್ತದೆ. ಜೊತೆಗೆ ಲಿಂಗಸ್ಗೂರು, ದೇವದುರ್ಗ ತಾಲೂಕುಗಳು ನದಿಯ ಪಕ್ಕದಲ್ಲಿರುವುದರಿಂದ ಪಂಪ್‌ಸೆಟ್‌ಗಳ ಮುಖಾಂತರ ಜಮೀನುಗಳಿಗೆ ನೀರಾವರಿ ಸೌಲಭ್ಯ ಒದಗಿಸಲಾಗುತ್ತದೆ.

ತುಂಗಾಭದ್ರ ಆಣೆಕಟ್ಟು

ರಾಜ್ಯದ ಕೊಪ್ಪಳ, ಬಳ್ಳಾರಿ ಮತ್ತು ರಾಯಚೂರು ಜಿಲ್ಲೆಗಳು ಬರಗಾಲಕ್ಕೆ ಹೆಸರುವಾಸಿಯಾಗಿವೆ. ಇಲ್ಲಿನ ಜನರ ಬರಗಾಲದ ಬವಣೆಯನ್ನು ತಪ್ಪಿಸಲು ೧೯೪೫ರಲ್ಲಿ ಹಿಂದಿನ ಮದ್ರಾಸ್ ಮತ್ತು ನಿಜಾಮ್ ಸರ್ಕಾರಗಳು ಜಂಟಿಯಾಗಿ ತುಂಗಾಭದ್ರ ಯೋಜನೆಯನ್ನು ಪ್ರಾರಂಭಿಸಿದವು. ೧೯೫೩ರಲ್ಲಿ ರಾಜ್ಯಗಳ ಪುನರ್‌ವಿಂಗಡಣೆ ನಂತರ ಆಂಧ್ರಪ್ರದೇಶ ಮೈಸೂರು ರಾಜ್ಯಗಳ ಜಂಟಿ ಪ್ರಯತ್ನದಲ್ಲಿ ೧೯೫೬ರಲ್ಲಿ ಯೋಜನೆ ಪೂರ್ಣಗೊಂಡಿತು. ಈ ಯೋಜನೆಯ ಫಲಶೃತಿಯಾಗಿ ಲಿಂಗಸ್ಗೂರು, ಸಿಂಧನೂರು ಮತ್ತು ಮಾನವಿ ತಾಲೂಕುಗಳು ನೀರಾವರಿ ಸೌಲಭ್ಯವನ್ನು ಪಡೆದುಕೊಂಡವು. ಜೊತೆಗೆ ಈ ತಾಲೂಕಿಗೆ ಹೊಂದಿಕೊಂಡಿರುವ ನದಿ ಅನೇಕ ಪಂಪ್‌ಸೆಟ್‌ಗಳ ಮುಖಾಂತರ ನೀರಾವರಿ ಸೌಲಭ್ಯ ಪಡೆದುಕೊಂಡಿವೆ.

ಕೃಷಿ

ಒಂದು ಪ್ರದೇಶದ ಆರ್ಥಿಕ ವ್ಯವಸ್ಥೆಯನ್ನು ನಿರ್ವಹಿಸುವಲ್ಲಿ ಕೃಷಿ ಅಥವಾ ಒಕ್ಕಲುತನ ಬಹು ಮಹತ್ವದ ಪಾತ್ರವನ್ನು ವಹಿಸುತ್ತವೆ. ಕೋಟಿ ವಿದ್ಯೆಗಿಂತಲೂ ಮೇಟಿ ವಿದ್ಯೆ ಮಿಗಿಲು ಎಂದು ಸರ್ವಜ್ಞನ ನುಡಿಯಂತೆ ಒಕ್ಕಲುತನದ ಮಹತ್ವವನ್ನು ಬಹಳ ಹಿಂದೆಯೇ ಒತ್ತಿ ಹೇಳಿರುವನು. ವ್ಯವಸಾಯಕ್ಕೆ ಪೂರಕವಾಗಿ ಬೇಕಾಗುವ ಅನೇಕ

ಅತ್ಯವಶ್ಯಕಗಳಲ್ಲಿ ಪ್ರಮುಖವಾಗಿ ನೀರಾವರಿಯು ಆರ್ಥಿಕ ಅಭಿವೃದ್ಧಿಯನ್ನು ಆಗುವಲ್ಲಿ ಗಮನಾರ್ಹ ಪಾತ್ರವಹಿಸಿದೆ. ಇತ್ತೀಚೀನ ವರ್ಷಗಳಲ್ಲಿ ಸಾಂಪ್ರದಾಯಿಕ ವ್ಯವಸಾಯವು ವಾಣಿಜ್ಯಕರಣಕ್ಕೆ ವಾಲುತ್ತಿರುವುದನ್ನು ಕಾಣಬಹುದಾಗಿದೆ. ವ್ಯವಸಾಯದೊಂದಿಗೆ ಪೂರಕ ಕಸುಬುಗಳಾಗಿ ಪಶುಪಾಲನೆ, ತೋಟಗಾರಿಕೆ, ಹೈನುಗಾರಿಕೆ ಮತ್ತು ರೇಷ್ಮೆ ವ್ಯವಸಾಯ ಪ್ರಾರಂಭಗೊಂಡು ವ್ಯವಸಾಯ ಕಕ್ಷೆಯನ್ನು ವಿಸ್ತಾರಗೊಳಿಸಿರುವುದು ಜಿಲ್ಲೆಯಲ್ಲಿ ಮಳೆ ಮತ್ತು ಕೃಷಿ ಉತ್ಪಾದನೆಯ ಮೇಲೆ ಸಂಬಂಧ ಹೊಂದಿದೆ. ಹೆಚ್ಚಿನ ಪ್ರಮಾಣದಲ್ಲಿ ಇಳುವರಿಯ ಮೇಲೆ ಪ್ರಭಾವವನ್ನು ಬೀರುವ ಅಂಶಗಳಾಗಿರುತ್ತವೆ. ಸಾಗುವಳಿ ಪ್ರದೇಶ ಬಹುತೇಕ ಅರ್ಧದಷ್ಟು ಪ್ರದೇಶವು ಮಳೆಯಾಶ್ರಿತವಾಗಿರುವುದರಿಂದ ಮಳೆ ಮತ್ತು ಅದರ ಹಂಚಿಕೆಯ ವಿಧಾನದ ಮೇಲೆ ಕೃಷಿ ಉತ್ಪಾದನೆ ನಿರ್ಧಾರವಾಗಲಿದೆ.

ರಾಯಚೂರು ಜಿಲ್ಲೆಯಲ್ಲಿ ಬೆಳೆಯುವ ಬೆಳೆಗಳು

ಭತ್ತ: ರಾಯಚೂರು ಜಿಲ್ಲೆಯಲ್ಲಿ ಭತ್ತದ ಬೆಳೆಯನ್ನು ೨೪ ಸಾವಿರ ಹೆಕ್ಟರ್‌ಗಳಲ್ಲಿ ಬೆಳೆಯಲಾಗುತ್ತದೆ. ಭತ್ತ ಬೆಳೆಯುವಲ್ಲಿ ಸಿಂಧನೂರು, ಮಾನವಿ ಭತ್ತದ ಕಣಜ ಎಂದು ಹೆಸರುವಾಸಿಯಾಗಿವೆ. ಭತ್ತದ ಬೆಳೆಯಲ್ಲಿ ಆಧುನಿಕ ಬೇಸಾಯ ಕ್ರಮಗಳ ಅಳವಡಿಕೆಯಿಂದ ಸರಾಸರಿ ಪ್ರತಿ ೫೦ ರಿಂದ ೫೫ ಚೀಲ(ಪ್ಯಾಕೇಟ್) ಇಳುವರಿಯನ್ನು ನಿರೀಕ್ಷಿಸಬಹುದು. ಆದರೆ ಸದ್ಯದ ಸರಾಸರಿ ಇಳುವರಿ ಈ ಜಿಲ್ಲೆಯಲ್ಲಿ ೨೫ ರಿಂದ ೩೦ ಚೀಲ ಮಾತ್ರ ಆಗಿರುತ್ತದೆ.

ಜೋಳ: ರಾಜ್ಯದಲ್ಲಿ ವಿಜಾಪುರ, ಕಲಬುರಗಿ ಜಿಲ್ಲೆಯನ್ನು ಬಿಟ್ಟರೆ ರಾಯಚೂರು ಜಿಲ್ಲೆಯಲ್ಲಿ ಹೆಚ್ಚಿನ ಪ್ರದೇಶದಲ್ಲಿ ಜೋಳವನ್ನು ಬೆಳೆಯಲಾಗುತ್ತದೆ. ಇಲ್ಲಿಯ ಕೆಲವು ತಾಲೂಕುಗಳಲ್ಲಿ ಜೋಳವನ್ನು ಮಳೆಯ ಆಶ್ರಯದಲ್ಲಿ ಬೆಳೆಯಲಾಗುತ್ತಿದ್ದು ರಾಯಚೂರು, ದೇವದುರ್ಗ, ಲಿಂಗಸ್ಗೂರು ಮತ್ತು ಮಾನವಿ ತಾಲೂಕುಗಳಲ್ಲಿ ಹೆಚ್ಚಿನ ಪ್ರದೇಶದಲ್ಲಿ ಜೋಳವನ್ನು ಬೆಳೆಯಲಾಗುತ್ತದೆ. ಜೋಳವನ್ನು ಮುಖ್ಯವಾಗಿ ಹಿಂಗಾರು ಬೆಳೆಯಾಗಿ ಮಳೆಯಾಶ್ರಯದಲ್ಲಿ ಬೆಳೆಯಲಾಗುತ್ತದೆ. ಈಗ ಜಿಲ್ಲೆಯಲ್ಲಿ ಅಂದಾಜು ಮಾಡಿರುವ ಜೋಳದ ಧಾನ್ಯವಾದ ಇಳುವರಿಯು ಹೆಕ್ಟರ್‌ಗೆ ಹತ್ತು ಕ್ವಿಂಟಲ್ ಆಗಿದೆ. ಇಳುವರಿಯು ಹೆಚ್ಚಿಸಲು ಕೆಲವರು ಆಧುನಿಕ ಬೇಸಾಯ ಕ್ರಮಗಳನ್ನು ಅನುಸರಿಸಲು ಮುಂದಾಗುತ್ತಿದ್ದಾರೆ, ಇನ್ನೂ ಕೆಲವರು ವಾಣಿಜ್ಯ ಬೆಳೆಗಳ ಮೊರೆ ಹೋಗುತ್ತಿದ್ದಾರೆ.

ಸಜ್ಜೆ: ರಾಜ್ಯದಲ್ಲಿ ಅತೀ ಹೆಚ್ಚು ಸಜ್ಜೆ ಬೆಳೆಯುವ ಪ್ರದೇಶವೆಂದರೆ ರಾಯಚೂರು ಜಿಲ್ಲೆಯಾಗಿದೆ(೮೩ ಸಾವಿರ ಹೆಕ್ಟರ್‌ನಲ್ಲಿ) ಸಜ್ಜೆ ಬೆಳೆಯಲಾಗುತ್ತದೆ. ರಾಯಚೂರು ಜಿಲ್ಲೆಯಲ್ಲಿ ಸಜ್ಜೆ ಬೆಳೆಯು ಸರಾಸರಿ ಇಳುವರಿ ಹೆಕ್ಟರ್‌ಗೆ ಎಂಟು ಕ್ವಿಂಟಲ್ ಬೆಳೆಯುತ್ತಾರೆ. ಲಿಂಗಸ್ಗೂರು, ದೇವದುರ್ಗ, ಮಾನವಿ, ರಾಯಚೂರು ತಾಲೂಕುಗಳ ಹೆಚ್ಚಿನ ಪ್ರದೇಶದಲ್ಲಿ ಸಜ್ಜೆ ಬೆಳೆಯನ್ನು ಬೆಳೆಯಲಾಗುತ್ತದೆ.

ತೊಗರಿ: ತೊಗರಿಯನ್ನು ಕಲಬುರಗಿ, ಯಾದಗಿರಿ ಜಿಲ್ಲೆಯನ್ನು ಹೊರತು ಪಡಿಸಿದರೆ ಹೆಚ್ಚಿನ ಪ್ರಮಾಣದಲ್ಲಿ ತೊಗರಿ ಬೆಳೆಯನ್ನು ರಾಯಚೂರು ಜಿಲ್ಲೆಯಲ್ಲಿ ಬೆಳೆಯಲಾಗುತ್ತದೆ. ಇತ್ತಿಚೀನ ಕೆಲವು ವರ್ಷಗಳಲ್ಲಿ ಈ ಭಾಗದಲ್ಲಿ ಉಂಟಾದ ಸಮೃದ್ಧವಾದ ತೊಗರಿ ಬೆಳೆಯಿಂದ ಬೇಡಿಕೆಯ ಕೊರತೆಯಿಂದ ಮತ್ತು ಇನ್ನು ಕೆಲವು ಕಾರಣಗಳಿಂದ ಜಿಲ್ಲೆಯಲ್ಲಿ ತಾತ್ಕಾಲಿಕ ಕುಸಿತ ಉಂಟಾಗಿರುವುದು ಕಂಡುಬರುತ್ತದೆ.

ಕಡಲೆ: ಕಡಲೆ ಬೆಳೆಯು ಉತ್ತರ ಕರ್ನಾಟಕದ ಬರಪಿಡಿತ ಪ್ರದೇಶವೆಂದು ಖ್ಯಾತಿ ಪಡೆದಿರುವ ಭೂಪ್ರದೇಶದಲ್ಲಿ ಅತೀ ಮಹತ್ವದ ದ್ವಿದಳ ಧಾನ್ಯ ಬೆಳೆಯಲಾಗುತ್ತದೆ. ರಾಯಚೂರು ಜಿಲ್ಲೆಯಲ್ಲಿ ಕಪ್ಪು ಮಣ್ಣಿನಲ್ಲಿ ಕಡಲೆ ಬೆಳೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಬೆಳೆಯಲಾಗುತ್ತದೆ. ಕಡಲೆ ಬೆಳೆಯನ್ನು ವರ್ಷದಲ್ಲಿ ಒಂದೇ ಬೆಳೆಯಾಗಿ ಬೆಳೆಯುತ್ತಿದ್ದು ಈ ಬೆಳೆಯನ್ನು ಜೋಳ, ಸಜ್ಜೆ ಬೆಳೆಗಳಿಗೆ ಪರಿವರ್ತಿತ ಬೆಳೆಯಾಗಿ ಬೆಳೆಯುತ್ತಾರೆ.

ಶೇಂಗಾ: ಈ ಬೆಳೆಯನ್ನು ರಾಯಚೂರು ಜಿಲ್ಲೆಯಲ್ಲಿ ಹೆಚ್ಚಿನ ಪ್ರದೇಶದಲ್ಲಿ ಈ ಬೆಳೆ ಬೆಳೆಯಲಾಗುತ್ತದೆ. ಈ ಜಿಲ್ಲೆಯ ಹೆಚ್ಚಿನ ಪ್ರದೇಶದಲ್ಲಿ ನೀರಾವರಿ ಬೆಳೆಯನ್ನಾಗಿ ಬೆಳೆಯಲಾಗುತ್ತದೆ. ಈ ಬೆಳೆಯ ಇಳುವರಿ ಸರಾಸರಿ ಹೆಕ್ಟರಿಗೆ ಒಂಭತ್ತು ಕ್ವಿಂಟಲ್ ಆಗಿದೆ. ಲಿಂಗಸ್ಗೂರು, ದೇವದುರ್ಗ ತಾಲೂಕುಗಳಲ್ಲಿ ಹೆಚ್ಚಿನ ಪ್ರದೇಶದಲ್ಲಿ ಶೇಂಗಾ ಬೆಳೆಯನ್ನು ಬೆಳೆಯಲಾಗುತ್ತದೆ. ಇತ್ತಿಚೀನ ಇಳುವರಿ ಕೆಲವರು ಆಧುನಿಕ ಬೇಸಾಯ ಕ್ರಮಗಳನ್ನು ಅನುಸರಿಸುವುದರ ಜೊತೆಗೆ ಇತರೆ ಕ್ರಮಗಳನ್ನು ಕೈಗೊಳ್ಳುತ್ತಿದ್ದಾರೆ.

ಸೂರ್ಯಕಾಂತಿ: ರಾಯಚೂರು ಜಿಲ್ಲೆಯ ಕೆಲವು ಪ್ರದೇಶಗಳಲ್ಲಿ ಸೂರ್ಯಕಾಂತಿಯನ್ನು ಬೆಳೆಯಲಾಗುತ್ತದೆ. ಜಿಲ್ಲೆಯಲ್ಲಿ ಸೂರ್ಯಕಾಂತಿ ಬೆಳೆಯ ಸರಾಸರಿ ಇಳುವರಿಯು ಹೆಕ್ಟರಿಗೆ ೩.೬ ಕ್ವಿಂಟಲ್ ಆಗಿದೆ. ಸೂರ್ಯಕಾಂತಿ ಬೆಳೆಯು ಇತ್ತಿಚೀಗೆ ಪರಿಚಯವಾಗಿದ್ದು ರೈತರಲ್ಲಿ ಬಹು ಜನಪ್ರಿಯವಾಗಿದೆ. ಈ ತಳಿಯನ್ನು ನೀರಾವರಿಯಲ್ಲಿ ಬೆಳೆಯಲು ಶಿಫಾರಸ್ಸು ಮಾಡಲಾಗಿದೆ. ಈ ಎಲ್ಲ ತಳಿಗಳನ್ನು ಮುಂಗಾರು ಮತ್ತು ಹಿಂಗಾರು ಹಂಗಾಮಿನಲ್ಲು ಸಹ ಖುಷ್ಕಿ ಬೆಳೆಯನ್ನಾಗಿ ಬೆಳೆಯಬಹುದಾಗಿದೆ. ಈ ಬೆಳೆಗೆ ಹವಾಗುಣದಲ್ಲಾಗುವ ಬದಲಾವಣೆಗಳಿಗೆ ಹೊಂದಿಕೊಂಡು ಬೆಳೆಯುವ ಶಕ್ತಿ ಇರುವುದರಿಂದ ವರ್ಷದ ಎಲ್ಲ ಕಾಲಗಳಲ್ಲಿಯೂ ಬೆಳೆಯಬಹುದಾಗಿದೆ. ಇದಕ್ಕೆ ಶುಷ್ಕ ವಾತಾವರಣವನ್ನು ತಡೆದುಕೊಳ್ಳುವ ಶಕ್ತಿ ಇರುವುದರಿಂದ ಸಾಧಾರಣ ಭೂಮಿಯಲ್ಲೂ ಸಹ ಯಶಸ್ವಿಯಾಗಿ ಬೆಳೆಯಬಹುದು.

ಹತ್ತಿ: ರಾಯಚೂರು ಜಿಲ್ಲೆಯಲ್ಲಿ ಹತ್ತಿಯನ್ನು ವಾಣಿಜ್ಯ ಬೆಳೆಯಾಗಿ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯಲಾಗುತ್ತದೆ. ಈ ಬೆಳೆಯನ್ನು ಕಪ್ಪು ಮಣ್ಣಿನ ಪ್ರದೇಶದಲ್ಲಿ ಬೆಳೆಯುತ್ತಾರೆ. ಹತ್ತಿಯನ್ನು ನೀರಾವರಿ ಭೂಮಿ ಮತ್ತು ಒಣಭೂಮಿಯಲ್ಲಿ ಬೆಳೆಯತ್ತಾರೆ. ಈ ಬೆಳೆಯನ್ನು ಬೆಳೆಯುವ ರೈತರು ಆರ್ಥಿಕವಾಗಿ ಸ್ವಲ್ಪ ಮಟ್ಟಿಗೆ ಸದೃಢವಾಗುತ್ತಿದ್ದಾರೆ.

ಮೆಣಸಿನಕಾಯಿ: ಜಿಲ್ಲೆಯ ದೇವದುರ್ಗ, ಲಿಂಗಸ್ಗೂರು ತಾಲೂಕುಗಳಲ್ಲಿ ಮೆಣಸಿನಕಾಯಿ ಕಪ್ಪು ಮಣ್ಣಿನ ಭೂಮಿಯಲ್ಲಿ ಬೆಳೆಯುತ್ತಿದ್ದಾರೆ. ಈ ಬೆಳೆ ರೈತರಿಗೆ ತುಂಬಾ ಲಾಭದಾಯಕವಾದ ಬೆಳೆಯಾಗಿದೆ.

ಹಟ್ಟಿ ಚಿನ್ನದ ಗಣಿ

"ಪ್ರಾಚೀನ ಕಾಲದಿಂದಲೂ ಭಾರತವು ಚಿನ್ನದ ಗಣಿಗಾರಿಕೆಗೆ ಹೆಸರುವಾಸಿಯಾಗಿದೆ. ಅದರಲ್ಲೂ ಕರ್ನಾಟಕ ರಾಜ್ಯ ಚಿನ್ನದ ಕಾಣಿಕೆಯಿಂದ ಉನ್ನತ ಸ್ಥಾನದಲ್ಲಿದೆ. ಕನ್ನಡ ನಾಡು ಚಿನ್ನದ ಬೀಡು ಎಂಬ ಅಭಿಧಾನಕ್ಕೂ ಪಾತ್ರವಾಗಿದೆ. ಚಿನ್ನದ ಉತ್ಪಾದನೆ ಎಂದೊಡನೆ ಕೋಲಾರದ ಚಿನ್ನದ ಗಣಿಗಳು ಮತ್ತು ಹಟ್ಟಿ ಚಿನ್ನದ ಗಣಿಗಳೇ ನಮಗೆ ಮೊದಲು ನೆನಪಾಗುವವು. ಶತಮಾನ ಕಾಲ ಚಿನ್ನ ಉತ್ಪಾದನೆ ಮಾಡಿದ ಕೋಲಾರದ ಚಿನ್ನದ ಗಣಿಗಳು ಉತ್ಪಾದನೆಯಲ್ಲಿ ಈಗ ನಿಷ್ಕ್ರಿಯವಾಗಿವೆ. ಕರ್ನಾಟಕಕ್ಕೆ ಖ್ಯಾತಿ ತಂದಿರುವ ಹಲವಾರು ಹೆಮ್ಮೆಗಳಲ್ಲಿ ಹಟ್ಟಿ ಚಿನ್ನದ ಗಣಿ ಅತ್ಯಂತ ಪ್ರಮುಖವಾದುದು. ರಾಯಚೂರು ಜಿಲ್ಲೆ ಲಿಂಗಸೂಗೂರು ತಾಲ್ಲೂಕಿನಲ್ಲಿರುವ ಹಟ್ಟಿಯಲ್ಲಿ ಅಶೋಕ ಚಕ್ರವರ್ತಿ ಆಳ್ವಿಕೆಯ ಕಾಲಕ್ಕಿಂತಲೂ ಮೊದಲೇ ಚಿನ್ನದ ಗಣಿಗಾರಿಕೆ ನಡೆದ ಬಗ್ಗೆ ಸಾಕ್ಷ್ಯಾಧಾರಗಳಿವೆ."[೧೬]

ದಾಖಲೆಯ ಚಿನ್ನದ ಉತ್ಪಾದನೆ

೨೦೦೪ರ ಮೇ ತಿಂಗಳಲ್ಲಿ ೩೯೫ ಕೆ.ಜಿ. ಅತೀ ಹೆಚ್ಚಿನ ಚಿನ್ನದ ಉತ್ಪಾದನೆ ಮಾಡಿ ದಾಖಲೆ ನಿರ್ಮಿಸಿತು. ೨೦೦೧ರಲ್ಲಿ ೧೭೯೫ ಕಿಲೋ ಚಿನ್ನ ಉತ್ಪಾದಿಸುತ್ತಿದ್ದ ಕಂಪನಿಯು ೨೦೦೫ರಲ್ಲಿ ೩೪೮೪ ಕಿಲೋ ಚಿನ್ನ ಉತ್ಪಾದಿಸುವ ಮೂಲಕ ಉತ್ಪಾದನೆಯಲ್ಲಿ ದ್ವಿಗುಣ ಹೆಚ್ಚಳ ಸಾಧಿಸಿ ಇನ್ನೊಂದು ಚಾರಿತ್ರಿಕ ದಾಖಲೆಯನ್ನು ನಿರ್ಮಿಸಿದೆ. ಇದು ಈ ಕಂಪನಿಯ ಅಭೂತಪೂರ್ವ ಸಾಧನೆಯೂ ಹೌದು. ನಿಜವಾದ ಅರ್ಥದಲ್ಲಿ ಸುವರ್ಣಾಕ್ಷರಗಳಲ್ಲೇ ಇದನ್ನು ದಾಖಲಿಸಬೇಕು. ರಾಷ್ಟ್ರದಲ್ಲಿಯೇ ಚಿನ್ನದ ಉತ್ಪಾದನೆಯಲ್ಲಿ ಮುಂಚೂಣಿಯಲ್ಲಿದೆ ಎಂಬುದು ಗಮನಾರ್ಹ ಅಂಶವಾಗಿದೆ.

ಹಣಕಾಸಿನ ಸ್ಥಿತಿಗತಿ

ಹಿಂದಿನ ವರ್ಷಗಳಲ್ಲಿ ಹೆಚ್ಚುತ್ತಿರುವ ಕಾರ್ಮಿಕರ ವೇತನ ಹಾಗೂ ಉತ್ಪಾದನಾ ವೆಚ್ಚದಿಂದ ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಚಿನ್ನದ ಬೆಲೆ ಕುಸಿತದಿಂದ ಮತ್ತು ಸಂಪೂರ್ಣ ತಗ್ಗಿದ ಉತ್ಪಾದನೆಯಿಂದ ೧೯೯೭-೯೮ ರಿಂದ ೨೦೦೦-೦೧ರವರೆಗಿನ ಅವಧಿಯಲ್ಲಿ ನಷ್ಟಕ್ಕೆ ಸಿಲುಕಿ ಕಂಪನಿ ಮುಚ್ಚುವ ಭೀತಿಗೆ ಒಳಗಾಗಿತ್ತು. ಆದರೆ ಮುಕ್ತ ಮಾರುಕಟ್ಟೆಯಲ್ಲಿ ಚಿನ್ನದ ಬೆಲೆ ಏರಿದಂತೆಯೇ ಅನೇಕ ಸುಧಾರಣೆಯ ಕ್ರಮಗಳಿಂದ ಉತ್ಪನ್ನ ಹೆಚ್ಚಿತು. ವೆಚ್ಚ ತಗ್ಗಿದ್ದರಿಂದ ೨೦೦೨-೦೩ನೇ ಸಾಲಿನಲ್ಲಿ ರೂ.೨೨.೮೮ ಕೋಟಿ ಲಾಭ ಗಳಿಸುವ ಮೂಲಕ ಸಾಲದ ಸುಳಿಯಿಂದ ಹೊರಬಂದಿತು. ಅಲ್ಲದೆ ಸಾಲವನ್ನು ಬಡ್ಡಿ ಸಮೇತ ಮರುಪಾವತಿಸಲಾಗಿದೆ. ೨೦೦೩-೦೪ನೇ ಹಣಕಾಸು ವರ್ಷದಲ್ಲಿ ೫,೭೩,೫೭೭ ಟನ್ ಅದಿರು ತೆಗೆದು ೩೧೦೭.೭೭ ಕಿಲೋ ಚಿನ್ನ ಉತ್ಪಾದಿಸಿದೆ. ಹಿಂದಿನ ಆರ್ಥಿಕ ವರ್ಷಕ್ಕೆ ಹೋಲಿಸಿದರೆ ಶೇಕಡಾ ೧೫ರಷ್ಟು ಅಭಿವೃದ್ಧಿ ಕಂಡಿದೆ. ಹಣದ ರೂಪದಲ್ಲಿ ರೂ.೧೬೩ ಕೋಟಿ ೪೨ ಲಕ್ಷಗಳಾಗಿದ್ದು, ಶೇಕಡಾ ೧೫ರಷ್ಟು ಹೆಚ್ಚಳವಾಗಿದೆ. ಕಂಪನಿಯು ೨೦೦೬-

೦೭ನೇ ಹಣಕಾಸು ವರ್ಷದ ಅಂಕಿ-ಅಂಶಗಳ ಪ್ರಕಾರ ತೆರಿಗೆ ಮುನ್ನ ಲಾಭ ರೂ.೮೫.೨೮ ಕೋಟಿ ಹಾಗೂ ತೆರಿಗೆ ನಂತರ ಅಂತಿಮವಾಗಿ ರೂ.೫೫.೨೮ ಕೋಟಿ ಲಾಭ ಗಳಿಸಿದೆ. ೨೦೦೭-೦೮ ರಲ್ಲಿ ತೆರಿಗೆ ಮುನ್ನ ಲಾಭವು ರೂ.೧೪೪೪.೯೪ ಕೋಟಿ ತೆರಿಗೆ ನಂತರ ರೂ.೯೬.೩೧ ಕೋಟಿ ಲಾಭವನ್ನು ಗಳಿಸಿದೆ. ಅದೇ ರೀತಿಯಾಗಿ ೨೦೦೮-೦೯ ನೇ ಸಾಲಿನಲ್ಲಿ ತೆರಿಗೆ ಮುಂಚಿತ ಲಾಭವು ರೂ.೯೩.೧೯ ಕೋಟಿಗಳಾಗಿರುತ್ತವೆ. ಜಾಗತಿಕ ಮಾರುಕಟ್ಟೆಯಲ್ಲಿ ಬಂಗಾರದ ಬೆಲೆಯು ಹಟ್ಟಿ ಚಿನ್ನದ ಗಣಿಗೆ ವರದಾನವಾಗಿದೆ.

ಈ ರೀತಿ ಹಟ್ಟಿ ಚಿನ್ನದ ಗಣಿಯ ನೋಟವು ಉತ್ಪಾದನಾ ಸಾಮರ್ಥ್ಯ ವೃದ್ಧಿಯಷ್ಟೇ ಅಲ್ಲದೆ, ಲಾಭ ಹೆಚ್ಚಳ ಹಾಗೂ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸುವುದೂ ಆಗಿದೆ. ಇದೀಗ ಸಂಸ್ಥೆಯು ಸಂಪೂರ್ಣ ಲಾಭದಾಯಕವಾಗಿ ನಡೆಯುತ್ತಿದೆ. ಬೇರೆಡೆ ಸಂಶೋಧನೆ, ವಿಸ್ತರಣಾ ಯೋಜನೆ ತ್ವರಿತವಾಗಿ ಅನುಷ್ಠಾನಕ್ಕೆ ತರುವ ಸಾಮರ್ಥ್ಯ ಪಡೆದಿವೆ.

ಹಟ್ಟಿ ಚಿನ್ನದ ಗಣಿ ನಿಗಮದಿಂದ ಸಾಮಾಜಿಕ ಜವಾಬ್ದಾರಿಯ ನಿರ್ವಹಣೆ (ಕಾರ್ಪೊರೇಟ್ ಸೋಶಿಯಲ್ ರೆಸ್ಪಾನ್ಸಿಬಿಲಿಟಿ)

ಜಿಲ್ಲೆಯ ನೀರಾವರಿ ಯೋಜನೆಗಳು

ಫಲವತ್ತಾದ ಜಮೀನಿದೆ. ಪ್ರತಿ ಅಂಗುಲ ನೀರಾವರಿಗೊಳಿಸುವ ಪ್ರಮಾಣದ ಜಲಸಂಪನ್ಮೂಲವಿದೆ. ಆದರೆ ರಾಜಕೀಯ ಇಚ್ಛಾಶಕ್ತಿಯ ಕೊರತೆ ಜಿಲ್ಲೆಯನ್ನು ನೀರಾವರಿಯ ಅಭಿವೃದ್ಧಿಯಲ್ಲಿ ಹಿಂದುಳಿಯುವಂತೆ ಮಾಡಿ ರಾಯಚೂರು ಜಿಲ್ಲೆ ಪ್ರತಿ ವರ್ಷ ಬರದ ಶಾಪಕ್ಕೆ ತುತ್ತಾಗಲು ಕಾರಣವಾಗಿದೆ.

ರಾಜ್ಯದ ಯಾವ ಜಿಲ್ಲೆಗಳಿಗೆ ಇಲ್ಲದ ಸೌಭಾಗ್ಯ ರಾಯಚೂರು ಜಿಲ್ಲೆ ಹೊಂದಿದೆ. ಉತ್ತರಕ್ಕೆ ಕೃಷ್ಣಾ ನದಿ ಮತ್ತು ದಕ್ಷಿಣಕ್ಕೆ ತುಂಗಭದ್ರ ನದಿಯಿದೆ. ಎರಡು ನದಿಗಳು ವರ್ಷ ಪೂರ್ತಿ ಹರಿಯುವ ಜಲಸಂಪನ್ಮೂಲ ಹೊಂದಿವೆ. ಈ ಎರಡು ನದಿಗಳಲ್ಲಿ ಜಿಲ್ಲೆಗೆ ವಿತರಿಸಲಾದ ನೀರನ್ನು ಭಾಗಶಃ ಬಳಸಿಕೊಂಡರೆ ಜಿಲ್ಲೆ ಶೇ.೫೦ರಷ್ಟು ಪ್ರದೇಶ ಸಸ್ಯಶಾಮಲವಾಗಿದೆ. ಉಳಿದ ನೀರು ಬಳಸಿಕೊಂಡರೆ ಜಿಲ್ಲೆ ಸಂಪೂರ್ಣ ನೀರಾವರಿಯಾಗುತ್ತದೆ. ಆದರೆ ಗಟ್ಟಿ ನಾಯಕತ್ವದ ಕೊರತೆ ಜಿಲ್ಲೆಯನ್ನು ಬಡವಾಗುವಂತೆ ಮಾಡಿದೆ.

ಜಿಲ್ಲೆಯಲ್ಲಿ ಎರಡು ಬೃಹತ್ ನೀರಾವರಿ, ಮಸ್ಕಿ ನಾಲ ಯೋಜನೆ, ೯(ಎ) ಕಾಲುವೆ, ನಂದವಾಡಿಗಿ ಹುಲಿಗುಡ್ಡ ಯೋಜನೆ, ಭೋಳಮಾನದೊಡ್ಡಿ ಏತ ನೀರಾವರಿ ಯೋಜನೆ ಸೇರಿದಂತೆ ಇತರೆ ಅನೇಕ ಏತ ನೀರಾವರಿ ಯೋಜನೆಗಳು ಜಿಲ್ಲೆಯಲ್ಲಿ ಇವೆ. ಜಿಲ್ಲೆಯಲ್ಲಿ ಇನ್ನು ಐದರಿಂದ ಎಂಟು ಸಮತೋಲನ ಜಲಾಶಯ ನಿರ್ಮಿಸುವ ಮೂಲಕ ಸ್ಥಳೀಯವಾಗಿ ನೀರಾವರಿ ಸೌಲಭ್ಯ ನೀಡುವಂತ ಅವಕಾಶಗಳು ಇದ್ದರೂ ಇದನ್ನು ಬಳಸಿಕೊಳ್ಳುವ ಇಚ್ಛಾಶಕ್ತಿ ಇಲ್ಲದೇ ಇರುವುದರಿಂದ ಅಪಾರ ನೀರು ಆಂಧ್ರ ಪ್ರದೇಶ ಇಲ್ಲವೆ ಸಾಗರದ ಪಾಲಾಗುತ್ತಿದೆ.

ಹೈದ್ರಾಬಾದ್ ನಿಜಾಮನಿಂದ ಮುಕ್ತಿಗೊಂಡು ೧೯೫೬ರಲ್ಲಿ ಏಕೀಕರಣದ ಸಂದರ್ಭದಲ್ಲಿ ಕರ್ನಾಟಕದ ಭಾಗವಾದರೂ ಸರಕಾರ ಈ ಭಾಗದ ನೆಲ, ಜಲವನ್ನು ರಾಜ್ಯದ ಸ್ವತ್ತು ಎಂದು ಭಾವಿಸದಿರುವುದೇ ಈ ಸಮಸ್ಯೆಗೆ ಮೂಲ ಕಾರಣ. ಕಾವೇರಿ ನದಿಯಿಂದ ಹನಿ ನೀರು ಕದ್ದರೂ ರಾಜ್ಯದಲ್ಲಿ ಹಂಗಾಮ ಉಂಟುಮಾಡುವ ವಿವಿಧ ರಾಜಕೀಯ ಪಕ್ಷಗಳಿಗೆ ಕೃಷ್ಣಾ ಮತ್ತು ತುಂಗಭದ್ರ ನದಿಗಳಲ್ಲಿ ನೂರಾರು ಟಿಎಂಸಿ ನೀರು ಆಂಧ್ರ ಮತ್ತು ಸಮುದ್ರ ಪಾಲಾಗುತ್ತಿರುವುದು ಕಾಣುತ್ತಿಲ್ಲ. ರಾಜ್ಯ ಆಡಳಿತ ಪಕ್ಷಗಳ ಈ ಮಲತಾಯಿ ಧೋರಣೆಯಿಂದ ಜಿಲ್ಲೆಯ ಫಲವತ್ತಾದ ಜಮೀನು ನೀರಿಲ್ಲದೆ ಬರಡಾಗಿದೆ.

ಅಪಾರ ಜಲ ಸಂಪನ್ಮೂಲವಿದ್ದರೂ, ಇಲ್ಲಿ ರೈತರು ಪ್ರತಿ ವರ್ಷ ಬರಕ್ಕೆ ತುತ್ತಾಗಿ ದುಡಿಯಲು ದೂರದ ಮಹಾ ನಗರಗಳಿಗೆ ಕೂಲಿಗೆ ಹೋಗುತ್ತಾರೆ. ಇದನ್ನು ತಡೆಯಲು ಮಾರ್ಗೋಪಾಯಗಳಿವೆ ಆದರೆ ಇತ್ತ ಯಾರು ಗಮನಹರಿಸುತ್ತಿಲ್ಲ. ಇಲ್ಲಿರುವ ಜಲಸಂಪತ್ತನ್ನು ಬಳಸಿ ಕೃಷಿಯನ್ನು ಕೈಗಾರಿಕೆಯಾಗಿ ಬೆಳೆಸುವ ಎಲ್ಲ ಅವಕಾಶಗಳಿವೆ. ಕಾವೇರಿ ಭಾಗದ ಜನ ಮತ್ತು ಜನಪ್ರತಿನಿಧಿಗಳಿಂದ ನಾವು ಕಲಿಯಬೇಕಾಗಿದೆ. ನೀರಿನ ಮಹತ್ವ ತಿಳಿದು ನಾಲ್ಕು ದಶಕಗಳಲ್ಲಿ ಯೋಜನೆಗಳನ್ನು ಪೂರ್ಣಗೊಳಿಸಿದ್ದರೆ ಜಿಲ್ಲೆ ಕೃಷಿ ಅಭಿವೃದ್ಧಿಯಲ್ಲಿ ದೇಶಕ್ಕೆ ಮಾದರಿ ಕೇಂದ್ರವಾಗುತ್ತಿತ್ತು. ಜಿಲ್ಲೆಯ ಬಡತನದ ನಕ್ಷೆಯನ್ನೇ ಬದಲಾಯಿಸುವ ನೀರಾವರಿ ಯೋಜನೆಗಳು ಜಾರಿಗೊಳ್ಳದೆ ನೆನೆಗುದಿಗೆ ಬಿದ್ದಿವೆ. ನೆನೆಗುದಿಗೆ ಬಿದ್ದ ಈ ಎಲ್ಲ ಯೋಜನೆಗಳನ್ನು ಪೂರ್ಣಗೊಳಿಸಿ ನಮ್ಮ ಪಾಲಿನ ನೀರಿನ ಹಕ್ಕು ಬಳಕೆಗೆ ಅವಕಾಶ ಮಾಡಿ ಎಂದು ಸರಕಾರವನ್ನು ಕೇಳುವ ದಾರ್ಷ್ಟ್ಯ ಪ್ರದರ್ಶಿಸಿದ್ದರೆ ಪ್ರತಿವರ್ಷದ ಬರದ ಭವಣೆಯಿಂದ ಜಿಲ್ಲೆಯ ಜನರನ್ನು ಮುಕ್ತಿಗೊಳಿಸಿ ಮೂರೊತ್ತು ಮೃಷ್ಟಾನ್ನ ಉಣ್ಣುವಂತೆ ಮಾಡಬಹುದಿತ್ತು.

ಜಿಲ್ಲೆಯ ನೀರಾವರಿ ಯೋಜನೆಗಳು:–

ಜಿಲ್ಲೆಯಲ್ಲಿ ಮೂರು ರೀತಿಯ ನೀರಾವರಿ ಯೋಜನೆಗಳಿವೆ.

೧. ಬೃಹತ್ ನೀರಾವರಿ ಯೋಜನೆಗಳು

೨. ಮಧ್ಯಮ ನೀರಾವರಿ ಯೋಜನೆಗಳು

೩. ಏತ ನೀರಾವರಿ ಯೋಜನೆಗಳು ಇವೆ.

ತುಂಗಭದ್ರ ಎಡದಂಡೆ ಕಾಲುವೆ: ಪೂರ್ವ ೧೯೪೫ ಆರಂಭಗೊಂಡು ೧೯೫೩ರಲ್ಲಿ ಪೂರ್ಣಗೊಂಡ ತುಂಗಭದ್ರ ಎಡದಂಡೆ ಕಾಲುವೆ ಪ್ರಮುಖ ಯೋಜನೆಯಾಗಿದೆ. ೪೧೦೦ ಕ್ಯುಸೆಕ್ಸ್ ನೀರು ಹರಿಸುವ ಸಾಮರ್ಥ್ಯದ ೧೪೧ ಮೈಲ್ ಉದ್ದದ ಎಡದಂಡೆ ಕಾಲುವೆ ಕೊಪ್ಪಳ ಜಿಲ್ಲೆಯಲ್ಲದೆ, ರಾಯಚೂರು ಜಿಲ್ಲೆಯ ನಾಲ್ಕು ತಾಲೂಕುಗಳಲ್ಲಿ ೪.೫೦ ಲಕ್ಷ ಎಕರೆ ಜಮೀನು ನೀರಾವರಿಗೊಳಿಸಿ, ನಾಲ್ಕು ನಗರಗಳು ಮತ್ತು ಸುಮಾರು ೪೮೦ ಗ್ರಾಮ ಹಾಗೂ ಕ್ಯಾಂಪ್‌ಗಳಿಗೆ ಕುಡಿಯುವ ನೀರು ಪೂರೈಸುವ ಜೀವನಾಡಿಯಾಗಿದೆ.

ಭತ್ತ, ಹತ್ತಿ, ಮೆಣಸಿನಕಾಯಿ ಮತ್ತು ಇತರ ಕೃಷಿ ಉತ್ಪನ್ನಗಳಿಂದ ಪ್ರತಿ ವರ್ಷ ೨೦೦೦ ಕೋಟಿಗೂ ಅಧಿಕ ಮೊತ್ತದ ಕೃಷಿ ವ್ಯವಹಾರಕ್ಕೆ ಆಧಾರವಾದ ಎಡದಂಡೆ

ಕಾಲುವೆ ಸರಕಾರದ ಬೊಕ್ಕಸಕ್ಕೆ ಪ್ರತಿ ವರ್ಷ ನೂರಾರು ಕೋಟಿ ರೂಪಾಯಿಗಳನ್ನು ಸಂಗ್ರಹಿಸಿಕೊಡುವ ಕಾಮಧೇನು. ಕಾಲುವೆಯ ಸಮರ್ಪಕ ನಿರ್ವಹಣೆಯ ಕೊರತೆಯಿಂದ ನಾಲ್ಕು ದಶಕಗಳ ಈ ಕಾಲುವೆ ಬಹುತೇಕ ದುರ್ಬಲಗೊಂಡು ನೀರು ಹರಿಸುವ ಸಾಮರ್ಥ್ಯ ಕುಸಿದಿದೆ. ಮತ್ತೊಂದೆಡೆ ಮೇಲ್ಭಾಗದಲ್ಲಿ ನೀರಿನ ಆಕ್ರಮ ರಾಯಚೂರು ಜಿಲ್ಲೆಯ ಕಾಲುವೆಯ ಕೊನೆ ಭಾಗದ ರೈತರು ಶಾಶ್ವತವಾಗಿ ನೀರಾವರಿಯಿಂದ ವಂಚಿನೆಗೊಂಡಿದ್ದಾರೆ.

ತುಂಗಭದ್ರ ಜಲಾಶಯದ ಹೂಳುವಿನಿಂದಾಗಿ ೯೩ ಟಿ.ಎಂ.ಸಿ ನೀರಿನ ಹಕ್ಕು ಹೊಂದಿದ ಎಡದಂಡೆ ಕಾಲುವೆ ಈಗ ೮೩ ಟಿ.ಎಂ.ಸಿ ನೀರು ಮಾತ್ರ ಲಭ್ಯವಿದೆ. ಕಾಲುವೆಯ ಶಿಥಿಲಾವಸ್ಥೆಯಿಂದ ಕೊನೆಯ ಭಾಗದ ಸುಮಾರು ಒಂದು ಲಕ್ಷ ಎಕರೆ ಜಮೀನು ನೀರಿಲ್ಲದೆ ಬರಡಾಗಿದೆ. ಪ್ರತಿ ವರ್ಷ ಮುಂಗಾರು ಮತ್ತು ಹಿಂಗಾರಿಗೆ ಕೆಳಭಾಗದ ರೈತರು ಕೆಳ ಭಾಗದಲ್ಲಿ ಗೇಜ್ ನಿರ್ವಹಣೆ ಮಾಡುವಂತೆ ಒತ್ತಾಯಿಸಿ ಹೋರಾಟ ನಡೆಸುತ್ತಿದ್ದಾರೆ. ಇವರ ಸಮಸ್ಯೆ ಇನ್ನೂ ನಿವಾರಣೆಗೊಂಡಿಲ್ಲ. ಕೆಳ ಭಾಗದ ರೈತರಿಗೆ ತಾತ್ಕಾಲಿಕ ಪರಿಹಾರ ದೊರೆಯಲಿ ಎಂಬ ಉದ್ದೇಶದಿಂದ ಶ್ರೀ ಎಸ್.ಬಂಗಾರಪ್ಪ ಅವರು ಮುಖ್ಯಮಂತ್ರಿಯಾಗಿದ್ದಾಗ ಕಾಲುವೆಯ ಕೊನೆ ಭಾಗದ ಗಣೆಕಲ್ ಗ್ರಾಮದ ಬಳಿ ಸಮತೋಲನ ಜಲಾಶಯ ನಿರ್ಮಿಸಲಾಯಿತು. ಇದೇ ಜಲಾಶಯದಿಂದ ರಾಯಚೂರು ನಗರಕ್ಕೆ ಕುಡಿಯುವ ನೀರು ಪೂರೈಕೆಗೂ ಸೌಲಭ್ಯ ಕಲ್ಪಿಸಲಾಯಿತು. ೦.೭೫ ಟಿ.ಎಂ.ಸಿ ನೀರು ಸಂಗ್ರಹ ಸಾಮರ್ಥ್ಯದ ಈ ಜಲಾಶಯ ತುಂಬಲು ಮೇಲ್ಭಾಗದ ರೈತರು ನೀರು ಬಿಡದೆ ಇರುವುದರಿಂದ ಕೊನೆ ಭಾಗದ ರೈತರ ಸಮಸ್ಯೆ ಯಥಾವತ್ತಾಗಿ ಮುಂದುವರೆಯುತ್ತಿದೆ. ಕೆಳ ಭಾಗದ ರೈತರು ತಮ್ಮ ಜಮೀನು ಮಾರಿಕೊಳ್ಳುವ ಸ್ಥಿತಿಗೆ ಬಂದಿದಾದರೆ.

ನಾರಾಯಣಪೂರ ಬಲದಂಡೆ ಕಾಲುವೆ: ನೀರಾವರಿ ಸೌಲಭ್ಯವೇ ಇಲ್ಲದೆ ಬಂಜರು ಪ್ರದೇಶವಾದ ಲಿಂಗಸೂಗೂರು, ದೇವದುರ್ಗ ಹಾಗೂ ಭಾಗಶಃ ರಾಯಚೂರು ತಾಲ್ಲೂಕುಗಳು ನೀರಾವರಿಗೊಂಡರೆ 'ಬಿ' ಸ್ಕೀಮ್‌ನಲ್ಲಿ ರಾಯಚೂರು ತಾಲ್ಲೂಕಿನ ಕೃಷ್ಣಾ ಭಾಗ ನೀರಾವರಿಗೊಳ್ಳುತ್ತದೆ. ಸ್ಕೀಮಿನ ೯೫ ಕಿ.ಮೀ ಕಾಲುವೆ ತೋಡಲಾಗಿದೆ. ಕಾಲುವೆ ನಿರ್ಮಾಣ ಕಾಮಗಾರಿ ಗುಣಮಟ್ಟದಿಂದ ಕೈಗೊಳ್ಳದ ಕಾರಣ ಉದ್ದೇಶಿತ ಯೋಜನೆ ನಿಗದಿತ ಪ್ರಮಾಣದಲ್ಲಿ ಜನರಿಗೆ ಮುಟ್ಟಲು ಸಾಧ್ಯವಾಗಿಲ್ಲ.

೧೯೯೬ರಲ್ಲಿ ಆಡಳಿತಾತ್ಮಕ ಮಂಜೂರಾತಿಯೊಂದಿಗೆ ಕಾಲುವೆ ತೋಡುವ ಕಾಮಗಾರಿ ಆರಂಭಗೊಂಡಿತು. ಎ ಸ್ಕೀಮ್‌ನಲ್ಲಿ ಶೂನ್ಯದಿಂದ ೯೫ ಕಿ.ಮೀ.ವರೆಗೆ ಕಾಲುವೆ ತೋಡಲಾಗಿದೆ. ೧೮ ವಿತರಣಾ ಕಾಲುವೆಗಳನ್ನು ಹೊಂದಿದ ಈ ಯೋಜನೆಯಡಿ ೨.೦೭ ಲಕ್ಷ ಎಕರೆ ಪ್ರದೇಶ ನೀರಾವರಿಗೊಳ್ಳಲಿದೆ. ಲಿಂಗಸೂಗೂರು ತಾಲ್ಲೂಕಿನಲ್ಲಿ ೨೯ ಸಾವಿರ ಎಕರೆ ಜಮೀನು ಮತ್ತು ದೇವದುರ್ಗ ತಾಲ್ಲೂಕಿನಲ್ಲಿ ೧.೭೭ ಲಕ್ಷ ಎಕರೆ ಪ್ರದೇಶ

ನೀರಾವರಿಗೊಳ್ಳಲಿದೆ. ಉದ್ದೇಶಿತ ನೀರಾವರಿ ಸೌಲಭ್ಯಕ್ಕೆ ೨೩.೩೩ ಟಿ.ಎಂ.ಸಿ ನೀರು ವಿತರಿಸಲಾಗಿದೆ. ಬಿ ಸ್ಕೀಮ್‌ನಲ್ಲಿ ಉದ್ದೇಶಿತ ಕಾಲುವೆ ೧೫೩೭ ಕಿ.ಮೀ ಉದ್ದ ತೋಡಬೇಕಾಗಿದೆ.

ರಾಜೋಳಿ ಬಂಡಾ ಯೋಜನೆ: ಆಂಧ್ರಪ್ರದೇಶ ಪ್ರಮುಖ ಯೋಜನೆಗಳಲ್ಲಿ ಒಂದಾದ ರಾಜೋಳಬಂಡಾ ತಿರುವು ಯೋಜನೆಯಡಿ ರಾಯಚೂರು ತಾಲ್ಲೂಕಿನ ಆರು ಸಾವಿರ ಎಕರೆ ಜಮೀನು ನೀರಾವರಿಗೊಳ್ಳುತ್ತದೆ. ಮಾನವಿ ತಾಲ್ಲೂಕಿನ ರಾಜೋಳಬಂಡಾ ಗ್ರಾಮದ ಬಳಿ ಈ ತಿರುವು ಯೋಜನೆ ಅಣೆಕಟ್ಟು ನಿರ್ಮಿಸಲಾಗಿದೆ.

೯(ಎ) ಕಾಲುವೆ: ನಾರಾಯಣಪೂರ ಬಲದಂಡೆ ಕಾಲುವೆಗೆ ಅಡ್ಡಲಾಗಿ ನಿರ್ಮಾಣಗೊಳ್ಳುವ ಈ ಮಧ್ಯಮ ಕಾಲುವೆಯಿಂದ ದೇವದುರ್ಗ ಮತ್ತು ಮಾನವಿ ತಾಲ್ಲೂಕಿನ ೪೦ ಗ್ರಾಮಗಳು ನೀರಾವರಿಗೊಳ್ಳಲಿವೆ. ಕಾಮಗಾರಿ ಆರಂಭಗೊಂಡಿದೆ. ಯೋಜನೆ ಇನ್ನು ಪೂರ್ಣಗೊಳ್ಳುವ ಹಂತದಲ್ಲಿದೆ. ಈ ಯೋಜನೆ ಆರಂಭದಿಂದಲೂ ಅನೇಕ ಅಡೆತಡೆಗಳನ್ನು ಎದುರಿಸುತ್ತ ಸಾಗಿದೆ. ಯೋಜನೆ ಪೂರ್ಣಗೊಂಡರೆ ೪೦ ಗ್ರಾಮಗಳ ೨೨೯೫೦ ಎಕರೆ ಜಮೀನು ನೀರಾವರಿಗೊಳ್ಳಲಿದೆ.

ಮಸ್ಕಿ ನಾಲಾ ಯೋಜನೆ: ಲಿಂಗಸೂಗೂರು ತಾಲ್ಲೂಕಿನ ಮತ್ತೊಂದು ಪ್ರಮುಖ ನೀರಾವರಿ ಯೋಜನೆ ಎಂದರೆ ಮಸ್ಕಿ ನಾಲಾ ಯೋಜನೆ. ಈ ಯೋಜನೆಯಿಂದ ತಾಲ್ಲೂಕಿನ ೧೬ ಗ್ರಾಮಗಳ ೭೫೦೦ ಎಕರೆ ಜಮೀನು ನೀರಾವರಿಗೊಳ್ಳಲಿದೆ. ಈ ಭಾಗದ ಜನರ ಕುಡಿಯುವ ನೀರಿಗೆ ಮಸ್ಕಿ ಹಳ್ಳಕ್ಕೆ ನಿಜಾಮರ ಕಾಲದಲ್ಲಿ ಒಡ್ಡು ನಿರ್ಮಿಸಲಾಯಿತು. ನಂತರ ನಿಜಲಿಂಗಪ್ಪನವರು ಮುಖ್ಯಮಂತ್ರಿಯಾದ ನಂತರ ಈ ಯೋಜನೆ ರೂ.೧೨ ಕೋಟಿ ಮೀಸಲಿರಿಸುವ ಮೂಲಕ ನೀರಾವರಿ ಯೋಜನೆಯಾಗಿ ಪರಿವರ್ತಿಸಲು ತೀರ್ಮಾನಿಸಲಾಯಿತು. ನಂತರ ರಾಮಕೃಷ್ಣ ಹೆಗಡೆ ಮತ್ತು ಎಚ್.ಡಿ.ದೇವೆಗೌಡ ಅವರ ಆಡಳಿತ ಅವಧಿಯಲ್ಲಿ ಅಣೆಕಟ್ಟು ನಿರ್ಮಿಸಿ ಕಾಲುವೆ ತೋಡಲಾಗಿದೆ. ಅರ್ಧ ಟಿ.ಎಂ.ಸಿ ನೀರು ಸಂಗ್ರಹ ಸಾಮರ್ಥ್ಯದ ಈ ಯೋಜನೆಯ ಲಾಭ ರೈತರು ಪಡೆಯಲು ಇನ್ನೂ ಸಾಧ್ಯವಾಗಿಲ್ಲ.

ರಾಂಪೂರು ಏತ ನೀರಾವರಿ ಯೋಜನೆ: ೧೯೯೪ ರಿಂದ ಆರಂಭಗೊಂಡ ರಾಂಪೂರ ಏತ ನೀರಾವರಿ ಯೋಜನೆಯಿಂದ ಈ ಭಾಗದ ೨೦ ಸಾವಿರ ಹೆಕ್ಟೇರ್ ಪ್ರದೇಶ ನೀರಾವರಿಗೊಳ್ಳಲಿದೆ. ಯೋಜನೆ ಪೂರ್ಣಗೊಂಡ ನೀರಾವರಿ ಸೌಲಭ್ಯ ರೈತರಿಗೆ ತಲುಪಿದೆ. ನಾರಾಯಣಪೂರ ಜಲಾಶಯದ ಹಿನ್ನೀರಿನಿಂದ ಉದ್ದೇಶಿತ ಯೋಜನೆಗೆ ನೀರು ಬಳಸಲಾಗುತ್ತಿದೆ. ನವಲಿ ಗ್ರಾಮದ ಬಳಿಯಿಂದ ೧೪.೮೦ ಮೀ ಮೇಲಕ್ಕೆ ನೇರೆತ್ತಿ ನಂತರ ೧೩ ಕಿ.ಮೀ. ಉದ್ದ ಸಂಪರ್ಕ ಕಾಲುವೆಯ ಮೂಲಕ ಹರಿಸಲಾಗುತ್ತದೆ. ಎರಡನೇ ಹಂತವಾಗಿ ಆನೇಹೊಸೂರು ಗ್ರಾಮದ ಬಳಿ ನಿರ್ಮಿಸಲಾದ ಎರಡನೇ ಮುಖ್ಯ ಸ್ಥಾವರದ ಬಳಿ ೨೯ ಮೀ ಎತ್ತರಕ್ಕೆ ನೀರೆತ್ತಿ ಕಾಲುವೆ ಮೂಲಕ ನೀರು ಹರಿಸಲಾಗುತ್ತದೆ. ಸ್ಕೀಮ್ ಎ ಯಿಂದ ೨೦ ಸಾವಿರ ಎಕರೆ ಜಮೀನಿಗೆ ನೀರಾವರಿ ಸೌಲಭ್ಯ ನೀಡಲಾಗುತ್ತಿದೆ.

ಏತ ನೀರಾವರಿ: ಪ್ರಮುಖ ನೀರಾವರಿ ಯೋಜನೆಗಳಲ್ಲದೆ ಜಿಲ್ಲೆಯಲ್ಲಿ ಏತ ನೀರಾವರಿ ಯೋಜನೆಗಳು ಅನೇಕ ಇವೆ. ಕೆಲವು ಯೋಜನೆಗಳು ಪೂರ್ಣಗೊಂಡು ನೀರಾವರಿ ಸೌಲಭ್ಯ ಪಡೆಯುಲಾಗುತ್ತಿದೆ. ಇನ್ನೂ ಕೆಲವು ಯೋಜನೆಗಳು ಪೂರ್ಣಗೊಂಡಿದ್ದರೂ ಉಪಯೋಗವಾಗಿಲ್ಲ. ಮತ್ತೂ ಕೆಲ ಯೋಜನೆಗಳು ಆರಂಭದ ಹಂತದಲ್ಲಿಯೇ ಇವೆ. ರಾಯಚೂರು ತಾಲ್ಲೂಕಿನ ಕೃಷ್ಣಾ ನದಿ ಪಾತ್ರದ ಗ್ರಾಮಗಳಿಗೆ ವರವಾಗಬೇಕಾದ ಬೋಳಮಾನದೊಡ್ಡಿ ಏತ ನೀರಾವರಿ ಯೋಜನೆ ಆರಂಭಗೊಳ್ಳುವ ಮೊದಲೇ ಮೂಲೆ ಸೇರಿದೆ. ಉದ್ದೇಶಿತ ಯೋಜನೆ ಜಾರಿಗೊಂಡರೆ ೩೨ ಗ್ರಾಮಗಳ ಒಂದು ಲಕ್ಷ ಎಕರೆ ಜಮೀನು ನೀರಾವರಿಗೊಳ್ಳುತ್ತದೆ.

ಗಡಿ ಭಾಗದಲ್ಲಿ ಡಿ.ರಾಂಪೂರು, ಕುರ್ವಕುರ್ದ, ಗಂಜಳ್ಳಿ, ಕೊರ್ತಕುಂದಾ ಹಾಗೂ ಕಾಡ್ಲೂರು ಏತ ನೀರಾವರಿ ಯೋಜನೆಗಳಿಂದ ಸುಮಾರು ಆರು ಸಾವಿರ ಎಕರೆ ಜಮೀನು ನೀರಾವರಿಗೊಳ್ಳಬೇಕು. ಆದರೆ ಸರಿಯಾದ ನಿರ್ವಹಣೆ ಇಲ್ಲದೆ ಅಲ್ಪ ಪ್ರಮಾಣದ ರೈತರಿಗೆ ಮಾತ್ರ ನೀರಾವರಿ ಸೌಲಭ್ಯ ದೊರೆಯುತ್ತಿದೆ. ಗೂಗಲ್ ಬ್ಯಾರೇಜ್ ಮತ್ತು ಕೆರೆ ಏತ ನೀರಾವರಿ ಯೋಜನೆಗಳು ಜಿಲ್ಲೆಯಲ್ಲಿ ನಡೆದಿವೆ.

ನಿರ್ಮಾಣಗೊಂಡ, ನಿರ್ಮಾಣ ಹಂತದಲ್ಲಿರುವ ಮತ್ತು ಯೋಜನೆ ಸಿದ್ಧಗೊಂಡು ಎಲ್ಲ ಯೋಜನೆಗಳನ್ನು ಪ್ರಾಮಾಣಿಕವಾಗಿ ಜಾರಿಗೊಳಿಸಿ ಈ ಎಲ್ಲ ಯೋಜನೆಗಳಿಂದ ನಿಗದಿತ ಪ್ರಮಾಣದ ನೀರಾವರಿ ಸೌಲಭ್ಯ ಒದಗಿಸಿದರೆ ಜಿಲ್ಲೆಯ ಪ್ರತಿ ಅಂಗುಲ ನೀರಾವರಿಯಾಗಿ ಸಸ್ಯಶಾಮಲವಾಗಿ ರಾಯಚೂರು ಜಿಲ್ಲೆ ಹಸಿರಿನಿಂದ ಕಂಗೊಳಿಸುತ್ತದೆ. ಈ ಸುಂದರ ಕನಸು ಸರ್ಕಾರಕ್ಕೆ ರಾಜಕೀಯ ಇಚ್ಛಾಶಕ್ತಿ ಮತ್ತು ಸಂಪನ್ಮೂಲ ಅಗತ್ಯವಾಗಿದೆ. ಇನ್ನಾದರೂ ಜಿಲ್ಲೆಯ ಪ್ರತಿನಿಧಿಗಳು ಮತ್ತು ಸಂಘಸಂಸ್ಥೆಗಳು ಜನರು ಇತ್ತ ಗಮನ ನೀಡಿ ತಮ್ಮ ಪಾಲಿನ ನೀರು ಪಡೆಯುವಂತಾಗಲಿ.

ಇ) ನಾರಾಯಣಪುರ ಬಲದಂಡೆ ಕಾಲುವೆ

೧.	"ಪ್ರಾರಂಭದ ಸ್ಥಳ	: ನಾರಾಯಣಪುರ ಅಣೆಕಟ್ಟಿನ ಬಲಭಾಗದಿಂದ ಕಾಲುವೆ ಪ್ರಾರಂಭ
೨.	ಕಾಲುವೆಯ ಉದ್ದ	: ೧೫೬ ಕಿ.ಮೀ.
೩.	ನೀರಿನ ಸಾಮರ್ಥ್ಯ	: ೩೭೦೦ ಕ್ಯೂಸೆಕ್ಸ್
೪.	ಎ ಸ್ಕೀಮಿನಲ್ಲಿ	: ೯೫ ಕಿ.ಮೀ.ವರೆಗೆ ಕೆಲಸ ಮುಗಿದು ನೀರು ಹರಿಯುತ್ತಿದೆ.
೫.	ಬಿ ಸ್ಕೀಮಿನಲ್ಲಿ	: ಉಳಿದ ೬೧ ಕಿ.ಮೀ. ಕೆಲಸ
೬.	ವಿತರಣಾ ಕಾಲುವೆಗಳು	: ೧೮

೭. ನೀರಾವರಿ ಕ್ಷೇತ್ರ : ೮೪೦೦೦ ಹೆಕ್ಟೇರ್

೮. ನೀರಾವರಿ ತಾಲ್ಲೂಕು : ಲಿಂಗಸೂಗೂರು, ದೇವದುರ್ಗ, ರಾಯಚೂರು

೯. ಹಂಚಿಕೆಯಾದ ನೀರು : ೨೨.೪೦ ಟಿ.ಎಂ.ಸಿ

೧೦. ಯೋಜನೆ ಅಂದಾಜು ವೆಚ್ಚ : ೧೦೫೧.೫೨ ಕೋಟಿ

೧೧. ಖರ್ಚಾದ ಹಣ : ೧೦೦೩.೦೧ ಕೋಟಿ"[೧೭]

ಈ ಕಾಲುವೆಯ ಕಾಮಗಾರಿಗಳಿಗೆ ೧೯೯೫ರಲ್ಲಿ ಅಂದಿನ ಮುಖ್ಯಮಂತ್ರಿಯಾದ ಶ್ರೀ ದೇವೇಗೌಡರು ಚಾಲನೆ ನೀಡಿದರು. ಸದರಿ ಕಾಲುವೆಯ ಕೆಲಸವು ತುಂಡು ಗುತ್ತಿಗೆಯಲ್ಲಿ ಕೊಟ್ಟಿದ್ದರಿಂದ ಮುಖ್ಯ ಕಾಲುವೆಯ ಕೆಲಸವೇ ಕಳಪೆಯಾಯಿತು. ನಂತರ ಟೆಂಡರ್ ಮುಖಾಂತರ ಕೆಲಸ ನೀಡಿದಾಗ್ಯೂ ಇನ್ನಷ್ಟು ಕಳಪೆ ಮಟ್ಟದ ಕೆಲಸಗಳು ಇದರಲ್ಲಿ ನಡೆಯಿತು. ಈ ಕಾಲುವೆಯಲ್ಲಿ ಕೂಡ ಪ್ರಾಮಾಣಿಕವಾಗಿ ರೈತರು ಕಳಪೆ ಕೆಲಸಗಳಿಗಾಗಿ ಹೋರಾಟ ಮಾಡಿದರೂ ಪ್ರಭಾವಿ ಗುತ್ತಿಗೆದಾರರ ಹಾಗೂ ರಾಜಕೀಯ ಮುಖಂಡರ ದುಷ್ಟಶಕ್ತಿಯ ಮುಂದೆ ಅಂತಹ ಯಶಸ್ಸು ಸಿಗಲಿಲ್ಲ. ಈ ಕಾಲುವೆಯ ಅತೀ ಮಹತ್ವದ ೯ನೇ ಉಪ ಕಾಲುವೆಯಿಂದ ದೇವದುರ್ಗ ತಾಲ್ಲೂಕಿನ ಕುಗ್ರಾಮಗಳ ೧೭೦೦೦ ಎಕರೆ ಕೆಂಪು ಮಣ್ಣಿಗೆ ನೀರು ಒದಗಿಸುವ ಮಹತ್ವದ ಉಪಕಾಲುವೆ ಇದಾಗಿದ್ದು, ಇದರ ಜೊತೆಯಲ್ಲಿ ಇನ್ನೂ ೧೦ ರಿಂದ ೧೮ ಉಪ ಕಾಲುವೆಗಳ ಕೆಲಸವು ತುಂಬಾ ಕಳಪೆ ಮಟ್ಟದಾಗಿದ್ದು, ರೈತರ ಜಮೀನಿಗೆ ನೀರು ಮುಟ್ಟುವ ಸ್ಥಿತಿಯಲ್ಲಿ ಇಲ್ಲ. ಈ ಕಾಲುವೆ ಒಡೆಯುವಲ್ಲಿ ಗಿನ್ನಿಸ್ ದಾಖಲೆ ಕೀರ್ತಿ ಪಡೆದಿದೆ. ಎಲ್ಲಾ ರಾಜಕೀಯ ಮುಖಂಡರಿಗೆ ಯೋಜನೆಯ ಕೆಲಸಗಳು ಕಾಮಧೇನುವಾಗಿ ಶ್ರೀಮಂತಿಕೆಯಲ್ಲಿ ಮೆರೆಯುತ್ತಿರುವರೇ ಹೊರತು ರೈತರ ಹಿತಾಸಕ್ತಿಗಳನ್ನು ಕಾಪಾಡುವಲ್ಲಿ ವಿಫಲವಾದದ್ದು ಅತ್ಯಂತ ದುಃಖದ ಸಂಗತಿ. ಅಂತು ಕೊನೆಗೆ ಮಾರ್ಚ್ ೨೦೦೦ರಂದು ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರು ಈ ಎಲ್ಲಾ ತೊಂದರೆಗಳ ಮಧ್ಯದಲ್ಲಿಯೂ ನಾರಾಯಣಪುರ ಬಲದಂಡೆಯಲ್ಲಿ ಕೃಷ್ಣೆಯನ್ನು ಹರಿಸಿ ರೈತರಿಗೆ ಕೆಲಮಟ್ಟಿಗಾದರೂ ಸಂತಸವನ್ನು ತಂದುಕೊಟ್ಟರು.

ರಾಂಪುರ ಏತ ನೀರಾವರಿ ಯೋಜನೆ

೧. "ಪ್ರಾರಂಭದ ಸ್ಥಳ : ನಾರಾಯಣಪುರ ಜಲಾಶಯದ ಮೇಲ್ಭಾಗ

೨. ಮುಖ್ಯ ಸ್ಥಾವರಗಳು : ಅ) ಪ್ರಥಮ ಮುಖ್ಯಸ್ಥಾವರ ನಾಲಿ ಹತ್ತಿರ ಇದೆ.
ಆ) ಎರಡನೇ ಮುಖ್ಯಸ್ಥಾವರ ಆನೆ ಹರಸೂರ ಹತ್ತಿರ ಇದೆ.

೩. ಪಂಪುಗಳ ಸಂಖ್ಯೆ : ಅ) ೧೨೮೦ ಎಚ್.ಪಿ.ಯ ೪ ಪಂಪುಗಳ ನಾಲಿಯಲ್ಲಿ

ಆ) ೨೨೧೫ ಎಚ್.ಪಿಯ ೪ ಪಂಪುಗಳ ಆನೆ ಹರಸುರನಲ್ಲಿವೆ

೪. ಕಾಲುವೆಯ ಒಟ್ಟು ಉದ್ದ : ೩೭.೫೦ ಕಿ.ಮೀ.

೫. ನೀರಾವರಿಗೆ ಒಳಪಡುವ ಕ್ಷೇತ್ರ : ೨೦.೨೩೫ ಹೆಕ್ಟೇರ್

೬. ನೀರಾವರಿಗೆ ಒಳಪಡುವ ತಾಲ್ಲೂಕು : ರಾಯಚೂರು ಜಿಲ್ಲೆಯ ಲಿಂಗಸೂಗೂರು ತಾಲ್ಲೂಕು ಮಾತ್ರ

೭. ಹಂಚಿಕೆಯಾದ ನೀರು : ೫.೬೦ ಟಿ.ಎಂ.ಸಿ

೮. ಯೋಜನೆಯ ಕೆಲಸ ಹಂತ : ಯೋಜನೆ ಪೂರ್ಣಗೊಂಡಿದೆ.

೯. ಯೋಜನೆಯ ಅಂದಾಜು ವೆಚ್ಚ ಮೊತ್ತ : ೨೫೦.೩೧ ಕೋಟಿ.

೧೦. ಯೋಜನೆಗೆ ಆದ ವೆಚ್ಚ : ೨೩೮.೯೩ ಕೋಟಿ."[೧೮]

ಅಡಿಟಿಪ್ಪಣಿಗಳು

೧. ಅಮರೇಶ್ ಯತಗಲ್, ೨೦೦೯, ದೋ ಅಬ್ ರಾಯಚೂರು ಪ್ರದೇಶ, ಪು.ಸಂ. ೩
೨. ಅಮರೇಶ್ ಹಾಲ್ಕೋಡ್, ೨೦೧೦, ದೇವದುರ್ಗ ಚಾರಿತ್ರಿಕ ಅಧ್ಯಯನ, ಪು.ಸಂ. ೧೩
೩. ಅಮರೇಶ್ ಯತಗಲ್, ೨೦೦೯, ದೋ ಅಬ್ ರಾಯಚೂರು ಪ್ರದೇಶ, ಪು.ಸಂ. ೭
೪. ಅಮರೇಶ್ ಹಾಲ್ಕೋಡ್, ೨೦೧೦, ದೇವದುರ್ಗ ಚಾರಿತ್ರಿಕ ಅಧ್ಯಯನ, ಪು.ಸಂ. ೧೪
೫. ಅಮರೇಶ್ ಯತಗಲ್, ೨೦೦೯, ದೋ ಅಬ್ ರಾಯಚೂರು ಪ್ರದೇಶ, ಪು.ಸಂ. ೧೦
೬. ಅಮರೇಶ್ ಯತಗಲ್, ೨೦೦೫, ಕರ್ನಾಟಕ ನಾಯಕ ಅರಸು ಮನೆತನಗಳ ವಿಶಿಷ್ಟ ಸಾಂಸ್ಕೃತಿಕಾಚರಣೆಗಳು: ಚಾರಿತ್ರಿಕ ಅಧ್ಯಯನ, ಪು.ಸಂ. ೧೧
೭. ಅದೇ, ಪು.ಸಂ. ೩೬
೮. ಅದೇ, ಪು.ಸಂ. ೩೮
೯. ಅದೇ, ಪು.ಸಂ. ೪೧
೧೦. ಅಮರೇಶ್ ಹಾಲ್ಕೋಡ್, ೨೦೧೦, ದೇವದುರ್ಗ ಚಾರಿತ್ರಿಕ ಅಧ್ಯಯನ, ಪು.ಸಂ. ೨೪
೧೧. ಅದೇ, ಪು.ಸಂ. ೨೬
೧೨. ಅಮರೇಶ್ ಯತಗಲ್, ೨೦೦೯, ದೋ ಅಬ್ ರಾಯಚೂರು ಪ್ರದೇಶ, ಪು.ಸಂ. ೧೮
೧೩. ಅದೇ, ಪು.ಸಂ. ೨೬
೧೪. ಅದೇ, ಪು.ಸಂ. ೨೯
೧೫. ಪ್ರಜಾವಾಣಿ ಪತ್ರಿಕೆ ವರದಿ ದಿನಾಂಕ : ೨೦.೦೯.೨೦೧೨, ಪು.ಸಂ. ೪
೧೬. ಅಮರೇಶ್ ಯತಗಲ್, ೨೦೦೯, ದೋ ಅಬ್ ರಾಯಚೂರು ಪ್ರದೇಶ, ಪು.ಸಂ. ೨೪೯
೧೭. ಭಾಸ್ಕರರಾವ್ ಮುಡಬೂಳ, ೨೦೧೦, ದಕ್ಷಿಣದ ಗಂಗೆ-ಕೃಷ್ಣ, ಪುಟ ಸಂ.೪೭
೧೮. ಅದೇ, ಪು.ಸಂ. ೫೫

ಅಧ್ಯಾಯ ಮೂರು

ದೊಡ್ಡಿಗಳ ಪರಿಚಯ

೩.೧ ದೊಡ್ಡಿಯ ಪರಿಕಲ್ಪನೆ

೩.೨ ದೊಡ್ಡಿಯ ಹಿನ್ನೆಲೆ

೩.೩ ದೊಡ್ಡಿ ಪದ ನಿಷ್ಪತ್ತಿ

೩.೪ ಬೇಡ ಸಮುದಾಯದ ದೊಡ್ಡಿಗಳ ಸ್ವರೂಪ

೩.೪ ಕುರುಬ ಮತ್ತು ಕಬ್ಬಲಿಗ ಸಮುದಾಯದ ದೊಡ್ಡಿಗಳ ಸ್ವರೂಪ

ಅಧ್ಯಾಯ ಮೂರು

ದೊಡ್ಡಿಗಳ ಪರಿಚಯ

೩.೧ ದೊಡ್ಡಿಯ ಪರಿಕಲ್ಪನೆ

ಮಾನವ ಉಗಮವಾದ ಕಾಲದಿಂದಲೂ ಆತನು ವಸತಿಯನ್ನು ತನ್ನ ಮನಸ್ಸಿಗೆ ಬಂದಂತೆ ನಿರ್ಮಿಸುವುದನ್ನು ಅಭ್ಯಾಸ ಮಾಡಿಕೊಂಡಿದ್ದಾನೆ. ಪ್ರಾಚೀನ ಮಾನವ ತನ್ನನ್ನು ಪ್ರಕೃತಿ ಪ್ರಕೋಪಗಳಿಂದ ರಕ್ಷಿಸಿಕೊಳ್ಳುವುದಕ್ಕಾಗಿ ಸಹಜವಾಗಿ ನಿರ್ಮಿತವಾದ ಗುಹೆಗಳನ್ನು ಆಶ್ರಯಸ್ಥಾನವನ್ನಾಗಿ ಪಡೆದಿದ್ದ. ಗುಹೆಗಳಲ್ಲಿ ಮೂಲಮಾನವ ವಾಸ ಮಾಡುತ್ತಿದ್ದ ಎಂಬುದಕ್ಕೆ ಈಗಲೂ ರಾಯಚೂರು ಜಿಲ್ಲೆಯಾದ್ಯಂತ ಕುರುಹಗಳಿವೆ. ಆದರೆ ಕಾಲ ಕಳೆದಂತೆಲ್ಲಾ ತನ್ನ ಆಹಾರ ಇತ್ಯಾದಿಗಳಿಗೆ ಪ್ರದೇಶದಿಂದ ಪ್ರದೇಶಕ್ಕೆ ಅಲೆದಾಡಬೇಕಾದ ಸಂದರ್ಭದಲ್ಲಿ ಪ್ರಕೃತಿ ನಿರ್ಮಿತವಾದ ಇಂತ ಗುಹೆಗಳನ್ನು ಹುಡುಕಿಕೊಳ್ಳುವುದು ಕಷ್ಟವಾಯಿತು. ಈ ಅನಿವಾರ್ಯತೆಯಿಂದಾಗಿ ತಾನೇ ದೈಹಿಕ ಶ್ರಮದಿಂದ ಈ ಅಗತ್ಯ ಬುದ್ಧಿಶಕ್ತಿಯನ್ನು ಬಳಸಿಕೊಕಂಡು ಆಶ್ರಯ ನಿರ್ಮಿಸಿಕೊಂಡು ಹಾಗೆಯೇ ಕಾಲಮಾನಕ್ಕೆ ಅನುಗುಮವಾಗಿ ವಸತಿಯ ವ್ಯವಸ್ಥೆ ಬದಲಾವಣೆಯಾಯಿತು.

"ಮಾನವನು ಪ್ರಾಥಮಿಕ ಸ್ಥಿತಿಯಲ್ಲಿ ಆಹಾರ ಸಂಚಯಕ್ಕಾಗಿ ಅಲೆಯಬೇಕಾಗುತ್ತಿತ್ತು. ಈ ಪ್ರಾಥಮಿಕ ಸ್ಥಿತಿಯಲ್ಲಿ ಎರಡು ಮೆಟ್ಟುಗಳಿವೆ. ಮೊದಲನೆಯದು ಬೇಟೆಗಾರಿಕೆ, ಎರಡನೆಯದು ದನಗಾರಿಕೆ, ಬೇಟೆಯಾಡಿ ಬದುಕುವುದು ತೀರ ಆರಂಭಕಾಲದ ಸ್ಥಿತಿ ಬಳಿಕ ಮಾನವನಿಗೆ ತನ್ನ ಸುತ್ತಲಿನ ಪ್ರಾಣಿಗಳ ಪರಿಚಯವು ಹೆಚ್ಚಾದಂತೆ ಅವುಗಳಲ್ಲೆ ತನಗೆ ಉಪಯುಕ್ತವಾದುವುಗಳನ್ನು ಸಾಕಿಕೊಂಡಿರುವುದನ್ನು ಕಲಿತನು ದನಗಳನ್ನು ಸಾಕಿಕೊಂಡು ಬದುಕುವಾಗಲೂ ಅವುಗಳ ಆಹಾರಕ್ಕಾಗಿ ಮಾನವನಿಗೆ ಅಲೆದಾಟವು ತಪ್ಪಿದ್ದಲ್ಲ. ಗುಡ್ಡ, ನದಿ ಕೊಳ್ಳಗಳ ಗುಂಟ ನೀರು ಇದ್ದ ಕಡೆಗೆ ಹುಡುಕುತ್ತ ಹೋಗಬೇಕಾಗುತ್ತಿತ್ತು."[೧]

ದೊಡ್ಡಿ ಎಂಬಲ್ಲಿ ಈ ದನಿಯಿದೆ. ದೊಡ್ಡಿ ಎಂದರೆ **"ಗುಡಿಸಲು"**, ದೊಡ್ಡಿ ಎಂದು ದನಗಳ ಕೊಟ್ಟಿಗೆಗೂ ಹೆಸರು ಜೀವ ದನಗಳ ದೊಡ್ಡಿ ಗೋಸ್ಥಾನಕವೆಂದು ಕೋಶವು ಹೇಳುತ್ತದೆ. ಈ ಕಾರಣಗಳಿಂದ ದೊಡ್ಡಿ ಎಂದರೆ ಜನ ಮತ್ತು ದನಗಳ ವಾಸಸ್ಥಾನ.

ಬಿಡಾರ ನಿವಾಸವೆಂಬುದು ಸ್ಪಷ್ಟವಾಗಿ ಇರುವ ದೊಡ್ಡಿ ಹೆಸರು ಮಾನನೀಯವಾಗಿದೆ. ದೊಡ್ಡಿ ಎಂಬ ನಿವಾಸ ಸ್ಥಾನವಾಚಕ ಶಬ್ದವು ದನಗಾಹಿ ಮತ್ತು ಕುರಿಗಾಹಿಕೆಯ ಬಾಳಿನ ದ್ಯೋತಕವಾಗಿದೆಯೆಂಬಲ್ಲಿ ಸಂದೇಹವಿಲ್ಲ. ಆದುದರಿಂದ ದೊಡ್ಡಿಗಳೇ ನಮ್ಮ ನಾಡಿನ ಆರಂಭಕಾಲದ ವಸತಿಗಳೆಂದು ಊಹಿಸಬಹುದಾಗಿದೆ.

ದೊಡ್ಡಿಗಳು ಎಂದರೇನು?

ಜಗತ್ತಿನಾದ್ಯಂತ ಜನರು ಸಾಮಾನ್ಯವಾಗಿ ಪಟ್ಟಣಗಳಲ್ಲಿ ಮತ್ತು ಹಳ್ಳಿಗಳಲ್ಲಿ ವಾಸಮಾಡುವುದು ಸರಿಯಷ್ಟೇ ಹಾಗೆಯೇ ಪಟ್ಟಣಗಳಲ್ಲಾಗಲಿ, ಹಳ್ಳಿಗಳಲ್ಲಾಗಲಿ ವಾಸಮಾಡದೇ ಎಲ್ಲರಿಂದಲೂ ದೂರವಾಗಿ ಕುರುಚಲು ಗುಡ್ಡ, ತಗ್ಗು, ದಿನ್ನಿ, ಗುಡ್ಡಗಳ ವಾರಿನಲ್ಲಿ ವಾಸಮಾಡುವ ಜನಗಳನ್ನು ಕಾಣುತ್ತೇವೆ. ಆದೇ ರೀತಿ ಕರ್ನಾಟಕ ರಾಜ್ಯದ ರಾಯಚೂರು ಜಿಲ್ಲೆಯಲ್ಲಿ ಪ್ರತ್ಯೇಕವಾಗಿ ನೆಲೆಸಿರುವ ಸಮುದಾಯಗಳಾದ ಬೇಡ, ಕುರುಬ ಮತ್ತು ಕಬ್ಬಲಿಗ ಸಮುದಾಯದ ನೆಲೆಗಳಿಗೆ ದೊಡ್ಡಿ ಎಂದು ಕರೆಯುತ್ತಾರೆ. ಈ ದೊಡ್ಡಿಗಳು ಸಾಮಾನ್ಯವಾಗಿ ಊರಿನಿಂದ ಒಂದೆರಡು ಮೈಲಿ ದೂರದಲ್ಲಿರುತ್ತವೆ. ಇಂತಹ ಕಡೆಗಳಲ್ಲಿ ಜನಸಂಖ್ಯೆ ಹೆಚ್ಚು ಇರುವ ಕಡೆ ಮತ್ತು ಮುಖ್ಯರಸ್ತೆ ಇರುವ ಕಡೆ ದೊಡ್ಡಿಗಳು ಇದ್ದರೆ ನಾಗರೀಕತೆಯ ಪ್ರಭಾವ ದೊಡ್ಡಿಗಳ ಮೇಲೆ ಹೆಚ್ಚಾಗಿರುತ್ತದೆ. ಆದರೆ ದೇವದುರ್ಗಾ ತಾಲೂಕಿನ ಕೆಲವು ದೊಡ್ಡಿಗಳು, ಲಿಂಗಸ್ಗೂರು ತಾಲೂಕಿನ ಬಹುತೇಕ ದೊಡ್ಡಿಗಳು ಹಳ್ಳಿಗಳಿಂದ ಬಹುದೂರದಲ್ಲಿ ಪ್ರತ್ಯೇಕವಾಗಿ ಅಡವಿಯ ಮಧ್ಯೆ ಇರುವ ದೊಡ್ಡಿಗಳ ಮೇಲೆ ನಾಗರೀಕತೆಯ ಪ್ರಭಾವ ಕಡಿಮೆ ಇದೆ. ಎಂಟು ಹತ್ತು ಗುಡಿಸಲುಗಳಿರುವ ಅತ್ಯಂತ ಚಿಕ್ಕ ಹಳ್ಳಿಗಳಿರುವಂತೆಯೇ ನೂರೈವತ್ತು ಇನ್ನೂರೈವತ್ತು ಮನೆಗಳಿರುವ ದೊಡ್ಡಿ ದೊಡ್ಡಿಗಳು ಇವೆ. ಈ ಜನರ ಆಚಾರ ವಿಚಾರ ಇವರ ನೆಲೆಗಳು ಪಟ್ಟಣದಲ್ಲಿ ಮತ್ತು ಹಳ್ಳಿಗಳಲ್ಲಿ ವಾಸಮಾಡುವ ಜನರಿಗೆ ಆಶ್ಚರ್ಯಕರವಾಗಿ ಮತ್ತು ವಿಚಿತ್ರವಾಗಿ ಕಾಣಬಹುದು.

ಇಂತಹ ನೆಲೆಗಳಲ್ಲಿ ಕರ್ನಾಟಕದ ಹಿಂದುಳಿದ ಬುಡಕಟ್ಟುಗಳಲ್ಲೊಂದಾದ ಬೇಡರು ಪ್ರತ್ಯೇಕವಾಗಿ ವಾಸಮಾಡುತ್ತಾರೆ. ಇಂತಹ ಸ್ಥಳಗಳಿಗೆ ಮಧ್ಯಕರ್ನಾಟಕ ಚಿತ್ರದುರ್ಗ ತುಮಕೂರು ಜಿಲ್ಲೆಗಳಲ್ಲಿ ಹಟ್ಟಿಗಳು ಎಂದು ಕರೆದರೆ ರಾಯಚೂರು ಜಿಲ್ಲೆಯಲ್ಲಿ ದೊಡ್ಡಿಗಳು ಎಂದು ಕರೆಯುವರು. ದೊಡ್ಡಿಗಳು ಕೇವಲ ಈ ಜಿಲ್ಲೆಯಲ್ಲಿ ಅಷ್ಟೇ ಅಲ್ಲದೇ ಮೈಸೂರು, ಮಂಡ್ಯ, ರಾಮನಗರ ಜಿಲ್ಲೆಯಲ್ಲಿಯೂ ಕಂಡುಬರುತ್ತವೆ. ಜೊತೆಗೆ ನೆರೆ ರಾಜ್ಯವಾದ ಆಂಧ್ರ ಪ್ರದೇಶದಲ್ಲಿ ರಾಯಚೂರು ಜಿಲ್ಲೆ ಹೊಂದಿಕೊಂಡಿರುವ ಅನೇಕ ದೊಡ್ಡಿಗಳು ಕಂಡುಬರುತ್ತವೆ. ಅಷ್ಟೇ ಅಲ್ಲದೇ ಯಾದಗಿರಿ ಜಿಲ್ಲೆಗೆ ಅದೇ ರೀತಿಯಾಗಿ ಕಂಡುಬರುತ್ತವೆ. ಇದೇ ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿರುವ ಕುರುಬ, ಕಬ್ಬಲಿಗ ಸಮುದಾಯಗಳ ಪ್ರತ್ಯೇಕ ನೆಲೆಗಳು ಕಂಡುಬರುತ್ತವೆ. ಅವುಗಳಿಗೂ ದೊಡ್ಡಿ ಎಂದು ಕರೆಯುತ್ತಾರೆ. ಕುರುಬ, ಕಬ್ಬಲಿಗ ಸಮುದಾಯ ಪ್ರತ್ಯೇಕ ನೆಲೆಗಳು ಕರ್ನಾಟಕ ರಾಜ್ಯದ ಯಾವುದೇ ಜಿಲ್ಲೆಯಲ್ಲಿ ಕಂಡುಬರುವುದಿಲ್ಲ.

ಬೇಡರ ನೆಲೆಗಳಲ್ಲಿ ಇರುವ ಜನರಿಗೆ ವಿಚಾರಿಸಿದರೆ ಆ ನೆಲೆಗೆ ಯಾವಾಗ ಬಂದಿದ್ದಾರೆ ಎನ್ನುವ ಮಾಹಿತಿಯಿಲ್ಲ. ಎಂದು ಅಲ್ಲಿನ ವೃದ್ಧ ಶಿವಪ್ಪ ಹೇಳುತ್ತಾನೆ. ನಮ್ಮ ತಂದೆಯವರ ಕಾಲದಿಂದಲೂ ಇಲ್ಲಿಯೇ ನೆಲೆಸಿದ್ದೇವೆ ಎಂದು ಹೇಳುತ್ತಾನೆ. ಕುರುಬರ ಮತ್ತು ಕಬ್ಬಲಿಗರ ದೊಡ್ಡಿಗಳಿಗೆ ಭೇಟಿ ನೀಡಿದಾಗ ಅವರ ನೆಲೆಗಳಿಗೆ ಬಗ್ಗೆ ವಿಚಾರಿಸಿದಾಗ ಕೆಲವರು ಮೊದಲಿನಿಂದಲೂ ಇಲ್ಲಿಯೇ ಇದ್ದೇವೆ ಎಂದು ಹೇಳಿದರೆ ಇನ್ನು ಕೆಲವು ದೊಡ್ಡಿ ಜನರು ಕೃಷ್ಣ ನದಿಯಿಂದ ನಮ್ಮ ಹೊಲಗಳಿಗೆ ನೀರಾವರಿ ಬಂತು ಆದ್ದರಿಂದ ಮನೆ ಹೊಲ ದೂರ ಇರುವುದರಿಂದ ಇಲ್ಲಿ ಬಂದು ನೆಲೆಸಿದ್ದೇವೆ ಎಂದು ಹೇಳುತ್ತಾರೆ. ರಾಯಚೂರು ಜಿಲ್ಲೆಯ ದೊಡ್ಡಿಗಳಲ್ಲಿ ನೆಲೆಸಿರುವ ಬೇಡ ಮತ್ತು ಕುರುಬ ಕಬ್ಬಲಿಗ ಸಮುದಾಯಗಳಲ್ಲಿ ನೆಲೆಗಳ ವಿಷಯದಲ್ಲಿ ವ್ಯತ್ಯಾಸಗಳಿವೆ. ಜೊತೆಗೆ ಭಾಷೆಗಳಲ್ಲಿ ವ್ಯತ್ಯಾಸ ಕಂಡುಬರುತ್ತದೆ. ಬೇಡರ ಮನೆಮಾತು ಕನ್ನಡ ಮತ್ತು ಕನ್ನಡ ಮಿಶ್ರಿತ ತೆಲುಗು ಮಾತನಾಡುತ್ತಾರೆ. ಕುರುಬರು ಮತ್ತು ಕಬ್ಬಲಿಗರಿಗೆ ಕನ್ನಡ ಬಿಟ್ಟರೆ ಬೇರೆ ಭಾಷೆ ಬರುವುದಿಲ್ಲ.

೩.೨ ದೊಡ್ಡಿಯ ಹಿನ್ನೆಲೆ

ಮೊದಲಿಗೆ ದೊಡ್ಡಿಯ ಬಗ್ಗೆ ಪರಿಚಯ ಮಾಡಿದಾಗ ಮಾತ್ರ ದೊಡ್ಡಿಯ ಹಿನ್ನೆಲೆಯನ್ನು ವಿವರಿಸಲು ಅನುಕೂಲವಾಗುತ್ತದೆ. ದೊಡ್ಡಿಗಳು ಎಂದರೆ ಗ್ರಾಮ ಅಥವಾ ಹಳ್ಳಿಗಳಿಂದ ದೂರದಲ್ಲಿ ನೆಲೆಸಿರುವ ಜನ ಸಮುದಾಯ ಗುಂಪುಗಳನ್ನು ದೊಡ್ಡಿಯೆಂದು ರಾಯಚೂರು ಜಿಲ್ಲೆಯಲ್ಲಿ ಕರೆಯುತ್ತಾರೆ. ವಿಶೇಷವಾಗಿ ತಮ್ಮ ತಮ್ಮ ಹೊಲಗದ್ದೆಯಲ್ಲಿ ಜೊತೆಗೆ ಗುಡ್ಡದ ಹಂಚಿನಲ್ಲಿ ಗುಡಿಸಲುಗಳನ್ನು ಹಾಕಿಕೊಂಡು ತಂಡೋಪ ತಂಡವಾಗಿ ವಾಸಿಸುವ ಬೇಡ, ಕುರುಬ, ಕಬ್ಬಲಿಗ ಸಮುದಾಯದ ಜನ ಸಮುದಾಯ ನೆಲೆನಿಂತಿರುವ ನೆಲೆಗಳಿಗೆ ಈ ಭಾಗದಲ್ಲಿ ದೊಡ್ಡಿಗಳು ಎಂದು ಕರೆಯುತ್ತಿದ್ದಾರೆ.

ದೊಡ್ಡಿಗಳ ಹಿನ್ನೆಲೆಯಲ್ಲಿ ನೋಡಿದರೆ ಗೊಂದಲದಿಂದ ಕೂಡಿದ ನೆಲೆಗಳಾಗಿವೆ. ಇಂತಹದೇ ನೆಲೆಗಳನ್ನು ಕರ್ನಾಟಕದ ಮಧ್ಯಭಾಗದ ನೆಲೆಗಳಿಗೆ ಹಟ್ಟಿಯೆಂದು ಕರೆಯುತ್ತಾರೆ. ಆದರೆ ರಾಯಚೂರು ಜಿಲ್ಲೆಯಲ್ಲಿ ಈ ನೆಲೆಗಳಿಗೆ ಯಾಕೆ ದೊಡ್ಡಿಗಳು ಎಂದು ಕರೆಯುತ್ತಾರೆ ಎನ್ನುವ ಪ್ರಶ್ನೆ ಎದುರಾಗುತ್ತದೆ. ಇದಕ್ಕೆ ಒಂದು ರೀತಿಯ ವಿವರಣೆಯನ್ನು ನೀಡಿದರೆ ಸೂಕ್ತ ಎನಿಸುತ್ತದೆ. ಅರಣ್ಯ ಗುಡ್ಡಗಳ ಸಾಲುಗಳಲ್ಲಿ, ತಗ್ಗು ದಿಣ್ಣಿ, ಗಡ್ಡಗಳಲ್ಲಿ ವಾಸಿಸುವುದರಿಂದ ಗಡ್ಡೆ ದೊಡ್ಡಿ ದಡ್ಡಿ ದಿನ್ನಿ ಹಿನ್ನೆಲೆಯಿಂದ ಈ ನೆಲೆಗಳಿಗೆ ದೊಡ್ಡಿಯೆಂದು ಗುರುತಿಸಬಹುದು. ಜೊತೆಗೆ ವಿಶೇಷವಾಗಿ ಈ ನೆಲೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮೂಲದಿಂದಲೂ ಬೇಡ ಬುಡಕಟ್ಟು ಸಮುದಾಯ ವಾಸಿಸುವುದರಿಂದ ಈ ನೆಲೆಗಳಿಗೆ ದೊಡ್ಡಿ ಎಂದು ಬಂದಿರಬಹುದು.

ಇದಕ್ಕೆ ಪೂರಕವಾಗಿ ಮೈಸೂರು ಜಿಲ್ಲೆಯಲ್ಲಿ ಬುಡಕಟ್ಟು ಸಮುದಾಯ ವಾಸಿಸುವ ನೆಲೆಗಳಿಗೆ ಹಾಡಿಗಳ ಎಂದು ಕರೆಯುತ್ತಾರೆ. ಪ್ರಾದೇಶಿಕ ಭಿನ್ನತೆಯಿಂದ ಹೆಚ್ಚಿನದಾಗಿ ಹೇಳುವುದಾದರೆ ಮುಂಚಿತವಾಗಿ ಈ ಪ್ರದೇಶ ಹೈದ್ರಾಬಾದ್ ನಿಜಾಂನಿಗೆ ಸೇರಿದ

ಪ್ರದೇಶವಾಗಿದ್ದರಿಂದ ಪರಭಾಷೆಯ ಪ್ರಭಾವದಿಂದ ಈ ನೆಲಗೆ ದೊಡ್ಡಿಯೆಂದು ಬಂದಿರಬಹುದು. ಜೊತೆಗೆ ಇಂತಹ ನೆಲೆಯಲ್ಲಿ ವಾಸಿಸುವ ಹಲವು ಸಮುದಾಯಗಳಲ್ಲಿ ಒಂದಾದ ಬೇಡ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಕಂದೆಲಗು ಭಾಷೆಯನ್ನೇ ಆಡುವವರಿಂದ ಈ ಸ್ಥಳಗಳಲ್ಲಿ ಕಂಡುಬರುತ್ತಾರೆ. ಈ ಸ್ಥಳಗಳಲ್ಲಿ ಗುಂಪು ಗುಂಪುಗಳಾಗಿ ನೆಲೆನಿಂತಿರುವ ಕಾರಣವಾದ ಹಿನ್ನೆಲೆಯನ್ನು ತಿಳಿದುಕೊಳ್ಳಲಾಗಿದೆ.

೧. **ಆಯಕಟ್ಟಿನ ನೆಲೆಯಾಗಿ ದೊಡ್ಡಿ :** ರಾಯಚೂರು ಜಿಲ್ಲೆಯ ಚಾರಿತ್ರಿಕ ಹಿನ್ನೆಲೆಗೂ ಈ ದೊಡ್ಡಿಗಳಿಗೂ ಬಹಳ ನಿಕಟವಾದ ಸಂಬಂಧ ಇರುವುದು ತಿಳಿದುಬರುತ್ತದೆ. ರಾಯಚೂರು ಜಿಲ್ಲೆಯ ಗುಡಗುಂಟಿ, ಗುಂತಗೋಳ, ದೇವದುರ್ಗಾ ಈ ಮೂರು ಪ್ರದೇಶವನ್ನು ಒಂದೊಂದು ರಾಜಮನೆತನ ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ಮಾಡಿರುವುದು ತಿಳಿದುಬರುತ್ತದೆ. ರಾಜ್ಯಭಾರ ಮಾಡಿರುವ ಈ ಮೂರು ರಾಜಮನೆತನಗಳು ನಾಯಕ ಸಮುದಾಯಕ್ಕೆ ಸೇರಿದ ಮನೆತನಗಳಾಗಿವೆ. ಆದ್ದರಿಂದ ಮೂರು ಸಂಸ್ಥಾನಗಳಲ್ಲಿ ಸೈನಿಕರಾಗಿ ಸೇವೆ ಸಲ್ಲಿಸಿದವರು ಬೇಡರು ಪ್ರಧಾನವಾಗಿ ಕಂಡುಬರುತ್ತಾರೆ. ಇದರಿಂದ ಸಂಸ್ಥಾನದ ರಕ್ಷಣೆಗಾಗಿ ಆಯಕಟ್ಟಿನ ಸ್ಥಳವಾದ ಗುಡ್ಡದ ವಾರಿಗಲ್ಲಿ ನೆಲೆನಿಂತಿರುವ ಜನ ಸಮುದಾಯ ಗುಂಪುಗಳ ದೊಡ್ಡಿಗಳಾದವು ಎಂದು ಕೆಲವರು ಹೇಳುತ್ತಾರೆ. ಅದಕ್ಕೆ ಸಂಬಂಧ ಪಟ್ಟಂತೆ ಇವರಿಗೆ ಅಡ್ಡ ಹೆಸರು ಗುರಿಕಾರ ದಾಳಿಯರ ದೇಸಾಯಿ ಇವರ ಹೆಸರುಗಳಾಗಿವೆ. ಈ ಹಿನ್ನೆಲೆಯಿಂದಾದ ದೊಡ್ಡಿಯಾಗಿದೆ.

೨. **ಮಾನವ ಮೂಲ ನೆಲೆಯಾಗಿ ದೊಡ್ಡಿ :** ದೊಡ್ಡಿಯ ಹಿನ್ನೆಲೆಯನ್ನು ನಾನು ಕ್ಷೇತ್ರ ಕಾರ್ಯಕ್ಕೆ ಹೋದಾಗ ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬೇಡರು ದೊಡ್ಡಿಗಳಲ್ಲಿ ವಾಸವಾಗಿರುವುದು ಕಂಡುಬರುತ್ತಾರೆ. ಮೇಲಾಗಿ ಇಂತಹದೇ ರಾಜ್ಯದ ಬುಡಕಟ್ಟು ನೆಲೆಗಳಾದ ಹಟ್ಟಿಗಳು ಮಧ್ಯ ಕರ್ನಾಟಕದಲ್ಲಿ ಕಂಡುಬಂದರೆ ಮೈಸೂರು ಜಿಲ್ಲೆಯಲ್ಲಿ ನೆಲೆನಿಂತಿರುವ ಬುಡಕಟ್ಟು ಸ್ಥಳಗಳಿಗೆ ಹಾಡಿ ಎಂದು ಕರೆಯುತ್ತಾರೆ. ಜೊತೆಗೆ ಈ ಜಿಲ್ಲೆಯಲ್ಲಿ ಬುಡಕಟ್ಟು ನೆಲೆಗಳನ್ನು ತಾಂಡ ಗೋಟಗಳೆಂದು ಕರೆಯುತ್ತಾರೆ. ಒಟ್ಟಾರೆಯಾಗಿ ಮಾನವ ಸಮೂಹ ಜೀವನ ನಡೆಸುವ ಮೊದಲು ಮೂಲಗಳಿಗೆ ದೊಡ್ಡಿಗಳು ಹಿನ್ನೆಲೆಯಾಗಿವೆ.

೩. **ವ್ಯವಸಾಯದ ಮೂಲದ ದೊಡ್ಡಿ :** ಸಾಮಾನ್ಯವಾಗಿ ಇತ್ತೀಚಿಗೆ ಈ ಜಿಲ್ಲೆಯಲ್ಲಿ ವ್ಯವಸಾಯ ಭೂಮಿಗಳು ಹಳ್ಳಿಗಳ ಬಿಟ್ಟು ನಾಲ್ಕು ಐದು ಮೈಲಿ ದೂರದಲ್ಲಿ ಇರುವುದರಿಂದ ಜೊತೆಗೆ ಕಾಲುದಾರಿಯಿಂದ ವ್ಯವಸಾಯದ ಸಲುವಾಗಿ ಹೊಲಗದ್ದೆಗಳಿಗೆ ನಡೆದುಕೊಂಡು ಹೋಗುವುದು ಕಷ್ಟವಾದುದರಿಂದ ಕೃಷಿಯನ್ನು ನಂಬಿರುವ ಜನರು ತಮ್ಮ ತಮ್ಮ ಹೊಲಗಳಲ್ಲಿ ಕೃಷಿ ಭೂಮಿಯ ಮೂಲೆಗಳಲ್ಲಿ ಮೊದಲಿಗೆ ಗುಡಿಸಲು ಹಾಕಿಕೊಂಡಿದ್ದರ ಇದರಲ್ಲಿ ಆರ್ಥಿಕ ಸದೃಢವಾದವರು ಮನೆಗಳನ್ನು ನಿರ್ಮಿಸಿಕೊಂಡು ವ್ಯವಸಾಯದ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ದೊಡ್ಡಿಗಳಾಗಿವೆ. ಜೊತೆಗೆ ಅಕ್ಕಪಕ್ಕದಲ್ಲಿ ಇರುವ ಹೊಲಗದ್ದೆಗಳಲ್ಲಿ ಆ

ಜಮೀನಿಗೆ ಸಂಬಂಧಪಟ್ಟವರು ನಂತರ ಕೃಷಿಯ ಅನುಕೂಲಕ್ಕಾಗಿ ಗುಡಿಸಲುಗಳನ್ನು ಹಾಕಿಕೊಂಡು ನೆಲೆಸಿದರಿಂದ ಹೆಚ್ಚು ಹೆಚ್ಚು ಮನೆಗಳಾದ ನಂತರ ಈ ಸ್ಥಳ ದೊಡ್ಡಿಯಾಯಿತು ಎಂದು ಹೇಳುತ್ತಾರೆ.

೪. ಸಾಕುಪ್ರಾಣಿಗಳ ಹಿನ್ನೆಲೆಯಾಗಿ ದೊಡ್ಡಿ : ದೊಡ್ಡಿಗಳ ಹಿನ್ನೆಲೆಯ ಬಹು ಮುಖ್ಯವಾದ ಅಂಶವೆಂದರೆ ಸಾಕು ಪ್ರಾಣಿಗಳಾದ ಕುರಿ ಆಕಳು, ಎತ್ತು, ಎಮ್ಮೆ ಇವುಗಳನ್ನು ಸಾಕುವರು ಪ್ರಾಣಿಗಳ ಮೇವುಗಳಿಗಾಗಿ ಹಳ್ಳಿಗಳಿಂದ ಹೊಲಗದ್ದೆಗಳಿಗೆ ಸಾಕುಪ್ರಾಣಿಗಳನ್ನು ಮೇಯಿಸುವುದಕ್ಕಾಗಿ ಸುಮಾರು ದೂರ ಅಂದರೆ ನಾಲ್ಕು ಐದು ಮೈಲು ದೂರ ಕಾಲು ನಡುಗೆಯಲ್ಲಿ ನಡೆದುಕೊಂಡು ಹೋಗಿ ಬರಬೇಕಾಗುತ್ತದೆ. ಆ ಹಿನ್ನೆಲೆಯಲ್ಲಿ ಹಳ್ಳಿಗಳಿಂದ ದೂರವಿರುವ ತಮ್ಮ ಜಮೀನು ಹತ್ತಿರ ಎತ್ತರವಾದ ಸ್ಥಳಗಳಲ್ಲಿ ಗುಡಿಸಲುಗಳನ್ನು ಹಾಕಿಕೊಂಡು ಬೇಡ, ಕುರುಬ, ಕಬ್ಬಲಿಗ ನೆಲೆಸಿರುವುದನ್ನು ಕಂಡುಬರುತ್ತದೆ.

೫. ಹಳ್ಳಿಗಳಲ್ಲಿ ಸ್ಥಳದ ಅಭಾವದ ಹಿನ್ನೆಲೆಯಿಂದಾದ ದೊಡ್ಡಿ : ದೊಡ್ಡಿಗಳು ನಿರ್ಮಾಣವಾಗಲು ಹಿನ್ನೆಲೆಯನ್ನು ನೋಡಿದಾಗ ಮಹತ್ವದ ಸಂಗತಿ ಎಂದರೆ ನಗರೀಕರಣ ಜಾಗತೀಕರಣದಿಂದ ಹಳ್ಳಿಗಳಲ್ಲಿ ಮನೆ ಮುಂದೆಯಾಗಲಿ ಅಥವಾ ಅಕ್ಕ ಪಕ್ಕದಲ್ಲಿ ವಿಶಾಲವಾದ ಸ್ಥಳದ ಕೊರತೆಯಿಂದ ವ್ಯವಸಾಯ ಮತ್ತು ಈ ಕೆಲಸಕ್ಕೆ ಸಂಬಂಧ ಪಟ್ಟ ವಸ್ತುಗಳು ಮತ್ತು ವ್ಯವಸಾಯದ ಹಿನ್ನೆಲೆಯಾಗಿ ಇರುವ ಎತ್ತು ಮುಂತಾದ ಸಾಕುಪ್ರಾಣಿಗಳನ್ನು ಸಾಕಲು ಸ್ಥಳದ ಅಭಾವದಿಂದಾಗಿ ಹಳ್ಳಿಯನ್ನು ಬಿಟ್ಟು ತಮ್ಮದೇ ಆದ ಸ್ವಂತ ಜಮೀನುಗಳಲ್ಲಿ ಆಶ್ರಯವನ್ನು ಕಟ್ಟಿಕೊಂಡು ಜೊತೆಗೆ ತಮ್ಮ ಗುಡಿಸಲು ಪಕ್ಕದಲ್ಲಿ ಪ್ರಾಣಿಗಳನ್ನು ಸಾಕಿಕೊಂಡು ಜೀವನ ನಡೆಸುತ್ತಿರುವುದು ಕಂಡುಬರುತ್ತದೆ. ಹಳ್ಳಿಯಲ್ಲಿ ಇರುವ ನೆರೆ ಹೊರೆ ಮತ್ತು ಬೇರೆ ಬೇರೆ ಸಮುದಾಯದವರು ನೆಲೆಸಿದರು ಇದರಿಂದ ಈ ಪ್ರದೇಶವನ್ನು ದೊಡ್ಡಿ ಎಂದು ಕರೆಯಲಾರಂಭಿಸಿದರು.

ಆಧುನಿಕತೆಯಿಂದ ಹಳ್ಳಿಯಲ್ಲಿ ಸ್ಥಳದ ಅಭಾವ ಇರುವುದರಿಂದ ಇತ್ತೀಚಿಗೆ ಊರಿನಲ್ಲಿ ಹೆಚ್ಚು ಬಯಲು ಪ್ರದೇಶವನ್ನು ಕೊಂಡುಕೊಳ್ಳಬೇಕೆಂದರೆ ಆಧುನಿಕತೆ, ನಾಗರೀಕರಣ, ಭರಟೆಯಿಂದ ತುಂಡು ಭೂಮಿಗೂ ಚಿನ್ನದ ಬೆಲೆ ಬಂದಿದೆ. ಇದರಿಂದ ಅತಿ ಹೆಚ್ಚು ದುಡ್ಡು ಕೊಟ್ಟು ತಮಗೆ ತಮ್ಮ ಮಕ್ಕಳಿಗೆ ಮನೆಕಟ್ಟಿಕೊಡಲು ಸಾಧ್ಯವಾಗುವುದಿಲ್ಲ ಎಂದು ಅರಿತುಕೊಂಡು ತಮ್ಮ ಸ್ವಂತ ಹೊಲಗಳಲ್ಲಿ ಗುಡಿಸಲು ಹಾಕಿಕೊಂಡರು. ಈ ಹಿನ್ನೆಲೆಯಿಂದಾಗಿ ದೊಡ್ಡಿಗಳಾದವು ಎಂದು ಇಲ್ಲಿನ ಹಿರಿಯರು ತಮ್ಮದೇ ಮಾತಿನಲ್ಲಿ ತಿಳಿಸುತ್ತಾರೆ.

೬. ಸಾಕುಪ್ರಾಣಿಗಳ ನೆಲೆ ನಂತರದಲ್ಲಿ ದೊಡ್ಡಿ : ಮೊದಲಿಗೆ ಈ ಸ್ಥಳಗಳು ಪ್ರಾಣಿಗಳ ನೆಲೆಯಾಗಿದ್ದವು ಇವುಗಳಿಗೆ ಕುರಿ ದೊಡ್ಡಿ ಆಡಿನ ದೊಡ್ಡಿ ಮುಂತಾದ ಸಾಕು ಪ್ರಾಣಿಗಳ ದೊಡ್ಡಿಗಳು ಇದ್ದವು. ಕಾಲನಂತರದಲ್ಲಿ ಕಾಡು ಪ್ರಾಣಿಗಳಿಂದ ಸಾಕುಪ್ರಾಣಿಗಳನ್ನು ರಕ್ಷಿಸಿಕೊಳ್ಳಲು ಅಡವಿಯಲ್ಲಿ ಒಂಟಿಯಾಗಿರುವುದರಿಂದ ಮನುಷ್ಯ ಮತ್ತು ಸಾಕುಪ್ರಾಣಿಗಳಾದ ಹಾಡು,

ಕುರಿಗಳು ಕಾಡುಪ್ರಾಣಿಗಳ ಹಾವಳಿಗೆ ಬಲಿಯಾಗಬೇಕಾಗುತ್ತದೆ ಎಂಬ ಭಯದಿಂದ ಜೊತೆಗೆ ನೈಸರ್ಗಿಕ ವಿಕೋಪಗಳಿಂದ ಜಾಗೃತನಾಗಿ ಗುಡಿಸಲುಗಳನ್ನು ಹಾಕಿಕೊಂಡು ನೆಲೆಸಿದನು. ಹೆಚ್ಚಿನ ಸಂಖ್ಯೆಗಳಲ್ಲಿ ಗುಡಿಸಲು ನಿರ್ಮಾಣವಾದ್ದರಿಂದ ನಂತರ ಈ ನೆಲೆಯೇ ದೊಡ್ಡಿಯಾಯಿತು.

೭. ಸಂಪನ್ಮೂಲಗಳ ಹಿನ್ನೆಲೆಯಿಂದಾದ ದೊಡ್ಡಿ : ಹಳ್ಳಿಗಳಲ್ಲಿ ನೆಲೆಸಿರುವ ಬಹುಸಂಖ್ಯಾತರು ಕೃಷಿಕರು ಜೊತೆ ಹಳ್ಳಿಯನ್ನು ಕೃಷಿಯ ಕೊಪ್ಪೆ ಎಂದು ಕರೆಯುತ್ತಾರೆ. ಹೆಚ್ಚಿನ ಸಂಖ್ಯೆಯಲ್ಲಿ ಒಕ್ಕಲುತನವನ್ನು ನಂಬಿಕೊಂಡು ಬದುಕುವ ಜನರಿಗೆ ಇತ್ತೀಚೆಗೆ ಕುಡಿಯಲು ನೀರು ಉರುವಲು ಕಟ್ಟಿಗೆ ಸಾಕುಪ್ರಾಣಿಗಳಿಗೆ ಮೇವು, ಗಿಡ, ಮರ ಅಪಾರವಾದ ಸಸ್ಯ ಸಂಪತ್ತು. ನೈಸರ್ಗಿಕವಾಗಿ ಸಿಗುವುದರಿಂದ ಇವುಗಳನ್ನು ಹಳ್ಳಿಗಳಿಗೆ ತರಬೇಕಾದರೆ ಮನುಷ್ಯನು ಹೆಚ್ಚು ಶ್ರಮ ಪಡಬೇಕಾಗುತ್ತದೆ. ಜೊತೆಗೆ ಆರ್ಥಿಕ ಸಮಸ್ಯೆಗಳು ಎದುರಾಗುವುದರಿಂದ ತಮ್ಮ ವಾಸ ಸ್ಥಾನವನ್ನು ಹೊಲಗದ್ದೆಗಳಿಗೆ ವರ್ಗಾವಣೆ ಮಾಡಿಕೊಂಡಿರುವವರು ರಾಯಚೂರು ಜಿಲ್ಲೆಯ ಲಿಂಗಸ್ಗೂರು, ದೇವದುರ್ಗಾ ತಾಲ್ಲೂಕುಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ತಂಡೋಪ ತಂಡವಾಗಿ ನೆಲೆಸಿರುವ ಸ್ಥಳಗಳನ್ನು ದೊಡ್ಡಿ ಎಂದು ಹೇಳುತ್ತಾರೆ.

೮. ನೀರಾವರಿ ಹಿನ್ನೆಲೆಯಿಂದಾದ ದೊಡ್ಡಿ : ರಾಯಚೂರು ಜಿಲ್ಲೆ ಎಂದರೆ ಬರದ ನಾಡು ಎಂದು ಹಣೆಪಟ್ಟಿ ಇದೆ. ಈ ಸಂದರ್ಭದಲ್ಲಿ ರೈತರ ಪಾಲಿಗೆ ವರದಾನವಾದ ಬಸವಸಾಗರ ಜಲಾಶಯದಿಂದ ಲಿಂಗಸ್ಗೂರು ದೇವದುರ್ಗಾ ತಾಲ್ಲೂಕುಗಳು ನೀರಾವರಿಯಾದವು. ಇದರಿಂದ ನೀರಿನ ಅನುಕೂಲವಾದ್ದರಿಂದ ಹೊಲದಲ್ಲಿ ಇದ್ದು ವ್ಯವಸಾಯವನ್ನು ಮನೆ ಮಂದಿಯೆಲ್ಲ ಕೂಡಿ ಕೆಲಸ ಮಾಡಲು ಅನುಕೂಲವಾಗುತ್ತದೆ. ಎಂದು ತಿಳಿದುಕೊಂಡು ರಾಯಚೂರು ಜಿಲ್ಲೆಯ ಲಿಂಗಸ್ಗೂರು, ದೇವದುರ್ಗಾ ತಾಲ್ಲೂಕು ಹೆಚ್ಚಿನ ಸಂಖ್ಯೆ ಯಾವುದೇ ಬೇಧಭಾವವಿಲ್ಲದೇ ಹೊಲಗದ್ದೆಗಳಲ್ಲಿ ಗುಡಿಸಲು ಹಾಕಿಕೊಂಡು ಅವರ ಸಂಖ್ಯೆ ಹೆಚ್ಚಾದಾಗ ಅಂತಹ ಗುಂಪುಗಳನ್ನು ದೊಡ್ಡಿ ಎಂದು ಕರೆಯಲಾಯಿತು.

೯. ಸರ್ಕಾರಿ ಜಮೀನುಗಳಿಂದ ದೊಡ್ಡಿ : ದೊಡ್ಡಿ ಹಿನ್ನೆಲೆಯನ್ನು ನೋಡಿದರೆ ಕೆಲವು ಸ್ಥಳಗಳನ್ನು ನೋಡಿದರೆ ವಿಚಿತ್ರ ಅನಿಸುತ್ತದೆ. ಆದರೂ ಸತ್ಯ ಎಂದು ಯಾವುದೇ ಅನುಮಾನವಿಲ್ಲದೇ, ಹೇಳಬಹುದು. ಹಳ್ಳಿಗಳಲ್ಲಿ ಒಂದು ಕುಟುಂಬದಲ್ಲಿ ಸುಮಾರು ನಾಲ್ಕು ಐದು ಮಕ್ಕಳಿರುತ್ತಾರೆ. ಅವರಿಗೆ ಒಂದು ಸ್ವಂತ ಸೂರು, ನೆಲೆ, ಬೇಕಾಗುತ್ತದೆ. ಇತ್ತೀಚೆಗೆ ನೀರಾವರಿ ಪ್ರಭಾವದಿಂದ ಭೂಮಿಗೆ ಹೇಳತೀರದ ಬೇಡಿಕೆ ಬಂದಿದೆ. ಆದ್ದರಿಂದ ಭೂಮಿಯ ಬೆಲೆ ತುಂಬಾ ದುಬಾರಿಯಾಗಿದೆ. ಇದನ್ನು ಅರಿತು ಕುಟುಂಬದ ಮುಖ್ಯಸ್ಥನು ಎಲ್ಲರಿಗೂ ಹೊಲಗದ್ದೆಯಲ್ಲಿ ನೆಲೆಸಿದರಾಯಿತು. ಎಂದು ತಿಳಿದು ಕೆಲವು ಕುಟುಂಬಗಳು ಹೊಲಗಳಲ್ಲಿ ನೆಲೆಸಿದರೆ ಭೂಮಿ ಇಲ್ಲದೇ ಇರುವ ಬಡಕುಟುಂಬಗಳು ಜನರು ಸರ್ಕಾರಿ ಗುಡ್ಡಗಳ

ಸಾಲುಗಳಲ್ಲಿ ಗುಡಿಸಲು ಹಾಕಿಕೊಂಡು ಇದರಿಂದ ಭೂ ರಹಿತ ಕುಟುಂಬದವರು ಉಚಿತವಾಗಿ ಸಾಗುವ ಸ್ಥಳಗಳಲ್ಲಿ ಗುಂಪುಗುಂಪಾಗಿ ವಾಸಿಸಲು ಪ್ರಾರಂಭಿಸಿದರು ಮುಂದೆ ಇವೇ ನೆಲೆಗಳು ದೊಡ್ಡಿಗಳು ವಾಸಸ್ಥಾನವಾದವು.

೧೦. **ರಕ್ತ ಸಂಬಂಧಿಗಳ ಗುಂಪು** : ರಾಯಚೂರು ಜಿಲ್ಲೆಯಾದ್ಯಂತ ದೊಡ್ಡಿಗಳಿಗೆ ಭೇಟಿ ನೀಡಿದಾಗ ಕಂಡುಬಂದಿರುವ ಸಂಗತಿ ಎಂದರೆ ದೊಡ್ಡಿಗಳಲ್ಲಿ ಒಂದೇ ಸಮುದಾಯಕ್ಕೆ ಸೇರಿದವರಾಗಿದ್ದಾರೆ. ಅದರಲ್ಲಿ ಹೆಚ್ಚಿನವರು ರಕ್ತಸಂಬಂಧಗಳಿಂದ ಕೂಡಿರುವುದು ಕಂಡುಬರುತ್ತದೆ. ದೊಡ್ಡಿಗಳಲ್ಲಿ ನೆಲೆ ನಿಂತಿರುವ ಜನರು ತಮ್ಮ ತಮ್ಮ ಹೊಲ ಗದ್ದೆಗಳಲ್ಲಿ ಗುಡಿಸಲುಗಳನ್ನು ಹಾಕಿಕೊಂಡರೆ ಅಕ್ಕ ಪಕ್ಕ ಅಣ್ಣ ತಮ್ಮಂದಿರ ಹೊಲಗದ್ದೆ ಇರುವುದರಿಂದ ಅವರು ಕೂಡಿ ಅಲ್ಲಿಯೇ ವಾಸಮಾಡುವುದರಿಂದ ಆ ಅಣ್ಣ ತಮ್ಮಂದಿರಿಂದ ಕೂಡಿದ ಸಮೂಹವನ್ನು ದೊಡ್ಡಿಗಳು ಎಂದು ಕರೆಯುತ್ತಾರೆ.

೧೧. **ರಾಜಪ್ರಭುತ್ವ ಕೊನೆಯಿಂದಾದ ದೊಡ್ಡಿ** : ಭಾರತಕ್ಕೆ ಬ್ರಿಟಿಷರು ಬಂದು ನಂತರ ಸಣ್ಣಪುಟ್ಟ ಪಾಳೆ ಪಟ್ಟುಗಳು ಬ್ರಿಟಿಷರು ತಮ್ಮ ವಶಕ್ಕೆ ತೆಗೆದುಕೊಂಡರು ಇದರಿಂದ ರಾಜರು ಅಸಮರ್ಥರಾದರು ನಂತರ ಅವರ ಅಧೀನದಲ್ಲಿದ್ದು ಸೇನಾಪತಿ ದಳಪತಿ, ದಂಡನಾಯಕ ದೇಸಾಯಿ, ದಿವಾನರು ಇವರಲ್ಲಿ ಅಲ್ಪಸ್ವಲ್ಪ ತಿಳುವಳಿಕೆ ಇರುವವರು ಬ್ರಿಟಿಷರ ಜೊತೆಗೆ ಒಪ್ಪಂದ ಮಾಡಿಕೊಂಡರು. ಇನ್ನು ಕೆಲವರು ದೇಸಾಯಿ, ಗುರಿಕಾರ ಮುಂತಾದವರು ಉದ್ಯೋಗ ಕಳೆದುಕೊಂಡು ನಿರುದ್ಯೋಗಿಗಳಾಗಿ ದೈಹಿಕವಾಗಿ ಸಧೃಡರಾಗಿ ಇವರು ಕೃಷಿ ಮತ್ತು ಪ್ರಾಣಿಗಳ ಸಾಕಾಣಿಕೆ ಬೇಟೆ ಮುಂತಾದ ಮಾಡಿಕೊಂಡು ಅಡವಿಯಲ್ಲಿ ನೆಲೆನಿಂತಿರುವ ಸ್ಥಳಗಳು ದೊಡ್ಡಿಯಾದವು.

೩.೩ ದೊಡ್ಡಿಪದ ನಿಷ್ಪತ್ತಿ

ಒಂದು ವಸತಿಸ್ಥಾನ ಹೇಗೆ ಆರಂಭವಾಯಿತು. ಎನ್ನುವುದು ಗ್ರಾಮ ವಾಚಕ ಶಬ್ಧಗಳಿಂದ ತಿಳಿದುಬರುತ್ತದೆ. ಗಡ್ಡಿ ದೊಡ್ಡಿ, ಗಡ್ಡಿ ಪಡ್ಡಿ, ಹಟ್ಟಿ, ಹಾಡಿ ಮುಂತಾದ ಶಬ್ದಗಳು ಸ್ಥಳವಾಚಕಗಳಾಗಿವೆ. ಮಧ್ಯಕರ್ನಾಟಕದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಹಟ್ಟಿಗಳಾಗಿವೆ. (ನಾಯಕನ ಹಟ್ಟಿ, ಚಿಲಕನಹಟ್ಟಿ ಗೊಲ್ಲರ ಹಟ್ಟಿ, ಪಾಲಯ್ಯನಹಟ್ಟಿ ಇತ್ಯಾದಿ) ಇದೇ ರೀತಿಯಾಗಿ ರಾಯಚೂರು ಜಿಲ್ಲೆಯಲ್ಲಿ ದೊಡ್ಡಿಗಳು ಎಂದು ಕಂಡುಬರುತ್ತವೆ. (ಕುರುಬರ ದೊಡ್ಡಿ, ಕಬ್ಬಲಿಗ ದೊಡ್ಡಿ, ಬೇಡರ ದೊಡ್ಡಿ, ಅಂಕುಶದೊಡ್ಡಿ, ಬುಂಕಲದೊಡ್ಡಿ ಈ ತೆರನಾಗಿ ಅಷ್ಟೇ ಅಲ್ಲದೇ ಮಂಡ್ಯ, ಮೈಸೂರು, ರಾಮನಗರ ಜಿಲ್ಲೆಗಳಲ್ಲಿಯೂ ದೊಡ್ಡಿಗಳು ಕಂಡುಬರುತ್ತವೆ. ಅವುಗಳನ್ನು (ಗಂಗನದೊಡ್ಡಿ, ಹಲಗನದೊಡ್ಡಿ, ಕೆಂಪಯ್ಯನದೊಡ್ಡಿ, ಡಣಾಯಕನದೊಡ್ಡಿ, ಕಾಳಮುದ್ದನದೊಡ್ಡಿ) ಈ ತೆರನಾದ ಮೈಸೂರು, ಮಂಡ್ಯ, ರಾಮನಗರ ಜಿಲ್ಲೆಗಳಲ್ಲಿ ಕರೆಯುತ್ತಾರೆ.

ಹುಟ್ಟಿದ ಮನುಷ್ಯನಿಗೆ ಹೆಸರಿರುವಂತೆ ಆತನು ನೆಲೆಸಿದ ನೆಲೆಗೂ ಒಂದು ಹೆಸರಿರುತ್ತದೆ. ಒಂದು ಸ್ಥಳಕ್ಕೆ ಕಾಲಿಟ್ಟ ಮಾನವ ಸ್ಥಳಕ್ಕೊಂದು ಹೆಸರು ಕೊಡುವುದು ಸ್ವಾಭಾವಿಕ. ಹಾಗೆಯೇ ಇಟ್ಟ ನೆಲೆಯ ಹೆಸರಿಗೂ ಎಂದೂ ಉಪಕರಿಸುತ್ತದೆ. ಆ ಉಸಿರು ಅದರ ಅರ್ಥದಲ್ಲಿರುತ್ತದೆ. ಅಂಥ ಅರ್ಥವನ್ನು ಹೊರಹೊಮ್ಮಿಸಲು ಇರುವ ಮಾರ್ಗವನ್ನು ಸ್ಥಳನಾಮದ ನಿರ್ಣಯ ಎನ್ನುತ್ತೇವೆ. ಯಾವುದೋ ಕಾಲದಲ್ಲಿ ಯಾವುದೋ ಕಾರಣಕ್ಕಾಗಿ ಯಾವುದೋ, ಅರ್ಥವನ್ನು ಹುದುಗಿಸಿಕೊಂಡಿರುವ ಸ್ಥಳನಾಮದ ನಿಷ್ಪತ್ತಿ ನಡೆಯಬೇಕಾಗಿದೆ. ಸಮಕಾಲೀನ ಭಾಷೆ ಮಾನದಂಡಗಳಿಂದ ಗ್ರಾಮನಾಮಗಳ ಅಧ್ಯಯನ ಅದರ ನಿಷ್ಪತ್ತಿ ನಿರ್ಣಯ ಪ್ರಥಮ ಮತ್ತು ಪ್ರಮುಖ ಅಂಶವಾಗಿದೆ. ಅದಿಲ್ಲದೆ, ಮಾಡುವ ಅಧ್ಯಯನ ವ್ಯರ್ಥ ಮತ್ತು ನಿಷ್ಪ್ರಯೋಜನಕಾರಿ ಆದರೆ ನಿಷ್ಪತ್ತಿ ನಿರ್ಣಯ ಅಷ್ಟು ಸುಲಭದ ಮಾತಲ್ಲ ಎಂಬ ಭಾಷಾ ವಿದ್ವಾಂಸರ ನಿಲುವು ಗಮನಾರ್ಹವಾದುದು. ನಿಷ್ಪತ್ತಿ ನಿರ್ಣಯದಲ್ಲಿ ಎದುರಿಸಬೇಕಾದ ಸವಾಲುಗಳನ್ನು ಕಠಿಣ ಮಾರ್ಗವೆಂದು ಅನಿಸುತ್ತದೆ. ಸ್ಥಳನಾಮಗಳು ಹೇಗೆ ಹುಟ್ಟಿದವು ಮತ್ತು ಯಾವ ಕಾರಣಕ್ಕಾಗಿ ನಾಮರೂಪಿತವಾಗಿವೆ ಎಂಬುದನ್ನು ತಿಳಿಯುವುದೇ ಒಂದು ಅಧ್ಯಯನ. ಏಕೆಂದರೆ ಸೀಮಿತವಾದ ಪ್ರದೇಶಕ್ಕೆ ಹೆಸರು ಬರಲು ಹಲವಾರು ಕಾರಣಗಳು ಕಂಡುಬರುತ್ತವೆ. ಅದು ತನ್ನದೇ ಆದ ಇತಿ ಮಿತಿಗಳನ್ನು ಚೌಕಟ್ಟನ್ನು ಹೊಂದಿರುವುದಿಲ್ಲ. ಒಂದು ಸೀಮಿತವಾದ ಪ್ರದೇಶಕ್ಕೆ ನಾಮ ಹುಟ್ಟಲು ವ್ಯಕ್ತಿಯಿಂದಲೂ ಮತ್ತು ಸಮುದಾಯದಿಂದಲೂ ಪ್ರಾಣಿ–ಪಕ್ಷಿ ಮತ್ತು ಪ್ರಕೃತಿ ಬೆಟ್ಟ ಗುಡ್ಡ ನೀರಾವರಿ ಸಂಬಂಧಗಳು ಕೂಡುವಿಕೆಯಿಂದ ಮುಂತಾದ ಕಾರಣಗಳಿಂದ ಆ ಪ್ರದೇಶಕ್ಕೆ ಹೆಸರು ಬರಬಹುದು. ಅದೇ ರೀತಿಯಾಗಿ ರಾಯಚೂರು ಜಿಲ್ಲೆಯ ಪರಿಸರವು ಒಂದು ಚಾರಿತ್ರಿಕ ಮತ್ತು ಸಾಂಸ್ಕೃತಿಕವಾಗಿ ಸಮೃದ್ಧವಾಗಿದೆ. ರಾಯಚೂರು ಜಿಲ್ಲೆಯ ದೊಡ್ಡಿಗಳ ಹೆಸರುಗಳು ಐತಿಹಾಸಿಕವಾಗಿ ಮತ್ತು ಭೌಗೋಳಿಕ ಹಿನ್ನೆಲೆಯಲ್ಲಿ ರೂಢಿಗೊಂಡಿರುವುದನ್ನು ಕಾಣಬಹುದು. ಸ್ಥಳನಾಮಗಳು ಸಂಸ್ಕೃತಿಯ ಅಧ್ಯಯನದ ಪ್ರಮುಖ ಆಕರಗಳಲ್ಲಿ, ಒಂದು ಹೆಸರಿನಲ್ಲಿ, ಒಂದು ಜೀವನ ಕ್ರಮದ ಚರಿತ್ರೆಯಿರುತ್ತದೆಂಬುದನ್ನು ಗಮನಿಸಬೇಕಾಗುತ್ತದೆ. ಅಂದರೆ ನೇರವಾಗಿ ಜೀವನ ಕ್ರಮದ ಸಂಗತಿಗಳನ್ನು ಹೇಳುವದಿಲ್ಲವಾದರೂ ಅದರ ಪರೋಕ್ಷ ನೆಲೆಯಲ್ಲಿ ತೆರೆದು ತೋರಿಸುವ ಮೂಲಾಧಾರವಾಗಿ ನಾಮಗಳು ಮಹತ್ವದ ಪಾತ್ರವಹಿಸುತ್ತವೆ.

ಅದರಲ್ಲಿಯೂ ಸಂಸ್ಕೃತಿಯ ವೈವಿಧ್ಯತೆಗಳನ್ನು ಪ್ರಾದೇಶಿಕವಾಗಿ ಯಥಾಸ್ಥಿತಿಯನ್ನು ಮತ್ತೊಮ್ಮೆ ಪುನರಚಿಸುವ ಅಗತ್ಯ ತೋರಿಬರುತ್ತದೆ. ನಮ್ಮ ಅತ್ಯಂತ ನಿಕಟ ಸಂಬಂಧವನ್ನು ಹೊಂದಿದ ಗ್ರಾಮನಾಮ ಸ್ಥಳನಾಮಗಳಿಂದ ವಿಭಿನ್ನ ಬಗೆಯ ಸಾಂಸ್ಕೃತಿಕ ಚಹರೆಗಳನ್ನು ಗುರುತಿಸಲು ಸಾಧ್ಯವಾಗುತ್ತದೆ. ಸ್ಥಳನಾಮಗಳಿಗೆ ಸಾಂಸ್ಕೃತಿಕ ಚಹರೆಗಳಿಂದ ಅಷ್ಟೇ ಅಲ್ಲದೇ ಮೂಲ ವ್ಯಕ್ತಿಯ ನಾಮದಿಂದ ಹೆಸರು ಬಂದಿರುತ್ತವೆ. ನಾಮ ಇಂದು ವ್ಯಾಕರಣ ಮತ್ತು ಕೋಶಗಳ ವ್ಯಾಪ್ತಿಯನ್ನು ಮೀರಿ ಒಂದು ಸಮುದಾಯದ ಸಾಂಸ್ಕೃತಿಕ ಅಧ್ಯಯನದ ಮಹತ್ವ ಪೂರ್ಣ ಸಾಧಕವಾಗಿ ಪರಿಣಮಿಸಿದೆ. ನಾಮದ ರೂಪ ಅರ್ಥಗಳಿಗೆ ಚ್ಯುತಿ

ಬರದಂತೆ ಜನತೆ ಎಚ್ಚರವಹಿಸುರವುದು ಸಾಹಜವೇ ಆಗಿದೇ ಆದುದರಿಂದ ನಾಮದ ರೂಪವನ್ನು ವ್ಯಾಕರಣ, ಅರ್ಥವನ್ನು ಕೋಶಗಳು ತಿಳಿಸಿಕೊಟ್ಟು ನಿತ್ಯ ಜೀವನದಲ್ಲಿ ಸಂದೇಹ ಹುಟ್ಟದಂತೆ ನೋಡಿಕೊಳ್ಳುತ್ತದೆ.

ಇತ್ತೀಚಿಗೆ ಮಾತ್ರ ಪ್ರಾಚೀನ ಸಂಸ್ಕೃತಿಯನ್ನು ಪುನರಚಿಸುವಲ್ಲಿ ಶಾಸನ ಕಾವ್ಯಗಳಂತೆ ನಾಮಗಳು ಸಹಾಯಕ ಸಾಮಾಗ್ರಿಗಳಾಗುತ್ತವೆಂದು ವಿದ್ವಾಂಸರು ಕಂಡುಕೊಂಡಿದ್ದಾರೆ. ಇವುಗಳ ಮೂಲಕ ಪ್ರಾಚೀನ ಜನಾಂಗದ ಭಾಷಿಕ ಧಾರ್ಮಿಕ, ರಾಜಕೀಯ, ಸಾಮಾಜಿಕ ಜೀವನದ ಸ್ವರೂಪವನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ ಒಂದು ಅಧ್ಯಯನ ಶಿಸ್ತಾಗಿದೆ.

"ಸ್ಥಳನಾಮ ವರ್ಗೀಕರಣ

ಪ್ರಾಕೃತಿಕ ಸ್ಥಳನಾಮಗಳು	**ಸಾಂಸ್ಕೃತಿಕ ಸ್ಥಳನಾಮಗಳು**
ಜಲವಾಚಕ	ವ್ಯಕ್ತಿವಾಚಕ
ಶಿಲವಾಚಕ	ದೈವವಾಚಕ
ಎತ್ತರದ ಭೂ ಪ್ರದೇಶ	ಪ್ರಾಣಿ ಪಕ್ಷಿ
ಬಯಲು ಪ್ರದೇಶ	ವ್ಯಕ್ತಿ ಜಾತಿ
ಸಸ್ಯ ಗಿಡ ಮರ	ಅಡ್ಡ ಹೆಸರು
ಕ್ಷೇತ್ರವಾಚಕ	ಗೋತ್ರ ವಾಚಕ, ಹುದ್ದೆ ವಾಚಕ

ಜಲವಾಚಕ

ಮಾನವ ತನ್ನ ಅಲೆಮಾರಿ ಜೀವನಕ್ಕೆ ವಿದಾಯ ಹೇಳಿ ಸಮೂಹ ಜೀವನಕ್ಕೆ ಮುಖ್ಯವಾಗಿ ನೀರಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡುತ್ತಾನೆ. ಈ ಕಾರಣಗಳಿಂದಾಗಿ ಅಡವಿಯಲ್ಲಿ ನೆಲೆನಿಂತಿರುವ ಪ್ರಮುಖವಾಗಿ ನೀರಿನ ಸಮೀಪ ತಮ್ಮ ನೆಲೆಗಳನ್ನು ಕಟ್ಟಿಕೊಂಡು ಅಥವಾ ಸಹಜವಾಗಿ ಹರಿಯುವ ಹಳ್ಳ, ಕೆರೆ, ಕುಂಟಿಗಳಂಥ ಪ್ರದೇಶಕ್ಕೆ ಹತ್ತಿರದಲ್ಲಿ ವಾಸಸುತ್ತಿದ್ದಾರೆ. ಇಂದಿಗೂ ಹಳ್ಳಿ, ನಗರಗಳ ನಿರ್ಮಾಣ ನೀರನ್ನು ಅವಲಂಬಿಸಿ ರಚನೆಯಾಗುತ್ತವೆ."[೨] ಈ ಹಿನ್ನೆಲೆಯಿಂದ ಜಲಮೂಲ ಸಂಸ್ಕೃತಿಯಿಂದ ಆರಂಭವಾದ ಸಂಸ್ಕೃತಿಯನ್ನು ಆ ಜಲವನ್ನು ಅವಲಂಬಿಸಿ ಕೆಲವು ದೊಡ್ಡಿಗಳಿವೆ ನೀರಿನ ಹೆಸರು ಕರೆದುಕೊಳ್ಳುವ ಪರಂಪರೆ ಆರಂಭವಾಗಿದೆ.

ಹಳ್ಳದ ರಾಯನ ದೊಡ್ಡಿ

ರಾಯಚೂರು ಜಿಲ್ಲೆ ದೇವದುರ್ಗ ತಾಲೂಕಿನ ೬-೭ ಕಿ.ಮೀ ಕ್ರಮಿಸಿದರೆ ಹಳ್ಳದ ರಾಯನ ದೊಡ್ಡಿ ಕಂಡುಬರುತ್ತದೆ. ಹಳ್ಳದ ಪಕ್ಕದಲ್ಲಿ ಇರುವುದರಿಂದ ಈ ನೆಲೆಗೆ ಹಳ್ಳದ

ರಾಯನ ದೊಡ್ಡಿ ಎಂದು ಹೆಸರು ಬಂತು ಎಂದು ಈ ದೊಡ್ಡಿ ನಿವಾಸಿಗಳು ಹೇಳುತ್ತಾರೆ. ಈ ದೊಡ್ಡಿಯಲ್ಲಿ ನೆಲೆಸಿರುವವರು ಬೇಡ ಸಮುದಾಯದವರಾಗಿದ್ದು ಹೆಚ್ಚಿನ ಸಂಖ್ಯೆಯಲ್ಲಿ ರೈತಾಪಿ ವರ್ಗವನ್ನು ಕಾಣಬಹುದಾಗಿದೆ. ಇವರ ಆಶ್ರಯ ನೋಡಿದರೆ ಅತ್ಯಂತ ನಿಕೃಷ್ಟ ಬದುಕು ಎಂದು ತಿಳಿದುಬರುತ್ತದೆ. ಈ ದೊಡ್ಡಿಗೆ ಹೋಗಬೇಕಾದರೆ ಮುಖ್ಯ ರಸ್ತೆಯಿಂದ ಅರ್ಧ ಮೈಲು ನಡೆದುಕೊಂಡು ಹೋಗಬೇಕು ಯಾವುದೇ ರಸ್ತೆಯಿಲ್ಲ ಕಾಲು ದಾರಿಯಿಂದ ಹೋಗಬೇಕು. ಈ ಸ್ಥಳದಲ್ಲಿ ಹತ್ತರಿಂದ ಹದಿನೈದು ಕುಟುಂಬಗಳು ಕಂಡುಬರುತ್ತವೆ.

ಶಿಲವಾಚಕ

ಬೆಂಚಲದೊಡ್ಡಿ

ಈ ದೊಡ್ಡಿಯು ರಾಯಚೂರು ಜಿಲ್ಲೆ ಲಿಂಗಸ್ಗೂರು ತಾಲೂಕಿನ ಗುರುಗುಂಟಾ ಹೋಬಳಿಗೆ ಸೇರಿದೆ. ತಾಲೂಕು ಸ್ಥಳದಿಂದ ಉತ್ತರ ದಿಕ್ಕಿಗೆ ೨೩ ಕಿ.ಮೀ. ದೂರದಲ್ಲಿದೆ. ಲಿಂಗಸ್ಗೂರು ಗುರುಗುಂಟಾ ರಸ್ತೆಯಲ್ಲಿ ಗುರುಗುಂಟಾದ ಪೂರ್ವ ೩ ಕಿ.ಮೀ. ಕ್ರಮಿಸಿದರೆ ಬೆಂಚಲದೊಡ್ಡಿ ನೆಲೆಯು ಸಿಗುತ್ತದೆ. ಭೌಗೋಳಿಕವಾಗಿ ಕೆಂಪು ಬಣ್ಣದ ಬೆಣಚಿಕಲ್ಲುಗಳಿಂದ ಕೂಡಿದ್ದು, ಕೆಂಪು ಮಣ್ಣಿನ ಲಕ್ಷಣವನ್ನು ಹೊಂದಿದೆ ಈ ಹಿನ್ನೆಲೆಯಿಂದ ಈ ದೊಡ್ಡಿಗೆ ಬೆಂಚಲದೊಡ್ಡಿ ಎನ್ನುವ ಹೆಸರು ಬಂದಿದೆ ಎಂದು ಗ್ರಾಮಸ್ಥರು ಹೇಳುತ್ತಾರೆ.

ಈ ದೊಡ್ಡಿ ಬೇಡ ಸಮುದಾಯದವರು ವಾಸದ ನೆಲೆಯಾಗಿದ್ದು ಅತ್ಯಂತ ಕಡುಬಡತನದಿಂದ ಕೂಡಿದ ಕುಟುಂಬಗಳು ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತವೆ. ಈ ನೆಲೆಯಲ್ಲಿ ಇರುವ ಮನೆ ಗುಡಿಸಲುಗಳಿಂದ ಕೂಡಿದ್ದು ಜೊತೆಗೆ ಅಲ್ಪ ಸ್ವಲ್ಪ ಕಲ್ಲಿನ ಮನೆ, ಸೀಟಿನ ಮನೆಗಳು ಇವೆ.

ಬೆಂಚಲದೊಡ್ಡಿಯಲ್ಲಿ ವಾಸಿಸುವ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಕೃಷಿಯನ್ನೇ ನಂಬಿಕೊಂಡು ಬದುಕು ಸಾಗಿಸುತ್ತಿದ್ದಾರೆ. ಪ್ರತಿಯೊಂದು ಕುಟುಂಬಕ್ಕೆ ೨ರಿಂದ ೩ ಎಕರೆ ಭೂಮಿ ಇದ್ದು ಪ್ರತಿ ಮನೆಯಲ್ಲೂ ನಾಲ್ಕರಿಂದ ಐದು ಜನ ಅಣ್ಣ ತಮ್ಮಂದಿರಿಂದ ಕೂಡಿದ ಕುಟುಂಬಗಳಾದ್ದರಿಂದ ಒಂದು ಕುಟುಂಬದಲ್ಲಿ ಒಬ್ಬರು ಮಾತ್ರ ಕೃಷಿ ಚಟುವಟಿಕೆಯಲ್ಲಿ ತೊಡಗಿಸಿಕೊಂಡು ಉಳಿದ ಸದಸ್ಯರು ನಿರುದ್ಯೋಗಿಗಳಾಗುತ್ತಾರೆ. ಅದರಲ್ಲಿ ಒಂದು ಕುಟುಂಬ ಪ್ರಾಣಿ ಸಾಕಿಕೊಂಡು ಜೀವನ ಸಾಗಿಸಿದರೆ ಅಲ್ಲಿಯೇ ಇನ್ನು ಎರಡು ಕುಟುಂಬದವರ ಬದುಕು ತುಂಬಾ ನಿಕೃಷ್ಟವಾಗಿರುತ್ತದೆ. ಕೆಲಸ ಸಿಕ್ಕರೆ ಬದುಕು. ಇಲ್ಲವೆಂದರೆ ಬಾಂಬೆ, ಗೋವಾ, ಬೆಂಗಳೂರು ಮುಂತಾದ ಮಹಾನಗರಗಳಿಗೆ ಹೊಟ್ಟೆಪಾಡಿಗಾಗಿ ವಲಸೆ ಹೋಗುತ್ತಾರೆ. ಇದರಿಂದ ಆರು ತಿಂಗಳು ಆ ಮಹಾನಗರದಲ್ಲಿ ಕೆಲಸ ಮಾಡಿ ಇನ್ನು ಆರು ತಿಂಗಳು ಈ ದೊಡ್ಡಿಯಲ್ಲಿ ಇರುತ್ತಾರೆ. ಇದರಿಂದ ಈ ನೆಲೆಯಲ್ಲಿ ಇರುವವರ ಬದುಕು ಆರಕ್ಕೆ ಏರದೆ ಮೂರಕ್ಕೆ ಇಳಿಯದೆ ಮೂರಬಟ್ಟೆಯಾಗಿದೆ. ಇಲ್ಲಿನ ಜನರ ಜೀವನ ದುಸ್ಥಿತಿ ಸ್ಥಳವೆಂದು ಇಲ್ಲಿ ವಾಸಿಸುವವರ ಅನಿಸಿಕೆಯಾಗಿದೆ.

ಎತ್ತರ ಭೂ ಪ್ರದೇಶ ವಾಚಕ

ಈ ನೆಲೆಯು ಎತ್ತರವಾದ ಪ್ರದೇಶದಲ್ಲಿರುವುದರಿಂದ ಈ ವಾಸಸ್ಥಾನಕ್ಕೆ ಮಟ್ಟ ಮರಡಿ ದೊಡ್ಡಿ ಎಂಬ ಹೆಸರು ಬಂದಿದೆ. ಈ ದೊಡ್ಡಿಗೆ ರಾಯಚೂರು ಜಿಲ್ಲೆ ಲಿಂಗಸೂಗೂರು ತಾಲೂಕಿನ ಗುರುಗುಂಟಾ ಹೋಬಳಿಗೆ ಸೇರಿದೆ. ತಾಲೂಕು ಸ್ಥಳದಿಂದ ಉತ್ತರ ದಿಕ್ಕಿಗೆ ೧೫ ಕಿ.ಮೀ. ದೂರದಲ್ಲಿದೆ. ಲಿಂಗಸ್ಗೂರು, ಗುರುಗುಂಟಾ ಮಾರ್ಗದ ಮಧ್ಯದಲ್ಲಿ ಶ್ರೀಅಮರೇಶ್ವರ ದೇವಸ್ಥಾನಕ್ಕೆ ಹೋಗುವ ದಾರಿ ಇದೆ. ವಾಯುವ್ಯ ದಿಕ್ಕಿಗೆ ಕಚ್ಚಾ ರಸ್ತೆಯ ಮೂಲಕ ೨ ಕಿ.ಮೀ. ಕ್ರಮಿಸಿದರೆ ಮಟಮರಡಿ ದೊಡ್ಡಿ ಕಂಡುಬರುತ್ತದೆ. ಭೌಗೋಳಿಕವಾಗಿ ಕಪ್ಪು ಮಣ್ಣಿನಿಂದ ಕೂಡಿದ್ದು ಕೆಂಪುಮಣ್ಣಿನ ಲಕ್ಷಣ ಹೊಂದಿದೆ.

ನಾಯಕ ಸಮುದಾಯದವರು ನೆಲೆಸಿರುವ ಮಟ್ಟ ಮರಡಿ ದೊಡ್ಡಿಯಲ್ಲಿ ಈ ನೆಲೆಯಲ್ಲಿ ವಾಸಿಸುವವರ ಮನೆಗಳು ಮಣ್ಣಿನ ಮನೆ, ಗುಡಿಸಲು ಮನೆ, ತಗಡು ಮತ್ತು ಸೀಟಿನ ಮನೆಗಳು ಇವೆ. ಈ ದೊಡ್ಡಿಯ ಜನರ ಮುಖ್ಯವಾದ ಉದ್ಯೋಗ ಕೃಷಿ ಪ್ರಧಾನ ಉದ್ಯೋಗವಾಗಿದ್ದು, ಸಜ್ಜೆ, ಜೋಳ, ಸೂರ್ಯಕಾಂತಿ, ಮುಖ್ಯಬೆಳೆ, ಹೆಸರು, ಹಲಸಂದಿ ಉಪ ಬೆಳೆಗಳಾಗಿದ್ದು ಸಾಂಪ್ರದಾಯಿಕ ಹೈನುಗಾರಿಕೆ ಇದೆ.

ಸಸ್ಯ ಗಿಡ ಮರ ವಾಚಕ

ಹಳ್ಳದ ದಂಡೆಗೆ ಲೆಕ್ಕೆಗಿಡ ಹೆಚ್ಚಾಗಿ ಬೆಳೆದಿರುವುದರಿಂದ ಈ ಸ್ಥಳಕ್ಕೆ ಲೆಕಿಂಚೇರಿ ದೊಡ್ಡಿ ಎಂಬ ಹೆಸರು ಬಂದಿದೆ ಈ ದೊಡ್ಡಿಯ ಹಿರಿಯರ ಅಭಿಪ್ರಾಯವಾಗಿದೆ. ಈ ಸ್ಥಳ ರಾಯಚೂರು ಜಿಲ್ಲೆ ಲಿಂಗಸ್ಗೂರು ತಾಲೂಕಿನ ಗುರುಗುಂಟಾ ಹೋಬಳಿಗೆ ಸೇರಿದ್ದು, ಎಂದು ತಾಲೂಕು ಸ್ಥಳದಿಂದ ಉತ್ತರ ದಿಕ್ಕಿಗೆ ೧೫ ಕಿ.ಮೀ. ದೂರದಲ್ಲಿದೆ. ಲಿಂಗಸೂಗೂರು ಗುರುಗುಂಟಾ ಮುಖ್ಯ ರಸ್ತೆ ಭೌಗೋಳಿಕವಾಗಿ ಗುರುಗುಂಟಾ ಗ್ರಾಮದ ವ್ಯಾಪ್ತಿಗೆ ಒಳಪಡುತ್ತದೆ. ಭೌಗೋಳಿಕವಾಗಿ ಕೆಂಪು ಮತ್ತು ಕಪ್ಪುಮಣ್ಣಿನ ಲಕ್ಷಣ ಹೊಂದಿದೆ.

ನಾಯಕರದು ಏಕಮಾತ್ರ ದೊಡ್ಡಿಯಾದ ಲೆಕಿಂಚೇರಿ ದೊಡ್ಡಿಯಲ್ಲಿ ಕನ್ನಡ ಪ್ರಮುಖ ಭಾಷೆಯಾಗಿದ್ದು ಮಧ್ಯಮ ವರ್ಗ ಮತ್ತು ಬಡವರು ಹೆಚ್ಚಾಗಿ ಕಂಡುಬರುತ್ತಾರೆ.

ಗಲಗಿನದೊಡ್ಡಿ

ದೇವದುರ್ಗ ತಾಲೂಕಿನ ಗಲಗಿನ ಗ್ರಾಮದಿಂದ ವಲಸೆ ಬಂದ ಜನರು ಇಲ್ಲಿಯೇ ನೆಲೆಸಿರುವುದರಿಂದ ಗಲಗಿನ ದೊಡ್ಡಿ ಎಂಬ ಹೆಸರು ಬಂದಿದೆ. ಈ ದೊಡ್ಡಿ ರಾಯಚೂರು ಜಿಲ್ಲೆ ಲಿಂಗಸೂಗೂರು ತಾಲೂಕಿನ ಗುರುಗುಂಟಾ ಹೋಬಳಿಗೆ ಸೇರಿದೆ. ಲಿಂಗಸೂಗೂರು ಗುರುಗುಂಟಾ ಮಾರ್ಗದ ಮಧ್ಯದಲ್ಲಿ ಪಶ್ಚಿಮ ದಿಕ್ಕಿಗೆ ಬರುವ ದೇವರ ಭೂಪುರ ಗ್ರಾಮದಿಂದ ಉತ್ತರಕ್ಕೆ ೧ ಕಿ.ಮೀ. ಕ್ರಮಿಸಿದರೆ ಗಲಗಿನ ದೊಡ್ಡಿ ಬರುತ್ತದೆ ಈ ದೊಡ್ಡಿಯ ಜನರ ಪ್ರಮುಖ ಉದ್ಯೋಗ ಕೃಷಿಯಾಗಿರುತ್ತದೆ. ಜೊತೆಗೆ ಆಡು, ಕುರಿ ಮುಂತಾದ

ಸಾಕು ಪ್ರಾಣಿಗಳನ್ನು ಸಾಕಿಕೊಂಡು ಜೀವನ ನಡೆಸುವುದು ಕಂಡುಬರುತ್ತದೆ. ಈ ನೆಲೆಯಲ್ಲಿ ಬೇಡ ಸಮುದಾಯದ ನೆಲೆ ನಿಂತಿರುವುದು ಕಂಡುಬರುತ್ತದೆ. ಜೊತೆಗೆ ಅಕ್ಕ ಪಕ್ಕದಲ್ಲಿ ಕುರುಬ, ಕಬ್ಬಲಿಗ ಸಮುದಾಯದ ನೆಲೆಗಳು ಕೂಡ ಕಂಡುಬರುತ್ತವೆ. ಬಡವರೆ ಹೆಚ್ಚಾಗಿ ಕಂಡುಬರುವ ಈ ದೊಡ್ಡಿಗಳಲ್ಲಿ ಗುಡಿಸಲು ಮನೆ, ಸರ್ಕಾರದ ಆಶ್ರಯ ಮನೆಗಳು ಕಂಡುಬರುತ್ತವೆ.

ಚಿದಾನಂದಪ್ಪನ ದೊಡ್ಡಿ

ಈ ದೊಡ್ಡಿಯಲ್ಲಿ ವಾಸಿಸುವವರ ಪೂರ್ವಿಕನ ಹೆಸರು ಚಿದಾನಂದಪ್ಪನೆಂದು ಇರುವುದರಿಂದ, ಈ ದೊಡ್ಡಿಗೆ ಚಿದಾನಂದಪ್ಪನ ದೊಡ್ಡಿ ಎಂದು ಕರೆಯುತ್ತಾರೆ. ಈ ದೊಡ್ಡಿಯಲ್ಲಿ ಮಧ್ಯಮ ವರ್ಗದ ಜನರು ಹೆಚ್ಚಾಗಿ ಕಂಡುಬರುತ್ತಿದ್ದು, ಇವರು ಕೃಷಿ ಚಟುವಟಿಕೆಯನ್ನು ಮಾಡಿಕೊಂಡು ಜೀವನವನ್ನು ಸಾಗಿಸುತ್ತಾರೆ.

ಈ ದೊಡ್ಡಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬೇಡ ಸಮುದಾಯ ಕಂಡುಬಂದರೆ, ನೆರೆ ಹೊರೆ ದೊಡ್ಡಿಗಳಲ್ಲಿ ಕುರುಬ ಮತ್ತು ಕಬ್ಬಲಿಗ ಸಮುದಾಯದಗಳು ಕಂಡುಬರುತ್ತವೆ. ಹೆಚ್ಚಿನ ಸಂಖ್ಯೆಯಲ್ಲಿ ಅನಕ್ಷರಸ್ಥರಿಂದ ಕೂಡಿದ ಈ ದೊಡ್ಡಿಗೆ ಶೈಕ್ಷಣಿಕ ಸೌಲಭ್ಯಗಳಾಗಲಿ ಜೊತೆಗೆ ಯಾವುದೇ ಮೂಲಭೂತ ಸೌಲಭ್ಯಗಳಾಗಲಿ ಕಂಡುಬರುವುದಿಲ್ಲ. ಅತ್ಯಂತ ನಿಕೃಷ್ಟವಾಗಿ ಬದುಕುವ ಜನರು ಈ ನೆಲೆಯಲ್ಲಿ ಕಂಡುಬರುತ್ತಾರೆ.

ಪ್ರಾಣಿವಾಚಕ ದೊಡ್ಡಿ

ಒಂದು ಸ್ಥಳಕ್ಕೆ ಹೆಸರು ಬರಲು ಇಂತಹದೇ ಕಾರಣಬೇಕಿಲ್ಲ ಹಂದಿಬಗಡಿದೊಡ್ಡಿ ಪ್ರಾಣಿ ಪಕ್ಷಿಗಳಿಂದ ಬರೆಯಬಹುದು. ಈ ನೆಲೆಯಲ್ಲಿ ಅತಿಹೆಚ್ಚು ಕಾಡುಹಂದಿಗಳು ಕಂಡುಬರುವುದರಿಂದ ಹಂದಿಬಗಡಿದೊಡ್ಡಿ ಎಂದು ಕರೆಯುತ್ತಾರೆ. ಈ ನೆಲೆಯಲ್ಲಿ ಕುರುಬ ಸಮುದಾಯದವರು ಹೆಚ್ಚಾಗಿ ಕಂಡುಬರುತ್ತಾರೆ. ಜೊತೆಗೆ ಚಿಕ್ಕ ಸಮುದಾಯವಾಗಿ ಬೇಡರು ಈ ದೊಡ್ಡಿಯಲ್ಲಿ ಜೀವನ ನಡೆಸುತ್ತಿರುವುದು ಕಂಡುಬರುತ್ತದೆ. ಹೆಚ್ಚು ಬಡ ಕುಟುಂಬಗಳಿಂದ ಕೂಡಿದ ಪ್ರದೇಶವಾಗಿದೆ. ಸೂರಿಗಾಗಿ ಜೋಪಡಿಯನ್ನು ಹಾಕಿಕೊಂಡು ಬದುಕಿನ ಆಶವಾದದೊಂದಿಗೆ ಬದುಕುತ್ತಿದ್ದಾರೆ. ಕನಿಷ್ಠ ಸೌಲಭ್ಯಗಳು ಈ ದೊಡ್ಡಿಗೆ ಸಿಕ್ಕರೆ ಸಾಕು ಈ ಜನರಿಗೆ ಬಂಗಾರ ಸಿಕ್ಕಂತೆ ಆಗುತ್ತದೆ. ಒಟ್ಟಾರೆಯಾಗಿ ಕನಿಷ್ಠ ಮೂಲಭೂತ ಸೌಲಭ್ಯಗಳಿಂದ ವಂಚಿತವಾದ ದೊಡ್ಡಿ ಎಂದು ಹೇಳಬಹುದು. ಇವರಲ್ಲಿ ಹೆಚ್ಚಿನವರು ಕೃಷಿಯನ್ನು ಮಾಡಿದರೆ ಇನ್ನು ಕೆಲವರು ಕುರಿಗಾಯಿ, ದನಗಾಯಿ, ಕೆಲವರು ಕೂಲಿಯನ್ನು ಮಾಡಿ ನಿತ್ಯ ಜೀವನಕ್ಕೆ ಪರದಾಡುವ ಸ್ಥಿತಿ ಕಂಡುಬರುತ್ತದೆ. ಶಾಲೆ ಇದ್ದರೆ ಶಿಕ್ಷಕರು ಇಲ್ಲ. ಶಿಕ್ಷಕರು ಬಂದರು ದಿನಕ್ಕೆ ೨ ಗಂಟೆ ಮಾತ್ರ ಕೆಲಸ ಮಾಡುತ್ತಾರೆ. ಕಾಲುದಾರಿಯಲ್ಲಿ ನಡೆದುಕೊಂಡು ಹೋಗಬೇಕೆಂದು ಸರಿಯಾದ ಸಮಯಕ್ಕೆ ಬರುವುದಿಲ್ಲ. ಜೊತೆಗೆ ಸರಿಯಾಗಿ ಕೆಲಸ ಮಾಡದೆ ಯಾವುದಾದರೊಂದು ನೆಪಮಾಡಿ ಶಾಲೆ ಬಿಟ್ಟು ನಗರಕ್ಕೆ ತೆರಳುವುದು ನಿತ್ಯ ಕಂಡುಬರುತ್ತದೆ.

ವ್ಯಕ್ತಿಯ ಜಾತಿ ವಾಚಕ ಸ್ಥಳ

ಕಬ್ಬಲಿಗ ಸಮುದಾಯದವರು ನೆಲೆಸಿರುವುದರಿಂದ ಈ ಸ್ಥಳ ಅಂಬಿಗರದೊಡ್ಡಿ ಎಂದು ಹೆಸರು ಬಂತು ಎಂದು ಹೇಳುವರು. ಈ ಸ್ಥಳದಲ್ಲಿ ವಾಸಿಸುವ ಹೆಚ್ಚಿನ ಕುಟುಂಬಗಳು ಮಧ್ಯಮವರ್ಗದವರಾಗಿದ್ದು ಅವರ ಆಶ್ರಯ ಬಹಳ ಅಚ್ಚುಕಟ್ಟಾಗಿ ಕಾಣಬಹುದಾಗಿದೆ. ಇದ್ದ ಸಂಪನ್ಮೂಲವನ್ನು ಬಳಸಿಕೊಂಡು ಸದೃಢವಾಗಿ ಜೀವನ ನಡೆಸುವುದು ಕಂಡುಬರುತ್ತದೆ.

ಆದರೆ ಯಾವುದೇ ಶಾಲೆ ಈ ಸ್ಥಳದಲ್ಲಿ ಇರುವುದಿಲ್ಲ. ಇದರಿಂದಾಗಿ ಈ ದೊಡ್ಡಿಯಲ್ಲಿ ಇರುವ ಮಕ್ಕಳು ನೆರೆಯ ಹಳ್ಳಿಗಳ ಶಾಲೆಗೆ ಹೋಗುತ್ತಾರೆ. ಕೆಲವರು ನಡೆದುಕೊಂಡು ಹೋಗುತ್ತಾರೆ. ಇನ್ನು ಕೆಲವರು ಪೋಷಕರು ತಮ್ಮ ದ್ವಿಚಕ್ರ ವಾಹನದಲ್ಲಿ ಕರೆದುಕೊಂಡು ಹೋಗಿ ಶಾಲೆಗೆ ಬಿಟ್ಟು ಬರುತ್ತಾರೆ. ಯಾಕೆಂದರೆ ತಾವು ಅನುಭವಿಸುವ ಕಷ್ಟ ತಮ್ಮ ಮಕ್ಕಳು ಅನುಭವಿಸಬಾರದು, ತಮ್ಮ ಕಷ್ಟಗಳು ತಮ್ಮಿಂದಲೆ ಕೊನೆಯಾಗಲಿ ಎಂದು ಹೇಳುತ್ತಾರೆ.

ಮನೆತನ ವಾಚಕ

ಕವಲೆರದೊಡ್ಡಿ

ಈ ಸ್ಥಳಕ್ಕೆ ಕವಲೇರ ದೊಡ್ಡಿಯಂದು ಹೆಸರು ಬರಲು ಕಾರಣ ಕವಲಿ ಮನೆತನದವರು ಈ ನೆಲೆಯಲ್ಲಿ ನೆಲೆಸಿದರಿಂದ ಈ ಸ್ಥಳಕ್ಕೆ ಇವರ ಮನೆತನದ ಹೆಸರು ಬಂತು ಎಂದು ಹೇಳುತ್ತಾರೆ. ಈ ದೊಡ್ಡಿಯಲ್ಲಿ ನಾಯಕ ಸಮುದಾಯದವರು ಹೆಚ್ಚಾಗಿದ್ದು, ಅತ್ಯಂತ ಬಡತನದಿಂದ ಕೂಡಿದ ನೆಲೆ ಎಂದು ಹೇಳಿದರೆ ತಪ್ಪಾಗಲಾರದು ಈ ವಾಸಸ್ಥಳಕ್ಕೆ ಹೋದರೆ ಮೊದಲಿಗೆ ಇಲ್ಲಿನ ಗುಡಿಸಲು ಜೋಪಡಿ ಪ್ರದೇಶ ನಮಗೆ ಸ್ವಾಗತ ಕೋರುತ್ತವೆ. ಅದರಲ್ಲಿ ಅಲ್ಪಸ್ವಲ್ಪ ಮಣ್ಣಿನ ಮನೆಗಳಿವೆ. ರಾಜಕೀಯವಾಗಿ ಪ್ರಬಲವಾದವರು ಆಶ್ರಯ ಮನೆಗಳನ್ನು ಹಾಕಿಕೊಂಡಿರುವುದು ಮೇಲ್ನೋಟಕ್ಕೆ ಸಾಮಾನ್ಯವಾಗಿ ತಿಳಿದುಬರುತ್ತದೆ.

ಇಷ್ಟೊಂದು ನಿಕೃಷ್ಟ ಸ್ಥಿತಿಯಿರುವ ಈ ದೊಡ್ಡಿಯ ಜನರಿಗೆ ಪ್ರತ್ಯೇಕ ನೆಲೆಗೆ ಯಾವುದೇ ಸರ್ಕಾರದ ಯೋಜನೆ ತಲುಪದೇ ಇರುವುದು ಒಂದು ಕಡೆಯಾದರೆ ಇನ್ನೊಂದು ಕಡೆ ಹೆಚ್ಚಿನವರ ಅನಕ್ಷರತೆಯಿಂದಾಗಿ ತಮ್ಮ ಕಣ್ಣು ಮುಂದೆ ಸರ್ಕಾರದ ಯೋಜನೆಗಳು ಜಾರಿಗೆ ಬಂದರು ಕಣ್ಣು ಇದ್ದರೂ ಕುರುಡರಾಗಿ ಇರಬೇಕಾದ ಪರಿಸ್ಥಿತಿ ಇಲ್ಲಿನವರದಾದ್ದರಿಂದ ಇದು ಕಷ್ಟ ಕಾರ್ಪಣ್ಯದ ನೆಲೆ ಎಂದು ಹೇಳಿದರೆ ತಪ್ಪಾಗಲಾರದು.

ನಮ್ಮ ದೇಶದ ಜೀವನಾಡಿಗಳೆಂದೆ ಹೆಸರಾಗಿರುವ ಹಳ್ಳಿಗಳು ಪರಿಸರದ ಜೊತೆಗೆ ವೈವಿಧ್ಯಮಯವಾದ ಪ್ರತ್ಯೇಕ ನೆಲೆಗಳು ಅದರಲ್ಲೂ ವಿಶೇಷವಾಗಿ ಕರ್ನಾಟಕ ರಾಜ್ಯದ

ರಾಯಚೂರು ಜಿಲ್ಲೆಯ ದೊಡ್ಡಿಗಳು ಅರೆ ಬರೆ ಸೌಲಭ್ಯಗಳಿಂದ, ನಿಕೃಷ್ಟ ಬದುಕಿನಿಂದ ಕೂಡಿದ ದೊಡ್ಡಿಗಳಾಗಿವೆ. ಅಂದರೆ ಯಾವ ಅನುಕೂಲವಿಲ್ಲದ ಅನಾಥ ನೆಲೆ ಎಂದು ಜನಸಾಮಾನ್ಯರು ತಕ್ಷಣದಲ್ಲಿ ಮಾತಾಡುತ್ತಾರೆ. ದೊಡ್ಡಿಗಳು ರಾಜಕಾರಣದಿಂದ ಕಲುಷಿತಗೊಳ್ಳದೆ ಮಾನವ ಮತ್ತು ಪ್ರಾಣಿಗಳ ಕೊಂಪೆ ಎಂದು ಕರೆಯುವ ಸ್ಥಿತಿ ಇಂದಿಗೂ ಇದೆ. ಹೀಗಾಗಿ ಜಿಲ್ಲೆಯ ಬಹುತೇಕ ದೊಡ್ಡಿಗಳೇ ಯಾರಿಗೂ ಗೊತ್ತಿಲ್ಲ ಎಂದರೆ ಇಲ್ಲಿನ ದೊಡ್ಡಿಗಳು ಸದ್ದು ಗದ್ದಲವಿಲ್ಲದೇ ಅತ್ಯಂತ ನಿಕೃಷ್ಟ ಜೀವನ ಮಟ್ಟ ಇಲ್ಲಿನ ನೆಲೆಗಳಲ್ಲಿ ಸಾಮಾನ್ಯವಾಗಿರುವ ಸಂಗತಿಯಾಗಿದೆ.

ಈ ಸಂದರ್ಭದಲ್ಲಿ ದೊಡ್ಡಿಗಳ ಕುರಿತು ಅಧ್ಯಯನ ಮಾಡುವ ಯೋಜನೆ ತುಂಬಾ ಕಠಿಣವಾಗಿರುತ್ತದೆ. ಮತ್ತು ಸವಾಲುಗಳ ಕ್ಷೇತ್ರ ಅನಿಸಿಸುತ್ತದೆ. ಜಿಲ್ಲೆಯ ಬಹುತೇಕ ಹತ್ತು ಹಲವಾರು ದೊಡ್ಡಿಗಳಿಗೆ ಭೇಟಿ ನೀಡಿ ಅಲ್ಲಿನ ಜೀವನ ಮಟ್ಟ ಅವರ ದಿನನಿತ್ಯದ ಕೆಲಸ ಕಾರ್ಯಗಳು ಮತ್ತು ಪ್ರತ್ಯೇಕ ನೆಲೆಗಳಿಗೆ ಇರುವ ಸಮಸ್ಯೆಗಳನ್ನು ಸೂಕ್ಷ್ಮವಾಗಿ ಗಮನಿಸಲಾಗಿದೆ. ರಾಯಚೂರು ಜಿಲ್ಲೆಯ ಮಾನವಿ ತಾಲೂಕಿನ ತಪ್ಪಲದೊಡ್ಡಿಯು ಪ್ರಾಚೀನ ನಾಗರೀಕತೆಯ ಜನ ವಸತಿಯ ನೆಲೆಯಾಗಿತ್ತು ಎಂಬುದಕ್ಕೆ ಅಲ್ಲಿನ ಸ್ಥಳೀಯ ಚರಿತ್ರೆ ಮತ್ತು ಅಲ್ಲಿನ ಅವಶೇಷಗಳಿಂದ ಹೇಳಬಹುದು. ಈ ದೊಡ್ಡಿಯ ಜನರು ಮಳೆಯನ್ನೇ ನಂಬಿ ಬದುಕು ಸಾಗಿಸುತ್ತಾರೆ. ಈ ದೊಡ್ಡಿಯ ಜನರ ಊಟ, ವಸತಿ, ಜೀವನ ರೀತಿ, ಜನಸಂಖ್ಯೆ, ಆದಾಯದ ಮೂಲಗಳು ನೀರಾವರಿ ಸೌಲಭ್ಯ ಎಲ್ಲವನ್ನು ಕುರಿತು ಅಧ್ಯಯನ ಮಾಡಲಾಗಿದೆ. ಮಳೆ ಬಂದರೆ ಈ ದೊಡ್ಡಿಯ ಜನರ ಬದುಕು ಹಸನಾಗಿರುತ್ತದೆ. ಇಲ್ಲದಿದ್ದರೆ ನೆರೆಯ ಮಹಾನಗರಗಳಿಗೆ ವಲಸೆ ಹೋಗುತ್ತಾರೆ. ಈ ದೊಡ್ಡಿಯಲ್ಲಿ ನಿಜಾಂ ಕಾಲದ ಎರಡು ಬಾವಿಗಳು ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸಿವೆ. ಅಲ್ಪ ಸ್ವಲ್ಪ ಹಣವಿದ್ದವರು ಬೋರವೆಲ್ ಹಾಕಿಸಿಕೊಂಡು ಒಕ್ಕಲತನ ಮಾಡುವುದನ್ನು ಕಾಣುತ್ತೇವೆ. ಈ ದೊಡ್ಡಿಗೆ ಬಸ್ಸು ದಿನಕ್ಕೆ ಒಂದು ಬಾರಿ ಬರುತ್ತದೆ. ಅದನ್ನು ಬಿಟ್ಟರೆ ಆಟೋ ಇಲ್ಲವೇ ನಡೆದುಕೊಂಡೇ ಹೋಗಬೇಕು ಎಂದು ದೊಡ್ಡಿಯ ನಿವಾಸಿಗಳು ಹೇಳುತ್ತಾರೆ.

ನಾಗರೀಕತೆ ಬೆಳೆದಂತೆ ಹಳ್ಳಿಗಳು ಮತ್ತಷ್ಟು ಅನಾಥವಾಗಿ ಬಿಡುವ ಅಭಿವೃದ್ಧಿಯ ಪಥದಲ್ಲಿ ಬದುಕಿನ ಗತಿಯನ್ನು ಅರಳಿಸುವುದರ ಬದಲು ಮತ್ತಷ್ಟು ತಳಮಟ್ಟಕ್ಕೆ ಹೋಗುತ್ತದೆ ಎಂಬ ಆತಂಕ ಅವರಿಗೆ ಕಾಡುತ್ತದೆ. ಆದರೆ ಪಟ್ಟಭದ್ರ ಹಿತಾಸಕ್ತಿಗಳು ದೊಡ್ಡಿಯ ಜನಸಾಮಾನ್ಯರನ್ನು ಹಲವಾರು ದಿಕ್ಕುಗಳಿಂದ ಶೋಷಣೆ ಮಾಡುತ್ತಿದ್ದಾರೆ. ಜನ ಪ್ರತಿನಿಧಿಗಳ ಲಾಭಕ್ಕಾಗಿ ದೊಡ್ಡಿಗಳು ಅತ್ಯಂತ ನಿರ್ಲಕ್ಷಿತವಾದ ಪ್ರದೇಶಗಳಾಗಿವೆ.

ಅಡವಿಯ ಅಕ್ಕ ಪಕ್ಕದಲ್ಲಿ ಕುಡಿಯುವ ನೀರು ಲಿಂಗನಖಾನ ದೊಡ್ಡಿಯ ಹೋಗಿ ನೀರು ಕುಡಿದೆನು ಅಲ್ಲಿನ ನಿವಾಸಿಗಳು ಬೇಸಿಗೆ ಸಮಯದಲ್ಲಿ ಸುಮಾರು ಎರಡು ಮೂರು ಮೈಲು ದಾಟಿ ನೀರು ತರುತ್ತಾರೆ.

ರಾಯಚೂರು ಸುತ್ತಮುತ್ತಲಿನ ದೊಡ್ಡಿಗಳಿಗೆ ಹೋಗುವ ರಸ್ತೆ ಡಾಂಬರೀಕರಣ ಕಾಣದೆ ಎಷ್ಟೋ ವರ್ಷಗಳಾಗಿವೆ. ಯಾವುದೇ ದೊಡ್ಡಿಗೆ ಹೋದರೂ ಅಲ್ಲಿನ ಸಂಪರ್ಕ ಕಲ್ಪಿಸುವ ಯೋಜನೆ, ಒದಗಿಸುವ ಆರ್ಥಿಕ ವೆಚ್ಚ ಕೈಗೊಂಡ ಯೋಜನೆಗಳು ಮೂಲಭೂತ ಸೌಕರ್ಯಗಳು ಅನುಷ್ಠಾನಗೊಳ್ಳುವಾಗಲೇ ಜವಾಬ್ದಾರಿಯುತ ಮೇಲು ಉಸ್ತುವಾರಿ ಇರುವುದೇ ಇಲ್ಲ. ಇಂಥ ನೂರಾರು ದೊಡ್ಡಿಗಳಿಂದ ಪ್ರತಿನಿದಿತ್ವ ಪಡೆದ ಜನಪ್ರತಿನಿಧಿಗಳು ಚುನಾವಣೆ ನಡೆದಾಗ ಒಮ್ಮೆ ಮುಖ ತೋರಿಸಿ ಕೈ ಜೋಡಿಸಿಕೊಂಡು ತಮ್ಮ ಅಧಿಕಾರ ಅವಧಿಯಲ್ಲಿ ಮಾಡುವ ಕೆಲಸಗಳ ಪಟ್ಟಿಯಿಂದ ಮುಗ್ಧ ಜನರನ್ನು ಜಾತಿ, ಹಣ, ಮುಂತಾದ ಆಮಿಷಗಳಿಂದ ಗೆದ್ದ ನಂತರ ದೊಡ್ಡಿಗಳನ್ನು ಮರೆತುಬಿಡುತ್ತಾರೆ ಎಂದು ಹೇಳುವ ವಯೋವೃದ್ಧರು ಪ್ರತಿಯೊಂದು ದೊಡ್ಡಿಗಳಲ್ಲಿ ಕಂಡುಬರುತ್ತಾರೆ. ದೊಡ್ಡಿಗಳ ಅಭಿವೃದ್ಧಿಯೆಂದರೆ ಸರ್ಕಾರ ಮತ್ತು ರಾಜಕಾರಣಿಗಳ ದೃಷ್ಟಿಯಲ್ಲಿ ಮಣ್ಣಿನ ರಸ್ತೆ ಬದಲಿ ಡಾಂಬರ ರಸ್ತೆ ಮಾಡಿಸುವುದು, ಜನತಾ ಮನೆ ಕಟ್ಟಿಸುವುದು, ಶಾಲಾ ಕೊಠಡಿ ನಿರ್ಮಿಸಿ ಶಿಕ್ಷಕರನ್ನು ಕೊಡದೇ ಇರುವುದು, ವಿದ್ಯುತ್ ಕಂಬ ನಿಲ್ಲಿಸಿ ದೀಪ ಬೆಳಗಿಸದೇ ಇರುವುದು, ಟ್ಯಾಂಕ ಕಟ್ಟಿಸುವಲ್ಲಿ ತಿರುವಿದರೆ ನೀರು ಬರದಂತೆ ನಿರಂತರ ರಿಪೇರಿಗೆ ಕಾಯುವಂತೆ ಮಾಡುವುದೆ ತಮ್ಮ ಅಭಿವೃದ್ಧಿ ಯೋಜನೆಯ ಬಹುಮುಖ್ಯ ಗುರಿ ಎಂದು ಹೇಳುವಂತಾಗಿದೆ. ಆದರೆ ಈ ಜಿಲ್ಲೆಯ ಬಹುತೇಕ ದೊಡ್ಡಿಗಳ ನಿವಾಸಿಗಳಿಗೆ ಕನಿಷ್ಠ ಮೂಲಭೂತ ಸೌಲಭ್ಯಗಳು ಸಿಗದೇ ಇರುವುದು ದುರಂತ ಸಂಗತಿಯಾಗಿದೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಗೆದ್ದು ಆಯ್ಕೆಯಾಗಿ ಹೋದ ಜನಪ್ರತಿನಿಧಿಗಳು ತನ್ನನ್ನು ಯಾಕೆ ಆಯ್ಕೆ ಮಾಡಿದರೆಂದು ಕನಿಷ್ಠ ಪರಿಜ್ಞಾನ ಬೇಕು ಬೇಡಗಳ ಬಗ್ಗೆಯಾಗಲಿ, ಸರ್ಕಾರದ ಸೌಲಭ್ಯಗಳ ಒದಗಿಸುವ ನಿಟ್ಟಿನಲ್ಲಾಗಲಿ ಜಾಗೃತವಾಗಿರುವುದಿಲ್ಲ. ಪ್ರಾಯಶಃ ಮಂಜೂರಾದ ಹಣವನ್ನು ತಮಗೆ ಇಷ್ಟ ಬಂದ ಕಡೆಗೆ ಒಂದೆರಡು ಗುಂಪಿನ ಹಿತಾಸಕ್ತಿಗಳ ಆಕಾಂಕ್ಷೆಯಂತೆ ಪೂರೈಕೆಯ ಪ್ರತಿನಿಧಿಯಾಗಿ ಅವರಷ್ಟೆ ಸೌಲಭ್ಯವನ್ನು ಪಡೆಯುವವರನ್ನು ಪಡೆಯುತ್ತಾರೆ. ಇದರಿಂದ ಹಳ್ಳಿಗಳ ನಂತರದ ಸ್ಥಾನ ಅಂದರೆ ದೊಡ್ಡಿಗಳಿಗೆ ಸಿಗುತ್ತವೆ. ಹಣವನ್ನು ದೊಡ್ಡಿಗಳಿಗೆ ಕೊಡುವುದರಿಂದ ಈ ಅಲ್ಪಸ್ವಲ್ಪ ಹಣವು ಕೂಡ ಆ ದೊಡ್ಡಿಗಳ ಪ್ರಗತಿಗೆ ತೊಂದರೆಯಾಗಿದೆ.

ಗುಡಗುಂಟಿ, ಪೈದೊಡ್ಡಿ, ಗೌಡರೂ, ಐದುಬಾವಿ, ಟಣಮಕಲ್ ಸುತ್ತಮುತ್ತಲಿನ ದೊಡ್ಡಿಗಳಿಗೆ ಹೋಗುವ ರಸ್ತೆ ದುರಸ್ತೆಯಿಂದ ಕೂಡಿರುತ್ತದೆ. ಗೊತ್ತಿಲ್ಲ ಆದರೆ ಅಡ್ಡರಸ್ತೆಯಿಂದ ಸುಮಾರು ಮೂರು ನಾಲ್ಕು ಕಿ.ಮೀ. ದೂರದ ದಾರಿ ಬಂಡಿ ಬಡಗಲು ಓಡಾಡಿ ಮತ್ತಷ್ಟು ಕಲ್ಲು ಎಬ್ಬಿಸಿಕೊಂಡು ಮಣ್ಣೆಲ್ಲ ಹರಿದು ಹಳ್ಳ ಸೇರಿ ತಗ್ಗು ದಿಣ್ಣೆಗಳಿಂದ ತುಂಬಿಬಿಟ್ಟಿದೆ.

ಕೆಲವು ದೊಡ್ಡಿಗಳಿಗೆ ಅಂದರೆ ಹಳ್ಳಿಯಾಗಿ ಪರಿವರ್ತನೆ ಹೊಂದಿದ ದೊಡ್ಡಿಗಳಿಗೆ ಯಾವತ್ತೋ ಎಂಬತ್ತರ ದಶಕದಲ್ಲಿ ಡಾಂಬರು ಹಾಕಿಸಿದ್ದರೇನೂ ಎಂಬಂತೆ ಕಲ್ಲು ಚಪ್ಪಡಿ ಹಾಕಿ ರಿಪೇರಿ ಮಾಡಿದಂತಿದೆ. ಇಲ್ಲಿನ ಯಾವುದೇ ದೊಡ್ಡಿಗಳಿಗೆ ವಿದ್ಯುತ್ ಸಂಪರ್ಕವೇ ಇಲ್ಲ. ಏಳು ಎಂಟು ವರ್ಷಗಳಿಂದ ಗಂಗಾಕಲ್ಯಾಣ ಯೋಜನೆಯಿಂದ ಹಲವು ದೊಡ್ಡಿಗಳಿಗೆ ವಿದ್ಯುತ್ ಸೌಲಭ್ಯ ಸಿಕ್ಕಿದೆ. ಇಲ್ಲಿನ ಕೆಲವು ಕುಟುಂಬಗಳಿಗೆ ವಿದ್ಯುತ್ ಸಿಗದೆ ಈಗಲೂ ಕತ್ತಲಲ್ಲೆ ಕಾಲ ಕಳೆಯುತ್ತಿದ್ದಾರೆ. ಈ ದೊಡ್ಡಿಗಳಿಗೆ ಹೋಗುವ ರಸ್ತೆಗಳಿಗೆ ಯಾವುದೇ ಬೀದಿ ದೀಪ ಇರದೇ ಇರುವುದನ್ನು ಕಾಣುತ್ತೇವೆ. ವಿದ್ಯುತ್‌ನಲ್ಲಿ ಏನಾದರೂ ವ್ಯತ್ಯಾಯ ಅಂದರೆ ಟಿಸಿ ಸುಟ್ಟರೆ ರಿಪೇರಿ ಮಾಡುವುದಕ್ಕೆ ಮೂರರಿಂದ ನಾಲ್ಕು ತಿಂಗಳವರೆಗೆ ಸಮಯ ತೆಗೆದುಕೊಳ್ಳುತ್ತಾರೆ. ಇದರಿಂದ ಇಲ್ಲಿನ ನಿವಾಸಿಗಳಿಗೆ ವಿದ್ಯುತ್ ಸಮಸ್ಯೆ ಗಂಭೀರವಾಗಿ ಕಾಣಿಸುತ್ತದೆ.

ಪ್ರತ್ಯೇಕವಾಗಿ ಪ್ರಾದೇಶಿಕ ನೆಲೆಗಳು

"ಸಮಕಾಲೀನ ಸಮಾಜದ ಮಧ್ಯ ಇದ್ದುಕೊಂಡು ಪ್ರತ್ಯೇಕವಾದ ಬದುಕನ್ನು ನಡೆಸುತ್ತಾ ತಮ್ಮದೇ ಆದ ನೆಲೆಗಳನ್ನು ಉಳಿಸಿಕೊಂಡು ಬೆಳೆಸಿಕೊಂಡು ಆಧುನಿಕವಾಗಿಯು ಪ್ರತ್ಯೇಕ ನೆಲೆಗಳಲ್ಲಿ ಉಳಿದ ಜನರ ಗುಂಪಿನ ನೆಲೆಯನ್ನು ದೊಡ್ಡಿಗಳು ಎಂದು ಕರೆಯಬಹುದು. ಹಳ್ಳಿಯ ಜೀವನಕ್ಕೆ ಆಧುನಿಕತೆಯ ಪ್ರಭಾವ ಇದ್ದರೂ ತಮ್ಮ ನೆಲೆಗಳನ್ನು ಇಂದಿಗೂ ಜೀವಂತವಾಗಿ ಉಳಿಸಿಕೊಂಡಿದ್ದಾರೆ."[೩] ಈ ದೊಡ್ಡಿಗಳಲ್ಲಿ ವಾಸಿಸುವ ಸಮುದಾಯದವರು ಹೆಚ್ಚಾಗಿ ಮಾಂಸಹಾರಿಗಳಾಗಿದ್ದು ಅವರ ದೇಹ ದೃಢಕಾಯವಾಗಿದೆ. ಗ್ರಾಮೀಣ ಪರಿಸರದಿಂದ ಪ್ರತ್ಯೇಕಗೊಂಡು ಅಡವಿಗಳಲ್ಲಿ ಕುರುಚಲ ಗುಡ್ಡಗಳ ವಾರಿಗಳಲ್ಲಿ ವಾಸವಾಗಿರುತ್ತಾರೆ. ಇವರು ನೆಲೆ ನಿಂತಿರುವ ಸಿಂಧನೂರು ತಾಲೂಕಿನ ದೊಡ್ಡಿಗಳು ಮಾನವಿ ತಾಲೂಕಿನ ದೊಡ್ಡಿಗಳು, ರಾಯಚೂರು ತಾಲೂಕಿನ ದೊಡ್ಡಿಗಳು ಗ್ರಾಮಗಳಾಗಿ ಪರಿವರ್ತನೆಯಾಗಿದ್ದರು ದೊಡ್ಡಿಗಳಲ್ಲಿ ವಾಸಿಸುವ ನಿವಾಸಿಗಳಿಗೂ ಗ್ರಾಮದ ನಿವಾಸಿಗಳಿಗೂ ಬಹಳಷ್ಟು ವೈರುದ್ಯತೆ ಕಂಡುಬರುತ್ತದೆ. ದೊಡ್ಡಿಗಳಲ್ಲಿ ವಾಸಿಸುವವರ ಬದುಕು ಸಾಮಾನ್ಯವಾಗಿ ಸೌಹಾರ್ಧತೆಯಿಂದ ಕೂಡಿರುತ್ತದೆ. ದೊಡ್ಡಿಗಳಲ್ಲಿ ನೆಲೆಸಿರುವ ಸಮುದಾಯದವರ ಜೀವಾಳ ಕೃಷಿಯಾಗಿದೆ ಅದನ್ನೆ ನಂಬಿ ಬದುಕುತ್ತಾರೆ.

"ದೊಡ್ಡಿಗಳ ಅಧ್ಯಯನವು ಒಂದು ಪ್ರದೇಶ ಪ್ರತ್ಯೇಕವಾಗಿ ಅಡವಿಯಲ್ಲಿ ಉಳಿದ ಸಮುದಾಯದವರ ಜೀವನ ಮಟ್ಟ, ಅಲ್ಲಿ ವಾಸಿಸುವ ಸಮುದಾಯಗಳನ್ನು ತಿಳಿಯಲು ಸಹಕಾರಿಯಾಗುತ್ತದೆ."[೪] ಅಲ್ಲದೇ ದೊಡ್ಡಿಗಳಲ್ಲಿ ಸಮುದಾಯಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ತಿಳಿಯಲು ದೊಡ್ಡಿಗಳ ಅಧ್ಯಯನ ಅವಶ್ಯವಾಗಿದೆ.

ಈ ಹಿನ್ನೆಲೆಯಲ್ಲಿ ದೇಶದಲ್ಲಿ ಸಮುದಾಯಗಳ ಅಧ್ಯಯನ ನಡೆದಿದೆ. ಸಾಮಾನ್ಯವಾಗಿ ಪ್ರತ್ಯೇಕವಾಗಿ ಉಳಿದಿರುವ ಸಮುದಾಯಗಳ ಬದುಕಿನ ಕ್ರಮ ಏಕಪ್ರಕಾರವಾಗಿರುತ್ತದೆ. ಆದರಲ್ಲಿ ಅಲ್ಪಸ್ವಲ್ಪ ಸಾಕಷ್ಟು ವೈರುದ್ಯವಿರುತ್ತದೆಯೇ ಹೊರತು ಅಂತರದಲ್ಲಿ ಬಹುಮಟ್ಟಿಗೆ

ಜಗತ್ತಿನಾದ್ಯಂತ ಸಮ್ಯತೆಗಳು ಕಂಡುಬರುತ್ತವೆ. ಇವುಗಳ ಆಧಾರಗಳ ಮೇಲೆ ಕರ್ನಾಟಕದ ಪ್ರತ್ಯೇಕ ನೆಲೆಗಳ ಕುರಿತು ಮೂರು ವಲಯಗಳಾಗಿ ನೋಡಬಹುದಾಗಿದೆ.

ಹಳೇ ಮೈಸೂರು : ಮಂಡ್ಯ ರಾಮನಗರ ಪ್ರದೇಶಗಳಲ್ಲಿ ಪ್ರತ್ಯೇಕವಾಗಿ ಇರುವ ನೆಲೆಗಳಿಗೆ ಹಾಡಿ, ದೊಡ್ಡಿ, ಪೌಡು ಎಂದು ಕರೆಯುತ್ತಾರೆ. ಹಾಡಿಗಳಲ್ಲಿ ಜೇನು ಕುರುಬ, ಸೊಲಿಗ ಸಮುದಾಯದ ನೆಲೆಯಾದರೆ, ದೊಡ್ಡಿಗಳಲ್ಲಿ ಬೇಡರು ಇರಳಿಗರು, ಒಕ್ಕಲಿಗರು ಮುಂತಾದ ಸಮುದಾಯದ ನೆಲೆಸಿರುವುದು ಕಂಡುಬರುತ್ತದೆ.

ಮಧ್ಯ ಕರ್ನಾಟಕದ : ಚಿತ್ರದುರ್ಗ ಜಿಲ್ಲೆ, ತುಮಕೂರು ಜಿಲ್ಲೆ ಪ್ರತ್ಯೇಕವಾಗಿ ಉಳಿದ ಸಮುದಾಯಗಳಾದ ಕಾಡುಗೊಲ್ಲರ ನೆಲೆಗೆ ಹಟ್ಟಿ ಎಂದು ಕರೆಯುತ್ತಾರೆ. ಅದೇ ರೀತಿಯಾಗಿ ಈ ಎರಡು ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರತ್ಯೇಕವಾಗಿ ನೆಲೆನಿಂತ ಬೇಡ ಸಮುದಾಯ ನೆಲೆಗಳಿಗೆ ಹಟ್ಟಿಗಳು ಎಂದು ಕರೆಯುತ್ತಾರೆ. ಜೊತೆಗೆ ಈ ಜಿಲ್ಲೆಯಲ್ಲಿ ಪ್ರತ್ಯೇಕವಾಗಿ ಉಳಿದಿರುವ ಕುರುಬ ಸಮುದಾಯದ ನೆಲೆಗಳಿಗೂ ಹಟ್ಟಿ ಎಂದು ಕರೆಯುತ್ತಾರೆ.

ಅದೇ ರೀತಿ ಪ್ರತ್ಯೇಕವಾಗಿ ಉಳಿದ ಇನ್ನೊಂದು ಸಮುದಾಯವೆಂದರೆ ಲಂಬಾಣಿಗರ ನೆಲೆಗಳಿಗೆ ತಾಂಡಗಳು ಎಂದು ಕರೆಯುತ್ತಾರೆ.

ಹೈದ್ರಾಬಾದ್ ಕರ್ನಾಟಕದ ರಾಯಚೂರು ಜಿಲ್ಲೆ, ಯಾದಗಿರಿ ಜಿಲ್ಲೆ ನೆಲೆ ನಿಂತ ಸಮುದಾಯಗಳ ವಾಸಸ್ಥಳಗಳಿಗೆ ದೊಡ್ಡಿಗಳು ಎಂದು ಕರೆಯುತ್ತಾರೆ.

ಲಿಂಗಸ್ಗೂರು ತಾಲೂಕಿನ ದೊಡ್ಡಿಗಳು

ದೊಡ್ಡಿಗಳ ಹೆಸರುಗಳು

೧. ಪೂಜಾರಿ ದೊಡ್ಡಿ

೨. ಗೋಡೆದರ ದೊಡ್ಡಿ

೩. ಅಡವಿಬಾವಿ ದೊಡ್ಡಿ

೪. ಕಟಗಲ್ ದೊಡ್ಡಿ

೫. ಅಡಿಕೇರ ದೊಡ್ಡಿ

೬. ಹಂದಿಬಗಡಿ ದೊಡ್ಡಿ

೭. ನುಚ್ಚಿನೆರೆ ದೊಡ್ಡಿ

೮. ಗದ್ದೆರ ದೊಡ್ಡಿ

೯. ಚಿಕ್ಕಲೆರ ದೊಡ್ಡಿ

೧೦. ಲಿಂಗದಳ್ಳಿ ದೊಡ್ಡಿ

೧೧. ನೀರಿನೆರ ದೊಡ್ಡಿ

೧೨. ಗುಮೇದರ ದೊಡ್ಡಿ

೧೩. ಹುಜರತ್ತಿ ದೊಡ್ಡಿ

೧೪. ದೇವಣರ ದೊಡ್ಡಿ

೧೫. ತೊಗಲೇರ ದೊಡ್ಡಿ

೧೬. ಅಂಬಿಗೇರ ದೊಡ್ಡಿ

೧೭. ಜಾತಿಗೇರ ದೊಡ್ಡಿ

೧೮. ಕಕ್ಕೇರ ದೊಡ್ಡಿ

೨೦. ಹೊಸೂರು ದೊಡ್ಡಿ

೨೧. ಸೂಗೂರ ದೊಡ್ಡಿ

೨೨. ದುಮತೇರ ದೊಡ್ಡಿ

೨೩. ದೇಸಾಯಿ ದೊಡ್ಡಿ

೨೪. ನಾಯಕರ ದೊಡ್ಡಿ

೨೫. ಕಬ್ಬೇರ ದೊಡ್ಡಿ

೨೬. ಯಾರಡೋಣಿರ ದೊಡ್ಡಿ

೨೭. ಮುಂಡರಗಿ ದೊಡ್ಡಿ

೨೮. ಗುಜ್ಜಲರ ದೊಡ್ಡಿ

೨೯. ಕಂಬಳೆರ ದೊಡ್ಡಿ

೩೦. ಕುರುಬರ ದೊಡ್ಡಿ

೩೧. ಅಂಕುಶ ದೊಡ್ಡಿ

೩೨. ಲೇಕಿಂಚೇರಿ ದೊಡ್ಡಿ

೩೩. ಬೆಂಚಲ ದೊಡ್ಡಿ

೩೪. ಗಲಗಿನ ದೊಡ್ಡಿ

೩೫. ಸೋಮನಾಥ ದೊಡ್ಡಿ

೩೬. ಸೂಜಿಗುಂಪಿನ ದೊಡ್ಡಿ

೩೭. ಗೋಪಾಲದೊಡ್ಡಿ

೩೮. ಭೂಪುರದೊಡ್ಡಿ

೩೯. ಹಡಗಲೇರ ದೊಡ್ಡಿ

೪೦. ಬಿಲಿಬಿಂಚಿ ತಿಮ್ಮಯ್ಯನ ದೊಡ್ಡಿ

೪೧. ಕಾಳೇರ ದೊಡ್ಡಿ

೪೨. ಬೇಡರ ದೊಡ್ಡಿ

೪೩. ಹವಲ್ದಾರ ದೊಡ್ಡಿ

೪೪. ಬಡಿಗೇರ ದೊಡ್ಡಿ

೪೫. ಗುರಿಕಾರ ದೊಡ್ಡಿ

೪೬. ಗುಡಿಯಾರ ದೊಡ್ಡಿ

೪೭. ಗುಲಮನ ದೊಡ್ಡಿ

೪೮. ಹಂಪನ ದೊಡ್ಡಿ

೪೯. ಆದಪ್ಪನ ದೊಡ್ಡಿ

೫೦. ಕುಂಬಾರ ದೊಡ್ಡಿ

೫೧. ಮುತ್ತೇರ ದೊಡ್ಡಿ

೫೩. ಬಂಡಿ ಮೈಲಾರದೊಡ್ಡಿ

೫೪. ಬರೇರ ದೊಡ್ಡಿ

೫೫. ಕ್ವಾಟಿ ಹುಲುಗಪ್ಪನ ದೊಡ್ಡಿ

೫೬. ಟಣಮನಕಲ್ ದೊಡ್ಡಿ

೫೭. ಪೈದೊಡ್ಡಿ

೫೮. ಏಳುಮಡಿಕೇರ ದೊಡ್ಡಿ

ದೇವದುರ್ಗ ತಾಲೂಕಿನ ದೊಡ್ಡಿಗಳು

೧. ಕೊತ್ತದೊಡ್ಡಿ

೨. ಬುಂಕಲದೊಡ್ಡಿ

೩. ಮಲ್ಲಿನಾಯಕನ ದೊಡ್ಡಿ

೪. ಮಾನಶಯ್ಯ ದೊಡ್ಡಿ

೫. ಕುರ್ಲೆರ ದೊಡ್ಡಿ

೬. ಮೂಕಬಸವನ ದೊಡ್ಡಿ

೭. ಅಂಬಿಗೇರ ದೊಡ್ಡಿ

೮. ಹಳ್ಳದ ರಾಯನದೊಡ್ಡಿ

೯. ಹುಣಸೆ ಮರದ ದೊಡ್ಡಿ

೧೦. ಮಂಜಲರ ದೊಡ್ಡಿ

೧೧. ತಳವಾರ ದೊಡ್ಡಿ

೧೨. ರಾಯಪ್ಪನ ದೊಡ್ಡಿ

೧೩. ಸಂಪತ್ತರಾಯನ ದೊಡ್ಡಿ

೧೪. ಬಸ್ಸಾಪುರ ದೊಡ್ಡಿ

೧೫. ಚಿಂಚೋಡಿಯರ ದೊಡ್ಡಿ

೧೬. ಮರಡಿಯವರ ದೊಡ್ಡಿ

೧೭. ಸೂಗೇರ ದೊಡ್ಡಿ

೧೮. ಗುಮೇದರ ದೊಡ್ಡಿ

೧೯. ಕಕ್ಕಲದೊಡ್ಡಿ

೨೦. ಚಿಕ್ಕಲ ದೊಡ್ಡಿ

೨೧. ನಿಂಬಾಯಿ ದೊಡ್ಡಿ

೨೨. ಯಲದೊಡ್ಡಿ

೨೩. ಯರಕಮ ದೊಡ್ಡಿ

೨೪. ಮಾಕಲ ದೊಡ್ಡಿ

೨೫. ಏಳು ಮಡಿಕೇರ ದೊಡ್ಡಿ

೨೬. ಮಂಗ್ಯಾಳರ ದೊಡ್ಡಿ

೨೭. ಜೋಗ್ಯಾರ ದೊಡ್ಡಿ

೨೮. ಹರಿಕೇರರ ದೊಡ್ಡಿ

೨೯. ಬೆಂಗಾಣ ದೊಡ್ಡಿ

೩೦. ಹಳಪನ ದೊಡ್ಡಿ

೩೧. ಗಾಲೇರ ದೊಡ್ಡಿ

೩೨. ಅಂಬಣ್ಣನ ದೊಡ್ಡಿ

೩೩. ಗಂಟೇರ ದೊಡ್ಡಿ

೩೪. ಬುಂಕಲ ದೊಡ್ಡಿ

೩೫. ಹೊಸೂರು ದೊಡ್ಡಿ

೩೬. ಗಂಗೇರ ದೊಡ್ಡಿ

ಮಾನ್ವಿ ತಾಲೂಕಿನ ದೊಡ್ಡಿಗಳು

೧. ಕಸನದೊಡ್ಡಿ

೨. ತೊಪ್ಪಲ ದೊಡ್ಡಿ

೩. ಗೋವಿಂದ ದೊಡ್ಡಿ

೪. ಪಟಕನ ದೊಡ್ಡಿ

೫. ಬೋಮಸನ ದೊಡ್ಡಿ

೬. ಯರಮಲದೊಡ್ಡಿ

ಸಿಂಧನೂರು ತಾಲೂಕಿನ ದೊಡ್ಡಿಗಳು

೧. ಉಪ್ಪಲ ದೊಡ್ಡಿ

೨. ಚಿಂತಮಾನ ದೊಡ್ಡಿ

೩. ಯದ್ದಲ ದೊಡ್ಡಿ

ರಾಯಚೂರು ತಾಲೂಕಿನ ದೊಡ್ಡಿಗಳು

೧. ಕೊತ್ತದೊಡ್ಡಿ

೨. ಮಾಲದೊಡ್ಡಿ

೩. ಲಿಂಗನಖಾನ ದೊಡ್ಡಿ

೪. ಮಾಸ ದೊಡ್ಡಿ

೫. ಮುರಕಿ ದೊಡ್ಡಿ

೬. ಕನ್ಯಾ ದೊಡ್ಡಿ

೭. ಕೊತ್ತ ದೊಡ್ಡಿ

೮. ಅಪ್ಪನ ದೊಡ್ಡಿ

೯. ವಟ್ಲಂದೊಡ್ಡಿ

೧೦. ಪಲವಲ ದೊಡ್ಡಿ

೧೧. ನಾಗನದೊಡ್ಡಿ

೧೨. ರಾಳದೊಡ್ಡಿ

೧೩. ಬಾಯಿ ದೊಡ್ಡಿ

೧೪. ಬೋಳಮಾನ ದೊಡ್ಡಿ

೧೫. ಕಡಗಂದೊಡ್ಡಿ

೧೬. ವಡ್ಲಂ ದೊಡ್ಡಿ

೧೭. ಮಾಡಮಾನ ದೊಡ್ಡಿ

೧೮. ಹನುಮಾನ ದೊಡ್ಡಿ

೧೯. ಇಬ್ರಾಹಿಂ ದೊಡ್ಡಿ

೨೦. ಮಾಮಿಡಿ ದೊಡ್ಡಿ

೨೧. ಕುರುಬ ದೊಡ್ಡಿ

೨೨. ಉಂಗ್ರಾಳ ದೊಡ್ಡಿ

೨೩. ಅರಕನ ದೊಡ್ಡಿ

ದೊಡ್ಡಿಗಳ ಒಳನೋಟ

ದೊಡ್ಡಿಗಳ ಅಧ್ಯಯನಕ್ಕೆ ಹೋದಾಗ ಅಲ್ಲಿನ ಜನರ ಸುಖ-ದುಃಖ ಕಷ್ಟನಷ್ಟ ದುಗುಡ-ದುಮ್ಮಾನ ಸಂತೋಷ ನೆಮ್ಮದಿಗಳ ಸೂಕ್ಷ್ಮ ಅವಲೋಕನ ಗೋಚರಿಸುತ್ತದೆ. ಅದಕ್ಕೆ ಕಾರಣವಾದ ಆಳುವ ವರ್ಗದ ಜವಾಬ್ದಾರಿಯನ್ನು ತಿಳಿಯುತ್ತಾ ಹೋಗುತ್ತವೆ. ಈ ನೆಲೆಗಳಿಗೆ ಸಿಗಬೇಕಾದ ಸವಲತ್ತುಗಳನ್ನು ಹಳ್ಳಿಗಳ ಪ್ರಬಲ ಜನಸಂಖ್ಯೆ ಕಸಿದುಕೊಳ್ಳುತ್ತವೆ.

ಒಟ್ಟಿನಲ್ಲಿ ಸರ್ಕಾರಿ ಅಭಿವೃದ್ಧಿ ಕಾರ್ಯಗಳೆಂದರೆ ಹೇಳುವವರು ಇಲ್ಲ ಕೇಳುವವರು ಇಲ್ಲ ಎಂದು ಸಾಮಾನ್ಯವಾಗಿ ಜನರು ಒಂದು ವ್ಯವಸ್ಥೆಯ ಪರಿಸ್ಥಿತಿಯ ಬಗ್ಗೆ ಪ್ರತಿಕ್ರಿಯಿಸ ಅಸಹಾಯಕತೆಯನ್ನು ವ್ಯಕ್ತಪಡಿಸುವುದುಂಟು. ಹೀಗೆ ಈ ಜಿಲ್ಲೆಯಲ್ಲಿ ಕಂಡುಬರುವ ದೊಡ್ಡಿಗಳ ಅಭಿವೃದ್ಧಿ ಪರಿಸ್ಥಿತಿ ಎಂದು ಕಾಣುತ್ತದೆ.

ಯಾವುದೇ ದೊಡ್ಡಿಗಳ ಅಭಿವೃದ್ಧಿಯನ್ನು ನಾವು ದೊಡ್ಡ ಮಟ್ಟದಲ್ಲಿ ಪರಿವರ್ತನೆಗೊಂಡು ಗ್ರಾಮವಾಗಿರುವ ದೊಡ್ಡಿಗಳು ಮಾತ್ರ ಸರ್ಕಾರ ಹತ್ತು ಹಲವು ಯೋಜನೆಗಳನ್ನು ಬಳಕೆ ಮಾಡಕೊಂಡಿವೆ. ಉಳಿದಂತೆ ಯಾವ ದೊಡ್ಡಿಗಳಲ್ಲಿ ಉದ್ಯೋಗ ಖಾತ್ರಿ ಕಾರ್ಡ್ ಸಿಗುವುದಿಲ್ಲ. ಯಾವುದೇ ದೊಡ್ಡಿಗಳ ಅಭಿವೃದ್ಧಿಯನ್ನು ನಾವು ಸರ್ಕಾರಿ ಕಡತಗಳ ಅಂಕಿಸಂಖ್ಯೆಯಲ್ಲಿ ನೋಡಿ ಲೆಕ್ಕಹಾಕಿ ಇಷ್ಟೆಲ್ಲಾ ಸೌಲಭ್ಯಗಳನ್ನು ಹೊಂದಿದೆ ಎಂದು ಸರ್ಕಾರಿ ಅಧಿಕಾರಿಗಳು ಕೊಡುವ ಅಂಕಿ ಸಂಖ್ಯೆಗಳ ವರದಿಯ ಮೇಲೆ ನಿಂತಿರುವುದಿಲ್ಲ. ದೊಡ್ಡಿಯಲ್ಲಿ ಬದುಕುತ್ತಿರುವ ಜನಸಂಖ್ಯೆಗೆ ಎಷ್ಟು ಜನ ವಿದ್ಯಾವಂತರಿದ್ದಾರೆ ಎಷ್ಟು ಜನ ಅವಿದ್ಯಾವಂತರಿದ್ದಾರೆ ಎಂಬುದಕ್ಕೆ ಹಳ್ಳಿಗಳಾಗಿ ಪರಿವರ್ತನೆ ಹೊಂದಿರುವಂತ ದೊಡ್ಡಿಗಳಲ್ಲಿ ಮಾಹಿತಿ ಸಿಗುತ್ತದೆ. ಇನ್ನು ನಾಗರೀಕತೆಯ ಸೊಂಕನ್ನು ತಗುಲದೆ ಇರುವಂತ ದೊಡ್ಡಿಗಳಲ್ಲಿ ಇಂತಹ ಯಾವುದೇ ಮಾಹಿತಿ ಸಿಗುವುದಿಲ್ಲ. ಪರಿವರ್ತಿತ ದೊಡ್ಡಿಗಳಲ್ಲಿ ನೀರು, ವಸತಿ, ಶಿಕ್ಷಣ ಮತ್ತು ಆರೋಗ್ಯದ ಸೌಲಭ್ಯ ಹೊಂದಿರುವುದು ಕಂಡುಬರುತ್ತದೆ.

ದೊಡ್ಡಿಗಳ ಶೈಕ್ಷಣಿಕ ವಿಷಯಕ್ಕೆ ಬಂದಾಗ ಓದುವುದರಿಂದ ಏನು ಬರುತ್ತದೆ? ಬರೆಯುವುದರಿಂದ ಏನು ಲಾಭ? ಸರ್ಕಾರ ಎಷ್ಟು ಮಂದಿಗೆ ಅಂಥ ಉದ್ಯೋಗ ಕೊಡುತ್ತೆ? ಎಂಬ ಲಾಭಾಂಶದ ಮೇಲೆಯೇ ದೃಷ್ಟಿ ಇರುವಂತ ಪರಂಪರೆಯ ಜನರು ಅನೇಕ ದೊಡ್ಡಿಗಳಲ್ಲಿ ಕಂಡುಬರುತ್ತಾರೆ. ಮಾಹಿತಿ ನೀಡಿದ ವಕ್ತೃಗಳಲ್ಲಿ ಬಹುಸಂಖ್ಯೆಯಲ್ಲಿ ಅವಿದ್ಯಾವಂತರು ಕಂಡುಬರುತ್ತಾರೆ.

ದೊಡ್ಡಿಗಳು ಎಂದರೆ ನಮ್ಮೆಲ್ಲರ ಕಣ್ಣೆದುರಿಗೆ ಬರುವುದು ದನ ಮತ್ತು ಕುರಿಗಳ ವಾಸಸ್ಥಾನ ಜೊತೆಗೆ ಮಾನವನ ಪ್ರಾರಂಭ ಮತ್ತು ಕಟ್ಟಕಡೆಯ ವಾಸಸ್ಥಾನ ಎಂದು ಹೇಳಬಹುದು. ಬಿದ್ದ ಮಣ್ಣಿನ ಮನೆಗಳು, ಗಾಳಿಗೆ ಚೆಲ್ಲಾಪಿಲ್ಲಿಯಾದ ಗುಡಿಸಲುಗಳು ಕೊಂಪೆ, ದೀಪವಿಲ್ಲದ ಅಂಗಳಗಳು, ದುಡಿಯುವುದೊಂದೇ ಗೊತ್ತಿರುವ ಕೃಷಿಕರು ಮತ್ತು ದನಗಾಯಿ ಕುರಿಗಾಯಿಗಳು ಕಂಡುಬರುವ ವಸತಿಸ್ಥಾನಗಳಾಗಿವೆ. ಇದು ದೊಡ್ಡಿಗಳ ನೈಜ ಸ್ಥಿತಿಯಾಗಿದೆ. ಬಡತನ ದಾರಿದ್ರ್ಯದಲ್ಲಿ ಬದುಕುವ ನತದೃಷ್ಟ ಅಮಾಯಕರು ಜಿಲ್ಲೆಯ ನೀರಾವರಿ ವಂಚಿತ ದೊಡ್ಡಿಗಳಲ್ಲಿ ಕಂಡುಬರುತ್ತಾರೆ. ನೀರಾವರಿ ಇರುವ ದೊಡ್ಡಿಗಳಲ್ಲಿ ಇದ್ದ ಅಲ್ಪಸ್ವಲ್ಪ ಜಮೀನಿನಲ್ಲಿ ನೆಮ್ಮದಿಯಿಂದ ಜೀವನ ಸಾಗಿಸುತ್ತಿದ್ದಾರೆ.ರಾಯಚೂರು ಜಿಲ್ಲೆಯ ದೇವದುರ್ಗ, ಲಿಂಗಸ್ಗೂರು ತಾಲೂಕಿನ ಭೂಮಿ ಇಡಿಯಾಗಿ ಸಮತಟ್ಟಾಗಿಯೇನು ಇಲ್ಲ. ಅದರಲ್ಲೂ ದೊಡ್ಡಿ ಜನರ ಜಮೀನು ಏರು ದಿಣ್ಣೆಗಳು ಅಲ್ಲಲ್ಲಿ ಕುರುಚಲು

ಸಣ್ಣಪುಟ್ಟ ಗುಡ್ಡಗಳಿಂದ ಕೂಡಿದೆ. ಈ ಭೂಮಿಯಲ್ಲಿ ಶೇಂಗಾ, ಸಜ್ಜೆ, ಸೂರ್ಯಕಾಂತಿ, ಕಡಲಿ ಕೆಲವು ಕಡೆ ಭತ್ತ, ಕಪ್ಪು ಭೂಮಿ ಇದ್ದಕಡೆ ಹತ್ತಿ, ಜೋಳ ಇತ್ಯಾದಿ ಬೆಳೆಯನ್ನು ಬೆಳೆಯತ್ತಾರೆ. ನೀರಾವರಿ ಇಲ್ಲದೇ ಇರುವ ಪ್ರದೇಶದ ದೊಡ್ಡಿಯ ಜನರು ಮಳೆಯ ಆಶ್ರಿತ ಬೆಳೆಯನ್ನು ಬೆಳೆಯುತ್ತಾರೆ. ಇಲ್ಲವೇ ಬೋರವೆಲ್ ಮುಖಾಂತರ ಕೃಷಿ ಮಾಡುತ್ತಾರೆ. ಇದರ ಜೊತೆಯಲ್ಲಿ ಹೈನುಗಾರಿಕೆ ಕುರಿ ಸಾಗಾಣಿಕೆ ಕೋಳಿ ಸಾಗಾಣಿಕೆ ಸಾಮಾನ್ಯವಾಗಿ ದೊಡ್ಡಿಗಳಲ್ಲಿ ಕಂಡುಬರುತ್ತವೆ.

ರಾಯಚೂರು ಜಿಲ್ಲೆಯ ಸಿಂಧನೂರು ಮತ್ತು ಮಾನ್ವಿ ತಾಲೂಕುಗಳು ನೀರಾವರಿಯ ಪ್ರದೇಶಗಳಾಗಿದ್ದು, ಉಳಿದ ತಾಲೂಕುಗಳು ಅಂದರೆ ದೇವದುರ್ಗ, ಲಿಂಗಸ್ಗೂರು, ಮತ್ತು ರಾಯಚೂರು ಅಲ್ಪಸ್ವಲ್ಪ ನೀರಾವರಿ ಹೊಂದಿದ ತಾಲೂಕುಗಳಾಗಿವೆ. ಬೋರ್‌ವೆಲ್ ಮತ್ತು ಮಳೆಯಾಶ್ರಿತ ಕೃಷಿ ಮಾಡುವ ರೈತರು ಈ ತಾಲೂಕಿನಲ್ಲಿ ಕಂಡುಬರುತ್ತಾರೆ. ಅದರಲ್ಲೂ ದೊಡ್ಡಿಗಳ ಕೃಷಿಕರ ವಿಷಯಕ್ಕೆ ಬಂದಾಗ ತುಂಬಾ ಗಂಭೀರವಾದ ಪರಿಸ್ಥಿತಿಯನ್ನು ಕಾಣುತ್ತೇವೆ ಅಲ್ಪಸ್ವಲ್ಪ ನೀರಾವರಿ ಇರುವ ಕುಲಕಸುಬು ನಂಬಿಕೊಂಡವರು ನೆಮ್ಮದಿಯಿಂದ ಜೀವನ ಸಾಗಿಸುತ್ತಿದ್ದಾರೆ. ಕೃಷಿಯೊಂದನ್ನೇ ನಂಬಿದವರ ಬದುಕು ದಾರುಣ ಸ್ಥಿತಿಯಾಗಿ ಕಂಡುಬರುತ್ತದೆ.

"ಸಾಮಾನ್ಯವಾಗಿ ಮಳೆ ಆಧಾರಿತ ಕೃಷಿಯೇ ಹೆಚ್ಚಾಗಿರುವುದರಿಂದ ಕೃಷಿಯಿಂದ ಬರುವ ಉತ್ಪಾದನೆ ಅವರ ಆರ್ಥಿಕ ಸಂಪನ್ಮೂಲವಾಗಿರುತ್ತದೆ. ಏಕೆಂದರೆ ಬೆಳೆಯಿಂದ ಬರುವ ಉತ್ಪಾದನೆಯು ಹೆಚ್ಚಾಗಿ ಮಳೆ ಆಧಾರಿತವಾಗಿರುವುದರಿಂದ ಆದಾಯವು ಸೀಮಿತಗೊಂಡಿರುತ್ತದೆ. ಅವರು ಬೆಳೆಯುವ ಯಾವುದೇ ಬೆಳೆಯಾಗಿರಲಿ ದವಸ ಧಾನ್ಯಗಳಾಗಲಿ, ರೈತರಿಗೆ ಯಾವುದೇ ರೀತಿಯ ಹೆಚ್ಚು ಲಾಭವನ್ನು ತಂದುಕೊಡುವುದಿಲ್ಲ. ವಾಣಿಜ್ಯ ಬೆಳೆಯೆಂದರೆ ಹತ್ತಿಯೊಂದೆ ಅತಿ ಹೆಚ್ಚು ಲಾಭದಾಯಕವಾದ ಬೆಳೆ ಇಲ್ಲಿನ ಕೃಷಿಕರದ್ದು ಎಂದು ಹೇಳಬಹುದು."[೫]

ರೈತನಿಗೆ ಸಾಕಾಗುವಷ್ಟು ಫಲವನ್ನು ಭೂಮಿ ನೀಡದಿದ್ದಾಗ ಬೇರೆ ಕೆಲಸಗಳನ್ನು ಮಾಡಿ ಜೀವನ ಸಾಗಿಸುವ ಇತರೆ ವೃತ್ತಿಗಳು ಗೊತ್ತಿಲ್ಲ. ಈ ದೊಡ್ಡಿಯಲ್ಲಿ ಕುಲ ಕಸುಬು ಜೀವಂತವಾಗಿ ಉಳಿಸಿಕೊಂಡ ಸಮುದಾಯಗಳು ಮಾತ್ರ ನೆಮ್ಮದಿಯ ಬದುಕು ಸಾಗಿಸುತ್ತಿವೆ. ಕೃಷಿ ಒಂದನ್ನು ನಂಬಿಕೊಂಡವರು, ಕುಲ ಕಸುಬು ಇಲ್ಲದವರು ಜೊತೆಗೆ ಕೃಷಿ ಕೈಕೊಟ್ಟಾಗ ಎಲ್ಲವನ್ನು ಬಿಟ್ಟು ನೆರೆಯ ನಗರಗಳಿಗೆ ಕೂಲಿ ಕೆಲಸ ಮಾಡಲು ಗಂಡ–ಹೆಂಡತಿ ಮತ್ತು ಮಕ್ಕಳು ಸೇರಿ ಬೆಂಗಳೂರು ಪುಣೆ, ಬಾಂಬೆಯಂತಹ ಬೃಹತ್ ನಗರಗಳಿಗೆ "ವಲಸೆ" ಹೋಗುತ್ತಾರೆ. ಇಂತಹ ಸ್ಥಿತಿ ಬಹುತೇಕ ದೊಡ್ಡಿಗಳಲ್ಲಿ ಕಂಡುಬರುತ್ತದೆ.

ರಾಯಚೂರು ಜಿಲ್ಲೆಯಲ್ಲಿ ಅನೇಕ ದೊಡ್ಡಿಗಳಲ್ಲಿ ಅಂಗನವಾಡಿ ಕೇಂದ್ರಗಳು ಇವೆ. ಒಂದನೇ ತರಗತಿಯಿಂದ ಐದನೇ ತರಗತಿಗಳ ವರೆಗೆ ಕೆಲವು ದೊಡ್ಡಿಗಳಲ್ಲಿ ಸರ್ಕಾರಿ

ಶಾಲೆ ಇದ್ದರೆ ಇನ್ನು ಕೆಲವು ದೊಡ್ಡಿಗಳಲ್ಲಿ ೧ರಿಂದ ೭ನೇ ತರಗತಿಗಳವರೆಗೆ ಶಾಲೆಗಳು ಇವೆ. ಕೆಲವು ಕಡೆ ತರಗತಿ ಕೊಠಡಿ ಸರಿಯಾಗಿದ್ದರೆ ಇನ್ನು ಕೆಲವು ನೆಲೆಗಳಲ್ಲಿ ಕೊಠಡಿಗಳ ಕೊರತೆ ಕಂಡುಬರುತ್ತವೆ. ಆದರೆ ಇಂತಹ ನೆಲೆಗಳಿಗೆ ಬರುವ ಶಿಕ್ಷಕರಿಗೆ ವಿದ್ಯಾರ್ಥಿಗಳಿಗೆ ಕಲಿಸಬೇಕೆಂಬ ಆಸಕ್ತಿ ಇರುವುದಿಲ್ಲ ಮಕ್ಕಳನ್ನು ಶಾಲೆಗೆ ಕಳಿಸಬೇಕು ಎಂಬ ಅರಿವು ಕೂಡ ಪೋಷಕರಿಗೆ ಇರುವುದಿಲ್ಲ. ಇದರಿಂದ ಶಿಕ್ಷಕರು ನಿರ್ದಿಷ್ಟ ಸಮಯಕ್ಕೆ ಬಾರದೆ, ಶಾಲೆ ಬಿಡುವ ಅವಧಿ ಮುಗಿಯುವ ಮುಂಚೆಯೇ ಶಾಲೆಯಿಂದ ಮನೆಗಳಿಗೆ ಹೋಗುತ್ತಾರೆ. ಇಂತಹ ಸ್ಥಳಗಳಿಗೆ ಯಾವುದೇ ಅಧಿಕಾರಿ ಭೇಟಿ ಕೊಡುವುದಿಲ್ಲ. ಅದಲ್ಲದೆ ಸರ್ಕಾರಿ ಶಿಕ್ಷಕರನ್ನು ಶಿಕ್ಷಣಕ್ಕಾಗಿ ಬಳಸದೇ ಅವರನ್ನು ವಿವಿಧ ಅಂಕಿ–ಸಂಖ್ಯೆ ಸಂಗ್ರಹಿಸಲು ಮತದಾನ ಸಮಯದಲ್ಲಿ ಜನಗಣತಿಗೆ ಬಳಸಿಕೊಳ್ಳುತ್ತ ಕಲಿಸುವ ಪ್ರಾಥಮಿಕ ಹಂತದ ಜವಾಬ್ದಾರಿಯುತ ಕರ್ತವ್ಯಕ್ಕೆ ಕಡಿಮೆ ಪ್ರಾಶಸ್ತ್ಯ ನೀಡಿದಂತೆ ಕಾಣುತ್ತದೆ. ದೊಡ್ಡಿಗಳಲ್ಲಿ ಇರುವ ಶಾಲೆಗಳಿಗೆ ಶಿಕ್ಷಕರು ಪಟ್ಟಣದಿಂದ ತಿರುಗಾಡುತ್ತಾರೆ. ಇದರಿಂದ ಸಮಯಕ್ಕೆ ತಲುಪಲಾರದೇ ಬಸ್ಸುಗಳಿಗೆ ಕಾದು ಪಾಠದ ಸಮಯವನ್ನು ಬಸ್ಸು ನಿಲ್ದಾಣದಲ್ಲೇ ಕಳೆದು ಶಾಲೆ ಬಿಡುವಾಗ ಬಂದರೆ ಇಂತಹ ನೆಲೆಗಳಲ್ಲಿ ವಾಸಿಸುವವರ ಶೈಕ್ಷಣಿಕ ಪ್ರಗತಿಗೆ ತೊಡಕಾಗುತ್ತದೆ. ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುವ ಉದ್ದೇಶಕ್ಕೆ ಶಿಕ್ಷಕರು ನಗರಗಳಲ್ಲಿದ್ದರೆ ದೊಡ್ಡಿಗಳಲ್ಲಿ ಈ ವಂಚಿತ ಜನರ ಮಕ್ಕಳಿಗೆ ಶಿಕ್ಷಕರು ಕಿಂಚಿತ್ತು ಕಳಕಳಿ ತೋರಿಸದಿರುವುದು ದುರಂತವೇ ಸರಿ.

ಕೆಲವು ದೊಡ್ಡಿಗಳಲ್ಲಿ ಸಮಯಕ್ಕೆ ಸರಿಯಾಗಿ ಬಂದು ತಿಳಿದಷ್ಟು ಪಾಠ ಸಿದ್ದಮಾಡಿಕೊಂಡು ಒಂದಿಷ್ಟು ಪಾಠವನ್ನು ಹೇಳಿ ತಮ್ಮ ಪಾಲಿನ ಕರ್ತವ್ಯ ಮುಗಿಸಿಬಿಟ್ಟರೆ ಸಾಕು ಎನ್ನುವಂತಹ ಮನಸ್ಥಿತಿಯ ಶಿಕ್ಷಕರು ಅನೇರಿದ್ದಾರೆ, ಇನ್ನು ಕೆಲವು ಶಿಕ್ಷಕರು ಶಾಲೆಯ ಮುಖ ನೋಡದೆ ತಮಗೆ ತಿಳಿದಾಗ ಬಂದು ಎಲ್ಲ ದಿನಗಳ ಹಾಜರಿಯನ್ನು ಹಾಕಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಪದ್ಧತಿಯನ್ನೇ ಬುಡಮೇಲು ಮಾಡುವಂತಹ ಕೃತ್ಯಗಳಲ್ಲಿ ತೊಡಗಿರುವ ಸಂಗತಿ ಎಲ್ಲ ಕಡೆಯಲ್ಲಿ ಕಂಡುಬರುವ ಕಟುಸತ್ಯ ಕೆಲವು ಬಹಳಷ್ಟು ದೊಡ್ಡಿಗಳಲ್ಲಿ ಮಕ್ಕಳ ಸಂಖ್ಯೆ ಕಡಿಮೆ ಇರುವುದರಿಂದ ಏಕಮಾತ್ರ ಶಿಕ್ಷಕರಿರುವುದು ಸರ್ವೇಸಾಮಾನ್ಯವಾಗಿದೆ.

ಜನಸಂಖ್ಯೆಯಿಂದ ದೊಡ್ಡ ಪ್ರಮಾಣದಲ್ಲಿ ಪ್ರಗತಿಯಾದ ದೊಡ್ಡಿಗಳಲ್ಲಿ ವಿವಿಧ ಸಮುದಾಯಗಳು ನೆಲೆಸಿರುವ ಗ್ರಾಮ ಪಂಚಾಯತಿಯನ್ನು ಹೊಂದಿವೆ. ಲಿಂಗಸ್ಗೂರು ತಾಲೂಕಿನ ಅಂಕುಶದೊಡಿ, ಪೈದೊಡ್ಡಿ, ದೇವದುರ್ಗ ತಾಲೂಕಿನ ಕೊತ್ತದೊಡ್ಡಿ ಲಿಂಗನಖಾನದೊಡ್ಡಿ, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕೂಡ ಇವೆ. ಅಂಚೆ ಕಛೇರಿ, ಅಂಗನವಾಡಿ ಕೇಂದ್ರ, ಒಟ್ಟಾರೆಯಾಗಿ ಹೇಳುವುದಾದರೆ ಗ್ರಾಮ ಪಂಚಾಯತ್ ಹೊಂದಿರುವ ನೆಲೆಗಳಿಗೆ ಎಲ್ಲಾ ರೀತಿಯ ಸೌಲಭ್ಯ ಕೊಡಲಾಗಿದೆ. ಇಲ್ಲಿ ಒಂದು ಸಂತೋಷದ ವಿಚಾರವೆಂದರೆ ರಾಜಕೀಯ ನೆಪಮಾಡಿಕೊಂಡು ಪಂಚಾಯ್ತಿ ಚುನಾವಣೆಯಲ್ಲಿ ಯಾವುದೇ ದೊಂಬಿಗಳಾಗಿಲ್ಲ

ಚುನಾವಣೆ ಸಂದರ್ಭದಲ್ಲಿ ಮಾತ್ರ ಪಕ್ಷ ಕಟ್ಟಿದವರು ಚುನಾವಣೆ ಮುಗಿದು ಮರುದಿನವೇ ಆ ಪಕ್ಷದ ಹೆಸರನ್ನು ಮರೆಯುತ್ತಾರೆ. ಮತ್ತೆ ಮಾವ, ಅಳಿಯ ಎಂದು ಸಂಬೋಧಿಸುತ್ತಾ ಕೈ ಕೈ ಕುಲಕಿಸುತ್ತಾರೆ. ಇದೊಂದು ಹರ್ಷದಾಯಕ ವಿಚಾರ ರಾಜಕೀಯ ಅಂದ ಮೇಲೆ ಅಲ್ಲಿ ಸ್ವಜಾತಿ ಸ್ವಜನ ಪಕ್ಷಪಾತಗಳು ಇರುವುದೇ ಏನೆಲ್ಲಾ ಸೌಲಭ್ಯಗಳು ಮೊದಲಿಗೆ ತಮ್ಮವರಿಗೆ ಸಿಗಬೇಕು. ನಂತರ ಉಳಿದವರಿಗೆ ಎಂಬ ಭಾವನೆ ಸಹಜ ಅದಕ್ಕೆ ಅವಕ್ಕೆ ಇಲ್ಲಿನ ಪಂಚಾಯ್ತಿ ಸದಸ್ಯರಗಳು ಹೊರತಲ್ಲ ಮೇಲಾಗಿ ಅಧಿಕಾರಿಗಳೊಂದಿಗೆ ಇವರ ಒಳಗುಟ್ಟಿನ ವ್ಯವಹಾರಗಳು ಇದ್ದೇ ಇರುತ್ತವೆ. ಹೀಗೆ ಜನ ಪಂಚಾಯ್ತಿಯ ಯೋಜನೆಗಳನ್ನು ಅಧಿಕಾರ ಮತ್ತಿನಲ್ಲಿ ಸಾರ್ವಜನಿಕ ಒಪ್ಪಂದ ಪಡೆದಂತೆ ಸೌಲಭ್ಯದ ಸಂಪನ್ಮೂಲಗಳನ್ನೆಲ್ಲ ಕೊಳ್ಳೆಹೊಡೆಯಲು ಯಾರ ತಕರಾರು ಇರುವುದಿಲ್ಲ. ಪ್ರತಿ ದೊಡ್ಡಿಯಲ್ಲು ಪಂಚಾಯ್ತಿ ಸದಸ್ಯನನ್ನು ಸುಲಭವಾಗಿ ಭ್ರಷ್ಟನಾಗಲು ರೂಪಿಸಿದ ಸಂಸ್ಥೆಯಂತಾಗಿದೆ. ಇದಕ್ಕೆ ಯಾರ ಹಣೆಪಟ್ಟಿಯೂ ಕಟ್ಟಬೇಕಾಗಿಲ್ಲ. ಇಲ್ಲಿ ಪಂಚಾಯ್ತಿ ಆಡಳಿತದಿಂದ ಆಗಿರುವುದಿಲ್ಲ. ಅಧಿಕಾರದ ವಿಕೇಂದ್ರಿಕರಣ ಅಲ್ಲಿ ಭ್ರಷ್ಟಚಾರದ ವಿಕೇಂದ್ರಿಕರಣವೇ ಎಂದು ಹೇಳಬಹುದು. ಚುನಾವಣೆಯಲ್ಲಿ ಗೆಲ್ಲಿಸಿ ಗೆದ್ದ ಅಭ್ಯರ್ಥಿಯಿಂದ ಸದಾ ತಿರುಗಾಡಿದರೆ ಮಾತ್ರ ಸರ್ಕಾರಿ ಯೋಜನೆ ಪ್ರತಿಫಲ ಸಿಗುತ್ತದೆ ಇಲ್ಲದಿದ್ದರೆ ಸರ್ಕಾರಿ ಸೌಲಭ್ಯಗಳಿಂದ ವಂಚಿತರಾಗುವುದು ಕಟುಸತ್ಯ.

ಜಿಲ್ಲೆಯ ಬಹುತೇಕ ದೊಡ್ಡಿಗಳಲ್ಲಿ ಪ್ರತಿಯೊಂದು ಕುಟುಂಬದ ಪಡಿತರ ಕಾರ್ಡ್‌ನ್ನು ಹೊಂದಿದೆ. ಇವುಗಳ ಪೈಕಿ ಬಡತನ ಮತ್ತು ಬಡತನದ ರೇಖೆಗಿಂತ ಕೆಳಗಿನ ಪಡಿತರ ಚೀಟಿಯನ್ನು ಹೊಂದಿದ್ದಾರೆ. ಸರ್ಕಾರದ ಘನೋದ್ದೇಶದ ಪ್ರತಿಫಲವಾಗಿ ಬಿಪಿಎಲ್ ಕಾರ್ಡು ಹೊಂದಿದ ಕಡುಬಡವರಿಗೆ ನೀಡುವ ಮಹತ್ತರ ಯೋಜನೆಯನ್ನು ಹಾಕಿಕೊಂಡಿದೆ. ವಿಶೇಷ ರಿಯಾಯಿತಿ ದರದಲ್ಲಿ ಅಕ್ಕಿ, ಗೋಧಿ, ಸಕ್ಕರೆ ಸರ್ಕಾರವು ಪ್ರತಿ ಕುಟುಂಬಕ್ಕೆ ಇಂತಿಷ್ಟು ಅಕ್ಕಿ, ಗೋಧಿ, ಸಕ್ಕರೆ ಎಂದು ನಿಗದಿಪಡಿಸಿದೆ. ಆದರೆ ಇಲ್ಲಿನ ವಿತರಕರು ನಿಗದಿ ಪಡಿಸಿದ ಆಹಾರಕ್ಕಿಂತ ಕಡಿಮೆ ಪ್ರಮಾಣದಲ್ಲಿ ಅಕ್ಕಿ, ಗೋಧಿ ಸಕ್ಕರೆ ವಿತರಿಸುತ್ತಾರೆ. ಕೆಲವು ಸಾರಿ ಸ್ಟಾಕ್ ಬಂದಿಲ್ಲ ಎಂದು ಹೇಳಿ ಎಲ್ಲವನ್ನು ಕಾಳಸಂತೆಯಲ್ಲಿ ಮಾರಾಟ ಮಾಡುತ್ತಾರೆ. ಇದರಿಂದ ಅನಕ್ಷರಸ್ಥ ಫಲಾನುಭವಿಗಳು ಒಂದು ವೇಳೆ ಕೇಳಿದರೆ ವಿನಾಕಾರಣ ಪಡಿತರ ಚೀಟಿಯನ್ನು ಸಮಸ್ಯೆ ಮಾಡಿಬಿಡುತ್ತಾರೆ. ಇಂತಹ ಪ್ರಕರಣಗಳು ಅನೇಕ ದೊಡ್ಡಿಗಳಲ್ಲಿ ಕಂಡುಬಂದಿವೆ. ಇನ್ನೊಂದು ಕಡೆ ಅಂದರೆ ಮಾನವಿ ತಾಲೂಕಿನ ಯರಮಲ ದೊಡ್ಡಿಯಲ್ಲಿ ಎಲ್ಲಾ ಕಡುಬಡತನದಿಂದ ಕೂಡಿದ ಕುಟುಂಬಗಳು ಇವೆ. ಆದರೆ ಈ ಎಲ್ಲ ಕುಟುಂಬಗಳಿಗೆ ಎಪಿಎಲ್ ಕಾರ್ಡ್ ನೀಡಲಾಗಿದೆ. ಇದರಿಂದ ಈ ದೊಡ್ಡಿಯ ಜನರಿಗೆ ಅನ್ನ ಭಾಗ್ಯವಿಲ್ಲವೆಂದು ಇಲ್ಲಿನ ಜನರು ಹೇಳುತ್ತಾರೆ.

ಭಾರತದಲ್ಲಿ ಸಂಪರ್ಕ ಸೌಲಭ್ಯಗಳು ಹೆಚ್ಚುತ್ತಿರುವ ಸಂದರ್ಭದಲ್ಲಿ ರಾಯಚೂರು ಜಿಲ್ಲೆಯ ಹಳ್ಳಿಗಳಿಗೆ ಹೋಲಿಕೆ ಮಾಡಿದರೆ ಇದರ ಪ್ರಮಾಣ ಕಡಿಮೆ ಎಂದು ಹೇಳಬಹುದು. ಆದರೆ ಮೂಲಭೂತ ಸೌಲಭ್ಯಗಳಿಂದ ವಂಚಿತವಾಗಿರುವಂತಹ ಅನೇಕ ದೊಡ್ಡಿಗಳು

ಇಂದಿಗೂ ಸಹ ಅಂಚೆ ಮುದ್ರಣ, ವೃತ್ತ ಪತ್ರಿಕೆ, ದೂರವಾಣಿಗಳಿಂದ ಬಹುತೇಕ ದೊಡ್ಡಿಗಳು ವಂಚಿತವಾಗಿವೆ. ಜೊತೆಗೆ ಆರ್ಥಿಕವಾಗಿ ಸದೃಢವಾಗಿರುವ ಮತ್ತು ದೊಡ್ಡಿಗಳು ಹಳ್ಳಿಗಳಾಗಿ ಪರಿವರ್ತನೆಯಾಗಿರುವ ದೊಡ್ಡಿಗಳಿಗೆ ಈ ಸೌಲಭ್ಯಗಳು ನೀಡಲಾಗಿದೆ. ಹತ್ತಿಪ್ಪತ್ತು ಕುಟುಂಬಗಳು ಇರುವ ನೆಲೆಗೆ ಪ್ರಾಥಮಿಕ, ಅಂಗನವಾಡಿ ಹೊರತು ಪಡಿಸಿ ಯಾವ ಸೌಲಭ್ಯಗಳು ಇರುವುದಿಲ್ಲ. ಜನಸಂಖ್ಯೆ ಹೆಚ್ಚಾದಂತೆ ದೊಡ್ಡಿಗಳ ಪ್ರಗತಿ ಹೆಚ್ಚಾಗುತ್ತಿದೆ. ಇತ್ತೀಚಿನ ಸಂಪರ್ಕ ಕ್ರಾಂತಿಯಿಂದ ಬಹುತೇಕ ದೊಡ್ಡಿಗಳಿಗೆ ಮೊಬೈಲ್ ಸೇವೆ ಸಿಕ್ಕಿದೆ. ಆರ್ಥಿಕ ದುಸ್ಥಿತಿಯಿಂದ ಅತ್ಯಂತ ಕಡು ಬಡತನದಲ್ಲಿ ಜೀವನ ಸಾಗಿಸುತ್ತಿದ್ದಾರೆ. ನೀರಾವರಿ ಇರುವ ತಾಲೂಕುಗಳಲ್ಲಿ ದೊಡ್ಡಿಗಳ ನಿವಾಸಿಗರ ಬದುಕು ಸ್ವಲ್ಪ ಮಟ್ಟಿಗೆ ಆರ್ಥಿಕವಾಗಿ ಸುಸ್ಥಿತಿಯಲ್ಲಿ ಇದೆ. ನೀರಾವರಿ ಇಲ್ಲದ ಪ್ರದೇಶದಲ್ಲಿನ ದೊಡ್ಡಿಗಳ ಜನರು ಮೂಲಭೂತ ಸೌಲಭ್ಯವಿಲ್ಲದೇ ಅನಕ್ಷರತೆಯ ಪರಿಣಾಮವಾಗಿ ರಾಯಚೂರು ಜಿಲ್ಲೆಗೆ ಹೊಂದಿಕೊಂಡಿರುವ ದೊಡ್ಡಿಗಳಲ್ಲಿ ವಾಸಿಸುವವರ ಬದುಕು ತುಂಬಾ ಶೋಚನೀಯವಾಗಿದೆ. ಸಂಪರ್ಕ ಸೌಲಭ್ಯಗಳ ಕೊರತೆಯಿಂದಾಗಿ ದೊಡ್ಡಿಯ ಜನರು ಅಂಧಕಾರ ಮೌಢ್ಯತೆ ಮತ್ತು ಅಜ್ಞಾನದಲ್ಲಿ ಮುಳ್ಗಾಗಿದ್ದಾರೆ. ಈ ಜಿಲ್ಲೆಯಲ್ಲಿ ಕೆಲವೊಂದು ದೊಡ್ಡಿಗಳು ದ್ವೀಪಗಳಂತಿದ್ದವು. ಇತ್ತೀಚೆಗೆ ಸಂಪರ್ಕ ಕ್ರಾಂತಿಯಿಂದಾಗಿ ದೊಡ್ಡಿಗಳ ಎಲ್ಲ ಕುಟುಂಬಗಳಿಗೆ ಮೊಬೈಲ್ ಸೇವೆ ಸಿಗದಿದ್ದರು ಅಲ್ಪ ಸ್ವಲ್ಪ ಕುಟುಂಬಗಳು ಈ ಸೇವೆಯನ್ನು ಪಡೆದುಕೊಂಡಿವೆ.

ಬೇಡ ಸಮುದಾಯದ ದೊಡ್ಡಿ

"ಆದಿಮಾನವರು ಕಾಡು-ಮೇಡುಗಳಲ್ಲಿ ಅಲೆಯುತ್ತಾ ಆಹಾರ ಉತ್ಪನ್ನಗಳನ್ನು ಬಳಸಿ ಗುಹೆಗಳಲ್ಲಿ, ಪೊದೆಗಳಲ್ಲಿ ವಾಸಮಾಡುತ್ತಿದ್ದರು."[೬] ಇದಕ್ಕೆ ಸಾಕ್ಷಿ ಎಂಬಂತೆ ರಾಯಚೂರು ಜಿಲ್ಲೆಯಲ್ಲಿ ದೊರೆತ ಪ್ರಾಚೀನ ಅವಶೇಷಗಳು ಜೊತೆಗೆ ಪ್ರಾಗೈತಿಹಾಸಿಕ ಬಂಡೆ ಚಿತ್ರಗಳು ಇಲ್ಲಿನ ಪ್ರಾಚೀನ ಜನವಸತಿ ಮತ್ತು ನಾಗರೀಕತೆ ಬಗ್ಗೆ ಮಾಹಿತಿ ನೀಡುತ್ತವೆ. ಮುಂದೆ ನಾಗರೀಕತೆ ಕಾಲಾ ನಂತರದಲ್ಲಿ ಹೊಸ ಹೊಸ ಅವಿಷ್ಕಾರಗಳನ್ನು ಕಂಡುಹಿಡಿದರು. ಬದುಕಲಿಕ್ಕೆ ಅನ್ನ, ನೀರು ಅದರ ಜೊತೆಗೆ ಮಳೆ, ಗಾಳಿ, ಬಿಸಿಲಿನಿಂದ ರಕ್ಷಣೆಗೋಸ್ಕರ ವಸತಿ ವ್ಯವಸ್ಥೆಯನ್ನು ನಿರ್ಮಿಸಿಕೊಂಡು. ಮಾನವನ ಗುಂಪು ಜೀವನ ಆರಂಭವಾಯಿತು. ಇಂದು ಎಷ್ಟೋ ಆದಿವಾಸಿ ಸಮುದಾಯಗಳು ನಾಡಿನ ಸಂಪರ್ಕದಿಂದ ದೂರ ಉಳಿದಿದ್ದು ಕಾಣಬಹುದಾಗಿದೆ. ಭೌಗೋಳಿಕವಾಗಿ ಕರ್ನಾಟಕದ ಉದ್ದಗಲಕ್ಕೂ ವಿಶಿಷ್ಟ ವಿನ್ಯಾಸ ಮತ್ತು ಮಾದರಿಗಳ ವಸತಿಗಳು ಕಂಡುಬರುತ್ತವೆ. ಇತಿಹಾಸದ ಪುಟಗಳನ್ನು ತಿರುವಿ ಹಾಕಿ ನೋಡಿದಾಗ ವಸತಿಗಾಗಿ ಮನೆಯನ್ನು ರಚಿಸಿಕೊಳ್ಳಬೇಕೆಂಬ ಕಲ್ಪನೆ ಮಾನವನಿಗೆ ಬಂದಿರುವುದು, ಸುಮಾರು ಏಳು ಸಾವಿರ ವರ್ಷಗಳ ಹಿಂದೆ ಆದಿಮಾನವ ಅಲೆಮಾರಿ ಜೀವನ ಮುಕ್ತಾಯಗೊಳಿಸಿ ಒಂದು ಕಡೆ ನೆಲೆನಿಂತು ಜನರೊಡನೆ ಗುಂಪುಗೂಡಿ ವಾಸ ಮಾಡಲು ಪ್ರಾರಂಭಿಸಿದ ತಾನು, ತನ್ನದು ಎಂಬ ಭಾವನೆ ಮೂಡಿ ಕುಟುಂಬ ಪದ್ಧತಿ ಪ್ರಾರಂಭವಾಯಿತು. ಪ್ರಾರಂಭದಲ್ಲಿ ಗುಡಿಸಲನ್ನು ಕಟ್ಟುತ್ತಾ, ಗಾಳಿ, ಮಳೆಯಿಂದ

ಸಂರಕ್ಷಣೆ ಪಡೆಯುವುದಕ್ಕೆ ನಿರ್ಮಾಣವಾದ ಗುಡಿಸಲುಗಳು ಅವನ ವೃತ್ತಿ ಪ್ರವೃತ್ತಿಗಳು ಬೆಳೆದಂತೆ ಅವನು ವಿವಿಧ ಮಾದರಿಯ ಮನೆಗಳನ್ನು ಕಟ್ಟಿಕೊಳ್ಳುತ್ತಾ ಬಂದಿದ್ದಾನೆ.

ಬೇಡರು ನಾಗರಿಕ ಸಂಪರ್ಕದಿಂದ ದೂರವಿದ್ದು ತಮ್ಮದೇ ಆದ ದೊಡ್ಡಿಗಳನ್ನು ಕಟ್ಟಿಕೊಂಡು ಸ್ವತಂತ್ರ ಜೀವನವನ್ನು ನಡೆಸುತ್ತಿದ್ದಾರೆ. ಬೇಡರ ದೊಡ್ಡಿಗಳು ಸಾಮಾನ್ಯವಾಗಿ ಗುಡಿಸಲುಗಳಿಂದ ಕೂಡಿರುತ್ತವೆ. ಇವರ ಮೂಲ ವೃತ್ತಿ ಬೇಟೆ ಆಡುವುದು ಸರಕಾರದ ಅರಣ್ಯ ನೀತಿಯಿಂದ ಬೇಟೆ ಪದ್ಧತಿ ನಿಷೇಧಿಸಲಾಗಿದೆ. ಅಡವಿಯಲ್ಲಿ ಇರುವ ಬೇಡರು ವ್ಯವಸಾಯ ವೃತ್ತಿ ಪ್ರಧಾನವಾಗಿ ಮಾಡಿಕೊಂಡರು ಜೊತೆಗೆ ದನ, ಕರು, ಅಕಳು, ಮೇಕೆಗಳನ್ನು ಸಾಕಿಕೊಂಡು ಜೀವನ ನಡೆಸುತ್ತಿದ್ದಾರೆ. ದೊಡ್ಡಿ ಎನ್ನುವ ನೆಲೆಗಳು ಕರ್ನಾಟಕ ಒಳನಾಡಿನ ರಾಯಚೂರು, ಯಾದಗಿರಿ ಮತ್ತು ರಾಮನಗರ, ಮಂಡ್ಯ, ಮೈಸೂರು ಜೊತೆಗೆ ಕರ್ನಾಟಕ ರಾಜ್ಯ ಹೊರತು ಪಡಿಸಿ ಆಂಧ್ರ ಪ್ರದೇಶಗಳಲ್ಲಿಯೂ ದೊಡ್ಡಿ ಎನ್ನುವ ನೆಲೆಗಳು ವಿಶೇಷವಾಗಿ ಕಂಡುಬರುತ್ತವೆ. ಇದೇ ತರಹದ ಬೇಡರ ಪ್ರತ್ಯೇಕ ನೆಲೆಗಳಿಗೆ ಮದ್ಯ ಕರ್ನಾಟಕದ ಭಾಗವಾದ ತುಮಕೂರು, ಚಿತ್ರದುರ್ಗಾ ಭಾಗಗಳಲ್ಲಿ ಹಟ್ಟಿ ಎಂದು ಕರೆಯುತ್ತಾರೆ. ರಾಯಚೂರು ಜಿಲ್ಲೆಯಲ್ಲಿ ಬೇಡರು ತಮ್ಮ ವಾಸಕ್ಕಾಗಿ ಆಯ್ಕೆ ಮಾಡಿಕೊಂಡಿರುವ ಭೂ ಪ್ರದೇಶಗಳು ಕೂಡ ಅಷ್ಟೇ ವಿಶೇಷವಾಗಿವೆ. ಕುರುಚಲು ಗುಡ್ಡಗಳು ಸಾಮಾನ್ಯವಾದ ಗುಡ್ಡ ಗಾಡುಗಳು ಹಾಗೂ ಹುಲ್ಲುಗಾವಲುಗಳೇ ಪ್ರಧಾನವಾದ ಈ ಪ್ರದೇಶ ಇರುವ ವೃತ್ತಿಗೆ ಪೂರಕವಾದದ್ದು ಹಳ್ಳಿಗಳ ಜೊತೆ ದೊಡ್ಡಿಗಳು ಬೆಳೆಯುತ್ತಿವೆ. ಕೆಲವೊಂದು ದೊಡ್ಡಿಗಳು ದೊಡ್ಡ ಪ್ರಮಾಣದಲ್ಲಿ ಬೆಳವಣಿಗೆಯಾಗಿವೆ. ಉದಾ. ರಸ್ತೆಗೆ ಹೊಂದಿಕೊಂಡಿರುವ ದೊಡ್ಡಿಗಳಾದ ಬುಂಕಲದೊಡ್ಡಿ, ಅಂಕುಶದೊಡ್ಡಿ, ಕೊತ್ತದೊಡ್ಡಿ, ಉಪ್ಪಲದೊಡ್ಡಿ, ಚಿಂತಮಾನದೊಡ್ಡಿ, ಹಳ್ಳಿಗಳಾಗಿ ಬೆಳವಣಿಗೆ ಹೊಂದಿವೆ. ದೊಡ್ಡಿಗಳಲ್ಲಿ ಇರುವ ಜನರು ಊರಿನ ಕಾರ್ಯಕಲಾಪಗಳ ಜೊತೆಗೆ ಒಂದಾಗುತ್ತಾರೆ. ಬೇಡರು ಕಲ್ಲು ಮಣ್ಣನ್ನು ಹೆಚ್ಚಾಗಿ ಬಳಸಿ ಗುಡಿಸಲು ಮನೆಕಟ್ಟುತ್ತಾರೆ. ಮೇಲ್ಮನೆಯ ಮನೆಯನ್ನು ಕಟ್ಟುವುದಕ್ಕಾಗಿ ಮಣ್ಣು ಮರ, ಬಿದಿರನ್ನು ಉಪಯೋಗಿಸಿ ಚೌಕಾಕಾರದಲ್ಲಿ ಮಣ್ಣಿನ ಇಟ್ಟಿಗೆಯಿಂದ ಗೋಡೆಯನ್ನು ನಿರ್ಮಿಸಿಕೊಂಡಿದ್ದಾರೆ. ಇದರ ಮೇಲೆ ಸ್ಥಳೀಯವಾಗಿ ಸಿಗುವ ಸಂಪನ್ಮೂಲಗಳಾದ ಹಾಪು ಇಲ್ಲವೇ ತಾಳೆ ಗರಿಗಳು ಅಥವಾ ತೆಂಗಿನ ಗರಿಗಳನ್ನು ಹಾಕುತ್ತಾರೆ. ಮಳಿಗೆಯ ಮನೆಗೆ ಸ್ಥಳೀಯವಾಗಿ ಯಾವ ಕಟ್ಟಿಗೆ ಸಿಗುತ್ತವೆ ಆ ಕಟ್ಟಿಗೆಯನ್ನು ಬಳಸಿ ಜಂತಿಯನ್ನು ಹಾಕಿಕೊಂಡು ಮೇಲೆ ಸಣ್ಣ ಕಟ್ಟಿಗೆಯ ಚಿಲುಕಗಳು ಹಾಕಿ ಮೇಲೆ ಬಿದುರಿನ ತಟ್ಟೆಗಳನ್ನು ಹಾಕಿ ಅದರ ಮೇಲೆ ಮಣ್ಣು ಜೊತೆ ಸವಳು ಹಾಕುತ್ತಾರೆ. ಬೆಳಕಿಗೊಸ್ಕರ ಮಾಳಿಗೆಯ ಮೇಲೆ ಎರಡು ಒಳ ಕಿಂಡಿಯನ್ನು ತೆಗೆಯುತ್ತಾರೆ. ಒಂದು ಗಾಳಿ ಬೆಳಕು ಬರುವುದಕ್ಕೆ ಇನ್ನೊಂದು ಅಡುಗೆ ಮಾಡುವ ಸಂದರ್ಭದಲ್ಲಿ ಕಟ್ಟುಗೆಯ ಹೊಗೆ ಹೊರಗಡೆ ಹೋಗುವುದಕ್ಕೆ ಮಾಡಿದ್ದಾರೆ. ಬೇಡರ ದೊಡ್ಡಿಗಳಲ್ಲಿ ಬಹಳಷ್ಟು ಗುಡಿಸಲುಗಳು ಕಂಡುಬರುತ್ತವೆ. ಸ್ವಲ್ಪ ಆರ್ಥಿಕವಾಗಿ ಅಭಿವೃದ್ಧಿ ಹೊಂದಿರುವ ಕುಟುಂಬದವರು

ರಾಜಕೀಯ ನಾಯಕರ ಹಿಂಬಾಲಕರಾಗಿದ್ದಾರೆ ಸಿಮೆಂಟಿನ ಮನೆಗಳು ಕಂಡುಬರುತ್ತವೆ. ಆಶ್ರಯ ಮನೆಗಳು ಕೂಡ ಕಂಡುಬರುತ್ತವೆ.

ಬೇಡರ ಮನೆಗಳಲ್ಲಿ ಬಹುಪಾಲು ಒಲೆಗಳನ್ನು ಬಳಸುತ್ತಿದ್ದಾರೆ. ಅಲ್ಲಿ ಬಳಸುವ ಪಾತ್ರೆಗಳು ಮಣ್ಣಿನ ಮಡಕೆಗಳಾಗಿವೆ. ಹೆಚ್ಚಾಗಿ ಮಣ್ಣಿನ ಮಡಿಕೆಗಳನ್ನು ಬಳಸುತ್ತಿದ್ದು ಅವುಗಳಲ್ಲಿ ಹಾಲು, ಮೊಸರು ಹಾಕಿ ಹಗ್ಗದ ನೆಲುವುಗಳನ್ನು ಗುಡಿಸಲಿಗೆ ಅಡ್ಡ ಕಟ್ಟಿ ಇಳಿಬಿಡುತ್ತಾರೆ. ಇತ್ತೀಚೆಗೆ ಆಧುನಿಕತೆಯ ಪ್ರಭಾವದಿಂದ ಸ್ಟೀಲ್, ಹಿತ್ತಾಳೆ ಮತ್ತು ಕಂಚಿನ ಪಾತ್ರೆಗಳನ್ನು ಬಳಸುತ್ತಿದ್ದಾರೆ. ಹೋಳಿಗೆ-ಹುರುಣ ಮಾಡುವುದಕ್ಕಾಗಿ ಗುಂಡು, ಬಂಡೆ, ಒಳಕಲ್ಲನ್ನು ಬಳಸುವರು.

ಗುಡಿಸಲುಗಳ ಅಥವಾ ಮನೆಗಳ ಪಕ್ಕದಲ್ಲಿ ದನ ಕರುಗಳನ್ನು ಕಟ್ಟುವುದಕ್ಕಾಗಿ ಅವುಗಳ ರಕ್ಷಣೆಗಾಗಿ ಕೊಟ್ಟಿಗೆಯನ್ನು ನಿರ್ಮಿಸಿರುತ್ತಾರೆ. ಮನೆ ಅಥವಾ ಗುಡಿಸಲನ್ನು ಕಟ್ಟುವಾಗ ಮನೆಯ ಬಾಗಿಲಿನ ಎರಡು ಕಡೆ ಇಲ್ಲವೆ ವರಾಂಡದಲ್ಲಿ ಬಾಗಿಲಿನ ಎಡಗಡೆ, ಬಲಗಡೆ ಯಾವುದಾದರೂ ಒಂದು ಕಡೆ ಕೊಟ್ಟಿಗೆ ನಿರ್ಮಿಸಿರುತ್ತಾರೆ. ಹುಲ್ಲು, ತೆಂಗಿನ ಗರಿಗಳಿಂದ ಅಥವಾ ತಾಳಿ ಗಿಡದ ಗರಿಗಳಿಂದ ಕೊಟ್ಟಿಗೆ ಕಟ್ಟಿರುತ್ತಾರೆ. ಬೇಡರು ತಮ್ಮ ದನ-ಕರುಗಳನ್ನು ದೈವಗಳೆಂದು ತಿಳಿದು, ಅವುಗಳನ್ನು ಮಕ್ಕಳಂತೆ ಸಾಕುತ್ತಾರೆ. ಅವುಗಳ ಆರೈಕೆಯನ್ನು ತಮಗಿಂತ ಹೆಚ್ಚಾಗಿ ನೋಡಿಕೊಳ್ಳುತ್ತಾರೆ. ಇವುಗಳನ್ನು ಸಾಕುವುದಕ್ಕಾಗಿ ಕೊಟ್ಟಿಗೆಯನ್ನು ನಿರ್ಮಿಸಿ ಅವುಗಳಲ್ಲಿ ದನ, ಕರು, ಎಮ್ಮೆ, ಮೇಕೆಗಳನ್ನು ಕಟ್ಟುತ್ತಾರೆ. ಈ ಕೊಟ್ಟಿಗೆಗಳ ಮನೆ ಮುಂದಿದ್ದು ಒಳಗೆ ಪ್ರವೇಶಿಸಬೇಕಾದರೆ ಕೊಟ್ಟಿಗೆ ಮೂಲಕವೇ ಹೋಗಬೇಕಾಗುತ್ತದೆ. ಪಶುಗಳಿಗೆ ಹುಲ್ಲು ಹಾಕುವುದಕ್ಕೆ ಗೊಂದಲಿ ಅಥವ ಗ್ವಾದಲಿ (ಹುಲ್ಲು ಹಾಕಲು ಕಟ್ಟಿರುವ ಕಟ್ಟೆ) ಕಟ್ಟಿರುತ್ತಾರೆ. ಇದರಿಂದ ದನಗಳಿಗೆ ಹುಲ್ಲನ್ನು ತಿನ್ನಲು ಸಹಾಯಕವಾಗುತ್ತದೆ. ಇಲ್ಲಿ ಹಾಕಿದ ಹುಲ್ಲು ಚೆಲ್ಲಾಪಿಲ್ಲಿಯಾಗದೇ ಗೊದಲಿಗಳಲ್ಲಿಯೇ ಇರುತ್ತದೆ. ಇದರಿಂದ ತಿನ್ನುವ ಆಹಾರ ಗಂಜಲು ಮತ್ತು ಸೆಗಣಿಯ ಜೊತೆ ಸೇರದೆ ಸ್ವಚ್ಛವಾಗಿರುತ್ತದೆ.

ಬೇಡರ ಗುಡಿಸಲು ಸುತ್ತಾ ನಾಯಿಗಳು ಇರುತ್ತವೆ. ಯಾವುದೇ ಪ್ರಾಣಿ ಬಂದರೆ ಎಚ್ಚರಿಕೆ ಜೊತೆಗೆ ಕಳ್ಳರಿಂದ ರಕ್ಷಣೆ ಮಾಡುತ್ತವೆ. ಕಳ್ಳರನ್ನು ದೊಡ್ಡಿಗಳ ಕಡೆ ಬರದಂತೆ ರಕ್ಷಕರ ತರ ಕೆಲಸ ಮಾಡುತ್ತವೆ. ಹೊಲದ ಸುತ್ತಾ ಇರುವ ಮುಳ್ಳು ಬೇಲಿ ಯಾವುದೇ ಪ್ರಾಣಿಗಳು ಒಳಗೆ ಬರದಂತೆ ತಡೆಯುತ್ತದೆ. ಇದರಿಂದ ಹೊಲ ಮನೆ ಪ್ರಾಣಿಗಳಿಗೂ ರಕ್ಷಣೆಯಾಗುತ್ತವೆ.

ಬೇಡರು ಆಧುನೀಕರಣ ಮತ್ತು ನಗರೀಕರಣದ ಪ್ರಭಾವದಿಂದಾಗಿ ಹಳೆಯ ಮಾದರಿಯ ಮನೆಗಳು ಇಂದು ಮಾಯವಾಗಿವೆ. ಜೊತೆಗೆ ದಿನನಿತ್ಯದ ಕೆಲಸಕ್ಕೆ ಬೇಕಾಗುವ ಕೊಡ, ಪುಟ್ಟಿಯಂತಹ ವಸ್ತುಗಳು ಕೂಡ ಮರೆಯಾಗುತ್ತಿವೆ.

ಕುರುಬರ ಸಮುದಾಯದ ದೊಡ್ಡಿ

"ಮನುಷ್ಯ ಜೀವರಾಶಿಗಳಲ್ಲಿಯೇ ಬುದ್ಧಿವಂತ ಎಂದು ಪರಿಗಣಿಸಲ್ಪಟ್ಟಿದ್ದಾನೆ. ಅವನು ಸಂಘ ಜೀವಿಯಾಗಿ ಕುಟುಂಬಿಯಾಗಿ ಬದುಕುವುದನ್ನು ತಿಳಿದಾಗಲೇ ಬದುಕಿನ ಸಾಧನೆಯ ಅನ್ವೇಷಣೆಗೆ ತೊಡಗುತ್ತಾನೆ. ಆಹಾರಕ್ಕಾಗಿ ಹಣ್ಣು ಹಂಪಲು, ತನ್ನ ಉಪಯೋಗಕ್ಕೆ ಸೂಕ್ತವಾದವುಗಳನ್ನು ಗುರ್ತಿಸಿ ಅಲೆದು ತಿಂದು ಅಲೆಮಾರಿನ ಬದುಕಿನ ಕಷ್ಟ ಕಂಡವನಾದಾಗ ತನ್ನಂತೆ ತನ್ನ ಪರಿಸರದಲ್ಲಿ ಬದುಕಿಕೊಂಡಿದ್ದ ಪ್ರಾಣಿ ವರ್ಗವನ್ನು ಗಮನಿಸಿ ತನ್ನ ಬದುಕಿನ ಸಹಕಾರಿಯಾಗಬಲ್ಲ ಪ್ರಾಣಿ ಪಕ್ಷಿಗಳನ್ನು ಗುರ್ತಿಸಿ ಕಷ್ಟಪಟ್ಟು ಅವುಗಳನ್ನು ಹಿಡಿದು ತನಗೆ ತೋಚಿದಂತೆ ಪಳಗಿಸಿಕೊಳ್ಳುತ್ತಾನೆ."[2] ಅಂತಹ ವಿಚಾರದಲ್ಲಿ ಮುಂದುವರೆದ ಮಧ್ಯ ಏಷಿಯಾದ ಮೂಲ ವಾಸಿಗಳು ತಮ್ಮ ಸಾವಿರಾರು ಆಕಳುಗಳನ್ನು ಸಾಕುತ್ತಾರೆ. ಆರ್ಯರೆಂದು ಗುರ್ತಿಸಿಕೊಂಡರು. ಕೇವಲ ಹಾಲು, ಮೊಸರಿಗಾಗಿ ಪೂರೈಕೆಗೊಂಡ ಹಸುಗಳಲ್ಲಿ ದೈವತ್ವ ಕಾಣಿಸಿಕೊಂಡು ಅವುಗಳ ಆರೈಕೆಯೊಂದಿಗೆ ಅವುಗಳ ರಕ್ಷಣೆಯನ್ನು ಮಾಡಿದ್ದಾನೆ. ದ್ರಾವಿಡ ಮೂಲದವರಾಗಿ ಗುರ್ತಿಸಿಕೊಂಡ ಕುರುಬ ಕುರಿಯನ್ನು ಸಾಕಿ ಪಳಗಿಸಿ ತನ್ನ ಬದುಕಿಗೆ ದಾರಿ ಕಂಡುಕೊಂಡನುಎ ಆಕಳಿಗೆ ದೇವತೆ, ಸುರಭಿ, ಕಾಮಧೇನು ಎನ್ನುವಂತೆ ತನ್ನ ಉತ್ಪನ್ನಕ್ಕೆ ಸಹಕಾರಿಯಾದ ಕುರಿ ಕುರುಬರ ಪಾಲಿಗೆ ಲಕ್ಷ್ಮಿಯೆಂದು ಪೂಜಿಸುತ್ತಾನೆ ಮತ್ತು ಕಾಪಾಡುತ್ತಾನೆ.

ಹಳೆಯ ಕಾಲದಿಂದಲೂ, ಕುರಿ ಸಾಕಾಣೆ ವೃತ್ತಿಯನ್ನು ಪೂರೈಸಿಕೊಂಡು ಬಂದ ಈ ಜನ ಸಾವಿರಾರು ಕುರಿ ಹಿಂಡಿನ ಮಾಲಿಕರಾಗಿ ಅವುಗಳ ಪಾಲನೆ ಪೋಷಣೆಗಾಗಿಯೇ ಜೀವನ ಮುಜುಪಾಗಿರಿಸಿ ನಾಗರೀಕ ಬದುಕಿಗೆ ಹೊಂದಿಕೊಳ್ಳುವುದಾಗಿದೆ. ತಾನಾಯಿತು. ತನ್ನ ಕುರಿಯಾಯಿತು. ಅಡವಿಯಲ್ಲಿ ಅಲೆಯುವವರಾಗಿ ಶಿಕ್ಷಣ, ಆಧುನಿಕ ವೇಷ ಭೂಷಣ ಆಹಾರ ವಿವಾಹದಲ್ಲಿ ಬದಲವನ್ನೆಯಾಗಿ ಬದುಕಿದವರಾಗಿದ್ದು ಈ ಕಡಿಮೆ ಸಮಯದಲ್ಲಿ ಮೂಲ ವೃತ್ತಿ ಜೊತೆಗೆ ಹೊಲ ಮನೆ ಉದ್ಯೋಗ ಶೈಕ್ಷಣಿಕ ಬದುಕನ್ನು ಆಯ್ಕೆ ಮಾಡಿಕೊಂಡವರಾಗಿದ್ದು ಸಾಧಾರಣ ಪ್ರಗತಿಯಲ್ಲಿ ಕಾಣಿಸಿಕೊಳ್ಳುತ್ತಿರುವು ಅಂಕೆ ಸಂಖ್ಯೆಗಳಿಂದ ಕಂಡುಬರುತ್ತಿದೆ.

ತನ್ನ ಬದುಕಿನ ಸುಖ ಜೀವನಕ್ಕೆ ಸಹಕಾರಿಯಾಗಲು ಅನುಕೂಲವಾದ ಕುರಿ ಪಳಗಿಸಿ ಸಾಕಿಕೊಂಡ ಮೇಲೆ ಅವುಗಳ ಪೋಷಣೆಗೆ ಗಮನವಿರಿಸಿ ಹಳ್ಳಿವಾಸಿಗಳಿಂದ ಬೇರ್ಪಟ್ಟು ಅಡವಿಯಲ್ಲಿ ಅಲೆದಾಡುವ ಕುರುಬ ಸಮುದಾಯ ದೇಶದ ಎಲ್ಲಾ ಪ್ರಾಂತ್ಯಗಳಲ್ಲಿ ಹರಿದು ಹಂಚಿ ಹೋಗಿ ದೊಡ್ಡ ಸಮುದಾಯದವರಾಗಿ ಬೆಳೆದುಕೊಂಡಿದ್ದರೂ ಆಧುನಿಕ ಜಗತ್ತಿನ ನಾಗರಿಕತೆಗೆ ಹೊಂದಿಕೊಳ್ಳಲು ಅವಕಾಶ ಸಿಗದೆ ಅನಕ್ಷರಸ್ಥರಾಗಿ ಬೆಳೆದರೂ ಪ್ರಾಮಾಣಿಕಗೆ ಒತ್ತು ಕೊಟ್ಟವರಾಗಿದ್ದು ಸಂಪನ್ನ ಸಮುದಾಯವೆಂದು ಜನ ನಂಬಿಗೆಗೆ ಪಾತ್ರರಾಗಿರುವುದು ಹೆಮ್ಮೆಯ ವಿಷಯವಾಗಿದೆ. ಆರಂಭದ ಕುರಿಗಾಹಿ ವೃತ್ತಿ ಬಿಟ್ಟು ಕೃಷಿಕರಾದ ಮೇಲೆ ಶಿಕ್ಷಣದ ಒಲವು ಬೆಳೆದುದು ಕಂಡುಬರುತ್ತದೆ. ಜನಸಂಖ್ಯೆ ಮಾನವ

ಲೆಕ್ಕಾಚಾರಕ್ಕೆ ಇವರ ಸಾಕ್ಷರತೆ ಕಡಿಮೆಯಾಗಿದ್ದರೂ ಮೂಲ ಕುಲದ ವೃತ್ತಿಗೆ ಗಟ್ಟಿಯಾಗಿ ನೆಲೆಯೂರಿದ್ದಾರೆ.

ಕುರುಬರು ಊರಿನ ಒಳಗಡೆಯು ಇದ್ದಾರೆ. ಊರಿನ ಹೊರಗಡೆಯು ನೆಲೆಸಿರುವುದು ಕಂಡುಬರುತ್ತದೆ. ರಾಯಚೂರು ಜಿಲ್ಲೆಯಲ್ಲಿ ಊರಿನ ಹೊರಗೆ ಅಂದರೆ ಎರಡು ಮೂರು ಮೈಲು ದೂರದಲ್ಲಿ ತಮ್ಮ ಹೊಲದಲ್ಲಿ ಕುರಿಯ ದೊಡ್ಡಿಗಳು ಇದ್ದವು ನಂತರದಲ್ಲಿ ಕುರಿಯ ಜೊತೆಗೆ ತಮ್ಮ ವಸತಿಯನ್ನು ಕಟ್ಟಿಕೊಂಡು ಇದರಿಂದ ದೊಡ್ಡಿಗಳಲ್ಲಿ ವಾಸ ಮಾಡುವುದು ಸಾಮಾನ್ಯವಾಗಿ ಕಂಡುಬರುತ್ತದೆ. ಈ ದೊಡ್ಡಿಗಳನ್ನು ಕುರುಬರ ದೊಡ್ಡಿಗಳು ಎಂದು ಕರೆಯುತ್ತಾರೆ. ಊರಿನಿಂದ ಬಹಳ ದೂರದಲ್ಲಿರುವ ಯಾವ ದೊಡ್ಡಿಯು ಐದು ಮೈಲುಗಳ ಅಂತರವನ್ನು ಮೀರಿರುವುದಿಲ್ಲ. ಆದರೆ ಹಳ್ಳಿಗಳಿಂದ ದೂರವಾಗಿದ್ದ ಪ್ರತ್ಯೇಕವಾಗಿರುವ ಕುರುಬರ ದೊಡ್ಡಿಗಳ ಸಂಖ್ಯೆ ಪ್ರತಿ ದೊಡ್ಡಿಗೂ ಹತ್ತಾರು ಗುಡಿಸಲುಗಳಿರುವ ದೊಡ್ಡಿಗಳು ಉಂಟು. ಜೊತೆಗೆ ಐದಾರು ಗುಡಿಸಲುಗಳಿರುವ ದೊಡ್ಡಿಗಳ ಸಂಖ್ಯೆ ಹೆಚ್ಚು ಹೆಚ್ಚಾಗಿ ಕಂಡುಬರುತ್ತವೆ. ಕುರುಬರ ಸಮುದಾಯದವರು ಸಾಮಾನ್ಯವಾಗಿ ರೂಢಿಸಿಕೊಂಡ ಕುಲ ಕಸುಬು ಕುರಿಕಾಯುವುದು. ಇದರಿಂದ ಗ್ರಾಮದಲ್ಲಿ ಸ್ಥಳದ ಅಭಾವವಿರುವುದರಿಂದ ಸಾಮಾನ್ಯವಾಗಿ ರಾಯಚೂರು ಜಿಲ್ಲೆಯಲ್ಲಿ ನೆಲೆಸಿರುವ ಕುರುಬರು ಹೆಚ್ಚಿನ ಸಂಖ್ಯೆಯಲ್ಲಿ ಕುರಿಕಾಯುವ ಜನರು. ಜೊತೆಗೆ ವ್ಯವಸಾಯದ ಭೂಮಿ ದೂರವಿರುವವರು ಇತ್ತೀಚಿಗೆ ನೀರಾವರಿ ಅನುಕೂಲದಿಂದಾಗಿ ಜಿಲ್ಲೆಯಾದ್ಯಂತ ಹಳ್ಳಿಗಳನ್ನು ಬಿಟ್ಟು ಪ್ರತ್ಯೇಕವಾಗಿ ಗುಡಿಸಲು ಹಾಕಿಕೊಂಡು ನೆಲೆಸಿರುವುದು ಸಾಮಾನ್ಯವಾದ ಸಂಗತಿಯಾಗಿದೆ. ಇಂತಹ ನೆಲೆಗಳಿಗೆ ತೆಲುಗು ಭಾಷೆ ಪ್ರಭಾವದಿಂದ ದೊಡ್ಡಿ ಎಂದು ಹೆಸರು ಬಂದಿರಬಹುದು ಎಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಇಂತಹ ಸ್ಥಳಗಳು ಇತ್ತೀಚಿನ ನಾಗರಿಕತೆಯ ಪ್ರಭಾವದಿಂದಾಗಿ ಇಲ್ಲಿನ ವಸತಿಯ ಸ್ಥಿತಿಯು ಬದಲಾಗುತ್ತಿರುವುದು ಕಂಡುಬರುತ್ತದೆ. ಅದರಲ್ಲಿ ಕೆಲವು ಮನೆಗಳು ಮಾಳಿಗೆಯಿಂದ ಕೂಡಿದರೆ ಇನ್ನು ಕೆಲವು ಆಶ್ರಯ ಮನೆಗಳಾಗಿವೆ. ಇನ್ನು ಕೆಲವು ಮನೆಗಳು ಸಿಮೆಂಟಿನ ಮನೆಗಳಾಗಿ ಪರಿವರ್ತನೆಯಾಗಿವೆ.

ಕಬ್ಬಲಿಗ ಸಮುದಾಯದ ದೊಡ್ಡಿ

ರಾಯಚೂರು ಜಿಲ್ಲೆಯ ಕಬ್ಬಲಿಗರು ಹೆಚ್ಚಾಗಿ ಮೀನಿನ ಬೇಟೆಯಾಡುವುದು ಸಾಮಾನ್ಯವಾಗಿ ಕಾಣಬರುತ್ತದೆ. "ಬೆಸ್ತರು ನೀರಿನಲ್ಲಿ ಬೇಟೆಯಾಡಿದರೆ, ಬೇಡರು ಅಡವಿಯಲ್ಲಿ ಬೇಟೆಯಾಡುತ್ತಾರೆ."[೬] ಆದರೆ ವನ್ಯಜೀವಿಗಳ ರಕ್ಷಣೆ ದೃಷ್ಟಿಯಿಂದ ಕೆಲವು ಬೇಟೆ ಪದ್ಧತಿಗಳನ್ನು ನಿಷೇಧಿಸಲಾಗಿದೆ. ಮೀನಿನ ಬೇಟೆಯಾಡುವುದಕ್ಕೆ ಪರವಾನಿಗೆ ನೀಡಿದೆ ಹಾಗಾಗಿ ಅವರು ತುಂಗಾಭದ್ರ ನದಿ ತೀರ, ಕೃಷ್ಣ ನದಿ ತೀರ, ಹಳ್ಳದ ತೀರ ಅಥವಾ ಕೆರೆ ಕಟ್ಟೆಗಳ ಸಮೀಪದಲ್ಲಿ ಕಬ್ಬಲಿಗ ಸಮುದಾಯದವರು ಗುಂಪು ಗುಂಪುಗಳಾಗಿ ಗುಡಿಸಲುಗಳನ್ನು ಹಾಕಿಕೊಂಡು ನೆಲೆಸಿರುವುದು ಕಂಡುಬರುತ್ತದೆ. ಗುಂಪು ಗುಂಪುಗಳಾಗಿ ನೆಲೆಸುವುದಕ್ಕೆ ಮತ್ತೊಂದು ಕಾರಣವೆಂದರೆ ನೀರಾವರಿ ಪ್ರಭಾವದಿಂದ ಒಕ್ಕಲುತನದ ಅನುಕೂಲಕ್ಕಾಗಿ

ತಮ್ಮ ತಮ್ಮ ಹೊಲಗಳಲ್ಲಿ ತಂಡೋಪತಂಡವಾಗಿ ವಾಸಿಸುವುದು ಸಹಜವಾಗಿ ಕಂಡುಬರುತ್ತದೆ. ಇಂತಹ ನೆಲೆಗಳಿಗೆ ಈ ಜಿಲ್ಲೆಯಲ್ಲಿ ದೊಡ್ಡಿಗಳು ಎಂದು ಕರೆಯುತ್ತಾರೆ. ಇತ್ತೀಚಿಗೆ ಇಂತಹ ನೆಲೆಗಳು ಹಳ್ಳಿಗಳಾಗಿ ಪರಿವರ್ತನೆಯಾಗಿವೆ. ಇನ್ನು ಅನೇಕ ನೆಲೆಗಳು ನಾಗರೀಕತೆಯಿಂದ ಬಹು ದೂರ ನದಿಯ ಪಕ್ಕದಲ್ಲಿ ನೀರಿನ ಸಂಪನ್ಮೂಲ ಇರುವ ಸ್ಥಳಗಳಲ್ಲಿ ಕಂಡುಬರುತ್ತವೆ. ಕೆಲದೊಡ್ಡಿಗಳು ಪ್ರತ್ಯೇಕವಾಗಿ ಇರುವುದು ದೇವದುರ್ಗ ತಾಲೂಕು ಮತ್ತು ಲಿಂಗಸ್ಗೂರು ತಾಲೂಕುಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತವೆ. ಇಂತಹ ನೆಲೆಗಳಲ್ಲಿ ಮೂಲಭೂತ ಸೌಲಭ್ಯದ ಕೊರತೆ ಇದೆ. ಇತ್ತೀಚಿಗೆ ದೊಡ್ಡಿಗಳಲ್ಲಿರುವ ಜನರಿಗೆ ಆಶ್ರಯ ಮನೆಗಳನ್ನು ಸರ್ಕಾರ ಮತ್ತು ಸ್ಥಳೀಯ ಪಂಚಾಯತಿಯಿಂದ ನಿರ್ಮಿಸಿ ಕೊಡಲಾಗುತ್ತಿದೆ. ಕಾರಣ ದಿನ ಪತ್ರಿಕೆ ಮತ್ತು ಸುದ್ದಿ ಮಾಧ್ಯಮಗಳು ಇಲ್ಲಿನ ಜನರ ವಾಸ್ತವ ಸ್ಥಿತಿಯನ್ನು ಪತ್ರಿಕೆಯಲ್ಲಿ ಪ್ರಕಟಿಸುವುದರಿಂದ ಜನ ಪ್ರತಿನಿಧಿಗಳು ಈ ಕಡೆ ಗಮನ ಹರಿಸುತ್ತಿದ್ದಾರೆ. ಜನತಾ ಮನೆಗಳು ಕೆಲವೇ ಕೆಲವು ಜನರಿಗೆ ನೀಡಲಾಗಿದೆ. ಕಾಲ ಬದಲಾದಂತೆ ಇಲ್ಲಿನ ನಿವಾಸಿಗಳು ತಮ್ಮ ಮನೆಗಳನ್ನು ಉತ್ತಮ ರೀತಿಯಲ್ಲಿ ನಿರ್ಮಿಸಿಕೊಳ್ಳುತ್ತಿರುವುದು ಕಂಡುಬರುತ್ತದೆ. ದೊಡ್ಡಿಗಳಲ್ಲಿ ನೆಲೆಸಿರುವ ಜನರು ಅಲ್ಲಲ್ಲಿ ಶ್ರೀಮಂತರಾದವರು ಕಾಂಕ್ರೇಟ್ ಮನೆಗಳನ್ನು ಕಟ್ಟಿಸಿಕೊಳ್ಳುತ್ತಿರುವುದು ಕಂಡುಬರುತ್ತದೆ. ಈ ಸಮುದಾಯದ ಜನರು ಈ ಹಿಂದೆ ಬೇರೆ ಯಾವುದೇ ಕೆಲಸ ಮಾಡುತ್ತಿರಲಿಲ್ಲ. ಇವರ ಮೂಲ ಕಸುಬು ಕೆರೆ ಕಟ್ಟೆಗಳಲ್ಲಿ ನದಿ ಹಳ್ಳಿಗಳಲ್ಲಿ ಮೀನುಗಳ ಬೇಟೆ ಅಥವಾ ಶಿಕಾರಿಯನ್ನು ಮಾಡುವುದು ಮಾತ್ರ ಆಗಿತ್ತು. ಇದರ ಜೊತೆಗೆ ಅಡವಿಯಲ್ಲಿ ಇರುವುದರಿಂದ ವ್ಯವಸಾಯಕ್ಕೆ ಭೂಮಿ ಇರುವುದರಿಂದ ಜಿಲ್ಲೆಯಲ್ಲಿ ಕಬ್ಬಲಿಗರು ಹೆಚ್ಚಿನ ಸಂಖ್ಯೆಯಲ್ಲಿ ಕೃಷಿ ಕೆಲಸವನ್ನು ಮಾಡುವುದು ಕಂಡುಬರುತ್ತದೆ.

೩.೪ ಬೇಡ ಸಮುದಾಯದ ದೊಡ್ಡಿಗಳ ಸ್ವರೂಪ

"ಗ್ರಾಮೀಣ ಪ್ರದೇಶದಿಂದ ಹೊರಗಿದ್ದು ಪತ್ಯೇಕವಾಗಿ ಗ್ರಾಮ ಸಂಸ್ಕೃತಿಯಿಂದ ಬಿಡುಗಡೆಯಾಗಿ ಗುಡ್ಡಗಾಡುಗಳಲ್ಲಿ ವಾಸಿಸುವ ವಿಶಿಷ್ಟವಾದ ಗುಣಲಕ್ಷಣಗಳನ್ನು ಹೊಂದಿವೆ. ಈ ರೀತಿ ಅಡವಿಯಲ್ಲಿ ೫೦ಕ್ಕೂ ಹೆಚ್ಚು ಬುಡಕಟ್ಟು ಸಮುದಾಯದವರು ನೆಲೆಸಿರುವುದು ಕಂಡುಬರುತ್ತದೆ. ಅಂಥ ಬುಡಕಟ್ಟುಗಳಲ್ಲಿ ಬೇಡ ಸಮುದಾಯ ಒಂದು. ಬೇಡರು ನೆಲೆಸಿರುವ ದೊಡ್ಡಿಗಳು ಈ ಕೆಳಗಿನ ಲಕ್ಷಣಗಳನ್ನು ಹೊಂದಿರುವುದರ ಜೊತೆಗೆ ಪರಸ್ಪರ ಹೋಲಿಕೆ ಮತ್ತು ಏಕತೆಯನ್ನು ಕಾಣಬಹುದಾಗಿದೆ."[೯]

೧. ನಿರ್ದಿಷ್ಟ ಭೂಪ್ರದೇಶ : ಕರ್ನಾಟಕದ ಪ್ರತಿಯೊಂದು ಬುಡಕಟ್ಟು ಸಮುದಾಯಗಳಿಗೂ ತಮ್ಮದೆಯಾದ ನಿಶ್ಚಿತ ನೆಲೆ ಇರುತ್ತದೆ. ಬೇಟೆ, ಆಹಾರ ಸಂಗ್ರಹಣೆ, ಪಶುಪಾಲನೆ, ಕೃಷಿ, ವ್ಯಾಪಾರ ಹಾಗೂ ಜೀವನೋಪಾಯಕ್ಕಾಗಿ ಅನೇಕ ಕಡೆ ಸಂಚಾರ ಮಾಡುತ್ತಾರೆ. ಆದರೂ ತಾವು ಹುಟ್ಟಿದ ನೆಲೆ ಮತ್ತು ಪ್ರದೇಶದ ಬಗೆಗೆ ಸಾಮುದಾಯಿಕ

ಭಾವನೆಗಳು ಸದಾ ಜಾಗೃತವಾಗಿರುತ್ತವೆ. ಇವರು ನೆಲೆಸಿರುವ ಪ್ರದೇಶಗಳಿಗೆ ದೊಡ್ಡಿ, ದಿನ್ನಿ, ಪಾಳ್ಯ, ಹಟ್ಟಿ ಮೊದಲಾದ ಹೆಸರುಗಳಿಂದ ಕರೆಯುತ್ತಾರೆ. ರಾಯಚೂರು ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬೇಡ ಸಮುದಾಯದವರು ವಾಸಿಸುತ್ತಿದ್ದಾರೆ. ಇಂಥ ನಿರ್ದಿಷ್ಟ ಭೂ ಪ್ರದೇಶದಲ್ಲಿ ವಾಸ ಮಾಡುವುದರಿಂದ ಅವರಲ್ಲಿ ಪರಸ್ಪರ ಸಹಕಾರ ಹೊಂದಾಣಿಕೆ ಮತ್ತು ಸಾಮುದಾಯಿಕ ಭಾವನೆ ಮೂಡುತ್ತದೆ. ಒಂದು ಪ್ರದೇಶದ ಗುಂಪು ಅನೇಕ ಕುಟುಂಬಗಳಿಗೆ ಸೇರಿದ ಜನರು ಒಂದು ಪ್ರದೇಶದೊಂದಿಗೆ ಭಾವನಾತ್ಮಕ ಸಂಬಂಧ ಬೆಳೆದು ಬಂದಿರುತ್ತದೆ. ಪ್ರತಿ ಕುಟುಂಬಕ್ಕೂ ತನ್ನದೇ ಆದ ವಾಸಸ್ಥಳವಿದ್ದರೂ ಆ ಸಮುದಾಯದ ವ್ಯಾಪ್ತಿಯೊಳಗೆ ಬರುವ ಎಲ್ಲಾ ಸ್ಥಳಗಳು ತಮಗೆ ಸೇರಿದ್ದು, ಅವುಗಳನ್ನು ಸಂರಕ್ಷಣೆ ಮಾಡಿ ಕಾಯುವುದು ತಮ್ಮ ಜವಾಬ್ದಾರಿ ಎನ್ನುವ ಭಾವನೆಯಿರುತ್ತದೆ. ಮಹತ್ವದ ಸಂಗತಿಯೆಂದರೆ ಸಮುದಾಯದ ನೆಲ, ಜಲ, ಪ್ರಾಣಿ ಸಂಪತ್ತುಗಳೆಲ್ಲವು ತಮಗೆ ಸೇರಿದ್ದು ಎಂಬ ಭಾವನೆ ಆ ಸಮುದಾಯದವರಲ್ಲಿ ಕಂಡುಬರುತ್ತಿದ್ದು ಇತ್ತೀಚಿನ ಜನಪದ ಸಂಸ್ಕೃತಿಯಲ್ಲಿ ಈ ಭಾವನೆ ಹೆಚ್ಚಿನ ಪ್ರಮಾಣದಲ್ಲಿ ಜಾಗೃತವಾಗುತ್ತಿದೆ. ತಾವು ವಾಸಿಸುವ ಪ್ರದೇಶದ ಸಂಪನ್ಮೂಲಗಳ ಮೇಲೆ ತಮಗೆ ತಮ್ಮ ಹಕ್ಕು ಇರುವುದರಿಂದ ಅವುಗಳ ಬಳಕೆ ಹಾಗೂ ನಿರ್ವಹಣೆಗಳಿಗೆ ತಮಗೆ ಅವಕಾಶ ಕೊಡಬೇಕೆಂದು ಬುಡಕಟ್ಟಿನ ಜನ ಹೋರಾಟ ಮಾಡುವುದನ್ನು ಸೂಕ್ಷ್ಮವಾಗಿ ಗಮನಿಸುವ ವಿಷಯವಾಗಿದೆ.

೨. ನಿರ್ದಿಷ್ಟ ಹೆಸರು : ಕರ್ನಾಟಕದಲ್ಲಿ ನೆಲೆನಿಂತಿರುವ ಪ್ರತಿಯೊಂದು ಬುಡಕಟ್ಟು ಸಮುದಾಯಗಳಿಗೂ ತಮ್ಮದೆಯಾದ ವಿಶಿಷ್ಟವಾದ ಹೆಸರುಗಳಿಂದ ಕರೆಯಿಸಿಕೊಳ್ಳುತ್ತವೆ. ಉದಾ: ನಾಗಾ, ಕಾಳ, ತೊಡವ, ಬೇಡ, ಬೇಡರ್, ವ್ಯಾದಿ, ಶಬರಿ, ನಾಯಕ, ನಾಯಕಮಕ್ಕಳು, ಕಾಡು ಕುರುಬ, ಕಾಡುಗೊಲ್ಲ, ಜೇನುಕುರುಬ, ಬಡಗ, ಮುಂಡಾ ಮೊದಲಾದವು ಆದಿವಾಸಿಗಳ ಹೆಸರುಗಳು ಸೂಚಿಸುತ್ತವೆ. ಈ ಹೆಸರುಗಳ ಸಹಾಯದಿಂದ ಬೇರೆ ಬೇರೆ ಆದಿವಾಸಿ ಪಂಗಡಗಳ ನಡುವೆ ಇರುವ ವ್ಯತ್ಯಾಸಗಳನ್ನು ಗುರುತಿಸಬಹುದಾಗಿದೆ.

೩. ಸಾಮಾನ್ಯ ಭಾಷೆ : ಬುಡಕಟ್ಟು ಸಮುದಾಯಗಳು ತಮ್ಮದೇ ಆದ ಪ್ರತ್ಯೇಕ ಸ್ವತಂತ್ರ ಭಾಷೆಯನ್ನು ಹೊಂದಿರುತ್ತವೆ. ಆ ಭಾಷೆಯನ್ನು ಬೇರೆಯವರು ಅರ್ಥೈಸಿಕೊಳ್ಳುವುದು ತುಂಬಾ ಕಷ್ಟ. ಕೆಲವು ಆದಿವಾಸಿ ಭಾಷೆ ಲಿಪಿಯಿಲ್ಲದೆ ಇರುವ ಭಾಷೆಗಳು ಇವೆ. ಆದ್ದರಿಂದ ಇವರು ಶೈಕ್ಷಣಿಕವಾಗಿ ಹಿಂದುಳಿದ್ದಾರೆ. ಬುಡಕಟ್ಟು ಸಮುದಾಯದ ಭಾಷೆಗಳ ಮೇಲೆ ನೆರೆಹೊರೆಯ ಪ್ರದೇಶಗಳ ಭಾಷೆಯ ಪ್ರಭಾವವನ್ನು ಕಾಣಬಹುದು. ಉದಾ : ರಾಯಚೂರು ಅಲ್ಲದೇ ಕರ್ನಾಟಕ ರಾಜ್ಯದ ಬಹುತೇಕ ಜಿಲ್ಲೆಯಲ್ಲಿ ಬೇಡ ಸಮುದಾಯದವರು ತೆಲುಗು ಮಿಶ್ರಿತ ಕನ್ನಡ ಮಾತನಾಡುತ್ತಾರೆ. ನೀಲಗಿರಿ ತಪ್ಪಲಿನಲ್ಲಿರುವ ತೊಡವ ಸಮುದಾಯ ಕನ್ನಡ, ತೆಲುಗು, ತಮಿಳು, ಮಲೆಯಾಳಿ ಮತ್ತು ಹಿಂದಿ ಮುಂತಾದ ಭಾಷೆಗಳಲ್ಲಿ ಒಂದೊಂದು ಶಬ್ದಗಳನ್ನು ಮಾತನಾಡುವಾಗ ಬಳಸುತ್ತಾರೆ. ಉದಾ : ಬೇಡ ಸಮುದಾಯದ

ದೇಸಾಯಿಯವರ ದೊಡ್ಡಿ ಅಥವಾ ಗುರಿಕಾರ ದೊಡ್ಡಿ ಈ ಹೆಸರಿನೊಡನೆ ಸಮುದಾಯದ ಮೂಲ ಅಸ್ತಿತ್ವವನ್ನು ತಿಳಿಯಲು ಸಾಧ್ಯವಾಗುತ್ತದೆ.

೪. ರಾಜಕೀಯ ವ್ಯವಸ್ಥೆ : "ಪ್ರತಿಯೊಂದು ಬುಡಕಟ್ಟು ಪಂಗಡವು ತನ್ನದೇ ಆದ ಸಾಂಪ್ರಾದಾಯಿಕ ಆಡಳಿತ ಪದ್ಧತಿಯನ್ನು ಹೊಂದಿರುತ್ತವೆ. ಪ್ರತಿಯೊಂದು ಸಮುದಾಯಕ್ಕೂ ಒಬ್ಬ ಮುಖ್ಯಸ್ಥನಿದ್ದು ಈತ ಸದಸ್ಯರ ವರ್ತನೆಗಳ ಮೇಲೆ ನಿಯಂತ್ರಣವನ್ನು ಮಾಡುತ್ತಾನೆ. ನಿಯಮ ಪಾಲಿಸದವರಿಗೆ ದಂಡ, ಶಿಕ್ಷೆ, ಬಹಿಷ್ಕಾರದ ಹಕ್ಕು ಇರುತ್ತದೆ. ನಾಯಕನನ್ನು ಆಯ್ಕೆ ಮಾಡುವ ವಿಧಾನ ಪ್ರದೇಶದಿಂದ ಪ್ರವೇಶಕ್ಕೆ ವ್ಯತ್ಯಾಸವಾಗಿರುವುದು ಕಂಡುಬರುತ್ತದೆ ಕೆಲವು ಬುಡಕಟ್ಟು ಸಮುದಾಯಗಳಲ್ಲಿ ಪದ್ಧತಿ ಅನುವಂಶೀಯವಾಗಿ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿರುವುದು ಕಂಡುಬರುತ್ತದೆ. ಕರ್ನಾಟಕ ರಾಜ್ಯದ ಬೇಡ ಸಮುದಾಯದವರಲ್ಲಿ ಕಟ್ಟೆಮನೆ, ದೊರೆ ದೇಸಾಯಿ, ಗುರಿಕಾರ, ತಳವಾರ, ಹವಲ್ದಾರ ಮೊದಲಾದ ಅಧಿಕಾರಯುತ ಹುದ್ದೆಗಳನ್ನು ಅನುವಂಶಿಯವಾಗಿ ಆಯ್ಕೆ ಮಾಡಿಕೊಳ್ಳುತ್ತಾರೆ."[೧೧]

೫. ಸರಳ ಮತ್ತು ಸ್ವತಂತ್ರ ಜೀವನ : ಬುಡಕಟ್ಟು ಸಮುದಾಯಗಳು ಬಹಳ ಮಟ್ಟಿಗೆ ಸರಳ ಮತ್ತು ಸ್ವತಂತ್ರ ಪ್ರಿಯರಾಗಿರುತ್ತಾರೆ. ಆಧುನಿಕ ಆಡಂಬರ ಬದುಕಿನಿಂದ ಆದಿವಾಸಿಗಳು ಬಹುದೂರದಲ್ಲಿ ನೆಲೆಸಿರುತ್ತಾರೆ. ಅವರು ಸಾಮಾಜಿಕವಾಗಿ, ಆರ್ಥಿಕ ಮತ್ತು ರಾಜಕೀಯವಾಗಿ ತೀರ ಹಿಂದುಳಿದವರಾಗಿದ್ದಾರೆ. ಇಂದಿಗೂ ತಟ್ಟೆಗಳನ್ನು ಕಟ್ಟಿಕೊಂಡು ಜೋಪಡಿಗಳನ್ನು ಹಾಕಿಕೊಂಡು ಗುಡ್ಡದಾರಿಯಲ್ಲಿ ಇಲ್ಲವೇ ತಮ್ಮ ತಮ್ಮ ಹೊಲಗದ್ದೆಗಳಲ್ಲಿ ರಾಯಚೂರು ಜಿಲ್ಲೆಯ ಗುರುಗುಂಟಾ, ದೇವದುರ್ಗ ತಾಲೂಕಿನಲ್ಲಿ ತಂಡೋಪ ತಂಡವಾಗಿ ನೆಲೆಸಿರುವುದು ಕಂಡುಬರುತ್ತದೆ. ಸರಳ ಆಹಾರ ಪದ್ಧತಿ ಗ್ರಾಮೀಣ ಪ್ರದೇಶದ ಜಾತ್ರೆಗಳಲ್ಲಿ ಪಾಲ್ಗೊಳ್ಳುತ್ತಾರೆ. ಇದೇ ಇವರಿಗೆ ಮನರಂಜನೆಯಾಗಿದೆ. ಕಳ್ಳತನ, ಮೋಸ, ಕಪಟ ಇವುಗಳ್ಯಾವು ಮಾಡಿಲ್ಲ. ಇವರಿಗೆ ಸರ್ಕಾರದ ಯಾವುದೇ ಸವಲತ್ತುಗಳು ಬಂದರೂ ಇಂತಹ ನೆಲೆಗಳಲ್ಲಿ ಇರುವವರಿಗೆ ಗಗನ ಕುಸುಮವಾಗಿವೆ. ಇತ್ತೀಚಿಗೆ ಆಧುನಿಕತೆಯ ಪ್ರಭಾವದಿಂದ ಇವರ ಮನೆಗಳಲ್ಲಿ ಟಿ.ವಿ. ರೇಡಿಯೋ, ಮೊಬೈಲ್ ಮುಂತಾದವುಗಳಿಂದ ತಕ್ಷಣದಲ್ಲಿ ಮಾಹಿತಿ ಸಂಗ್ರಹಿಸಲು ಅಲ್ಪಸ್ವಲ್ಪ ಸಹಾಯಕವಾಗಿವೆ. ಇತ್ತೀಚಿಗೆ ಪಶುಪಾಲನೆ, ಕೃಷಿ ಮತ್ತು ಕೃಷಿಯೇತರ ಕೆಲಸಗಳು ಪ್ರದಾನ ವೃತ್ತಿಯಾಗಿವೆ. ಹೀಗಾಗಿ ಜೀವನದ ಪ್ರತಿ ಕ್ಷೇತ್ರಗಳಲ್ಲಿಯೂ ಸರ್ವತಂತ್ರ ಸ್ವತಂತ್ರರೆಂದು ಹೇಳಬಹುದು.

೬. ರಕ್ತ ಸಂಬಂಧದ ಬಾಂಧವ್ಯ : ಆದಿವಾಸಿ ಪಂಗಡಗಳಲ್ಲಿ ಕಳ್ಳುಬಳ್ಳಿಯ ಸಂಬಂಧ ಅಥವಾ ರಕ್ತ ಸಂಬಂಧಗಳಿಗೆ ಹೆಚ್ಚಿನ ಪ್ರಾಧಾನ್ಯತೆಯಿದೆ. ಕುಟುಂಬ, ವಂಶ, ಕುಲ, ಬಳ್ಳಿ, ಬೆಡಗು ಮುಂತಾದವುಗಳು ಸಮೂಹದ ರಕ್ತ ಸಂಬಂಧದ ಆಧಾರದ ಮೇಲೆಯೇ ಸಂಘಟಿತವಾಗಿವೆ. ಬಂಧು ಪ್ರೇಮದ ತಳಹದಿಯ ಮೇಲೆ ಸಹಕಾರ ಮತ್ತು ಸಂಬಂಧಗಳ ಆಧಾರದ ಮೇಲೆ ಬಂಧುತ್ವ ಬೆಳೆಯುತ್ತದೆ. ಮದುವೆ ಮಂಗಳಕಾರ್ಯಗಳಲ್ಲಿ

ಸೋದರ ಮಾವ ಮತ್ತು ಸೋದರತ್ತೆಗೆ ವಿಶೇಷ ಮಹತ್ವ ಕೊಡುತ್ತಾರೆ. ಇವರ ಪ್ರಮುಖವಾದ ಯಾವುದೇ ಕೌಟುಂಬಿಕ ಮತ್ತು ಧಾರ್ಮಿಕ ಕಾರ್ಯಕ್ರಮಗಳಲ್ಲಿ ಐಕ್ಯತೆ ಒಗ್ಗಟ್ಟು ಮತ್ತು ಸಹಕಾರ ಭಾವನೆ ಪ್ರಮುಖವಾಗಿರುತ್ತದೆ.

೭. ಧರ್ಮ ಮತ್ತು ಸಂಸ್ಕೃತಿ : "ಆದಿವಾಸಿಗಳನ್ನು 'ಜಿ ಎಸ್ ಗುರೆ'ಯವರು ಹಿಂದುಳಿದ ಹಿಂದೂಗಳೆಂದು ಕರೆದಿದ್ದಾರೆ. ಬುಡಕಟ್ಟು ಸಮುದಾಯದ ಧಾರ್ಮಿಕ ನಿಷ್ಟೆ, ಸಂಪ್ರದಾಯ ಪ್ರಕೃತಿ ಪೂಜೆ, ಮೂರ್ತಿಪೂಜೆ, ಕುಲದೇವತೆ ಎಂದು ಆರಾಧಿಸುತ್ತಾರೆ. ಅಷ್ಟೆ ಅಲ್ಲದೇ ಗಿಡ, ಮರ, ಮಣ್ಣು, ನೀರು, ನಿಸರ್ಗವನ್ನು ಪೂಜಿಸುತ್ತಾರೆ. ಇಂದಿಗೂ ದೆವ್ವ-ಭೂತ ಮಾಟ-ಮಂತ್ರಗಳ ಬಗೆಗೆ ನಂಬಿಕೆ ಹೊಂದಿದ್ದಾರೆ. ಜೀವನದ ಕಷ್ಟ-ನಷ್ಟ ಸುಖ-ದುಃಖ, ರೋಗ-ರುಜಿನಗಳು ಬಂದಾಗ ದೇವರ ಮೋರೆ ಹೋಗುತ್ತಾರೆ. ಪ್ರತಿಯೊಂದು ಕಾರ್ಯಕ್ರಮಗಳು ಧಾರ್ಮಿಕ ನಂಬಿಕೆಗಳು ಅವರಲ್ಲಿ ಸಾಮಾನ್ಯವಾಗಿ ಕಾಣುತ್ತವೆ. ಆದಿವಾಸಿ ಸಮುದಾಯಗಳ ಜೀವನವು ಧರ್ಮದೊಂದಿಗೆ ಲೀನವಾಗಿದೆ ಅವರ ಇಡೀ ಜೀವನವು ಧರ್ಮದಲ್ಲಿ ಅದ್ದಿ ತೆಗೆದಂತ್ತಿವೆ ಎಂದು 'ಸರ್ ಜೀಮ್ರ ಪ್ರೇಜರ್' ಅಭಿಪ್ರಾಯ ಪಟ್ಟಿದ್ದಾರೆ."[೧೧]

೮. ಒಳ ಪಂಗಡಗಳ ವಿವಾಹ ಪದ್ಧತಿ : ಬುಡಕಟ್ಟು ಸಮುದಾಯಗಳಲ್ಲಿ ಒಳ ಪಂಗಡದಲ್ಲಿ ವಿವಾಹ ನಡೆಯುತ್ತವೆ. ಸಮುದಾಯದ ಅತಿಯಾದ ಪಾವಿತ್ರತೆ ಮತ್ತು ಐಕ್ಯತೆಯನ್ನು ಉಳಿಸಿಕೊಳ್ಳುವ ದೃಷ್ಟಿಯಿಂದ ಈ ಪದ್ದತಿಗಳು ಜಾರಿಗೆ ಬಂದಿವೆ. ವ್ಯಕ್ತಿಯು ತನ್ನ ಬಾಳಸಂಗಾತಿಯನ್ನು ತಾನು ಹುಟ್ಟಿದ ಪಂಗಡದಲ್ಲಿಯೇ ಆರಿಸಿಕೊಳ್ಳಬೇಕು. ಅವರವರ ಕುಲದ ಪದ್ದತಿಗೆ ತಕ್ಕಂತೆ ಗಂಡು ಹೆಣ್ಣುಗಳ ಆಯ್ಕೆ ನಿಯಮಗಳನ್ನು ಪಾಲಿಸಬೇಕು. ಬೇಡರಲ್ಲಿ ಬ್ರಾಹ್ಮಣ ಪೌರೋಹಿತ್ಯ ಕಂಡುಬರುತ್ತದೆ. ರಕ್ತಸಂಬಂಧಕ್ಕೆ ಬಹಳ ಮಹತ್ವಕೊಟ್ಟು ವಿವಾಹ ಸಂಬಂಧ ಬೆಳೆಸುತ್ತಾರೆ. ಉದಾ : ಅಪ್ಪನ ತಂಗಿ ಅಥವಾ ಅಕ್ಕನ ಮಗಳನ್ನು ಮದುವೆ ಮಾಡಿಕೊಳ್ಳುತ್ತಾರೆ ಅಥವಾ ಅಮ್ಮನ ತಮ್ಮ ಅಥವಾ ಅಣ್ಣ ಮಗಳನ್ನು ಮದುವೆ ಮಾಡಿಸುತ್ತಾರೆ. ಗಂಡು ಹೆಣ್ಣಿನ ಕುಲಗೋತ್ರ ಬೇರೆಯಾಗಿರುತ್ತವೆ. ಯಾವುದೇ ಕಾರಣಕ್ಕೂ ಒಂದೇ ಬೆಡಗುಗಳಲ್ಲಿ ಮದುವೆ ಮಾಡುವುದಿಲ್ಲ. ವಿವಾಹ ವಿಷಯಕ್ಕೆ ಬಂದರೆ ಮೊದಲು ಬೆಡಗು ಕೇಳಿ ಸಂಬಂಧ ಬೆಳೆಸುತ್ತಾರೆ. ಆದಿವಾಸಿಗಳು ಒಳ ಪಂಗಡ ವಿವಾಹ ಪದ್ದತಿ ಅನುಸರಿಸಿದರೂ ಅವರ ವಿವಾಹ ನಿಯಮ ವಿವಾಹದ ವಯಸ್ಸು ಸಂಗಾತಿಗಳ ಆಯ್ಕೆ ಕ್ರಮ, ವಿವಾಹ ವಿಚ್ಛೇಧನ ಲೈಂಗಿಕ ಕಟ್ಟುಪಾಡುಗಳು ಮೊದಲಾದವುಗಳ ವಿಷಯವಾಗಿ ಆದಿವಾಸಿಗಳು ಇತರರಿಗಿಂತ ಭಿನ್ನವಾದ, ತಮ್ಮದೇ ಆದ ನಿಯಮವನ್ನು ಪಾಲಿಸುತ್ತಾ ಬಂದಿದ್ದಾರೆ.

೯. ರಕ್ಷಣೆ ಮತ್ತು ಐಕ್ಯತೆ ಭಾವನೆ : ಆದಿವಾಸಿಗಳು ರಕ್ಷಣೆ ಮತ್ತು ಭದ್ರತೆಗೆ ಹೆಚ್ಚಿನ ಮಹತ್ವ ಕೊಡುತ್ತಾರೆ. ತಮ್ಮ ಸಮುದಾಯದ ಗುಟ್ಟನ್ನು ಕಾಪಾಡಿಕೊಂಡು ಬರುತ್ತಾರೆ. ಹೊರಗಿನ ಜನರನ್ನು ಬಹಳ ಸಂಶಯದಿಂದಲೇ ಕಾಣುತ್ತಾರೆ. ಕೆಲವೊಂದು ದೊಡ್ಡಿ, ಹಟ್ಟಿ

ಪಾಳ್ಯ, ದಿನ್ನಿ ಸುತ್ತ ಮುಳ್ಳು ಬೇಲಿಯನ್ನು ಹಾಕಿಕೊಳ್ಳುತ್ತಾರೆ. ಈ ಬೇಲಿ ರಕ್ಷಣೆ ದೃಷ್ಟಿಯಿಂದ ತುಂಬಾ ಅನುಕೂಲವಾಗುತ್ತದೆ. ರಕ್ಷಣೆಯ ಸಲುವಾಗಿ ಭರ್ಚಿ, ಕುಡಗೋಲು, ಚಾಕು, ಕೊಡಲಿ ಮುಂತಾದವುಗಳನ್ನು ತಮ್ಮ ಮನೆಗಳಲ್ಲಿ ಇಟ್ಟುಕೊಂಡಿದ್ದಾರೆ. ಇವುಗಳ ಬಳಕೆ ಕಾಡು ಪ್ರಾಣಿಗಳ ಹಾವಳಿ ಕಳ್ಳರು ಬಂದಾಗ ಉಪಯೋಗಿಸುತ್ತಾರೆ. ರಕ್ಷಣೆಗೆ ಮತ್ತೊಂದು ವಿಷಯ ಎಂದರೆ ಪ್ರತಿಯೊಂದು ಮನೆಯಲ್ಲಿ ನಾಯಿ ಸಾಕಿಕೊಂಡಿರುತ್ತಾರೆ. ಆ ನಾಯಿ ಮನೆ ಹತ್ತಿರ ಬೇರೆಯವರು ಬರದಂತೆ ನೋಡಿಕೊಳ್ಳುತ್ತದೆ. ಜಗತ್ತು ಎಷ್ಟೇ ಪರಿವರ್ತನೆಯಾಗಲಿ ಸಮುದಾಯ ನಶಿಸಿ ಹೋಗಲಾರವು. ಸರಳ ಹಾಗೂ ಸಂಪ್ರದಾಯ ಬದ್ಧ ಸಮುದಾಯಗಳಲ್ಲಿ ನಿಯಂತ್ರಣ ವ್ಯವಸ್ಥೆ ಇಂದಿಗೂ ಗಟ್ಟಿಯಾಗಿದೆ. ವೈಯಕ್ತಿಕ ಹಿತಾಸಕ್ತಿಗಳಿಗಿಂತ ಸಮುದಾಯದ ಹಿತಾಸಕ್ತಿಗೆ ಸಮಾಜ ಹೆಚ್ಚಿನ ಒತ್ತು ನೀಡುತ್ತಾ ಬಂದಿದೆ. ಆಧುನಿಕ ಭರಾಟೆ ವ್ಯಾಪಿಸುತ್ತಾ ಹೋದ ಹಾಗೆಲ್ಲ ಅನೌಪಚಾರಿಕ ನಿಯಂತ್ರಣ ವ್ಯವಸ್ಥೆ ಸಡಿಲಗೊಳ್ಳುತ್ತಾ ಅದರ ಸ್ಥಾನವನ್ನು ಕಾನೂನು, ನ್ಯಾಯಾಲಯ ಇತರೆ ಸಂಘ–ಸಂಸ್ಥೆಗಳು ಪಡೆದುಕೊಳ್ಳುತ್ತವೆ. ಮಾನವನ ಬದುಕಿನ ಬಹುಭಾಗ ಅವರು ವಾಸಿಸುವ ಸಮುದಾಯಗಳಲ್ಲಿ ಕಳೆಯುವುದರಿಂದ ಸಮುದಾಯಕ್ಕೆ ಹೆಚ್ಚು ಅರ್ಥವಿದೆ. ವ್ಯಕ್ತಿಗಳು ಪರಿವರ್ತನೆಯಾಗಬಹುದು ಸಮುದಾಯಗಳ ಸ್ವರೂಪ, ಸಂಸ್ಕೃತಿ ಅಥವಾ ವ್ಯಾಪ್ತಿಗಳಲ್ಲಿ ಬದಲಾವಣೆ ಕಂಡುಬರಬಹುದು ಆದರೆ ಸಮುದಾಯ ಮಾತ್ರ ಬದುಕಿನ ಅಂಗವಾಗಿ ಉಳಿದುಕೊಂಡಿದೆ.

೩.೫ ಕುರುಬ ಮತ್ತು ಕಬ್ಬಲಿಗ ಸಮುದಾಯದ ದೊಡ್ಡಿಯ ಸ್ವರೂಪ

ದೊಡ್ಡಿಗೊಂದು ಭೌತಿಕ ರಚನೆಯು ಚಿಕ್ಕಪಟ್ಟಣವೊಂದರ ಭೌತಿಕ ರಚನೆಗಿಂತ ಅಥವಾ ಹಳ್ಳಿಗಿಂತ ಭಿನ್ನವಾದ ರಚನೆಯನ್ನು ಹೊಂದಿದೆ. ಅದನ್ನು ಸರಳವಾಗಿ ಗುರುತಿಸಬಹುದು. ಕೆಲವೊಮ್ಮೆ ಸ್ವಲ್ಪ ಪ್ರಯಾಸದಿಂದ ತಿಳಿದುಕೊಳ್ಳಬಹುದು. ನಮಗೆಲ್ಲ ತಿಳಿದಿರುವಂತೆ ಕರಾವಳಿಯ ಎಸ್ಟೇಟ್ ಸ್ವರೂಪವೇ ಬೇರೆ ಬೇರೆ ತಾಂಡಗಳ ಸ್ವರೂಪವೇ ಮೈಸೂರು ಭಾಗದಲ್ಲಿ ಕಂಡುಬರುವ ಹಾಡಿಗಳಿಗಿಂತ ಭಿನ್ನವಾಗಿವೆ. ಬಯಲು ಸೀಮೆಯ ಹಟ್ಟಿಗಳಂತೆ ಕಂಡುಬರುವ ದೊಡ್ಡಿಗಳ ಹೋಲಿಕೆ ಒಂದೇ ರೀತಿಯಾಗಿ ಕಾಣಬಹುದು. ಹಾಗೆಯೇ ರಾಯಚೂರು ಜಿಲ್ಲೆಯಲ್ಲಿ ಕಂಡುಬರುವ ಒಂದು ಸಮುದಾಯದ ದೊಡ್ಡಿಯಿಂದ ಇನ್ನೊಂದು ಸಮುದಾಯದ ದೊಡ್ಡಿ ಸ್ವರೂಪ ಭಿನ್ನವಾಗಿದೆ. ಈ ವ್ಯತ್ಯಾಸಗಳನ್ನು ಗುರುತಿಸುವಾಗ ಹಲವಾರು ಮಾನದಂಡಗಳನ್ನು ಇಟ್ಟುಕೊಳ್ಳಲಾಗಿದೆ. ನೆಲೆ ನಿಂತಿರುವ ಸ್ಥಳ ಅವರ ವೃತ್ತಿ, ಪರ್ಯಾಯ ವೃತ್ತಿ ಮತ್ತು ಸಂಬಂಧ ಜನಸಂಖ್ಯೆಯ ಗಾತ್ರಗಳ ಆಧಾರದ ಮೇಲೆ ತಿಳಿದುಕೊಳ್ಳಬಹುದು. ನಮ್ಮ ಪ್ರಾಚೀನ ಗ್ರಂಥಗಳಲ್ಲಿ ಅಲ್ಲಲ್ಲಿ ಗ್ರಾಮಗಳ ಸ್ವರೂಪದ ಬಗ್ಗೆ ಅನುಷಂಗಿಕವಾದ ವರ್ಣನೆ ಅಥವಾ ಪ್ರಸ್ತಾಪ ಬರುತ್ತದೆ. ಕೃಷಿಯನ್ನು

ಅವಲಂಬಿಸಿರುವುದೂ ಗುರುತಿಸದ ಮೇರೆಗಳಿರುವುದು ಕೆಲವು ಲಕ್ಷಣಗಳನ್ನು ಗುರುತಿಸಬಹುದು.

೧. ಕೇಂದ್ರಿತ ದೊಡ್ಡಿಗಳು : ಕೇಂದ್ರಿತ ದೊಡ್ಡಿಗಳ ಮುಖ್ಯ ಲಕ್ಷಣವೆಂದರೆ ಹೊಲಗಳ ಒಂದು ಭಾಗದಲ್ಲಿ ಮನೆಗಳು ಇದ್ದು, ಮನೆಗಳು ಒಂದಕ್ಕೊಂದು ಬಹಳ ಹತ್ತಿರದಲ್ಲಿರುತ್ತವೆ. ವಾಸದ ಮನೆಯ ಅಕ್ಕಪಕ್ಕದಲ್ಲಿ ಅಥವಾ ಮನೆಗಳಿಗೆ ಸಂಬಂಧಿಸಿದ ಹೊಲಗಳಿರುತ್ತವೆ. ವ್ಯವಸಾಯದ ಮನೆಗಳ ಸಂಖ್ಯೆ ಹೆಚ್ಚಿದಂತೆ ದೊಡ್ಡಿಯು ದೊಡ್ಡದಾಗುತ್ತದೆ. ಇಂಥ ದೊಡ್ಡಿಗಳು ರಾಯಚೂರು ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತವೆ.

೨. ಪ್ರತ್ಯೇಕ ಹೊಲಮನೆಗಳ ದೊಡ್ಡಿಗಳು : ರಾಯಚೂರು ಜಿಲ್ಲೆಯ ದೇವದುರ್ಗ, ಲಿಂಗಸ್ಗೂರು, ಮಾನ್ವಿ, ರಾಯಚೂರ ತಾಲೂಕಿನ ಗ್ರಾಮೀಣ ಪ್ರದೇಶಗಳಲ್ಲಿ ಪ್ರತ್ಯೇಕಿತ ಹೊಲಮನೆಗಳು ಹೆಚ್ಚಾಗಿ ಕಂಡುಬರುತ್ತವೆ. ಒಂದೇ ಒಂದು ರೈತ ಕುಟುಂಬ ಪ್ರತ್ಯೇಕವಾಗಿ ವಾಸ ಮಾಡುತ್ತದೆ. ವಾಸದ ಮನೆಯ ಪಕ್ಕದಲ್ಲಿ ದನದ ಕೊಟ್ಟಿಗೆ, ಹುಲ್ಲು ಬಣವಿ, ನೊಗ ನೇಗಿಲುಗಳನ್ನು ಕೂಡಿಡುವ ಚಪ್ಪರ ಇರುತ್ತದೆ. ಕುಟುಂಬದ ಆಸ್ತಿ ಮತ್ತು ಫಲವತ್ತಾದ ಕೃಷಿ ಭೂಮಿಯು ಮನೆಯ ಮುಂದೆ ಅಥವಾ ಮನೆಯ ಹಿಂದೆ ವಿಸ್ತಾರದಿಂದ ಕೂಡಿರುತ್ತದೆ. ಆ ಹೊಲದ ಮೇರೆಯಾಚೆ ಇಂಥ ಇನ್ನೊಂದು ರೈತ ಕುಟುಂಬ ಹಾಗೂ ಅವನ ವಾಸದ ಗುಡಿಸಲು ಕೊಟ್ಟಿಗೆ ಅಂಗಳಗಳು ಅವುಗಳ ಪಕ್ಕದಲ್ಲಿ ಕೃಷಿ ಜಮೀನುಗಳು ಇವೆ. ಹೀಗೆ ಚಿಕ್ಕ ದೊಡ್ಡ ಗಾತ್ರದ ಪ್ರತ್ಯೇಕಿತ ಹೊಲಗದ್ದೆ ಮನೆಗಳಿಂದ ಕೂಡಿದ ಪ್ರತ್ಯೇಕಿತ ವಾಸದ ನಿವಾಸಗಳು ಕರಾವಳಿ ಹಾಗೂ ಪಶ್ಚಿಮ ಘಟ್ಟಗಳ ಇಳಿಜಾರು ಪ್ರದೇಶಗಳಲ್ಲಿರುವ ವಾಸಸ್ಥಳಗಳು 'ಎಸ್ಟೇಟ್' ಆಗಿ ಕಂಡುಬರುತ್ತವೆ.

೩. ಹಳ್ಳಿಗಳಿಂದ ಚದುರಿದ ದೊಡ್ಡಿಗಳು : ಕುರುಚಲ ಗುಡ್ಡದ ಸಾಲುಗಳಲ್ಲಿ ಅಥವಾ ಗುಡ್ಡಗಾಡುಗಳ ವಾರಿಗಳಲ್ಲಿ ಅಥವಾ ನದಿಗಳ ಕವಲುಗಳು ಇರುವಲ್ಲಿ ದೊಡ್ಡಿಗಳು ಒಟ್ಟಿಗೆ ಇರುವುದಿಲ್ಲ. ನಾಲ್ಕಾರು ಮನೆಗಳು ಒಂದು ಗುಂಪಿನವರು ತಗ್ಗಿನಲ್ಲಿ ಇದ್ದರೆ ಇನ್ನೊಂದು ಗುಂಪಿನವರು ವಿರುದ್ಧ ಇರುತ್ತಾರೆ. ನಾಲ್ಕೈದು ಜನಸಮುದಾಯಗಳು ಗುಂಪು ಇರಬಹುದು. ಇಂಥ ಏಳೆಂಟು ಮನೆಗಳಿಂದ ಕೂಡಿದ ಗುಂಪಿಗೆ ದೊಡ್ಡಿ ಎಂದು ಪ್ರಾದೇಶಿಕವಾಗಿ ಕರೆಯುತ್ತಾರೆ.

೪. ಕೃಷಿ ಮತ್ತು ಶಾಶ್ವತ ದೊಡ್ಡಿಗಳು : ದೊಡ್ಡಿಯ ಮೂಲ ಕಾಯಕ ಕೃಷಿಯಾಗಿದೆ. ಅದು ರಾಯಚೂರು ಜಿಲ್ಲೆಯಲ್ಲಿ ಕೃಷಿಯ ಜೊತೆಗೆ ಕುಲ ಕಸುಬುಗೆ ಅನುಕೂಲವಾದ ನೆಲೆಯೆಂದು ಹೇಳಬಹುದು. ಇಲ್ಲಿನ ಹಿರಿಯರು ನಮ್ಮಲ್ಲಿ ದೊಡ್ಡಿಯ ಜನರೆಂದರೆ ಒಕ್ಕಲುತನದ ಜೊತೆಗೆ ದನಗಾಯಿ, ಕುರಿಗಾಯಿ ಎಂದರೆ ದೊಡ್ಡಿಯ ಜನ ಎಂದು ಹೇಳಬಹುದು. ಆದರೂ ನಮ್ಮಲ್ಲಿ ಅಂಬಿಗರ ದೊಡ್ಡಿಗೂ, ಕುರುಬರ ದೊಡ್ಡಿಗಳಿಗೂ, ಬೇಡರ ದೊಡ್ಡಿಗೂ ವ್ಯತ್ಯಾಸ ಕಂಡುಬರುತ್ತದೆ.

೫. ವಿವಿಧ ಜಾತಿಯ ದೊಡ್ಡಿಗಳು : ಗ್ರಾಮದ ಭೌತಿಕ ರಚನೆಗೆ ಮಿತಿಗಳನ್ನು ಹೇರುವ ಸಂಗತಿಯೊಂದನ್ನು ಈಗ ಪ್ರಸ್ತಾಪಿಸಬಹುದು. ಹಳ್ಳಿಗಳಲ್ಲಿ ಪ್ರತ್ಯೇಕವಾದ ಜಾತಿಯ ಕೇರಿಗಳು ಅಥವಾ ಓಣಿಗಳು ಕಂಡುಬಂದಂತೆ ದೊಡ್ಡಿಗಳು ವಿಶೇಷವಾಗಿ ಒಂದೊಂದು ಜಾತಿಯ ದೊಡ್ಡಿಗಳು ಕಂಡುಬರುತ್ತವೆ. ಆ ದೊಡ್ಡಿಗಳಿಗೆ ಬೇಡರ ದೊಡ್ಡಿ ಕುರುಬರ ದೊಡ್ಡಿ, ಅಂಬಿಗರ ದೊಡ್ಡಿಗಳು ಎಂದು ಕರೆಯುತ್ತಾರೆ. ಜೊತೆಗೆ ಒಂದೇ ದೊಡ್ಡಿಯಲ್ಲಿ ಮೂರು ಸಮುದಾಯವಿದ್ದರೂ ಒಂದೊಂದು ದಿಕ್ಕಿಗೆ ಒಂದೊಂದು ಜಾತಿಯ ಜನರ ನಿವಾಸ ಕಾಣಬಹುದು. ಇದರಿಂದ ಯಾವುದೇ ದೊಡ್ಡಿಯಾಗಲಿ ಇದೇ ಜಾತಿಯ ದೊಡ್ಡಿಯೆಂದು ಆ ದೊಡ್ಡಿಯ ಹೆಸರಿನಿಂದ ತಿಳಿದುಕೊಳ್ಳಬಹುದಾಗಿದೆ.

೬. ಕುಲಕಸುಬುಗೆ ಪೂರಕವಾದ ದೊಡ್ಡಿ : ರಾಯಚೂರು ಜಿಲ್ಲೆಯಲ್ಲಿ ಹಳ್ಳಿಗಳನ್ನು ಬಿಟ್ಟು ನಾಲ್ಕಾರು ಮೈಲು ದೂರ ನೆಲೆಸಲು ಅವರ ಮೂಲ ಕಸುಬು ಕುರಿಸಾಕಾಣಿಕೆ ಎನ್ನುವ ಧೈರ್ಯದಿಂದ ಹಳ್ಳಿಗಳನ್ನು ಬಿಟ್ಟು ಅಡವಿಗೆ ಬಂದು ಸೇರುತ್ತಾರೆ. ಇಂತಹ ಕುಟುಂಬಗಳು ಹೆಚ್ಚಿನ ಸಂಖ್ಯೆಯಲ್ಲಿ ಸಿಗುತ್ತವೆ. ಅಂಥವರು ತಮ್ಮ ಕುಲ ಕಸುಬಿಗೆ ಅನುಕೂಲವಾಗುವ ಮತ್ತು ಪರ್ಯಾಯ ಉದ್ಯೋಗ ಮಾಡಲು ಸೂಕ್ತವಾದ ನೆಲೆಯನ್ನು ಆಯ್ದುಕೊಂಡು ನೆಲೆಸಿರುವುದು ಜಿಲ್ಲೆಯಾದ್ಯಂತ ಸಾಮಾನ್ಯವಾಗಿ ಕಂಡುಬರುತ್ತದೆ.

೭. ರಮಣೀಯ ರಮ್ಯ ತಾಣವಾಗಿ ದೊಡ್ಡಿ : ದೊಡ್ಡಿಗೊಂದು ರೂಪವುಂಟು, ತನ್ನದೇ ಆದ ಪ್ರಕೃತಿ ಸೌಂದರ್ಯದಿಂದ ಕಾಣವುದುಂಟು. ಬೇರೆಬೇರೆ ಕಾಲಗಳಲ್ಲಿ ಅದು ನವನವಿನ ಭಂಗಿಗಳಲ್ಲಿ ಕಂಡರೂ ಆಶ್ಚರ್ಯವಿಲ್ಲ. ಇವುಗಳನ್ನು ಸಮಾಜ ವಿಜ್ಞಾನಿಗಳು ಗಾತ್ರ, ದೊಡ್ಡಿ ಜನಸಂಖ್ಯೆ ಅದರ ಜನವಸತಿ, ಮಳೆ-ಬೆಳೆ ಇವುಗಳ ಲೆಕ್ಕ ನಯನಮನೋಹರವೆನ್ನಿಸುವ ದೊಡ್ಡಿಯ ನೆಲೆಯು ಇನ್ನು ಕೆಲವರಿಗೆ ವನವಾಸವೆನ್ನಿಸಬಹುದು. ಯಾರ ಗಮನಕ್ಕೂ ತಿಳಿದುಬಾರದೆ ಯಾರಿಗೂ ಬೇಡವಾದ ದೊಡ್ಡಿಗಳು ಕೆಲವರಿಗೆ ಅದು ನಿಸರ್ಗ ಪ್ರಾಧಾನ್ಯತೆವುಳ್ಳ ಸರಳವಾದ ದೊಡ್ಡಿಗಳಾಗಿರುತ್ತವೆ. ಶಾಂತಿ ಮತ್ತು ನೆಮ್ಮದಿ ತಾಣ. ಹೀಗಾಗಿ ನಾವು ದೃಷ್ಟಿಭೇದದಿಂದಾಗಿ ದೊಡ್ಡಿಯ ಬಾಹ್ಯ ಸ್ವರೂಪವನ್ನು ಕೂಡ ಸರ್ವ ಸಮ್ಮತವಾಗುವಂತೆ ವರ್ಣಿಸಲಾರೆವು. ಆದರೆ ಈ ಬಾಹ್ಯ ಸ್ವರೂಪವನ್ನು ನೆಲದ ಗುಣ, ಮಳೆಯ ಪ್ರಮಾಣ, ನದಿ, ಗುಡ್ಡಗಾಡು, ಸೂರ್ಯ ಪ್ರಕಾಶ ಲಭ್ಯವಿರುವ ಮನೆ ಕಟ್ಟುವ ಸಾಮಗ್ರಿಗಳನ್ನು ಇವೆಲ್ಲ ಸಂಗತಿಗಳು ರೂಪಿಸುತ್ತವೆಂಬುದನ್ನು ಮಾತ್ರ ಹೇಳಬಹುದು.

ಬದಲಾಗುತ್ತಿರುವ ಜಿಲ್ಲೆಯ ದೊಡ್ಡಿಗಳು

ಬದಲಾಗಲಾರದ ಭಾರತ ಪೂರ್ವ ಪೂರ್ವವೇ, ಪಶ್ಚಿಮ ಪಶ್ಚಿಮವೇ ಎಂಬ ಹೇಳಿಕೆಗಳು ಭಾರತದ ಪ್ರತ್ಯೇಕ ನೆಲೆಗಳ ಜಡತೆ ಹಾಗೂ ಸ್ಥಿರತೆಯನ್ನು ಎತ್ತಿತೋರಿಸುತ್ತವೆ. ದೊಡ್ಡಿಗಳಲ್ಲಿ ಜನ-ಜೀವನ ಮತ್ತು ವಸತಿ ಉದ್ಯೋಗದಲ್ಲಿ ಹೇರಳವಾಗಿ ಬದಲಾವಣೆಗಳಾಗುತ್ತಿವೆ. ರಾಯಚೂರು ಜಿಲ್ಲೆಯ ಪ್ರತ್ಯೇಕ ನೆಲೆಗಳಲ್ಲಿ ಒಂದಾದ ದೊಡ್ಡಿಗಳು

ಬದಲಾವಣೆಯ ಕ್ರಮಕ್ಕೆ ಹೇಗೆ ಒಳಗಾಗಿವೆ ಎಂಬುದನ್ನು ಅವಲೋಕಿಸುವ ಮೂಲಕ ಬರುವ ಶತಮಾನದಲ್ಲಿ ಜಿಲ್ಲೆಯ ದೊಡ್ಡಿಗಳು ಹೇಗೆ ಇರುತ್ತವೆ ಹಾಗೂ ಇರಬೇಕು ಎಂಬುದರ ಕಲ್ಪನೆ ಉಂಟಾಗಬಲ್ಲದು.

ಸರಳ ಅರ್ಥದಲ್ಲಿ ದೊಡ್ಡಿ ಮತ್ತು ಹಳ್ಳಿ ಎಂದರೆ ಕೆಲವು ಕೃಷಿ ಕುಟುಂಬಗಳ ನೆಲೆ. ಕೃಷಿ ಕಲೆಯ ಪ್ರಾರಂಭದೊಡನೆ ಮಾನವ ಅಲೆಮಾರಿ ಜೀವನ ತೊರೆದು ಶಾಶ್ವತವಾಗಿ ಒಂದು ಪ್ರದೇಶದಲ್ಲಿ ನೆಲೆಸಲು ಪ್ರಾರಂಭಿಸಿದೊಡನೆ ದೊಡ್ಡಿಗಳು ಹುಟ್ಟಿಕೊಂಡವು. ಆ ಜನ ವಸತಿ ಗುಂಪುಗಳೇ ಮುಂದೆ ಗ್ರಾಮಗಳಾದವು ಎಂದು ಹೇಳಬಹುದು. ಕೃಷಿ ಹಾಗೂ ಈ ನೆಲೆಗಳ ಮಧ್ಯ ಅವಿನಾಭಾವ ಸಂಬಂಧವಿದೆ.

ಪ್ರಾಚೀನ ಕಾಲದಲ್ಲಿ ದೊಡ್ಡಿಗಳು ಹೊರಗಿನ ವಿಶೇಷ ಸಂಬಂಧಗಳಿಂದ ದೂರವಾಗಿ ಪ್ರತ್ಯೇಕಿಸಲ್ಪಟ್ಟ ಘಟಕಗಳಾಗಿದ್ದವು. ಇಲ್ಲಿ ಉತ್ಪಾದನೆ ಹಾಗೂ ಉಪಯೋಗದ ನಡುವೆ ನೇರ ಸಂಬಂಧ ಇತ್ತು. ದೊಡ್ಡಿಯ ಜನರು ತಮ್ಮ ಬದುಕಿಗೆ ಬೇಕಾದದ್ದನ್ನೇ ಬೆಳೆಯುತ್ತಿದ್ದರು. ಹಾಗೂ ತಾವು ಬೆಳೆದದ್ದನ್ನೇ ಉಪಯೋಗಿಸುತ್ತಿದ್ದರು. ಸ್ವಾವಲಂಬಿಯಾಗಿ ಬದುಕು ಸಾಗಿಸುತ್ತಿದ್ದರು. ಇತ್ತೀಚಿನ ದಶಕಗಳಲ್ಲಿ ಮಳೆಯ ಪ್ರಮಾಣ ತೀರ ಕಡಿಮೆಯಾಗಿದ್ದರಿಂದ ದೊಡ್ಡಿಗಳಲ್ಲಿ ಕೃಷಿಯನ್ನು ನಂಬಿದವರ ಬದುಕು ಚಿಂತಜನಕವಾಗಿದೆ. ಸರ್ಕಾರದ ಯೋಜನೆಗಳಲ್ಲಿ ಒಂದಾದ ನೀರಾವರಿ ಯೋಜನೆ ಹಲವು ದೊಡ್ಡಿಗಳಿಗೆ ಹೊಸ ಬದುಕು ನೀಡುತ್ತಿವೆ.

ತುಂಗಾಭದ್ರಾ ನೀರಾವರಿ ಯೋಜನೆ : ಈ ಯೋಜನೆ ಅತ್ಯಧಿಕ ಪ್ರಮಾಣದಲ್ಲಿ ಜಿಲ್ಲೆಯ ಜಮೀನುಗಳಿಗೆ ನೀರಾವರಿ ಸೌಲಭ್ಯವನ್ನು ಒದಗಿಸುತ್ತಿದೆ. ಜಿಲ್ಲೆ ರೈತರ ಪಾಲಿಗೆ ವರದಾನವಾಗಿದೆ. ಕೃಷಿ ಮತ್ತು ತುಂಗಾಭದ್ರಾ ನದಿ ಆಣೆಕಟ್ಟನ್ನು ಕಟ್ಟಿ ನೀರನ್ನು ಸಂಗ್ರಹಿಸಿದ ಆ ನೀರನ್ನು ಕಾಲುವೆಗಳ ಮೂಲಕ ಹೊಲಗಳಿಗೆ ಪೂರೈಸುವುದರ ಮುಖಾಂತರ ನೀರಾವರಿ ಸೌಲಭ್ಯ ಒದಗಿಸಲಾಗಿದೆ. ಇದರಿಂದ ಒಣಭೂಮಿ ಹೊಂದಿದ ರೈತರು ನೀರಾವರಿ ಸೌಲಭ್ಯವನ್ನು ಪಡೆದುಕೊಂಡು ಆರ್ಥಿಕವಾಗಿ ಸುಭದ್ರವಾದ ಜೀವನ ನಡೆಸುತ್ತಿದ್ದಾರೆ. ವರ್ಷದಲ್ಲಿ ಎರಡು ಬೆಳೆಯನ್ನು ಬಳೆಯುವುದನ್ನು ಕಾಣುತ್ತೇವೆ. ನೀರಾವರಿ ಹೊಂದಿರುವ ದೊಡ್ಡಿಗಳೆಂದರೆ ಉಪ್ಪಲದೊಡ್ಡಿ, ಗೋವಿಂದನ ದೊಡ್ಡಿ ಇಲ್ಲಿನ ನಿವಾಸಿಗಳು ಆರ್ಥಿಕವಾಗಿ ಅಭಿವೃದ್ಧಿ ಹೊಂದುತ್ತಿರುವುದರಿಂದ ಆಧುನಿಕತೆಯ ಎಲ್ಲಾ ಲಾಭವನ್ನು ಪಡೆದುಕೊಂಡು ಉತ್ತಮವಾದ ಜೀವನವನ್ನು ನಡೆಸುವುದಕ್ಕೆ ಸಾಧ್ಯವಾಗುತ್ತಿದೆ ಎಂದು ಇಲ್ಲಿನ ನಿವಾಸಿಗಳ ಅಭಿಪ್ರಾಯವಾಗಿದೆ.

ಗಂಗಾ ಕಲ್ಯಾಣ ಯೋಜನೆ : ಕೃಷಿ ಕ್ಷೇತ್ರದಲ್ಲಿ ಕ್ರಾಂತಿ ಪ್ರಾರಂಭವಾದಂದಿನಿಂದ ಬೋರವೆಲ್ ಮುಖಾಂತರ ಒಣ ಬೇಸಾಯ ಭೂಮಿಗಳಿಗೆ ಜೊತೆಗೆ ನೀರಾವರಿ ಯೋಜನೆಯಿಂದ ವಂಚಿತರಾದ ಭೂಮಿಗಳಿಗೆ ಗಂಗಾ ಕಲ್ಯಾಣ ಯೋಜನೆ ಮುಖಾಂತರ

ಸರ್ಕಾರ ನೀರಾವರಿ, ಪದ್ಧತಿಗೆ ಸಾಕಷ್ಟು ಪ್ರಾಮುಖ್ಯತೆಯನ್ನು ನೀಡುತ್ತಿದೆ. ಇದರಿಂದ ಜಿಲ್ಲೆಯ ಬಹುತೇಕ ದೊಡ್ಡಿಗಳು ವಿದ್ಯುತ್‌ನಿಂದ ವಂಚಿತವಾದ ದೊಡ್ಡಿಗಳಾಗಿವೆ. ಭೂಮಿಗೆ ನೀರು ಮನೆಗಳಿಗೆ ವಿದ್ಯುತ್ ಸೌಲಭ್ಯ ಪಡೆದುಕೊಳ್ಳುವಲ್ಲಿ ಗಂಗಾ ಕಲ್ಯಾಣ ಯೋಜನೆ ಅನುವು ಮಾಡಿಕೊಟ್ಟಿದೆ. ಇದರಿಂದ ದೇವದುರ್ಗ, ಲಿಂಗಸ್ಗೂರು ತಾಲೂಕಿನಲ್ಲಿ ಹಳ್ಳಿಗಳಿಂದ ಪ್ರತ್ಯೇಕವಾಗಿ ೧೦–೧೫ ಕುಟುಂಬಗಳು ವಾಸಮಾಡುತ್ತಿರುವುದು ಕಂಡುಬರುತ್ತವೆ. ಈ ಕುಟುಂಬಗಳು ವಿದ್ಯುತ್‌ನಿಂದ ವಂಚಿತವಾಗಿ, ಕತ್ತಲು ಜೀವನ ನಡೆಸುತ್ತಿವೆ. ಇತ್ತೀಚಿನ ವರ್ಷಗಳಲ್ಲಿ ಗಂಗಾ ಕಲ್ಯಾಣ ಯೋಜನೆ ಫಲವಾಗಿ ಬೇಡ, ಕುರುಬ ಮತ್ತು ಕಬ್ಬಲಿಗ ಸಮುದಾಯ ದೊಡ್ಡಿಗಳಿಗೆ ವಿದ್ಯುತ್ ಭಾಗ್ಯ ದೊರೆತಂತಾಗಿದೆ. ಒಣ ಬೇಸಾಯ ಮಾಡಿಕೊಂಡು ಇರುವ ಹಲವು ಕುಟುಂಬದವರು ವರ್ಷದಲ್ಲಿ ಎರಡು ಬೆಳೆಯನ್ನು ಬೆಳೆಯಲು ಸಾಧ್ಯವಾಗುತ್ತಿದೆ. ಆದರೆ ಯೋಜನೆಯ ಲಾಭ ದೊಡ್ಡಿಗಳಲ್ಲಿ ಇರುವ ಎಲ್ಲ ಕುಟುಂಬಗಳಿಗೆ ದೊರೆತರೆ ದೊಡ್ಡಿಗಳು ಹಳ್ಳಿಗಳಂತೆ ಪರಿವರ್ತನೆಯಾಗುತ್ತವೆ. ಈ ಲಾಭ ಪಡೆದುಕೊಂಡು ದೊಡ್ಡಿಗಳಲ್ಲಿ ವಾಸಿಸುವ ಕುಟುಂಬಗಳು ಪರಿವರ್ತನೆಯಾಗುತ್ತಿವೆ. ಗಂಗಾ ಕಲ್ಯಾಣ ಯೋಜನೆಗಳ ಮುಖಾಂತರ ದೊಡ್ಡಿಗಳ ನಿವಾಸಿಗಳಿಗೆ ವಿದ್ಯುತ್ ಸೌಲಭ್ಯ ದೊರೆತಿದೆ. ಎಂದು ದೊಡ್ಡಿಗಳಲ್ಲಿ ನೆಲೆಸಿರುವ ಕುಟುಂಬದವರು ಸಂತೋಷದಿಂದ ಹೇಳುತ್ತಾರೆ. ರೈತರಿಗೆ ನಿಜವಾಗಿಯೂ ಸಹಾಯಮಾಡಿ ಅವರನ್ನು ಸಾಲದ ಹೊರೆಯಿಂದ ತಪ್ಪಿಸಬೇಕಾದರೆ ಸಹಕಾರ ಸಂಘಗಳು ಬಹುಮಟ್ಟಿಗೆ ನೆರವಾಗುವುದೆಂದು ಧಾರಳವಾಗಿ ಹೇಳಬಹುದು. 'ಹೆಸರಿಲ್ಲ ರೋಗಕ್ಕೆ ಹೀರೆಮದ್ದು' ಎಂಬಂತೆ ಪರಸ್ಪರ ಸಹಕಾರ ಸಂಘಗಳು ರೈತರ ಕಷ್ಟಕ್ಕೆ ಸಂಜೀವಿನಿ ಎಂದು ಹೇಳಬಹುದು. ಸಹಕಾರ ತತ್ವವು ಅಮೋಘವಾದದ್ದು ಸಹಕಾರಿ ಬ್ಯಾಂಕ್‌ಗಳ ಮುಖಾಂತರ ರೈತರಿಗೆ ಕಡಿಮೆ ಬಡ್ಡಿಯಲ್ಲಿ ಸಾಲಸೌಲಭ್ಯ ಪಡೆದುಕೊಳ್ಳಲು ಅನುಕೂಲವಾಯಿತು. ಇದರಿಂದ ರೈತರು ಅಧಿಕ ಬಡ್ಡಿ ಕಟ್ಟುವ ತೊಂದರೆ ತಪ್ಪಿದಂತಾಯಿತು ಮತ್ತು ಸಮಯಕ್ಕೆ ಸರಿಯಾಗಿ ಸಾಲಸೌಲಭ್ಯ ಪಡೆದುಕೊಳ್ಳುವಲ್ಲಿ ಸಹಕಾರಿ ತತ್ವ ನಿಜಕ್ಕೂ ರೈತರ ಪಾಲಿಗೆ ವರದಾನವಾಯಿತು.

ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳು : ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ವಿಶೇಷವಾಗಿ ಗ್ರಾಮೀಣ ಭಾಗದ ಸಾಲಸೌಲಭ್ಯ ಒದಗಿಸುವ ನಿಟ್ಟಿನಲ್ಲಿ ಅಕ್ಟೋಬರ್ ೨, ೧೯೭೫ರಂದು ಉದಯಿಸಿದವು. "ಈ ಬ್ಯಾಂಕ್‌ಗಳು ಗ್ರಾಮೀಣ ಭಾಗದ ಸಣ್ಣ, ಅತಿ ಸಣ್ಣ ರೈತರಿಗೆ, ಕೃಷಿ ಕಾರ್ಮಿಕರಿಗೆ ಮತ್ತಿತರ ಆಸಕ್ತ ಜನರಿಗೆ ಸಾಲ ನೀಡುವ ಮಹತ್ತರವಾದ ಧ್ಯೇಯ ವನ್ನಿಟ್ಟುಕೊಂಡು ಜನ್ಮ ತಾಳಿವೆ. ಇಂತಹ ದುರ್ಬಲ ವರ್ಗದ ಜನರಿಗೆ ಸಾಲ ಸೌಲಭ್ಯ ನೀಡಿ ಅವರ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಿ ಒಟ್ಟಾರೆ ಗ್ರಾಮೀಣ ಅಭಿವೃದ್ಧಿ ಸಾಧಿಸುವ ಮಹತ್ವಾಕಾಂಕ್ಷೆಯನ್ನಿಟ್ಟುಕೊಂಡಿವೆ. ಇದರಿಂದ ಪ್ರತ್ಯೇಕ ನೆಲೆಗಳಲ್ಲಿ ನೆಲೆಸಿರುವ ಸಮುದಾಯದವರು ಶ್ರೀಮಂತರ ಹತ್ತಿರ ಸಾಲಕ್ಕಾಗಿ ಕೈ ಚಾಚುವ ತೊಂದರೆ ತಪ್ಪಿದೆ. ಜೊತೆಗೆ ಶ್ರೀಮಂತರ ಅಧಿಕ ಬಡ್ಡಿ ವ್ಯವಹಾರ ಶೋಷಣೆಯಿಂದ ಮುಕ್ತವಾಗಲು ಗ್ರಾಮೀಣ

ಬ್ಯಾಂಕ್ ರೈತರ ಪಾಲಿನ ಕಾಮಧೇನು. ರೈತರು ಸಾಲಮಾಡಿದಾಗ ಹೆಚ್ಚು ಬರಗಾಲರದಿಂದ ಹಣವನ್ನು ಬ್ಯಾಂಕ್‌ಗೆ ಕಟ್ಟಲಾರದ ಸಂದರ್ಭದಲ್ಲಿ ಸರ್ಕಾರ ರೈತರ ಸಾಲ ಮನ್ನಾ ಮಾಡಿರುವ ಉದಾಹರಣೆಗಳು ಕಂಡುಬರುತ್ತದೆ. ಇದರಿಂದ ರೈತರು ಶೋಷಣೆಯಿಂದ ಮುಕ್ತವಾಗಿದ್ದಾರೆ."[೧೨]

"ಕೃಷಿ ಮಾರುಕಟ್ಟೆಗಳು ಕೃಷಿಕರ ಹಣಕಾಸಿನ ಪರಿಸ್ಥಿತಿ ಸುಧಾರಿಸಲಿಕ್ಕೆ ಮೂಲ ಸೌಲಭ್ಯಗಳನ್ನು ಒದಗಿಸುತ್ತವೆ. ಇವುಗಳು ಕೃಷಿಕರು ಬೆಳೆದ ವಸ್ತುಗಳಿಗೆ ಉತ್ತಮ ಬೆಲೆ ನಿಗದಿ ಪಡಿಸಿ ಕೃಷಿಯನ್ನು ಲಾಭದಾಯಕ ವೃತ್ತಿಯನ್ನಾಗಿ ಮಾಡುತ್ತವೆ. ಕೃಷಿ ಮಾರುಕಟ್ಟೆಯ ವ್ಯವಸ್ಥೆಯಿಂದ ರೈತರು ಸ್ವಲ್ಪ ಮಟ್ಟಿಗೆಯಾದರೂ ಲಾಭ ಪಡೆದುಕೊಳ್ಳಲು ಸಹಾಯಕವಾಗಿದೆ. ಕೃಷಿ ಮಾರುಕಟ್ಟೆಗೆ ಬರದೇ ಶ್ರೀಮಂತರ ಹತ್ತಿರ ಸಾಲ ಪಡೆದು ತಮ್ಮ ಬೆಳೆ ಅವರಿಗೆ ಮಾರಾಟ ಮಾಡುತ್ತಾರೆ. ಇಲ್ಲದಿದ್ದರೆ ಸಮೀಪದ ದಲ್ಲಾಳಿಗಳಿಗೆ ಮಾರಿ ಬಂದಷ್ಟು ಹಣವನ್ನು ಪಡೆದು ತೃಪ್ತಿ ಪಡಬೇಕಾಗುತ್ತದೆ."[೧೩] ಆದರೆ ಮಾರುಕಟ್ಟೆಯ ವ್ಯವಸ್ಥೆಯಿಂದ ದಲ್ಲಾಳಿಗಳ ಶೋಷಣೆಯಿಂದ ರೈತರು ಮುಕ್ತರಾಗಿದ್ದಾರೆ.

"ಭಾರತ ದೇಶವು ವಿಜ್ಞಾನ ಮತ್ತು ತಾಂತ್ರಿಕ ಜ್ಞಾನದಲ್ಲಿ ಮುಂದುವರಿದ ದೇಶಗಳಿಗಿಂತ ಹಿಂದೆ ಬಿದ್ದಿಲ್ಲ. ಆದರೆ ಭಾರತದ ಕೃಷಿಕರು ಮಾತ್ರ ಪುರಾತನ ಕಾಲದ ತಂತ್ರಜ್ಞಾನ ಮತ್ತು ಸಾಗುವಳಿ ಪದ್ಧತಿಯನ್ನು ಅನುಸರಿಸುತ್ತಿರುವುದು ಮಾತ್ರ ವಿಷಾದದ ಸಂಗತಿಯಾಗಿದೆ. ಅವರು ಸಂಪ್ರಾದಾಯ ಪ್ರಿಯರೂ ಮತ್ತು ಪ್ರಗತಿಪರ ವಿಚಾರವುಳ್ಳವರೂ ಆಗಿರುವುದರಿಂದ ಮುಂದುವರಿದ ರಾಷ್ಟ್ರಗಳ ರೈತರು ಉಪಯೋಗಿಸುವ ಅತ್ಯಾಧುನಿಕ ಬೇಸಾಯ ಪದ್ಧತಿಯನ್ನು ಅನುಸರಿಸಲು ಅಸಮರ್ಥರಾಗಿದ್ದಾರೆ."[೧೪] ಇದಕ್ಕೆ ಅವರ ಬಡತನವು ಒಂದು ಪ್ರಮುಖ ಕಾರಣವಾಗಿದೆ. ಇತ್ತೀಚಿನ ದಿನಗಳಲ್ಲಿ ಕೃಷಿ ಕ್ಷೇತ್ರದಲ್ಲೂ ವಿಜ್ಞಾನ ಮತ್ತು ತಂತ್ರಜ್ಞಾನದ ಉಪಯುಕ್ತತೆ ಹೆಚ್ಚಾಗುತ್ತಿರುವುದೊಂದು ರಾಯಚೂರು ಜಿಲ್ಲೆಯ ರೈತರು ದೈನಂದಿ ಚಟುವಟಿಕೆಯಲ್ಲಿನ ಬದಲಾವಣೆಯ ದಿಕ್ಸೂಚಿಯಾಗಿದೆ ಎಂದು ಹೇಳಬಹುದು. ಉದಾಹರಣೆಗೆ: ರೈತರು ಪುರಾತನ ಕಾಲದ ಸಲಕರಣೆಗಳ ಬದಲಾಗಿ ವೈಜ್ಞಾನಿಕ ವಿಧಾನದಿಂದ ತಯಾರಿಸದ ಬೇಸಾಯದ ಸಲಕರಣೆಗಳನ್ನು ಉಪಯೋಗಿಸಲು ಪ್ರಾರಂಭಿಸಿದ್ದಾರೆ. ಎರಡನೆಯದಾಗಿ ರಾಸಾಯನಿಕ ಗೊಬ್ಬರವನ್ನು ಅಧಿಕ ಪ್ರಮಾಣದಲ್ಲಿ ಉಪಯೋಗಿಸುತ್ತಿದ್ದಾರೆ. ಮೂರನೆಯದಾಗಿ ಅಧಿಕ ಇಳುವರಿ ನೀಡುವ ಮಿಶ್ರ ತಳಿ ಬೀಜಗಳನ್ನು ಉಪಯೋಗಿ ಸುತ್ತಿದ್ದಾರೆ. ನಾಲ್ಕನೆಯದಾಗಿ ನೀರಾವರಿ ಸೌಲಭ್ಯಗಳನ್ನು ಒದಗಿಸಿ ಮಳೆಯ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುವುದಕ್ಕೋಸ್ಕರ ಚಿಕ್ಕ, ಮಧ್ಯಮ ಮತ್ತು ಬೃಹತ್ ಪ್ರಮಾಣದ ನೀರಾವರಿ ಯೋಜನೆಗಳನ್ನು ಅನುಷ್ಠಾನಕ್ಕೆ ತರಲಾಗಿದೆ.

ಗ್ರಾಮ ಸಭೆಗಳು : ಗ್ರಾಮೀಣ ಜನರ ಜೀವನ ಸುಧಾರಣೆಯಲ್ಲಿ ಬಹುಮುಖ್ಯ ಪಾತ್ರವಹಿಸುವ ಗ್ರಾಮ ಪಂಚಾಯತ್ ವ್ಯವಸ್ಥೆಯದಾಗಿದೆ. ಏಕೆಂದರೆ ಗ್ರಾಮದಲ್ಲಿರುವ

ಎಲ್ಲ ಮತದಾರರು ಗ್ರಾಮ ಸಭೆಯ ಸದಸ್ಯರಾಗಿದ್ದು ವಿಕೇಂದ್ರಿಕರಣ ವ್ಯವಸ್ಥೆಯ ಅತಿ ತಳಮಟ್ಟದ ಸಂಸ್ಥೆಯಾಗಿದ್ದು ಜನತೆಯ ನೇರ ಪ್ರತಿನಿಧಿಗಳನ್ನು ಈ ಸಭೆ ಹೊಂದಿದೆ. ಜನತಾಂತ್ರಿಕ ವ್ಯವಸ್ಥೆಯಲ್ಲಿ ಇದರಂತೆ ಬೇರ್‍ಯಾವ ಸಂಸ್ಥೆಯು ನೇರ ಜನ ಪ್ರಾತಿನಿಧ್ಯವನ್ನು ಹೊಂದಿಲ್ಲ. ಆದ್ದರಿಂದ ಗ್ರಾಮ ಸಭೆ ತಳಮಟ್ಟದಲ್ಲಿ ಮುಖ್ಯವಾದ ಸಭೆಯಾಗಿದೆ.

ರಾಷ್ಟ್ರಕ್ಕೆ ಸಂಪತ್ತು ಹೇಗೆ ಅವಶ್ಯಕವೊ ಗ್ರಾಮಕ್ಕೆ **"ಗ್ರಾಮಸಭೆಯೂ ಅಷ್ಟೇ ಅವಶ್ಯಕ."** ಸಂಸತ್ತಿನಲ್ಲಿ ನಮ್ಮ ಪ್ರತಿನಿಧಿಗಳಿದ್ದರೆ, ಗ್ರಾಮ ಸಭೆಯಲ್ಲಿ ಪ್ರತಿನಿಧಿಗಳ ಜೊತೆಗೆ ಗ್ರಾಮದ ಮತದಾರರು ನೇರವಾಗಿ ಭಾಗವಹಿಸುವ ಅವಕಾಶವಿದೆ. ಸ್ಥಳೀಯ ಸಮಸ್ಯೆಗಳನ್ನು ಚರ್ಚಿಸಿ ಗ್ರಾಮದ ಜನರಬೇಕು ಬೇಡಿಕೆಗಳನ್ನು ನಿರ್ದರಿಸುವ, ಜನತೆಯ ಹಿತಾಸಕ್ತಿಗೆ ಪೂರಕವಾಗಿ ಯೋಜನೆಗಳನ್ನು ಅನುಷ್ಠಾನಗೊಳಿಸುವ ಸಂಸ್ಥೆ ಇದಾಗಿದೆ. ಹಾಗಾಗಿ ಗ್ರಾಮಸಭೆಗೆ ಇಂದು ಹೆಚ್ಚು ಪ್ರಾಮುಖ್ಯತೆ ಕೊಡಲಾಗಿದೆ. ಕೆಳವರ್ಗಗಳ ಮತ್ತು ಬಡವರು ನೇರ ಭಾಗವಹಿಸುವಿಕೆ ಇರುವುದರಿಂದ ಇವರ ಸ್ಥಿತಿಗತಿಗಳನ್ನು ಸುಧಾರಿಸಬಹುದೆಂಬ ನಂಬಿಕೆ ಇಲ್ಲಿದೆ. ಸರ್ಕಾರ ರೂಪಿಸಿರುವ ಬಹುತೇಕ ಯೋಜನೆಗಳನ್ನು ಜಾರಿಗೆ ತರುವಲ್ಲಿ ಮತ್ತು ಜನತೆಗೆ ತಲುಪಿಸುವಲ್ಲಿ ಸಹಭಾಗಿತ್ವ ಉದ್ದೇಶವನ್ನು ಈ ಸಭೆ ಹೊಂದಿದೆ. ಗ್ರಾಮದ ಎಲ್ಲ ಜಾತಿವರ್ಗಗಳ ಜನರು ಭಾಗವಹಿಸುವುದರಿಂದ ಬಡವರು ಯಾರು? ಯಾರಿಗೆ ಮನೆ ಇಲ್ಲ ಇಲ್ಲಿಯವರೆಗೆ ಯಾರಿಗೆ ಸರ್ಕಾರದ ಸೌಲಭ್ಯ ಸಿಕ್ಕಿಲ್ಲ ಎಂಬ ವಿಚಾರವನ್ನು ಇಲ್ಲಿ ನಿರ್ಧರಿಸಬಹುದಾಗಿದೆ. ಇದರಿಂದ ಸ್ಥಳೀಯ ಆಡಳಿತದಲ್ಲಿ ಪಾರದರ್ಶಕತೆಯನ್ನು ತರಬಹುದಾಗಿದೆ. ಗ್ರಾಮ ಪಂಚಾಯತಿಗಳು ಪ್ರತಿವರ್ಷ ಕೈಗೊಳ್ಳಬೇಕಾದ ಕಾರ್ಯಗಳನ್ನು ಗ್ರಾಮೀಣ ಜನತೆಗೆ ತಿಳಿಯಪಡಿಸಬಹುದಾಗಿದೆ. ಹೀಗೆ ಗ್ರಾಮಸಭೆಗಳು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಆಯೋಜಿಸಿರುವ ಯೋಜನೆಗಳನ್ನು ತಳಮಟ್ಟದಲ್ಲಿ ಉದ್ದೇಶಿತ ವರ್ಗಕ್ಕೆ ತಲುಪಿಸುವ ಸಾಂಸ್ಥಿಕ ವ್ಯವಸ್ಥೆ ಇದಾಗಿದೆ. ಹಾಗಾಗಿ ಜನ ತಾಂತ್ರಿಕ ವ್ಯವಸ್ಥೆಯಲ್ಲಿ ಕೆಳಹಂತದ ಪ್ರಮುಖ ಸಭೆಯಾಗಿದೆ. ಗ್ರಾಮ ಸಭೆ ಫಲಶೃತಿಯಿಂದ ಅನೇಕ ದೊಡ್ಡಿಗಳಲ್ಲಿ ಆಶ್ರಯ ಯೋಜನೆಗೆ ಫಲದೊರೆತಂತಾಗಿದೆ. ಜೊತೆಗೆ ದೊಡ್ಡಿಗಳ ಗ್ರಾಮ ಮತ್ತು ಗ್ರಾಮ ಪಂಚಾಯತ್ ಮಟ್ಟಕ್ಕೆ ಬೆಳವಣಿಗೆ ಹೊಂದಿದವರಿಂದ ಸರ್ಕಾರದ ಹತ್ತು ಹಲವು ಯೋಜನೆಗಳು ಜನರಿಗೆ ತಲುಪಲು ಅನುಕೂಲವಾಗಿದೆ.

ಕೃಷಿ ಪದ್ದತಿ ಮತ್ತು ಪರಿಕರಗಳು

ದೊಡ್ಡಿಯ "ಉಗಮದ ಕಾಲಕ್ಕೆ ಮನುಷ್ಯ ಕಾಡನ್ನು ತೊರೆದು ಅಥವಾ ಕಾಡಿನ ಅಂಚಿನಲ್ಲಿ ಹುಲ್ಲಿನ ಗುಡಿಸಲುಗಳನ್ನು ನಿರ್ಮಿಸಿಕೊಂಡು ಒಂದೆಡೆ ನೆಲೆನಿಂತು ತನ್ನ ಬದುಕಿಗೆ ಪಶುಪಾಲನೆ ಮತ್ತು ಕೃಷಿಯನ್ನು ಆಧರಿಸಿ ಜೀವನ ಕ್ರಮವನ್ನು ರೂಪಿಸಿಕೊಂಡನು. ಹೀಗೆ ವ್ಯವಸಾಯ ಅಥವಾ ಕೃಷಿಯನ್ನು ಅವಲಂಬಿಸಿದ ಮಾನವನ ಇತಿಹಾಸದಲ್ಲಿ ದೊಡ್ಡಿ ಸಂಸ್ಕೃತಿ ಪ್ರಧಾನವಾಗಿ ಕೃಷಿಗೆ ಸಂಬಂಧಿಸಿರುವುದು ಸಹಜವೇ. ಆದರೆ ಕೃಷಿ

ಪದ್ಧತಿಯು ಭೌಗೋಳಿಕವಾಗಿ ಬೇರೆ ಬೇರೆ ಪ್ರದೇಶಗಳ ಪ್ರಾಕೃತಿಕ ಸಂದರ್ಭಗಳನ್ನು ಅನುಸಿರಿಸಿ ಮತ್ತು ಸಾಮಾಜಿಕ ಸ್ವರೂಪವನ್ನಾಧರಿಸಿ ರೂಪಿತವಾಗಿರುತ್ತದೆ. ಆದುದರಿಂದ ಕೃಷಿ ಸಂಸ್ಕೃತಿಯ ಸ್ವರೂಪವನ್ನು ಆಯಾ ಪ್ರಾದೇಶಿಕ ಪರಿಸರವನ್ನು ಅನುಸರಿಸಿ ಅವುಗಳ ವಿಶಿಷ್ಟತೆಯನ್ನು ಗುರುತಿಸುವುದು ಅವಶ್ಯಕವೆನಿಸುತ್ತದೆ."[೧೫]

ಪ್ರಸ್ತುತ ರಾಯಚೂರು ಜಿಲ್ಲೆಯು ಗ್ರಾಮೀಣ ಪ್ರದೇಶದಿಂದ ಕೂಡಿದ್ದು, ಬಯಲು ಬೆಟ್ಟ ಪ್ರದೇಶದ ಪರಿಸರವನ್ನು, ಅನುಸರಿಸಿಕೊಂಡು ಬರುತ್ತಿರುವ ವೈಶಿಷ್ಟತೆಯನ್ನು ಪಡೆದಿದೆ. ಇಂಥದೇ ಪರಿಸ್ಥಿತಿ ಕರ್ನಾಟಕದ ಇತರೆ ಪ್ರದೇಶಗಳಲ್ಲಿ ಕಂಡುಬರುತ್ತದೆಯಾದರೂ ಕೃಷಿ ಪ್ರತಿಯೊಂದು ಪ್ರದೇಶಕ್ಕೆ ಭಿನ್ನವಾದ ಆಯಾಮವನ್ನು ತಂದುಕೊಟ್ಟಿರುತ್ತದೆ. ಹೀಗಾಗಿ ಇಲ್ಲಿನ ಕೃಷಿ ಪದ್ದತಿ ವಿವರಗಳನ್ನು ಪರಿಶೀಲಿಸಬಹುದಾಗಿದೆ. ರಾಯಚೂರು ಭಾಗದಲ್ಲಿ ಕೃಷಿ ಕಸುಬುದಾರರನ್ನು ಒಕ್ಕಲಿಗ, ರೈತ, ವ್ಯವಸಾಯಗಾರ, ಬೇಸಾಯಗಾರ ಎಂಬುದಾಗಿ ಕರೆಯುತ್ತಾರೆ. ಇಲ್ಲಿ ಕೃಷಿ, ತುಂಗಾಭದ್ರಾ ನದಿ ಹರಿಯುತ್ತಿದ್ದರೂ ಹೆಚ್ಚಿನ ವ್ಯವಸಾಯ ಮಳೆಯನ್ನಾಧರಿಸಿದೆ. ಮುಂಗಾರು ಮತ್ತು ಹಿಂಗಾರು ಮಳೆ ಮಾರುತಗಳನ್ನಾಧರಿಸಿ ಬೆಳೆ ಬೆಳೆಯುವ ಪದ್ದತಿ ರೂಢಿಯಲ್ಲಿದೆ. ನೀರಾವರಿ ಪ್ರದೇಶಗಳಲ್ಲಿ ಭತ್ತ ಬೆಳೆಗಳನ್ನು ಬೆಳೆಯುತ್ತಾರಾದರೂ ಬೇಸಾಯದ ಬಹುಭಾಗ ಸಾಂಪ್ರದಾಯಿಕ ಮಾದರಿಯಲ್ಲೇ ನಡೆಯುತ್ತದೆ. ಒಣಭೂಮಿ ಬೇಸಾಯ ಅಥವಾ ಮಳೆಯನ್ನಾಧರಿಸಿ ಬೆಳೆಯುವ ಬೆಳೆಗಳಿಗೆ ಖುಷ್ಕಿ ಎಂಬುದಾಗಿ ಕರೆಯುತ್ತಾರೆ. ಈ ಶಬ್ದ ಕೃಷಿಕರು ಬಳಸುತ್ತಿಲ್ಲ. ಸರ್ಕಾರ ಸರ್ಕಾರದ ದಾಖಲೆಗಳಲ್ಲಿ ಖುಷ್ಕಿ ಭೂಮಿ, ಬೇಸಾಯ ಮುಂತಾದ ವಿವರಗಳು ದೊರೆಯುತ್ತದೆ. ದೊಡ್ಡಿಗಳಲ್ಲಿ ಹೊರಭೂಮಿ, ಅಥವಾ ಒಣಭೂಮಿ ವ್ಯವಸಾಯ ಎಂದು ಕರೆಯುತ್ತಾರೆ. ಹೊಲಗಳಲ್ಲಿ ಹೆಚ್ಚಾಗಿ ಜೋಳ ಬೆಳೆಯುತ್ತಾರೆ. ಉಳಿದಂತೆ ತೊಗರಿ, ಹತ್ತಿ, ಮೆಣಸಿನಕಾಯಿ, ಸೂರ್ಯಕಾಂತಿ, ಹೆಸರು, ಶೇಂಗಾ, ಸಜ್ಜೆ ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ. ಬಹುಪಾಲು ಮಿಶ್ರ ಬೆಳೆಯಾಗಿರುತ್ತದೆ. ಈ ಬೆಳೆಗಳ ಉದ್ದೇಶವು ಸಹ ಏಕೋದ್ದೇಶದಿಂದ ಕೂಡಿದಲ್ಲಿ ಆಹಾರ ಪದಾರ್ಥಗಳ ಜೊತೆಗೆ ಪಶುಗಳಿಗೆ ಮೇವನ್ನು ಪಡೆಯುವುದಾಗಿದೆ. ಆದುದರಿಂದಾಗಿ ಸಾಂಪ್ರದಾಯಿಕವಾದ ಬೇಸಾಯದ ಉತ್ಪನ್ನಗಳ ಬಹುಪಯೋಗಿ ಉತ್ಪನ್ನಗಳಾಗಿರುತ್ತವೆ. ಅಂದರೆ ನೀರಿನ ಆಶ್ರಯದಲ್ಲಿ ಬೆಳೆಯುವ ಬೆಳೆಗಳನ್ನು ನೀರಾವರಿ ವ್ಯವಸಾಯ ಎಂದು ಕರೆಯಲಾಗುತ್ತದೆ. ನೀರಾವರಿಯಲ್ಲಿ ಭತ್ತವನ್ನು ಬೆಳೆಯುತ್ತಾರೆ. ಆ ಹೊಲಕ್ಕೆ ಗದ್ದೆ ಎಂದು ಕರೆಯುತ್ತಾರೆ. ಜೊತೆಗೆ ಈ ಭಾಗದಲ್ಲಿ ಭತ್ತಕ್ಕೆ ಕೌವಳಿ ಎಂದು ಕರೆಯುತ್ತಾರೆ. ಭೂಮಿಯ ಉಳುಮೆಗಾಗಿ ಬಳಸುವ ಸಾಧನ ನೇಗಿಲು ಈ ನೇಗಿಲುಗಳಲ್ಲಿ ಎರಡು ವಿಧ ೧. ಮರದ ನೇಗಿಲು ೨. ಕಬ್ಬಿಣದ ನೇಗಿಲು ಇವುಗಳ ಹೆಸರೇ ಸೂಚಿಸುವಂತೆ ನೇಗಿಲಿನ ತಯಾರಿಕೆಯಲ್ಲಿ ಬಳಕೆಯಾಗಿರುವ ವಸ್ತುವನ್ನಾಧರಿಸಿ ಈ ರೀತಿಯ ವಿಭಜನೆ ಮಾಡಲಾಗಿದೆ. ಆದರೆ ನೇಗಿಲು ರಚನೆ ಅಖಂಡವಾದುದಲ್ಲ ವಿವಿಧ ಭಾಗಗಳ ಜೋಡಣೆಯಿಂದಾಗಿ ನೇಗಿಲಿನ ರಚನೆಯಾಗಿವೆ. ನೇಗಿಲನ್ನು ಮಾಡುವುದಕ್ಕೆ

ಬನ್ನಿಮರ, ಬೇವಿನಮರ, ಆರ್ಗನ ಮರ, ಕಕ್ಕೆಮರವನ್ನು ಬಳಸುತ್ತಾರೆ. ಈ ಮರ ಗಟ್ಟಿಯಾಗಿದ್ದು ನಿಧಾನವಾಗಿ ಸವೆದು, ದೀರ್ಘಕಾಲ ಬಾಳಿಕೆ ಬರುತ್ತದೆಂಬ ಕಾರಣದಿಂದಾಗಿ ಈ ನಿರ್ದಿಷ್ಟ ಮರಗಳನ್ನು ಬಳಸುತ್ತಾರೆ. ನೇಗಿಲನ್ನು ಹಿಡಿದು ಉಳುಮೆ ಮಾಡುವುದಕ್ಕೆ ನೇಗಿಲ ಬುಡಕ್ಕೆ ಹೊಂದಿಸಿದ ಎತ್ತರವಾದ ಭಾಗವನ್ನು ಮೇಳಿ ಎಂದು ಕರೆಯುತ್ತಾರೆ. ಕೈಯಲ್ಲಿ ಹಿಡಿದುಕೊಳ್ಳುವ ಹಿಡಿಕೆಯ ಭಾಗವನ್ನು ಹಿಡಿ ಎನ್ನುವರು.

ನೇಗಿಲು ಉಳುಮೆಗೆ ಎತ್ತುಗಳು ಹೊತ್ತಿರುವ ನೊಗಕ್ಕೆ ಬಂಧಿಸುವ ಕೊಳ್ಳುಕಟ್ಟುವುದು ಎಂದು ಕರೆಯುತ್ತಾರೆ. ಕಬ್ಬಿಣ ಮತ್ತು ಕಟ್ಟಿಗೆಯ ಎರಡು ನೇಗಿಲು ಬಳಸುತ್ತಾರೆ.

ಹುಲುಸಾದ ಪೈರುಗಳ ಮಧ್ಯ ಎಡಿ ಹೊಡಿಯುವ ಸಂದರ್ಭದಲ್ಲಿ ಎತ್ತುಗಳು ಬೆಳೆಯನ್ನು ತಿನ್ನಲು ಪ್ರಯತ್ನಿಸಬಾರದೆಂದು ಅವುಗಳ ಮೂತಿಗೆ ಬಿದಿರಿನಿಂದ ಹಗ್ಗದಿಂದ ಎಣೆದಿರುವ ಚಿಕ್ಕಗಳನ್ನು ಎತ್ತುಗಳ ಉಸಿರಾಟಕ್ಕೆ ತೊಂದರೆಯಾಗದಂತೆ ಬೆಳೆಗಳ ಮಧ್ಯ ಎಡಿ ಹೊಡಿಯುವ ಸಂದರ್ಭದಲ್ಲಿ ಕಟ್ಟುತ್ತಾರೆ ಇದಕ್ಕೆ ಚಿಕ್ಕ ಎಂದು ಕರೆಯುತ್ತಾರೆ.

ನಾರಿನ ಹುರಿಯಿಂದ ಮಾಡಿದ ಹಗ್ಗವನ್ನು ಬಾರುಕೋಲು ಎಂದು ಬಳಸುತ್ತಾರೆ. ಇದನ್ನು ಗಳೆ ಹೊಡೆಯುವ ಸಂದರ್ಭದಲ್ಲಿ ಎತ್ತಿನ ಬಂಡಿ ಹೊಡೆಯುವ ಸಂದರ್ಭದಲ್ಲಿ ಬಳಸುತ್ತಾರೆ. ಬಾರುಕೋಲು ಬುಡದಲ್ಲಿ ಅಲಂಕೃತವಾದ ಕುಚ್ಚಗಳನ್ನು ಕಟ್ಟಿರುತ್ತಾರೆ. ಗಳೆ ಎಂದರೆ ಹೊಲಕ್ಕೆ ಗೊಬ್ಬರ ಹಾಕಿ ಒಂದೆರಡು, ಮೂರು ದಿನಗಳಲ್ಲಿ ಗಳೆ ಕಟ್ಟುತ್ತಾರೆ. ಇದರಿಂದ ಗೊಬ್ಬರ ಮಳೆ ಬಂದಾಗ ಹರಿದು ಹೋಗುವುದನ್ನು ತಡೆಯುತ್ತದೆ. ಗೊಬ್ಬರದಲ್ಲಿ ಹುಟ್ಟಿದ ಕಸ ಕಡ್ಡಿ ಮಣ್ಣಲ್ಲಿ ಗೊಬ್ಬರ ಆಗುತ್ತದೆ. ಕೂರಿಗೆ ಎಂದರೆ ಶೇಂಗಾ, ಜೋಳ, ಸಜ್ಜಿ ಬಿತ್ತನೆ ಮಾಡುವ ಸಾಧನ. ಶೇಂಗಾದ ಕಾಳು ಮಣ್ಣಿನ ಒಳಗೆ ಬಿತ್ತನೆಯಾಗಬೇಕೆಂಬ ಉದ್ದೇಶದಿಂದ ೫ ಅಂಗುಲ ಎತ್ತರ ಬಿತ್ತನೆ ಮಾಡುವ ವಸ್ತುವಿಗೆ ಬುಕ್ಕಾ ಎಂದು ಕರೆಯುತ್ತಾರೆ. ಕೂರಿಗೆಗೆ ಮೂರು, ಮೂರು ಹಲ್ಲುಗಳು ಇರುತ್ತವೆ. ಅದಕ್ಕೆ ಅನುಗುಣವಾಗಿ ಮೂರು ಬುಕ್ಕಾ ಹಿಡಿದುಕೊಂಡು ಬಿತ್ತುತ್ತಾರೆ. ಬುಕ್ಕಾ ರಂದ್ರವಿರುವ ೩.೫ ಅಡಿ ಉದ್ದದ ಕೊಳವೆಗಳನ್ನು ಬಟ್ಟಲು ಆಕಾರದಲ್ಲಿ ಇರುತ್ತದೆ. ಈ ಕೂರಿಗೆ ಬಟ್ಟಲುಗಳ ಮೂಲಕ ಶೇಂಗಾ, ಜೋಳ ಅಥವಾ ಸಜ್ಜೆ ಹಾಕುತ್ತಾ ಮಣ್ಣಿನ ಒಳಭಾಗಕ್ಕೆ ಬಿತ್ತುತ್ತಾರೆ. ಆಧುನಿಕವಾಗಿ ಇದನ್ನು ಮತ್ತಷ್ಟು ಸುಧಾರಿಸಿದ ಬಿತ್ತನೆ ಕಾಳಿನ ಜೊತೆ ರಾಸಾಯನಿಕ ಗೊಬ್ಬರವನ್ನು ಮಿಶ್ರಣ ಮಾಡಿ ಬಿತ್ತನೆ ಮಾಡುತ್ತಾರೆ. ಪಗಳೆ ಎಂದರೆ ಕುಂಟಿ ಎಂದು ಕರೆಯುತ್ತಾರೆ. ಬಿತ್ತನೆಯಾದ ಭೂಮಿಯೊಳಗೆ ಸೇರಿಸುವ ಸಲುವಾಗಿ ಹೀಗೆ ಹೊಡೆಯುತ್ತಾರೆ. ಕಾಳು ಸಾಲು ಸರಿಯಾಗಿ ಬರಬೇಕು. ಮಳೆ ಬಂದರೆ ನೀರಿಗೆ ಕೊಚ್ಚಿಕೊಂಡು ಹೋಗಬಾರದು ಎನ್ನುವ ಉದ್ದೇಶ. ಜೊತೆ ಬಿತ್ತನೆಯಾದ ಬೀಜಗಳನ್ನು ಪಕ್ಷಿಗಳು ತಿನ್ನಬಾರದು ಎನ್ನುವರು ಮತ್ತು ಮಣ್ಣಿನ ಮೇಲೆ ಇದ್ದರೆ ಬೇಗ ಸಸಿ ಒಡೆಯುವುದಿಲ್ಲ ಎನ್ನುವ ಸಲುವಾಗಿ ಪಳೆ ಒಡೆಯುತ್ತಾರೆ. ಎಡೆ ಎಂದರೆ ಹೊಲದಲ್ಲಿ ಅರ್ಧ ಅಡಿ ಪೈರು ಬೆಳೆದಿರುವಾಗ ಅಥವಾ

೩೦ ದಿನಗಳ ಒಳಗೆ ಮಳೆ ಬಂದ ಮೇಲೆ ಬಯಲು ಬಿದ್ದಿರುವ ಅಥವಾ ಪೈರುಗಳು ಇಲ್ಲದ ಸ್ಥಳದಲ್ಲಿ ಗುಂಪಾಗಿ ಬೆಳೆದಿರುವ ಕಡೆ ಕಸ ಕಡ್ಡಿಯನ್ನು ಹುಲುಸಾಗಿ ಬೆಳೆಯುತ್ತಿರುವ ಬೆಳೆಗೆ ಇದರಿಂದ ತೊಂದರೆ ಆಗಬಾರದು ಎಂದು ಬೆಳೆಯ ನಡುವೆ ಎಡೆ ಒಡಿಯುತ್ತಾರೆ.

ರಾತ್ರಿಯ ಹೊತ್ತು ದನಗಳನ್ನು ಹಗ್ಗದಿಂದ ಕಟ್ಟುವ ಸಾಧನಕ್ಕೆ ಗೂಟ ಎನ್ನುವರು. ಭೂಮಿಯ ಒಳಗಡೆ ಅರ್ಧ ಅಡಿ ಗುಂಡಿ ತೆಗೆದು ನೆಟ್ಟಿರುತ್ತಾರೆ. ಮಯ್ಯ ಎಂದರೆ ಹೊಲ ಬಿತ್ತನೆ ಮಾಡುವ ಸಂದರ್ಭದಲ್ಲಿ ಇಲ್ಲವೇ ಗಳೆ ಹೊಡೆಯುವ ಸಂದರ್ಭದಲ್ಲಿಯಾಗಲಿ ಅಥವಾ ರಾಶಿ ಮಾಡುವಾಗ ಒಬ್ಬರಿಗೊಬ್ಬರು ಸಹಾಯ ಮಾಡುವುದಕ್ಕೆ ಮುಯ್ಯ ಎನ್ನುವರು ಇದು ಕೂಲಿಗೆ ಬದಲಾಗಿ ಶ್ರಮ ಬದಲಾವಣೆ ಮಾಡಿಕೊಳ್ಳುವ ಪದ್ಧತಿಯಾಗಿದೆ. ಇದು ಸಹಕಾರದ ಪದ್ಧತಿ ಎಂದು ಕರೆಯುವರು. ಕುರುಪಿ ಎಂದರೆ ಬೆಳೆಯಲ್ಲಿ ಬೆಳೆದಿರುವ ಕಳೆಯನ್ನು ತೆಗೆಯಲು ಬಳಸುವ ಸಾಧನ. ಕುರುಪಿ ಎಲ್ ಆಕಾರದಲ್ಲಿದ್ದು ಹಿಂಭಾಗಕ್ಕೆ ಮರದ ಹಿಡಿಕೆಯನ್ನು ಹಾಕಿರುತ್ತಾರೆ. ಹೊಲದಲ್ಲಿ ಬೆಳೆದ ಸಜ್ಜಿ, ಜೋಳ, ತೊಗರಿ ಕೊಯ್ಯುವ ವಸ್ತುವಿಗೆ ಕುಡಗೋಲು ಎನ್ನುತ್ತಾರೆ. ಇದು ಎಲ್ ಆಕಾರದಲ್ಲಿದ್ದು ಹಿಂಭಾಗಕ್ಕೆ ಮರದ ಹಿಡಿಕೆಯನ್ನು ಹಾಕಿರುತ್ತಾರೆ. ಒಂದು ಕಡೆ ಬಲಿತ ಶೇಂಗಾ ಬೆಳೆಯನ್ನು ಕಿತ್ತಿ ಹೊಲದಲ್ಲಿ ಒಂದು ಕಡೆ ಬಣವಿ ಹಾಕಲಾಗುತ್ತದೆ. ಹಸಿ ಬೆಳೆ ಗಟ್ಟಿಯಾಗಿ ಕುಳಿತು ಬಿಡುತ್ತದೆ. ಹಸಿ ಬೆಳೆ ಒಂದು ಕಡೆ ಕೂಡಿಹಾಕುವುದರಿಂದ ಬೆಳೆ ಕೊಳೆಯುವ ಸಂಭವವಿರುತ್ತದೆ. ಜೊತೆಗೆ ಕೂಡಿಹಾಕಿದ ಬೆಳೆಯಲ್ಲಿ ಹಾವು ಚೇಳು ಸೇರಿ ಕೊಂಡಿರುತ್ತವೆ. ಇದರಿಂದ ಕೂಡಿದ ಹಾಕಿದ ಬೆಳೆಯನ್ನು ರಾಗಲು ದಿಂಡು ಮುಖಾಂತರ ಶೇಂಗಾದ ಬೆಳೆಯನ್ನು ತಿರುವಲು ಹಸಿ ಇರುವ ಬೆಳೆಯನ್ನು ಒಣಗಿಸಲು ರಾಗಲುದಿಂಡು ಅವಶ್ಯಕವಾಗಿ ಬೇಕು. ಈ ರಾಗಲುದಿಂಡು ನಾಲ್ಕ ರಿಂದ ಐದು ಪೀಟು ಬಿದುರು ಕಟ್ಟಿಗೆ ಉದ್ದ ಇರುತ್ತದೆ. ಈ ಆಕಾರದಲ್ಲಿ ಹಲ್ಲುಗಳ ಇರುತ್ತದೆ. ಇದಕ್ಕೆ ರಾಗಲುದಿಂಡು ಎಂದು ಕರೆಯುತ್ತಾರೆ. ಈ ರಾಗಲುದಿಂಡು ಶೇಂಗಾವನ್ನು ಬೆಳೆಯಿಂದ ಬೇರಪಡಿಸಿದ ನಂತರ ಕಣದಲ್ಲಿ ಹಾಕಲಾಗುತ್ತದೆ. ಶೇಂಗಾ ಹತ್ತಿಕೊಂಡಿರುವ ಮಣ್ಣು ಆ ಶೇಂಗಾವನ್ನು ಒಣಗಿಸಲು ರಾಗಲುದಿಂಡುಗಳ ಮುಖಾಂತರ ಕೂಡಿ ಹಾಕಿ ಶೇಂಗಾದ ರಾಶಿಯನ್ನು ಹಗಲು ಒಣಗಿ ಹಾಕಲು ರಾಗಲುದಿಂಡು ತುಂಬಾ ಸಹಕಾರಿಯಾಗಿದೆ. ಬಿದಿರು ಪುಟ್ಟಿ ಎಂದರೆ ಶೇಂಗಾವನ್ನು ಬೆಳೆಯಿಂದ ಬೇರ್ಪಡಿಸಿದ ನಂತರ ಶೇಂಗಾದ ಜೊತೆಯಲ್ಲಿ ಅದರ ಎಲೆ ಕಲೆತಿರುತ್ತದೆ. ಮತ್ತು ಕಸ ಸೇರಿಕೊಂಡಿರುತ್ತದೆ. ಇದನ್ನು ಸ್ವಚ್ಛ ಮಾಡಲು ಗಾಳಿಯಲ್ಲಿ ಆ ಶೇಂಗಾ ತಪ್ಪಲು ಕಸ ಕಡ್ಡಿ ಗಾಳಿ ದೂರ ಹೋಗುತ್ತದೆ. ಈ ಪುಟ್ಟಿಯಿಂದ ಶೇಂಗಾವನ್ನು ಗಾಳಿಗೆ ತೂರುತ್ತಾರೆ.

ರಾಶಿಪೂಜೆ : ಕಣದಲ್ಲಿ ಧಾನ್ಯವನ್ನು ರಾಶಿ ಮಾಡಿ, ರಾಶಿ ಪೂಜೆ ಮಾಡಿದ ನಂತರವೇ ಧಾನ್ಯವನ್ನು ಚೀಲಗಳಲ್ಲಿ ತುಂಬುತ್ತಾರೆ. ಅದನ್ನು ಸ್ವಲ್ಪ ಬೀಜಕ್ಕೆಂದು ಮನೆಗೆ ಸಾಗಿಸುತ್ತಾರೆ. ಉಳಿದ ರಾಶಿಯನ್ನು ಮಾರುಕಟ್ಟೆಗೆ ತೆಗೆದುಕೊಂಡು ಹೋಗುತ್ತಾರೆ. ರಾಶಿ

ಪೂಜೆಯ ಜೊತೆಗೆ ಹೊಲದ ಪಕ್ಕದಲ್ಲಿ ಇರುವ ದೇವರಿಗೂ ಕಾಯಿ ಒಡೆಯುತ್ತಾರೆ. ಬೆಳೆದ ದವಸದಲ್ಲಿ ಎರಡು ಪುಟ್ಟಿ ಪೂಜಾರಿಗೆ ಕೊಡುತ್ತಾರೆ. ಈ ರೀತಿ ಧಾನ್ಯ ತುಂಬುವುದೆಂದರೆ ಲಕ್ಷ್ಮಿಯನ್ನು ತುಂಬಿಸುವುದುದೆಂದು ತಿಳಿಯುತ್ತಾರೆ. ರೈತನ ಪಾಲಿಗೆ ಧಾನ್ಯಗಳು ಜೀವ ಸಂಪತ್ತಾಗಿರುತ್ತದೆ. ರಾಶಿಯನ್ನು ಅಳೆಯುವಾಗ ಇಬ್ಬರು ರಾಶಿಯನ್ನು ತುಂಬುತ್ತಾರೆ. ರಾಶಿಯನ್ನು ತುಂಬುವಾಗ ತಲೆಗೆ ಟವೆಲು ಅಥವಾ ರುಮಾಲು ಸುತ್ತುಕೊಳ್ಳುತ್ತಾರೆ. ರಾಶಿತುಂಬುವಾಗ ಹುಲ್ಲಿಗೆ ನಮ್ಮವ್ವ ತಾಯಿ ಎಂದು ಹೇಳುತ್ತಾ ತುಂಬುತ್ತಾರೆ ಎಂಬುವುದು ಅವರ ಉದ್ದೇಶವಾಗಿದೆ.

ಕೆಲಸಕ್ಕೆ ಸಮನಾಗಿ ಧಾನ್ಯ : ಹೊಲಗಳಲ್ಲಿ ರಾಶಿ ಮಾಡುವ ಸಂದರ್ಭದಲ್ಲಿ ಕೆಲಸಕ್ಕೆ ಬರುವ ಕೂಲಿ ಹಾಳುಗಳಿಗೆ ಅವರು ಮಾಡುವ ಕೆಲಸಕ್ಕೆ ಸಮನಾಗಿ ಇಲ್ಲವೇ ಕೂಲಿಯ ಜೊತೆಗೆ ಐದು ಬೊಗಸೆ ಧಾನ್ಯವನ್ನು ಪ್ರತಿ ಹಾಳುಗಳಿಗೂ ನೀಡುತ್ತಾರೆ. ಇದು ಜಾಜ್ಮನಿ ಪದ್ಧತಿಗೆ ಪೂರಕವಾದ ವ್ಯವಸ್ಥೆ ಎಂದು ಹೇಳಬಹುದು. ಜೊತೆಗೆ ಕುಂಬಾರರಿಗೆ, ಬಡಿಗೇರಗೆ, ಚೌರಿಕರಿಗೆ ವರ್ಷದ ಧಾನ್ಯವನ್ನು ನೀಡುವುದು ಇವರಲ್ಲಿ ಇನ್ನು ಜೀವಂತವಾಗಿ ಕಂಡುಬರುತ್ತದೆ. ಒಟ್ಟಾರೆಯಾಗಿ ಹೇಳುವುದಾದರೆ ಇಲ್ಲಿನ ಕೃಷಿ ಪದ್ದತಿ ಯಾವುದೇ ಜಾತಿಯಲ್ಲಿ ಭಿನ್ನತೆ ಮಾಡದೆ ಸಹಕಾರ ತತ್ವದಂತೆ ಕೆಲಸ ಮಾಡುವುದು ಕಂಡುಬರುತ್ತದೆ. ಕೃಷಿ ಪದ್ದತಿ ಹೊಂದಾಣಿಕೆಯ ಕೇಂದ್ರ ಎಂದು ಹೇಳಬಹುದು.

ಗಾದೆ ಮಾತುಗಳು

‘ಅತ್ತೆಗೊಂದು ಕಾಲ ಸೊಸೆಗೊಂದು ಕಾಲ’
‘ಹಾಸಿಗೆ ಇದ್ದಷ್ಟು ಕಾಲುಚಾಚು’
‘ಇಬ್ಬರ ಜಗಳ ಮೂರನೇಯವನಿಗೆ ಲಾಭ’
‘ಇಬ್ಬರ ನ್ಯಾಯ ಒಬ್ಬನಿಗೆ ಆಯ’
‘ತುಂಬಿದ ಕೊಡ ತುಳುಕುವುದಿಲ್ಲ’
‘ಹನಿಹನಿ ಕೂಡಿದರೆ ಹಳ್ಳ ತೆನಿತೆನಿ ಕೂಡಿದರೆ ಬಳ್ಳ’
‘ತಾಳಿದವ ಬಾಳಿಯಾನು’
‘ಬೆಕ್ಕಿಗೆ ಆಟ, ಇಲಿಗೆ ಪ್ರಾಣ ಸಂಕಟ’
‘ಕತ್ತೆ ಮರೀಲಿ ಚಂದ, ಅತ್ತೆ ಹೊಸದರಲ್ಲಿ ಚೆಂದ್ಲ’
‘ಸಾವಿರ ಕುದರಿ ಸರದಾರ ಮನೆಯ ಹೆಂಡತಿ ಪಿಂಜಾರ’
‘ಗೂಳಿ ಬಿದ್ರೆ ಆಳಿಗೊಂದು ಕಲ್ಲು’
‘ಮನೆಕಟ್ಟಿ ನೋಡು, ಮದುವೆ ಮಾಡಿ ನೋಡು’
‘ಅಡಿಕೆಗೆ ಹೋದ ಮಾನ ಆನೆಕೊಟ್ಟರು ಬಾರದು’
‘ತನ್ನ ಬಿಟ್ಟು ದೇವರಿಲ್ಲ ಮಣ್ಣು ಬಿಟ್ಟು ಮಡಕೆಯಿಲ್ಲ’

'ಮಾವ ಕೊಟ್ಟಿದ್ದು ಮನೆತನಕ ದೇವರು ಕೊಟ್ಟಿದ್ದು ಕೊನೆತನಕ'
'ತಾನೊಂದು ಬಗೆದರೆ ದೈವವೊಂದು ಬಗೆಯಿತು.'
'ಹುಟ್ಟಿಸಿದ ದೇವರು ಹುಲ್ಲು ಮೇಯಿಸುವುದಿಲ್ಲ'
'ಸಂಕಟ ಬಂದಾಗ ವೆಂಕಟರಮಣ'
'ಸೌತಿಸಣ್ಣವಳಾದರೂ ಪಾಲು ಸಣ್ಣದಲ್ಲ'
'ಗುಣ ನೋಡಿ ಗೆಳೆತನ ಮಾಡು'
'ಮಳೆ ಬಂದ ಮರುದಿನ ಬೆಳೆ ನೋಡಬೇಕು, ಅಳಿಯ ಬಂದ ಮರುದಿನ ಮಗಳನ್ನು ನೋಡು.'
'ಕೊಂಕಣ ಸುತ್ತಿ ಮೈಲಾರಕ್ಕೆ ಬಂದರು'
'ಹೆಸರಿಗೆ ಹಾಲಪ್ಪ ಕುಡೀಲಿಕ್ಕೆ ನೀರಿಲ್ಲ'
'ಎಪ್ಪತ್ತು ಎಕರೆ ಇದ್ದರೂ ಒಪ್ಪಿತ್ತಿಗೆ ಇಲ್ಲ'
'ಅಲ್ಪನಿಗೆ ಐಶ್ವರ್ಯ ಬಂದ್ರೆ ಅರ್ಧ ರಾತ್ರೀಲಿ ಕೊಡೆ ಹಿಡಿದುಕೊಂಡ'
'ಒಲ್ಲದ ಗಂಡನಿಗೆ ಮೋಸರಲ್ಲಿ ಕಲ್ಲು'
'ಜಟ್ಟಿ ನೆಲಕ ಬಿದ್ದರೂ ಮೀಸೆ ಮಣ್ಣಾಗಲಿಲ್ಲವಂತೆ'
'ಮಕ್ಕಳನ್ನು ಕಟ್ಟಿಕೊಂಡು ಜಾತ್ರೆಗೆ ಹೋಗಬಾರದು, ಹೆಂಡತಿನ ಕಟ್ಟಿಕೊಂಡು ಮದುವೆಗೆ ಹೋಗಬಾರದು'
'ಗಂಡ ಹೆಂಡಿರ ಜಗಳದಲ್ಲಿ ಕೂಸು ಬಡವಾಯ್ತು'
'ಕಳ್ಳನ ಜೀವ ಹುಳ್ಳಹುಳ್ಳಗ'
'ಆಯಾನೋಡಿ ಪಾಯ ಹಾಕು'
'ಬಣ್ಣ ಉಳಿಲಿಲ್ಲ ಗುಣ ತಿಳಿಲಿಲ್ಲ'
'ಮಲಗಾಕೋಗಿ ಮಗ ಕೆಟ್ಟ, ಬೀಸಾಕೋಗಿ ಸೊಸೆ ಕೆಟ್ಲು'
'ಕೈಲಾಗದವ ಮೈಯೆಲ್ಲ ಪರಚಿಕೊಂಡ'
'ಸೂಗೂರಿಗೆ ನೆಂಟ ಬಾಗೂರಿಗೂ ನೆಂಟ'
'ಹೊತ್ತಿರುವಾಗ ಗೊತ್ತು ಸೇರು'
'ಗಂಡಿಗೆ ಚಟ ಇರಬಾರದು ಹೆಣ್ಣಿಗೆ ಹಠ ಇರಬಾರದು'
'ಅಯ್ಯ ಸತ್ತರೆ ಅಮವಾಸ್ಯೆ ನಿಲ್ಲೋದಿಲ್ಲ'
'ಶ್ರೀಮಂತರ ಮನೆಯ ಮದುವೆಗೆ ಹೋಗುಬೇಕು ಬಡವರ ಮನೆಗೆ ಊಟಕ್ಕೆ ಹೋಗಬೇಕು.'
'ಮನಸ್ಸಿನಂತೆ ಮಹಾದೇವ'
'ಗಾದೆ ಬೀದಿಯಲ್ಲಿ ಸಿಕ್ಕುವ ವೇದ'
'ಗಂಡ ಹೆಂಡಿರ ಜಗಳ ಉಂಡು ಮಲಗುವ ತನಕ'

'ಹನ್ನೊಂದು ತಾಸು ನಿಂತು ಇನ್ನೊಂದ ತಾಸಿಗ್ಯಾಕ'

'ಹಳೇ ಗಂಡನ ಪಾದವೇ ಗತಿ'

'ಕಟ್ಟಿಕೊಂಡವಳು ಕಡೆತನಕ ಇಟ್ಟುಕೊಂಡವಳು ಇರೋತನಕ'

'ಬೇಡರ ಸುಗ್ಗಿ ಬೆಲಿಮ್ಯಾಲೆ'

'ಮಳಿಗಾಲದಾಗ ಮನಿ ನೋಡಬಾರದು, ಚಳಿಗಾಲದಾಗ ಹೆಣ್ಣು ನೋಡಬಾರದು ಕೆಲಸ ಇಲ್ಲದವ ಮನಸ ಇಲ್ಲದಾಕಿ ಮಾರಿ ನೋಡತಿದ್ನಂತೆ'

'ಎತ್ತು ಏರಿಗೆ ಎಳೆದರೆ ಕೋಣ ಕೆರೆಗೆ ಎಳೆಯಿತು.'

ಮಳೆಗೆ ಸಂಬಂಧಿಸಿದ ರೈತರ ಆಚರಣೆಗಳು

ಮಳೆ ನಕ್ಷತ್ರಗಳು

"ಮಾನವ ಜೀವನದ ಮೇಲೆ ಅದ್ಭುತ ಪ್ರಭಾವ ಬೀರುವ ಪ್ರಾಕೃತಿಕ ಶಕ್ತಿಗಳ ಪೈಕಿ ಮಳೆಯ ಸ್ಥಾನ ಬಹು ಮುಖ್ಯವಾದುದು. ಸಕಲ ಜೀವಿಗಳಿಗೂ ವರದಾಯಕವಾದ ಹಾಗೂ ಜೀವನ ಪೋಷಕವಾದ ಮಳೆ ಜಗತ್ತಿನೆಲೆಡೆಯೂ ವರದಾಯಕ ಎಂದು ಭಾವಿಸಲಾಗಿದೆ. ಮಳೆ ನೀರಿನ ಒಂದು ಪ್ರಾಕೃತಿ ರೂಪ ಇದಕ್ಕೆ ಜನರಲ್ಲಿ ಪ್ರತ್ಯೇಕವಾದ ಸ್ಥಾನವಿದೆ ಮೋಡ ಕರಗಿ ನೆಲೆ ಸೇರುವ ಮುನ್ನ, ಸುರಿವ ನೀರಿನ್ನು ಮಳೆ ಎಂದು ಕರೆಯುತ್ತಾರೆ. ನೆಲೆ ಸೇರಿದ ನಂತರ ಅದು ಬೇರೆಯದೇ ರೂಪವನ್ನು ಪಡೆದುಕೊಳ್ಳುತ್ತದೆ. ಮಳೆ ಸಮೃದ್ಧಿ ಸಂಕೇತ. 'ಮಳೆಬಂದರೆ ಕೆಡಲ್ಲ ಮಗು ಉಂಡರೆ ಹಾಳಲ್ಲ' ಎಂದು ಈ ಮಾತು ಇಲ್ಲಿನ ಜನರಲ್ಲಿ ಹಾಸುಹೋಕ್ಕಾಗಿ ಕೇಳಿ ಬರುತ್ತದೆ.

ಜನರಲ್ಲಿ ಮಳೆಯನ್ನು ಕುರಿತು ಎರಡು ಹಂತಗಳಿವೆ. ಒಂದು ಮುಂಗಾರು ಮಳೆ ಎರಡು ಹಿಂಗಾರು ಮಳೆ ಈ ಭಾಗದಲ್ಲಿ ಗಟ್ಟಿಯಾಗಿ ಬೇರೂರಿರುವುದು. ಮುಂಗಾರು ಮಳೆ ಜನರು ಹೆಚ್ಚಾಗಿ ಈ ಮಳೆಯನ್ನೇ ಆಧರಿಸಿ ತಮ್ಮ ವಿವಿಧ ಬೆಳೆಗಳ ಕುರಿತು ಮಳೆಯ ನಕ್ಷತ್ರ ಲೆಕ್ಕಚಾರದಲ್ಲಿ ಯಾವ ಮಳೆ ಯಾವ ಬೆಳೆ ಬೆಳೆಯಬೇಕು ಎನ್ನುವ ಮುನ್ನಾಲೋಚನ ಕ್ರಮದಲ್ಲಿ ಅವರ ಜ್ಞಾನದ ಹಂದರವನ್ನು ನಾವು ಕಾಣಬಹುದು. ರಾಯಚೂರು ಜಿಲ್ಲೆ ಮುಖ್ಯವಾಗಿ ಕೃಷಿಯನ್ನು ಆಧರಿಸಿದ ಜಿಲ್ಲೆ, ಕೃಷಿಯೇ ದೇಶದ ಬೆನ್ನೆಲುಬು ಎಂದೆಲ್ಲ ಹೇಳುವುದನ್ನು ಕೇಳಿದ್ದೇವೆ. ಕೃಷಿ ಕಸುಬು ಮತ್ತು ಜೀವನದ ಅವಿಭಾಜ್ಯ ಅಂಗ. ಕೃಷಿಗೆ ಬಹುತೇಕವಾಗಿ ಬೇಕಾಗಿರುವುದು ನೀರು ಅನೇಕ ಕೃಷಿ ಕುಟುಂಬಗಳು ಮಳೆಯನ್ನೇ ಅವಲಂಬಿಸಿರುವುದರಿಂದ ಈ ಮುಂಗಾರ ಹನಿಗೆ ಜನರು ವಿಶೇಷವಾಗಿ ಅವಲಂಬನೆಯಾಗಿರುವುದರ ಜೊತೆಗೆ ಅದನ್ನು ತಮ್ಮ ಅದಿದೈವಗಳಲ್ಲಿ ಒಂದೆಂದು ಪೂಜಿಸುತ್ತಾ ಬಂದಿದ್ದಾರೆ."[೧೬]

ಈ ವಸಂತ (ಯುಗಾದಿ) ಪಾಲ್ಗುಣ ಬಹುಳ ಅಮವಾಸೆಯ ದಿನ ಹಳೆಯ ವರ್ಷಕ್ಕೆ ವಿದಾಯ ಹೇಳಿ ಮರುದಿನ ಚೈತ್ರ ಶುದ್ದ ಪ್ರತಿ ಪಡೆಯೋದು ಹೊಸ ವರ್ಷವನ್ನು

ಸ್ವಾಗತಿಸುತ್ತೇವೆ. ರೈತರಿಗೆ ಯುಗಾದಿ ಹಬ್ಬವೇ ಹೊಸ ವರ್ಷವಾಗಿದೆ. ನಾವೀಗ ಇರುವ ಕಲಿಯುಗದ ಆದಿಯ ದಿನವು ಯುಗಾದಿಯೇ. ಕೃತಯುಗ ಆರಂಭವಾದದ್ದು ಕಾರ್ತೀಕ ಕರ್ಕ ನವಮಿಯ ವೈಶಾಖ ಶುಕ್ಲ ತೃತೀಯ ತ್ರೇತಾಯುಗ ಮೊದಲ ದಿನ ದ್ವಾಪರದ ಆರಂಭ ಮಾಘ ಬಹುಳ ಅಮವಾಸೆ ಕಲಿಯುಗ ಆರಂಭ ಚೈತ್ರ ಶುಕ್ಲ ಪಾಡ್ಯ ಹಾಗಾಗಿ ನಮ್ಮ ಯುಗದ ಆದಿ ದಿನ ಈ ಯುಗಾದಿ ಅವರ್ತನ ಶೀಲವಾದ ನಮ್ಮ ಬದುಕಿಗೆ ಯುಗಾದಿ ಮತ್ತು ಮುಂಗಾರು ಮಳೆ ಹರ್ಷದ ಸಂಕೇತವಾಗಿಯೇ ಮೇಳೈವಿಸಿಕೊಂಡು ಬರುತ್ತವೆ. ಅದುವರೆಗೂ ಇದ್ದ ಕಹಿಯನ್ನೆಲ್ಲ ಈ ವರ್ಷಧಾರೆ ಬರುವುದರ ಮೂಲಕ ಕಹಿಯೆಲ್ಲ ಕಳೆದು ನಿರ್ಮಲವಾದ ಬದುಕಿಗೆ ಸಿಹಿಯನ್ನು ಹರ್ಷ, ಸಂತೋಷ, ನೆಮ್ಮದಿಯನ್ನು ತರುವುದರ ಜೊತೆಗೆ ಜೀವನದ ಉಸಿರಾದ ಆಹಾರ ಬೆಳೆಗಳಿಗೆ ಶಕ್ತಿಯಾಗಿ ಬರುತ್ತದೆ. ಅನಂತರ ಮಾನವನ ಬದುಕು ಸುಖಮಯವಾಗಿ ನಡೆಯುತ್ತದೆ. ಸುದೀರ್ಘವಾದ ಅಂದಕಾರ ಮತ್ತು ಶೀತಕಾಲ ಕಳೆದು ಸಂತೋಷ ಪ್ರದವಾದ ವಸಂತದ ಆಗಮನವನ್ನು ಸೂಚಿಸಲು ಯುಗಾದಿ ಮರಳಿ ಬರುತ್ತದೆ. ಇದು ನಿದ್ರಿಸುವ ಭೂತಾಯಿಯನ್ನು ಎಬ್ಬಿಸುವ ಹಬ್ಬ. ಋತುರಾಜ ವಸಂತವನ್ನು ಜತೆಗಿಟ್ಟುಕೊಂಡು ಯುಗಾದಿ ಮೆಲ್ಲ ಮೆಲ್ಲನೆ ಕಾಲಿರಿಸುತ್ತದೆ. ಬರಡು ಶಿಶಿರನಿಗೆ ವಿದಾಯ ಹೇಳಿ, ರಸದ ಚಿಲುಮೆಯೆಸೆದು ವಸಂತ ಕಾಲಿಕ್ಕುತ್ತಾನೆ. ಜೀವದಾನ ಪಡೆದ ಗಿಡ ಮರ ಬಳ್ಳಿಗಳೆಲ್ಲ ದುಂಬಿಗಳ ಝೇಂಕಾರದ ಸಂಗೀತ ಕಚೇರಿ ಜೀವನೋತ್ಸಾಹದ ರಸಮಯ ಒರತೆ ವರಕವಿ ದ.ರಾ.ಬೇಂದ್ರೆಯವರು ಯುಗಾದಿಯ ಆಗಮನದಲ್ಲಿ ಹೊಸತನವನ್ನು ಕಾಣುತ್ತಾರೆ ಅದನ್ನು ಆದರದಿಂದ ಬರಮಾಡಿಕೊಳ್ಳುತ್ತಾರೆ.

ಯುಗ ಯುಗಾದಿ ಕಳೆದರೂ
ಯುಗಾದಿ ಮರಳಿ ಬರುತ್ತಿದೆ
ಹೊಸ ವರುಷಕ್ಕೆ ಹೊಸ ಹರುಷವ
ಹೊಸತು ಹೊಸತು ತರುತ್ತಿದೆ.

"ಸೃಷ್ಟಿ ಪ್ರತಿ ವಸಂತದಲ್ಲಿ ಪುನರ್ಜನ್ಮ ಹೊಂದುವ ಹಿನ್ನೆಲೆಯಲ್ಲಿ ನಿದ್ದೆಗೊಮ್ಮೆ ನಿತ್ಯ ಮರಣ, ಎದ್ದಸಲ ನವೀನ ಜನನ ಪಡೆಯಲಾಗದ ನಮ್ಮ ಅಸಹಾಯಕತೆಗೆ ಕವಿ ಮರಗುತ್ತಾರೆ. ಹೀಗೆ ಯುಗಾದಿಯ ಆಗಮನ ಮುಂಗಾರಿನ ವರುಣನ ಆಗಮನ ಜನರಲ್ಲಿ ಬೇರೆ ಬೇರೆಯಾಗಿ ಕಾಣಲಾಗದು. ಅವರೆಡು ಒಂದೇ ನಾಣ್ಯದ ಎರಡು ಮುಖಗಳಂತೆ ಅವತರಿಸುತ್ತವೆ. ಇದು ಸೃಷ್ಟಿಯ ನಿಯಮ. ಮುಂಗಾರು ಶುರುವಾಗುವುದು ಅಶ್ವಿನಿ ಮಳೆಯೊಂದಿಗೆ ಈ ಮಳೆ ಬಂದು ಹೋದ ಮೇಲೆ ರೈತರು ಹೊಲವನ್ನು ರಂಟೆ ಕುಂಟೆ ಹೊಡೆದು ಹದಮಾಡಿಕೊಂಡು ಮುಂದಿನ ತಯಾರಿಗೆ ಸಜ್ಜಾಗುತ್ತಾರೆ. ಭರಣಿ ಮತ್ತು ಕೃತಿಕಾ ಮಳೆಗೆ ಬಿತ್ತುವ ಕಾರ್ಯದಲ್ಲಿ ತೊಡಗಿಕೊಂಡಿರುತ್ತಾರೆ. ಯಾವಾಗ ಜನರ ಜೀವದುಸಿರಾದ ರೋಹಿಣಿ ಮಳೆ ಕಾಲಿರಿಸುತ್ತಿದ್ದಂತೆ ರೈತರಲ್ಲಿ ಸಂತೋಷ, ಹರ್ಷ,

ಹುಮ್ಮಸ್ಸು ಬುಗ್ಗೆ ಹಿಗ್ಗಿ ಬರುತ್ತದೆ. ಈ ಮಳೆ ರೈತರ ಜೀವನಾಡಿ ತನಗೆ ಬೇಕಾದ ಕಾಳು ಕಡಿಗಳನ್ನು ಬೆಳೆದುಕೊಳ್ಳುತ್ತಾನೆ. ಈ ಮಳೆಯನ್ನು ಕುರಿತು ಒಂದು ಗಾದೆಯಿದೆ ರೋಹಿಣಿ ಮಳೆ ಓಣಿಗೆಲ್ಲಾ ಜೋಳ ಎನ್ನುವ ಗಾದೆ ಮಾತನ್ನು ಅವಲೋಕಿಸಿದಾಗ ಜೋಳ, ಸಜ್ಜಿ, ತೊಗರಿ, ನವಣಿ ಮಡಿಕೆ ಮುಂತಾದ ಫಸಲುಗಳು ಬರುತ್ತವೆ."೧೭

ಮಳೆಗಳನ್ನು ಕುರಿತು ಜನರಲ್ಲಿ ತಮ್ಮದೇ ಆದಂಥ ಕೆಲವು ವಿಶಿಷ್ಟ ಬಗೆಯ ಗಾದೆ ಮಾತುಗಳು (ಉಕ್ತಿಗಳು) ಚಲಾವಣಿಯಲ್ಲಿರುವುದನ್ನು ನಾವು ಗಮನಿಸಬಹುದು. ಅವು ಮಳೆಯ ವಾಸ್ತವ ಸ್ವರೂಪ, ಪರಿಣಾಮ, ಮುನ್ಸೂಚನೆ, ಉಪಯುಕ್ತತೆಗಳ ಬಗ್ಗೆ ಇಲ್ಲಿನ ಜನರು ಪಡೆದುಕೊಂಡ ಅನುಭವವೆಲ್ಲ ಮಡುಗಟ್ಟಿದೆ. ಅನುಭವದಿಂದ ಮೂಡಿ ಬಂದ ಇಂಥ ಗಾದೆಗಳು ಇಲ್ಲಿನ ನಿವಾಸಿಗಳು ವ್ಯವಸಾಯ ವಿಜ್ಞಾನದ ಜೀವಂತ ದಾಖಲೆಗಳು, ಬಿತ್ತನೆಯ ಸಂದರ್ಭದಿಂದ ಹಿಡಿದು ಕೊಯ್ಲು ಆಗುವವರೆಗೆ ಯಾವ ಯಾವ ಮಳೆಯಲ್ಲಿ ಯಾವ ಬೆಳೆ ಹೇಗೆ ಎಂಬ ಬಗ್ಗೆ ಗಾದೆಗಳು ಪ್ರಚಲಿತವಾಗಿದ್ದು ಇವು ನಮ್ಮ ರೈತರ ತುದಿ ನಾಲಿಗೆಯಲ್ಲಿ ಇರುತ್ತವೆ. ಈ ಗಾದೆಗಳನ್ನು ಹೇಳಿದಾಕ್ಷಣ ಯಾವುದೇ ಮಳೆಯ ಸ್ವರೂಪದ ಪರಿಚಯವಾಗಿಬಿಡುತ್ತದೆ. ರೈತರು ಪ್ರತಿಯೊಂದು ಮಳೆಯನ್ನು ಆಯಾ ಕ್ಷೇತ್ರದ ಹೆಸರಿನಿಂದ ಗುರುತಿಸುತ್ತಾರೆ. 'ಅಶ್ವಿನಿ ಮಳೆ ಬಂದ್ರ ಹಸುಗೂಸಿಗೆ ಹಾಲಿಲ್ಲ' ರೋಹಿಣಿ ಮಳಿಗೆ ಓಣೆಲ್ಲ ಜ್ವಾಳ, ಆರಿದ್ರ ಮಳೆ ಆದರಂಗ ಹೀರೇ ಸೊಸೆ ನಡೆದಂಗ, ಪುಷ್ಯನ ಮಳಿ ಹುಷ್ಯಂದ್ರ ಹೋತು, ಸ್ವಾತಿ ಮಳೆ ಹೇತೆನಂದ್ರು ಬಿಡದು, ಉತ್ತರಿ ಮಳಿಗೆ ಹುತ್ತರಿ ಬಿತ್ತರಿ, ಮಾಘ ಮಳಿಗೆ ತಲೆ ತೊಯಿಸಿಕೊಳ್ಳಬಾರದು ನಂಜು ಬರುತ್ತದೆ, ಆಶ್ಲೇಷ ಮಳೆಗೆ ಭೂಮಿಯೆಲ್ಲ ಹಸಿರಾಗುವುದನ್ನು ಸೂಚಿಸಿದರೆ 'ಭರಣಿ ಮಳೆ ಸುರಿದ್ರೆ ಬರಗಾಲ್ದ ಭಯವಿಲ್ಲ' 'ಭರಣಿ ಮಳೆ ಹುಯ್ದರೆ ಧರಣಿಲ್ಲ ಬೆಳೆ' ಎಂಬ ಮಾತುಗಳು ಭರಣಿ ಹಾಗೂ ರೋಹಿಣಿ ಮಳೆಗಳಿಂದ ಸಮೃದ್ಧವಾಗಿ ಬೆಳೆಯಾಗುವುದನ್ನು ಸೂಚಿಸುತ್ತದೆ. ಹಾಗಾಗಿ 'ಸ್ವಾತಿ ಮಳೆ ಹೋದ ಮೇಲೆ ಐತೇನ?' 'ಚಿತ್ತ ಸ್ವಾತಿ ಆದ್ರೆ ಹಿಂಗಾರಿ ಬೆಳೆ ಬಂಗಾರದಂಗ', 'ಸ್ವಾತಿ ಮಳೆಯಾದ್ರೆ ಹುಲ್ಲು ಹೂಡೆ', 'ಸ್ವಾತಿ ಮಳೆಯಾದ್ರೆ ಚಾಪೆ ಕೆಳಗಿನದೂ ತೆನೆಯಾಗ್ತದೆ', ಹಸ್ತ ಮಳೆ ಸಮೃದ್ಧವಾಗಿ ಬೀಳುವಂಥ ಮಳೆ ಈ ಮಳೆ ತಪ್ಪಿದರೆ ಕಷ್ಟ ತಪ್ಪಿದಲ್ಲ.

ಮಳೆಯ ನಕ್ಷತ್ರಗಳು ಮತ್ತು ವಾಹನ ಮಳೆಯ ಪ್ರಮಾಣ ಈ ಕೆಳಗಿನಂತಿವೆ.

ಮಳೆಯ ನಕ್ಷತ್ರ	**ವಾಹನ**	**ಮಳೆ**
ಅಶ್ವಿನಿ	ಎಮ್ಮೆ	ಸಾಧಾರಣ ಮಳೆ
ಭರಣಿ	ಆನೆ	ಉತ್ತಮ ಮಳೆ
ಕೃತಿಕ	ನವಿಲು	ಸಾಧಾರಣ ಮಳೆ
ರೋಹಿಣಿ	ಕತ್ತೆ	ಉತ್ತಮ ಮಳೆ

ಮೃಗಶಿರ	ಕಪ್ಪೆ	ಉತ್ತಮ ಮಳೆ
ಆರಿದ್ರಾ	ಇಲಿ	ಉತ್ತಮ ಮಳೆ
ಪುನರ್ವಸು	ನರಿ	ಉತ್ತಮ ಮಳೆ
ಪುಷ್ಯ	ನವಿಲು	ಉತ್ತಮ ಮಳೆ
ಆಶ್ಲೇಷ	ಆನೆ	ಉತ್ತಮ ಮಳೆ
ಮಘ	ಕಪ್ಪೆ	ಉತ್ತಮ ಮಳೆ
ಹುಬ್ಬ	ಕತ್ತೆ	ಸಾಧಾರಣ ಮಳೆ
ಉತ್ತರ	ಕುದುರೆ	ಉತ್ತಮ ಮಳೆ
ಹಸ್ತ	ಇಲಿ	ಉತ್ತಮ ಮಳೆ
ಚಿತ್ತ	ಕತ್ತೆ	ಉತ್ತಮ ಮಳೆ
ಸ್ವಾತಿ	ಇಲಿ	ಉತ್ತಮ ಮಳೆ
ವಿಶಾಖ	ಇಲಿ	ಉತ್ತಮ ಮಳೆ

ಪ್ರತಿವರ್ಷ ಮಳೆವಾಹನ ಬದಲಾವಣೆಯಾಗುತ್ತವೆ. ಮೃಗಶಿರ ಮಳೆಯಿಂದಾಗಿ ಭೂಮಿಯ ವತಾವರಣಾ ಬದಲಾವಣೆ ಆಗುತ್ತದೆ. ಭೂಮಿ ಮತ್ತು ಸೂರ್ಯ ಅಂತರ ಮೃಗಶಿರ ಕಾಲಕ್ಕೆ ಭೂಮಿ ಮತ್ತು ಸೂರ್ಯ ನಡುವಿನ ಅಂತರ ಹೆಚ್ಚಿಗೆ ಆಗುತ್ತದೆ. ಇದರಿಂದ ಬಿಸಿಲ ತಾಪ ಕಡಿಮೆ ಆಗುತ್ತದೆ.

ಅಡಿಟಿಪ್ಪಣಿಗಳು

೧. ಲೋಕೇಶ್ ಜಿ.ಎಂ, ೨೦೧೩, ಮ್ಯಾಸ ನಾಯಕರ ಹಟ್ಟಿಗಳ ಚಾರಿತ್ರಿಕ ಅಧ್ಯಯನ, ಪು.ಸಂ. ೨೧.

೨. ಅದೇ, ಪು.ಸಂ. ೩೨

೩. ಎಂ.ಗುರುಲಿಂಗಯ್ಯ, ೨೦೦೫, ಕರ್ನಾಟಕದ ಗೊಲ್ಲಸಮುದಾಯ, ಪು.ಸಂ. ೩೦.

೪. ಅದೇ, ಪು.ಸಂ. ೩೨

೫. ಶಿವಾನಂದ ಕೆಳಗಿನಮನಿ, ೨೦೦೫, ಸುವರ್ಣನಗರಿ ಸುಣಕಲ್ಲ ಬಿದರಿ ಒಂದು ಮಾದರಿ ಗ್ರಾಮ–ಅಧ್ಯಯನ, ಪು.ಸಂ.೧೮

೬. ಎಂ.ಗುರುಲಿಂಗಯ್ಯ, ೨೦೦೮, ಕಾಡುಗೊಲ್ಲ, ಪು.ಸಂ. ೨೬

೭. ಲೋಕೇಶ್ ಜಿ.ಎಂ, ೨೦೧೩, ಮ್ಯಾಸ ನಾಯಕರ ಹಟ್ಟಿಗಳ ಚಾರಿತ್ರಿಕ ಅಧ್ಯಯನ, ಪು.ಸಂ. ೩೮

೮. ಲಕ್ಕಪ್ಪಗೌಡ ಎಚ್.ಜೆ. ೨೦೦೦, ಕರ್ನಾಟಕದ ಬುಡಕಟ್ಟುಗಳು ಸಂ–೨, ಪು.ಸಂ. ೩೨೨

೯. ಜಗದೀಶ ಕುಮಾರ್, ೨೦೦೯, ಬೇಡ ಸಮುದಾಯದ ಮಹಿಳೆ, ಪು.ಸಂ.೧೮

೧೦. ಅದೇ, ಪು.ಸಂ.೨೨

೧೧. ಶಂಕರರಾವ್ ಚ.ನ. ೨೦೧೧, ಸಮಾಜಶಾಸ್ತ್ರ ದರ್ಶನ, ಪು.ಸಂ.೮೪೧

೧೨. ಚಿನ್ನಸ್ವಾಮಿ ಸೋಸಲೆ, ೨೦೦೪, ನಮ್ಮ ಗ್ರಾಮಗಳು ಅಂದು ಇಂದು ಪು.ಸಂ.೨೩

೧೩. ಅದೇ, ಪು.ಸಂ. ೨೪

೧೪. ಅದೇ, ಪು.ಸಂ. ೨೫

೧೫. ಅಂಕನಹಳ್ಳಿ ಪಾರ್ಥ, ೨೦೦೮, ರಾಮನಗರ ಒಂದು ಸಾಂಸ್ಕೃತಿಕ ಅಧ್ಯಯನ, ಪು.ಸಂ. ೨೯೬

೧೬. ರಾಮಣ್ಣ ಹವಳೆ (ಸಂ), ೨೦೧೦, ಮುನ್ನೂರು ಮುಂಗಾರು, ಪು.ಸಂ. ೧೫೩

೧೭. ಅದೇ, ಪು.ಸಂ. ೧೫೪

ಅಧ್ಯಾಯ ನಾಲ್ಕು

ಸಮುದಾಯಗಳ ಸ್ಥೂಲ ಪರಿಚಯ

೪.೧. ಬೇಡ ಸಮುದಾಯದ ಪರಿಚಯ

ಪೌರಾಣಿಕ ಹಿನ್ನೆಲೆ

ಚಾರಿತ್ರಿಕ ಹಿನ್ನೆಲೆ

ಸಮುದಾಯ ಆಚರಣೆಗಳು

ವಿಧಿ–ನಿಷೇಧ ನಂಬಿಕೆಗಳು

ವೈದ್ಯ ಪದ್ಧತಿಗಳು

೪.೨. ಕುರುಬ ಸಮುದಾಯದ ಪರಿಚಯ

ಪೌರಾಣಿಕ ಹಿನ್ನೆಲೆ

ಸಮುದಾಯದ ಒಳ ಪಂಗಡಗಳು

ಸಮುದಾಯದ ಧಾಮಿಕ ಆಚರಣೆಗಳು

ಧಾರ್ಮಿಕ ಆಚರಣೆಗಳು

೪.೩. ಕಬ್ಬಲಿಗ ಸಮುದಾಯದ ಪರಿಚಯ

ಪೌರಾಣಿಕ ಹಿನ್ನೆಲೆ

ಜೀವನಾವರ್ತನ ಆಚರಣೆಗಳು

ಧಾರ್ಮಿಕ ಆಚರಣೆಗಳು

ಅಧ್ಯಾಯ ನಾಲ್ಕು

ಸಮುದಾಯಗಳ ಸ್ಥೂಲ ಪರಿಚಯ

೪.೧. ಬೇಡ ಸಮುದಾಯದ ಪರಿಚಯ

ಬೇಟೆಯನ್ನೇ ಬದುಕಿನ ಭಾಗವಾಗಿಸಿಕೊಂಡ ಬುಡಕಟ್ಟು ಸಮುದಾಯವೇ ಬೇಡರು ಈ ಸಮುದಾಯಕ್ಕೆ ನಮ್ಮಲ್ಲಿ ವರ್ಣರಂಜಿತ ಇತಿಹಾಸ ಇದೆ. ಕರ್ನಾಟಕದಲ್ಲಿ ಬೇಡ, ನಾಯಕ, ವಾಲ್ಮೀಕಿ ಇತ್ಯಾದಿ ಹೆಸರುಗಳಿಂದ ಗುರುತಿಸಲ್ಪಡುವ ಈ ಸಮುದಾಯವನ್ನು ಬುಡಕಟ್ಟು ನೆಲೆಯಲ್ಲಿ ಪರಿಶೀಲಿಸುವುದು ಇಲ್ಲಿಯ ಪ್ರಧಾನ ಉದ್ದೇಶವಾಗಿದೆ. ಕುರುಬರು ಮತ್ತು ಬೇಡರು ಬಹುಶಃ ಬಹು ಪುರಾತನ ಕಾಲದಿಂದ ಕರ್ನಾಟಕದ ತುಂಬೆಲ್ಲ ವಾಸ ಮಾಡುತ್ತಿರುವುದು ಕಂಡುಬರುತ್ತದೆ. ಸದ್ಯ ಚಿತ್ರದುರ್ಗ, ಬೆಳಗಾವಿ, ತುಮಕೂರು ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಹೆಚ್ಚಾಗಿಯೂ ಬಳ್ಳಾರಿ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿಯೂ ಕಂಡುಬರುತ್ತಾರೆ. ಗುಡ್ಡದ ಸಾಲುಗಳ ಒತ್ತರಿನಲ್ಲಿರುವ ಹಲವಾರು ಊರುಗಳು ಈಗಲೂ ಸಂಪೂರ್ಣ ಬೇಡ ಸಮುದಾಯದವರೆ ವಾಸವಾಗಿರುವ ಹಳ್ಳಿಗಳಾಗಿವೆ. ಬೇಡರು ಕಾಲಗತಿಯಲ್ಲಿ ಬುಡಕಟ್ಟಿನ ಅನನ್ಯತೆಯನ್ನು ಉಳಿಸಿಕೊಂಡಿದ್ದಾರೆ. ಇತ್ತೀಚಿನ ಜನಗಣತಿಯ ಪ್ರಕಾರ ಕರ್ನಾಟಕ ರಾಜ್ಯದಲ್ಲಿ ವೀರಶೈವರು, ಒಕ್ಕಲಿರು, ಕುರುಬರ ತರುವಾಯದ ಸ್ಥಾನ ಬೇಡ ಸಮುದಾಯಕ್ಕೆ ಸಲ್ಲುತ್ತದೆ. ಕುರುಬರಿಗೂ ಬೇಡರಿಗೂ ಸಾಮ್ಯವೇನೆಂದರೆ ಕುರುಬರು ಶಾಂತರು, ಬೇಡರು ಉಗ್ರ ಸ್ವಭಾವದವರು. ಕುರುಬರಿಗೆ ಮಾಂಸಾಹಾರದಲ್ಲಿ ವಿಶೇಷ ಪ್ರೀತಿ ಇರುವುದಿಲ್ಲ. ಬೇಡರು ಕಾಡುಹಂದಿ, ಉಡಾ, ನವಿಲು, ಕೌಜುಗ, ಬುರಲಿ ಇಂಥ ಪ್ರಾಣಿ ಪಕ್ಷಿಗಳನ್ನು ಸಹ ತಿನ್ನುತ್ತಾರೆ. ಆದರೆ ಅರಣ್ಯಕಾಯ್ದೆ ಜಾರಿಗೆ ಬಂದಾಗ ಬೇಟೆಯಾಡುವುದನ್ನು ನಿಲ್ಲಿಸಿರುವರು. ಆದಿ ಮಾನವನ ಎಲ್ಲಾ ಅವಸ್ಥೆಗಳನ್ನು ಹೊತ್ತುಕೊಂಡು ಕಾಡು-ಮೇಡು ಗುಡ್ಡಗಾಡುಗಳನ್ನೇ ತಮ್ಮ ವಾಸಸ್ಥಳ ಮಾಡಿಕೊಂಡು ಕ್ರೂರ ಪ್ರಾಣಿಗಳ ಮಧ್ಯೆ ಬಾಳಿದವರು. ಇಂಥ ಬೇಡ ಸಮುದಾಯದ ನಂತರ ರೋಮಾಂಚನ ಹೆಜ್ಜೆಗಳು ಎಲ್ಲಿಂದ ಆರಂಭವಾಗುತ್ತವೆ ಎಂಬುದಕ್ಕೆ ಹಲವಾರು ವಿದ್ವಾಂಸರು ಅನೇಕ ವಾದಗಳನ್ನು ಮಂಡಿಸಿದ್ದಾರೆ.

ಪೌರಾಣಿಕ ಹಿನ್ನೆಲೆ

ಆದಿ ಮೂಲವಾದ ಭಗವಂತನು ಬೇಡರ ಚುಂಚು ಲಕ್ಷ್ಮಿಯನ್ನು ವಿವಾಹವಾಗುವ ಮೂಲಕ ಬೇಡರ ವಂಶವನ್ನು ಬೆಳೆಯಿಸಿದನೆಂಬುದಾಗಿ ಹೇಳುತ್ತಾರೆ. ಅದರಂತೆ ಮನುವಿನ ಏಳನೇಯ ತಲೆಯವನಾಗಿ ಚಂದ್ರವಂಶದಲ್ಲಿ ಕಾರ್ತಿವೀರ್ಯಾರ್ಜುನ ಹುಟ್ಟಿದ. ಈತನು ಹೆಯ ರಾಜವನ್ನು ಆಳುತ್ತಿರುವಾಗ ವೈಷ್ಣವ ಯಾಗಾದಿಗಳನ್ನು ಮಾಡುತ್ತಿದ್ದ. ಇದೇ ಸಂದರ್ಭದಲ್ಲಿ ಜಮದಗ್ನಿ ಈತನಿಂದ ಹತನಾದನು. ಇದರಿಂದ ಕುಪಿತನಾದ ಪರಶುರಾಮ ಕಾರ್ತಿವೀರ್ಯಾರ್ಜುನ ಹಾಗೂ ಅವನ ಮಕ್ಕಳನ್ನು ಕೊಂದು ಕ್ಷತ್ರಿಯರೆಲ್ಲರನ್ನು ಸದೆ ಬಡಿಯಲು ೨೧ ಬಾರಿ ಭೂಮಿ ಮೇಲೆ ದಂಡಯಾತ್ರೆ ಕೈಗೊಂಡ ಇದರಿಂದ ಬೆದರಿದ ಕ್ಷತ್ರಿಯರೆಲ್ಲ ಕಾಡಿಗೆ ಹೋದರು ಕಾಡುವಾಸಿಗಳಾದರು. ಇವರೇ ಮುಂದೆ ವೇಂದನ್, ವೆಟ್ಟುನ ಎಂದೆಲ್ಲ ಕರೆಯಿಸಿಕೊಂಡರು. ಹಳೆಗನ್ನಡದಲ್ಲಿ ವೇಡರ್, ವೆಂದನ್, ವೇಳರ್, ಬಿಲ್ಲ, ಬೇಂಟಿಯವರ್, ಬೇಂಟಿಕಾರ್ ಎಂಬ ನಾಮಗಳಿಂದ ಕರೆಯುತ್ತಾ ಕ್ಷತ್ರಿಯರಿಗೂ, ಬೇಡರಿಗೂ, ಭಿನ್ನತೆಯಿಲ್ಲವೆಂದು ಕೆಲ ಸಂಶೋಧಕರ ಅಭಿಪ್ರಾಯವಾಗಿದೆ.

ನಮ್ಮ ದೇಶದಲ್ಲಿ ಶಾಸ್ತ್ರ, ಪುರಾಣ, ಪುಣ್ಯ ಕಥೆಗಳಿಗೆ ಭರವಿಲ್ಲ. ಭಾರತೀಯ ಸಂಸ್ಕೃತಿ ನಿಂತಿರುವುದೇ ಇವುಗಳ ತಳಹದಿಯ ಮೇಲೆ. ಅನಾದಿ ಕಾಲದಿಂದಲೂ ನಡೆದುಬಂದ ನಮ್ಮ ಸಂಸ್ಕೃತಿ ಬರುಬರುತ್ತಾ ಮರದಿಂದ ಟಿಸಲೊಡೆದ ರಂಬೆಕೊಂಬೆಗಳಂತೆ ವಿಸ್ತಾರಗೊಳ್ಳುತ್ತಾ ಬಂದವು. ಈ ನಿಟ್ಟಿನಲ್ಲಿ ವೃತ್ತಿ ಪ್ರವೃತ್ತಿಗಳಿಗನುಗುಣವಾಗಿ ಕೆಲವು ಸಮುದಾಯಗಳು ಹುಟ್ಟಿಕೊಂಡವು. ಈ ಕುಲದಲ್ಲಿ ಹುಟ್ಟಿ, ಬೆಳೆದು, ಬಾಳಿ ಬೆಳಗಿದ ಕೆಲವರನ್ನು ಪೂಜ್ಯನೀಯ ವ್ಯಕ್ತಿಗಳೆಂದು ಗೌರವಿಸಿ, ನಾವು ಗುರುತಿಸಿಕೊಂಡಿದ್ದೇವೆ. ಇಂತವರಲ್ಲಿ ಪ್ರಮುಖವಾಗಿ ತ್ರೇತ್ರಾಯುಗದಲ್ಲಿ ಸದ್ಬುದ್ಧಿ, ಸದ್ಗುಣ, ಸಚಾರಿತ್ರ್ಯವನ್ನು ಹೊಂದಿದ ಶ್ರೀರಾಮನ ಪರಮ ಸ್ನೇಹಿತ ಬೇಡರ ದೊರೆ ಗುಹಾ. ಅದೇ ರೀತಿಯಾಗಿ ಈ ಯುಗದಲ್ಲಿ ಪಂಪನದಿಯ ಪ್ರದೇಶದ ದಟ್ಟವಾದ ಘೋರಾರಣ್ಯವಾಗಿತ್ತು. "ಅಲ್ಲಿನ ಬೇಡರ ಗುಂಪು ನಿತ್ಯಕರ್ಮ ಬೇಟೆಯಾಡುವುದು ಮುಖ್ಯ ಕಸುಬಾಗಿತ್ತು. ಈ ಗುಂಪಿಗೆ ದಂಡನಾಯಕನು ಇದ್ದ. ಈತನಿಗೆ ಶಬರಿ ಎಂಬ ಹೆಣ್ಣು ಮಗುವಿತ್ತು. ತಾಯಿ ಬಾಲ್ಯದಲ್ಲಿಯೇ ಮರಣ ಹೊಂದಿದ್ದಳು. ತಾಯಿಯ ಮರಣದಿಂದ ಶಬರಿ ಮನಸ್ಸಿನ ಮೇಲೆ ಹುಟ್ಟು ಸಾವು ಕಷ್ಟ-ಸುಖಗಳ ಜ್ಞಾನ ಮೂಡಿಬಂದಿತ್ತು. ಈ ಲೌಕಿಕ ಜೀವನವು ಸಾವು ನೋವುಗಳಿಂದ ಕೂಡಿರುತ್ತದೆ ಎಂದು ಮನಗಂಡಳು. ತನ್ನ ಬಂದುಗಳಿಗೆ ಬೇಟೆಯಾಡಿ ಪ್ರಾಣಿ ಪಕ್ಷಿಗಳನ್ನು ಕೊಲ್ಲುವುದು ಸರಿಯಲ್ಲ ಎಂದು ತಿಳಿಸಿದಳು."[೧] ತಮ್ಮಂತೆಯೇ ಎಲ್ಲಾ ಜೀವಿಗಳು ಬದುಕುವ ಆಸೆ ಹೊಂದಿರುತ್ತವೆ. ಅವುಗಳನ್ನು ಬೇಟೆಯಾಡಬೇಡಿ ಎಂದು ತಮ್ಮ ಗುಂಪಿಗೆ ತಿಳಿಸಿದಳು. ಮುಂದೆ ಆ ಗುಂಪಿನವರು ಹಣ್ಣು ಹಂಪಲು ಗೆಡ್ಡೆ ಗೆಣಸುಗಳನ್ನು, ಆಹಾರಕ್ಕೆ ಬೇಕಾದ ವಿವಿಧ ಬಗೆಯ ಧಾನ್ಯಗಳನ್ನು ಬೆಳೆಯುವಂತೆ ಸಲಹೆ ಮಾಡಿ ತಾನು ಮುಂದಾದಳು.

ಇತ್ತ ಶಬರಿಗೆ ಪ್ರಾಪ್ತ ವಯಸ್ಸು ಬಂದಾಗ ಅತಿ ರೂಪವತಿ ಕಾಡಿನ ವನದೇವತೆಯು ಎಂಬಂತೆ ಬೆಳೆದಳು. ಬೆಳೆದ ಮಗಳಿಗೆ ತನ್ನ ತಂದೆ ಶಬರಿಯ ಸೋದರ ಮಾವನಿಗೆ ಮದುವೆ ಮಾಡಿಕೊಡಲು ಮುಂದಾದನು. ಮದುವೆಯ ಮೊದಲನೆಯ ದಿನ ತನ್ನ ಬಂಧು ಭಾಂದವರಿಗೆ ಮಾಂಸದ ಊಟ ಏರ್ಪಾಡಾಗಿತ್ತು. ರಾತ್ರಿ ಶಬರಿಯು ಅಲ್ಲಿನ ಸಡಗರದಲ್ಲಿ ಆ ಮಾಂಸದ ಊಟಕ್ಕೆ ಕೊಂದ ಪ್ರಾಣಿ ಪಕ್ಷಿಗಳ ರಾಶಿಗಳನ್ನು ನೋಡಿ ಮನನೊಂದು ದೇವರಲ್ಲಿ ಪ್ರಾರ್ಥನೆಮಾಡಿ ಇಂದಿನಿಂದ ನನ್ನ ಯೌವ್ವನ ಕುರೂಪಿಯಾಗಲೆಂದು ಭಗವಂತನನ್ನು ಪ್ರಾರ್ಥಿಸಿ ತನ್ನ ದೇಹದ ವ್ಯಾಮೋಹ ತ್ಯಜಿಸಿ, ಉಪವಾಸ ನಿಯಮಗಳನ್ನು ಪಾಲಿಸಿ ಸಾತ್ವಿಕಳಂತೆ ಭಕ್ತಿ ಮಾರ್ಗವನ್ನು ಹಿಡಿದಳು. ಆಗ ಆ ಶರೀರವಾಣಿಯೊಂದು ನುಡಿಯಿತು. ಇಂದಿನಿಂದ ನೀನು ಶ್ರೀಮನ್ನರಾಯಣನಾದ ರಾಮನು ಜಗದ ರಕ್ಷಕನು ಬರುತ್ತಾನೆ. ಆಗ ನಿನಗೆ ಮುಕ್ತಿ ದೊರೆಯುತ್ತದೆ ಎಂದಾಗ ಶಬರಿಯು ದಕ್ಷಿಣ ಭಾರತದ ಕರ್ನಾಟಕದಲ್ಲಿ ಈಗಿನ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಆನೆಗುಂದಿ ಮುಂದೆ ತುಂಗಾಭದ್ರಾ ನದಿಗೆ ಪಂಪಾನದಿ ಸೇರುವ ಪ್ರದೇಶವಾದ ಕಿಷ್ಕಿಂದ ಪರ್ವತದ ಪಕ್ಕದ ಸಮೀಪದಲ್ಲಿ ಒಂದು ಕುಟೀರ ಕಟ್ಟಿಕೊಂಡು ನಿತ್ಯ ಕರ್ಮಗಳನ್ನು ಆಚರಿಸುತ್ತಾ ಶ್ರೀರಾಮನ ಆಗಮನವನ್ನು ಎದುರು ನೋಡುತ್ತಾ ಹಣ್ಣು ಹಂಪಲುಗಳನ್ನು ಶ್ರೀರಾಮನಿಗೆ ಅರ್ಪಿತವಾಗಲಿ ಎಂದು ದಿನನಿತ್ಯ ಕಾಯುತ್ತಿದ್ದಳು. "ಆಯೋದ್ಯೆಯ ಚಕ್ರವರ್ತಿ ದಶರಥನು ತನ್ನ ಮಡದಿ ಕೈಕೆಗೆ ಕೊಟ್ಟ ವರಗಳಿಗೆ ಅನುಸಾರ ಶ್ರೀರಾಮನು ಸೀತೆ, ಲಕ್ಷ್ಮಣನೊಡನೆ ವನವಾಸಕ್ಕೆ ತೆರಳಿದ. ಇದೇ ಸಂದರ್ಭದಲ್ಲಿ ಸೀತಾದೇವಿಯನ್ನು ರಾವಣನು ಅಪಹರಿಸಿಕೊಂಡು ಹೋಗುವಾಗ ಕಿಷ್ಕಿಂದೆಯ ಶ್ರೀಕೋದಂಡರಾಮ ದೇವಾಲಯದೆದುರು ಸೀತೆಯ ಸೆರಗು ಎಂದು ತೋರಿಸುವ ಸೀತೆಯ ರೀತಿಯ ಉದ್ದವಾದ ಬಿಳಿರೇಖಾ ಚಿತ್ರಗಳಂತೆ ಕಾಣುವ ರೂಪವಿದೆ. ಇದು ಶಬರಿಯ ಆಶ್ರಯಕ್ಕೆ ಹತ್ತಿರವಿದೆ ಸೀತಾನ್ವೆಷೆಗಾಗಿ ರಾಮ ಲಕ್ಷ್ಮಣರು ಕಿಷ್ಕಿಂದೆಗೆ ಬಂದಾಗ ಶಬರಿ ತನ್ನ ಕುಟೀರದಲ್ಲಿ ಕುಳ್ಳಿರಿಸಿ ರಾಮ ಲಕ್ಷ್ಮಣರಿಗೆ ಹಣ್ಣು ಹಂಪಲುಗಳನ್ನು ಉಣಬಡಿಸಿದಳು. ಆಗ ಶಬರಿ ಶ್ರೀರಾಮನನ್ನು ದಯಾಮಯಿಯಾಗಿ ರಾಮನಿಗೆ ಮುಕ್ತಿಯನ್ನು ಕೊಡು ಎಂದು ತನ್ನ ತಪ್ಪಸ್ಸು ಶಕ್ತಿಯಲ್ಲಿ ಶ್ರೀರಾಮನಲ್ಲಿ ವಿಲೀನಗೊಳಿಸಿ ಆತನನ್ನು ಚೇತನಗೊಳಿಸಿ ಕೊನೆ ಉಸಿರೆಳೆದು ಹುತಾತ್ಮಳಾದಳು."[೨] ಇದು ರಾಮಾಯಣದಲ್ಲಿ ಕಂಡುಬರುವ ಸಂಗತಿಯಾಗಿದೆ. ಗುಹಾ ಮತ್ತು ಶಬರಿ ಬೇಡ ಸಮುದಾಯಕ್ಕೆ ಸೇರಿದವರು ಎಂದು ಇದರಿಂದ ತಿಳಿದುಬರುತ್ತದೆ. ಇದರಿಂದ ತ್ರೇತಾಯುಗದಲ್ಲಿಯೂ ಬೇಡ ಸಮುದಾಯದ ಪ್ರಾತಿನಿಧ್ಯ ಕಂಡುಬರುತ್ತದೆ. ಭಾರತ ದೇಶದ ಮೊದಲ ಮಹಾಕಾವ್ಯ ರಾಮಾಯಣ. ಈ ಗ್ರಂಥವನ್ನು ರಚಿಸಿದವನು ಬೇಡನಾದ ವಾಲ್ಮೀಕಿ. ಈತ ಪೂರ್ವಾಶ್ರಮದಲ್ಲಿ ಬೇಟೆಗಾರನಾಗಿದ್ದ ತನ್ನ ಬೇಟೆ ವೃತ್ತಿಯನ್ನು ತ್ಯಾಗಮಾಡಿದನು. ಆ ಮೇಲೆ ರಾಮಾಯಣ ರಚಿಸಿ ಆದಿಕವಿ ಎಂದು ಪ್ರಖ್ಯಾತನಾದನು. ಇವರು ಸಂಸ್ಕೃತ ಸಾಹಿತ್ಯದ ಪ್ರಥಮ ಕವಿಗಳು ಸಮಸ್ತ ಮಾನವ ಕಲ್ಯಾಣಕ್ಕಾಗಿ ರಚಿಸಿದ

ಭಾರತೀಯರ ಪ್ರಥಮ ಮಹಾಕಾವ್ಯ ರಾಮಾಯಣ ಗ್ರಂಥವಾಗಿವೆ. ಈ ಗ್ರಂಥದಲ್ಲಿ ಬಾಲಕಾಂಡ, ಆಯೋದ್ಯಾಕಾಂಡ, ಅರಣ್ಯಕಾಂಡ, ಕಿಷ್ಕಿಂದಕಾಂಡ, ಸುಂದರಕಾಂಡ, ಯುದ್ಧಕಾಂಡ, ಉತ್ತರಕಾಂಡ ಎಂದು ಏಳು ಕಾಂಡಗಳನ್ನಾಗಿ ವಿಭಜಿಸಿಲಾಗಿದೆ. ಈ ಕಥೆಯಲ್ಲಿ ಒಟ್ಟು ೨೪೦೦೦ ಸಾವಿರ ಶ್ಲೋಕಗಳಿವೆ. ಈ ಮಹಾಕಾವ್ಯದಲ್ಲಿ ಚರಿತ್ರೆ ಇದೆ, ಧಾರ್ಮಿಕತೆ ಇದೆ, ನೀತಿ ಇದೆ, ಸತ್ಯ ಸಂದೇಶ ಭಕ್ತಿ ಇದೆ. ಮನುಕುಲಕ್ಕೆ ಮಾರ್ಗದರ್ಶಕವಾಗುವ ತತ್ವಗಳಿವೆ, ಇದು ವ್ಯಕ್ತಿ ಜೀವನ, ಕುಟುಂಬ ಜೀವನ, ಸಮಾಜಿಕ ಜೀವನ, ರಾಜಕೀಯ ಜೀವನಕ್ಕೆ ಭಾರತೀಯರಿಗೆ ಆದರ್ಶವಾಗಿದೆ. ರಾಮಾಯಣ ಬದುಕು ಹೇಗಿರಬೇಕು ಆದರ್ಶ ಜೀವನ ಹೇಗಿರಬೇಕು ಎಂದು ಹೇಳುತ್ತದೆ. ರಾಮಾಯಣದ ಎಲ್ಲಾ ಪಾತ್ರಗಳು ನಮ್ಮನ್ನು ಆದರ್ಶದ ಕಡೆಗೆ ಒಯ್ಯುತ್ತವೆ. ರಾಮನೆಂದರೆ ಆದರ್ಶ, ಅರಸ ಪತಿ, ಸೀತೆಯೆಂದರೆ ಆದರ್ಶ, ಪತ್ನಿ, ಲಕ್ಷ್ಮಣ, ಭರತ, ಶತ್ರುಘ್ನ ಆದರ್ಶ ಸಹೋದರರು. ಹನುಮಂತನೆಂದರೆ ಆದರ್ಶ ಸೇವಕ ಗುಹಾನೆಂದರೆ ಆದರ್ಶ ಮಿತ್ರ, ಶಬರಿಯೆಂದರೆ ಆದರ್ಶ ಅತಿಥ್ಯ, ವಿಭೂಷಣನೆಂದರೆ ಆದರ್ಶ ಧರ್ಮನಿಷ್ಟ ಹೀಗೆ ಆದರ್ಶಗಳ ಸರಮಾಲೆಗಳೆ ರಾಮಾಯಣದಲ್ಲಿ ಕಂಡುಬರುತ್ತವೆ. ಶೀಲ ಚಾರಿತ್ರ್ಯ ಸಭ್ಯತೆ, ಮಾತೃಭಕ್ತಿ, ಪಿತೃಭಕ್ತಿ, ಸಮಭಾವ, ಸಹಬಾಳ್ವೆ ಸಾಮರಸ್ಯ ಇವು ವಾಲ್ಮೀಕಿ ನಿರ್ಮಿಸಿದ ಮೌಲ್ಯಗಳು. ಜೊತೆಗೆ ನವರಸಗಳನ್ನು ರಾಮಾಯಣದಲ್ಲಿ ಯಥಾರ್ಥವಾಗಿ ಚಿತ್ರಿಸಿದ್ದಾನೆ. ಇಂತಹ ಮಹಾಕಾವ್ಯ ರಚನೆ ಮಾಡಿದ ವಾಲ್ಮೀಕಿ ಬೇಡ ಸಮುದಾಯದವನು. ಬೇಡ ಸಮುದಾಯವು ತಮ್ಮನ್ನು ವಾಲ್ಮೀಕಿ ಕುಲದವರು ಎಂದು ಇಂದಿಗೂ ಹೇಳುತ್ತಾರೆ.

"ದ್ವಾಪರಯುಗದ ಮಹಾಭಾರತದಲ್ಲಿ ಬೇಡ ಸಮುದಾಯದ ಉಲ್ಲೇಖಗಳು ಮಹತ್ವ ಪೂರ್ಣವಾಗಿದ್ದು ಸಂಖ್ಯೆಯ ದೃಷ್ಟಿಯಿಂದಲೂ ಹೆಚ್ಚಾಗಿವೆ. ಪುಲಿಂದ, ನಿಷಾಧ, ವ್ಯಾದ ಮುಂತಾದ ಹೆಸರಿನಿಂದ ಈ ಜನಾಂಗದ ಉಲ್ಲೆಖಗಳು ಅಲ್ಲಿ ಕಂಡುಬರುತ್ತವೆ. ಇವರ ಪ್ರತ್ಯೇಕ ರಾಜ್ಯಗಳೆ ಇದ್ದ ಬಗ್ಗೆ ಸಾಕಷ್ಟು ಆಧಾರಗಳಿವೆ."[3] ಏಕಲವ್ಯನು ನಿಷಾಧ ರಾಜನ ಮಗನಾಗಿದ್ದನೆಂಬ ಸಂಗತಿ ಪ್ರಸಿದ್ಧವಾದುದು. ಈತ(ಉಚ್ಚ ಜಾತಿಯ ಯಾವ ಗುರುವು ಇಲ್ಲದೆ) ಧನುರ್ವಿಧ್ಯೆ, ಶಬ್ದವೇದಿ ವಿದ್ಯೆಯಲ್ಲಿ ಪಾರಂಗತನಾಗಿದ್ದನು. ಆಗ ಕ್ಷತ್ರಿಯರೆಂದು ತಿಳಿಯಲ್ಪಡುತ್ತಿದ್ದವರಿಗಿಂತ ಮಿಗಿಲಾದ ಬಿಲ್ಲುಗಾರಿಕೆ ಅವನದಾಗಿತ್ತು ಧನುರ್ವಿದ್ಯಾವಿ ವಿಶಾರದನಾಗಿದ್ದ ದ್ರೋಣನು ಆಶ್ಚರ್ಯ ಪಡುವ ರೀತಿಯಲ್ಲಿ ಏಕಲವ್ಯನು ಅದರಲ್ಲಿ ಪ್ರವೀಣನಾಗಿದ್ದನು. ಶಿವನ ಇಪ್ಪತ್ತೈದು ಲೀಲೆಗಳಲ್ಲಿ ಒಂದಾದ ಕಿರಾತರುದ್ರಲೀಲೆಯ ಪ್ರಸಂಗವು ಮಹಾಭಾರತದ ಅರಣ್ಯ ಪರ್ವದಲ್ಲಿ ವಿಸ್ತಾರವಾಗಿ ಪ್ರತಿಪಾದಿತವಾಗಿದೆ. ಶಿವನು ಬೇಡ ವೇಷದಿಂದ ಬಂದು ಮೂಷಕ ದಾನವನ್ನು ಸಂಹರಿಸಿ ಅರ್ಜುನನಿಗೆ ಪಾಶುಪತಾಸ್ತ್ರ ದಾನಮಾಡಿದ್ದು ಪ್ರಸಿದ್ಧವಾದ ಅಖ್ಯಾಯಿಕೆ ಇದರಿಂದ ಅಂದು ಬೇಡ ಸಮುದಾಯ ಮತ್ತು ಅವರ ವೇಷಭೂಷಣ ಸುಪರಿಚಿತವಾಗಿದ್ದವೆಂದು ತಿಳಿಯಬಹುದು.

ಪಾಂಡವರಲ್ಲಿ ಪ್ರತಿಯೊಬ್ಬರಿಗೂ ಒಂದೊಂದು ಬೇಡ ಪಡೆ ಅವರ ಬೆಂಗಾವಲಿಗೆ ಇತ್ತಂತೆ ದಕ್ಷಿಣದ ಪೈನ ಗಂಗತೀರದ ಸುತ್ತಲಿನ ಪ್ರದೇಶ ಬೇಡರ ರಾಜ್ಯವಾಗಿತ್ತೆಂದು ಹೇಳುವ ಮೂಲಕ ಮಹಾಭಾರತ ಕಾಲೀನ ಬೇಡರ ರಾಜ್ಯ ಮತ್ತು ಅವರ ಅಸ್ತಿತ್ವವನ್ನು ಗುರುತಿಸಲಾಗಿದೆ. ಕನ್ನಡದ ಆದಿಕೃತಿಯಾದ ವಡ್ಡರಾಧನೆಯಲ್ಲಿ ಈ ಸಮುದಾಯಕ್ಕೆ ಸಂಬಂಧಪಟ್ಟ ಉಲ್ಲೆಖಗಳು ಕಂಡುಬಂದಿವೆ. ಇದರಲ್ಲಿ ಚಿಲಾತ ಪುತ್ರನ ಕಥೆ ೧೫ನೆಯದಾಗಿದೆ. ಚಿಲಾತಪುತ್ರ ಎಂಬುದು ಸಂಸ್ಕೃತದ ಕಿರಾತಪುತ್ರ ಎಂಬುದರ ಪ್ರಾಕೃತ ರೂಪವೆಂದು ವಿದ್ವಾಂಸರು ಗುರುತಿಸಿದ್ದಾರೆ. ಅದೇ ಗ್ರಂಥದ ವಿದ್ಯುಚ್ಚೋರನೆಂಬ ವಿಷಯ ಕಥೆಯಲ್ಲಿಯ ಮದಂಡನೆಂಬ ತಲವಾರನ ಉಲ್ಲೆಖವಿದೆ. ಇಲ್ಲಿ ತಳವಾರ ಅಥವಾ ತಳಾರನೆಂದರೆ ನಗರ ರಕ್ಷಕನಾದ ದೊಡ್ಡ ಅಧಿಕಾರಿ, ಕಳ್ಳರನ್ನು ಹಿಡಿದು ಶಿಕ್ಷಿಸುವುದೇ ಮುಂತಾದ ಆರಕ್ಷಕ ಶೌರ್ಯಗಳು ಅವನ ಹೊಣೆಯಾಗಿದ್ದಂತೆ ಆದರಿಂದ ತಿಳಿಯುವುದು ಇದೇ ರೀತಿ ಸುಕುಮಾರ ಸ್ವಾಮಿಯ ಕಥೆಯಲ್ಲಿ ಬರುವ ಸುಧಾಮೆಯ ಉಪಕತೆಯಲ್ಲಿಯೂ ತಳವಾರನ ಉಲ್ಲೇಖವಿದೆ. ಇದರಿಂದ ಕನ್ನಡ ವಡ್ಡರಾಧನೆಗೆ ಮೂಲಗ್ರಂಥವಾಗಿರುವ ಭಗವತಿ ಆರಾಧನೆಯ ಕಾಲಕ್ಕಾಗಲೇ ಈ ಸಮುದಾಯವನ್ನು ಕುರಿತಂತೆ ಜೈನಮತವು ತನ್ನ ಲಕ್ಷ್ಯ ಹರಿಸಿದ್ದಿತೆಂದು ಕಂಡುಬರುವುದು.

ಹರಿಹರ ಕವಿ ೬೩ ಪುರಾತನರಲ್ಲಿ ಒಬ್ಬನಾದ ಬೇಡರ ಕಣ್ಣಪ್ಪನನ್ನು ಕುರಿತು ಒಂದು ರಗಳೆಯನ್ನು ರಚಿಸಿದ್ದಾನೆ. ಕಣ್ಣಪ್ಪ ಪ್ರಾಕೃತನೆನಿಸಿದರೂ ಭಕ್ತಿಯ ಪರಾಕಾಷ್ಠೆಯನ್ನು ಮರೆಯುವ ಅವನ ಅಮರ ಚಿತ್ರ ಪ್ರಸ್ತುತ ರಗಳೆಯಲ್ಲಿ ಮೂಡಿಬಂದಿದೆ. ಹರಿಹರನಂತೆ ಮುಂದಿನ ಕಾಲದ ಅನೇಕ ಜನ ಕವಿಗಳು ಕಣ್ಣಪ್ಪನ ಮಹಿಮೆಯನ್ನು ಕೊಂಡಾಡಿದ್ದಾರೆ.

ಇದೇರೀತಿ ಹನ್ನೆರಡನೆಯ ಶತಮಾನದಲ್ಲಿ ಆಗಿಹೋದ ಶರಣರಲ್ಲಿ ಕೆಲವರಾದರೂ ಈ ಸಮುದಾಯದವರಿರಬೇಕೆಂದು ತೋರುತ್ತದೆ ಸೂಕ್ಷ್ಮವಾಗಿ ಪರಿಶೀಲಿಸಿದರೆ ಬೇಡ ಸಮುದಾಯಕ್ಕೆ ಸೇರಿದ ಶರಣನೆಂದರೆ ಅಲ್ಲಮಪ್ರಭು ಎಂದು ಇತ್ತೀಚಿಗೆ ಬೆಳಕಿಗೆ ಬಂದಿದೆ.

ಬೇಡ ಶಬ್ದದ ಅರ್ಥ

ಬೇಡ ಸಮುದಾಯಕ್ಕೆ ಬೇಡ ಎಂದು ಹೆಸರು ಬರಲು ಕಾರಣ. ಈ ಸಮುದಾಯ ವೇದಕಾಲದಿಂದ ಬಂದಿದ್ದರಿಂದ ವೇದ ಎಂಬ ಶಬ್ದವು ವ್ಯಾದ ಎಂದು ರೂಢಿಯಲ್ಲಿ ಬಂದಿತ್ತು. ವ್ಯಾದ ಅಂದರೆ ಬೇಟೆಯಾಡುವವರು ಆದುದ್ದರಿಂದ ಈ ಸಮುದಾಯ ಬೇಟೆ ಎಂಬ ಶಬ್ದ ಬದಲಾವಣೆ ಹೊಂದಿ ಬೇಡ ಎಂದು ಕರೆಯುವ ಪದ್ಧತಿ ರೂಢಿಗೆ ಬಂದಿತು. ಇದು ಅಲ್ಲದೇ ಈ ಸಮುದಾಯಕ್ಕೆ ಬೇಡರು ಎಂದು ಕರೆಯುತ್ತಾರೆ. "ಬೇಡರ ಎಂಬುವುದು ಉರ್ದು ಶಬ್ದ. ಉರ್ದು ಭಾಷೆಯಲ್ಲಿ ಬೇಡರ ಎಂದರೆ ಯಾರಿಗೂ ಹೆದರದವನು ಎಂದರ್ಥ. ಈ ಬೇಡರ ಸಮಾಜದವರು ಯಾರಿಗೂ ಹೆದರದೆ ಇದ್ದ

ಶೂರ ಜನ. ೧೬೭೦ರಲ್ಲಿ ಸಮೀಪ ಇರುವ ವಾಗನಗೇರೆ ಗುಡ್ಡದಲ್ಲಿ ಎದುರಿಗೆ ಬಂದಾಗ ಬೇಡರ ಸಮುದಾಯದ ಸೈನ್ಯ ಸ್ವಲ್ಪ ಸಂಖ್ಯೆಯಲ್ಲಿ ಇದ್ದರೂ ಕೂಡ ಅವರ ಶೂರತನ ಹಾಗೂ ಸಾಹಸಗಳನ್ನು ಕಂಡಾಗ ಔರಂಗಜೇಬನು ಏ ರಿಸನೆ ನಹೀ ಡರನೇವಾಲೆ ಲೋಗ ಬೇಡರ ಲೋಗ್ ಎಂದು ನುಡಿದನು. ಅಂದಿನಿಂದ ಈ ಸಮಾಜಕ್ಕೆ ಉರ್ದು ಶಬ್ದದಿಂದ ಬೇಡರ ಎಂದು ಕರೆದರು."[೪]

"ಛತ್ರಪತಿ ಶಿವಾಜಿ ಕಾಲಕ್ಕೆ ಬೇಡರ ಸಮಾಜದ ಅನೇಕ ಜನ ಸೈನ್ಯದಲ್ಲಿ ಸಹಾಯ ಮಾಡಿದ್ದರಿಂದ ಮಹಾರಾಷ್ಟ್ರದಲ್ಲಿ ಬೇಡರ ಎಂದು ಕರೆಯುವುದು ರೂಢಿಗೆ ಬಂದಿದೆ. ದಕ್ಷಿಣ ಭಾರತದಲ್ಲಿ ಕೆಲ ಬೇಡರ ಸಂಸ್ಥಾನಗಳಿದ್ದವು. ಅವುಗಳನ್ನು ಆಳುತ್ತಿರುವವರೇ ಬೇಡರ ದೊರೆಯರು ಆದ್ದರಿಂದ ಈ ರಾಯಚೂರು ಯಾದಗಿರಿ ಜಿಲ್ಲೆಯಲ್ಲಿ ಬೇಡರಿಗೆ ದೊರೆಗಳು, ದೊರೆಮಕ್ಕಳು ಎಂದು ಕರೆಯುವರು. ವೇಡನ ಇದು ತಮಿಳು ಶಬ್ದ, ತಮಿಳಿನಲ್ಲಿ ಈ ಬೇಡರ್ ಸಮಾಜಕ್ಕೆ ವೇಡನ್ ಎಂದು ಕರೆಯುತ್ತಾರೆ. ತೆಲುಗು ಭಾಷೆಯಲ್ಲಿ ಬೇಡರ ಸಮುದಾಯಕ್ಕೆ ಬೋಯಾ ಎಂದು ಕರೆಯುವರು."[೫] ಕರ್ನಾಟಕದ ಕೆಲವು ಭಾಗಗಳಲ್ಲಿ ತಳವಾರ, ಕನ್ನಯ್ಯನವರು, ಕನ್ನಯ್ಯನ ಮಕ್ಕಳು ಎಂದು ಹಲವು ಕಡೆ ಕರೆಯುವ ವಾಡಿಕೆಯುಂಟು

ಬೇಡ ಸಮಾಜಕ್ಕೆ ತನ್ನದೆಯಾದ ಸಂಸ್ಕೃತಿ ಇದೆ. ಇತಿಹಾಸವಿದೆ ಅನೇಕರು ವಿವಿಧ ಸಾಹಸಿಗಳಾಗಿ ಬಾಳಿ ಬದುಕಿ ಪಾಳೆಗಾರರಾಗಿ ರಾಜರೆನಿಸಿಕೊಂಡು ಅಧಿಕಾರದಲ್ಲಿ ಮೆರೆದು ಧೀಮಂತರೆನಿಸಿಕೊಂಡು ನಾಡಿನ ಉದ್ದಲಗಕ್ಕೂ ತಮ್ಮ ಪ್ರಭುತ್ವ ಸ್ಥಾಪಿಸಿ, ಧರ್ಮ ಪ್ರಭುಗಳಾಗಿ ರಾಷ್ಟ್ರ ಪ್ರೇಮಕ್ಕೆ ಧೈರ್ಯ ಸಾಹಸಕ್ಕೆ ಪರಾಕ್ರಮಗಳಿಗೆ ದಂಡನಾಯಕ, ದಳಪತಿ ಸೇನಾಪತಿ, ಸೈನ್ಯದ ಮುಂದಾಳು ವಂಶಸ್ಥರಲ್ಲಿ ಮುಂದೆ ನಾಯಕ, ನಾಯಕ ಮಕ್ಕಳು ಎಂದು ಕರೆಯುತ್ತಾರೆ.

ಚಾರಿತ್ರಿಕ ಹಿನ್ನೆಲೆ

"ಜಗತ್ತಿನಲ್ಲಿ ಬೇಡರಷ್ಟು ಶೂರರು ಸಿಗಬಹುದು ಆದರೆ ಬೇಡರಿಗಿಂತ ಶೂರರು ದೊರೆಯಲಾರರು ಎಂದು 'ವಿಲಿಯಂ ಸ್ಮಿತ್' ಹೇಳಿದ್ದಾರೆ. ಏಳನೇಯ ಶತಮಾನದ ಗದ್ದೆಮನೆ ಶಾಸನದಿಂದ ಬೇಡರು ರಾಜ್ಯವಾಳಿದರೆಂದು ಗೊತ್ತಾಗುತ್ತದೆ. ಹಿಂದೆ ನಾಯಕ ಸಮುದಾಯ ವೀರರು ತೋಪಿನ ಬಾಯಿಗೆ, ಗುಂಡಿನ ಮಳೆಗೆ, ಕತ್ತಿ ಬಿಲ್ಲುಗಳ ಹೊಡೆತಗಳಿಗೆ ಜಗ್ಗದೆ ಎದೆಕೊಟ್ಟು ಮುಂದೆ ನಿಲ್ಲುತ್ತಿದ್ದುದರಿಂದಲೇ, ಈ ನಾಯಕ ಎಂಬ ಹೆಸರಿಗೆ ಪಾತ್ರರಾಗಿದ್ದಾರೆ."[೬]

ನಮ್ಮ ಸಾಹಿತ್ಯ ಶಾಸನ ಇತ್ಯಾದಿ ಆಕರಗಳು ಕರ್ನಾಟಕದ ಎಲ್ಲಾ ರಾಜ ಮನೆತನಗಳ ಕುಲದ ಬಗ್ಗೆ ನೇರವಾಗಿ ಹೇಳಿಕೊಳ್ಳುವುದಿಲ್ಲ. ಕರ್ನಾಟಕದ ಹೆಚ್ಚಿನ ಸಂಖ್ಯೆಯಲ್ಲಿ

ರಾಜಮನೆತನಗಳಲ್ಲಿ ಕೆಳವರ್ಗದಿಂದಲೇ ಬಂದಂತಹವುಗಳು. ಇದರಿಂದ ಚರಿತ್ರೆಯನ್ನು ಕತ್ತಲೇ ಆವರಿಸಿದೆ. ಇದ್ದುದರಲ್ಲಿ ಬೇಡ ಸಮುದಾಯದ ಬಗೆಗೆ ಅಷ್ಟಿಷ್ಟು ವಿಷಯ ಶಾಸನ ಮತ್ತು ಗ್ರಂಥಗಳಿಂದ ತಿಳಿದುಬರುತ್ತದೆ. ಕರ್ನಾಟಕದಲ್ಲಿ ಈ ಸಮುದಾಯವನ್ನು ಕುರಿತಂತೆ ಅತ್ಯಂತ ಪ್ರಾಚೀನ ಮತ್ತು ಖಚಿತವಾದ ಉಲ್ಲೇಖವೆಂದರೆ ಬೇಡರಾಯ ಎಂದರೆ ಬೇಡರ್ ರಾಜನ ಸ್ಪಷ್ಟ ನಿರ್ದೇಶನವಿದೆ. ಇಲ್ಲಿ ಉಲ್ಲೆಖಿತ ಗದ್ದೆಮನೆ ಶಾಸನ ಪ್ರಕಾರ ಶೀಲಾದಿತ್ಯನೆಂದರೆ ಕನೋಜಿನ ಪ್ರಸಿದ್ಧ ದೊರೆ ಹರ್ಷವರ್ಧನ ಎಂದು ವಿದ್ವಾಂಸರ ಅಭಿಮತವಾಗಿವೆ ಪೆಟ್ಟಣಿಸತ್ಯಾಂಕ ಅಥವಾ ಬೇಲಳೆಯ ಮೂಳನೆಂಬುವನ್ನು ಬೋಡರಾಯರು ಮತ್ತು ಮಲೆ(ಲೆ) ಪರ ಜತೆಗಿನ ಕಾಳಗದಲ್ಲಿ ಮಡಿದು ವೀರಸ್ವರ್ಗ ಪಡೆದನೆಂಬುದು ಶಾಸನದ ಅಭಿಪ್ರಾಯ ಎಂದರೆ ಆ ಕಾಲಕ್ಕಾಗಲೇ ಬೇಡರ ರಾಜ್ಯಗಳು ಕರ್ನಾಟಕದಲ್ಲಿ ಇದ್ದವೆಂಬ ಸಂಗತಿ ಇದರಿಂದ ಸಿದ್ದವಾಗುತ್ತದೆ. ಪ್ರಸ್ತುತ ಗದ್ದೆ ಮನೆ ಶಾಸನದಲ್ಲಿ ಬೇಡರ ರಾಯರ ಜತೆಗೆ ಮಲಪ್ಪರ ಅಥವಾ ಮಲೆಪ್ಪರ ಎಂಬ ರಾಜರನ್ನು ಹೆಸರಿಸಲಾಗಿದೆ. ಇವರನ್ನು ಹಿಂದಿನ ಕಾಲದಲ್ಲಿ ಕರ್ನಾಟಕ ಶಾಸನ ಮತ್ತು ಗ್ರಂಥಗಳು ಮಲೆಪರ್, ಮಲೆವರ್ ಇತ್ಯಾದಿಯಾಗಿ ಹೆಸರುಗಳಿಂದ ಸಂಬೋಧಿಸುತ್ತವೆ. ಪಂಪ ಎರಡನೆಯ ನಾಗವರ್ಮ ಮೊದಲಾದವರಲ್ಲಿ ಈ ಪ್ರಯೋಗಗಳಿವೆ. ಮಲಪರೆಂದರೆ ಗುಡ್ಡಗಾಡು ಪ್ರದೇಶಗಳ ರಾಜರು. ಇವರು ಬಹುಶಃ ಬೇಡರಾಜರು ಎಂದು ತೋರುತ್ತದೆ. ಹೊಯ್ಸಳರು ತಮ್ಮನ್ನು ಮಲೆಪರೊಳಗಂಡರೆಂದು ಕರೆದುಕೊಂಡಿದ್ದಾರೆ. ಅವರ ಮೂಲ ಪುರುಷನಾದ ಸಳನು ಬೇಟೆಯಾಡಿ ಬಂದ ತರುವಾಯ ವಾಸಂತಿಕಾದೇವಿಯ ಗುಡಿಯಲ್ಲಿ ಬಂದ ಹುಲಿಯನ್ನು ಕೊಂದನೆಂದು ಹೇಳಿಕೊಂಡಿರುವುದು ತುಂಬಾ ಗಮನಾರ್ಹವಾಗಿದೆ. ಇವೆರಡು ಅಂಶಗಳು ಹೊಯ್ಸಳರು ಬೇಡ ಮೂಲದವರೇ ಎಂಬುದನ್ನು ಸಂಕೇತಿಸುತ್ತದೆ. ಅದೇ ರೀತಿಯಾಗಿ ಬನವಾಸಿಯ ಕದಂಬ ಅರಸರು ಬೇಡರೆಂದು ಬುಕ್ಯಾನನೆಂಬ ಶೋಧಕನು ಊಹಿಸುತ್ತಾನೆ ಬಾಂಬೆ ಗೆಜೆಟಿಯರ್‌ನಲ್ಲಿ ಈ ವಿಷಯ ಪ್ರಸ್ತಾಪಿಸಲಾಗಿದೆ.

"ಕ್ರಿ.ಶ. ೬ನೇ ಶತಮಾನದಲ್ಲಿ ಬದಾಮಿಗೆ ಭೇಟಿ ನೀಡಿದ ಚೀನಿ ಯಾತ್ರಿಕ 'ಹ್ಯುಯೇನ್‌ತ್ಸಂಗ್' ಕೂಡ ವಾಲ್ಮೀಕಿ ಸಮುದಾಯದ ದಿಟ್ಟ ಪರಾಕ್ರಮವನ್ನು ಮುಕ್ತಕಂಠದಿಂದ ಶ್ಲಾಘಿಸಿದ್ದನೆಂದು ತಿಳಿದುಬರುತ್ತದೆ. ಪುಲಿಕೇಶಿ ನಾಡಿನಲ್ಲಿ ಗಣನೀಯ ಪ್ರಮಾಣದಲ್ಲಿರುವ ಈ ಸಮುದಾಯ ಶೂರ ಸ್ವಾಭಿಮಾನ ನಿಷ್ಠಾವಂತ ಸಮುದಾಯವಾಗಿತ್ತು. ಯುದ್ದದಲ್ಲಿ ಗೆಲುವೊಂದೇ ಅವರ ಗುರಿಯಾಗಿರುತ್ತದೆ. ಯುದ್ಧದಲ್ಲಿ ಹೋರಾಡಿ ಮಡಿಯುತ್ತಾರೆಯೇ ವಿನಃ ಸೋತು ಹಿಂದಿರುಗುದಿಲ್ಲ. ಇಂತಹ ಧೀರೋದತ್ತಾ ಸೈನಿಕ, ಸ್ವಾಭಿಮಾನಿ ಪ್ರಜೆಗಳ ಪ್ರೀತಿಯೇ ಪುಲಿಕೇಶಿಗೆ ಅಬೇಧ್ಯ ಕೋಟೆಯಾಗಿತ್ತು. ತರುವಾಯ ರಾಜಮನೆತನಗಳಲ್ಲಿ ಕಂಪಲಿ ರಾಜ್ಯದ ಕಂಪಿಲರಾಯ ಹಾಗೂ ಅವನ ಮಗ ಕುಮಾರರಾಮನು ಕೂಡಾ ಬೇಡ ಸಮುದಾಯಕ್ಕೆ ಸಂಬಂಧಿಸಿದವರಾಗಿದ್ದಾರೆ."[2] ಅಲ್ಲದೇ ಅನೇಕ ಪಾಳೆಯಗಾರರೂ

ಈ ಸಮುದಾಯಕ್ಕೆ ಸೇರಿದವರು ಎಂಬುದಕ್ಕೆ ಹಲವು ನಿದರ್ಶನಗಳುಂಟು. ವಿಜಯನಗರ ಸಾಮ್ರಾಜ್ಯದ ಸ್ಥಾಪಕರಾದ ಹಕ್ಕ-ಬುಕ್ಕ ಸಹೋದರರು ಮೊದಲು ಕಂಪಲಿಯ ಮನೆತನಕ್ಕೆ ಸಂಬಂಧ ಪಟ್ಟವರು. ಇದರಿಂದ ಹಿಂದೂ ಸಂಸ್ಕೃತಿಯ ರಕ್ಷಣಾ ಕೋಟೆಯಂತಿದ್ದ ವಿಜಯನಗರ ಸಾಮ್ರಾಜ್ಯಕ್ಕೆ ಕಂಪಲಿಯ ರಾಜ್ಯವೇ ಅಡಿಗಲ್ಲಾಗಿದ್ದುದು ಕಂಡುಬರುತ್ತದೆ. ಈ ಸಾಮ್ರಾಜ್ಯದ ಕಾಲಕ್ಕೆ ಸೇನೆಯ ಗೌರವಾನ್ವಿತ ಸ್ಥಾನಗಳಲ್ಲಿ ಹೆಚ್ಚಿನ ಹುದ್ದೆಗಳನ್ನು ಬೇಡ ಸಮುದಾಯದವರು ಹೊಂದಿದ್ದರು.

ವಿಜಯನಗರ ರಾಜ್ಯದ ಕಾಲದಲ್ಲಿ ಕರ್ನಾಟಕ ತುಂಬ ಹಲವು ಪಾಳೆಯಪಟ್ಟುಗಳು ಹರಡಿದ್ದವೆಂಬುದು ನಿಸ್ಸಂಶಯ. ಅವುಗಳ ಉಲ್ಲೆಖಗಳು ಅಲ್ಲಲ್ಲಿ ಕಂಡುಬರುತ್ತವೆ. ಅಂತಹ ಪಾಳೆಯಗಾರರಲ್ಲಿ ಬಹು ಜನರು ಬೇಡ ಸಮುದಾಯದವರಾಗಿದ್ದರೆಂದು ಊಹಿಸ ಬಹುದಾಗಿದೆ. ಚಿಕ್ಕನಾಯಕನಹಳ್ಳಿ, ಬಾಣಾವಾರ, ಬಸವಪಟ್ಟಣ, ಸೀರೆ(ಸಿರಾ) ಮುಂತಾದ ಪಟ್ಟಣಗಳಲ್ಲಿ ಬೇಡರ ರಾಜರು ಪಾಳೆಯಗಾರರಾಗಿ ಆಳುತ್ತಿದ್ದಾರೆಂದು ಚರಿತ್ರೆಯಿಂದ ತಿಳಿದುಬರುತ್ತದೆ.

"ಕರ್ನಾಟಕದ ಇತ್ತೀಚಿನ ಇತಿಹಾಸದಲ್ಲಿ ಪ್ರಮುಖವಾಗಿದ್ದ ಬೇಡರ ರಾಜ್ಯವೆಂದರೆ ಚಿತ್ರದುರ್ಗದ ನಾಯಕರು ಪ್ರಸಿದ್ದ ಪಾಳೆಯಗಾರರು. ಜೊತೆಗೆ ದಕ್ಷಿಣ ಭಾರತದಲ್ಲಿ ಹೆಸರುವಾಸಿಯಾದ ಸುರಪುರದ ನಾಯಕರನ್ನು, ತರೀಕೆರೆಯ ಪಾಳೆಯಗಾರರನ್ನು ಹೆಸರಿಸಬಹುದು. ಇವೆರಡು ಪಾಳೆಯಪಟ್ಟುಗಳು ಮೊನ್ನೆ ಮೊನ್ನೆಯವರೆಗೂ ಅಧಿಕಾರದಲ್ಲಿದ್ದವು. ಆಧುನಿಕ ಕಾಲದಲ್ಲಿ ಹಲಗಲಿಯ ಬೇಡರು ಬ್ರಿಟಿಷರ ವಿರುದ್ದ ಬಂಡಾಯ ಮಾಡಿ ಪ್ರಸಿದ್ದರಾದರು. ತಮ್ಮ ಶಸ್ತ್ರಗಳನ್ನು ಒಪ್ಪಿಸಬೇಕೆಂದಾಗ ಅದಕ್ಕೊಪ್ಪದೆ ವೀರಾವೇಶದಿಂದ ಹೋರಾಡಿ ಹಲವಾರು ಸಾವು ನೋವುಗಳಿಗೆ ಗುರಿಯಾದ ಬಂಟರಿವರು. ಇವರಂತೆ ಸಿಂಧೂರ ಲಕ್ಷ್ಮಣನು ಕೂಡ ಹಲವು ಕಾಲ ಬ್ರಿಟಿಷರ ವಿರುದ್ದ ಕತ್ತಿ ಹಿಡಿದು ಶರಣಾಗತನಾಗದೆ ಸಿಂಹದಂತೆ ಸಂಚರಿಸುತ್ತಿದ್ದನು. ಕೊನೆಗೆ ಬ್ರಿಟಿಷರು ಈತನನ್ನು ಮೊಸದಿಂದ ಕೊಲ್ಲಬೇಕಾಗಿ ಬಂತು. ಹಲಗಲಿಯ ಬೇಡರು ಮತ್ತು ಸಿಂಧೂರ ಲಕ್ಷ್ಮಣನ ಲಾವಣಿಗಳು ಈಗಲೂ ಉತ್ತರ ಕರ್ನಾಟಕದ ಜನಪದರ ನಾಲಿಗೆಯ ಮೇಲೆ ನರ್ತಿಸುತ್ತಿವೆ."[೮]

ಮದುವೆಯ ಕಾರ್ಯಕ್ರಮ

ಎಲ್ಲಾ ಸಮುದಾಯಗಳಲ್ಲೂ ಮದುವೆಯ ಉದ್ದೇಶ ಒಂದೇ ಆಗಿದ್ದರೂ ಅದರ ಆಚರಣೆ ಮಾತ್ರ ಒಂದೇ ತೆರನಾಗಿಲ್ಲ. ಸಮುದಾಯ ನೆಲೆಗೊಂಡ ಪರಿಸರ, ಬದುಕಿನ ಸ್ಥಿತಿಗತಿ, ಸಾಮಾಜಿಕ ಮನೋಧರ್ಮ, ನಂಬಿಕೆ, ಪದ್ದತಿ ಇತ್ಯಾದಿ ಅಂಶಗಳಿಗುಣವಾಗಿ ಆಚರಣೆಗಳು ಭಿನ್ನರೂಪ ತಾಳುತ್ತವೆ. ನಿರ್ದಿಷ್ಟ ಸಮುದಾಯವೊಂದರಲ್ಲಿ ಜರುಗುವ ಮದುವೆ ಆಚರಣೆಗಳು ಆ ಸಮುದಾಯದ ಸಂಸ್ಕೃತಿಯನ್ನು ತೋರಿಸಿಕೊಡುತ್ತವೆ. ಮದುವೆ

ಕಾರ್ಯಕ್ರಮ ಸಮುದಾಯದ ಒಂದು ಸಾಂಸ್ಕೃತಿಕ ಕ್ರಿಯೆಯಾಗಿದೆ. ಇಲ್ಲಿ ಸಮುದಾಯದ ಬಹುಪಾಲು ಜನರಲ್ಲಿ ಬಾಗಿಯಾಗುವುದನ್ನು ಕಾಣಬಹುದು.

ಸಂಗಾತಿಯ ಆಯ್ಕೆ : ಸಂಗಾತಿ ಆಯ್ಕೆಗೆ ಸಂಬಂಧಿಸಿದಂತೆ ಸಮುದಾಯದಲ್ಲಿ ಯುವಕ ಯುವತಿಯರಿಗೆ ಸಂಪೂರ್ಣ ಸ್ವಾತಂತ್ರ್ಯವಿಲ್ಲ. ಯುವಕ ಕನ್ಯಾ ನೋಡಿ ಒಪ್ಪಿಗೆ ಯಾದ ಮೇಲೆ ಕುಟುಂಬದ ಹಿರಿಯರು ಸಂಬಂಧಿಕರು ಮತ್ತು ತಂದೆ-ತಾಯಿಗಳ ತೀರ್ಮಾನವೇ ಪ್ರಮುಖವಾಗಿರುತ್ತದೆ. ಪ್ರಸ್ತುತ ಅಧ್ಯಯನ ಸಂದರ್ಭದಲ್ಲಿ ಕಂಡುಬಂದಿರುವಂತೆ ಗಂಡು ಹೆಣ್ಣು ಒಪ್ಪಿದ ನಂತರ ಹಿರಿಯರ ತೀರ್ಮಾನಕ್ಕೆ ನಿಂತಿರುತ್ತದೆ. ಹಿರಿಯರು ಒಪ್ಪಿದ ಮೇಲೆ ಗಂಡು ಅಥವಾ ಹೆಣ್ಣು ಮದುವೆಯಾಗಬೇಕಾಗುತ್ತದೆ. ಹಿಂದೆ ಹಿರಿಯರು ನೋಡಿದವರನ್ನು ಮದುವೆಯಾಗುತ್ತಿದ್ದರು. ಎಷ್ಟೋ ಸಂದರ್ಭಗಳಲ್ಲಿ ವಧು-ವರರು ಒಬ್ಬರಿಗೊಬ್ಬರು ಮುಖ ನೋಡುವುದು ಮದುವೆಯ ದಿನದಂದೇ ಆಗಿರುತ್ತದೆ.

ಬೆಡಗುಗಳು

"ಗುಜ್ಜಲರ,	ಮೀನಗಲರ,
ಮುಂಮೂಡಲರು,	ಜಂಪಲಹರು,
ಕೆಂಗಾಲರು,	ರಂಗಾಲೇರ,
ಮಿರ್ತೀರ,	ಮಣಿಕಲರ,
ಈರಿಗಾರ,	ಮನವೊಲ್ಲಾರ,
ಗೊಬ್ಬಿಲರ್,"[೮]	ಪುರ್ತೀರ,
ಮನ್ನಲರ,	ಗೋಸಲರ್,
ಗಬಿಲ್ಲರ್,	ಕುರ್ತೀರ
ಜಿನಗಲರ್	ಚಂಪಲರ್
ಮುದುಗೊಂಡ್ಲರ್	ಮುಸಗಲ್ಲ
ಬೆಂಚಲರ್	ಪಡವಲಿವಲರ್
ಸಾಕೆಲರ	ಮುತ್ತೋರು
ಸಂತಾಲೇರ	ಮುಂದಲೋರು
ಮಲೆಯರು	ಮುದಲೋಡು
ನಿಚ್ಚಮಲೆಯರು	ಮಂದಲಾರ್

ಕನ್ಯೆ ನೋಡುವುದು : ಇವರು ಸಾಮಾನ್ಯ ಸಂಬಂಧವನ್ನು ಬಳಗದಲ್ಲೆ ಬೆಳೆಸುತ್ತಾರೆ. ಮಾವನ ಮಗಳು, ಅಕ್ಕನ ಮಗಳು, ಅತ್ತೆ ಮಗಳನ್ನು ಮದುವೆ ಮಾಡಿಕೊಳ್ಳುತ್ತಾರೆ. ಕನ್ಯೆ ತಮ್ಮ ಬಳಗದಲ್ಲೇ ಇರಲಿ ಅಥವಾ ಹೊರಗಿನವರೆ ಆಗಲಿ ಕನ್ಯೆಯನ್ನು ತಂದು ಕೊಳ್ಳಬೇಕೆಂದು ಇಚ್ಚಿಸಿದಾಗ ಜ್ಯೋತಿಷ್ಯವನ್ನು ಕೇಳುತ್ತಾರೆ. ಎಲ್ಲಾ ಒಳ್ಳೆಯದಾಗಿ ಕೂಡಿ ಬಂದರೆ ಶುಭ ದಿನವನ್ನು ನೋಡಿಕೊಂಡು ಕನ್ಯೆ ನೋಡಲಿಕ್ಕೆ ಹೋಗುತ್ತಾರೆ.

ಕನ್ಯೆಯ ಲಕ್ಷಣ ಪರೀಕ್ಷೆ : ದಾರಿ ಶಕುನಗಳು ಶುಭ ಕಂಡುಬಂದರೆ ನಂತರ ಗಮನಿಸುವ ಮುಂದಿನ ಅಂಶ ಕನ್ಯೆಯ ಅಂಗಲಕ್ಷಣಕ್ಕೆ ಸಂಬಂಧಿಸಿರುತ್ತದೆ. ಸುಳಿ ಶುದ್ಧ ಇದೆಯಾ ಇಲ್ಲೋ ಎಂಬುದನ್ನು ಪರಿಶೀಲಿಸಿಯೇ ಕನ್ಯೆಯನ್ನು ಆಯ್ಕೆ ಮಾಡುತ್ತಾರೆ. ಕನ್ಯೆಗೆ ಎದುರು ಸುಳಿ ಇರಬಾರದು, ಎದುರು ಸುಳಿ ಇದ್ದರೆ ಕುಟುಂಬದ ಹಿರಿಯರಿಗೆ ಗಂಡನಿಗೆ ಎದುರು ಮಾತಾನಾಡುತ್ತಾಳೆಂಬ ನಂಬಿಕೆ ಇದೆ. ಬೆರಳು ಕಿರಿದಿರಬಾರದು, ಕಾಲು ದಪ್ಪವಾಗಿರಬಾರದು, ಮೊಣಕಾಲು ಬಡಿದಾಡಬಾರದು ಹಾಗೆಯೇ ಅಂಗೈ ನೋಡಿ ರೇಖೆ ಪರೀಕ್ಷಿಸಿ ಕನ್ಯೆಯನ್ನು ಮಾತನಾಡಿಸುತ್ತಾರೆ. ಹೊಸ್ತಿಲ ದಾಟಿ ಬಾಮ್ಮ ಎಂದು ಹೇಳುವ ಮೂಲಕ ಕಾಲು ಬೆರಳು ನಡಿಗೆಯನ್ನು ಪರೀಕ್ಷಿಸುತ್ತಾರೆ. ಇವರು ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವಾಗ ಹೆಣ್ಣು ದೈಹಿಕವಾಗಿ ಗಟ್ಟಿ-ಮುಟ್ಟಾಗಿದ್ದು ಚಟುವಟಿಕೆಯಿಂದ ಕೆಲಸ ಕಾರ್ಯಗಳನ್ನು ಮಾಡುವಂಥವಳನ್ನು ಆಯ್ಕೆ ಮಾಡುತ್ತಾರೆ. ಹೊಲ ಮನೆ ಕೆಲಸ ಕಾರ್ಯಗಳನ್ನು ನಿಭಾಯಿಸಿಕೊಂಡು ಹೋಗಬೇಕಾಗಿರುವುದರಿಂದ ಚಟುವಟಿಕೆಯಿಂದ ಕೂಡಿದ ಹೆಣ್ಣನ್ನೇ ಆಯ್ಕೆಮಾಡುವರು. ಕನ್ಯಾ ಆಯ್ಕೆ ಮಾಡುವಾಗ ಹುಡುಗಿಯ ಬಣ್ಣಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡದೆ, ಆ ಮನೆತನದ ಗೌರವ, ಹುಡುಗಿಯ ಲಕ್ಷಣಗಳು ಹಾಗೂ ತಮ್ಮ ಮನೆಗೆ ಹೊಂದಿಕೊಳ್ಳುವ ಅಂಶಗಳನ್ನು ಆಧಾರವಾಗಿಟ್ಟುಕೊಳ್ಳಲಾಗುತ್ತದೆ.

ನಿಶ್ಚಿತಾರ್ಥ : ಗಂಡು ಹೆಣ್ಣು ನೋಡಿ ಒಪ್ಪಿಗೆ ಆದ ಮೇಲೆ ಗಂಡಿನ ಮತ್ತು ಕುಟುಂಬ ನೋಡಿ ಹೆಣ್ಣಿನ ಕಡೆಯವರಿಗೆ ಒಪ್ಪಿಗೆಯಾದ ಮೇಲೆ ಹೋಳಿಗೆ ಊಟವನ್ನು ಮಾಡಿ ತಮ್ಮ ಒಪ್ಪಿಗೆಯನ್ನು ಸೂಚಿಸುತ್ತಾರೆ. ನಂತರ ಗಂಡಿನ ಮನೆಯವರು ಒಂದು ಶುಭ ದಿನ ನೋಡಿ ಕನ್ಯೆಯ ಮನೆಗೆ ಹೋಗಿ ನಿಶ್ಚಿತಾರ್ಥ ಮಾಡುತ್ತಾರೆ. ಮದುವೆ ಮಾಡಿಕೊಳ್ಳುವ ಹೆಣ್ಣನ್ನು ಖಚಿತ ಪಡಿಸಿಕೊಳ್ಳುವುದೆಂದರ್ಥ. ಈ ಸಂಪ್ರದಾಯವನ್ನು ಎಲೆ ಹಂಚುವುದು, ಸಕ್ಕರೆ ಹಂಚುವುದು, ವೀಳ್ಯೆ ಶಾಸ್ತ್ರ ಎಂಬ ಇತ್ಯಾದಿ ಹೆಸರುಗಳಿಂದ ಕರೆಯುತ್ತಾರೆ. ನಿಶ್ಚಿಯ ಕಾರ್ಯವಾದ ಮೇಲೆ ಗಂಡಿನವರಾಗಲೀ ಹೆಣ್ಣಿನವರಾಗಲೀ ಈ ಸಂಬಂಧವನ್ನು ಮುರಿಯುವುದಕ್ಕೆ ಬರುವುದಿಲ್ಲ. ಈ ಕಾರ್ಯವಾದ ಮೇಲೆ ಮುಂದೆ ಎಂದಾದರೂ ಅನುಕೂಲವಾದಾಗ ಒಳ್ಳೇಯ ದಿನ ನೋಡಿ ಮದುವೆ ಮಾಡಿಕೊಳ್ಳಬಹುದು. "ಮದುವೆಗೆ ಮುಂಚೆ ಅಂದರೆ ೫ ದಿನ ಅಥವಾ ೯ ದಿನ ಮುಂಚಿತವಾಗಿ ವರನ

ಮನೆಯಲ್ಲಿ ಲಕ್ಷ್ಮೀ ಪೂಜೆಯ ಆಚರಣೆ ನಡೆಯುತ್ತದೆ. ಆ ದಿನ ಮನೆಯಲ್ಲಿ ಎಲ್ಲರೂ ಸ್ನಾನಮಾಡಿ ಶುಭ್ರ ಬಟ್ಟೆ ಧರಿಸಬೇಕು. ತುಂಬಿದ ಬಿಂದಿಗೆಗೆ ಬಂಗಾರದ ಒಡವೆಗಳಿಂದ ಆಲಂಕರಿಸಿ ಅದರ ಮುಂದೆ ಲಕ್ಷ್ಮೀ ಸೀರೆ, ಫಲ ತಾಂಬೂಲ ಇಟ್ಟು ಪೂಜಿಸುತ್ತಾರೆ. ಈ ಲಕ್ಷ್ಮೀ ಸೀರೆ ಪೂರ್ಣ ಕೆಂಪು ಬಣ್ಣದಿಂದ ಕೂಡಿರಬೇಕು. ಹೀಗೆ ಪೂಜಿಸುವ ಬಿಂದಿಗೆಯೇ ಲಕ್ಷ್ಮೀಗೆ ಮಾಡಿದ ಸಿಹಿ ಅಡುಗೆಯನ್ನು (ಹೋಳಿಗೆ) ಲಕ್ಷ್ಮೀಗೆ ಎಡೆ ಇಡುತ್ತಾರೆ."[೬] ಈ ಅಡುಗೆಯನ್ನು ಮಾಡುವವರು ವರನ ಗುಂಪಿನ ಬೆಡಗಿಗೆ ಸೇರಿದ ಮುತ್ತೈದೆಯವರೇ ಆಗಿರಬೇಕು. ಸ್ನಾನ ಮಾಡಿ ಅಡುಗೆಗೆ ತೊಡಗಬೇಕು ಅಡುಗೆ ಮಾಡುವಾಗ ಅಡುಗೆಯ ವಾಸನೆ ಹೊರಗೆ ಹೋಗದೆ ಹಾಗೆ ಕಿಟಕಿ, ಬಾಗಿಲುಗಳನ್ನು ಮುಚ್ಚಿರಬೇಕು. ಪೂಜೆ ಮುಗಿದು ನೈವೇದ್ಯ ಆಗುವವರೆಗೂ ಮಚ್ಚಿದ ಕಿಟಕಿ, ಬಾಗಿಲುಗಳನ್ನು ತೆರೆಯುವಂತಿಲ್ಲ. ಲಕ್ಷ್ಮೀ ಪೂಜೆಗೆ ಮಾಡಿದ ಆಡುಗೆಯನ್ನು ಬಂದು ಬಳಗದವರು ಮಾತ್ರ ಊಟ ಮಾಡಬೇಕು. ಅಲ್ಲದೇ ಊಟ ಮಾಡಿದ ಅಗಳನ್ನು ಹೊರಕ್ಕೆ ಚಲ್ಲುವಂತಿಲ್ಲ. ಮನೆಯೊಳಗೆ ಒಂದು ತೆಗ್ಗು ತೋಡಿ ಎಲ್ಲಾ ಮುಸುರೆ ನೀರನ್ನು ಮಿಕ್ಕಿರುವ ಆಹಾರವನ್ನು ಅದರಲ್ಲಿ ಹಾಕಿ ಮುಚ್ಚುತ್ತಾರೆ. ಜೊತೆಗೆ ಲಕ್ಷ್ಮೀ ಮಾಡಿದ ದಿನ ಮನೆಯಲ್ಲಿ ಯಾರು ದುಡ್ಡು ಹೊರಗಿನವರಿಗೆ ಕೊಡುವಂತಿಲ್ಲ. ಹಣ ಖರ್ಚುಮಾಡವುದಿಲ್ಲ ಅಲ್ಲದೇ ಲಕ್ಷ್ಮೀ ಕಾರ್ಯದ ದಿನ ಮತ್ತು ಮರುದಿನ ಮನೆಯೊಳಗೆ ಗುಡಿಸಿದ ಕಸವನ್ನು ಹೊರಗೆ ಎಸೆಯುವುದಿಲ್ಲ. ಲಕ್ಷ್ಮೀ ಕಾರ್ಯದ ದಿವಸ ಯಾವ ಕಾರಣಕ್ಕೂ ಲಕ್ಷ್ಮೀಯನ್ನು ಹೊರಗೆ ಹೋಗಲು ಬಿಡಬಾರದು, ಬಿಟ್ಟರೆ ಇನ್ನು ಮುಂದೆ ಎಂದೂ ಲಕ್ಷ್ಮೀ ಮನೆ ತುಂಬುವುದಿಲ್ಲ ಎಂಬ ನಂಬಿಕೆಯಿದೆ. ಆದ್ದರಿಂದ ಈ ಆಚರಣೆಯನ್ನು ಕಟ್ಟುನಿಟ್ಟಾಗಿ ಆಚರಿಸಲಾಗುತ್ತದೆ.

ಮದುವೆಗೆ ಆಹ್ವಾನ

ದೊಡ್ಡಿಗಳಲ್ಲಿ ಇರುವ ಯಾವುದೇ ಸಮುದಾಯದವರು ಲಗ್ನಪತ್ರಿಕೆ ಹಾಕುತ್ತಿರಲಿಲ್ಲ. ಆದರೆ ಇತ್ತೀಚಿಗೆ ಬಂಧುಗಳಿಗೆ ಸುಮ್ಮೆ ಹೇಳಿದರೆ ಸರಿ ಇರುವುದಿಲ್ಲ. ಜೊತೆಗೆ ಈಗ ಯಾವುದೇ ದೊಡ್ಡಿಯಲ್ಲಿ ಮದುವೆ ಮಾಡಿಕೊಂಡರೆ ಇತ್ತೀಚಿನ ದಿನಮಾನಗಳಲ್ಲಿ ಆಮಂತ್ರಣ ಪತ್ರಿಕೆ ಹಾಕುತ್ತಿರುವುದು ಕಂಡುಬರುತ್ತದೆ. ಜೊತೆಗೆ ಇಲ್ಲಿನ ನಿವಾಸಿಗಳು ಮದುವೆಗೆ ಹೇಳುವುದಕ್ಕೆ ಬಂದ ಬಂಧುಗಳಿಗೆ ಲಗ್ನ ಪತ್ರಿಕೆ ಮಾಡಿಸಿಲ್ಲವೇ? ಕೇಳುತ್ತಾರೆ. ಇದರಿಂದ ಸಹಜವಾಗಿ ದೊಡ್ಡಿಯಲ್ಲಿ ನೆಲೆಸಿರುವವರು ಲಗ್ನ ಪತ್ರಿಕೆ ಮಾಡಿಸುತ್ತಾರೆ. ಮದುವೆಗೆ ಹತ್ತು ಹನ್ನೊಂದು ದಿನ ಬಾಕಿ ಇರುವ ಸಂದರ್ಭದಲ್ಲಿ ದೊಡ್ಡಿಗಳಿಗೆ ಸಮೀಪ ಇರುವ ತಾಲೂಕು ಕೇಂದ್ರಗಳಿಗೆ ಹೋಗಿ ಲಗ್ನ ಪತ್ರಿಕೆ ಹಾಕಿಸುತ್ತಾರೆ. ಬಂಧುಗಳ ಮನೆಗೆ ಹೋಗಿ ಆಮಂತ್ರಣ ಪತ್ರಿಕೆ ನೀಡಿ ತಪ್ಪದೇ ಮದುವೆಗೆ ಬರಬೇಕು ಎಂದು ಹೇಳುತ್ತಾರೆ. ದೊಡ್ಡಿಗಳ ಪಕ್ಕದಲ್ಲಿ ಇರುವ ಅಣ್ಣ ತಮ್ಮಂದಿರ ಮನೆಗೆ ಹೋಗಿ ಬಾಯಿ ಮಾತಿನಲ್ಲಿ ಹೇಳಿ ಬರುತ್ತಾರೆ.

ಜವಳಿ (ಬಟ್ಟೆ) ತೆಗೆಯುವುದು

ಇದನ್ನು ದೊಡ್ಡಿಯಲ್ಲಿ ಬೇಡರು ಮದುವೆಯ ಬಟ್ಟೆ ಸಂತೆ ಎಂದು ಕರೆಯುತ್ತಾರೆ. ಮದುವೆ ದಿನಾಂಕ ಗೊತ್ತುಮಾಡಿದ ಮೇಲೆ ಮದುವೆ ಬಟ್ಟೆಯನ್ನು ಖರೀದಿಸಲು ತಮ್ಮ ದೊಡ್ಡಿ ಸಮೀಪವಿರುವ ಪಟ್ಟಣಕ್ಕೆ ಹೋಗುವ ದಿನವನ್ನು ಗೊತ್ತುಮಾಡುತ್ತಾರೆ. ದೊಡ್ಡಿಗಳ ಜನರು ತಾಲೂಕು ಕೇಂದ್ರವಾಗಿರುವ ಸ್ಥಳಗಳಿಗೆ ಹೋಗುತ್ತಾರೆ. ಇಲ್ಲದಿದ್ದರೆ ಗಂಡನ ಕಡೆಯವರು ಮತ್ತು ಹೆಣ್ಣಿನ ಕಡೆಯವರು ಮಾತಾಡಿಕೊಂಡು ಇಬ್ಬರಿಗೆ ಅನುಕೂಲವಾಗುವ ಸ್ಥಳ ಲಿಂಗಸ್ಗೂರು ತಾಲೂಕಿಗೆ ಹೋಗಬಹುದು. ಅಥವಾ ಮಾನವಿ ತಾಲೂಕಿಗೆ ಹೋಗುತ್ತಾರೆ. ವಧು-ವರರಿಗೆ ಮಾತ್ರವಲ್ಲದೆ ಅವರ ತಾಯಂದಿರಿಗೂ ಬಟ್ಟೆ ಕೊಳ್ಳುತ್ತಾರೆ. ಜೊತೆಗೆ ತಾಯಿ ಹುಟ್ಟಿದ ಸೀರೆ ಮತ್ತು ಆಯಿ ಹುಟ್ಟಿಗೆ ಸೀರೆ ಸೋದರ ಮಾವನ ಅಚಡ ಎಂದು ಖರೀದಿ ಮಾಡುತ್ತಾರೆ. ಹೆಣ್ಣಿನ ಕಡೆಯವರು ಗಂಡು ಕೊಡುವ ಬಂಗಾರವನ್ನು ಖರೀದಿಸುತ್ತಾರೆ. ಅದೇ ರೀತಿ ಗಂಡಿನ ಕಡೆಯವರು ಹೆಣ್ಣಿಗೆ ಆಕುವ ಬಂಗಾರದ ಆಭರಣಗಳನ್ನು ಮಾಡಿಸುತ್ತಾರೆ. ಗಂಡು ಮತ್ತು ಹೆಣ್ಣಿನ ಕಡೆಯವರು ಬಟ್ಟೆ ಖರೀದಿ ಮುಗಿದ ನಂತರ ಸಿಹಿ ಊಟ ಮಾಡಿ ಎರಡು ಕಡೆಯವರು ತಮ್ಮ ಊರು ದೊಡ್ಡಿಗಳಿಗೆ ತೆರಳುತ್ತಾರೆ.

ಪ್ರಧಾನ ಆಚರಣೆಗಳು

ಹಂದರ ಹಾಕುವುದು : ವರನ ಮನೆಯ ಮುಂದೆ ಹಂದರ ಹಾಕುತ್ತಾರೆ. ಇದನ್ನು ಹಾಕಬೇಕಾದರೆ ನಾಲ್ಕು ಕಡೆಗಳಲ್ಲಿ ಹೊಂಗೆ (ನಗ) ಗಿಡದ ಕಟ್ಟಿಗೆಯನ್ನು ನೆಟ್ಟು ಅವುಗಳ ಮೇಲೆ ಹೊಂಗೆ ಕಟ್ಟಿಗೆಯನ್ನು ಕಟ್ಟುತ್ತಾರೆ. ಕಟ್ಟಿಗೆಯ ಮೇಲೆ ಹೊಂಗೆಯ, ತೆಂಗಿನ ಗರಿ ಮಾವಿನ ತಪ್ಪಲು ಹಾಕುತ್ತಾರೆ. ಮಾವಿನ ಎಲೆಗಳಿಂದ ತೋರಣ ಕಟ್ಟುತ್ತಾರೆ.

ಶಾಶಿ ಕಟ್ಟಿ : ವರನ ಮನೆಯ ಬಲ ಭಾಗದಲ್ಲಿ ಗೋಡೆಗೆ ಹೊಂದಿಕೊಂಡಂತೆ ಒಂದು ಅರ್ಧ ಅಡಿ ಎತ್ತರದ ಹುತ್ತಿನ ಮಣ್ಣಿನ ಕಟ್ಟೆಯೊಂದನ್ನು ಕಟ್ಟುತ್ತಾರೆ. ಆ ಕಟ್ಟೆಗೆ ಹೊಂದಿಕೊಂಡ ಗೋಡೆಯ ಮೇಲೆ ಸೂರ್ಯ ಚಂದ್ರರ ಚಿತ್ರಗಳನ್ನು ಬಿಡಿಸುತ್ತಾರೆ. ಅದರ ಕೆಳಗೆ ಬಾಸಿಂಗ ಮತ್ತು ದಂಡಿ ಚಿತ್ರಗಳನ್ನು ಬರೆಯುತ್ತಾರೆ. ಆ ಚಿತ್ರಗಳ ಬರೆದ ನಂತರ ಬಟ್ಟೆಯಿಂದ ಚಿತ್ರಕ್ಕೆ ಪರದೆ ಕಟ್ಟುತ್ತಾರೆ. ಪದ್ಧತಿ ಪ್ರಕಾರ ಪೂಜಿಸುತ್ತಾರೆ.

ಹಾಲಗಂಬ ತರುವುದು : ವರನಿಗೆ ಬೀಗರಾಗುವ ಮಾವನ ಕೈಯಿಂದ ಹಾಲಗಂಬ ತರಿಸುತ್ತಾರೆ. ದೊಡ್ಡಿಗಳ ಹತ್ತಿರವಿರುವ ಹಾಲದ ಗಿಡಕ್ಕೆ ಪೂಜೆ ಮಾಡಿ ಅದರಲ್ಲಿ ಒಂದು ಸಣ್ಣ ಕೊಂಬೆ ಕಡಿದುಕೊಂಡು ಮನೆಗೆ ಬರುತ್ತಾರೆ. ಹಂದರ ಒಳಗೆ ಹಸಿ ಮಣ್ಣಿನ ಗುಡ್ಡೆ ಮಾಡಿ ಅದರೊಳಗೆ ಹಾಲಗಂಬ ನೆಡುತ್ತಾರೆ. ಹಾಲಗಂಬ ತಂದ ಮಾವನಿಗೆ ಬಟ್ಟೆ ಮಾಡುತ್ತಾರೆ. ಹಂದರ ಹಾಕಿದ ದಿನದಿಂದ ಇಳಿಸುವವರಿಗೆ ಸುಮಾರು ೫ ದಿನಗಳವರೆಗೆ ರಾತ್ರಿ ವೇಳೆಯಲ್ಲಿ ಹಂದರದಲ್ಲಿ ದೀಪ ಹಚ್ಚುತ್ತಾರೆ.

ಎದುರುಗೊಳ್ಳುವುದು ಅಥವಾ ಭೇಟಿ ಮಾಡುವುದು : ಬೀಗರನ್ನು ಸ್ವಾಗತಿಸುವುದಕ್ಕೆ ಭೇಟಿ ಮಾಡುವುದೆನ್ನುವರು ಸಾಯಂಕಾಲ ಹೆಣ್ಣಿನ ಕಡೆಯವರ ಊರ ಹೊರಗೆ ಹನುಮನ ದೇವರು ಗುಡಿಯಲ್ಲಿ ಅಥವಾ ಮನೆಯಲ್ಲಿ ವ್ಯವಸ್ಥೆ ಮಾಡುವುದು. ಮದುವೆ ದಿನ ಬೆಳಿಗ್ಗೆ ಗಂಡಿನವರು ಹೆಣ್ಣಿನ ಕಡೆಯವರಿಗೆ ವಾದ್ಯಗಳೊಂದಿಗೆ ಬೀಗರನ್ನು ಎದುರುಗೊಳ್ಳುತ್ತಾರೆ ಮದುವೆ ಮುಂಚಿತವಾಗಿ ಕುಟುಂಬ ಸಂಪ್ರದಾಯದಂತೆ ಕಾರ್ಯಕ್ರಮ ಮಾಡುತ್ತಾರೆ.

ಐರಾಣಿ ತರುವುದು : ತಾಳಿ ಕಟ್ಟುವ ಮತ್ತು ಅರಿಶಿಣ ನೀರು ವಧು-ವರನಿಗೆ ಹಾಕುವ ಸಮಯದಲ್ಲಿ ಉಪಯೋಗಿಸುವ ಮಣ್ಣಿನ ೫ ಬಿಂದಿಗೆ ಮೊದಲೆ ಕುಂಬಾರನಿಗೆ ಹೇಳಿ ಮಾಡಿಸಿರುತ್ತಾರೆ. ಇದಕ್ಕೆ ಐರಾಣಿ ಎಂದು ಕರೆಯುತ್ತಾರೆ. ಈ ಐರಾಣಿಗಳನ್ನು ಕುಂಬಾರರು ತೆಗೆದುಕೊಂಡು ಬಂದು ದೇವಸ್ಥಾನದಲ್ಲಿಟ್ಟು ಕೊಂಡಿರುತ್ತಾನೆ. ಕಳಸ ವಾದ್ಯ ಸಮೇತವಾಗಿ ದೇವಸ್ಥಾನಕ್ಕೆ ಹೋಗಿ ಐರಾಣಿ ಬಿಂದಿಗೆಗಳನ್ನು ಮನೆಗೆ ತರುತ್ತಾರೆ. ನಂತರ ಮನೆಯಿಂದ ನೀರು ತರಲು ಹೋದವರಿಗೆ ಹರಿಶಿಣ ಬೋಟು ಎಲೆಯನ್ನು ಕೂಡಿಸಿ ಕಂಕಣ ಮಾಡಿ ಐದು ಮಂದಿಗೆ ಬಲಗೈಗೆ ಕಟ್ಟುತ್ತಾರೆ. ಗಂಗೆ ಇರುವಲ್ಲಿಗೆ ಹೋಗಿ ಪೂಜೆ ಮಾಡಿ ನೀರು ತುಂಬಿಕೊಂಡು ಮನೆಗೆ ಬರುತ್ತಾರೆ.

ಸುರಿಗೆ ಸುತ್ತುವುದು ಅಥವಾ ಸುರಿಗೆ ನೀರು : ಮದುಮಗನ ಮನೆಯ ಮುಂದೆ ನೀರು ತುಂಬಿ ತಂದ ಬಿಂದಿಗೆಗಳನ್ನಿಟ್ಟು ಅವು ಉರುಳಿ ಬೀಳದ ಹಾಗೆ ಹಿಡಿದುಕೊಂಡು ಅಲ್ಲೆ ಕೂರುತ್ತಾರೆ. ನಂತರ ನಾಲ್ಕು ಬಿಂದಿಗೆಗಳಿಗೆ ಹತ್ತಿ ನೂಲಿನ ದಾರದಿಂದ ಐದು ಸುತ್ತು ಸುತ್ತುತ್ತಾರೆ. ಇದಕ್ಕೆ ಸುರಿಗೆ ಸುತ್ತುವುದು ಎಂದು ಕರೆಯುವರು ಸುರಿಗೆಯ ಮಧ್ಯದಲ್ಲಿ ಎರಡು ಒನಕೆ ಹಾಕಿ ಮುಂದಿನ ಒನಕೆಯ ಮದುಮಗ ಮತ್ತು ಮದುಮಗಳು ಹಿಂದಿನ ಒನಕೆಯ ಮೇಲೆ ವರನ ಅಣ್ಣ ಅತ್ತಿಗೆ ಕೂರಿಸಿ ನೀರು ಹಾಕುವುದು. ನೀರು ಹಾಕಿದ ನಂತರ ಹೊಸ ಬಟ್ಟೆಯನ್ನು ಉಡಿಸುತ್ತಾರೆ. ಸುರಿಗೆಯಲ್ಲಿ ವರನಿಗೆ ಬಾಸಿಂಗ ಕಟ್ಟುತ್ತಾರೆ. ಮಧುವಿಗೆ ದಂಡಿಯನ್ನು ಕಟ್ಟುತ್ತಾರೆ.

ತಾಳಿ ಕಟ್ಟುವುದು : "ಹಣೆ ಹಕ್ಕಿ ಕುಡಿ ಬಂದರೆ ಹೆತ್ತ ತಂದೆ ತಾಯಿಯು ನಿಲ್ಲಿಸುವುದಕ್ಕೆ ಆಗುವುದಿಲ್ಲ." ತಾಳಿ ಕಟ್ಟುವ ಮುಹೂರ್ತ ಮೊದಲೇ ನಿಗದಿಯಾಗಿರುವುದರಿಂದ ಈ ಕಾರ್ಯಕ್ಕೆ ಪುರೋಹಿತರು ಬರುತ್ತಾರೆ. ಮನೆಯ ಬಾಗಿಲ ಮುಂದೆ ಹಂದರದ ಕೆಳಗೆ ಗಂಡನ್ನು ಪೂರ್ವಭಿಮುಖವಾಗಿ ಕೂಡಿಸಿ. ಬಾಸಿಂಗ ಕಟ್ಟುವ ಮೊದಲೇ ವಧು-ವರನಿಂದ ತಲಾ ೫ ಕರಿಮಣಿ ಹಾಗೂ ಬಂಗಾರದ ಗುಂಡು ಪೋಣಿಸಿಟ್ಟಿರುತ್ತಾರೆ. ನಂತರ ಪುರೋಹಿತರು ಸಂಸ್ಕೃತ ಶ್ಲೋಕ ಪಠಿಸಿ ನೆರೆದ ಸಮಸ್ತ ಜನರು ತಾಳಿಗೆ ದೈವದವರು ಕೈ ಮುಟ್ಟಿಸಿ ಗಂಡಿನ ಕೈಯಿಂದ ಹೆಣ್ಣಿನ ಕೊರಳಿಗೆ ತಾಳಿ ಕಟ್ಟಿಸುತ್ತಾರೆ. ತಾಳಿ ಕಟ್ಟುವಾಗ ಎಲ್ಲ ಸಮಸ್ತರೂ ಆಶೀರ್ವಾದ ರೂಪವಾಗಿ ಅಕ್ಕಿ ಕಾಳನ್ನು ಹಾಕುತ್ತಾರೆ. ತಾಳಿ ಕಟ್ಟಿದ ತಕ್ಷಣ

ವಧುವಿನ ಸೀರೆಯ ಸೆರಗಿನ ತುದಿ ಮತ್ತು ವರನ ಪಂಚೆಯ ತುದಿಗಳನ್ನು ಹಿಡಿದು ಗಂಟು ಹಾಕುತ್ತಾರೆ. ಇದನ್ನು ಬ್ರಹ್ಮಗಂಟು ಎನ್ನುವರು ಈ ಸಂಬಂಧ ಗಟ್ಟಿಯಾಗಿ ಉಳಿಯಲಿ ಎಂಬ ಪ್ರತೀತಿ ಈ ಬ್ರಹ್ಮಗಂಟಿನ ಉದ್ದೇಶವಾಗಿದೆ.

"ಈ ಕಾರ್ಯವಾದ ಮೇಲೆ ನೆರೆದಿರುವ ಸ್ತ್ರೀ–ಪುರುಷರು ನವ ಜೋಡಿಗಳ ಹೆಸರು ಹೇಳಲು ಒತ್ತಾಯಿಸುವರು. ಆ ಸಮಯದಲ್ಲಿ ಗಂಡ ತನ್ನ ಹೆಂಡತಿಯ ಹೆಸರನ್ನು ಹಾಗೂ ಹೆಣ್ಣು ತನ್ನ ಗಂಡನ ಹೆಸರನ್ನು ಒಗಟಿನ ಮೂಲಕ ಹೇಳುತ್ತಾರೆ. ಕೊನೆಯ ಪದದಲ್ಲಿ ತಮ್ಮ ಹೆಸರನ್ನು ಸೇರಿಸಿ ಹೇಳುವುದು ವಾಡಿಕೆ ಉದಾ: ಗಂಡು ಹೆಣ್ಣಿನ ಹೆಸರನ್ನು ಈ ರೀತಿಯಾಗಿ ಹೇಳುತ್ತಾನೆ."[೧೧]

'ಹಗ್ಗಲಿ ಹೊಡಿದರೆ ಮಗ್ಗಲಕ್ಕೆ ಬರುತಾಳೆ
ಒನಕೆಯಲ್ಲಿ ಹೊಡಿದರೆ ಕುಣಕೊಂತಾ ಬರುತ್ತಾಳೆ. ಭಾಗವ್ವ'

'ನೆಲದ ಮೇಲೆ ಸೆಗಣಿ ಗೋಡೆ ಮೇಲೆ ಬೆರಣಿ ತಿಕ್ಕಿ ನೋಡು ಅಂದರೆ ನೆಕ್ಕಿ ನೋಡುತ್ತಾಳೆ ಸುಜಾತ'

ಹೆಣ್ಣು ಗಂಡಿನ ಹೆಸರೇಳುವಾಗ

'ದೂರ ನಿಂತ ಕೇಳಿದರೆ ಪತಿ ಹೆಸರು
ಸರಿದು ನಿಂತು ಕೇಳಿದರೆ ಹವಲ್ದಾರನ ಹೆಸರು
ಹತ್ತು ಮಂದ್ಯಾಗ ಹೇಳ್ತೀನಿ ಯಲ್ಲಣ್ಣನ ಹೆಸರು ಯಲ್ಲಣ್ಣ'

'ಅಮವಾಸ್ಯೆ ಕತ್ತಲ ಗೋಧಿ ಬಿತ್ತಿಲಿ ನನ್ನ
ಗಂಡನ ಹೆಸರು ಕೇಳುತ್ತಿರಲ್ಲ ನಿಮ್ಮ ಹೆಣ ಎತ್ತಿಲಿ ಶಿವಣ್ಣ'

ಸಾಮಾಜಿಕ ಸ್ಥಿರ ರಚನೆಯಲ್ಲಿ ಬೇಡರು

ಕುಟುಂಬ

"ಇಂದು ಸಾಮಾನ್ಯವಾಗಿ ಎಲ್ಲ ಆದಿವಾಸಿ ಸಮುದಾಯಗಳಲ್ಲಿ ಪಿತೃಪ್ರಧಾನ ಕುಟುಂಬ ವ್ಯವಸ್ಥೆಯೇ ಕಂಡುಬರುತ್ತದೆ. ಆದರೆ ಮನೆಯ ಜವಾಬ್ದಾರಿಯನ್ನೆಲ್ಲ ಕುಟುಂಬದ ಯಜಮಾನನೆ ನಿರ್ವಹಿಸುತ್ತಿರುವುದನ್ನು ಕಾಣುತ್ತೇವೆ. ಪಿತೃ ಪ್ರಧಾನ ಕುಟುಂಬ ಎನ್ನುವುದು ಕೇವಲ ಮೇಲ್ನೋಟದಲ್ಲಿ ಮಾತ್ರ ಕಂಡುಬರುತ್ತದೆ. ಆದರೆ ಇಡೀ ಕುಟುಂಬದ ನಿರ್ವಹಣೆಯನ್ನೆಲ್ಲ ಮಹಿಳೆ ನಿರ್ವಹಣೆ ಮಾಡುವುದನ್ನು ಕಾಣಬಹುದು. ಮಹಿಳೆ ಮನೆ ಒಳಗಡೆಯು ಕೆಲಸ ಮಾಡುತ್ತಾಳೆ."[೧೧] ಕುಟುಂಬದ ಆರ್ಥಿಕ ಸ್ಥಿತಿ ಸುಧಾರಿಸುವ ಸಲುವಾಗಿ ಕೃಷಿಯಲ್ಲಿ ಪತಿಗೆ ಸಹಾಯಕವಾಗಿ ಕೆಲಸ ಮಾಡುತ್ತಾಳೆ. ಪುರುಷನು ಮನೆಯ ಹೊರಗಡೆ

ಕೆಲಸ ಮಾಡುತ್ತಾನೆ. ಕುಟುಂಬದ ಎಲ್ಲ ಜವಾಬ್ದಾರಿಯನ್ನು ಪುರುಷನ ಹೆಗಲ ಮೇಲೆ ಇರುತ್ತದೆ. ರಾಯಚೂರು ಜಿಲ್ಲೆಯ ದೊಡ್ಡಿಗಳಲ್ಲಿ ಬಹುತೇಕ ಬೇಡ ಸಮುದಾಯದ ಕುಟುಂಬಗಳು ಪಿತೃ ಪ್ರಧಾನ ಕುಟುಂಬಗಳಾಗಿವೆ. ಆಸ್ತಿಯಲ್ಲಿ ಕೇವಲ ಗಂಡು ಮಕ್ಕಳಿಗೆ ಪಾಲುಕೊಡುತ್ತಾರೆ. ಗಂಡು ಸಂತತಿ ಇಲ್ಲದ ಸಂದರ್ಭದಲ್ಲಿ ಆಸ್ತಿಯನ್ನು ಹೆಣ್ಣು ಮಕ್ಕಳಿಗೆ ಕೊಡುವುದನ್ನು ಕಾಣುತ್ತೇವೆ. ಅವರಲ್ಲಿ ಮದುವೆ ಸಂದರ್ಭದಲ್ಲಿ ಹಿಂದೆ ಹೆಣ್ಣಿನ ಕುಟುಂಬಕ್ಕೆ ತೆರವು ಕೊಟ್ಟು ಮದುವೆ ಮಾಡಿಕೊಳ್ಳುತ್ತಿದ್ದರು. ಆದರೆ ಇತ್ತೀಚಿನ ದಿನಮಾನದಲ್ಲಿ ತೆರವು ಪದ್ದತಿ ರಾಯಚೂರು ಜಿಲ್ಲೆಯ ಯಾವ ನೆಲೆಯಲ್ಲಿಯೂ ಕಂಡುಬರುವುದಿಲ್ಲ ಆದರೆ ವರದಕ್ಷಿಣೆ ಪದ್ಧತಿ ಕಂಡುಬರುತ್ತದೆ.

ಸಮಾಜದ ಭದ್ರವಾದ ಘಟಕವೆಂದರೆ ಕುಟುಂಬ ಹಾಗೂ ಇದೊಂದು ಸಾಮಾಜಿಕ ಸಂಸ್ಥೆಯಾಗಿರುತ್ತದೆ. 'ಸಿ.ಎಚ್.ಕೂಲೆ'ಯವರು ಕುಟುಂಬವನ್ನು ಪ್ರಾಥಮಿಕ ಸಮೂಹಕ್ಕೆ ಸೇರಿಸಿದ್ದಾರೆ. ನಾವು ರಾಯಚೂರು ಜಿಲ್ಲೆಯ ದೊಡ್ಡಿಗಳಲ್ಲಿ ವಾಸಿಸುವ ಬೇಡರ ಸ್ಥಿತಿಗತಿಗಳನ್ನು ತಿಳಿಯಲು ದೊಡ್ಡಿಗಳಲ್ಲಿ ಬರುವ ಬೇಡರ ೭೫ ಕುಟುಂಬಗಳನ್ನು ಆಯ್ಕೆ ಮಾಡಿಕೊಂಡು ಅವರ ಕೌಟುಂಬಿಕ ವ್ಯವಸ್ಥೆ ಹೇಗಿದೆ ಎಂಬುದನ್ನು ಇಲ್ಲಿ ವಿಶ್ಲೇಷಿಸುವ ಪ್ರಯತ್ನವನ್ನು ಮಾಡಿದ್ದೇನೆ.

ಕುಟುಂಬ ಸಮಾಜಿಕ ಜೀವನಕ್ಕೆ ಒಂದು ನೆಲೆ, ಬೆಲೆ, ಸ್ಥಿರತೆ ಹಾಗೂ ಭದ್ರತೆಯನ್ನು ಕೊಡುತ್ತದೆ. ಮತ್ತು ಮಾನವ ವಿಕಾಸಕ್ಕೆ ಅವಕಾಶ ಮಾಡಿಕೊಡುತ್ತದೆ. ಕುಟುಂಬ ಒಂದು ಸಮುದಾಯಿಕ ನೆಲೆಯಲ್ಲಿ ರೂಪ ತಾಳುತ್ತದೆ. ಅಂದು ತಂದೆ, ತಾಯಿ ಹಾಗೂ ಮಕ್ಕಳಿಂದ ಕೂಡಿರುತ್ತದೆ. 'ಸಮ್ಮರ್' ಮತ್ತು 'ಕೆಲ್ಲರ' ಎಂಬ ಸಮಾಜಶಾಸ್ತ್ರಜ್ಞರು ಕುಟುಂಬವನ್ನು ಕುರಿತು ಹೀಗೆ ವ್ಯಾಖ್ಯಾನಿಸಿದ್ದಾರೆ. "ರಕ್ತ ಸಂಬಂಧಿಗಳಿಂದ ಕೂಡಿದ ಮತ್ತು ಕನಿಷ್ಠ ಎರಡು ತಲೆಮಾರುಗಳನ್ನು ಒಳಗೊಂಡಿರುವ ಅತೀ ಸೂಕ್ಷ್ಮ ಸಾಮಾಜಿಕ ಸಂಘಟನೆಯೇ ಕುಟುಂಬ ಎಂದಿದ್ದಾರೆ. ಬೇಡರಲ್ಲಿ ಅವಿಭಕ್ತ ಕುಟುಂಬಗಳು ಇಂದಿಗೂ ಜೀವಂತವಾಗಿವೆ. ಅದೇ ರೀತಿ ವಿಭಕ್ತ ಕುಟುಂಬಗಳು ಈ ಸಮುದಾಯದಲ್ಲಿ ಸಾರ್ವತ್ರಿಕವಾಗಿ ಹೆಚ್ಚಾಗುತ್ತಿವೆ. ಬೇಡರು ತಮ್ಮದೇ ಆದ ಯಾವುದೇ ಕುಲ ಕಸುಬು ಇಲ್ಲದೇ ಬಹುತೇಕ ಬೇಡರು ಕೃಷಿಯನ್ನು ನಂಬಿ ಜೀವನ ಮಾಡುತ್ತಿದ್ದಾರೆ. ದೊಡ್ಡಿಗಳಲ್ಲಿ ನೆಲೆಸಿರುವ ಕಾರಣದಿಂದಾಗಿ ಬೇಡರಲ್ಲಿ ಅವಿಭಕ್ತ ಕುಟುಂಬಗಳು ಗಟ್ಟಿಯಾಗಿ ಇಲ್ಲಿಯವರೆಗೆ ಅಡವಿಯಲ್ಲಿ ಇರುವುದರಿಂದ ಅವಿಭಕ್ತ ಕುಟುಂಬ ಜೀವಂತವಾಗಿ ಇರುವುದು ಕಂಡುಬರುತ್ತದೆ. ಬೇಡರು ಭಾವನಾತ್ಮಕ ಸಂಬಂಧಗಳಿಗೆ ಗುಂಪು ಜೀವನಕ್ಕೆ ಹೆಚ್ಚಿನ ಗೌರವ ನೀಡುತ್ತಾರೆ. ಇವರಲ್ಲಿ ಒಗ್ಗಟ್ಟಿನ ಬದುಕು ಕಂಡುಬರುತ್ತದೆ. ಕ್ಷೇತ್ರಕಾರ್ಯ ಮಾಡಿದ ರಾಯಚೂರು ಜಿಲ್ಲೆಯ ಐದು ತಾಲೂಕಗಳಲ್ಲಿ ಪ್ರತಿ ತಾಲೂಕಿಗೆ ೧೫ ಕುಟುಂಬದಂತೆ ಒಟ್ಟು ೭೫ ಕುಟುಂಬಗಳಲ್ಲಿ

ವಿಭಕ್ತ ಮತ್ತು ಅವಿಭಕ್ತ ಕುಟುಂಬಗಳು ಕಂಡುಬಂದಿವೆ. ಇತ್ತೀಚೆಗೆ ನಗರೀಕರಣದ ಪ್ರಭಾವದಿಂದಾಗಿ ವಿಭಕ್ತ ಕುಟುಂಬಗಳ ಸಂಖ್ಯೆ ಹೆಚ್ಚಾಗುತ್ತಿರುವುದನ್ನು ಕಾಣುತ್ತೇವೆ. ಇದಕ್ಕೆ ಮೂಲ ಕಾರಣ ವೃತ್ತಿಗಳು ಆಗುತ್ತಿವೆ. ಬೇಡರ ದೊಡ್ಡಿಗಳಲ್ಲಿ ಜನರು ಕೂಲಿ ಕೆಲಸಗಳನ್ನು ಆರಿಸಿಕೊಂಡು ನಗರಗಳಿಗೆ ವಲಸೆ ಹೋಗುವವರ ಸಂಖ್ಯೆ ಹೆಚ್ಚಾಗುತ್ತಿವೆ. ಕೃಷಿಯಲ್ಲಿ ಸರಿಯಾದ ಲಾಭ ಸಿಗದಿದ್ದಾಗ ವ್ಯವಸಾಯ ವೃತ್ತಿ ಕಡಿಮೆಯಾದಂತೆಲ್ಲ ವಿಭಕ್ತ ಕುಟುಂಬಗಳ ಸಂಖ್ಯೆ ಹೆಚ್ಚಾಗುತ್ತಿವೆ. ಬೇಡರಲ್ಲಿ ಪಿತೃ ಪ್ರಧಾನ ವ್ಯವಸ್ಥೆ ಜಾರಿಯಲ್ಲಿದ್ದರೂ ಮಾತೃ ಪ್ರಧಾನತೆಗೆ ಹೆಚ್ಚಿನ ಮಹತ್ವ ಕೊಡುವುದನ್ನು ಕಾಣುತ್ತೇವೆ. ನಗರ ಪ್ರದೇಶಗಳ ಪ್ರಭಾವ ಪ್ರೇರಣೆ ಬೇಡರ ಕೌಟುಂಬಿಕ ವ್ಯವಸ್ಥೆಯ ಮೇಲೆ ಪರಿಣಾಮ ಬೀರಿದೆ. ಗಂಡ ಹೆಂಡತಿ ಮಕ್ಕಳಿಂದ ಮಾತ್ರ ಕೂಡಿದ ಸಂಸಾರಕ್ಕೆ ಹೆಚ್ಚಿನ ಒಲವನ್ನು ಅವರು ತೋರಿಸುತ್ತಿರುವುದು ಕಂಡುಬರುತ್ತದೆ. ಮೂಲತಃ ಆಸ್ತಿಗೆ ಅಷ್ಟೊಂದು ಮಹತ್ವ ಕೊಡದ ಬೇಡರು ಇಂದು ಆಸ್ತಿಗಾಗಿ ಹೊಡೆದಾಡಿ ವಿಭಕ್ತ ಕುಟುಂಬಗಳಾಗಿರುವುದನ್ನು ಸಾಮಾನ್ಯವಾಗಿ ಕಾಣುತ್ತೇವೆ.

ಉಡುಗೆ-ತೊಡುಗೆಗಳು

ಪ್ರತಿಯೊಂದು ಸಮುದಾಯ ತನ್ನದೇ ಆದ ಪರಂಪರಾನುಗತವಾದ ಉಡುಗೆ ತೊಡುಗೆಗಳನ್ನು ಹೊಂದಿರುತ್ತದೆ. ಆ ಉಡುಗೆ ತೊಡುಗೆಗಳಲ್ಲಿ ವಿಶೇಷತೆಯೂ ಇರುತ್ತದೆ. ಒಂದು ಸಮುದಾಯದ ವೇಷಭೂಷಣಗಳು ಆ ಸಮುದಾಯದ ಸಂಸ್ಕೃತಿಯನ್ನು ತಿಳಿಸುವಂತೆ ಬೇಡ ಸಮುದಾಯ ಉಡುಗೆ ತೊಡುಗೆಗಳಲ್ಲಿ ಅಷ್ಟಾಗಿ ಆಡಂಬರ ಜೀವನ ಕಂಡು ಬರುವುದಿಲ್ಲ. ಸರಳವಾದ ವೇಷಭೂಷಣ ಕಂಡುಬರುತ್ತದೆ. ಅವರು ಧರಿಸುವ ಬಟ್ಟೆಗಳ ಮುಖಾಂತರ ಅವರ ಜೀವನ ಮಟ್ಟವನ್ನು ತಿಳಿದುಕೊಳ್ಳಬಹುದು.

ಪುರುಷರು

ಬೇಡ ಪುರುಷರ ಉಡುಗೆ ತೊಡುಗೆಗಳು ಅತ್ಯಂತ ಸರಳವಾಗಿರುತ್ತವೆ. ಇವರಲ್ಲಿ ವಿಶೇಷವಾದ ಉಡುಗೆಗಳು ಕಂಡುಬರುವುದಿಲ್ಲ. ಇವರು ಧರಿಸುವ ಬಟ್ಟೆ ಲಂಡ (ಅರ್ಧ ತೊಳು) ಅಂಗಿ ಮೊಣಕಾಲಿನ ಮೇಲೆ ಇರುವ ಹಾಗೆ ದೋತ್ರವನ್ನು ಉಟ್ಟುಕೊಂಡು, ತಲೆಗೆ ವಸ್ತ್ರವನ್ನು ಸುತ್ತಿ, ನಿಲುವಂಗಿ ಧರಿಸಿ, ಕಾಲಿಗೆ ಚರ್ಮದ ಪಾದರಕ್ಷೆಗಳನ್ನು ಹಾಕಿಕೊಳ್ಳುತ್ತಿದ್ದರು. ಇತ್ತೀಚೆಗೆ ಆಧುನಿಕತೆಯ ಪ್ರಭಾವದಿಂದಾಗಿ ಯುವಕರು ಪ್ಯಾಂಟು, ಶರ್ಟ್, ಟೀ ಶರ್ಟ್ ಮುಂತಾದವುಗಳನ್ನು ಧರಿಸುತ್ತಾರೆ.

ಸ್ತ್ರೀಯರು

ಬೇಡರ ಮಹಿಳೆಯರ ಆಡಂಬರದ ಉಡುಗೆ ತೊಡುಗೆಗಳು ಕಂಡುಬರುವುದಿಲ್ಲ. ಸರಳವಾಗಿ ಇರುವ ಉಡುಗೆ ತೊಡುಗೆಗಳನ್ನು ಧರಿಸಿಕೊಂಡಿರುತ್ತಾರೆ. ಬೇಡರ ಮಹಿಳೆಯರು

ಕುಬ್ಬಸ ಸೀರೆಯನ್ನು ಧರಿಸುತ್ತಾರೆ. ಆಧುನಿಕತೆಯ ಪ್ರಭಾವದಿಂದ ನಗರಗಳಲ್ಲಿ ಸಿಗುವ ಆಧುನಿಕ ಮಾದರಿಯ ಸೀರೆ ಕುಬ್ಬಸವನ್ನು ತೊಡುತ್ತಿರುವುದನ್ನು ಇಂದು ನಕ್ಲೆಸ್, ಬಂಗಾರದ ಸರ, ಕಾಲುಚೈನ ಮುಂತಾದ ಆಧುನಿಕ ಆಭರಣಗಳನ್ನು ಮದುವೆಗಳಲ್ಲಿ ಹಾಕುತ್ತಾರೆ.

ನ್ಯಾಯ ಪದ್ಧತಿ

ಬೇಡರ ಜೀವನ, ವಿಧಿವಿಧಾನಗಳಿಗೆ ಸಂಬಂಧಿಸಿದಂತೆ ಅವರ ಸಾಮಾಜಿಕ ಸ್ಥರ ರಚನೆಯಲ್ಲಿ ಅವರು ಅನುಸರಿಸಬೇಕಾದ ಕುಲದ ಕಟ್ಟಳೆ ಮತ್ತು ನ್ಯಾಯಪದ್ದತಿ ಅಡಕವಾಗಿರುತ್ತದೆ. ಸಾಮುದಾಯದ ಜನರ ವರ್ತನೆಗಳನ್ನು ನಿಯಂತ್ರಣದಲ್ಲಿ ಇಡಲು ಅವರ ವರ್ತನೆಗಳ ಮೇಲೆ ಕಡಿವಾಣ ಹಾಕಲು ನ್ಯಾಯ ಪಂಚಾಯತಿ ಪ್ರಮುಖ ಕಾರ್ಯನಿರ್ವಹಿಸುತ್ತದೆ. ಬೇಡರಲ್ಲಿ ಕಂಡುಬರುವ ಎಲ್ಲ ವ್ಯಾಜ್ಯಗಳು ನ್ಯಾಯ ಪಂಚಾಯತಿಯಲ್ಲೇ ತೀರ್ಮಾನವಾಗಬೇಕೆಂಬ ಕಟ್ಟಳೆ ಇದೆ. ಬೇಡರು ನೋಡಲು ಒರಟಾಗಿ ಕಂಡರೂ ಬಹಳ ಮುಗ್ಧರು. ನ್ಯಾಯ ಅನ್ಯಾಯಗಳ ಬಗ್ಗೆ ಅಂಜುತ್ತಾರೆ. ಕುಟುಂಬದ ಒಳಗಿನ ವ್ಯಾಜ್ಯಗಳನ್ನು ಎಂದೂ ಕೋರ್ಟ್ ಕಛೇರಿಗೆ ತೆಗೆದುಕೊಂಡು ಹೋಗಲು ಇಷ್ಟಪಡುವುದಿಲ್ಲ.

ಬೇಡರ ಪ್ರತಿಯೊಂದು ದೊಡ್ಡಿಯಲ್ಲಿಯೂ ಸಮುದಾಯದ ಜನರ ನಿಯಂತ್ರಣಕ್ಕಾಗಿ ಒಂದು ನ್ಯಾಯ ಪಂಚಾಯತಿ ಇದ್ದೆ ಇರುತ್ತದೆ. ಇಲ್ಲಿನ ದೊಡ್ಡಿಯಲ್ಲಿ ಐದು ಮಂದಿ ಹಿರಿಯರು ದೊಡ್ಡಿಯ ದೈವದವರು ಆ ಪಂಚಾಯಿತಿಯ ಮುಖ್ಯಸ್ಥರು. ಐದು ಮಂದಿಯ ಮಾತು ಒಂದೇ ಆಗಿರುತ್ತೇ ದೊಡ್ಡಿಯಲ್ಲಿನ ಎಲ್ಲ ತಂಟೆ ತಕರಾರುಗಳನ್ನು ಇವರೇ ಬಗೆ ಹರಿಸುತ್ತಾರೆ. ಹೆಣ್ಣು ಮಕ್ಕಳಿಗೆ ಇಲ್ಲಿ ಅವಕಾಶವಿಲ್ಲ ಇಲ್ಲಿಯ ನ್ಯಾಯ ಪಂಚಾಯತಿ ಇದೊಂದು ಸಾಮಾಜಿಕ ಸಂಸ್ಥೆಯಂತೆ ಕಾರ್ಯನಿರ್ವಹಿಸುತ್ತದೆ. ಪರಂಪರಾನುಗತವಾಗಿ ಬಂದ ಅಲಿಖಿತ ಶಾಸನದ ಮೂಲಕ ಕುಲದ ಭದ್ರತೆ ಹಾಗೂ ಅದರ ಯೋಗಕ್ಷೇಮದ ಜೊತೆಗೆ ಜನರ ಹಿತ ಕಾಪಾಡುತ್ತಿರುತ್ತದೆ. ಹೆಂಗಸರಿಗೆ ನ್ಯಾಯ ಪಂಚಾಯತಿ ಮುಖ್ಯಸ್ಥರ ಹುದ್ದೆಯನ್ನು ಈ ಸಮುದಾಯದಲ್ಲಿ ನೀಡುವ ಪದ್ಧತಿ ಇಲ್ಲ.

ಗಂಡ-ಹೆಂಡಿರ ಮನಸ್ತಾಪ, ಅಂತರಜಾತಿ ವಿವಾಹ, ಜಗಳಗಳು, ಅನೈತಿಕ ಸಂಬಂಧ ಹೊಂದಿದ್ದರೆ, ಆಸ್ತಿ ಜಗಳ ಮತ್ತು ಬೇಡರು ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದುಕಿಗೆ ಅವಮಾನ ಎಸಗುವಂತಹ ಕಾರ್ಯ ಮಾಡಿದರೆ ಅವುಗಳನ್ನೆಲ್ಲಾ ದೊಡ್ಡಿಯ ಹಿರಿಯರ ತಂಡಕ್ಕೆ ದೈವ ಎಂದು ಕರೆಯುತ್ತಾರೆ. ಆ ದೈವದವರು ನೀಡುವ ತೀರ್ಪು ಉತ್ತಮವಾಗಿರುತ್ತದೆ. ಅಂತಿಮದಾಗಿರುತ್ತದೆ. ಇಲ್ಲಿನ ಜನರು ತೀರ್ಪು ನೀಡುವ ಯಜಮಾನರನ್ನು ದೈವದವರು ದೇವರು ಎಂದು ಭಾವಿಸುತ್ತಾರೆ.

ದೈವದ ಕಟ್ಟೆ

ಸಾಮಾನ್ಯವಾಗಿ ದೊಡ್ಡಿಗಳಲ್ಲಿ ನ್ಯಾಯ ತೀರ್ಮಾನ ಮಾಡುವ ಸ್ಥಳಕ್ಕೆ ದೈವದ ಕಟ್ಟೆ ಎಂದು ಕರೆಯುತ್ತಾರೆ. ಈ ನ್ಯಾಯ ಪಂಚಾಯಿತಿ ದೇವಸ್ಥಾನದ ಎದುರಿಗೆ ನಡೆಯುತ್ತದೆ. ದೊಡ್ಡಿಯ ಆಗು ಹೋಗುಗಳನ್ನೆಲ್ಲ ಇಲ್ಲಿ ಚರ್ಚಿಸಿ ನಿರ್ಣಯ ಕೈಗೊಳ್ಳಲಾಗುತ್ತದೆ. ಸಮಾಜ ಮನ್ನಣೆ ನೀಡಿದ ಕಾರ್ಯಕ್ಕೆ ವಿರುದ್ಧವಾಗಿ ನಡೆದುಕೊಳ್ಳುವವರ ವಿರುದ್ಧ ದೈವದವರು ಸೇರಿ ತೀರ್ಪುಗಳನ್ನು ನೀಡಿ ತಪ್ಪಿತಸ್ಥರಿಗೆ ಶಿಕ್ಷೆಕೊಡುತ್ತಾರೆ.

ಶಿಕ್ಷೆಯ ಸ್ವರೂಪ

ವ್ಯಭಿಚಾರ ಮಾಡುವ ಹೆಣ್ಣು ಮಕ್ಕಳಿಗೆ ದೊಡ್ಡಿಯಿಂದ ಬಹಿಷ್ಕಾರ ಹಾಕುತ್ತಾರೆ.

ಅಣ್ಣ ತಮ್ಮಂದಿರ ಆಸ್ತಿ ವಿವಾದವನ್ನು ದೈವದವರು ಕೂಡಿಕೊಂಡು ನೀಡುವ ತೀರ್ಪುಗಳಿಗೆ ಬದ್ಧರಾಗಬೇಕು.

ಗಂಡ ಹೆಂಡಿರ ಮನಸ್ತಾಪವನ್ನು ಇಬ್ಬರಿಗೆ ಬುದ್ದಿವಾದ ಹೇಳಿ ಆ ಜೋಡಿಗಳನ್ನು ಕೂಡಿ ಬಾಳುವಂತೆ ಹೇಳುತ್ತಾರೆ.

ದೈವವನ್ನು ಧಿಕ್ಕರಿಸಿ ಹೋದವರಿಗೆ ಬೇರೆ ಯಾರು ಅವರೊಂದಿಗೆ ಜೊತೆ ಮಾತಾಡುವ ಹಾಗಿಲ್ಲ.

ಬೇಡ ಸಮುದಾಯದ ವಿಧಿ-ನಿಷೇಧ ನಂಬಿಕೆ

“ಸಮುದಾಯದ ನಂಬಿಕೆಯು ಸಾಂಪ್ರದಾಯಿಕವಾಗಿ ಅಂಗೀಕೃತವಾದ ಒಂದು ಪರಿಕಲ್ಪನೆ ಸಾಮಾನ್ಯವಾಗಿ ಕಾರಣ ಮತ್ತು ಪರಿಣಾಮದ ಸಂಬಂಧವನ್ನು ಹಾಗೂ ಭೂತ ವರ್ತಮಾನ ಮತ್ತು ಭವಿಷ್ಯತ್ತಿನ ಸಂಗತಿಗಳನ್ನು ಒಳಗೊಂಡಿರುತ್ತದೆ. ಅದು ಹೆಚ್ಚಾಗಿ ಪುನರಾವರ್ತಿತ ಹಾಗೂ ಸಾಮೂಹಿಕ ನಿರೀಕ್ಷಣೆಯ ಪರಿಣಾಮವಾಗಿ ಅಂಗೀಕೃತವಾಗಿರುತ್ತದೆ. ಕೊನೆಗೆ ಎಲ್ಲವು ವಿಶ್ವಾಸವನ್ನು ಅವಲಂಬಿಸಿರುತ್ತದೆ.”[೧೨] ನಂಬಿಕೆಯು ಅಭಯ ಅಥವಾ ನೆಚ್ಚಿಕೆಯ ಒಂದು ಮಾನಸಿಕ ಸ್ಥಿತಿ ಆದರೆ ಧರ್ಮ ಎನ್ನುವಾಗ ಅದರಲ್ಲಿ ನಂಬಿಕೆ ಆಚರಣೆ ಎಂದು ಎರಡು ಭಾಗಗಳು ಕಂಡುಬರುತ್ತವೆ. ನಂಬಿಕೆಯು ಅವಲಂಬನೆಯ ರೂಪ ಆದರೆ ಆಚರಣೆಯು ಕ್ರಿಯಾರೂಪ ಸಮುದಾಯದಲ್ಲಿ ನಂಬಿಕೆಗಳು ಎನ್ನುವ ಪ್ರಕಾರವು ಐತಿಹ್ಯ ಮಂತ್ರವಿದ್ಯೆ, ವೈದ್ಯ ಧರ್ಮ ಮುಂತಾದ ಪ್ರಕಾರಗಳೊಡನೆ ಸಂಬಂಧಿಸಿರುವುದರಿಂದ ಅದು ಬಹಳ ಸಂಕೀರ್ಣ ರೂಪವಾಗಿ ಕಾಣಿಸುತ್ತದೆ. ಪ್ರಾಚೀನ ಮಾನವನ ಪರಿಮಿತಿಯ ತಿಳಿವಳಿಕೆಯ ಸಮುದಾಯ ನಂಬಿಕೆಗಳಿಗೆ ಮೂಲ. ವಸ್ತು ಸ್ಥಿತಿಯೊಡನೆ ಅಸಂಬದ್ಧ ವೈಜ್ಞಾನಿಕ ಸಂಬಂಧವನ್ನು ಕಲ್ಪಿಸಿದಾಗ ನಂಬಿಕೆಗಳು ಹುಟ್ಟಿಕೊಳ್ಳುತ್ತವೆ. ತಪ್ಪು ತಿಳುವಳಿಕೆ ಮತ್ತು ಅಜ್ಞಾನದಿಂದ ಹೆಚ್ಚಿನ ನಂಬಿಕೆಗಳು ಜನ್ಮ ತಾಳುತ್ತವೆ.

ಸಮುದಾಯದ ನಂಬಿಕೆಯು ದೈನಂದಿನ ಬದುಕಿನ ಸಮಸ್ಯೆಗಳನ್ನು ನಿವಾರಿಸಲು ಬಳಸುವ ವಿಧಾನ ಇಂತಹ ಯಾವುದಾದರೊಂದು ನಂಬಿಕೆಯನ್ನು ಪ್ರಬಲವಾಗಿ ನಂಬುವುದರ ಮೂಲಕ ತನ್ನ ನಡವಳಿಕೆಯಲ್ಲಿ ಅದು ಪ್ರಭಾವ ಬೀರುತ್ತದೆ ಎಂದು ಭಾವಿಸಿಕೊಂಡಿದ್ದಾರೆ. ಅದು ಮೂಢನಂಬಿಕೆ ಅನೇಕ ಬಾರಿ ಅಪಾಯಕಾರಿಯಾಗಿರುತ್ತದೆ. ಹಾಗೂ ಅದು ಮಂತ್ರವಿದ್ಯೆಗಳ ನಡುವೆ ಈ ವ್ಯತ್ಯಾಸವು ಅವುಗಳೆರಡನ್ನು ಸಮರ್ಪಕವಾಗಿ ಪ್ರತ್ಯೇಕಿಸುವಂತದ್ದೇನೂ ಅಲ್ಲ, ನಂಬಿಕೆಯ ತನ್ನ ಭಿನ್ನ ಪ್ರಮಾಣಗಳನಷ್ಟೆ ನಾವು ಇಲ್ಲಿ ಕಾಣಿಸುತ್ತವೆ. ಆದ್ದರಿಂದ ರಾಯಚೂರು ಜಿಲ್ಲೆಯ ದೊಡ್ಡಿಗಳ ಪರಿಸರದ ಬೇಡ ಸಮುದಾಯದ ನಂಬಿಕೆಗಳನ್ನು ಕ್ಷೇತ್ರ ಕಾರ್ಯ ಕೈಗೊಂಡು ಕೆಲವು ನಂಬಿಕೆಗಳನ್ನು ದಾಖಲಿಸಿಕೊಂಡಿದ್ದೇನೆ ಅವುಗಳು ಈ ಕೆಳಗಿನಂತಿವೆ.

೧. ಧಾರ್ಮಿಕ ನಂಬಿಕೆ

೨. ಸಾಂಸ್ಕೃತಿಕ ನಂಬಿಕೆ

೩. ವೈಯಕ್ತಿಕ ನಂಬಿಕೆ

೧. ಧಾರ್ಮಿಕ ನಂಬಿಕೆ

"ಇವುಗಳನ್ನು ಅತಿಮಾನುಷ ನಂಬಿಕೆಗಳೆಂದು ಕರೆಯುತ್ತಾರೆ. ಮಾನವನ ಬದುಕಿನಲ್ಲಿ ಭಯ ಮತ್ತು ಅಸ್ಥಿರ ಭಾವನೆಗಳು ಅತಿಮಾನುಷ ನಂಬಿಕೆ ಮೂಲ. ನಿಸರ್ಗದ ನಡುವೆ ಬದುಕಬೇಕಾದ ಮಾನವ ತನ್ನ ಪರಿಸರದ ಎಷ್ಟೋ ಸಂಗತಿಗಳ ಬಗ್ಗೆ ಅವೈಜ್ಞಾನಿಕಯಾಗಿದ್ದ ಅಸ್ಥಿರವಾದ ಅವನ ಮನಸ್ಸಿಗೆ ತಾತ್ಕಾಲಿಕವಾಗಿಯಾದರೂ ಸಮಾಧಾನ ಕೊಡುವಲ್ಲಿ ಧಾರ್ಮಿಕ ನಂಬಿಕೆಗಳು ಸಹಕಾರಿಯಾದವು. ದೇವರು, ದೆವ್ವ ಮುಂತಾದ ಅತಿಮಾನುಷ ಶಕ್ತಿಗಳ ಕಲ್ಪನೆಗಳು ಆತನ ಮನಸ್ಸಿನಲ್ಲಿ ಹುಟ್ಟಿಕೊಂಡವು. ಹಾಗೆಯೇ ಅವುಗಳ ಸ್ವರೂಪ ಕಾರ್ಯಗಳಿಗೆ ಸಂಬಂಧಿಸಿದ ನಂಬಿಕೆಗಳು ಸಹ ಕಾಣಿಸಿಕೊಂಡವು. ಕೆಲವೊಮ್ಮೆ ಕಾಲ್ಪನಿಕ ದೇವರುಗಳನ್ನು ವಾಸ್ತವಿಕ ವಸ್ತುಗಳೊಡನೆ ಸಂಬಂಧ ಕಲ್ಪಿಸಿ ಗೌರವಿಸುವ ನಂಬಿಕೆಗಳನ್ನು ನೋಡಬಹುದು. ಆ ಒಂದೊಂದು ನಂಬಿಕೆಗಳನ್ನು ಈ ಕೆಳಗಿನಂತಿವೆ."[೧೩]

ಒಲೆಯನ್ನು ಕಾಲಿನಿಂದ ಒದೆಯಬಾರದು ಅದು ಲಕ್ಷ್ಮಿಗೆ ಸಮಾನ. ದೊಡ್ಡಿಗಳಲ್ಲಿ ನಂಬಿಕೆ ಏನೆಂದರೆ ಒಲೆಯನ್ನು ಕಾಲಿನಿಂದ ಒದ್ದರೆ ಲಕ್ಷ್ಮಿಗೆ ಸಮಾನ ಎಂದು ತಿಳಿದಿದ್ದಾರೆ. ಆದರೆ ವೈಜ್ಞಾನಿಕ ಕಾರಣವೇನೆಂದರೆ ಒಲೆಯನ್ನು ಕಾಲಿನಿಂದ ಒದ್ದರೆ ಕಾಲಿಗೆ ಬೆಂಕಿ ತಗಲಿ ಅಪಾಯವಾಗುವ ಸಾಧ್ಯತೆ ಇರುತ್ತದೆ. ಆದ ಕಾರಣ ಕಾಲಿನಿಂದ ಒಲೆಯನ್ನು ಒದೆಯಬಾರದು. ಹೊಸ್ತಿಲ ಮೇಲೆ ಕೂಡಬಾರದು, ಹೊಸ್ತಿಲನ್ನು ಕಾಲಿನಿಂದ ಒದೆಯಬಾರದು: ದೊಡ್ಡಿಯ ಸಮುದಾಯದ ನಂಬಿಕೆಯು ಮುಖ್ಯವಾಗಿ ಕಾರಣವೇನೆಂದರೆ ಹೊಸ್ತಿಲ

ಮೇಲೆ ಕುಳಿತರೆ ಸಾಲ ಜಾಸ್ತಿಯಾಗುತ್ತದೆ. ಅದರಂತೆ ಹೊಸ್ತಿಲನ್ನು ಕಾಲಿನಿಂದ ಒದೆಯಬಾರದು ಯಾಕೆಂದರೆ ಹೊಸ್ತಿಲು ತಂದೆಗೆ ಸಮಾನ ಹೊಸ್ತಿಲಿಗೆ ಒದ್ದರೆ ತಂದೆಯನ್ನು ಒದ್ದಂತೆ ಹೊಸ್ತಿಲನ್ನು ಕಾಲಿನಿಂದ ಒದೆಯಬಾರದು ಎಂದು ಬಲವಾಗಿ ನಂಬಿದ್ದಾರೆ. ಹೆಂಗಸರು ಬಾಳೆಹಣ್ಣು ತಿನ್ನಬಾರದು: ಕಾರಣವೇನೆಂದರೆ ಗರ್ಭಿಣಿಯಾದಂತಹ ಸಂದರ್ಭದಲ್ಲಿ ಹೆಣ್ಣು ಬಾಳೆಹಣ್ಣು ತಿಂದರೆ ಗರ್ಭಕ್ಕೆ ತೊಂದರೆಯಾಗುತ್ತದೆ ಎಂಬ ನಂಬಿಕೆ ಇದೆ. ದೇವರ ಹೂ ಯಾವುದೇ 'ಹೂ'ವಾಗಿರಬಹುದು ಅಂದ್ರೆ 'ಹೂ'ವಿನಲ್ಲಿರುವ ಕ್ರಿಮಿಗಳು ಮೂಗಿನೊಳಕ್ಕೆ ಸೇರಿ ರೋಗ ಬರಬಾರದೆಂಬ ನಂಬಿಕೆ ಇದೆ. ಇನ್ನೊಂದು ರೀತಿಯಲ್ಲಿ 'ಹೂ' ಮೂಸಿದರೆ ಅಥವಾ ಮುಟ್ಟಿದರೆ ಮೈಲಿಗೆಯಾಗುತ್ತವೆ ಎಂಬ ನಂಬಿಕೆ ಇದೆ.

ಶವ ಸಂಸ್ಕಾರ :

ಯಾವುದೇ ಸಮಯದಲ್ಲಿ ಅಥವಾ ಮನೆಯಲ್ಲಿ ಯಾರಾದರೂ ಸತ್ತರೆ ಅಥವಾ ಸತ್ತಾಗ ಕಡ್ಡಾಯವಾಗಿ ಮೂರು ದಿನಕ್ಕೆ ಸತ್ತ ವ್ಯಕ್ತಿಯು ಅತಿ ಇಷ್ಟವಾದ ಪದಾರ್ಥ ಮಾಡಿ ಸಮಾಧಿ ಮೇಲೆ ಇಟ್ಟು ಬರುತ್ತಾರೆ. ಒಂಭತ್ತು ಅಥವಾ ಹನ್ನೊಂದು ದಿನಕ್ಕೆ ಸೂತಕ ಮನೆಯಲ್ಲಿ ಸಿಹಿ ಪದಾರ್ಥ ಅಥವಾ ಕುರಿಯನ್ನು ಕೊಯ್ದು ಕಾರ್ಯವನ್ನು ಮಾಡಬೇಕು. ಈ ಕಾರ್ಯವನ್ನು ಮಾಡುವತನಕ ಮನೆಯಲ್ಲಿ ಯಾವುದೇ ಕಾರ್ಯ ಮಾಡುವಂತಿಲ್ಲ. ಮಾಡದಿದ್ದರೆ ಒಳ್ಳೆಯದಾಗುವುದಿಲ್ಲ ಎಂಬ ನಂಬಿಕೆ ಇದೆ.

ಕಾರುಹುಣ್ಣಿಮೆಯ ಸಂದರ್ಭದಲ್ಲಿ ದೊಡ್ಡಿಗಳಲ್ಲಿ ಸಮಾನ್ಯವಾಗಿ ಸಮುದಾಯದವರು ಸೇರಿ ಎತ್ತುಗಳನ್ನು ಓಡಿಸುತ್ತಾರೆ. ಅಂತಹ ಸಂದರ್ಭದಲ್ಲಿ ಕೆಂಪು ಮತ್ತು ಬಿಳಿ ಯಾವ ಎತ್ತು ಮೊದಲು ಬರುತ್ತದೆಯೋ ಅದರ ಬಣ್ಣದ ಆಧಾರದ ಮೇಲೆ ಆ ವರ್ಷ ಇಂತಹ ಬೆಳೆ ಬೆಳೆಯಬಹುದು ಎಂದು ನಂಬುತ್ತಾರೆ.

೨. ಸಾಂಸ್ಕೃತಿಕ ನಂಬಿಕೆಗಳು

ಗರ್ಭಿಣಿ ಹೆಂಗಸರು ಸತ್ತರೆ ಅವರನ್ನು ಹೂಳಬಾರದು ಸುಡಬೇಕು. ಗರ್ಭಿಣಿ ಹೆಂಗಸರು ದೊಡ್ಡಿಗಳಲ್ಲಿ ಸತ್ತಾಗ ಕಡ್ಡಾಯವಾಗಿ ಸುಡದಿದ್ದರೆ ಕೆಟ್ಟದು ಆಗುತ್ತದೆ ಎಂದು ನಂಬುತ್ತಾರೆ. ಸೂರ್ಯ ಮತ್ತು ಚಂದ್ರ ಗ್ರಹಣ ಇದ್ದರೆ ಆ ದಿವಸ ಮನೆಯಲ್ಲಿ ಗರ್ಭಿಣಿ ಹೆಂಗಸರು ಏನು ಕೆಲಸ ಮಾಡುವಂತಿಲ್ಲ. ಒಂದು ವೇಳೆ ಮಾಡಿದರೂ ತರಕಾರಿ ಕತ್ತರಿಸುವಂತಿಲ್ಲ ಮತ್ತು ಹೊರಗಡೆ ಬರುವಂತಿಲ್ಲ. ಒಂದು ವೇಳೆ ಗ್ರಹಣ ಸಂದರ್ಭದಲ್ಲಿ ಗರ್ಭಿಣಿ ಹೆಂಗಸರು ಈ ಕೆಲಸ ಮಾಡಿದರೆ ಹುಟ್ಟುವ ಮಕ್ಕಳು ಅಂಗವಿಕಲರಾಗುತ್ತಾರೆ. ಅಥವಾ ಹುಟ್ಟುವ ಮಗುವಿಗೆ ತುಟಿ ಹರಿತ ತೊಂದರೆಗಳಿಂದ ಮಗು ಹುಟ್ಟುತ್ತದೆ ಎಂಬ ನಂಬಿಕೆ ಇದೆ. ಆದ್ದರಿಂದ ಇಂತಹ ಸಂದರ್ಭದಲ್ಲಿ ತುಂಬಾ ಜಾಗರೂಕತೆಯಿಂದ ಇರುತ್ತಾರೆ.

"ಸಂಜೆ ಹೊತ್ತಲಿ ಕಸವನ್ನು ಹೊರಗೆ ಚಲ್ಲುವಂತಿಲ್ಲ. ಒಂದು ವೇಳೆ ಹೊರಗೆ ಚಲ್ಲಿದರೆ ಲಕ್ಷ್ಮೀ ಹೊರಗಡೆ ಹೋಗುತ್ತಾಳೆ ಎಂಬ ನಂಬಿಕೆ ಇದೆ. ಸಂಜೆ ಸಮಯ ಬಂಗಾರ ಸೂಕ್ಷ್ಮ ವಸ್ತು ಕಸದಲ್ಲಿ ಹೋಗಬಹುದು ಎಂದು ನಂಬಿದ್ದಾರೆ. ಇನ್ನೊಂದು ಅರ್ಥದಲ್ಲಿ ಹೇಳಿದ್ದರೆ ಸಂಜೆಯ ಸಮಯದಲ್ಲಿ ಕಸ ಹೊರಗಡೆ ಚಲ್ಲಿದರೆ ಆ ಕಸದಲ್ಲಿ ಸಣ್ಣಪುಟ್ಟ ಸೂಜಿ ಅಥಾವ ಮೊಳೆಗಳು ಇದ್ದರೆ ಮನೆಯ ಮುಂದೆ ದನಕರುಗಳಿರುತ್ತವೆ ಹೊರಹಾಕಿದ ಕಸ ಸೂಜಿ ಮತ್ತು ಮೊಳೆಯನ್ನು ತಿಂದರೆ ದನಕರುಗಳಿಗೆ ತೊಂದರೆಯಾಗುತ್ತದೆ ಎಂಬ ಕಾರಣದಿಂದ ಹೊರಗಡೆ ಹಾಕುವುದಿಲ್ಲ.

ದೊಡ್ಡಿಯಲ್ಲಿ ಯಾರಾದರು ಸತ್ತರೆ ಅವರನ್ನು ಸ್ಮಶಾನಕ್ಕೆ ಹೊಯ್ಯುವಾಗ ಮಂಡಕ್ಕಿ ಎಳ್ಳು, ನೆವಣಿ ಚಲ್ಲುತ್ತಾರೆ. ಯಾಕೆಂದರೆ ಸತ್ತವರು ಮತ್ತೆ ಊರಿಗೆ ದೆವ್ವ ಪಿಶಾಚಿಯಾಗಿ ಬಂದರೆ ಸಂದರ್ಭದಲ್ಲಿ ಅವರು ಅವುಗಳನ್ನೆಲ್ಲ ಆರಿಸಿಕೊಂಡು ಬರಬೇಕು. ಹಾಗೆ ಬಂದರೆ ಬರುವುದೊಳಗಾಗಿ ಬೆಳಗಾಗುತ್ತದೆ ಎಂಬ ನಂಬಿಕೆ ಇದೆ."[೧೪]

ಶುಭ ಕಾರ್ಯಗಳಿಗೆ ಹೋಗುವಾಗ ವಿಧವೆಯರು ಅಡ್ಡ ಬರಬಾರದು. ಶುಭ ಕಾರ್ಯಗಳಿಗೆ ಹೋಗುವಾಗ ಅವರು ಅಡ್ಡ ಬಂದರೆ ಕೆಲಸಗಳು ಆಗುವುದಿಲ್ಲವೆಂಬ ನಂಬಿಕೆ ಇದೆ.

ಶುಭ ಕಾರ್ಯಗಳಿಗೆ ಹೋಗುವಾಗ ಬೆಕ್ಕು ಅಡ್ಡಬರಬಾರದು. ಬೆಕ್ಕು ಅಡ್ಡಬಂದರೆ ಯಾವ ಕಾರ್ಯಗಳು ಯಶಸ್ವಿಯಾಗುವುದಿಲ್ಲ ಹಾಗೂ ಅಪಾಯ ಸಂಭವಿಸುವ ಸಾಧ್ಯತೆ ಇರುತ್ತದೆ ಎಂಬ ನಂಬಿಕೆ ಇದೆ.

ಮಂಗಳವಾರ ಮಗಳನ್ನು ಗಂಡನ ಮನೆಗೆ ಕಳಿಸಬಾರದು ಮತ್ತು ಶುಕ್ರವಾರ ಸೊಸೆಯನ್ನು ತವರು ಮನೆಗೆ ಕಳಿಸಬಾರದು.

ಖಾಲಿ ತೊಟ್ಟಿಲನು ತೂಗಬಾರದು.

ಗೂಬೆಯು ದೊಡ್ಡಿಯಲ್ಲಿ ಅಥವಾ ಮನೆಯ ಮೇಲೆ ಕೂಡಬಾರದು ಮತ್ತು ಕೂಗಬಾರದು. ಒಂದು ವೇಳೆ ಕೂಗಿದರೆ ಆ ದೊಡ್ಡಿಯಲ್ಲಿ ಸಾವು ಖಚಿತವಾಗುತ್ತದೆ ಎಂಬ ನಂಬಿಕೆ ಇದೆ.

ಮಗುವಿನ ನಾಮಕರಣ ಮಾಡುವಾಗ ಮೊದಲು ಹಿರಿಯರ ಹೆಸರು ಅಥವಾ ದೇವರ ಹೆಸರಿನಿಂದ ಕರೆಯಬೇಕು.

ತಳಿನೋಡಿ ಹೆಣ್ಣು ತರಬೇಕು. ಸುಳಿನೋಡಿ ಎತ್ತು ತರಬೇಕು.

ಹಣ್ಣು ಹಂಪಲುಗಳಿಂದ ಆಟ ಆಡಬಾರದು ಆಡಿದರೆ ಆ ಬೆಳೆ ದುಬಾರಿಯಾಗುತ್ತವೆ ಎಂಬ ನಂಬಿಕೆ ಇದೆ.

ಕಣದಲ್ಲಿ ಚಪ್ಪಲಿ ಹಾಕಿಕೊಂಡು ಹೋಗಬಾರದು

"ರೋಣಿ ಮಳೆ ಬಂದರೆ ಓಣಿ ತುಂಬಾ ಜೋಳ" ಎಂಬ ನಂಬಿಕೆ

ಅಡುಗೆ ಮನೆಯ ಒಲಿ ಶಬ್ದವಾದರೆ ಯಾರಾದರೂ ಬೀಗರು ಬರುತ್ತಾರೆ ಎಂಬ ನಂಬಿಕೆ ಇದೆ.

೩. ವೈಯಕ್ತಿಕ ನಂಬಿಕೆಗಳು

ವೈಯಕ್ತಿಕ ನಂಬಿಕೆಗಳು ಹುಟ್ಟುವಾಗ ವ್ಯಕ್ತಿಯೊಬ್ಬನಿಗೆ ಮಾತ್ರ ಕ್ರಮೇಣ ಒಂದು ಸಮಾಜ ಅನುಸರಿಸಿದಾಗ ಅದು ಸಾಂಸ್ಕೃತಿಕ ನಂಬಿಕೆಯಲ್ಲಿಯೇ ಸರಿಹೋಗುತ್ತದೆ. ಇಂತಹ ನಂಬಿಕೆ ವೈಯಕ್ತಿಕ ನಂಬಿಕೆಗಳು ಮುಂದೆ ಸಾಂಸ್ಕೃತಿಕ ನಂಬಿಕೆಗಳಾಗಿ ಪರಿವರ್ತಿತವಾಗುತ್ತವೆ. ಇನ್ನು ಅನೇಕ ನಂಬಿಕೆಗಳು ವ್ಯಕ್ತಿಯೊಬ್ಬನಿಗೆ ಸಂಬಂಧಿಸಿಯೂ ಇರುತ್ತವೆ.

ಒಬ್ಬನು ಧರಿಸಿದ ಯಾವುದೇ ಒಂದು ಬಟ್ಟೆಯಿಂದ ಅಥವಾ ಆಕಸ್ಮಿಕವಾಗಿ ಅವನಿಗೆ ಹಣ ಅಥವಾ ಬಯಸಿದ ಹೆಣ್ಣು ಸಿಕ್ಕರೆ ಅಥವಾ ಪರೀಕ್ಷೆಯಲ್ಲಿ ಪಾಸಾದರೆ ಮುಂದೆ ಆತ ಆ ವಸ್ತುಗಳೆ ತನ್ನ ಅದೃಷ್ಟಕ್ಕೆ ಕಾರಣ ಎಂದು ನಂಬುತ್ತಾ ಹೋಗಬಹುದು. ಮತ್ತು ಯಾವುದೇ ಒಂದು ಸಂದರ್ಭ ಅಥವಾ ವಾರದಿಂದ ಒಳ್ಳೆಯ ಕೆಲಸವಾದರೆ ಅವರು ಅದನ್ನು ಒಳ್ಳೆಯವಾರ ಎಂದು ನಂಬುತ್ತಾರೆ. ಕೆಟ್ಟದಾದರೆ ಆ ವಾರವನ್ನು ಕೆಟ್ಟವಾರ ಎಂದು ನಂಬುತ್ತಾರೆ.

ಬೆಕ್ಕು ಅಡ್ಡ ಬಂದಾಗ ಅಪಶಕುನ

ಕಪ್ಪು ಬಟ್ಟೆಯನ್ನು ಹಾಕಬಾರದು.

ಸಂಕ್ರಾಂತಿ ಹಬ್ಬದ ಕರಿ ಮತ್ತು ಕಾರುಹುಣ್ಣಿಮೆ ಕರಿ ದಿನ ಬಹಳ ಎಚ್ಚರಿಕೆಯಿಂದ ಕೆಲಸ ಮಾಡಬೇಕು. ಇಲ್ಲದಿದ್ದರೆ ಅಪಘಾತ ಇಲ್ಲವೇ ಸಣ್ಣ ಪುಟ್ಟ ಜಗಳ ದೊಡ್ಡ ಜಗಳಗಳಾಗುತ್ತವೆ ಎಂಬ ನಂಬಿಕೆ ಇದೆ. ಎಡಗಡೆ ಅಥವಾ ಬಲಗಡೆ ಕಣ್ಣು ರೆಪ್ಪೆ ಬಡಿದುಕೊಂಡರೆ ಕೆಟ್ಟದ್ದು ಆಗಬಹುದು ಅಥವಾ ಒಳ್ಳೆಯದಾಗಬಹುದು ಎಂಬ ನಂಬಿಕೆ ಇದೆ.

ವಿಧಿ-ನಿಷೇಧ

ಮಾನವನ ನಡತೆಯನ್ನು ರೂಪಿಸಲು ಸಮಾಜವು ಸ್ಥಾಪಿಸಿರುವ ಕಟ್ಟು ಪಾಡುಗಳೇ ವಿಧಿ-ನಿಷೇಧಗಳು. ವಿಧಿ-ನಿಷೇಧಗಳನ್ನು ಪ್ರಾಚೀನ ಸಮಾಜಕ್ಕೆ ಅಲಿಖಿತ ಕಾನೂನು ಎಂದು ಕರೆಯಲಾಗಿದೆ. ಅಲಿಖಿತವಾದ ಕಾನೂನು ಕೋರ್ಟ್ ಪೋಲೀಸ್ ವ್ಯವಸ್ಥೆಗಳು ಇಲ್ಲದ ಕಾಲದಲ್ಲಿ ವಿಧಿ-ನಿಷೇಧಗಳನ್ನು ಸಮಾಜದ ವ್ಯವಸ್ಥೆಯನ್ನು ರೂಪಿಸಲು ಕಾನೂನು

ರೀತಿಯಲ್ಲಿ ಬಳಸುತ್ತಿದ್ದರು. ಇವು ಯಾವ ಸಂದರ್ಭದಲ್ಲಿ ಮನುಷ್ಯ ಏನು ಮಾಡಬೇಕು ಮತ್ತು ಏನು ಮಾಡಬಾರದು ಎಂಬುದನ್ನು ತಿಳಿಸುತ್ತವೆ. ಈ ವಿಧಿ-ನಿಷೇಧ ಎನ್ನುವ ಪರಿಕಲ್ಪನೆಯನ್ನು ಇಂದು ಬಹಳ ವಿಶಾಲವಾದ ಅರ್ಥದಲ್ಲಿ ಬಳಸಲಾಗುತ್ತದೆ. ಅದನ್ನೇ ಇಂದು ಲೋಕರೂಢಿಗಳು, ಸಂಪ್ರದಾಯಗಳು, ಸಂಸ್ಕಾರಗಳು, ನಂಬಿಕೆ ಆಚರಣೆಗಳು, ಕಾನೂನು ನಿರ್ಬಂಧಗಳು, ಸಮಾರಂಭಗಳು, ಪದ್ದತಿಗಳು ನಿಯಮಗಳನ್ನ ಒಳಗೊಂಡಿರುವಂತೆ ವಿಧಿ-ನಿಷೇಧಗಳನ್ನು ಬಳಸಲಾಗುತ್ತಿದೆ. ಇವು ಸಾಮಾಜಿಕ ನಡತೆಯ ನೀಲಿ ನಕಾಶೆಗಳಾಗಿ ಸಮಾಜ ಸದಸ್ಯರುಗಳ ನಿರೀಕ್ಷಿತ ನಡತೆ ಹೇಗಿರಬೇಕು? ಎಂಬುದರ ಜೊತೆಗೆ ಆದರ್ಶ ನಡತೆ ಬಗ್ಗೆಯೂ ಅವು ತಿಳಿಯಪಡಿಸುತ್ತವೆ. ಮಾನವ ನಿರ್ಮಿತ ಸಂಘ ಸಂಸ್ಥೆಗಳಿಗೆ ಪಕ್ಷ ಪಂಗಡಗಳಿಗೆ ರಾಜ್ಯ ಸರ್ಕಾರಗಳಿಗೆ ಸಮಾಜ ಮತ್ತು ಸಮುದಾಯಗಳು ಆಧಾರ ಸ್ತಂಭಗಳಾಗಿ ವಿಧಿ-ನಿಷೇಧಗಳು ಕೆಲಸ ಮಾಡುತ್ತವೆ. ಸಾಮಾಜಿಕ ಅಂಶಗಳಾದ ಲೈಂಗಿಕತೆ ವಿವಾಹ, ಜನನ, ಋತುಮತಿ, ಹೆರಿಗೆ, ಆಹಾರ, ಮರಣ, ವೇಷ ಭೂಷಣ, ದೇವರು ಜಾತ್ರೆ, ಹಬ್ಬ, ನಾಮಕರಣ, ವೃತ್ತಿ, ವಸತಿ, ನ್ಯಾಯ, ಕುಟುಂಬ ಮುಂತಾದ ಸಂಪ್ರದಾಯ ಮತ್ತು ನಂಬಿಕೆಗಳನ್ನು ಆಚರಣೆಗೆ ತರುವ ಮಾನವ ಸ್ವೇಚ್ಛಾಚಾರದ ಮೇಲೆ ಕಡಿವಾಣ ಹಾಕುವುದರ ಮೂಲಕ ಸಮೂಹದ ಆಸ್ತಿತ್ವಕ್ಕೆ ವಿಧಿ ನಿಷೇಧಗಳಿಗೆ ಹೆಚ್ಚು ಮಹತ್ವಕೊಟ್ಟು ಅವುಗಳಿಗೆ ಬದ್ಧರಾಗಿ ನಡೆದುಕೊಳ್ಳುತ್ತಾರೆ. ಹುಟ್ಟಿನಿಂದ ಸಾವಿನವರೆಗೂ ಹಲವು ಬಗೆಯ ಕಟ್ಟುನಿಟ್ಟಾದ ನಿಷೇಧಗಳು ಈ ಸಮುದಾಯದಲ್ಲಿ ಕಂಡುಬರುವುದರಿಂದ ವಿಧಿಗಳು ಮತ್ತು ನಿಷೇಧಗಳು ಎಂದು ಎರಡು ರೀತಿ ವಿಭಾಗ ಮಾಡಿದ್ದಾರೆ.

ವಿಧಿ : ಎಂದರೆ ಮಾಡಲೇಬೇಕಾದ ಆಜ್ಞೆ ಅಥವಾ ಅನುಸರಿಸಲೇಬೇಕಾದ ಮಾರ್ಗ ವಿಧಿ ಎಂಬ ಶಬ್ದಕ್ಕೆ ನಿಯಮ, ಆಜ್ಞೆ ಅದೃಷ್ಟ ಲಿಖಿತ ಹಣೆಬರಹ ಎಂಬ ಅರ್ಥವಿದ್ದರೂ ಇಲ್ಲಿ ನಿಯಮಗಳು ಎಂಬ ಅರ್ಥದಲ್ಲಿ ನೋಡಬೇಕಾಗುತ್ತದೆ. ಈ ವಿಧಿ ನಿಯಮಗಳನ್ನು ನಿಶ್ಚಯಾತ್ಮಕ ನೈತಿಕ ನಿಯಮಗಳು ಎಂಬುದಾಗಿಯೂ ಕರೆಯಬಹುದು. ಇವು ನಮ್ಮ ನಡತೆ ಹೀಗೆಯೇ ಇರಬೇಕೆಂದು ಹೀಗೆಯೇ ಮಾಡಬೇಕೆಂದು ನಿಗದಿ ಪಡಿಸುತ್ತವೆ.

ಆರಾಧನಾ ಕ್ಷೇತ್ರಗಳು

ಬೇಡರ ನಿಸರ್ಗದೊಂದಿಗೆ ನಿಕಟವಾದ ಸಂಬಂಧದಿಂದ ಭೌಗೋಳಿಕವಾಗಿ ಗಿಡ ಮರ, ನದಿ, ಬೆಟ್ಟ, ಪ್ರಕೃತಿಯ ಆರಾಧನೆಯನ್ನು ಮಾಡುವುದು ಮುಂಚಿನಿಂದಲೂ ನಡೆದುಕೊಂಡು ಬಂದಿದೆ. ಒಂದು ಸ್ಥಳ ಆರಾಧನಾ ಕ್ಷೇತ್ರವೆಂದು ಕರೆಸಿಕೊಳ್ಳುವುದು ಅಲ್ಲಿ ನಡೆದ ಚಾರಿತ್ರಿಕ, ಸಾಂಸ್ಕೃತಿಕ ಘಟನೆಗಳ ಆಧಾರದ ಮೇಲೆ ಹೇಳಬಹುದು. ಜಾತ್ರೆ ಮತ್ತು ತೀರ್ಥಯಾತ್ರೆಗಳ ವ್ಯಾಪ್ತಿಯನ್ನು ಆರಾಧನಾ ಕ್ಷೇತ್ರವೆಂದು ಹೇಳಬಹುದು. ಈ ಮಟ್ಟಿಗೆ ಪ್ರಗತಿ ಹೊಂದಿರಬೇಕಾದರೆ ಅಷ್ಟಕ್ಕೆ ಇಲ್ಲಿನ ಪವಾಡವನ್ನು ಬಿಂಬಿಸಿರುವ ಸಂಗತಿಗಳಾವವು

ಎಂಬ ಅವಲೋಕನವು ಬಹುಮುಖ್ಯವೆನಿಸುತ್ತದೆ. ಕ್ಷೇತ್ರ, ಪುರಾಣ, ಪ್ರತೀತಿ ಆಧ್ಯಾತ್ಮಿಕ ನಂಬಿಕೆಗಳಿಂದ ಮಾನ್ಯವಾಗಿರುವುದುಂಟು. ಜಾತ್ರೆ ಪದ್ಧತಿ, ಆಚರಣೆ ಸಂಪ್ರದಾಯಗಳು ಅದರ ಮೆರೆಗನ್ನು ಕಾಲಕಾಲಕ್ಕೆ ಇಮ್ಮಡಿಗೊಳಿಸುವಲ್ಲಿ ಅನುಮಾನವಿಲ್ಲ. ಬೇಡನಾಯಕರ, ವೀರರ ಆರಾಧನಾ ಕ್ಷೇತ್ರಗಳನ್ನು ಗುರುತಿಸುವಾಗ ಕರ್ನಾಟಕದ ಹೊರಗಿನ ಆರಾಧನಾ ಕ್ಷೇತ್ರಗಳು ಮತ್ತು ಕರ್ನಾಟಕದಲ್ಲಿನ ಆರಾಧನ ಕ್ಷೇತ್ರಗಳೆಂದು ವಿಂಗಡಿಸಲಾಗಿದೆ. ಈ ಮೂಲಕ ಪ್ರಾಚೀನಕಾಲ, ಮಧ್ಯಕಾಲ ಮತ್ತು ಆಧುನಿಕ ಕಾಲಘಟ್ಟದ ಕ್ಷೇತ್ರಗಳನ್ನು ಪರಿಚಯಿಸುತ್ತಾ ಬೇಡರ ಆರಾಧನಾ ದೇವರು ದೇವಾಲಯಗಳ ಅವಲೋಕನವು ಈ ವ್ಯಾಪ್ತಿಯಲ್ಲಿದೆ. ಪ್ರಾಚೀನ ಕಾಲದ ಕ್ಷೇತ್ರಗಳು ಪುರಾಣ ಪುಣ್ಯಕತೆ, ದಂತಕಥೆಗಳಿಂದ ಜನಾಕರ್ಷಣೆಗೊಂಡಿವೆ. ಮಧ್ಯಕಾಲೀನ ಕ್ಷೇತ್ರಗಳು ಐತಿಹಾಸಿಕವಾಗಿ ಪ್ರಾಮುಖ್ಯತೆ ಪಡೆದಿದ್ದು ಆಧುನಿಕ ಕ್ಷೇತ್ರಗಳು ಆಧ್ಯಾತ್ಮಿಕ ಕ್ಷೇತ್ರಗಳಾಗಿ ಬಲಸಂವರ್ಧನೆಗೊಂಡಿರುವುದು ಗಮನಾರ್ಹ. ಬೇಟೆಯೊಂದಿಗೆ ಜೀವಿಸತೊಡಗಿದ ಬೇಡರ ಭೂಮಿ, ಜಲ, ಕಾಡು, ನಿಸರ್ಗ ರಮಣೀಯ ಸ್ಥಳಗಳಿಗೆ ಇವರೇ ಒಡೆಯರು, ಸಸ್ಯ ಸಂಪತ್ತು ವನ್ಯಸಂಪತ್ತು ಇವರಿಗೆ ದಕ್ಕುತ್ತಿದ್ದು, ಗುಹೆ, ಗುಂಡಾರ, ಕಲ್ಲಾಸರೆಗಳು ವಾಸದ ನೆಲೆಗಳಾಗಿದ್ದವು ಹೀಗಿರುವಾಗ ಬೆಟ್ಟ, ಗುಡ್ಡ, ನದಿ, ಹಳ್ಳ ಕೊಳ್ಳಗಳನ್ನು ಆರಾಧಿಸುವ ಮನೋಭಾವ ಉದಯಿಸಿರಬೇಕು. ಕಾಡಿನಿಂದ ನಾಡಿಗೆ ಪಾದಾರ್ಪಣೆ ಮಾಡಿದ ಬೇಡನಿಗೆ ಕಾಡಿನ ಕ್ಷೇತ್ರಗಳು ಪವಿತ್ರವಾಗಿರುವುದು ಇಂದಿಗೂ ನೋಡಬಹುದು.

ಕರ್ನಾಟಕದ ಹೊರಗಿನ ಆರಾಧನಾ ಕ್ಷೇತ್ರಗಳು

ಕರ್ನಾಟಕದಲ್ಲಿ ನೆಲೆಸಿರುವ ಬೇಡನಾಯಕರು ತಮ್ಮ ಅಪೂರ್ವ ಆರಾಧನಾ ಕ್ಷೇತ್ರಗಳನ್ನು ಕರ್ನಾಟಕದಾಚೆಗೂ ಹೊಂದಿದ್ದಾರೆಂಬುದು ಮಹತ್ವದ ಸಂಗತಿ. ಒಂದಿಲ್ಲೊಂದು ರೀತಿಯಲ್ಲಿ ಇವರು ಆ ಪ್ರದೇಶಗಳೊಡನೆ ನಿಕಟ ಸಂಬಂಧ ಹೊಂದಿರುವದು ಪ್ರಾಚೀನ ಸಂದರ್ಭದಲ್ಲಿ ಏಕೀಕೃತವಾಗಿದ್ದ ಪ್ರದೇಶಗಳು ಇಂದು ಪ್ರತ್ಯೇಕವಾದ ಗಡಿಗಳನ್ನು ಹೊಂದಿರುವುದರಿಂದ ಇವರನ್ನು ಗಡಿಯಾಚೆಗೂ ನೋಡಬಹುದಾಗಿದೆ. ಅಂದು ಇಂಥ ತಾರತಮ್ಯ ಇದ್ದಂತಿಲ್ಲ ಈ ಹಿನ್ನೆಲೆಯಲ್ಲಿ ಕೆಲವು ಆರಾಧನಾ ಸ್ಥಳಗಳನ್ನು ಪರಿಚಯಿಸಲಾಗಿದೆ.

ತಮಸನದಿ ಮತ್ತು ಚಿತ್ರಕೂಟ : ಕಿರಾತ ಸಮುದಾಯಕ್ಕೆ ಪವಿತ್ರವಾದ ನದಿ ತಮಸಾ. ವಾಲ್ಮೀಕಿ ತಪಸ್ಸು ಮಾಡಿದ್ದು ಇದರ ದಂಡೆಯ ಮೇಲೆ. ಅವರ ಆಶ್ರಮದ ಹೆಸರು ಚಿತ್ರಕೂಟ. ಈ ಆಶ್ರಮ ಚಿತ್ರಕೂಟ ಪರ್ವತದ(ಮಥುರ) ಪರಿಸರದಲ್ಲಿತ್ತಲ್ಲದೆ. ಇಂದಿನ ಅಲಹಾಬಾದ್ ಆಗ್ನೇಯ ದಿಕ್ಕಿಗೆ ೧೮ ಮೈಲು ದೂರವಿರುವ ಗಂಗಾನದಿ ದಡದಲ್ಲಿದೆ. ವಾಲ್ಮೀಕಿ ರಾಮಾಯಣದ ಕರ್ತೃ ಭಾರತದ ಮಹಾಕವಿಗಳಲೊಬ್ಬರು ಪೂರ್ವಾಶ್ರಮದಲ್ಲಿ ಇವನೊಬ್ಬ ಬೇಟೆಗಾರ, ಸಂಪ್ರದಾಯದಂತೆ ಇವನ ಮೂಲ ಹೆಸರು

ರತ್ನಾಕರ ತಾನು ಮಾಡುವ ಬೇಟೆ ವೃತ್ತಿಯಿಂದ ನಿರತನಾದ ಈತನಿಗೆ ನಾರದನಿಂದ ಪರೀಕ್ಷೆ ನಡೆಯಿತು. ನಿನ್ನ ಈ ಬೇಟೆ ವೃತ್ತಿಯಿಂದ ಅನೇಕ ಪ್ರಾಣಿ ಪಕ್ಷಿಗಳು ಕೊಲ್ಲುತ್ತಿದ್ದಿಯಲ್ಲ ನಿನ್ನ ಅಪರಾಧಕ್ಕೆ ನಿನ್ನ ಹೆಂಡತಿ ಮಕ್ಕಳು ಬಾಧ್ಯಸ್ಥರೇ (ಪಾಲುದಾರರು) ಎಂದು ಕೇಳಲು ತಿಳಿಸಿದ. ಅವನು ತನ್ನ ಪರಿವಾರವನ್ನು ವಿಚಾರಿಸಲಾಗಿ ನಿನ್ನ ಅಪರಾಧಕ್ಕೆ ನೀನೆ ಹೊಣೆ ಎಂದರು. ಇದರಿಂದ ಪುನಃ ಪರಿವರ್ತನೆಗೊಂಡು ಸಂಸಾರವನ್ನು ತ್ಯಜಿಸಿ ಜ್ಞಾನಕ್ಕಾಗಿ ತಪಸ್ಸು ಮಾಡುತ್ತಾನೆ. ತಪಸ್ಸಿನ ಫಲವಾಗಿ ಅವನಿಗೆ ಜ್ಞಾನೋದಯದ ಉತ್ತುಂಗ ಶಿಖರ ತಲುಪಿ ಮಹಾಕಾವ್ಯ ರಚಿಸಿದ್ದು ಪೂಜ್ಯನೀಯ ಗ್ರಂಥಗಳಲ್ಲಿ ಅಗ್ರಮಾನ್ಯವಾಗಿದೆ. ಈತನ ಮಂದಿರಗಳು ಅಲ್ಲಲ್ಲಿ ನಿರ್ಮಾಣಗೊಂಡಿದ್ದರೂ, ಚಿತ್ರಕೂಟವು ಮಹತ್ವಪೂರ್ಣ ಕ್ಷೇತ್ರವೆನಿಸಿದೆ.

ಕಾಳಹಸ್ತಿ : "ಆಂಧ್ರದ ಕರ್ನೂಲು ಜಿಲ್ಲೆಯಲ್ಲಿರುವ ಧಾರ್ಮಿಕ ಯಾತ್ರಾಸ್ಥಳ ಪ್ರಾಚೀನ ಕಾಲದಿಂದಲೂ ಇದು ನಾನಾ ಕಾರಣಗಳಿಗಾಗಿ ಚಾರಿತ್ರಿಕ ಮಹತ್ವದ ಸ್ಥಾನ ಪಡೆದಿದೆ. ಶೈವ ಸಂಪ್ರದಾಯದ ಶಲಾಕ ಪುರುಷರಲ್ಲಿ (೬೩) ಒಬ್ಬರಾದ ಬೇಡರ ಕಣ್ಣಪ್ಪನ ನೆಲಸುನಾಡಿರುವುದೇ ಇಲ್ಲಿಗೆ ಸಮೀಪದಲ್ಲಿರುವ ಪುಟ್ಟಾಪಿನಾಡು. ಬೇಡರ ಕಣ್ಣಪ್ಪನ ಪ್ರಸಿದ್ಧ ದೇವಾಲಯ ಇಲ್ಲಿದೆ. ಇದಕ್ಕೆ ವಿವಿಧ ಅರಸರು ಘೋಷಿಸಿದ್ದು ವಿಜಯನಗರದ ಶ್ರೀಕೃಷ್ಣದೇವರಾಯ ಅನುಪಮ ಕಾಣಿಕೆ ಸಲ್ಲಿಸಿದ್ದಾನೆ. ದಕ್ಷಿಣ ಭಾರತದ ಬೇಡನಾಯಕರು ಇಂದಿಗೂ ಇದನ್ನು ಪ್ರಧಾನವಾಗಿ ಪೂಜಿಸುತ್ತಾರೆ. ಕಣ್ಣಪ್ಪನ ದೇವಾಲಯಗಳು ಕರ್ನಾಟಕದಲ್ಲಿದ್ದು ಆತನ ಹೆಸರು ಬೇಡರ ಮಕ್ಕಳಿಗೆ, ಸಂಘಟನೆಗೆ ಇಟ್ಟುಕೊಂಡಿದ್ದಾರೆ.

ಶ್ರೀಶೈಲ : ಗೋದಾವರಿ ನದಿ ಪರಿಸರದಲ್ಲಿ ಶ್ರೀಶೈಲ ಕ್ಷೇತ್ರವಿದೆ ಬೇಡರು ತಮ್ಮ ಮೂಲ ನೆಲೆ, ಪುಣ್ಯಕ್ಷೇತ್ರ ಶ್ರೀಶೈಲ ಪ್ರದೇಶವೆಂದು ಹೆಮ್ಮೆಯಿಂದ ಹೇಳಿಕೊಳ್ಳುವರು. ಇಲ್ಲಿ ಮಲ್ಲಿಕಾರ್ಜುನ ದೇವರು ಪ್ರಸಿದ್ಧವಾದುದು. ಬೇಡರು ಮಲ್ಲಯ್ಯನೆಂದು ಈ ದೇವರಿಗೆ ಕರೆಯುತ್ತಾರೆ. ಇಂದಿಗೂ ಅವರು ಹರಕೆಗಳನ್ನು ತೀರಿಸಲು ಈ ಪುಣ್ಯ ಕ್ಷೇತ್ರಕ್ಕೆ ಬರುತ್ತಾರೆ. ಶೈವ ಸಂಪ್ರದಾಯದ ಬೇಡರು ಅವನ ಅನುಯಾಯಿಗಳು ಇಂದಿಗೂ ಭಾನುವಾರ ಈ ದೇವರ ಭಕ್ತರು ಮಾಂಸವನ್ನು ತಿನ್ನುವುದಿಲ್ಲ."[೧೫]

ತಿರುಪತಿ : ಮಹಾಪುಣ್ಯ ಕ್ಷೇತ್ರಗಳಲ್ಲಿ ಒಂದಾದ ತಿರುಪತಿ ಕ್ಷೇತ್ರ ಭಾರತದಲ್ಲಿಯೇ ಅತಿ ಹೆಚ್ಚು ಪ್ರಸಿದ್ಧ ಯಾತ್ರಸ್ಥಳ. ಶ್ರೀಕೃಷ್ಣನ ಕೊಳಲಿನ ನಾದಕ್ಕೆ ಬೇಡರು ಬೇಟೆಯಿಂದ ವಿಚಲಿತರಾಗಿ ಇಲ್ಲಿಗೆ ದಾವಿಸಿದರಂತೆ. ಬೇಡರ ಪಡೆಯು ಶ್ರೀಕೃಷ್ಣನನ್ನು ಪ್ರಾಣಿಯೆಂದು ತಿಳಿದು ಬಾಣ ಬಿಡಲು ಅವನ ಕಾಲಿನ ಹೆಬ್ಬೆರಳು ಊನವಾಗುತ್ತದೆ. ಶ್ರೀಕೃಷ್ಣ ದರ್ಶನದಿಂದ ಪಾವನರಾಗಿ ಪವಿತ್ರ ಸ್ಥಳವೆಂಬ ನಂಬಿಕೆಗಳಿವೆ. ಇಲ್ಲಿರುವ ವೆಂಕಟೇಶ್ವರ ಮೂಲದಲ್ಲಿ ಬೇಟೆಗಾರರ ದೇವರೆಂಬುದು ಗಮನಾರ್ಹ. ಕರ್ನಾಟಕದ ಬೇಡನಾಯಕರ ಕೆಲವು ಪಂಗಡಗಳು ಅವನ ಅನುಯಾಯಿಗಳು ಸುರಪುರದ ಬೇಡ ನಾಯಕರು ತಿರುಪತಿ ತಿಮ್ಮಪ್ಪನ ಪರಮ

ಭಕ್ತರು ಬೇಡರು. ತಿರುಪತಿಯಲ್ಲಿ ನಡೆಯುವ ಬ್ರಹ್ಮೋತ್ಸವದಲ್ಲಿ ಸುರಪುರ ನಾಯಕರ ಪ್ರಥಮ ಪೂಜೆ ಮಾಡಲಾಗುತ್ತದೆ. ಇಂದಿಗೂ ಈ ಸಂಪ್ರದಾಯ ಮುಂದುವರೆಸಿಕೊಂಡು ಬರಲಾಗುತ್ತಿದೆ.

ಮಂತ್ರಾಲಯ : "ತುಂಗಭದ್ರಾ ನದಿ ದಂಡೆಯ ಮೇಲೆ ಈ ಯಾತ್ರಾಕ್ಷೇತ್ರವಿದೆ. ನಾಯಕ ಅರಸು ಮನೆತನಕ್ಕೆ ಸಂಬಂಧಿಸಿದ ಕುರುಹು ಇಲ್ಲಿ ಸಿಕ್ಕಿವೆ. ಕುಮಾರರಾಮನ ಅಜ್ಜಿ ಅಥವಾ ಕಂಪಲಿರಾಯನ ತಾಯಿಯ ಹೆಸರು ಮಂಚಾಲಮ್ಮ ಇವಳು ಆಂಧ್ರದವಳಾಗಿದ್ದು ಮಂತ್ರಾಲಯವು ತವರೂರಾಗಿತ್ತು. ಇವಳು ತೀರಿಕೊಂಡಾಗ ಮಂತ್ರಾಯದಲ್ಲಿ ಸಮಾಧಿ ಮಾಡಲಾಗಿದೆ. ತರುವಾಯ ಭವ್ಯದೇವಾಲಯವನ್ನು ನಿರ್ಮಿಸಿರುವರು. ಮಂಚಾಲಮ್ಮನ ಸಮಾಧಿ ದೇವಾಲಯವಾಗಿ ಆ ನಂತರ ರಾಘವೇಂದ್ರ ಸ್ವಾಮಿಗಳ ನೆಲೆಯಾಯಿತು. ಅಕ್ಕಪಕ್ಕದಲ್ಲಿ ಎರಡು ದೇವಾಲಯಗಳಿವೆ. ಬ್ರಿಟಿಷ ಕಲೆಕ್ಟರ್ ಸರ್ ಥಾಮಸ್ ಮನ್ರೋ (೧೮೦೦) ಇದಕ್ಕೆ ಇನಾಂ ಭೂಮಿಯನ್ನು ಕೊಡುತ್ತಾನೆ. ಬೇಡರು ಇಂದಿಗೂ ಇಲ್ಲಿ ಯಾತ್ರೆ ಹೋಗುವ ಪರಿಪಾಠ ಬೆಳೆಸಿಕೊಂಡಿದ್ದಾರೆ.

ಭಾರತದಲ್ಲಿ ಇನ್ನು ಅನೇಕ ಬೇಡ ಸಮುದಾಯವನ್ನು ಪ್ರತಿನಿಧಿಸಿರುವ ಕ್ಷೇತ್ರಗಳಿವೆ. ಆಂಧ್ರ ಪ್ರದೇಶದ ಅಹೋಬಲ ಉಗ್ರನರಸಿಂಹಸ್ವಾಮಿ ಕ್ಷೇತ್ರ ಪವಿತ್ರವಾದುದು. ಹೀಗೆ ಮಹಾನ್ ವ್ಯಕ್ತಿಗಳನ್ನು ಸಂಕೇತಿಸುವ ಸ್ಥಳ ಹಾಗೂ ಪ್ರದೇಶಗಳು ಹಲವು. ಶ್ರೀ ಮಹರ್ಷಿ ವಾಲ್ಮೀಕಿ ಉತ್ತರ ಪ್ರದೇಶ. ಏಕಲವ್ಯ ಹಸ್ತಿನಾಪುರ, ಗುಹಾ ಉತ್ತರ ಪ್ರದೇಶ, ಮೊದಲಾದ ವ್ಯಕ್ತಿಸ್ಥಳಗಳನ್ನು ಹೆಸರಿಸಬಹುದು."[೧೬]

ಕರ್ನಾಟಕದ ಆರಾಧನಾ ಕ್ಷೇತ್ರಗಳು

ಬೇಡರಿಗೆ ಭೌಗೋಳಿಕವಾಗಿ ನದಿ, ಭೂಮಿ, ಮರ, ಬೆಟ್ಟ ಗುಡ್ಡಗಳು ಪೂಜ್ಯನೀಯವಾದ ಸ್ಥಳಗಳಾಗಿವೆ. ಕರ್ನಾಟಕದಲ್ಲಿ ಇಂಥ ಅಜ್ಞಾತ ಸ್ಥಳಗಳನ್ನು ಬೆಳಕಿಗೆ ತರುವುದು ಅವಶ್ಯವಾಗಿದೆ. ಉತ್ತರ ಕನ್ನಡ ಜಿಲ್ಲೆಯ ಹಾನಗಲ್ಲು, ಶಿರ್ಸಿ, ಸಿದ್ದಾಪುರ ಇತರ ಸ್ಥಳಗಳಲ್ಲಿ ಕುಮಾರರಾಮನ ಆರಾಧನಾ ಕ್ಷೇತ್ರಗಳಿರುವುದು ಗಮನಾರ್ಹ. ಹಬ್ಬ ಹರಿದಿನ, ಜಾತ್ರೆ ಉತ್ಸವಗಳು ಇಲ್ಲಿ ನಡೆಯುತ್ತವೆ. ಧಾರವಾಡ ಜಿಲ್ಲೆಯ ಕೆಲವು ಹಳ್ಳಿಗಳಲ್ಲಿ ಮೇಲಿನಂತೆ ಕಾಣಬಹುದು. ಧಾರವಾಡದಲ್ಲಿರುವ ವಾಲ್ಮೀಕಿ ಮಂದಿರ ಕರ್ನಾಟಕಕ್ಕೆ ಮಾದರಿ. ಬೆಳಗಾವಿ ಜಿಲ್ಲೆಯಲ್ಲಿ ಸೂಲದ ಈರಪ್ಪ (ಅಥಣಿ)ಚಿಕ್ಕಲದಿನ್ನೆಯ ದೊಡ್ಡನಾಯಕನನ್ನು ಆರಾಧಿಸಲಾಗುತ್ತದೆ. ಹಾವೇರಿ ಜಿಲ್ಲೆಯ ಕಾಗಿನೆಲೆಯಲ್ಲಿ ಬೇಡರ ಕಣ್ಣಪ್ಪನ ದೇವಾಲಯವಿರುವುದಲ್ಲದೆ ವರ್ಷದಲ್ಲಿ ಆಗಾಗ ಬೇಡರು ಹಬ್ಬ ಜಾತ್ರೆಗಳನ್ನು ಆಚರಿಸುತ್ತಾರೆ.

ತಲ ಮತ್ತು ಕಾಡು ಎಂಬ ಹೆಸರು ಬೇಡರಿಂದ ತಲಕಾಡು ನಿರ್ಮಾಣವಾಗಿದೆ. ಬೇಡರು ಇಲ್ಲಿ ಪೂರ್ವಜರನ್ನು ಆಚರಿಸುವ ಹಬ್ಬ ಹರಿದಿನಗಳನ್ನು ಮಾಡುತ್ತಾರೆ. ಐತಿಹಾಸಿಕ

ಮಹತ್ವ ಪಡೆದ ಈ ಸ್ಥಳ ಕಾವೇರಿ ನದಿ ಪರಿಸರದ ತೀರ್ಥಕ್ಷೇತ್ರಗಳಲ್ಲಿ ಪ್ರಮುಖವಾದುದು. ಪಶ್ಚಿಮ ಘಟ್ಟಗಳ ಸರಹದ್ದಿನಲ್ಲಿರುವ ಕಲ್ಲತ್ತಗಿರಿಯ ವೀರಭದ್ರೇಶ್ವರ ದೇವಾಲಯದಲ್ಲಿ ಬೇಡರ ಕಣ್ಣಪ್ಪನ ವಿಗ್ರಹವಿದೆ. ಹಂಪಿ ವಿರೂಪಾಕ್ಷಸ್ವಾಮಿ ದೇವಾಲಯದಲ್ಲಿ ಎರಡು ಮೂರು ಶಿಲ್ಪಗಳಲ್ಲಿ ಬೇಡರ ಕಣ್ಣಪ್ಪನನ್ನು ಚಿತ್ರಿಸಲಾಗಿದೆ.

೧. ಮೈಸೂರು

ಚಾಮುಂಡಿ ಬೆಟ್ಟದ ಅದಿದೇವತೆ ಚಾಮುಂಡೇಶ್ವರಿಯನ್ನು ಇಲ್ಲಿನ ನಾಯಕರು ಆರಾಧಿಸುವರು. ಬೇರೆ ದೇವತೆಯನ್ನು ಆರಾಧಿಸಿದರೂ ತಮ್ಮ ವಂಶದ ನಾಯಕರನ್ನು ಆರಾಧಿಸುವ ಕ್ರಮ ಗಮನಾರ್ಹ ಮಾರಪ್ಪ ನಾಯಕನು ಇಲ್ಲೊಂದು ದೇವಾಲಯವನ್ನು ನಿರ್ಮಿಸಿದ್ದಾನೆ. ಸ್ತ್ರೀ ಮತ್ತು ಪುರುಷ ದೇವತೆಗಳ ಆರಾಧನೆಯು ಇಲ್ಲಿ ರೂಢಿಯಲ್ಲಿದೆ.

೨. ಮಲೆ ಮಾದೇಶ್ವರ ಕ್ಷೇತ್ರ

"ಶಿವ, ಪಾರ್ವತಿ ನೀನು ಭೂ ಲೋಕಕ್ಕೆ ಹೋಗಿ ಬೇಡರಳಾಗಿ ಹುಟ್ಟು ಎಂದು ಶಾಪಕೊಟ್ಟಿದ್ದನು ಈ ಗ್ರಾಮ ನೆನಪಿಸುತ್ತದೆ. ಶಿವನು ಬೇಡನಾಗಿ ಇಲ್ಲಿಗೆ ಬಂದಿದ್ದನೆಂಬುದು ಪ್ರತೀತಿ. ಕೊನೆಗೆ ಶಿವ-ಪಾರ್ವತಿಯರು ಬೇಡ ಬೇಡತಿಯರಾಗಿ ಇಲ್ಲಿಗೆ ಬಂದಿದ್ದರೆಂದು ಪ್ರತೀತಿ. ನಂತರ ಶಿವ-ಪಾರ್ವತಿ ಬೇಡ ಬೇಡತಿಯರಾಗಿ ಮದುವೆಯಾದ ಸ್ಥಳ 'ಮಲೆಮಾದೇಶ್ವರ ಬೆಟ್ಟ' ಎಂದು ಕರೆಯಲಾಗುತ್ತದೆ. ಹೆಚ್ಚಿನ ಸಂಖ್ಯೆಯಲ್ಲಿ ರಾಜ್ಯದ ಅನೇಕ ಭಾಗಗಳಿಂದ ಬಂದು ಬೇಡರು ಈ ದೇವರಿಗೆ ನಡೆದುಕೊಳ್ಳುವರು."[೧೭]

೩. ತಲಕಾಡು

ಕಾವೇರಿ ನದಿಯ ದಂಡೆಯ ಮೇಲಿರುವ ಕ್ಷೇತ್ರವೇ ತಲಕಾಡು. ಮೈಸೂರು ಜಿಲ್ಲೆಯ ಟಿ ನರಸಿಪುರ ತಾಲೂಕಿನ ಸಮೀಪದಲ್ಲಿದೆ. ಆದಿಯಲ್ಲಿ ಇದು ತಲಕಾಡಿನ ಗಂಗರ ರಾಜಧಾನಿಯಾಗಿದ್ದು ಈ ಗ್ರಾಮದ ಐತಿಹ್ಯವಿದೆ. ತಲ ಮತ್ತು ಕಾಡು ಎಂಬ ಬೇಡರಿಗೆ ಒಲಿದ ಲಿಂಗದಿಂದ ಪರಿಣಾಮಕಾರಿಯಾದುದು ತಲಕಾಡಾಗಿ ನಿರ್ಮಾಣಗೊಂಡಿದೆ.

೪. ನೀರ್ಥಡಿ ರಂಗನಾಥ

ಬೇಡ ವಂಶದ ತಿಮ್ಮಣ್ಣನಾಯಕನ ಮೂಲ ಸ್ಥಳ ಇಲ್ಲಿನ ವ್ಯಕ್ತಿಗಳ ಸಂಕೇತವಾಗಿ ತಮ್ಮ ಸಂಸ್ಕೃತಿ ವ್ಯಕ್ತಿ ಪ್ರಕೃತಿ ಮೂಲಕ ಭಕ್ತಿಗೆ ಹೆಸರಾದ ರಂಗನಾಥನನ್ನು ಬೇಡರು ಆರಾಧಿಸುವುದು ಕಂಡುಬರುತ್ತದೆ. ಕರ್ನಾಟಕದ ಅನೇಕ ನಾಯಕ ಸಂಸ್ಥಾನಗಳು ಇರುವ ಕಡೆ ರಂಗನಾಥ ದೇವಾಲಯ ಕಾಣಸಿಗುತ್ತವೆ. ಅಲ್ಲಿನ ಸಂಖ್ಯೆಯಲ್ಲಿ ಬೇಡ ಸಮುದಾಯದವರು ಭಕ್ತಿಯಿಂದ ಆರಾಧಿಸುತ್ತಾರೆ.

೫. ಆನೆಗುಂದಿ

ಕೊಪ್ಪಳ ಜಿಲ್ಲೆ ಗಂಗಾವತಿ ತಾಲೂಕಿನ ಪ್ರಾಚೀನ ಗ್ರಾಮ ಆನೆಗುಂದಿ. ವಾಲ್ಮೀಕಿ, ಬೇಡ ನಾಯಕ ಸಮುದಾಯದ ಮೂಲ ನೆಲೆ ಬೇಟೆಯಲ್ಲಿ ನಿರತರಾದ ಬೇಡರಿಗೆ ಅವಾಸಸ್ಥಾನವಾಗಿತ್ತು. ಶಬರಿಯ ನೆಲೆ ಇದರ ಪಕ್ಕದಲ್ಲಿದೆ. ಬೇಡರಿಗೆ ಅರಮನೆ ಮತ್ತು ಗುರುಮನೆಗಳೆರಡೂ ಆನೆಗುಂದಿಯೆ ಆಗಿದೆ. ಜೊತೆಗೆ ಕಂಪಿಲರಾಯ ಮತ್ತು ಕುಮಾರರಾಮ ಎಂಬ ನಾಯಕ ಅರಸರಿಗೆ ಸಂಬಂಧಿಸಿದ ಆರಾಧನಾ ನೆಲೆಯಾಗಿ ಕಂಡುಬರುತ್ತದೆ.

೬. ಅಂಜನೇಯನ ಆರಾಧಕರು

ಬೇಡರು ಹೆಚ್ಚಿನ ಸಂಖ್ಯೆಯಲ್ಲಿ ಆಂಜನೇಯನ ಆರಾಧಕರು. ಪ್ರತಿಯೊಂದು ಬೇಡ ಕುಟುಂಬದಲ್ಲಿ ಸಾಮಾನ್ಯವಾಗಿ ಈ ದೇವರನ್ನು ಆರಾಧಿಸುವುದು ಕರ್ನಾಟಕ ಎಲ್ಲಾ ಕಡೆಗಳಲ್ಲಿ ಕಂಡುಬರುತ್ತದೆ.

೭. ಶಕ್ತಿ ದೇವತೆಗಳ ಆರಾಧಕರು

ಬೇಡರಿಗೆ ಸಾಮಾನ್ಯವಾಗಿ ಒಂದು ಗಂಡು ದೇವತೆಯಾದರೆ ಎರಡನೇ ದೇವತೆ ಹೆಣ್ಣು. ಈ ದೇವತೆಗಳು ಪ್ರಾದೇಶಿಕವಾಗಿ ಹಲವಾರು ಹೆಸರುಗಳಿಂದ ಕಾಣಿಸಿಕೊಳ್ಳುತ್ತವೆ. ಮಾರಮ್ಮ, ದುರ್ಗಾಮ್ಮ, ಮರಗಮ್ಮ, ಅಂಬಭವಾನಿ, ರತ್ನಮ್ಮ, ಗದ್ದೆಮ್ಮ, ಪಾಲಕಮ್ಮ, ಚೌಡಮ್ಮ ಮತ್ತು ಯಲ್ಲಮ್ಮದೇವಿ ವಿಶೇಷವಾಗಿ ನವರಾತ್ರಿ ಸಂದರ್ಭದಲ್ಲಿ ನಾಡಿನ ಹಲವು ಕಡೆಗಳಲ್ಲಿ ದುರ್ಗಾದೇವತೆಯನ್ನು ಆರಾಧಿಸುತ್ತಾರೆ.

ದೊಡ್ಡಿಯಲ್ಲಿ ವಾಸಿಸುವ ಬೇಡ ಸಮುದಾಯದ ವೈದ್ಯ ಪದ್ಧತಿಗಳು

ಬೇಡ ಸಮುದಾಯದವರು ಮೂಲತಃ ಬೆಟ್ಟಗುಡ್ಡಗಳಲ್ಲಿ ತಮ್ಮದೇ ಆದ ನೆಲೆಯನ್ನು ನಿರ್ಮಿಸಿಕೊಂಡು ವಾಸಿಸುತ್ತಿದ್ದಾರೆ. ಇಂದು ಅವುಗಳು ಕೆಲವು ಹಳ್ಳಿಗಳಾಗಿ ಪರಿವರ್ತನೆ ಯಾದರೆ ಇನ್ನು ಕೆಲವು ಮೊದಲಿನ ಸ್ಥಿತಿ ಇದ್ದ ಕಾರಣ ಅವುಗಳಿಗೆ ದೊಡ್ಡಿಯೆಂದು ಕರೆಯುತ್ತಾರೆ. "ಇವರಿಗೆ ಯಾವುದೇ ರೀತಿಯ ಕಾಯಿಲೆ ಅಥವಾ ಅನಾರೋಗ್ಯವಾದಾಗ ತಕ್ಷಣ ವೈದ್ಯರ ಹತ್ತಿರ ಹೋಗದೆ ತಮ್ಮ ಮನೆಯಲ್ಲಿ ತಮ್ಮದೇ ಆದ ಔಷಧಿಯನ್ನು ಸಿದ್ಧಪಡಿಸಿಕೊಂಡು ಆ ಕಾಯಿಲೆಯನ್ನು ವಾಸಿಮಾಡಿಕೊಳ್ಳುತ್ತಿದ್ದಾರೆ. ಅಷ್ಟೇ ಅಲ್ಲದೇ ಈ ಬೇಡ ಸಮುದಾಯದವರು ಬೇಟೆಯಾಡುವ ಸಂದರ್ಭದಲ್ಲಿಯಾಗಲಿ ಅಥವಾ ಕೃಷಿ ಚಟುವಟಿಕೆ ಮಾಡುವ ಸಂದರ್ಭದಲ್ಲಿಯಾಗಲಿ ಹಾವು, ಚೇಳು, ನಾಯಿ ಕಚ್ಚಿದರೆ ಆ ಸಂದರ್ಭದಲ್ಲಿ ಪ್ರಾಣಿಯಿಂದ ಆದ ವಿಷವನ್ನು ತೆಗೆದು ಹಾಕಿ ಔಷಧಿಯನ್ನು ಕೊಡುವ ಪದ್ಧತಿ ಬೇಡ ಸಮೂಹದಲ್ಲಿದೆ. ಅದೇ ರೀತಿ ಬೇಡ ಸಮುದಾಯದವರು ಬೇಟೆಯಾಡುವ ಸಂದರ್ಭದಲ್ಲಿ ಕುಸ್ತಿ ಆಡುವ ಸಂದರ್ಭದಲ್ಲಿ ಅಥವಾ ರಸ್ತೆ ಅಪಘಾತದಲ್ಲಿ ಕೈಕಾಲು

ಮುರಿದರೆ ಕೈಕಾಲುಗಳನ್ನು ಜೋಡಿಸುವ ಔಷಧಿಯನ್ನು ತಮ್ಮಲ್ಲಿ ತಯಾರಿಸಿಕೊಂಡು ಗುಣಪಡಿಸುತ್ತಾರೆ."[೧೮] ತಮಗೆ ಅಷ್ಟೆ ಅಲ್ಲದೇ ನೆರೆಹೊರೆ ಹಳ್ಳಿಯವರಿಗೆ ಇಂತಹ ಔಷಧಿಯಿಂದ ಯಾವುದೇ ಶಸ್ತ್ರ ಚಿಕಿತ್ಸೆ ಇಲ್ಲದೇ ಮುರಿದ ಅಂಗವನ್ನು ಜೋಡಿಸುತ್ತಾರೆ. ಬೇಡ ಸಮುದಾಯದ ಇತಿಹಾಸವನ್ನು ಅವಲೋಕಿಸಿದರೆ ಬೇಡರು ವನವಾಸಿಗಳು ದಟ್ಟವಾದ ಕಾಡುಗಳು, ಕಣಿವೆಗಳು ಇವರ ಆಯಕಟ್ಟಿನ ಸ್ಥಳಗಳು ಇಂದು ದೊಡ್ಡಿಗಳಾಗಿ ಪರಿವರ್ತನೆಯಾಗಿದೆ ಎಂದು ತಿಳಿದುಬರುತ್ತದೆ. ಈಗಲೂ ಇವರು ನೆಲೆಸಿರುವ ಸ್ಥಳಗಳು ಕುರುಚಲು ಗುಡ್ಡಗಾಡು ಪ್ರದೇಶಗಳಿಗೆ ಹೊಂದಿಕೊಂಡಿವೆ. ಆದರಿಂದಲೇ ಸರ್ಕಾರ ಇವರ ಎಲ್ಲ ಲಕ್ಷಣಗಳನ್ನು ಮನಗಂಡು ಗಿರಿಜನ ಎಂದು ಕರೆಯುವುದರ ಮುಖಾಂತರ ಹಳೇ ಪದ್ದತಿಯ ಜೊತೆಗೆ ಸಮಾಜದ ಮುಖ್ಯವಾಹಿನಿಗೆ ತರುವ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಆದರೆ ಸರಿಯಾದ ರೀತಿಯಲ್ಲಿ ಜಾರಿಯಾಗದೆ ಯೋಜನೆಗಳು ವಿಫಲವಾಗಿವೆ. ಆಧುನಿಕ ಔಷಧಿಯನ್ನು ಪಡೆದುಕೊಳ್ಳಬೇಕಾದರೆ ತಾಲೂಕು ಕೇಂದ್ರಕ್ಕೆ ಬರಬೇಕಾಗುತ್ತದೆ. ಸಾರಿಗೆ ಕೊರತೆಯಿಂದ ಈ ಸಮುದಾಯದವರು ಗಿಡಿಮೂಲಿಕೆ ಸೇವನೆ ಮಾಡುವುದನ್ನು ಇಂದಿಗೂ ಬಿಟ್ಟಿಲ್ಲ.

ಬೇಡ ಸಮುದಾಯದ ಪಾರಂಪರಿಕ ಔಷಧಿಗಳು

೧ ಮಗುವಿಗೆ ದೃಷ್ಟಿಯಾದರೆ

"ಬೇಡ ಸಮುದಾಯದವರು ಚಿಕ್ಕಮಕ್ಕಳಿಗೆ ದೃಷ್ಟಿದೋಷವಾದರೆ ಅಥವಾ ಬೇರೆಯವರ ಕೆಟ್ಟ ಕಣ್ಣು ಬಿದ್ದರೆ ಆ ಮಗುವಿನ ತಾಯಿ ಕಸಬರಿಗೆ ಹುಲ್ಲು, ಮೆಣಸಿನಕಾಯಿ, ತೆಗೆದುಕೊಂಡು ಆ ಮಗುವಿಗೆ ನಿವಾಳಿ ತೆಗೆದು ಬೆಂಕಿಗೆ ಹಾಕಿದರೆ ಮಗುವಿನ ಮೇಲೆ ಬಿದ್ದಿರುವ ಕೆಟ್ಟ ದೃಷ್ಟಿ ತೊಲಗುತ್ತದೆ ಎಂಬುದನ್ನು ಇವರು ಬಲವಾಗಿ ನಂಬಿಕೊಂಡು ಬಂದಿದ್ದಾರೆ."[೪]

೨. ಮಕ್ಕಳು ಸತತವಾಗಿ ಆಳುತ್ತಿದ್ದರೆ

ಅರಿಶಿಣ ನೀರು ಕಲಿಸಿ ಒಂದು ಎಲೆ, ಒಂದು ಅಡಿಕೆಯನ್ನು ಹಾಕಿ ಒಂದು ಮುಷ್ಟಿ ಅನ್ನವನ್ನು ಹಾಕಿ ಮಗುವಿನ ಮುಖಕ್ಕೆ ನಿವಾಳಿಸಿ ತೆಗೆದು ೩ ದಾರಿ ಕೂಡುವ ಸ್ಥಳದಲ್ಲಿ ಹಾಕಿದರೆ ಮಗುವಿನ ಅಳು ನಿಲ್ಲುತ್ತದೆ ಎಂಬುವುದು ಇವರ ನಂಬಿಕೆಯಾಗಿದೆ.

೩. ಮಕ್ಕಳಿಗೆ ಮುಟ್ಟು ದೋಷ

ಮಕ್ಕಳಿಗೆ ತೆಳು ಬೇದಿಯಾದರೆ ಮುಟ್ಟು ದೋಷ ಎಂದು ಕರೆಯುತ್ತಾರೆ. ಮುಟ್ಟು ಆಗುವ ಮಹಿಳೆಯರು ಆ ಮಗುವನ್ನು ಎತ್ತಿಕೊಂಡರೆ ಸೊಂಕು ತಗುಲಿ ಆ ಮಗುವಿಗೆ ಮುಟ್ಟು ದೋಷ ಆಗುತ್ತದೆ. ಅಂತಹ ಸಂದರ್ಭದಲ್ಲಿ ಈ ಮಗುವನ್ನು ಬೇರೆಯವರ ಕೈಯಲ್ಲಿ ಕೊಡದಂತೆ ಮನೆಯಲ್ಲಿ ರಕ್ಷಣೆ ಮಾಡುತ್ತಾರೆ.

೪. ಮಕ್ಕಳಿಗೆ ವಿಪರೀತ ಕೆಮ್ಮು ಅಂಟಿದರೆ

ಒಂದು ಲವಂಗ ಒಂದು ಎಲೆ, ಒಂದು ಮೆಣಸನ್ನು ತೆಗೆದುಕೊಂಡು ಸಾಣೆಕಲ್ಲಿನ ಮೇಲೆ ತೇದು ತಾಯಿಯ ಎದೆ ಹಾಲಿನಲ್ಲಿ ಹಾಕಿ ಕುಡಿಸಿದರೆ ವಿಪರೀತ ಕೆಮ್ಮು ನಿಲ್ಲುತ್ತದೆ ಎಂಬ ನಂಬಿಕೆ ಬೇಡರ ದೊಡ್ಡಿಗಳಲ್ಲಿ ಜನಪ್ರಿಯವಾಗಿದೆ.

೫. ಕಾಲಿನ ಕೀಲು ನೋವಿಗೆ

ತಾಮ್ರದ ಉಂಗುರವನ್ನು ಕಾಲಿನ ಬೆರಳಿಗೆ ಹಾಕಿದರೆ ಕೀಲು ನೋವಿನ ಸಮಸ್ಯೆ ಪರಿಹಾರವಾಗುತ್ತದೆ ಎಂದು ಕಾಟಗಲ್ ದೊಡ್ಡಿಯ ಹಿರಿಯರು ಹೇಳುತ್ತಾರೆ.

೬. ಹುಟ್ಟಿದ ಮಕ್ಕಳಿಗೆ ಚುಟಿಕೆ ಹಾಕುವುದು

ಮಗು ಹುಟ್ಟಿದ ಮೂರು ತಿಂಗಳಲ್ಲಿ ಸೂಜಿಯನ್ನು ಕಾಯಿಸಿ ನವಜಾತ ಶಿಶುವಿನ ಹೊಟ್ಟೆಗೆ ಚುಟಿಕೆಯನ್ನು ಹಾಕುತ್ತಾರೆ. ಇದರಿಂದ ಮುಂದೆ ಮಗುವಿಗೆ ಚಿಟ್ಟಿಹೊಟ್ಟಿ ಬರುವುದು ನಿಲ್ಲುತ್ತದೆ ಹಾಗೂ ಯಾವುದೇ ರೋಗ ಮಗುವಿಗೆ ತಗಲುವುದಿಲ್ಲ ಎಂಬ ನಂಬಿಕೆ ಬೇಡರ ದೊಡ್ಡಿಯ ಪಾರಂಪರಿಕ ಚಿಕಿತ್ಸೆಯಾಗಿದೆ.

೭. ಹಲ್ಲು ನೋವಾದರೆ/ಹಲ್ಲು ಹುಳ ತಿಂದರೆ

ಹಲ್ಲು ಹುಳು ತಿಂದರೆ ಹಲ್ಲಿನ ವಸಡಿಗೆ ನೋವಾದರೆ ಹಲ್ಲಿನ ಹುಳವನ್ನು ತೆಗೆಯುವ ಗಿಡಮೂಲಿಕೆ ಔಷಧಿಯನ್ನು ಬಳಸಿಕೊಂಡು ನೋವು ಇರುವ ವಸಡಿನಲ್ಲಿ ಇಟ್ಟುಕೊಂಡು ಮಲಗಿದರೆ ಹಲ್ಲು ನೋವು ಶಾಶ್ವತವಾಗಿ ತೊಲಗುತ್ತದೆ ಎಂಬುದನ್ನು ದೊಡ್ಡಿಯ ಜನರ ಬಲವಾದ ನಂಬಿಕೆಯಾಗಿದೆ.

೮. ಬೇಸಿಗೆಯಲ್ಲಿ ಮೂತ್ರ ವಿಸರ್ಜನೆ ಸಮಸ್ಯೆ

ದೊಡ್ಡಿ ಜನರು ಬೇಸಿಗೆ ಸಮಯದಲ್ಲಿ ದೇಹದ ತಾಪದಿಂದ ಮೂತ್ರ ವಿಸರ್ಜನೆ (ಸಕೆ) ಸಮಸ್ಯೆಯಾದರೆ ಉಣಸೆ ಹಣ್ಣಿನ ರಸವನ್ನು ಸೇವಿಸಿದರೆ ಮೂತ್ರವಿಸರ್ಜನೆ (ಸಕೆ ಇಡಿಯುವುದು) ಸಮಸ್ಯೆ ನಿವಾರಣೆಯಾಗುತ್ತದೆ ಎಂದು ದೇಸಾಯಿ ದೊಡ್ಡಿಯವರು ಹೇಳುತ್ತಾರೆ.

೯. ಹೊಟ್ಟೆ ಒಳಗಿನ ಜಂತುವಿನ ಸಮಸ್ಯೆ

ಬೇವಿನಸೊಪ್ಪು, ಕೊತ್ತಂಬರಿ, ಶುಂಠಿ, ಮೆಣಸಿನಕಾಯಿ, ಉಪ್ಪು, ಹುಣಸೆಹಣ್ಣನ್ನು ಬೆರೆಸಿ ಅದನ್ನು ಅರೆದು ವಾರಕ್ಕೊಮ್ಮೆ ಬಿಸಿ ಅನ್ನದ ಮೂಲಕ ತಿನ್ನುತ್ತಾ ಬಂದರೆ ಹೊಟ್ಟೆಯಲ್ಲಿನ ಜಂತುವಿನ ಸಮಸ್ಯೆ ನಿವಾರಣೆಯಾಗುತ್ತದೆ ಎಂಬ ಪದ್ದತಿ ದೊಡ್ಡಿಯರಲ್ಲಿದೆ.

೧೦. ಮರುವಿನ ಸಮಸ್ಯೆ

ನೆನಪಿನ ಶಕ್ತಿಯನ್ನು ವೃದ್ಧಿಸಲು ಬೇವಿನಹಣ್ಣನ್ನು ಪ್ರತಿ ದಿನ ಬೆಳಿಗ್ಗೆ ತಿಂದರೆ ಅವರಿಗೆ ಸ್ಮರಣೆ ಶಕ್ತಿ ಹೆಚ್ಚಾಗುತ್ತದೆ ಎಂಬ ಅಭಿಪ್ರಾಯ ಬೇಡ ಬುಡಕಟ್ಟಿನವರದಾಗಿದೆ.

೧೧. ಜೀರ್ಣ ಶಕ್ತಿ

ಮಾಂಸಹಾರಿ ಆಗಿರುವ ಬೇಡ ಬುಡಕಟ್ಟು ಸಮುದಾಯದವರು ಆಹಾರವನ್ನು ಬೇಗ ಜೀರ್ಣವಾಗುವ ಸಲುವಾಗಿ ತಮ್ಮದೇ ಔಷಧಿಯನ್ನು ಸಿದ್ದಪಡಿಸಿಕೊಳ್ಳುತ್ತಾರೆ. ಜೀರ್ಣಶಕ್ತಿ ಹೆಚ್ಚಿಸಲು ಪಪ್ಪಾಯಿರಸ ಮತ್ತು ನೀರನ್ನು ಮಿಶ್ರಣ ಮಾಡಿ ಅದಕ್ಕೆ ಜೀರಿಗೆ ಪುಡಿ, ನಿಂಬೆರಸ ಸೇರಿಸಿ ಸೇವಿಸಿದರೆ ಜೀರ್ಣ ಶಕ್ತಿ ವೃದ್ದಿಸುತ್ತದೆ.

೧೨. ಒಸಡು ಗಟ್ಟಿಗೆ

ಹಲ್ಲು ಒಸಡು ದವಡೆಗಳು ಗಟ್ಟಿಯಾಗಲು ನೆಲ್ಲಿಕಾಯಿಯನ್ನು ತಿಂದರೆ ಅದರಲ್ಲೂ ಹಸಿದಾಗ ನೆಲ್ಲಿಕಾಯಿ ತಿನ್ನುವುದರ ಮೂಲಕ ಹಲ್ಲಿನ ಒಸಡುಗಳು ಗಟ್ಟಿಯಾಗುತ್ತವೆ ಎಂಬ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

೧೩. ಉಬ್ಬಸಕ್ಕೆ

ಉಬ್ಬಸರೋಗ, ನೆಗಡಿ, ಅಜೀರ್ಣ ಎದೆ ಉರಿತ, ನಿವಾರಣೆಗೆ ಬೆಚ್ಚಗಿನ ನೀರಿನಲ್ಲಿ ಜೀರ್‍ಗೆ ಪುಡಿ ಹಾಕಿ ಆದರಿಂದ ತಯಾರಿಸುವ ಕಷಾಯವನ್ನು ಸೇವಿಸಿದರೆ ಉಬ್ಬಸರೋಗ, ಎದೆ ಉರಿತ ನಿವಾರಣೆಯಾಗುತ್ತದೆ ಎಂದು ಪಾರಂಪರಿಕವಾಗಿ ನಂಬಿಕೊಂಡು ಬಂದ ಔಷಧಿಯಾಗಿದೆ.

೧೪. ಮೂಲವ್ಯಾದಿ ಸಮಸ್ಯೆ

ಮೂಲವ್ಯಾದಿ ಸಮಸ್ಯೆಗೆ ಬೇಡ ಸಮುದಾಯದವರು ಹಾಲಿ ಪ್ರಾಣಿಯ ಉಂಗರವನ್ನಾಗಿ ಮಾಡಿಕೊಂಡು ಅಮಾವಾಸ್ಯೆ ದಿನ ಹಾಕಿಕೊಂಡರೆ ಮೂಲವ್ಯಾದಿ ವಾಸಿಯಾಗುತ್ತದೆ ಎಂದು ಇಲ್ಲಿನ ಜನರು ಹೇಳುತ್ತಾರೆ.

೧೫. ರಕ್ತ ಶುದ್ಧಿಗೆ

ಬೇಡ ಬುಡಕಟ್ಟು ಸಮುದಾಯದವರು ರಕ್ತಶುದ್ಧಿಯಾಗಬೇಕಾದರೆ ಹೊಲದಲ್ಲಿ ಬೆಳೆಯುವ ಅಕ್ಕರಿಕೆ ಪಲ್ಯವನ್ನು ಪ್ರತಿನಿತ್ಯ ಸೇವನೆ ಮಾಡುವುದರಿಂದ ರಕ್ತಶುದ್ಧಿಯಾಗುತ್ತದೆ ಎಂದು ಇಲ್ಲಿನ ಜನ ನಂಬಿದ್ದಾರೆ.

೧೬. ಮೈ ತುಂಬಾ ಮೊಡವೆಗಳಿಗೆ (ಬಕ್ಕೆಗಳು)

ಬೇಡ ಬುಡಕಟ್ಟು ಸಮುದಾಯದವರಲ್ಲಿ ಮೈ ತುಂಬಾ ಮೊಡವೆಗಳು ಇದ್ದರೆ ಅದು ಹೆಣ್ಣು ದೇವತೆಯ ಶಾಪದಿಂದ ಆಗಿರುತ್ತವೆ ಎಂದು ತಿಳಿದು ಬೇವಿನ ತಪ್ಪಲನ್ನು ನೀರಿನಲ್ಲಿ ಹಾಕಿ ನೀರನ್ನು ಕುದಿಸಿ ಸ್ವಲ್ಪ ಸಮಯ ನೀರನ್ನು ಆರಿಸಿ ಮೈ ತುಂಬಾ ಮೊಡವೆ ಆದ ವ್ಯಕ್ತಿಗೆ ಸ್ನಾನ ಮಾಡಿಸಿದರೆ ಮೊಡವೆ ವಾಸಿಯಾಗುತ್ತದೆ ಎಂದು ಈ ದುರ್ಗಮ ಸ್ಥಿತಿಯಲ್ಲಿ ಇರುವ ಜನರ ನಂಬಿಕೆಯಾಗಿದೆ.

೧೭. ವಿಪರೀತ ಭೇದಿಯಾದರೆ

ದೊಡ್ಡಿಯಲ್ಲಿ ನೆಲೆಸಿರುವವರು ಭೇದಿಯಾದರೆ ತಕ್ಷಣ ವೈದ್ಯರ ಬಳಿ ಹೋಗುವುದಿಲ್ಲ. ಮನೆಯಲ್ಲಿ ಸಾಬ್ಬಾನ್ ಅಕ್ಕಿಯಿಂದ ಪಾಯಸ ಮಾಡಿ ಕುಡಿದರೆ ಭೇದಿ ನಿವಾರಣೆಯಾಗುತ್ತದೆ ಎಂದು ಹೇಳುವರು.

೧೮. ಮೂರ್ಛೆರೋಗದ ಸಮಸ್ಯೆ

ಇಲ್ಲಿನ ಜನರು ತಮ್ಮಲ್ಲಿ ಯಾರಿಗೆ ಆದರೂ ಮೂರ್ಛೆರೋಗ ಇದ್ದರೆ ಅಂತಹ ವ್ಯಕ್ತಿಯನ್ನು ಪಂಡಿತರ ಹತ್ತಿರ ಕರೆದಕೊಂಡು ಹೋಗಿ ಬೇವಿನ ಕಡ್ಡಿಯಿಂದ ನರಗಳನ್ನು ನೋಡಿ ಬೇವಿನಕಡ್ಡಿಯಿಂದ ಸುಟ್ಟರೆ ಆದರಿಂದ ಮೂರ್ಛೆರೋಗ ವಾಸಿಯಾಗುತ್ತದೆ ಎಂದು ಸ್ಥಳೀಯ ಪರಾಂಪರಿಕ ಪಂಡಿತರ ಅಭಿಪ್ರಾಯವಾಗಿದೆ.

೧೭. ಕೈ ಕಾಲು ಮುರಿದರೆ

ಬೇಡ ಸಮುದಾಯದ ಪಂಡಿತ ಯಾವುದೇ ವ್ಯಕ್ತಿಯ ಕೈಕಾಲು ಮುರಿದರೆ, ಮುರಿದ ಕೈ ಕಾಲಿಗೆ ಕಟ್ಟಿಗೆಯಿಂದ, ಕಡ್ಡಿಯಿಂದ ಜೋಡಿಸಿ ಕಟ್ಟಲಾಗುತ್ತದೆ. ಅಷ್ಟೇ ಅಲ್ಲದೇ ತಪ್ಪಲು ಔಷಧಿಯನ್ನು ಆಡಿನ ಹಾಲಿನಲ್ಲಿ ಹಾಕಿ ಕುಡಿಯಲು ತಿಳಿಸುತ್ತಾನೆ. ಇದರಿಂದ ಮುರಿದರೆ ಕೈ ಕಾಲು ಬೇಗನೆ ಕೂಡುತ್ತವೆ ಎಂದು ಸ್ಥಳೀಯರು ಹೇಳುತ್ತಾರೆ. ಈ ಕೆಲಸವನ್ನು ಬುಂಕಲದೊಡ್ಡಿಯಲ್ಲಿ ಮಾಡಲಾಗುತ್ತದೆ.

೧೮. ನಾಯಿ ಕಚ್ಚಿದರೆ

ನಾಯಿಯಿಂದ ಕಚ್ಚಿಸಿಕೊಂಡ ವ್ಯಕ್ತಿಗೆ ಕನಿಷ್ಠ ೩ ತಿಂಗಳವರೆಗೆ ಕೆಲ ಆಹಾರವನ್ನು ಸೇವನೆ ಮಾಡುವುದನ್ನು ಬಿಡಿಸಿ ಕೊರಳಿಗೆ ದಾರವನ್ನು ಕಟ್ಟುತ್ತಾರೆ. ನಾಯಿ ಕಚ್ಚಿಸಿಕೊಂಡ ವ್ಯಕ್ತಿಗೆ ಕನ್ನಡಿಯಲ್ಲಿ ಮುಖ ನೋಡಿಕೊಳ್ಳಬಾರದು, ಕ್ಷೌರ ಮಾಡಿಸಿಕೊಳ್ಳಬಾರದು ಎನ್ನುವ ನಿರ್ಬಂಧ ಹಾಕುವುದರ ಜೊತೆಗೆ ಯಾವುದೇ ರೀತಿ ತೊಂದರೆ ಆಗದಂತೆ ರಕ್ಷಣೆ ಮಾಡುವ ಪದ್ದತಿ ಇವರಲ್ಲಿದೆ.

೧೯. ಹಾವು ಕಚ್ಚಿದರೆ

ಬೇಡ ಸಮುದಾಯವು ಮೊದಲಿನಿಂದಲೂ ಅರಣ್ಯವಾಸಿಗಳು ಕಾಡುಗಳಲ್ಲಿ ವಿಷಪೂರಿತ ಪ್ರಾಣಿಗಳಾದ ಹಾವು, ಚೇಳು, ಕಚ್ಚಿದರೆ ದೊಡ್ಡಿಗಳಲ್ಲಿ ತಪ್ಪಲ ಔಷಧಿಯ ಮುಖಾಂತರ ಪಂಡಿತರು ಹಾವು ಕಚ್ಚಿಸಿಕೊಂಡ ವ್ಯಕಿತ್ತಿಗೆ ಹಾವಿನ ವಿಷವನ್ನು ತೆಗೆದು ಹಾಕಿ ಔಷಧಿಯನ್ನು ನೀಡುತ್ತಾರೆ. ದೊಡ್ಡಿಗಳಿಗೆ ಯಾವುದೇ ಸೌಲಭ್ಯ ಇಲ್ಲದಿದ್ದರಿಂದ ತಪ್ಪಲ ಔಷಧಿಯನ್ನು ನೀಡುವವರೇ ದೊಡ್ಡ ವೈದ್ಯರು ಆಗಿದ್ದಾರೆ.

೨೦. ಸೊಂಟ ನೋವುವಿಗೆ

ಸೊಂಟದ ನೋವಿಗೆ ಉಡುವಿನ ತುಪ್ಪವನ್ನು ಹಚ್ಚಿದರೆ ಸೊಂಟ ನೋವು ವಾಸಿಯಾಗುತ್ತದೆ. ಅಲ್ಲದೆ ಅದನ್ನು ಊಟ ಮಾಡುವುದರಿಂದ ಸೊಂಟ ಗಟ್ಟಿಯಾಗಿ ಇರುತ್ತದೆ ಎಂಬ ನಂಬಿಕೆ ಇದೆ.

ಬೇಡ ಸಮುದಾಯದ ಸಾಮಾಜಿಕ ಸ್ಥಿತಿಗತಿ

ದೊಡ್ಡಿಗಳಲ್ಲಿ ವಾಸಿಸುವ ಬೇಡ ಸಮುದಾಯದವರು ಸಮಾಜದ ಕಟ್ಟಕಡೆಯ ಸಮುದಾಯವಾಗಿ ಕಂಡುಬರುತ್ತಾರೆ. ತಾವಾಯಿತು ತಮ್ಮ ಬದುಕಾಯಿತು ಎನ್ನುವ ಮುಗ್ಧ ಸ್ಥಿತಿಯಲ್ಲಿ ಜೀವನ ಮಾಡುತ್ತಾರೆ. ಹೊರಗಿನ ಜಗತ್ತಿನ ಬಗ್ಗೆ ಅಷ್ಟೇ ಗೊತ್ತಿಲ್ಲ ಯಾವಗಲಾದರೂ ಒಮ್ಮೆ ಅಂದರೆ ವಾರದಲ್ಲಿ ಅಥವಾ ತಿಂಗಳಲ್ಲಿ ಒಂದು ಬಾರಿ ಪಕ್ಕದ ಗ್ರಾಮವನ್ನು ನೋಡುತ್ತಾರೆ. ಯಾಕೆಂದರೆ ಸಂತೆ ಮಾರುಕಟ್ಟೆ ಸಲುವಾಗಿ ಇವರು ಪಕ್ಕದ ಗ್ರಾಮ ಅಥವಾ ತಾಲೂಕಿನ ಕೇಂದ್ರ ಸ್ಥಾನಕ್ಕೆ ಬಂದು ಹೋಗುತ್ತಾರೆ. ಉಳಿದಂತೆ ಈ ಹೊರಗಿನ ಘಟನಾವಳಿಗಳ ಬಗ್ಗೆ ಅವರಿಗೆ ಅಷ್ಟಾಗಿ ತಿಳಿಯುತಿರಲಿಲ್ಲ. ಇತ್ತೀಚಿಗೆ ಜಾಗತೀಕರಣದ ಪರಿಣಾಮವಾಗಿ ಇವರು ಇವರ ನೆಲೆಗಳಿಗೆ ವಿದ್ಯುತ್ ಸೌಲಭ್ಯ ಬಂದಿದ್ದರಿಂದ ಇವರ ಮನೆಗಳಲ್ಲಿ ರೇಡಿಯೋ ಜೊತೆಗೆ ಟಿವಿ ಮುಂತಾದ ಮನರಂಜನೆ ಮಾಹಿತಿಯನ್ನು ತಿಳಿದುಕೊಳ್ಳಲು ಇಟ್ಟುಕೊಂಡಿದ್ದಾರೆ. ಇಡೀ ರಾಜ್ಯಕ್ಕೆ ೪೦ರಷ್ಟು ವಿದ್ಯುತ್ ನೀಡುವ ಘಟಕ ರಾಯಚೂರು ಜಿಲ್ಲೆಯಾದರೆ ಈ ಜಿಲ್ಲೆಯ ಅಡವಿಯಲ್ಲಿ ನೆಲೆಸಿರುವವರಿಗೆ ೬-೮ ಗಂಟೆಗಳ ಕಾಲ ವಿದ್ಯುತ್ ಸಿಗುತ್ತದೆ. ಒಂದು ವೇಳೆ ವಿದ್ಯುತ್ ಟ್ರಾನ್ಸ್‌ಫಾರ್ಮ್ ಸುಟ್ಟರೆ ಆಯಿತು. ಮತ್ತೆ ಕತ್ತಲೂ ಜಗತ್ತಿನಲ್ಲಿ ಎರಡರಿಂದ ಮೂರು ತಿಂಗಳ ಕಾಲ ಕಳೆಯುತ್ತಾರೆ. ಅಂತಹ ಸ್ಥಿತಿಯಲ್ಲಿ ಇವರ ಬದುಕು ಕಂಡುಬರುತ್ತದೆ.

ಇವರು ನೆಲೆಸಿರುವ ದೊಡ್ಡಿಗಳಲ್ಲಿ ಇನ್ನು ಅನೇಕ ಕುಟುಂಬಗಳು ವಿದ್ಯುತ್ ಇಲ್ಲದೇ ಬದುಕುತ್ತಿದ್ದಾರೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ದೊಡ್ಡಿಯ ಜನರಿಗೆ ಯಾವುದೇ ಮಾಹಿತಿ ಇರದೇ ಇರುವುದನ್ನು ಅರಿತುಕೊಂಡು ಅವರಿಗೆ ಮೋಸಮಾಡುವ ಜನರು ಪಕ್ಕದ ಹಳ್ಳಿಯವರು ನಿಮಗೆ ಮನೆ ಬಂದಿವೆ. ಅವುಗಳನ್ನು ಹಾಕಬೇಕಾದರೆ ಹಣಬೇಕಾಗುತ್ತದೆ ಎಂದು ಹೇಳಿ ಅವರಿಂದ ಅನೇಕ ಸಲ ಹಣವನ್ನು ತೆಗೆದುಕೊಂಡು ಮೋಸ ಮಾಡಿರುವ ಪ್ರಕರಣಗಳು ತಿಳಿದುಬರುತ್ತವೆ.

ಸರ್ಕಾರ ಯೋಜನೆಗಳಲ್ಲೂ ತಾರತಮ್ಯವನ್ನು ಮಾಡುವುದನ್ನು ಇವರಿಂದ ತಿಳಿದುಬರುತ್ತದೆ. ನ್ಯಾಯ ಬೆಲೆ ಅಂಗಡಿಯವರು ನಿಯಮದ ಪ್ರಕಾರ ಎಲ್ಲರಿಗೂ ಒಂದೇ ನೋಡದೇ ದೊಡ್ಡಿಯಿಂದ ಬಂದ ಜನರಿಗೆ ತಿಂಗಳಿಗೆ ೨೫ಕೆ.ಜಿ ಅಕ್ಕಿ ಕೊಡಬೇಕಾದ ನಿಯಮ ಇದ್ದರೆ ಇವರಿಗೆ ೨೦ ಕೆಜಿ ಅಕ್ಕಿ ಹಾಕಿ ಕಡಿಮೆ ಕಡಿಮೆ ಆಹಾರ ಬಂದಿದೆ ಅದಕ್ಕೆ ಕಡಿಮೆ ಹಾಕುತ್ತಿದ್ದೇವೆ ಎಂದು ಹೇಳುತ್ತಾರೆ.

ದೊಡ್ಡಿಯ ಜನರು ಯಾವುದೇ ಉದ್ಯೋಗ ಸಿಗಲಿ ಬಿಡಲಿ ತಮ್ಮ ಮಕ್ಕಳಿಗೆ ಸರಿಯಾದ ಸಮಯಕ್ಕೆ ಮದುವೆ ಮಾಡುತ್ತಾರೆ. ಮದುವೆಯಾದ ದಂಪತಿಗಳ ಪ್ರವಾಸ ಸ್ಥಳಗಳಿಗೆ ಹೋಗುವುದು ಸಾಮಾನ್ಯ ಸಂಗತಿ. ಆದರೆ ದೊಡ್ಡಿ ಜನ ಇದಕ್ಕೆ ತದ್ವಿರುದ್ಧ ಇದ್ದಾರೆ. ಮದುವೆ ಮಾಡಿದ ನಂತರ ರಾಜ್ಯದ ಮಹಾನಗರಗಳಾದ ಬೆಂಗಳೂರು

ಹೊಟ್ಟೆಪಾಡಿಗಾಗಿ ವಲಸೆ ಹೋಗುತ್ತಾರೆ. ಜೊತೆಗೆ ಸಾಲ ಮಾಡಿ ಬಂದು ಬಳಗದವರಿಗೆ ಊಟ ಮಾಡಿಸುತ್ತಾರೆ. ಆ ಸಾಲದ ಹೊರೆಯನ್ನು ದಂಪತಿಗಳ ಮೇಲೆ ಹೊರಿಸಿ ತಂದೆ ತಾಯಿಗಳು ಜವಾಬ್ದಾರಿಯನ್ನು ಕಳೆದುಕೊಳ್ಳುತ್ತಾರೆ.

ಈ ಜನರು ವರ್ಷಕ್ಕೆ ಒಂದು ಬಾರಿಯಾದರೂ ದೇವರನ್ನು ಮಾಡುವ ಪದ್ಧತಿ ಇದೆ. ಅಂದರೆ ದೇವರಿಗೆ ಹರಕೆ ತೀರಿಸಲು ಪ್ರಾಣಿಬಲಿಯನ್ನು ಕೊಡುವ ಪದ್ಧತಿ ಎಷ್ಟೇ ಕಷ್ಟವಾದರೂ ದೇವರ ಆಚರಣೆ ಮಾಡುವುದು ಬಿಟ್ಟಿಲ್ಲ. ತಿಂಗಳು ಗಟ್ಟಲೇ ಇದ್ದು ದೇವರ ಉತ್ಸವ ಮಾಡಿ ತಾವು ದುಡಿದು ತಂದ ಹಣವನ್ನು ಖರ್ಚುಮಾಡಿ ಪುನಃ ಕಾಲಕೈಯಿಂದ ಮಹಾನಗರಕ್ಕೆ ವಲಸೆ ಹೋಗುತ್ತಾರೆ. ಯಾವುದೇ ಶಿಕ್ಷಣವಿಲ್ಲದ ಈ ಜನರು ಹೋದ ಸ್ಥಳದಲ್ಲಿ ಆಕಸ್ಮಿಕ ಅನಾಹುತವಾದರೆ ಪರಿಹಾರದಿಂದ ವಂಚಿತರಾಗಿ ೧೦ರಿಂದ ೨೦ ಸಾವಿರ ರೂಪಾಯಿಗಳಿಗೆ ಸಮದಾನ ಪಟ್ಟುಕೊಳ್ಳುತ್ತಾರೆ. ಗಂಡನನ್ನು ಕಳೆದುಕೊಂಡು ಆ ಹೆಣ್ಣು ಜೀವನ ಪೂರ್ತಿ ಅವನ ನೆನಪಿನಲ್ಲಿ ಕಾಲಕಳೆಯಬೇಕು. ಆರಕ್ಕೆ ಏರದೇ ಮೂರಕ್ಕೆ ಇಳಿಯದ ಮೂರಾಬಟ್ಟೆ ಜೀವನ ಎಂದರೆ ದೊಡ್ಡಿಯವರದು ಎಂದು ಹೇಳಿದರೆ ತಪ್ಪಾಗಲಾರದು. ಈ ನೆಲೆಯಲ್ಲಿ ಇರುವ ಯಾವುದೇ ತಂದೆ ತಾಯಿಯಾಗಲಿ ಮಕ್ಕಳಿಗೋಸ್ಕರ ಆಸ್ತಿ ಮಾಡುವುದು ಕಂಡುಬರುವುದಿಲ್ಲ. ಆದರೆ ಮಕ್ಕಳನ್ನು ಅನಕ್ಷರಸ್ಥರನ್ನಾಗಿ ಮಾಡುವುದು ಕಾಣಬಹುದು.

ಬೇಡರ ಆರ್ಥಿಕ ಸ್ಥಿತಿಗತಿ

ಬೇಡರಿಗೆ ಕಸುಬು ಬೇಟೆ ಆಡುವುದು. ಆದರೆ ಇತ್ತೀಚಿಗೆ ಬೇಟೆ ಪದ್ಧತಿ ನಿಷೇದದಿಂದ ಬೇಟೆ ಆಡುವುದು ಬಹಳಷ್ಟು ಕಡಿಮೆಯಾಗಿದೆ. ಜೊತೆಗೆ ದನ, ಕುರು, ಮೇಕೆ ಮುಂತಾದವನ್ನು ಕಾಯುವುದು ಕಸುಬು ಎಂದು ಹೇಳುವರು. ಆದರೆ ಇಷ್ಟಕ್ಕೆ ಅವರ ಹೊಟ್ಟೆ ತುಂಬದು. ಇದರಲ್ಲಿ ಬಹುತೇಕ ಜನರು ಕೃಷಿಯನ್ನು ಅವಲಂಬಿಸಿ ಬದುಕುತ್ತಿದ್ದಾರೆ. ದಿನಕ್ಕೆ ೧೦೦–೧೫೦ ರೂಪಾಯಿ ಯಾದರೆ ಕೂಲಿ ಅದರಲ್ಲಿಯೂ ಒಂದು ವಾರ ಕೆಲಸ ಸಿಕ್ಕರೆ ಎರಡು ವಾರ ಗಂಟೆಲೇ ಅದೇ ವಾರ ದೊಡ್ಡ ದುಡಿಮೆ ಎಂದು ಹೇಳಬಹುದು.

ಬೇಡರ ದೊಡ್ಡಿಯಲ್ಲಿರುವ ಬಹುತೇಕ ಮಂದಿಗೆ ಎರಡು ಮೂರು ಎಕರೆ ಜಮೀನಿದೆ. ಬಹುತೇಕ ತಗ್ಗು ದಿನ್ನೆಗಳಿಂದ ಕೂಡಿದ ಭೂಮಿಯಾಗಿದೆ. ಅದರಲ್ಲಿ ಕೆಲವು ಜಮೀನುಗಳಿಗೆ ನೀರಾವರಿಯ ಭಾಗ್ಯ ಬಂದರೆ ಇನ್ನು ಕೆಲವು ಭೂಮಿಗಳಿಗೆ ಮಳೆಯೆ ಆಶ್ರಯವಾಗಿದೆ. ಇಲ್ಲಿ ಬೆಳೆಯುವ ಬೆಳೆಗಳಾದ ಜೋಳ, ಸಜ್ಜೆ, ಸೂರ್ಯಕಾಂತಿ, ತೊಗರಿ, ಕಡಲಿ ಇಂತವೇ ಬೆಳೆದು ವರ್ಷದಲ್ಲಿ ೩೬೫ ದಿನದ ತುತ್ತಿನ ಚೀಲ ತುಂಬಿಸಿಕೊಳ್ಳುವರು. ಹೊರಗಡೆ ಕೂಲಿಗೂ ಹೋಗಲು ಇಚ್ಛಿಸದೆ ಈ ಜನರು ತಮ್ಮ ಹೊಲಗಳಲ್ಲಿ ದುಡಿಯುತ್ತಾರೆ. ಆದರೆ ಈಗ ಪರಿಸ್ಥಿತಿ ಬದಲಾಗಿದೆ ಬೇರೆಯವರಲ್ಲಿ ಕೂಲಿಗೆ ಇಲ್ಲಿಂದ ಗಂಡಾಳುಗಳು ಹೋಗುವರು. ದನಕರುಗಳ ಜೊತೆ ಕೋಳಿ ಮೇಕೆ ಸಾಕುವ ಈ ಮಂದಿಗೆ ಅದೊಂದು ಉಪಕಸುಬು.

ಮೈಬಗ್ಗಿಸಿ ಶ್ರಮ ಜೀವನ ನಡೆಸುವವರು ಇದ್ದಾರೆ. ಕೃಷಿಗೆ ದನಕರು, ಮೇಕೆ ಕಾಯಲು ಮಕ್ಕಳನ್ನೇ ಆದರಿಸುವ ಹಿರಿಯರು ಬೇರೆ ವಹಿವಾಟುಗಳ ಬಗ್ಗೆ ತಲೆ ಕೆಡಿಸಿಕೊಂಡಿಲ್ಲ.

ಜೀವನ

ಕುಡಿತ ಜೂಜಾಡುವವರು ಇವರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಾಣಬಹುದು. ಎಷ್ಟೇ ದುಶ್ಚಟವನ್ನು ಮಾಡಿದರೂ ಇವರಲ್ಲಿ ಸಹಬಾಳ್ವೆ ಸಹ ಜೀವನ ಮನೆ ಮಾಡಿದೆ. ಯಾವುದೇ ಕಾರ್ಯಕ್ಕೂ ಒಟ್ಟಾಗಿ ಸೇರುತ್ತಾರೆ. ಒಟ್ಟಾಗಿ ಕಲೆತು ಕಾರ್ಯನಡೆಸುತ್ತಾರೆ. ಅದು ಶುಭಗಳಿಗೆಯನ್ನು ನೋಡಿ ಕಾರ್ಯವನ್ನು ಮಾಡುತ್ತಾರೆ. ಗಂಡಸರು ಹೆಂಗಸರು ಎಂಬ ಪ್ರತ್ಯೇಕತೆ ಇಲ್ಲ. ಎಲ್ಲ ಕೆಲಸಗಳಿಗೂ ಇವರೆಲ್ಲ ಮುಂದು.

ಐಶರಾಮದ ಬದುಕು ಬಯಸುವವರಲ್ಲ ಇದ್ದುದರಲ್ಲೇ ತಿಂದು ತೃಪ್ತಿ ಪಡುವ ಈ ಮಂದಿಗೆ ದಿನಕ್ಕೆ ಸಜ್ಜೆ ರೊಟ್ಟಿ, ಅನ್ನ ಸಾರು ಸಿಕ್ಕರೆ ಸಾಕು ಅದರಲ್ಲೇ ಸಂತೃಪ್ತಿ. ಅವರೇ ಬೆಳೆದು ತರುವ ದವಸ ಧಾನ್ಯಗಳಲ್ಲಿ ದಿನಗಳನ್ನು ಕಳೆಯುತ್ತಾರೆ. ಪರಾವಲಂಬಿಗಳಲ್ಲಿ ಅವರಾಯಿತು ಅವರ ದೊಡ್ಡಿಯಾಯ್ತು. ಬೇರೆಯವರನ್ನು ಅವಲಂಬಿಸಿದೆ, ಸಿಕ್ಕದರಲ್ಲೇ ಸಂತೃಪ್ತಿ ಪಟ್ಟುಕೊಂಡು ದಿನಗಳನ್ನು ನೂಕುತ್ತಾರೆ. ಈ ರೂಢಿಯೇ ಅವರ ಅಭಿವೃದ್ಧಿಗೆ ಮಾರಕವಾಗಿದೆ. ಹೊರಗಿನ ಜನ ಇವರ ಬಗ್ಗೆ ತಲೆಕೆಡಿಸಿಕೊಳ್ಳದೇ ಇರಲೂ ಕೂಡ ಇದೇ ಮುಖ್ಯಕಾರಣ.

ಹೊರಗಿನ ಸಮಾಜದಲ್ಲಿ ಎಂದೂ ಯಾವ ಸ್ಥಾನಮಾನ ಬಯಸದ ಈ ಬೇಡರನ್ನು ಹೊರಗಿನ ಬಲಾಢ್ಯ ಜನ ಅನೇಕ ವರ್ಷಗಳಿಂದ ಅವರ ಮೌಢ್ಯ ಅಮಾಯಕತನವನ್ನು ದುರುಪಯೋಗ ಪಡಿಸಿಕೊಂಡೇ ಬಂದಿದ್ದಾರೆ.

ಕೋಳಿ ಸಾಕಾಣಿಕೆ

ರಾಯಚೂರು ಜಿಲ್ಲಯಾದ್ಯಂತ ಬೇಡ ಸಮುದಾಯದವರ ದೊಡ್ಡಿಗಳಲ್ಲಿ ಕೋಳಿ ಹುಂಜ ಸಾಕಾಣಿಕೆ ಮಾಡುವುದು ಕಂಡುಬರುತ್ತದೆ. ಕ್ಷೇತ್ರಕಾರ್ಯ ಸಂದರ್ಭದಲ್ಲಿ ಲಿಂಗಸ್ಗೂರು ದೇವದುರ್ಗ ಎರಡು ತಾಲ್ಲೂಕುಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬೇಡರ ದೊಡ್ಡಿಗಳು ಕಂಡುಬರುತ್ತವೆ. ಬಹುತೇಕ ಎಲ್ಲಾ ದೊಡ್ಡಿಗಳಲ್ಲಿ ಕೋಳಿ, ಹುಂಜ, ಮೊಟ್ಟೆ ತಿನ್ನುತ್ತಾರೆ. ಸಾಕಾಣಿಕೆ ಮಾಡುತ್ತಾರೆ. ಮೊದಲಿಗೆ ಮನೆಯಲ್ಲಿ ಮಾಂಸದ ಊಟಕ್ಕೆ ಅನುಕೂಲದ ಸಲುವಾಗಿ ಸಾಕಾಣಿಕೆ ಮಾಡುತ್ತಿದ್ದರು. ಇತ್ತೀಚಿಗೆ ಆಧುನೀಕರಣ ನಗರೀಕರಣದ ಪ್ರಭಾವದಿಂದ ಜವಾರಿ ಕೋಳಿಗಳ ಬೇಡಿಕೆ ಇರುವುದರಿಂದ ಈ ಪ್ರದೇಶದ ಬೇಡ ಸಮುದಾಯದವರು ಕೋಳಿ ಸಾಕಾಣಿಕೆಯೂ ಸಾಮಾನ್ಯವಾಗಿ ಸಾಕುತ್ತಿದ್ದಾರೆ. ಕೋಳಿ ಮಾಂಸವು ೧೫೦ರಿಂದ ೨೦೦ ರೂಗಳವರೆಗೆ ಮಾರಾಟ ಮಾಡುತ್ತಾರೆ. ಬೆಂಚಲದೊಡ್ಡಿ, ಅಡಿಕೆರದೊಡ್ಡಿ, ಗುಮದಾರದೊಡ್ಡಿ ಮುಂತಾದ ದೊಡ್ಡಿಗಲ್ಲಿ ಕೋಳಿಗಳನ್ನು ಸಾಕಿರುವುದು ಕಂಡುಬರುತ್ತದೆ.

ಮೇಕೆ ಸಾಕಾಣಿಕೆ

ಮೇಕೆ ಸಾಕಾಣಿಕೆಯೂ ಸಹ ಲಾಭದಾಯವಾದದ್ದು ಎಂಬುದು ಬೇಡರ ಅನಿಸಿಕೆ. ಆದರೆ, ಮೇಕೆ ಸಾಕಾಣಿಕೆಯಷ್ಟು ಕುರಿ ಸಾಕಾಣಿಕೆ ಅಷ್ಟೊಂದು ಒಲವು ಇವರಲ್ಲಿ ಇಲ್ಲ ಎಂದೇ ಹೇಳಬೇಕಾಗುತ್ತದೆ. ಕೆಲ ಬೇಡ ಸಮುದಾಯದವರು ಮೇಕೆಗಳನ್ನಷ್ಟೆ ಸಾಕಿದರ ಮತ್ತೆ ಕೆಲವರು ಕುರಿಗಳ ಹಿಂಡಿನಲ್ಲಿಯೇ ಮೇಕೆಗಳನ್ನು ಸಾಕಿರುವುದು ಕಂಡುಬರುತ್ತದೆ. ಮೇಕೆಯ ಹಾಲು ಅತ್ಯಂತ ಶ್ರೇಷ್ಠವಾದದ್ದು. ಈ ಹಾಲಿನಲ್ಲಿ ಅನೇಕ ರೋಗಗಳನ್ನು ಗುಣಪಡಿಸುವ ಶಕ್ತಿ ಇದೆ ಎಂದು ಬೇಡರು ನಂಬಿದ್ದಾರೆ. ಮೇಕೆ ಹಾಲನ್ನು ನಿತ್ಯ ಬಳಸುತ್ತಿರುವುದು ಕಾಣುತ್ತೇವೆ. "ಮೆಕೆಗಳ ಸಾಕಾಣಿಕೆಗೆ ಹೆಚ್ಚಿನ ಖರ್ಚುವೆಚ್ಚಗಳಿರುವುದಿಲ್ಲ ಈ ಮೇಕೆಗಳನ್ನು ಮಾಂಸಕ್ಕಾಗಿ ಮಾರಾಟ ಮಾಡುತ್ತಾರೆ. ಕೊಬ್ಬಿದ ಮೇಕೆ ೩೦೦೦ರಿಂದ ೫೦೦೦ರೂವರಗೆ ಮಾರಾಟವಾಗುತ್ತವೆ."[೧೯] ಕೃಷಿಯಲ್ಲಿ ಲಾಭಸಿಗದಿದ್ದಾಗ ಮೇಕೆ ಸಾಕಾಣಿಕೆಯಿಂದ ಆರ್ಥಿಕ ಸ್ಥಿತಿಯನ್ನು ಸುಧಾರಿಸಿಕೊಳ್ಳುತ್ತಾರೆ. ಹೀಗಾಗಿ ಮೇಕೆ ಸಾಕಾಣಿಕೆಯನ್ನು ಅಲ್ಲಲ್ಲಿ ನೋಡುತ್ತೇವೆ. ಬೇಡರ ದೊಡ್ಡಿ, ಕಾವಲೇರದೊಡ್ಡಿ ಚಿಕಲೇರದೊಡ್ಡಿ ಮಟಮರಡಿ ದೊಡ್ಡಿ ಮುಂಡರಗಿ ದೊಡ್ಡಿಗಳಲ್ಲಿ ಮೇಕೆಗಳನ್ನು ಸಾಕಿರುವ ಬಗ್ಗೆ ಮಾಹಿತಿ ದೊರೆಯುತ್ತದೆ.

ಬೇಡರ ರಾಜಕೀಯ ಸ್ಥಿತಿಗತಿ

ದೊಡ್ಡಿಯಲ್ಲಿ ನೆಲೆಸಿರುವ ಜನರಿಗೆ ರಾಜಕೀಯ ಪ್ರಜ್ಞೆ ಇಲ್ಲ ಎಂದು ಹೇಳಲು ಸಾಧ್ಯವಿಲ್ಲ. ಚುನಾವಣೆಗಳು ಸಮೀಪ ಬಂದಾಗ ಪಕ್ಕದ ಗ್ರಾಮದ ಕುಲದ ಯಜಮಾನರಿಗೆ ಕರೆಯುತ್ತಾರೆ. ಆಗ ಈ ದೊಡ್ಡಿಯ ಹಿರಿಯನನ್ನು ಕಳುಹಿಸುತ್ತಾರೆ. ಕುಲದ ಯಜಮಾನನ ನಿರ್ಧಾರವೇ ದೊಡ್ಡಿಯ ನಿರ್ಧಾರ. ಇದರಿಂದಾಗಿ ರಾಜಕಾರಣಗಳಿಗೂ ಸುಲಭ. ದೊಡ್ಡಿಗೆ ಬೇಟಿಕೊಡದೇ ಮತಗಳು ಸಿಗುವಾಗ ತಲೆ ಏಕೆ ಕೆಡಿಸಿಕೊಳ್ಳಬೇಕು ಎನ್ನುವ ಮನೋಭಾವನೆ ರಾಜಕಾರಣಿಗಳಲ್ಲಿ ಬೆಳೆದುಬಂದಿದೆ. ಹೊರಗಿನ ಸಮಾಜದಲಿ ಯಾವುದೇ ಸ್ಥಾನಮಾನ ಬಯಸದ ಈ ಬೇಡರ ಆರ್ಥಿಕ ಶ್ರೀಮಂತರು ಈ ಜನರನ್ನು ಅನೇಕ ವರ್ಷಗಳಿಂದ ಅವರ ಒಗ್ಗಟ್ಟು ಮೌಢ್ಯ ಸಹನೆಯನ್ನು ರಾಜಕಾರಣಿ ದುರ್ಬಳಕೆ ಮಾಡಿಕೊಂಡು ಬಂದಿದ್ದಾರೆ.

ಇಡೀ ದೊಡ್ಡಿಯ ಯಜಮಾನ ಉಸ್ತುವಾರಿಯನ್ನು ಕುಲದಲ್ಲೇ ಒಬ್ಬ ಹಿರಿಯನನ್ನು ಹಿಂದಿನಿಂದಲೂ ಮಾಡಿಕೊಂಡು ಬಂದಿದ್ದಾರೆ. ಆತನನ್ನು ಬಿಟ್ಟು ರಾಜಕೀಯ ಮಾಡಬೇಕೆಂದರೆ ಆರ್ಥಿಕವಾಗಿ ಯಾರು ಸದೃಢವಾಗಿಲ್ಲ ಎನ್ನುವುದು ಒಂದು ಕಡೆಯಾದರೆ ಅದೇ ಆರ್ಥಿಕ ಸ್ಥಿತಿಯನ್ನು ತಿಳಿದುಕೊಂಡು ಹಣಕೊಟ್ಟು ಪಕ್ಕದ ಹಳ್ಳಿಯವರಿಗೆ ಮತವನ್ನು ಚಲಾಯಿಸುತ್ತಾರೆ. ಇದರಿಂದ ಅಲ್ಪ ಸಂಖ್ಯೆಯಲ್ಲಿ ಇರುವ ದೊಡ್ಡಿಯವರು ಅವರ ಮತಗಳು ನಿರ್ಣಾಯಕವಾಗಿಲ್ಲ. ಹೆಚ್ಚಿನ ಸಂಖ್ಯೆಯಲ್ಲಿ ಪಕ್ಕದ ಗ್ರಾಮದ ಅದೇ ಸಮುದಾಯದವರು ಗೆಲ್ಲುತ್ತಾರೆ.

ಒಂದು ವೇಳೆ ಚುನಾವಣೆಗೆ ನಿಂತು ಗೆಲವು ಸಾಧಿಸಿದವರು ತಾನು ತನ್ನ ಕ್ಷೇತ್ರಕ್ಕೆ ಯಾವ ಅಭಿವೃದ್ಧಿ ಕೆಲಸ ಮಾಡಿಕೊಳ್ಳಲು ಆಗುವುದಿಲ್ಲ. ಹೆಚ್ಚಿನ ಸದಸ್ಯ ಬಲ ಇರುವ ಸಮುದಾಯದವರು ಅಧ್ಯಕ್ಷರು ಆಗುತ್ತಾರೆ. ಕೆಲಸದ ವಿಷಯ ಬಂದಾಗ ಎಲ್ಲಾ ಸದಸ್ಯರ ವಾದ ಒಂದು ಕಡೆಯಾದರೆ ಏಕ ಸದಸ್ಯತ್ವ ಇರುವವರು ಯಾವುದೇ ಕೆಲಸ ಮಾಡಿಕೊಳ್ಳಲು ಸಾಧ್ಯವಿಲ್ಲ ಎಂದು ತಿಳಿದು ಸ್ವಂತ ಬೆಳವಣಿಗೆ ಕಡೆ ಹೆಚ್ಚು ಆಸಕ್ತಿಯನ್ನು ವಹಿಸುಕೊಳ್ಳುತ್ತಾನೆ. ಇದರಿಂದ ದೊಡ್ಡಿಯ ಯಾವ ಅಭಿವೃದ್ಧಿ ಕೆಲಸವು ಸಾಧ್ಯವಾಗದೇ ಅಪೂರ್ಣ ಸ್ಥಿತಿಯಲ್ಲಿ ಇರುವುದು ಕಂಡುಬರುತ್ತದೆ.

ಬೇಡ ಸಮುದಾಯದವರು ಹೆಚ್ಚು ಬೆಳದಿದುಕ್ಕೆ ಒಂದು ಕಥೆ, ದೊಡ್ಡಿ ಗುಂಪು, ಕಟ್ಟಿಕೊಂಡು ಉರಾಚೆ ಉಳಿದುಕೊಂಡುದ್ದಕ್ಕೆ ಮತ್ತೊಂದು ಕಥೆ. ಬರೇ ಅಂತೆ ಕಂತೆಗಳಲ್ಲಿ ಪೂರ್ವಿಕರ ಕಥೆಗಳನ್ನೇ ಹೇಳುವುದನ್ನು ನೋಡಿದರೆ ಗೊತ್ತಾಗುತ್ತದೆ. ದೊಡ್ಡಿ ಶತಮಾನಕ್ಕೂ ಹಿಂದೆ ಸೃಷ್ಟಿಗೊಂಡಿತು ಎಂಬ ಅಭಿಪ್ರಾಯ ಇಲ್ಲಿನ ಯಜಮಾನನ ಬದುಕು, ಸಾವು ಸಾಕ್ಷಿಯಾಗಿದೆ. ಆದರೆ ಈಗಿನ ಕಥೆ ಏನು ಇವರ ಬದುಕೇನು ಎಲ್ಲಿ ವಾಸವಾಗಿದ್ದಾರೆ ಮತ್ತು ಅವರ ಜೀವನದ ಎಲ್ಲಾ ಮಗ್ಗಲುಗಳನ್ನು ತಿಳಿದುಕೊಳ್ಳುವುದು ಇಲ್ಲಿ ಬಹಳ ಮುಖ್ಯ.

ಬೇಡ ಸಮುದಾಯದ ಶೈಕ್ಷಣಿಕ ಮಟ್ಟ

ಶಿಕ್ಷಣ : ಶಿಕ್ಷಣವು ಒಂದು ಸಾಮಾಜಿಕ ಬದಲಾವಣೆಯ ನಿಯೋಗಿಯಾಗಿದೆ. ಇದು ಸಾಮಾಜಿಕ ಚಲನೆಯ ವಾಹಕವಾಗಿದ್ದು, ಮೇಲ್ಮುಖ ಚಲನೆಗೆ ಅನುವು ಮಾಡಿಕೊಡುತ್ತದೆ. ಶಿಕ್ಷಣವು ವ್ಯಕ್ತಿಯ ಅಂತಸ್ತಿನ ನಿರ್ಧಾರಕ ಅಂಶವಾಗಿದೆ. ಒಂದು ದೇಶದ ಜನಾಂಗದ ಸರ್ವತೋಮುಖ ಅಭಿವೃದ್ಧಿಯು ಶಿಕ್ಷಣವನ್ನು ಅವಲಂಬಿಸಿದೆ. ಶಿಕ್ಷಣವಿಲ್ಲದ ವ್ಯಕ್ತಿ ವೈಯಕ್ತಿಕವಾಗಿಯೂ ಆಗಲಿ, ಸಾಮಾಜಿಕವಾಗಿಯೇ ಆಗಲಿ ಉನ್ನತಿಯಾಗಲು ಸಾಧ್ಯವಿಲ್ಲ. ವ್ಯಕ್ತಿಯ ಮತ್ತು ಸಮಾಜದ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಹಿಂದುಳಿದಿರುವಿಕೆಗೆ ಶಿಕ್ಷಣದ ಕೊರತೆಯೇ ಕಾರಣವಾಗುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ವ್ಯಕ್ತಿ ಸಮಾಜದಲ್ಲಿ ಮತ್ತು ಸಮಾಜದ ಮುಖ್ಯವಾಹಿನಿಯಲ್ಲಿ ಮಿಳಿತವಾಗಬೇಕಾದರೆ ಶಿಕ್ಷಣ ಅಗತ್ಯವಾಗಿದೆ.

ಬೇಡರ ಶಿಕ್ಷಣ

ರಾಯಚೂರು ಜಿಲ್ಲೆಯ ದೊಡ್ಡಿಯಲ್ಲಿ ನೂರರಿಂದ ನೂರಾ ಇಪ್ಪತ್ತಕ್ಕೂ ಹೆಚ್ಚು ಮಕ್ಕಳಿದ್ದಾರೆ. ದೊಡ್ಡಿಯ ಬಡತನ ಅವತಾರ ಈ ಮಕ್ಕಳು ತೊಟ್ಟ ಬಟ್ಟೆಗಳನ್ನೆಲ್ಲ ಒಮ್ಮೆ ನೋಡಿದರೆ ಸಾಕು ಆ ಜನರ ಆರ್ಥಿಕ ಸ್ಥಿತಿ ಕಣ್ಣಿಗೆ ಕಾಣುತ್ತದೆ. ಹೊಲಸಾದ ಬಟ್ಟೆ ಚಿಂದಿ, ಚಿಂದಿಯಾದ ಬಟ್ಟೆಗೆ ಹೊಲಿಗೆಯಿಂದ ಜೋಡಿಸಿರುವುದು ತಕ್ಷಣ ಕಣ್ಣಿಗೆ ಬೀಳುತ್ತದೆ. ದೊಡ್ಡಿಯ ಮಕ್ಕಳಲ್ಲಿ ಶೇಕಡಾ ೭೫ರಷ್ಟು ಮಂದಿ ಯಾರು ಶಾಲೆಗಳಿಗೆ ಹೋಗುವುದಿಲ್ಲ.

ಆದರೆ ವಿಚಿತ್ರವೆಂದರೆ ಶಾಲೆಯ ದಾಖಲೆಯಲ್ಲಿ ಕೆಲವು ಕಂಡುಬಂದರೆ ಆ ಮಕ್ಕಳು ಯಾರು ಶಾಲೆಗೆ ಬರುವುದಿಲ್ಲ. ಎಲ್ಲರೂ ಅಲ್ಲಿ ಇಲ್ಲಿ ಅಡ್ಡಾಡಿಕೊಂಡು ದನ, ಕರು, ಎತ್ತು, ಎಮ್ಮೆ ಕಾಯ್ದುಕೊಂಡು ರಾತ್ರಿ ಹಗಲು ಕಳೆದುಬಿಡುತ್ತಾರೆ. ಇಲ್ಲಿ ಶಾಲೆ ತಲೆ ಎತ್ತಿಲ್ಲ. ಮಕ್ಕಳನ್ನು ಕಂಡಾಗ ನನ್ನ ಮಾತು ಮೌನವಾಯಿತು. "ಅಲ್ಲಿರುವ ಹಿರಿಯರ ಬಾಲ್ಯವನ್ನು ನೆನಪಿಸಿಕೊಂಡೆ ಅವರಿಗೂ ಇದೇ ರೀತಿಯ ಸ್ಥಿತಿ ಇದ್ದುದರಿಂದ ಅವರಲ್ಲಿ ಯಾರಿಗೂ ತಮ್ಮ ಮಕ್ಕಳಿಗಾದರೂ ವಿದ್ಯೆ ಕೊಡಬೇಕು ಎಂಬುದು ಮನಸ್ಸಿಗೆ ಬಾರದೇ ಹೋಗಿರಬೇಕು"[೨೦] ಎಂದುಕೊಂಡು ಅಲ್ಲಿಯ ಹಿರಿಯ ಯಲ್ಲಪ್ಪ ಅವರನ್ನು ವಿಚಾರಿಸಿದಾಗ ಮನೆಗಳಲ್ಲಿರುವ ಬರಡುತನ ಮತ್ತು ಅಕ್ಷರ ಜ್ಞಾನ ಬಗ್ಗೆ ಸಮರ್ಪಕ ತಿಳುವಳಿಕೆ ಇಲ್ಲದೇ ಇರುವುದರಿಂದ ಯಾರಿಗೂ ಅದರ ಚಿಂತೆಯಿಲ್ಲ ಸರ್ಕಾರದವರಾಗಲಿ ಅಥವಾ ಶಿಕ್ಷಣ ಇಲಾಖೆಯವರಾಗಲಿ ಇಲ್ಲಿ ಮಕ್ಕಳನ್ನು ಶಾಲೆಗಳಿಗೆ ಸೇರಿಸಬೇಕೆಂದು ಸೂಚನೆ ಕೊಡಲಿಕ್ಕಾದರೂ ಬಂದ ನೆನಪಿದೆಯೇ ಎಂದು ಕೇಳಿದರೆ ಇಲ್ಲ ಎಂದು ತಲೆ ಅಲ್ಲಾಡಿಸುತ್ತಾರೆ.

ದೊಡ್ಡಿಯಿಂದ ಸುಮಾರು ಎರಡು ಮೂರು ಮೈಲು ದೂರದಲ್ಲಿ ಶಾಲೆಯಿದೆ. ಆದರೆ ಅಷ್ಟೊಂದು ದೂರ ಮಕ್ಕಳನ್ನು ಕಳುಹಿಸಿಕೊಡುವ ಧೈರ್ಯ ದೊಡ್ಡಿಯವರಿಗಿಲ್ಲ. ಮಕ್ಕಳನ್ನು ಕರೆದುಕೊಂಡು ಹೋಗಿ ಕರೆದುಕೊಂಡು ಬರಬೆಕು, ಈ ತಾಳ್ಮೆ ದೊಡ್ಡಿಯವರಿಗೆ ಅದು ಯಾವಾಗ ಬರಬೇಕು. ಇಂಥ ಕಿರಿಕಿರಿ ಯಾರಿಗೆ ಬೇಕು, ದನ ಮೇಕೆ ಕಾಯ್ದುಕೊಂಡು ಇಲ್ಲೇ ಇರಲಿ ಬಿಡಿ ಎನ್ನುವ ಮಂದಿಗೆ ಬರವಿಲ್ಲ.

ಇತ್ತೀಚಿಗೆ ಕ್ಷೇತ್ರಕಾರ್ಯಕ್ಕೆ ಹೋದಾಗ ಇನ್ನೊಂದು ಅಂಶ ತಿಳಿದುಬಂತು ಅಂದು ಮಕ್ಕಳು ಅಪಹರಿಸುವವರು ಬಂದಿದ್ದಾರೆ ಎಂದು ತಿಳಿದು ದೊಡ್ಡಿಯ ಯಾವ ಮಕ್ಕಳು ಶಾಲೆಗೆ ಬರುತ್ತಿಲ್ಲ ಎಂದು ಇಲ್ಲಿನ ಶಿಕ್ಷಕರು ಹೇಳುತ್ತಾರೆ. ಹೀಗಿರುವಾಗ ಹೆಣ್ಣು ಮಕ್ಕಳಿಗೆ ಶಿಕ್ಷಣ ಎಲ್ಲಿಂದ ಬಂತು ಹೊಲಗಳಲ್ಲಿ ಗಂಡು ಹೆಣ್ಣು ಎಂಬ ಬೇದ ಭಾವವಿಲ್ಲದೇ ಕೆಲಸ ಮಾಡುವ ಸಂದರ್ಭದಲ್ಲಿ ಹೆಣ್ಣುಮಕ್ಕಳು ಮನೆಯಲ್ಲಿ ಸಣ್ಣ ಮಕ್ಕಳನ್ನು ಹೆತ್ತಿ ಆಡಿಸುವ ಕಾಯಕ ಮಾಡುವರು. ಇಲ್ಲವೇ ತಂದೆ ತಾಯಿಯವರ ಜೊತೆ ಕೃಷಿ ಕೆಲಸಕ್ಕೆ ನೆರವಾಗುವರು ಎಂದು ಸ್ವತಃ ತಂದೆ ತಾಯಿಯರೇ ಹೇಳುತ್ತಾರೆ. ಮುಂದಿನ ಭವಿಷ್ಯಗೊತ್ತಿಲ್ಲದೆ ಇನ್ನೂ ಹಳೆ ಕಾಲದ ರೀತಿಯ ಜೀವನ ನಡೆಸುವ ಬಹು ಜನರು ದೊಡ್ಡಿಗಳಲ್ಲಿ ಕಾಣುತ್ತಾರೆ.

ಮಕ್ಕಳು ಬಾಲ್ಯದಲ್ಲಿ ಸ್ವಚ್ಛಂದವಾಗಿ ಆಟ ಪಾಠ ಆಡಿಕೊಂಡು ಇರಬೇಕಾದ ಮಕ್ಕಳಿಗೆ ಸಂಸಾರದ ಹೊರೆ ಹೊರಿಸುವ ನಿಜ ಸ್ಥಿತಿ ದೊಡ್ಡಿಗಳಲ್ಲಿ ಕಂಡುಬರುತ್ತದೆ.

ಆಧುನಿಕ ಬ್ರಿಟಿಷ್‌ರ ಔಪಚಾರಿಕ ಶಿಕ್ಷಣ ಜಾರಿಗೆ ಬಂದ ಮೇಲೆ ರಾಜ್ಯದ ಬೇರೆ ಬೆರೆ ಸಮುದಾಯದವರು ಅಷ್ಟೇ ಅಲ್ಲದೇ ಬೇಡ ಸಮುದಾಯ ಹಳ್ಳಿ ಮತ್ತು ನಗರಗಳಲ್ಲಿ ಇರುವವರು ಅವರವರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳಿಗೆ ತಕ್ಕಂತೆ ಶಿಕ್ಷಣವನ್ನು ಪಡೆದು ವಿದ್ಯಾವಂತರಾಗ ತೊಡಗಿದರು. ಆದರೆ ದೊಡ್ಡಿಗಳಲ್ಲಿ ನೆಲೆಸಿರುವ ಬೇಡ

ಸಮುದಾಯದವರಿಗೆ ಔಪಚಾರಿಕ ಶಿಕ್ಷಣದ ಅವಕಾಶ ಸಿಗಲಿಲ್ಲ. ಕಾರಣ ಇವರು ಜನವಸತಿ ಪ್ರದೇಶದಿಂದ ದೂರ ಇರುವುದರಿಂದ ಅವಕಾಶ ಸಿಗಲಿಲ್ಲ. ಇದು ಇವರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವ ಆಸಕ್ತಿಯನ್ನೇ ಕಡಿಮೆ ಮಾಡಿದೆ. ಈ ಸಮುದಾಯದ ಬಹುತೇಕ ತಂದೆ ತಾಯಿಗಳು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸದೆ ದನ ಮೇಕೆಗಳನ್ನು ಮೇಯಿಸಲು ಕಳುಹಿಸುತ್ತಾರೆ. ಯಾರಾದರೂ ಮಕ್ಕಳನ್ನು ಏಕೆ ಶಾಲೆಗೆ ಕಳುಹಿಸುವುದಿಲ್ಲ ಎಂದು ಕೇಳಿದರೆ ಶಾಲೆಗೆ ಹೋಗಿ ಓದಿ ಯಾರು ಉದ್ದಾರ ಆಗಿದ್ದಾರೆ? ನಮ್ಮ ಅಪ್ಪ ಓದಿಲ್ಲ, ನಮ್ಮ ತಾತಾ ಓದಿಲ್ಲ ಅವರೆಲ್ಲಾ ಜೀವನ ಮಾಡಲಿಲ್ಲವೇ? ಎಂದು ವಾದ ಮಾಡುತ್ತಾರೆ. ಇದು ಇವರ ಶಿಕ್ಷಣ ಹಿಂದುಳಿದಿರುವಿಕೆಯನ್ನು ತೋರಿಸುತ್ತದೆ. ಇದಕ್ಕೆ ಅತ್ಯಂತ ಬಲವಾದ ಕಾರಣವೆಂದರೆ ಇವರು ಪ್ರತ್ಯೇಕ ದೊಡ್ಡಿಗಳಲ್ಲಿ ವಾಸಿಸುವುದರಿಂದ ಈ ದೊಡ್ಡಿಗಳಲ್ಲಿ ಶಿಕ್ಷಣದ ಅರಿವು ಮತ್ತು ಶಾಲಾ ಸೌಲಭ್ಯಗಳಿರುವುದಿಲ್ಲ. ಒಂದು ವೇಳೆ ಈ ದೊಡ್ಡಿಗಳಲ್ಲಿರುವ ಮಕ್ಕಳು ಶಾಲೆಗೆ ಹೋಗಬೇಕಾದರೆ ದೊಡ್ಡಿಯಿಂದ ಬಹುದೂರ ಬೇರೆ ಹಳ್ಳಿಗೆ ಹೋಗಿ ಕಲಿಯಬೇಕಾಗುತ್ತದೆ. ಜೊತೆಗೆ ದೊಡ್ಡಿಗಳಲ್ಲಿರುವ ಸಾಮಾಜಿಕ ಪರಿಸರ (Social Environment)ವನ್ನು ನೋಡಿದರೆ ಶಾಲೆ ಮತ್ತು ಶಿಕ್ಷಣದ ಬಗ್ಗೆ ಯೋಚಿಸುವ ಮನಸ್ಸು ಬರುವುದಿಲ್ಲ ಇನ್ನು ಕಲಿಯಕೆಯ ಮಾತೆಲ್ಲಿ ಬಂತು. ಆ ಮಟ್ಟಿಗೆ ಸಾಮಾಜಿಕ ಪರಿಸರ ನಿರ್ಮಾಣವಾಗಿರುತ್ತದೆ. ರಾಯಚೂರು ಜಿಲ್ಲೆಯ ಬಹುತೇಕ ಬೇಡ ಸಮುದಾಯದ ದೊಡ್ಡಿಗಳು ಮೂಲಭೂತ ಅಗತ್ಯ ನಾಗರೀಕ ಸೌಲಭ್ಯಗಳಿಲ್ಲದೆ ಕೊಳಗೇರಿಗಳಂತಾಗಿವೆ. ಕೆಲವು ದೊಡ್ಡಿಗಳಲ್ಲಿ ಕೆಲವು ಗ್ರಾಮೀಣ ಅಭಿವೃದ್ಧಿ ಯೋಜನೆಗಳಾದ ರಸ್ತೆ, ನೀರು ಚರಂಡಿಗಳು ನಿಸರ್ಗದತ್ತವಾದ ದೊಡ್ಡಿಗಳ ನೈರ್ಮಲ್ಯವನ್ನು ಕೆಡಿಸಿವೆ ಎಂದರೆ ತಪ್ಪಾಗಲಾರದು. ಇಂತಹ ಪರಿಸರದಲ್ಲಿ ಜನಿಸಿದ ಮಕ್ಕಳಿಗೆಕೆ ಇಂತಹ ಶಿಕ್ಷಣ ಸಿಕ್ಕಿತು? ಶಿಕ್ಷಣ ಕಲಿಯಲು ಮನಸ್ಸು ಹೇಗೆ ಬಂದಿತು? ಪ್ರೋತ್ಸಾಹ ಮತ್ತು ಸ್ಪೂರ್ತಿ ಹೇಗೆ ಬರುತ್ತದೆ? ಇತ್ತೀಚಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಶಿಕ್ಷಣ ಘೋಷಣೆಗಳಾದ ೧೪ ವರ್ಷದವರೆಗಿನ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಪರಿಣಾಮದಿಂದಾಗಿ ಮತ್ತು ರಾಜ್ಯ ಸರ್ಕಾರದ ಪ್ರಾಥಮಿಕ ಶಿಕ್ಷಣಕ್ಕೆ ಕೊಡುತ್ತಿರುವ ಹಲವು ಉತ್ತೇಜನಗಳಿಂದಾಗಿ ದೊಡ್ಡಿಗಳಲ್ಲಿ ಶಾಲೆಗಳನ್ನು ಆರಂಭಿಸಲಾಗಿದೆ. ಇದರಿಂದ ಬೇಡ-ನಾಯಕ ಸಮುದಾಯದ ಮಕ್ಕಳು ಇದೀಗ ಶಾಲೆಗೆ ಹೋಗಲು ಪ್ರಾರಂಭಿಸಿದ್ದಾರೆ. ಜೊತೆಗೆ ಇಂದು ಬಹುತೇಕ ಬೇಡರ ದೊಡ್ಡಿಗಳ ಕೊನೆ ಪಕ್ಷ ಒಂದು ಪ್ರಾಥಮಿಕ ಶಾಲೆಯನ್ನು ಸ್ಥಾಪಿಸುತ್ತಿರುವುದು ಕಾಣಬಹುದು. ಇದು ಈಗಿನ ಪೀಳಿಗೆಯ ಮಕ್ಕಳಿಗೆ ವರದಾನವಾಗಬಹುದು. ಆದರೆ ಈ ಜನಾಂಗದ ಬಹುತೇಕ ವಯಸ್ಕರು ಮತ್ತು ಯುವಕರು ಅನಕ್ಷರಸ್ಥರು ಮತ್ತು ಔಪಚಾರಿಕ ಶಿಕ್ಷಣದಿಂದ ವಂಚಿತರಾದವರು.

ಶಾಲೆ ಬಿಟ್ಟವರು : ಈ ಸಮುದಾಯದ ಮಕ್ಕಳು ಹಲವಾರು ಕಾರಣಗಳಿಂದ ಶಾಲೆಯನ್ನು ಮಧ್ಯಕ್ಕೆ ಬಿಡುತ್ತಾರೆ. ಅಂದರೆ ಇವರಲ್ಲಿ ಹೆಚ್ಚಿಗೆ ಅನುತ್ತೀರ್ಣತೆ ಮತ್ತು

ಅಪಮೌಲ್ಯ ಕಂಡುಬರುತ್ತದೆ. ನಾನು ರಾಯಚೂರು ಜಿಲ್ಲೆಯ ದೊಡ್ಡಿಗಳಲ್ಲಿ ಕ್ಷೇತ್ರಕಾರ್ಯ ಕೈಗೊಂಡ ಸಮುದಾಯದವರಲ್ಲಿ ಅಧ್ಯಯನದಿಂದ ತಿಳಿದುಬಂದ ಅಂಶವೇನೆಂದರೆ ಶೇಕಡಾ ೨೦ರಷ್ಟು ಈ ಜನಾಂಗದ ವಿದ್ಯಾರ್ಥಿಗಳು ಪ್ರಾಥಮಿಕ ಹಂತದಲ್ಲೇ ಶಾಲೆಯನ್ನು ಅರ್ಧಕ್ಕೆ ಬಿಡುತ್ತಾರೆ. ಹಿರಿಯ ಪ್ರಾಥಮಿಕ ಶಾಲೆ ಹಂತದಲ್ಲೇ ೧೫ರಷ್ಟು ಶಾಲೆಯನ್ನು ಬಿಟ್ಟವರು ಕಂಡುಬಂದರೆ, ಪ್ರೌಢಶಾಲೆಯ ಹಂತದಲ್ಲಿ ಇವರ ಪ್ರಮಾಣ ಇನ್ನು ಹೆಚ್ಚಿದೆ. ಅಂದರೆ ಈ ಹಂತದಲ್ಲಿ ಶೇ ೫೦ರಷ್ಟು ಬೇಡ ಸಮುದಾಯದ ವಿದ್ಯಾರ್ಥಿಗಳು ಪ್ರೌಢ ಶಿಕ್ಷಣವನ್ನು ಪೂರ್ತಿಗೊಳಿಸದೆ ಮಧ್ಯಕ್ಕೆ ಶಾಲೆಯನ್ನು ಬಿಡುತ್ತಾರೆ. ಬಹುತೇಕ ರಾಯಚೂರು ಜಿಲ್ಲೆಯ ಎಲ್ಲಾ ಭಾಗದ ಬೇಡ ಸಮುದಾಯದವರಲ್ಲಿ ಇದೇ ಪರಿಸ್ಥಿತಿ ಇದೆ. ಇದಕ್ಕೆ ಮುಖ್ಯ ಕಾರಣಗಳೆಂದರೆ; ಬಡತನದ ಶಿಕ್ಷಣದ ಬಗ್ಗೆ ತಿಳುವಳಿಕೆ ಇಲ್ಲದಿರುವುದು ತಂದೆ ತಾಯಿಗಳಿಗೆ ಶಿಕ್ಷಣದ ಅರಿವು ಇಲ್ಲದೆ ಇರುವುದು. ಅವರ ದುಡಿಮೆಯ ಹಿನ್ನೆಲೆ ದೊಡ್ಡಿಗಳಲ್ಲಿ ಸಾಮಾಜಿಕ ಪರಿಸರ ಶಿಕ್ಷಣ ಸೌಲಭ್ಯಗಳೆ ಇಲ್ಲದಿರುವುದು ಮತ್ತು ಮೂಢನಂಬಿಕೆಗಳೇ ಕಾರಣವಾಗಿವೆ.

ಮಹಿಳೆಯರ ಶಿಕ್ಷಣ : "ಇಡೀ ಬೇಡ ಸಮುದಾಯದ ಜನರ ಶಿಕ್ಷಣದ ಹಿನ್ನೆಲೆ ಹೀಗಿರುವಾಗ ಈ ಜನಾಂಗದ ಮಹಿಳೆಯರ ಶಿಕ್ಷಣದ ಬಗ್ಗೆ ಮಾತನಾಡುವ ಹಾಗೆಯೇ ಇಲ್ಲ. ಇವರಲ್ಲಿ ನೂರಕ್ಕೆ ನೂರರಷ್ಟು ಮಹಿಳೆಯರು ಅನಕ್ಷರಸ್ಥರು ಮತ್ತು ಅವಿದ್ಯಾವಂತರು ಪುರುಷರಾದರೂ ಅಲ್ಲೊಬ್ಬ ಇಲ್ಲೊಬ್ಬ ಅಕ್ಷರಸ್ಥರು ಕಂಡುಬಂದರೆ ಮಹಿಳೆಯರಲ್ಲಿ ಇದು ಸೊನ್ನೆ. ಅಷ್ಟರಮಟ್ಟಿಗೆ ಬೇಡ ಸಮುದಾಯದ ಮಹಿಳೆಯು ಶಿಕ್ಷಣದಿಂದ ವಂಚಿತಳಾಗಿದ್ದಾಳೆ."[೨೧] ಬೇಡ ಸಮುದಾಯದ ಮಹಿಳೆಯು ಅತ್ಯಂತ ನಿರ್ಲಕ್ಷಿತ ಮಹಿಳೆಯಾಗಿದ್ದಾಳೆ ಎಂದರೆ ತಪ್ಪಾಗಲಾರದು. ಇಂದು ದೇಶಾದ್ಯಂತ ಮಹಿಳೆಯರ ಸಶಕ್ತೀಕರಣ ಪ್ರಕ್ರಿಯೆ ನಡೆಯುತ್ತಿದೆ. ೨೦೦೧ನೇ ವರ್ಷವನ್ನು ಮಹಿಳಾ ಸಬಲೀಕರಣ ವರ್ಷವೆಂದು ಕೇಂದ್ರ ಸರ್ಕಾರ ಘೋಷಣೆ ಮಾಡಿದೆ. ಮಹಿಳೆಯರ ಆರ್ಥಿಕ, ಸಾಮಾಜಿಕ, ರಾಜಕೀಯ ಕಾರ್ಯಗಳನ್ನು ಅನುಷ್ಠಾನಕ್ಕೆ ತರಲಾಗುತ್ತಿದೆ. ಇನ್ನೊಂದೆಡೆ ಮಹಿಳೆಯರ ಆರ್ಥಿಕ ಸಾಮಾಜಿಕ ಸ್ವಾವಲಂಬನೆಗೆ ಸ್ವಸಹಾಯ ಗುಂಪುಗಳು ಸಂಘಟನೆಯಾಗುತ್ತಿವೆ. ನಗರ ಪ್ರದೇಶದಲ್ಲಿ ಮಹಿಳಾ ಚಳುವಳಿಗಳೂ ಚುರುಕಾಗುತ್ತಿವೆ. ವಿಶ್ವವಿದ್ಯಾನಿಲಯಗಳಲ್ಲಿ ಮಹಿಳಾ ಅಧ್ಯಯನ ಕೇಂದ್ರಗಳು (Women's Studies) ತೆರೆಯಲಾಗುತ್ತಿದೆ. ಇಷ್ಟಾದರೂ ರಾಜ್ಯದ ಬೇಡ ಸಮುದಾಯದ ಅದರಲ್ಲಿಯೂ ದೊಡ್ಡಿಗಳಲ್ಲಿರುವ ಮಹಿಳೆಯರ ಶೈಕ್ಷಣಿಕ ಸ್ಥಿತಿಗತಿಗಳು ತುಂಬಾ ಶೋಚನೀಯವಾಗಿವೆ.

ಬೇಡ ಸಮುದಾಯದ ಮಹಿಳೆಯರ ಶೈಕ್ಷಣಿಕ ಅನರ್ಹತೆ ಹತ್ತು ಹಲವಾರು ಇವುಗಳನ್ನು ನಾವು ಇವರ ಸಾಮಾಜಿಕ ಸಾಂಸ್ಕೃತಿಕ ಮತ್ತು ಆರ್ಥಿಕ ಆಯಾಮಗಳಿಂದ ವಿಶ್ಲೇಷಿಸಬಹುದು. ಈ ಅಂಶಗಳೇ ಈ ಸಮುದಾಯದ ಮಹಿಳೆಯರು ವಿದ್ಯಾವಂತರಾಗದಿರುವುದಕ್ಕೆ ಕಾರಣೀಭೂತವಾದ ಅಂಶವಾಗಿವೆ. ಪುರುಷರಂತೆ

ಮಹಿಳೆಯರಲ್ಲಿಯೂ ನಾವು ಅನುತ್ತೀರ್ಣತೆ ಮತ್ತು ಅಪಮೌಲ್ಯವನ್ನು ಕಾಣಬಹುದು. ಶೇಕಡಾ ೫೦ರಷ್ಟು ಹೆಣ್ಣು ಮಕ್ಕಳು ಪ್ರೌಢ ಶಾಲೆಯ ಹಂತದಲ್ಲಿ ಶಾಲೆ ಬಿಟ್ಟವರಾಗಿದ್ದಾರೆ ಎಂಬುದಾಗಿ ಅಧ್ಯಯನದಿಂದ ತಿಳಿದುಬಂದಿದೆ. ಇದಕ್ಕೆ ಮುಖ್ಯವಾದ ಕಾರಣಗಳೆಂದರೆ ಬಡತನ, ಎಲ್ಲ ರಂಗದಲ್ಲಿಯೂ ಹಿಂದುಳಿದಿರುವುದು ಅಜ್ಞಾನ ಮೂಢನಂಬಿಕೆಗಳು, ಶಾಲೆಗಳ ಕೊರತೆ ಇತ್ಯಾದಿಗಳು. ಸಾಮಾನ್ಯವಾಗಿ ಬೇಡ ಸಮುದಾಯ ತಂದೆ-ತಾಯಂದಿರು ತಮ್ಮ ಹೆಣ್ಣು ಮಕ್ಕಳನ್ನು ಶಾಲಾ ಕಾಲೇಜುಗಳಿಗೆ ಕಳುಹಿಸುವುದಿಲ್ಲ. ಏಕೆಂದರೆ ಅವರ ನಂಬಿಕೆಯಂತೆ ಹೆಣ್ಣು ಮಕ್ಕಳನ್ನು ಶಾಲೆಗಳಿಗೆ ಕಳುಹಿಸಬಾರದಂತೆ ಒಂದು ವೇಳೆ ಶಾಲೆಗೆ ಕಳುಹಿಸಿದರೆ ಹಿರಿಯ ಪ್ರಾಥಮಿಕ ಶಾಲೆ ಅಥವಾ ಪ್ರೌಢಶಾಲೆ ಈ ಹಂತದಲ್ಲಿ ಆಕೆ ಪ್ರಕೃತಿದತ್ತವಾಗಿ ಋತುಮತಿಯಾದಂದಿನಿಂದ ಅವಳನ್ನು ಶಾಲೆಗೆ ಕಳುಹಿಸುವುದಿಲ್ಲ. ಪ್ರೌಢ ಶಾಲೆಗೆ ಕಳುಹಿಸದಿರುವವರು ಇನ್ನು ಕಾಲೇಜಿಗೆ ಕಳುಹಿಸುವ ಮಾತೆಲ್ಲಿಂದ ಬಂತು. ಈ ಜನಾಂಗದ ಹೆಣ್ಣು ಮಕ್ಕಳು ಕಾಲೇಜು ಶಿಕ್ಷಣಕ್ಕೆ ಹೋಗಲು ಸಾಧ್ಯವಿಲ್ಲ ಇನ್ನು ವಿಶ್ವವಿದ್ಯಾಲಯದ ಶಿಕ್ಷಣ ಇವರಿಗೆ ಕನಸಿನ ಮಾತೆ ಸರಿ. ಈಗೀಗ ನಗರವಾಸಿ ವಿದ್ಯಾವಂತ ತಂದೆ-ತಾಯಂದಿರು ತಮ್ಮ ಹೆಣ್ಣು ಮಕ್ಕಳನ್ನು ಶಾಲಾ ಕಾಲೇಜುಗಳಿಗೆ ಕಳುಹಿಸುತ್ತಾರೆ. ಆದರೆ ಅಂತಹವರು ನಗರದಲ್ಲಿರುವವರು ಬೆರಳೆಣಿಕೆಯಷ್ಟು ಎಂದರೆ ತಪ್ಪಾಗಲಾರದು. ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕು ಬೇಡ ಸಮುದಾಯಗಳ ದೊಡ್ಡಿಗಳಿಗೆ ಹೋದಾಗ ಹೀಗೆ ಹೇಳಿದರು ನಾವು ನಮ್ಮ ಹೆಣ್ಣು ಮಕ್ಕಳನ್ನು ಕಾಲೇಜಿಗೆ ಕಳುಹಿಸುವುದಿಲ್ಲ, ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸಂದರ್ಶಕರು ಕೇಳಿದ ಪ್ರಶ್ನೆಗೆ ಈರೀತಿ ಹೇಳಿದರು: ಏಕೆಂದರೆ ಒಂದು ವೇಳೆ ಅವರನ್ನು ಕಾಲೇಜುಗಳಿಗೆ ಕಳುಹಿಸಿದರೆ ಹೊರ ಜನರ ಜೊತೆ ಬೆರೆತು ಮದುವೆ ಮಾಡಿಕೊಂಡೊ ಇಲ್ಲವೇ ಪ್ರೀತಿ ಪ್ರೇಮ ಎಂಬುದರಲ್ಲಿ ಸಿಲುಕಿ ಮನೆಗೆ ಮತ್ತು ಸಮುದಾಯಕ್ಕೆ ಕೆಟ್ಟ ಹೆಸರು ತರುತ್ತಾರೆ ಎಂದು ಭಾಗಪ್ಪ ಅವರು ಹೇಳಿದರು. (ದಿನಾಂಕ ೧೪.೦೩.೨೦೧೩) ಇದು ಇವರ ಮುಗ್ಧತೆಯನ್ನು ತೋರಿಸುತ್ತದೆ. ಮತ್ತು ಹಿಂದುಳಿದಿರುವಿಕೆಯನ್ನು ಸಾಬೀತು ಪಡಿಸುತ್ತದೆ. ಇಂದು ದೇಶದಲ್ಲಿ ಮಹಿಳೆಯರ ಸ್ಥಾನಮಾನ ಅದರಲ್ಲೂ ಶಿಕ್ಷಣಕ್ಕೆ ಹೆಚ್ಚು ಪ್ರೋತ್ಸಾಹ ಕೊಡುತ್ತಿರುವ ಸಂದರ್ಭದಲ್ಲಿ ಬೇಡ ಸಮುದಾಯದ ಮಹಿಳೆಯರು ಶೈಕ್ಷಣಿಕ ಸ್ಥಿತಿಗತಿಗಳನ್ನು ನೋಡಿದರೆ ಅಸಮಾನ ರೀತಿಯ ಸವಲತ್ತುಗಳು ಸಮಾನತೆಯ ಹಂಚಿಕೆಯ ಕಂದಕ ಇದೆ ಎಂದು ತಳಿಯುತ್ತದೆ. ಇಡೀ ಜಗತ್ತು ಒಂದೆಡೆ ಸಾಗುತ್ತಿದ್ದರೆ ಬುಡಕಟ್ಟು ಸಮುದಾಯದವರಾಗಿರುವ ಬೇಡ ಸಮುದಾಯ ಅದರಲ್ಲಿಯೂ ಮಹಿಳೆಯ ಶೈಕ್ಷಣಿಕ ಪರಿಸ್ಥಿತಿ ತುಂಬಾ ಶೋಚನೀಯವಾಗಿದೆ.

೪.೨ ಕುರುಬ ಸಮುದಾಯದ ಪರಿಚಯ

ಹಿಂದೂಗಳಲ್ಲಿರುವಷ್ಟು ಜಾತಿಗಳು ಮತ್ತು ಅವುಗಳ ಪ್ರಬೇಧಗಳು ಇಡೀ ವಿಶ್ವದಲ್ಲಿ ಇನ್ನಾವ ಜನಾಂಗಗಳಲ್ಲೂ ಕಂಡುಬರುವುದಿಲ್ಲ. ವೈವಿಧ್ಯತೆಯಲ್ಲಿ ಏಕತೆಯನ್ನು ಸಾಧಿಸುವುದೇ

ಹಿಂದೂ ಧರ್ಮದ ವೈಶಿಷ್ಟ್ಯ. ಅಂತೆಯೇ ಜಗತ್ತಿನಲ್ಲಿ ಎಲ್ಲ ಧರ್ಮದ ಆಧಾರದ ಮೇಲೆ ಒಗ್ಗಟ್ಟಾಗಿ ಜನತೆಯು ಬಾಳಿರುವಂತೆ ಬೇರೆ ಇನ್ನಾವ ಸಾಧನದಿಂದಲೂ ಬಾಳಿರುವುದು ಕಂಡುಬಂದಿಲ್ಲ. ಆರ್ಥಿಕ, ಸಾಮಾಜಿಕ ಪರಿಸ್ಥಿತಿ ಎಲ್ಲ ರಂಗದಲ್ಲೂ ಸಮಾನ ಅವಕಾಶ ನೀಡಿದೆ. ಅಲ್ಲದೆ ಸಮಾನ ಅವಕಾಶ ಮತ್ತು ಶಿಕ್ಷಣ ಮುಂತಾದವು ಜಾರಿಗೆ ಬಂದಾಗ ಜಾತಿಯ ಕಟ್ಟು ಹರಿದುಹೋಗಿ ಸಡಿಲಗೊಳ್ಳುತ್ತವೆ. ಈ ಜಾತಿ ಪದ್ದತಿಯಿಂದ ಕೆಲವೊಮ್ಮೆ ದಾರುಣ ಪ್ರಸಂಗಗಳು ನಡೆದಿವೆ. ಆದರೆ ಇಂದಿನ ಪರಿಸ್ಥಿತಿಯಲ್ಲಿ ಜಾತಿ ಪದ್ದತಿ ಪರಿಹರಿಸುವುದು ಸುಲಭ ಸಾಧ್ಯವಂತೂ ಅಲ್ಲ. ಜಾತಿ ಪದ್ದತಿ ಸಮಾನ ಧರ್ಮ, ಸಮಾನ ಧ್ಯೇಯ, ಸಮಾನ ಮನೋಭಾವನೆ ಹಾಗೂ ಸಂಕಲ್ಪಗಳನ್ನು ಹೊಂದಿರದೆ ಇರುವವರು ಪರಿಹರಿಸಲಾರದ ಅನಿವಾರ್ಯವಾದ ಮತ್ತು ಅನಿಷ್ಟವಾಗಿದೆ. ಬಹುಕಾಲ ಒಗಟ್ಟಿನಿಂದ ಬಾಳಲಾರರು ಎಂಬುದು ನಮ್ಮ ಅರಿವಿನಲ್ಲಿದೆ. ಇದರಿಂದ ಜಾತಿ ಪದ್ದತಿ ಮತ್ತು ನಂತರವು ನಡೆಸುವ ಪ್ರತಿ ಜಾತಿಗೂ ಅದರದೇ ಆದಂತಹ ದೇವರುಗಳು, ಹಬ್ಬಗಳು ಪೂಜಾ ವಿಧಾನಗಳು ಉಡಿಗೆ ತೊಡಿಗೆಗಳು, ಸಂಪ್ರದಾಯಗಳು, ನಂಬಿಕೆಗಳು ಮತ್ತು ಜನನದಿಂದ ಮರಣದವರೆಗೆ ಆಧಾರಗಳಿಂದಲೇ ಒಬ್ಬ ವ್ಯಕ್ತಿ ಯಾವ ಜಾತಿಗೆ ಸೇರಿದವನೆಂದು ಗುರುತಿಸಲು ಸಾಧ್ಯವಾಯಿತಲ್ಲದೇ ಅವುಗಳ ಅನುಷ್ಠಾನವೂ ಸಹ ಸಾಧ್ಯವಾಯಿತು. ಆದರೆ ಗ್ರಾಮಾಂತರ ಪ್ರದೇಶಗಳಲ್ಲಿ ಸೊಂಪಾಗಿ ಬೆಳೆದಿದ್ದು ಸುಲಭವಾಗಿ ಗೋಚರಿಸುತ್ತವೆ. ಜಗತ್ತಿನ ಅತ್ಯಂತ ಪುರಾತನ ಸಮುದಾಯವೆಂದರೆ ಕುರುಬ ಸಮುದಾಯ ಎಂದು ಹೇಳಲಾಗುತ್ತದೆ. 'ಕುರುಬ ಕೂಡಿಕೆಟ್ಟ ದೊಂಬ ಅಗಲಿಕೆಟ್ಟ' ಎಂಬ ನುಡಿಗಟ್ಟು ಅವನ ಕುಲಕಸುಬನ್ನು ಸಮರ್ಥಿಸುತ್ತದೆ. ತನ್ನ ಸಾಕುಪ್ರಾಣಿಗಳನ್ನು ಸಾಕುವುದಕ್ಕಾಗಿ ತನ್ನದೇ ಆದ ಪ್ರತ್ಯೇಕತೆಯನ್ನು ಉಳಿಸಿಕೊಂಡು ನೀರು ಆಹಾರ ದೊರೆಯುತ್ತಿದ್ದಲ್ಲಿ ಗುಂಪು ಗುಂಪಾಗಿ ಬೀಡು ಬಿಡುವುದು ಈ ಗಾದೆ ಮಾತಿಗೆ ಕಾರಣವಾಗಿರಬಹುದು.

"ಭಾರತದಾದ್ಯಂತ ಅಲ್ಲಲ್ಲಿ ಚದುರಿದಂತೆ ಕೆಲವೆಡೆ ಅತೀ ಹೆಚ್ಚಾಗಿ ನೆಲಿಸಿರುವ ಕುರುಬ ಸಮುದಾಯ ಸಾಂಸ್ಕೃತಿಕವಾಗಿ ಏಕತೆಯಲ್ಲಿ ವೈವಿಧ್ಯತೆಯನ್ನು ಹೊಂದಿರುವಂತಹದ್ದು ಹಾಲುಮತವೆಂದು ಹೆಸರಾಗಿರುವ ಕುರುಬ ಸಮುದಾಯದ ನಂಬಿಕೆ ಮತ್ತು ಸಂಪ್ರದಾಯಗಳು ಬಹುತೇಕ ಒಂದೇ ರೀತಿ ಇದ್ದರೂ ವಿವಿಧ ಭಾಗಗಳಲ್ಲಿ ಬದಲಾವಣೆಯನ್ನು ಕಾಣಬಹುದಾಗಿದೆ. ಆದರೆ ಒಂದೊಂದು ಪ್ರಾಂತ್ಯದಲ್ಲಿ ಒಂದೊಂದು ಹೆಸರಿನಿಂದ ಕರೆಯಲ್ಪಡುತ್ತಿರುವ ಕುರುಬ ಸಮುದಾಯ ಜಗತ್ತಿನಾದ್ಯಂತ ಕಾಣಸಿಗುತ್ತದೆ."[೨೨] ಕುರುಬರಲ್ಲಿ ಬಹುತೇಕರು ಅವಿದ್ಯಾವಂತರಾದರೂ ನೀತಿ, ನ್ಯಾಯ, ಸತ್ಯ ಮತ್ತು ಪ್ರಾಮಾಣಿಕತೆಗೆ ಪ್ರಾಣ ಕೊಡುವಂತಹ ಜನ. ಕರ್ನಾಟಕ ರಾಜ್ಯದಾದ್ಯಂತ ಬಹು ಸಂಖ್ಯಾತರಾಗಿರುವ ಕುರುಬ ಸಮುದಾಯ ಭಾರತದಾದ್ಯಂತ ಹಲವು ರಾಜ್ಯಗಳಲ್ಲಿ ಪ್ರಾಬಲ್ಯ ಹೊಂದಿದ್ದಾರೆ.

ರಸ್ತಾಪುರದ ಭೀಮ ಕವಿ ರಚಿಸಿದ ಹಾಲಮತ್ತೋಜಕ ಪುರಾಣದಲ್ಲಿ ಕುರುಬರ ಮೂಲದ ಬಗ್ಗೆ ಪ್ರಸ್ತಾಪವಿದೆ. ಭೀಮ ಕವಿ ಕುರುಬರ ಮೂಲದ ಬಗ್ಗೆ ಹೇಳುವಾಗ ಸಂಸ್ಕೃತದಲ್ಲಿ ರಚಿಸಿದ ಆಗ್ನೇಯ ಪುರಾಣದ ಆಧಾರ ನೀಡಿದ್ದಾನೆ. ಈ ಆಗ್ನೇಯ ಪುರಾಣದ ಪ್ರಕಾರ ಕುರುಬ ಋಷಿಯ ಉಗ್ರ ತಪಸ್ಸಿನ ಫಲವಾಗಿ ಕುರುಬ ಸಮುದಾಯ ಸೃಷ್ಟಿಯಾಯಿತೆಂದು ತಿಳಿಯುತ್ತದೆ. ಈ ಮೇಲಿನ ಹೇಳಿಕೆಗೆ ಭೀಮ ಕವಿ ಈ ಕೆಳಗಿನ ಸಾಲುಗಳನ್ನು ಆಧಾರವಾಗಿ ಕೊಟ್ಟಿದ್ದಾನೆ. ಇದರಿಂದ ಕೌರುಭ ಋಷಿಯಿಂದ ಕುರುಬರು ಸೃಷ್ಟಿಯಾದರೆಂದು ತಿಳಿಯುತ್ತದೆ. ಕೌರುಭ ಎಂಬ ಶಬ್ದ ಕೌರವ>ಕುರುವ>ಕುರುಬ ಎಂದಾಗಿರುವುದು ಕಂಡುಬರುತ್ತದೆ.

ಐತಿಹಾಸಿಕ ಮೂಲ

"ಕುರುಬರ ಮೂಲದ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಕೆಲವರು ಕುರುಬರನ್ನು ಆರ್ಯ ಮೂಲದವರೆಂದು ಹೇಳಿದರೆ ಇನ್ನು ಕೆಲವರು ದ್ರಾವಿಡ ಮೂಲದವರೆಂದು ಹೇಳುತ್ತಾರೆ. ಅಲ್ಲದೇ ಮತ್ತೆ ಕೆಲವರು ಕುರುಬರು ದ್ರಾವಿಡ ಪೂರ್ವ ಗುಂಪಿಗೆ ಸೇರಿದವರೆಂಬ ಅಭಿಪ್ರಾಯವಿದೆ.

ಭಾರತದ ವಿಭಿನ್ನ ಭಾಗಗಳಲ್ಲಿರುವ ಕುರುಬರನ್ನು ಭಾರತೀಯ ಆರ್ಯ ಹಾಗೂ ಆಗ್ನೇಯಾ ಏಷಿಯ ಮೂಲದವರೆಂದು ಎರಡು ವಿಧವಾಗಿ ರಿಸ್ಲೆ ಮತ್ತು ಹಂಟ್ಟನ್‌ರು ವಿಂಗಡಿಸಿದ್ದಾರೆ. ಇವರಿಬ್ಬರ ಪ್ರಕಾರ ಮೊದಲ ವರ್ಗದ ಕುರುಬರು ಉತ್ತರದಲ್ಲಿ ಹಾಗೂ ದ್ವಿತೀಯ ವರ್ಗದ ಕುರುಬರು ದಕ್ಷಿಣದಲ್ಲಿ ನೆಲೆಸಿದ್ದಾರೆ. ಆದರೆ ಇವರ ಉದ್ಯೋಗ ಆರ್ಥಿಕ ಸ್ಥಿತಿಗಳು ಒಂದೇ ಬಗೆಯಾಗಿದ್ದವು. ಅಲ್ಲದೆ ಇವರ ದೇಹರಚನೆ ಲಕ್ಷಣಗಳು ಭಾರತೀಯ ಆರ್ಯರನ್ನು ಹೋಲುತ್ತಿದ್ದವು. ಕಂದಮಿಳರು ಆಗ್ನೇಯರು ಹಾಗೂ ಅರೆಮತ್ತಿನವರೆಂದು ಅವರನ್ನು ಕರೆಯಲಾಗುತ್ತಿತ್ತು."[೨೩]

ದ್ರಾವಿಡರು ಯೋದರಲ್ಲ. ಶಾಂತ ಸಮುದಾಯವೆಂಬ ಅಭಿಪ್ರಾಯವಿದೆ. ಆದರೆ ಅದು ಸತ್ಯವಲ್ಲ ಕಾರಣ ದ್ರಾವಿಡರಿಗಿಂತ ಮೊದಲು ಇಲ್ಲಿ ನೆಲೆಸಿದ್ದ ಆಸ್ಟ್ರೋ ಏಶಿಯಾಟಿಕ ಜನಾಂಗವನ್ನು ಸೋಲಿಸಿದವರು ಇವರೇ. ಆದ್ದರಿಂದ ಇವರು ಶೂರರು, ಗಂಡುಗಲಿಗಳಾಗಿದ್ದರೆಂದು ಹೇಳಬಹುದು. ದ್ರಾವಿಡರು ಪಶುಪಾಲಕರಾಗಿದ್ದರು, ಅಲ್ಲದೆ ಒಕ್ಕಲುತನ, ವ್ಯಾಪಾರಗಳನ್ನು ಮಾಡುತ್ತಿದ್ದರು. ದ್ರಾವಿಡರು (ಕುರುಬರು) ಗಂಗಾನದಿಯ ಬಯಲಿನ ಪ್ರದೇಶದಲ್ಲಿ ತಮ್ಮ ವಸತಿಗಳನ್ನು ನಿರ್ಮಿಸಿಕೊಂಡಿದ್ದರು. ಆದರೆ ನಾಗರಿಕ ಜೀವನ ಕ್ರಮ ತಿಳಿದಿರಲಿಲ್ಲ. ಕುರುಬರು ತಮಗೆ ಆಯ್ಕೆಯಾದ ಪ್ರದೇಶವನ್ನು ಇನ್ನೊಂದು ಬುಡಕಟ್ಟು ಸಮುದಾಯ ಬೇಟೆ ಮತ್ತು ಪಶುಪಾಲನೆಗಾಗಿ ಆ ಪ್ರದೇಶಕ್ಕೆ ಆಕ್ರಮಿಸಿದರೆ ಅವರು ತಮ್ಮ ಹಕ್ಕುಗಳಿಗಾಗಿ ಸಂಘರ್ಷ ಮಾಡುತ್ತಿದ್ದರು. ಹೀಗಾಗಿ ಬೇರೊಂದು ಸಮುದಾಯದ ವಿರುದ್ಧ

ಹೋರಾಡಲು ಹಾಗೂ ತಮ್ಮ ಸಮುದಾಯವನ್ನು ರಕ್ಷಿಸಿಕೊಳ್ಳಲು ಗುಂಪು ಗುಂಪಾಗಿ ವಾಸಮಾಡಬೇಕಾಗುತ್ತದೆ. ಧೈರ್ಯಶಾಲಿಗಳಾಗಿರಬೇಕಾಗುತ್ತದೆ. ಬೆಟ್ಟ ಗುಡ್ಡ, ನದಿ ಮೊದಲಾದ ಪ್ರದೇಶದ ಪಕ್ಕದಲ್ಲಿ ವಾಸಿಸುತ್ತಿದ್ದರು. ಕುರುಬರು ದೈಹಿಕವಾಗಿ ದೃಢಕಾಯ, ಅಜಾನುಬಾಹುಗಳು, ಮೈ ಮೇಲೆ ದೋತರ ಕಂಬಳಿಗಳು ಪ್ರಮುಖ ವಸ್ತ್ರಗಳಾಗಿದ್ದವು. ಕೈಯಲ್ಲಿ ಕೋಲು ಹಿಡಿದು ಕುರಿಗಳನ್ನು ಸಾಕುತ್ತಿದ್ದರು. ಕುರಿಯ ಮಾಂಸವನ್ನು ಆಹಾರಕ್ಕಾಗಿ ಉಣ್ಣೆಯನ್ನು ಕಂಬಳಿನೇಯ್ಗೆಗೆ ಉಪಯೋಗಿಸುತ್ತಿದ್ದರು. ಪಶುಪಾಲನೆಗಾಗಿ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ವಲಸೆ ಹೋಗುವುದು ಅನಿವಾರ್ಯವಾಗಿತ್ತು. ಅಡವಿ ಅರಣ್ಯಗಳಲ್ಲಿ ವಾಸಿಸುತ್ತಿದ್ದ ಕುರುಬರು ತಮ್ಮ ಹಾಗೂ ತಮ್ಮ ಪ್ರಾಣಿಗಳ ರಕ್ಷಣೆಗಾಗಿ ಅನೇಕ ಆಯುಧಗಳನ್ನು ಹೊಂದಿರುತ್ತಿದ್ದರು.

ಪಾಶುಪಾಲನೆ ಮತ್ತು ಕೃಷಿಯನ್ನು ಪ್ರಮುಖ ವೃತ್ತಿಯನ್ನಾಗಿ ಅವಲಂಭಿಸಿದ ಕುರುಬರು ಕಾಲಾನಂತರ ರಾಜಕೀಯದಲ್ಲಿ ಆಸಕ್ತಿ ವಹಿಸತೊಡಗಿದರು. ಪ್ರಾಚೀನ ಮರವ ಸಮುದಾಯಕ್ಕೆ ಸೇರಿದವರೆಂದು ಹೇಳಿಕೊಳ್ಳುತ್ತಿದ್ದರು ಸೂತಪತಿಗಳು ದಕ್ಷಿಣ ಭಾರತದಲ್ಲಿ ರಾಜ್ಯಭಾರ ಮಾಡುತ್ತಿದ್ದರು. ಅವರನ್ನು ಸೋಲಿಸಿದವರಲ್ಲದೆ ದಕ್ಷಿಣದ ತುತ್ತತುದಿಗೆ ಓಡಿಸಿದರು. ಹಾಗೆಯೇ ಪುಲಾಲದ ರಾಜ ಎಂದು ಕರೆಯಿಸಿಕೊಂಡು ದ್ರಾವಿಡ ದೇಶದ ಅಧಿಪತಿಯಾದನು. ಅವನು ಆಳಿದ ರಾಜ್ಯ ಕುರುಬ ಭೂಮಿ ಎಂದು ಹೆಸರಾಯಿತು. ಅಲ್ಲದೆ ಆಡಳಿತದ ಎಲ್ಲ ದಾಖಲೆಗಳಲ್ಲಿ ಕುರುಬರ ನಾಡು ಎಂದು ಸೇರ್ಪಡೆಯಾಯಿತು. ಕುರುಬರನಾಡು ಎಂಬುದು ಈಗಲೂ ಮಲಬಾರ್ ತೀರದಲ್ಲಿ ಸುಪ್ರಸಿದ್ಧವಾಗಿರುವುದು ಕಂಡುಬರುತ್ತದೆ.

ಉತ್ತರ ವೇದಕಾಲದಲ್ಲಿ ಗಂಗಾ ಬಯಲಿನ ಮೇಲ್ಭಾಗದಲ್ಲಿ ಕುರುಗಳು ಆಧಿಕಾರವನ್ನು ಸ್ಥಾಪಿಸಿದರು. ಕುರು ಎಂಬುದು ಕುರುದೇಶ, ಕುರುವಂಶ ಎಂಬ ಅರ್ಥಕೊಡುತ್ತದೆ. ಇದರಿಂದ ಮಹಾಭಾರತದಲ್ಲಿ ಪ್ರಸಿದ್ಧವಾದ ಕುರುವಂಶದ ಕೌರವ ಶಬ್ದದಿಂದಲೇ ಕುರುವ>ಕುರುಬ ಎಂದಾಗಿದೆಯೆಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಅಲ್ಲದೇ ಕುರು ದೇಶದ ಕೆಲವು ಭಾಗವನ್ನು ಪರ್ವತ ಎಂದು ಪಾಲಿಸುತ್ತಿದ್ದ ಕಾರಣದಿಂದ ಕುರುಪ ಎಂಬುದೇ ಕುರುಬ ಆಗಿದೆ ಎಂಬ ಮತ್ತೊಂದು ವಾದವಿದೆ. ಇದರಿಂದ ಕುರು ವಂಶದವರು ಕುರುಬರು ಎಂದು ಹೇಳಬಹುದಾಗಿದೆ. ಹೀಗಾಗಿ ಕುರುಬರು ಆರ್ಯ ಮೂಲದವರೆಂದು ಒಂದು ಅಭಿಪ್ರಾಯವಿದೆ.

ಕುರುಬ ಪದ ನಿಷ್ಪತ್ತಿ

ಕುರಿಪಾಲನೆ ಮಾಡುವ ಕುರುಬರನ್ನು ತಮಿಳಿನಲ್ಲಿ ಕುರಂಬ ಇಡೈಯರ್ ಎಂದು, ತೆಲುಗಿನಲ್ಲಿ ಕುರುಂಬ, ಗೊಲ್ಲ ಎಂದು ಕರೆಯುತ್ತಾರೆ. ಇಲ್ಲಿಯ 'ಗೊಲ್ಲ' ಎಂಬ ಶಬ್ದ ಸಂಸ್ಕೃತದ 'ಗೋ' ಎಂಬುವುದರಿಂದ ಉತ್ಪನ್ನವಾದುದಲ್ಲ. ತೆಲುಗಿನಲ್ಲಿ 'ಗೊರ್ರೆ ಎಂದರೆ

'ಕುರಿ' ಇದರ ಬಹುವಚನ ರೂಪ ಗೊರ್ರೆಲು ಅಥವಾ ಗೊರ್ಲ್ಲ ಇದೆ. ಮುಂದೆ ಗೊಲ್ಲು ಎಂದಾಗುತ್ತದೆ. ಆದ್ದರಿಂದ ಕುರುಂಬ ಗೊಲ್ಲಲು ಎಂದರೆ ಕುರುಬ ಎಂದು ಕುರಿಪಾಲಕ ಎಂದು ಭಾವಿಸಿದಾಗ ದ್ವಿರುಕ್ತಿ ದೋಷವಾಗುತ್ತವೆ. ಈ ದೃಷ್ಟಿಯಿಂದಲೂ ಕುರು ಅಥವಾ ಕುರುಂಬ ಎಂದರೆ ಬೆಟ್ಟ ಗುಡ್ಡಗಳಲ್ಲಿ ವಾಸಿಸುವವರು ಎಂಬುದು ಹೆಚ್ಚು ಸಮಂಜಸವಾಗಿ ಕಾಣುತ್ತದೆ.

ಮೂಲ ಮಾನವರು ಆಹಾರ ಮತ್ತು ಬಟ್ಟೆಗಾಗಿ ಸಕಾಲದ ಅ ಸಭ್ಯ ಜೀವಿಗಳು ಆಹಾರಕ್ಕಾಗಿ ಕುರುಗಳನ್ನು ಇಲ್ಲವೇ ಕುರಿಗಳನ್ನು ಆಶ್ರಯಿಸಬೇಕಾಯಿತು. ಹೀಗೆ ಕುರುಗಳಲ್ಲಿ ಇಲ್ಲವೇ ಕುರಿಗಳಲ್ಲಿ ಆಶ್ರಯ ಪಡೆದವುಗಳನ್ನು ಕುರಿಗಳೆಂದು ಕರೆಯಲಾಯಿತು. ನಂತರ ಕುರಿಗಳನ್ನು ಪಾಲನೆ ಮಾಡುವನನ್ನು ಕುರಿಪನೆಂದು ಕರೆಯಲ್ಪಟ್ಟರು. ಕಾಲಾಂತರದಲ್ಲಿ ಈ ಕುರುಪ ಶಬ್ದವೇ ಕುರುಬನಾಗಿ ಉಳಿದುಕೊಂಡಿತು. ಬೇಟೆಯಾಡಿ ಬದುಕುವ ಮಾನವನು ಮುಂದೆ ತಟಸ್ಥ ಬದುಕಿಗೆ ಬಂದಾಗ ದಿನಾಲು ಬೇಟೆಯಾಡಿ ತರುವ ಬದಲು ಅವನ್ನು ಸಾಕಿ, ಅವುಗಳ ಮುಖಾಂತರ ಬದುಕನ್ನು ರೂಪಿಸಿಕೊಂಡವರು ಕುರುಬರೆಂದು ಕರೆಯಿಸಿಕೊಂಡರು. ಪ್ರಾಚೀನ ಕಾಲದಲ್ಲಿ ತಮ್ಮ ಪ್ರಾಣಿಗಳಾದ ಕುರಿಗಳೊಂದಿಗೆ ಬದುಕುವ ಜನರು ಕುರುಬರಾದರು. ಕುರುಬ ಎನ್ನುವ ಶಬ್ದವು ಪ್ರಾಚೀನ ಪದವಾಗಿದ್ದು ಇದು ಕುರುಬ ಸಮುದಾಯಕ್ಕೆ ಅನ್ವಯಿಸುತ್ತದೆ. ಉದ್ಯೋಗ ನಿಮಿತ್ತವಾಗಿ ಹಲವಾರು ಉಪಪಂಗಡಗಳ ಹುಟ್ಟಿಗೆ ಕಾರಣವಾಗಿವೆ. ಕುರಿಸಾಕಣಿಕೆ ಈ ಸಮುದಾಯದ ಕುಲ ಕಸುಬಾಗಿದ್ದರಿಂದ ಕುರುಬ ಎನ್ನುವ ಹೆಸರು ಬಂದಿರಬಹುದು ಎಂದು ವಿದ್ವಾಂಸರ ಅಭಿಪ್ರಾಯವಾಗಿದೆ.

ಕುರುಬರ ಮೂಲ

"ಕುರಿ ಕಾಯುವ ವೃತ್ತಿ ಆರಂಭಗೊಂಡಂದಿನಿಂದಲೂ ಕುರುಬರ ಮೂಲ ಲಭ್ಯವಾಗುತ್ತದೆ. ಪ್ರಾಚೀನ ಮಾನವನಿಗೆ ಆಹಾರ ಸಂಗ್ರಹ ಕಷ್ಟ ಸಾಧ್ಯವೆನಿಸಿದಾಗ ಅವನು ಕುರಿ, ಆಡು, ಆಕಳು ಪ್ರಾಣಿಗಳನ್ನು ತನ್ನ ಆಹಾರಕ್ಕಾಗಿ ಸಾಕಲು ಪ್ರಾರಂಭಿಸಿದ. ಈ ಪ್ರಾಣಿಗಳಿಂದ ಮನುಷ್ಯನ ಹೊಟ್ಟೆ ಬಟ್ಟೆಗಾಗಿ ದಾರಿಯಾಯಿತು. ಜೊತೆಗೆ ಕುರಿ ಸಾಕಾಣಿಕೆ ಮಾಡಿದರಿಂದ ಕುರುಬ ಸಮುದಾಯಗಳ ಹುಟ್ಟಿಗೂ ಕಾರಣವಾದವು.

'ರೆವರೆಂಡ್ ಎಫ್ ಕಿಟೆಲ್' ಅವರು ತಮ್ಮ 'ಕನ್ನಡ ಇಂಗ್ಲಿಷ ನಿಘಂಟು'ವಿನಲ್ಲಿ ಕುರುಬ ಶಬ್ದವನ್ನು ಕುಟುಂಬ ಶಬ್ದದೊಂದಿಗೆ ಸಮೀಕರಿಸಿ ಕುರು ಎಂದರೆ ಬೆಟ್ಟ ಪ್ರದೇಶದಲ್ಲಿ ನೈಸರ್ಗಿಕ ಕಲ್ಲು ಪೊಟರೆಗಳಲ್ಲಿ ವಾಸಿಸುತ್ತಲೆ ಗುಹೆಗಳನ್ನು ನಿರ್ಮಿಸಿಕೊಂಡು ಮುನ್ನಡೆದ ಕುರು ಪ್ರದೇಶವಾಸಿಯೂ ಅದರ ಪಾಲಕನ್ನು ಆಗಿದ್ದರಿಂದ ಅವರು ಕುರುಬ ಸಮುದಾಯದವರಾದರು. ಕುರುಬ ಎನ್ನುವ ಹೆಸರಿನ ನಿಷ್ಪತ್ತಿ ಉದ್ಯೋಗ ವಾಚಕವಾಗಿ

ಬಂದುದೇ? ಹೌದು ಕುರುಬ ಎನ್ನುವ ನಾಮ ವಿಶೇಷಣ ಕುರಿಗಾಹಿಯಾಗಿದ್ದ ಜನಾಂಗಕ್ಕೆ ಬಂದುದಾಗಿರಬೇಕು ಎನ್ನುವ ವಾದ ಒಂದೆಡೆಯಾಗಿದ್ದರೆ. ಈ ಕುರುಬ ಸಮುದಾಯ ದೇಶದ ಎಲ್ಲ ಕಡೆಯೂ ಬೆಳೆದು ಬಂದವರಾಗಿದ್ದರಿಂದ ಭಾಷೆಯ ವಿಭಿನ್ನತೆಯಿಂದ ತೆಲಗು, ತಮಿಳು, ಕನ್ನಡ ಭಾಷೆಗಳ ಕೋ ಎಂದರೆ ಪರ್ವತ, ಬೆಟ್ಟ ಎನ್ನುವ ಶಬ್ದಗಳ ಪ್ರಯೋಗದಿಂದ ಈ ಸಮುದಾಯದ ತಮ್ಮ ಕುರಿ ಮುಂದೆಗಳ ಪಾಲನೆ, ಪೋಷಣೆಗೆ ಸೂಕ್ತ ಜಾಗವನ್ನೇ ಆಶ್ರಯಿಸುವದು. ಅನಿವಾರ್ಯ ಅದಕ್ಕಾಗಿ ಅವರು ಅರಣ್ಯ ಹುಲ್ಲುಗಾವಲು ಹಾಗೂ ಎತ್ತರ ಬೆಟ್ಟದಂತೆ ಸುರಕ್ಷಿತ ಸ್ಥಳಗಳಲ್ಲಿ ವಾಸವಾಗಲೇಬೇಕಾಯಿತು."[೨೪] ಮುಖ್ಯವಾಗಿ ಈ ಕುರುಬ ಜನ ಒಂದು ಪಂಗಡವಾಗಿ ಬೆಳೆಯುತ್ತಾ ಹೋದುದರಿಂದ ಅವರ ಆಚಾರ-ವಿಚಾರ, ಉಡುಗೆ-ತೊಡುಗೆ, ಆಹಾರ-ವಿಹಾರಗಳಲ್ಲಿ ಸ್ವಲ್ಪ ವ್ಯತ್ಯಾಸಗಳಾಗಿದ್ದರೂ ಇವರು ಹಿಂದೂ ಧರ್ಮದ ಒಂದು ಅಂಶ ಎನ್ನುವುದನ್ನು ಅಲ್ಲಗಳೆಯಲಾಗದು. ಕಾಡುಮೇಡಿನಲ್ಲಿ ಮುಳ್ಳು ಕಂಟೆಗಳಲ್ಲಿ ಅಲೆದಾಡುವವರಾಗಿದ್ದರಿಂದ ಒರಟು ಬಟ್ಟೆ ಇವರ ಮೈಗೆ ಚಳಿ ಮಳೆ ಗಾಳಿಯಿಂದ ರಕ್ಷಣೆಗ್ಗಾಗಿ ಸದಾ ಹೆಗಲನ್ನಾಶ್ರಯಿಸಿದ ದಪ್ಪ ಕಂಬಳಿ, ಕಾಲಿಗೆ ದಪ್ಪನ ಚಪ್ಪಲಿ, ಊಟಕ್ಕೆ ಅಂಬಲಿ, ನುಚ್ಚು ಕುರಿ, ಆಡಿನ ಹಾಲು ಹೀಗಾಗಿ ಆಡಂಬರ ಬದುಕು ಇವರ ಪಾಲಿಗೆ ದೂರ. ತಮ್ಮದೇ ಕುರಿ ಮುಂದೆ ಪೋಷಣೆಗೆ ನಾಡು ತೊರೆದು ಕಾಡುವಾಸಿಗಳಾದ ಇವರಿಗೆ ಶಿಕ್ಷಣವೂ ವಂಚಿತ. ಅದಕ್ಕಾಗಿ ಇವರು ನಾಗರಿಕರಲ್ಲ ಹುಂಬ ಸಮುದಾಯವೆನ್ನುವ ಅಭಿದಾನ ಅನುಕೂಲಸ್ಥರಿಂದ ಆದರೆ ಇವರ ಗುಣ ಸ್ವಭಾವ, ಮುಗ್ದತನ ಯಾವ ನಾಗರಿಕನಿಗೂ ಕಡಿಮೆಯದಲ್ಲ. ಅಂತಹ ಒಂದು ಪರಂಪರೆ ಬೆಳೆಸಿಕೊಂಡು ಬಂದವರಾದರಿಂದ ಸಾಧು ಜನ, ಸಂಪನ್ನ ಜನ ಮೂಡಮತಿ ಶಿವನೇ ಗತಿಯೆಂದು ಬಾಳಿನಲ್ಲಿ ಅಡಿಯಿಡುವ ಈ ಕಾಡುವಾಸಿಗಳಿಗೆ ಕುರುಬಗೌಡನೆಂಬ ಒಳ್ಳೆಯ ಹೆಸರೂ ಉಂಟು. ಅಂತೆಯೇ ಪ್ರತಿಯೊಂದು ಮಂಗಳ ಕಾರ್ಯಕ್ರಮ ಇವರಿಂದ ಪ್ರಾರಂಭಗೊಳಿಸುವುದು ವಾಡಿಕೆ. ಇದು ಈಗಲೂ ನಡೆದುಕೊಂಡು ಬಂದಿದೆ. ಈ ಸಮುದಾಯವೂ ಸಭ್ಯತೆಯ ಪ್ರತೀಕ ನಂಬುಗೆಯ ಪ್ರತೀಕವಾಗಿದ್ದರಿಂದಲೇ ಈತ ಗುಡ್ಡದ ಮೇಲೆ ನಿಂತು ಕಂಬಳಿ ಬಿಸಿ ಮಳೆ ತರಿಸುತ್ತಿದ್ದ ಎನ್ನುವ ನಂಬಿಕೆ ಹೊಂದಿದ್ದಾರೆ.

ಇಡೀ ಭರತವರ್ಷವನ್ನಾವರಿಸಿದ ಈ ಜನಗಳು ದಕ್ಷಿಣ ಭಾರತದ ಮೂಲ ನಿವಾಸಿಗಳು ಅಲೆಮಾರಿ ಹಾಗೂ ನೆಲೆಗೊಂಡು ಗುಂಪಾಗಿ ಬೆಳೆದು ಬಂದ ಇವರಲ್ಲಿ ಕುರಿಕಾಯುವ ಇನ್ನುಳಿದವರಂತೆ ಕೃಷಿಕರಾಗಿ ಕಾರ್ಯ ನಿರ್ವಹಿಸುತ್ತಿದ್ದರೂ ಅವರ ಮೂಲ ವಿಂಗಡಣೆ ಹೆಸರು ಕುರುಬ ಎನ್ನುವದು ತಪ್ಪಲಿಲ್ಲ.

ಕುರುಬ ಸಮುದಾಯ

ಕರ್ನಾಟಕದ ಪ್ರಮುಖ ಸಮುದಾಯಗಳಲ್ಲಿ ಕುರುಬ ಸಮುದಾಯ ಒಂದು. ಇವರನ್ನು ಕುರುಬರೆಂದು, ಪೂಜಾರಿಗಳು ಎಂದು ಕರೆಯುವುದು ರೂಢಿಯಲ್ಲಿದೆ. ಮೂಲತಃ

ಶಿವಾರಾಧಕರಾಗಿರುವ ಇವರು ಪ್ರಾಚೀನ ಕಾಲದಿಂದಲೂ ಕುರಿ ಸಾಕಾಣಿಕೆ, ಕಂಬಳಿ ನೇಯ್ಗೆ, ಕೃಷಿಯನ್ನು ಮುಖ್ಯ ಕಸುಬನ್ನಾಗಿ ಮಾಡಿಕೊಂಡು ಬಂದಿದ್ದಾರೆ. ಹೀಗೆ ಪರಂಪರಾನುಗತವಾಗಿ ಕುರಿ ಸಾಕಾಣಿಕೆಯನ್ನು ಮುಖ್ಯ ಉದ್ಯೋಗವನ್ನಾಗಿ ಮಾಡಿಕೊಂಡು ಬಂದಿರುವುದರಿಂದಲೇ ಇವರಿಗೆ ಕುರುಬರು ಎಂಬ ಹೆಸರು ಬರಲು ಕಾರಣವಾಗಿದೆಯೆಂದು ಸಾಮಾನ್ಯವಾದ ತಿಳುವಳಿಕೆಯಾಗಿದೆ. ಈ ಸಮುದಾಯದಲ್ಲಿ ಪ್ರಚಲಿತದಲ್ಲಿರುವ ಪುರಾಣಗಳು ಐತಿಹ್ಯಗಳು ಮತ್ತು ನಂಬಿಕೆ, ಆಚರಣೆಗಳು ಕೂಡ ವಿದ್ವಾಂಸರ ಅಭಿಪ್ರಾಯವನ್ನು ಪುರಸ್ಕರಿಸುತ್ತವೆ. ಹೀಗೆ ಕರ್ನಾಟಕದ ಪ್ರಾಚೀನ ಪ್ರಮುಖವು ಆದ ಕುರುಬ ಸಮುದಾಯವು ತನ್ನದೇ ಆದ ಸಾಮಾಜಿಕ ವ್ಯವಸ್ಥೆಯನ್ನು ರೂಪಿಸಿಕೊಂಡು ಬಂದಿರುವುದು ಕಂಡುಬರುತ್ತದೆ. ಈ ಸಾಮಾಜಿಕ ವ್ಯವಸ್ಥೆಯನ್ನು ಮತ್ತು ಪರಂಪರಾಗತ ಮೌಲ್ಯಗಳನ್ನು ಯಥಾವತ್ತಾಗಿ ಕಾಪಾಡಿಕೊಂಡು ಬಂದಿರುವುದು ಈ ಸಮುದಾಯದ ಮತ್ತೊಂದು ವೈಶಿಷ್ಟ್ಯವಾಗಿದೆ.

ಮೂಲದಲ್ಲಿ ಒಂದೇ ಆಗಿದ್ದ ಕುರುಬ ಜನಾಂಗವು ಕಾಲಾನಂತರದಲ್ಲಿ ಹಲವಾರು ಉಪ ಪಂಗಡಗಳಾಗಿ ವಿಭಜನೆಗೊಂಡಂತೆ ಕಂಡುಬರುತ್ತದೆ. ಇದಕ್ಕೆ ಸ್ಥಳದಿಂದ ಸ್ಥಳಕ್ಕೆ ವಲಸೆ ಹೋಗುವುದು. ಉದ್ಯೋಗದಲ್ಲಾದ ಬದಲಾವಣೆ, ಆಯಾ ಪ್ರದೇಶದಲ್ಲಿ ರೂಢಿಸಿಕೊಂಡ ಆಚಾರ–ವಿಚಾರಗಳಲ್ಲಿ ಭಿನ್ನತೆ ಪ್ರಮುಖ ಕಾರಣವಾಗಿರಬಹುದು.

ಕುರುಬ ಸಮುದಾಯ ಒಳಪಂಗಡಗಳು

ಪೂರ್ವದಲ್ಲಿ ಒಂದೇ ಸಮುದಾಯವಾಗಿದ್ದ ಕುರುಬರು ನಂತರದಲ್ಲಿ ಹಲವಾರು ಒಳ ಪಂಗಡಗಳಾಗಿ ವಿಭಜನೆಯಾಗಿರುವುದು ಕಂಡುಬರುತ್ತದೆ. ಅವರಲ್ಲಿ ಪ್ರಮುಖವಾಗಿ ಹತ್ತಿಕಂಕಣದ ಕುರುಬರು, ಉಣ್ಣೆಕಂಕಣದ ಕುರುಬರು, ಮಿಶ್ರಕಂಕಣದವರು, ಹಂಡೆಕುರುಬರು, ಒಡೆಯರು ಮುಂತಾದವುಗಳನ್ನು ಹೆಸರಿಸಬಹುದು.

ಹತ್ತಿಕಂಕಣದ ಮತ್ತು ಉಣ್ಣೆ ಕಂಕಣದ ಕುರುಬರು

"ಕರ್ನಾಟಕದ ಕುರುಬರಲ್ಲಿ ಉಣ್ಣೆಕಂಕಣದ ಕುರುಬರು ಮತ್ತು ಹತ್ತಿಕಂಕಣದ ಕುರುಬರು ಎಂಬ ಎರಡು ದೊಡ್ಡ ಪಂಗಡಗಳು ಇವೆ. ಈ ಎರಡು ಪಂಗಡಗಳ ಮಧ್ಯದಲ್ಲಿ ನೀರು ಬಳಕೆ ಅಂದರೆ ಊಟ ಉಪಚಾರ ಇತ್ಯಾದಿಗಳು ಯಾವುದೇ ಭೇದ ಭಾವವಿಲ್ಲದೆ ನಡೆಯುತ್ತದೆ. ಹಬ್ಬ ಹರಿದಿನ, ಜಾತ್ರೆ ಉತ್ಸವ ಸಂದರ್ಭದಲ್ಲಿ ಇವರು ಒಟ್ಟಾಗಿಯೇ ಭಾಗವಹಿಸುತ್ತಾರೆ."[೨೫] ಆದರೆ ಇವರ ಮಧ್ಯದಲ್ಲಿ ಹೆಣ್ಣು ಗಂಡಿನ ಕೊಡುಕೊಳ್ಳುವಿಕೆಯ ಸಂಬಂಧ ಬೆಳೆಸುವುದು ಮಾತ್ರ ನಡೆಯುವುದಿಲ್ಲ. ಕಾರಣ ಈ ಎರಡುಪಂಗಡದವರು ಅಣ್ಣ ತಮ್ಮಂದಿರು ಆಗುತ್ತಾರೆ ಎಂದು ಹೇಳುತ್ತಾರೆ. ಕುರುಬರಲ್ಲಿ ಉಂಟಾಗಿರುವ ಒಳ ಪ್ರಭೇದವನ್ನು ಕುರಿತು ಹಲವಾರು ಕಥೆಗಳುಂಟು. ಕುರುಬ ಸಮುದಾಯದಲ್ಲಿಯೂ ಮತ್ತು ಹಾಲುಮತ ಪುರಾಣಗಳಲ್ಲಿಯೂ ದೊರೆಯುತ್ತವೆ.

ಒಡೆಯರು

ಪುರೋಹಿತ ವರ್ಗವನ್ನು ಹೊಂದಿರುವ ಹಲವಾರು ಸಮುದಾಯಗಳಲ್ಲಿ ಕುರುಬ ಸಮುದಾಯವು ಒಂದಾಗಿದೆ. ಕುರುಬರು ಪುರೋಹಿತ ವರ್ಗವನ್ನು ಒಡೆಯರು ಎಂದು ಕರೆಯುತ್ತಾರೆ. ಒಡೆಯರು ಕುರುಬರ ಧಾರ್ಮಿಕ ಸಂಸ್ಕಾರದಲ್ಲಿ ದೀಕ್ಷೆ ನೀಡುವುದರಿಂದ ಕುರುಬರ ಕುಲಗುರುಗಳಾಗಿದ್ದಾರೆ. ಹೀಗಾಗಿ ತಾವು ಉಳಿದವರಿಗಿಂತ ಶ್ರೇಷ್ಠ ಎಂಬ ಭಾವನೆ ಇವರಲ್ಲಿದೆ. ಕುರುಬರಿಗೆ ಒಡೆಯರು ಗುರುಸ್ಥಾನದಲ್ಲಿರುವುದರಿಂದ ಕುರುಬರು ಅವರನ್ನು ಪೂಜ್ಯ ಭಾವನೆಯಿಂದ ಕಾಣುತ್ತಾರೆ.

ರೇವಣಸಿದ್ಧರು ಕುರುಬರ ಕುಲಗುರುಗಳಾಗಿದ್ದರು. ಮದುವೆಗಳಲ್ಲಿ ಬ್ರಾಹ್ಮಣ ಪುರೋಹಿತರು ಬಡವರನ್ನು ಶೋಷಣೆ ಮಾಡುವುದನ್ನು ತಿಳಿದು ಒಡೆಯರು ಎಂಬ ಗುರುವರ್ಗವನ್ನು ಸೃಷ್ಟಿಸಿದರು. ಒಡೆಯರು ರೇವಣಸಿದ್ಧರ ವಂಶಸ್ಥರು ಅಥವಾ ಅವರಿಂದ ಸೃಷ್ಟಿಗೊಂಡವರೆಂಬ ನಂಬಿಕೆಯಿರುವುದರಿಂದ ಒಡೆಯರಿಗೆ ಉನ್ನತಸ್ಥಾನ ನೀಡಿರುವುದು ಸ್ಪಷ್ಟವಾಗುತ್ತದೆ. ಇವರನ್ನು ಕುರುಬರ ಗುರುಗಳೆಂದು, ಕುರುಬ ಜಂಗಮರೆಂದು ಗುರ್ತಿಸುತ್ತಾರೆ.

ಝುಂಡಾ ಕುರುಬರು

ಕುರುಬ ಸಮುದಾಯದಿಂದ ಬೇರ್ಪಟ್ಟ ಪಂಗಡಗಳಲ್ಲಿ ಝುಂಡಾ ಕುರುಬರು ಈ ಸಮುದಾಯುದವರು ರಾಜ ಮಹಾರಾಜರ ಮುಂದೆ ಝೆಂಡಾ ಹಿಡಿಯುವ ವೃತ್ತಿನಿರತರಾಗಿದ್ದರು. ಇವರು ಶಿವಾಜಿ ಕಾಲದಲ್ಲಿ ಕಂಡುಬರುತ್ತಾರೆ. ಇದರಿಂದ ಇವರಿಗೆ ಝುಂಡೆ ಕುರುಬರು ಅಥವಾ ಝುಂಡಾ ಕುರುಬರು ಎಂದು ಕರೆಯುತ್ತಾರೆ.

ಹಂಡೆ ಕುರುಬ

ಕುರುಬ ಸಮುದಾಯ ಪಂಗಡಗಳಲ್ಲಿ ಹಂಡೆಕುರುಬರ ಪಂಗಡವು ಪ್ರಮುಖವಾದ ಪಂಗಡವಾಗಿದೆ. ಹಂಡೆ ಎಂದರೆ ತಾಮ್ರದ ದೊಡ್ಡ ಪಾತ್ರೆ ಎಂದು ಕರೆಯುವರು. ಪಶುಪಾಲನೆಯನ್ನು ಮೂಲ ವೃತ್ತಿಯನ್ನಾಗಿಸಿಕೊಂಡ ಕುರುಬರು ತಾಮ್ರದ ಪಾತ್ರೆಯನ್ನು ನೀರು ಅಥವಾ ಹಾಲು ಸಂಗ್ರಹಿಸಲು ಬಳಸುತ್ತಿದ್ದರು. ಹಂಡೆ ಎಂಬ ಪಾತ್ರೆಯನ್ನು ಬಳಸುತ್ತಿದ್ದರಿಂದ ಇವರಿಗೆ ಹಂಡೆ ಕುರುಬರೆಂಬ ಹೆಸರು ಬಂದಿರುವ ಸಾಧ್ಯತೆಯಿದೆ. ಕುರುಬರು ಮೂಲ ಪಂಗಡದಿಂದ ಬೇರ್ಪಟ್ಟ ಪಂಗಡಗಳಲ್ಲಿ ಹಂಡೆಕುರುಬರ ಪಂಗಡ ಒಂದಾಗಿದೆ. ಅಂಡೆ ಅಂಡಾರ ಪದವು ಗೋವಳ ಜನಾಂಗದೊಳಗಿನ ಅಂದಕ ದೃಷ್ಟಿ ಎಂಬ ಪಂಗಡದ ಪೂರ್ವೋಕ್ತವನ್ನು ತಿಳಿಯಲು ಉಪಯುಕ್ತವಾಗಿದೆ. ಸಂಸ್ಕೃತ ಪದ ಅಂದ ಅಂದಕ ಕಂದಮಿಳದ ಅಂಡೆ–ಅಂಡಾರ ಪದಗಳನ್ನು ಹೋಲುವುದು ಕಂಡುಬರುತ್ತದೆ. ಹಾಗೆಯೇ ಇದು ಧನಗಾರ ಪಂಗಡಕ್ಕೆ ಸಂಬಂಧಿಸಿದ್ದಾಗಿದೆ ಎಂದು 'ಶಂಬಾ ಜೋಶಿ'ಯವರು ಅಭಿಪ್ರಾಯ ಪಟ್ಟಿದ್ದಾರೆ. ಹಂಡೆ ಕುರುಬರು, ಕುರುಬರಂತೆ ಕುರಿಸಾಕಾಣಿಕೆ ಮಾಡುವುದಿಲ್ಲ.

ಆದರೆ ಕಂಬಳಿಗಳನ್ನು ನೇಯುತ್ತಾರೆ. ಕುರಿಗಳ ಬದಲಿಗೆ ಆಕಳು, ದನಗಳನ್ನು ಸಾಕುತ್ತಾ ಹೈನುಗಾರಿಕೆ ಮಾಡುವುದು ಕಂಡುಬರುತ್ತದೆ. ಕೃಷಿ ಇವರಿಗೆ ಪ್ರಧಾನವಾದ ವೃತ್ತಿಯಾಗಿದೆ. ಇಂದಿನ ಆಧುನಿಕತೆಯ ಪ್ರಭಾವದಿಂದಾಗಿ ವಿವಿಧ ರೀತಿಯ ಉದ್ಯೋಗಗಳನ್ನು ಅವಲಂಭಿಸಿದ್ದಾರೆ.

ಕಾಡು ಕುರುಬರು

ಕರ್ನಾಟಕದ ಹಲವು ಸಮುದಾಯಗಳಲ್ಲಿ ಕಾಡುಕುರುಬ ಬುಡಕಟ್ಟು ಒಂದು ಪ್ರಮುಖ ಸಮುದಾಯವಾಗಿದೆ. ಕಾಡುಕುರುಬರು ಕರ್ನಾಟಕ ರಾಜ್ಯದ ಮೈಸೂರು, ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ, ಹೆಗ್ಗಡದೇವನ ಕೋಟೆ, ನಂಜನಗೂಡು, ಹುಣಸೂರು, ಪಿರಿಯಾಪಟ್ಟಣ, ಕೊಡಗು ಜಿಲ್ಲೆಯ ಕುಶಾಲನಗರ, ಸೋಮವಾರಪೇಟೆ ತಾಲ್ಲೂಕುಗಳಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ. ವಿರಾಜಪೇಟೆ ತಾಲ್ಲೂಕುಗಳಲ್ಲಿ ಹಾಗೂ ತಮಿಳುನಾಡಿನ ನೀಲಗಿರಿಯ ಕಾಡುಗುಡ್ಡಗಳಲ್ಲಿ ನೆರೆಯ ಕೇರಳ ವೈನಾಡ(ಮಲಬಾರ)ಗಳಲ್ಲಿ ಬರುವ ಕಾಡುಕುರುಬರು ಅನಾದಿಕಾಲದಿಂದಲೂ ನೆಲೆಸಿದ್ದಾರೆ. ಅವರು ವಾಸಿಸುವ ಪ್ರದೇಶ ಕಾಡು ಅಥವಾ ಕಾಡಿನಿಂದ ಆವೃತ್ತವಾಗಿರುವುದರಿಂದ ಅವರಿಗೆ ಕಾಡುಕುರುಬರು ಎಂದು ಕರೆದಿರಬಹುದೆಂದು ಅಭಿಪ್ರಾಯ ಪಡಲಾಗಿದೆ.

ಕಾಡುಕುರುಬರ ಉಗಮ ಐತಿಹಾಸಿಕ ಹಿನ್ನೆಲೆ ಕುರಿತು 'ನಂಜುಂಡಯ್ಯ' ಮತ್ತು 'ಅನಂತಕೃಷ್ಣ ಅಯ್ಯರ' ತಮ್ಮ `The Mysore Tribes and castes' ಎಂಬ ಗ್ರಂಥದಲ್ಲಿ ಕುರುಬರ ಕುರಿತು ಪ್ರಸ್ತಾಪಿಸಿದ್ದಾರೆ.

ಜೇನು ಕುರುಬ

ಕರ್ನಾಟಕ ರಾಜ್ಯದ ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ, ಕೊಡಗು ಜಿಲ್ಲೆಯ ಸೋಮವಾರಪೇಟೆ, ವಿರಾಜಪೇಟೆ ತಾಲೂಕುಗಳಲ್ಲಿ ಹಾಗೂ ಕೇರಳದ ವೈನಾಡು(ಮಲಬಾರ), ತಮಿಳುನಾಡಿನ ನೀಲಗಿರಿಯ ಕಾಡುಗುಡ್ಡಗಳಲ್ಲಿ ಜೇನುಕುರುಬರು ಅನಾದಿಕಾಲದಿಂದಲೂ ನೆಲೆಸಿದ್ದಾರೆ. ಜೇನು ಕುರುಬರು ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ, ಮೈಸೂರು ಜಿಲ್ಲೆಯ ಹುಣಸೂರು, ಪಿರಿಯಾಪಟ್ಟಣಗಳಲ್ಲಿ ಹೆಗ್ಗಡದೇವನ ಕೋಟೆಯಲ್ಲಿ ಕಂಡುಬರುತ್ತಾರೆ.

"ಈ ಸಮುದಾಯವು ಪ್ರಾದೇಶಿಕವಾಗಿ ಬೇರೆ ಬೇರೆ ರೀತಿಯಿಂದ ಕರೆಯಿಸಿಕೊಳ್ಳುತ್ತದೆ. ಆ ಹೆಸರುಗಳು ಈ ರೀತಿಯಾಗಿವೆ.

೧. ಕರ್ನಾಟಕ : ಕುರುಬ, ಕುರುಬನ್, ಹಾಲುಮತ, ಗೊಂಡ, ರಾಜಗೊಂಡ, ಹಂಡೆ ಕುರುಬ, ಹಂಡೆ, ವಜೀರ.

೨. ಆಂಧ್ರಪ್ರದೇಶ : ಕುರುಬ ಹೆಗ್ಗೆ, ಕುರುಮನ, ಯಾದವುಲ್, ಗೊಲ್ಲಿನಾಡು, ಕುರುಮ, ಕುರುಮವಾರು.

೩. ಅಸ್ಸಾಂ : ಗೊಡ್ಲ, ದನವರಾ

೪. ಗುಜರಾತ : ಗಡಾಲಿಯ ಗಡಲುಹಾರಿಯಾ, ದನಗರ್, ಅಹೀರರು

೫. ಬಿಹಾರ : ಗಡೇರಿಯಾ, ದನಗರ್

೬. ಹರಿಯಾಣ : ಬಂಗೀಲ, ಬರೇಲ, ಬಿಲ್ರಾ, ಕಲನಾಲಿಯ.

೭. ದೆಹಲಿ : ಗಡ್ಡಿ, ಗಾರ್ರಿ, ಕುಮಾರ.

೮. ಹಿಮಾಚಲ : ಗದೇರಿಯಾ

೯. ಮೇಘಾಲಯ : ಕುಮರ್, ರುದ್ರಪಾಲ್, ಗೊಂಡ್

೧೦. ಮಹಾರಾಷ್ಟ್ರ : ದನಗರ್, ಕುರುಬರ್, ಗಡಾರಿಯಾ

೧೧. ಮಧ್ಯಪ್ರದೇಶ : ದನಗರ್, ಬಾಗ್ಲಾ, ಗಾಡ್ರಿ ಹತಗಾರ್, ಹತ್ಕಾರ್, ಕುರುಯರ್

೧೨. ರಾಜಸ್ಥಾನ : ಗಡಾರಿಯಾ, ಚಂಡಾಲಿಯಾ, ಗಾವಳ ಗೋಶಿ, ಕಗಬೀರಿಯಾ, ಗೊಂಡ, ಕುಮರ್

೧೩. ಕೇರಳ : ರಾಜಗೊಂಡ, ಗೋದಾರಿ, ಹೆಗ್ಡೆ, ಮಧ್ಯಗೊಂಡ, ಗೊಂಡಿ, ಪುಲಯೆನ್

೧೪. ತಮಿಳುನಾಡು : ಕುರುಬ, ಗೊಂಡ, ಹೆಗ್ಡೆ

೧೫. ತ್ರಿಪುರ : ಗೊಂಡ, ಕುರಾರಿಯರ್

೧೬. ಉತ್ತರ ಪ್ರದೇಶ : ಗಡ್ಡಿ, ಗಾಡಾರಿಯ, ಪಾಲ್

೧೭. ಪಶ್ಚಿಮ ಬಂಗಾಳ : ಗೊಂಡ ಗುಡೇರಿ, ಪಾಲ್

೧೮. ಚಂಡಿಗಡ : ಗಡಾರಿ, ಗಡ್ಡಿ

೧೯. ಜಮ್ಮುಕಾಶ್ಮೀರ : ಗಡ್ಡಿ

೨೦. ಪಂಜಾಬ : ಗಡಾರಿಯಾ, ಗಧಾರಯಾ

೨೧. ಗೋವಾ ದಮನ್ ದ್ವೀಪ : ದನಗರ್

೨೨. ಪಾಂಡಿಚೇರಿ : ಕುರುವ ಮದ್ಯಗೊಂಡ, ರಾಜಗೊಂಡ.

೨೩. ಗೋವಾ : ದನಗರ್"[೨೬]

ಕುಲಗೋತ್ರದ ಸ್ವರೂಪವನ್ನು ತಿಳಿದುಕೊಳ್ಳಲು ಬೆಡಗುಗಳು ಅಸ್ತಿತ್ವವನ್ನು ಪಡೆದುಕೊಂಡಂತೆ ಕಾಣುತ್ತವೆ. ಸಮುದಾಯ ವಿಕಾಸವಾದ ಎಷ್ಟೋ ವರ್ಷಗಳ ನಂತರ ಒಂದೇ ರಕ್ತ ಸಂಬಂಧಿಗಳಲ್ಲಿ ಹಲವಾರು ತಲೆಮಾರುಗಳ ಕಾಲ ವಿವಾಹ ಸಂಬಂಧಗಳು ಏರ್ಪಟ್ಟು ಜನಾಂಗದ ದೈಹಿಕ ಮತ್ತು ಮಾನಸಿಕ ಕ್ಷೀಣತೆ, ತೊಂದರೆಗಳಿಗೆ ಕಾರಣವಾದ ಮೇಲೆ ಭವಿಷ್ಯದ ದೃಷ್ಟಿಯಿಂದ ಇದು ಸೂಕ್ತವಲ್ಲ ಎಂಬ ನಿರ್ಧಾರಕ್ಕೆ ಬಂದಿರಬೇಕು. ಸಪಿಂಡ, ಸೋದರ ಸಂಬಂಧಿ ವಿವಾಹ ಪಕ್ರಿಯೆಗಳನ್ನು ತಡೆಗಟ್ಟುವ ಉದ್ದೇಶದಿಂದ ಬೆಡಗುಗಳನ್ನು ವಿಂಗಡಿಸುವ ಪರಿಪಾಠಕ್ಕೆ ನಾಂದಿಯಾಗಿರುವಂತೆ ಕಂಡುಬರುತ್ತದೆ.

ಬೆಡಗು ಎನ್ನುವುದಕ್ಕೆ ಸಮನಾರ್ಥದಲ್ಲಿ ಕುಲಗಳ ಸಂಬಂಧದ ಮಹತ್ವ ತಿಳಿಸುವುದು. ಎಂದು ಹೇಳಬಹುದು. ಈ ಪರಿಕಲ್ಪನೆಯು ಉತ್ತರ ಅಮೇರಿಕಾ ಓಜಿಬ್ಯಾದಿಂದ ನಿಷ್ಪತ್ತಿಯಾದ Ototemanದಿಂದ ಹುಟ್ಟಿಕೊಂಡ ಶಬ್ದ ಇದರರ್ಥವೂ ಸೋದರ ಸಂಬಂಧಿ ಎಂದೇ ಹೇಳಲಾಗುತ್ತದೆ. ಆಂಗ್ಲ ಭಾಷೆಯ Totem ಎಂಬ ಶಬ್ದದ ಕನ್ನಡ ರೂಪಾಂತರವೇ ಬೆಡಗು ಎಂಬ ಶಬ್ದವು ಕುಲ ಚಿಹ್ನೆ ಕುಲ ಸಂಕೇತ ಎಂಬರ್ಥ ನೀಡುವ ಈ ಪದವು ೧೭೯೨ರಿಂದ ಬೆಳಕಿಗೆ ಬಂದಿದೆ. ಬೆಡಗು ಎನ್ನುವುದನ್ನು ಸಾಮಾನ್ಯವಾಗಿ ವ್ಯಾಖ್ಯಾನಿಸುವುದಾದರೆ ಒಂದು ಸಮುದಾಯದಲ್ಲಿ ವ್ಯವಸ್ಥಿತವಾಗಿ ವೈಜ್ಞಾನಿಕವಾಗಿ ಪರಸ್ಪರರ ಸಂಬಂಧವನ್ನು ಗುರುತಿಸುವುದಕ್ಕೆ ವಿಂಗಡಿಸಿರುವ ಗುಂಪು ಎಂದು ಹೇಳಬಹುದಾಗಿದೆ.

ಬೆಡಗು ಎಂದರೆ ಕುಲಚಿಹ್ನೆ ಅಥವಾ ಕುಲಲಾಂಛನ. ಇದು ನಿರ್ಧಿಷ್ಟ ರಕ್ತ ಸಂಬಂಧಿ ಪಂಗಡದ ಸದಸ್ಯರು ವಿಶೇಷ ಆಧ್ಯಾತ್ಮ ಸಂಬಂಧ ಹೊಂದಿರುವ ವಸ್ತು ಅಥವಾ ಚಿಹ್ನೆಯಾಗಿರುತ್ತದೆ. ಆ ವಸ್ತು ಅಥವಾ ವಸ್ತುವಿನ ಹೆಸರಿನ ಮೂಲಕ ಒಂದು ಪಂಗಡ ಗುರುತಿಸಲ್ಪಡುವುದು. ಒಂದು ಕುಲ ಚಿಹ್ನೆಯಿರುವುದರಿಂದ ಗುರುತಿಸಲ್ಪಡುವ ಬಂಧುತ್ವವಾಗಿರುತ್ತದೆ ಎಂದು 'ಡಾ.ಚಂದ್ರಶೇಖರ ದಾಮ್ಲೆ'ಯವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

'ಎನ್ ಬಸವರಾಧ್ಯ'ರು 'ಕನ್ನಡ ನಿಘಂಟು'ವಿನಲ್ಲಿ ಜಾತಿಯೊಳಗಿರುವ ಒಂದು ಉಪವಿಭಾಗ, ಪಂಗಡ ವರ್ಗ, ಬಣ, ಕುಲ, ತಳಿಬಳಿ ಈ ರೀತಿಯಾಗಿ ಬೆಡಗುಗಳೆಂದು ಹೆಸರು ಬೆಡಗುಗಳೆಂದರೆ ಮನೆತನಗಳು ಇಲ್ಲವೆ ಗೋತ್ರಗಳೆಂದು ವ್ಯಾಖ್ಯಾನಿಸಿದ್ದಾರೆ.

ಸ್ವ ಬೆಡಗಿನಿಂದ ಎಷ್ಟೋ ಬುಡಕಟ್ಟುಗಳು ಮತ್ತು ಸಮುದಾಯಗಳು ನಾಶವಾಗಿವೆ. ಆಧುನಿಕ ಕಾಲದಲ್ಲಿ ಸಮಾಜಗಳ ಮೇಲೆ ಇವುಗಳ ಹಿಡಿತ ಸಡಿಲವಾಗುತ್ತದೆ ಎಂದು ಭಾವಿಸುವವರು ಭ್ರಮನಿರಸನಕ್ಕೆ ಒಳಗಾಗಿದ್ದಾರೆ. ಸ್ವ ಬೆಡಗು ಮತ್ತು ಸ್ವಗೋತ್ರ ವಿವಾಹ ನಿಷೇಧಕ್ಕೆ ವೈಜ್ಞಾನಿಕ ರಕ್ತ ಪರೀಕ್ಷೆಯ ಬೆಂಬಲವು ದೊರೆತಿದೆ.

ಬೆಡಗುಗಳನ್ನು ತಾಯಿ ಮೂಲ ಅಥವಾ ತಂದೆ ಮೂಲದಿಂದ ಗುರುತಿಸಿದರೂ, ತಾಯಿಯ ಮೂಲವೇ ಬೆಡಗುಗಳ ಅಸಲಿ ಮೂಲ ಎನಿಸುತ್ತದೆ. ಬೆಡಗುಗಳು ಮಾತೃ ಸಂಸ್ಕೃತಿ ಪ್ರಧಾನವಾದವು.

ಬೆಡಗುಗಳ ಕುಲಚಿಹ್ನೆಗಳು ಪಿತೃಗಳು ಸಾಕ್ಷಾತ್ ದೈವ ಸ್ವರೂಪಿಗಳು. ಕುಲಚಿಹ್ನೆಗಳು ರಕ್ತ ಸಂಬಂಧಿ ಗುಂಪುಗಳು ಸದಾ ಸಂಘಟಿತರಾಗಿರುವಂತೆ ಕುಲ ಚಿಹ್ನೆಗಳು ಮಾನವ ಜನಾಂಗದಷ್ಟು ಪ್ರಾಚೀನವಾದವು. ಬೆಡಗಿನ ಸಂಸ್ಕೃತಿ ಗೋತ್ರ ಸಂಸ್ಕೃತಿಗಿಂತ ತೀರ ಭಿನ್ನವಾದುದು. ಇದರಿಂದಾಗಿ ಬೆಡಗುಗಳು ಅವರ ವೃತ್ತಿ ಪರಿಸರದ ಪಾತ್ರವನ್ನು ಮಾತ್ರವಲ್ಲದೆ ಅವರ ಪ್ರಾಚೀನತೆಯನ್ನು ಪರಿಚಯಿಸುವ ಆಕರಗಳಾಗಿವೆ. ಮರವನ್ನು ಕುಲಚಿಹ್ನೆಯಾಗಿಸಿ ಕೊಂಡಿದ್ದಾರೆ. ಮರವನ್ನು ಕಡಿಯುವಂತಿರಲಿಲ್ಲ ಮತ್ತು ಅದನ್ನು ಉರುವಲು ಬಳಸುವಂತಿರಲಿಲ್ಲ. ಬೆಡಗು ವಂಶಪಾರಂಪರ್ಯವಾಗಿ ಬಂದಿದ್ದು ಈ ಕುಲಚಿಹ್ನೆಯನ್ನು ಆರಾಧಿಸುವ ಸಮುದಾಯವೆಲ್ಲಾ ಒಂದೇ ಕಡೆ ವಾಸಿಸಬೇಕೆಂದೇನೂ ಇಲ್ಲ ಎಲ್ಲೋ ಚದುರಿ ಹೋಗಿದ್ದರೂ ಕೂಡ ಚಿಹ್ನೆಗಳನ್ನು ಗೌರವಿಸುವುದನ್ನು ಉಳಿಸಿಕೊಂಡಿರಬೇಕಾಗುತ್ತದೆ. ಇದು ಕಟ್ಟು ನಿಟ್ಟಾಗಿ ಅನುಸರಿಸಬೇಕಾದ ಸಂಗತಿಯಾಗಿರುತ್ತದೆ.

ಕುರುಬ ಸಮುದಾಯದ ಬೆಡಗುಗಳನ್ನು ಅವಲೋಕಿಸಿದರೆ ಪ್ರಾಚೀನ ಕಾಲದಲ್ಲಿ ತಮ್ಮ ದನಕರು ಕುರಿಗಳ ಸಂರಕ್ಷಣೆಗಾಗಿ ಹುಲ್ಲು ನೀರು ಇರುವ ಪ್ರದೇಶಗಳನ್ನು ಗುರುತಿಸಿ ದೊಡ್ಡಿಗಳನ್ನು ಕಟ್ಟಿಕೊಂಡು ಅಲೆದಾಡುತ್ತಿದ್ದರು. ಬೆಟ್ಟಗುಡ್ಡಗಳಲ್ಲಿ ಬೀಡುಬಿಟ್ಟುಕೊಂಡು ವಾಸಿಸುತ್ತಿರುವಾಗ ಗುಂಪಿನಿಂದ ಪ್ರತ್ಯೇಕತೆ ಉಂಟಾಗಲು ತಮ್ಮದೇ ಆದ ಸಂಕೇತಗಳನ್ನು ಇಟ್ಟು ಕೊಳ್ಳಲಾರಂಭಿಸಿದರು. ಇದೇ ಮುಂದೆ ಬೆಡಗುಗಳಾಗಿ ಮಾರ್ಪಾಡಾದವು.

ಈ ಹಿನ್ನೆಲೆಯಲ್ಲಿ ಕಳ್ಳುಬಳ್ಳಿಯವರು ಒಂದೇ ಬೆಡಗಿನವರಾದರು. ವಿಭಿನ್ನ ಬೆಡಗುಗಳನ್ನು ಗುರುತಿಸಿ ಹೆಣ್ಣು ಕೊಟ್ಟು ತರುವುದು ಬಳಕೆಯಾಗಲು ಸಹಕಾರಿಯಾದವು. ಬೆಡಗುಗಳು ಕಂಕಣ ಒಂದೇ ಆಗಿದ್ದರೂ ಬೆಡಗು ಮಾತ್ರ ಬೇರೆಯಾಗಿರಲೇಬೇಕಾದ ನಿಯಮವಿದೆ.

ಬೆಡಗುಗಳು ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ಬರುವುದು. ತಂದೆಯಿಂದ ಮಕ್ಕಳಿಗೆ ಮದುವೆಯೊಂದಿಗೆ ಹೆಣ್ಣು ಮಗಳ ಮೂಲ ಬೆಡಗು ಕರಗಿ ಹೋಗುತ್ತದೆ. ಕುರುಬರ ಹೆಣ್ಣು ಮಗಳು ಗಂಡನ ಮನೆಗೆ ಹೋದ ಮೇಲೆ ಗಂಡನ ಮನೆಯ ಬೆಡಗು ಪ್ರಾಧಾನ್ಯತೆ ವಹಿಸುತ್ತದೆ. ಬೆಡಗುಗಳು ಮದುವೆಯ ಸಂದರ್ಭದಲ್ಲಿ ಕಟ್ಟುನಿಟ್ಟಾಗಿ ಪಾಲಿಸಲಾಗುತ್ತದೆ. ಒಂದು ವೇಳೆ ಒಂದೇ ಬೆಡಗಿನ ಹೆಣ್ಣು ಗಂಡು ಮದುವೆಯಾದರೆ ಅವರಿಂದ ಜನಿಸುವ ಮಕ್ಕಳು ಆರೋಗ್ಯಕರವಾಗಿರುವುದಿಲ್ಲ ಎಂಬ ನಂಬಿಕೆಯೂ ಇದೆ. ಬೆಡಗುಗಳ ಹೆಸರುಗಳನ್ನು ಗಮನಿಸಿದರೆ ಕುರುಬರಲ್ಲಿಯೂ ತಮ್ಮ ಸುತ್ತ ಮುತ್ತ ಬದುಕಿನಲ್ಲಿ ಕಂಡುಬರುವ ವಸ್ತು ವಿಚಾರ ವಿಷಯಗಳನ್ನೇ ಹೆಚ್ಚಾಗಿ

ಬಳಸಿಕೊಂಡಿರುವುದನ್ನು ಗಮನಿಸಬಹುದು. ಒಂದು ಬೆಡಗಿನ ಹೆಸರನ್ನು ಪಡೆದುಕೊಂಡ ಕುಲದವರು ಅದಕ್ಕೆ ಸಂಬಂಧಿತ ವಿಧಿ ನಿಷೇಧಗಳನ್ನು ಅನುಸರಿಸಬೇಕಾಗುತ್ತದೆ.

ಕುರುಬ ಸಮುದಾಯದ ಬೆಡಗುಗಳನ್ನು ಅವಲೋಕಿಸಿದರೆ ಆಡು ಕುಲದವರು ಮೇಕೆಯನ್ನು ಕೊಲ್ಲುವುದಾಗಲಿ, ಅದರ ಮಾಂಸವನ್ನು ಉಪಯೋಗಿಸುವುದಾಗಲಿ ನಿಷಿದ್ಧ. ಮೇಕೆಗಳನ್ನು ಸಾಕಿ ಮಾರಾಟ ಮಾಡಬಹುದೇ ವಿನಃ ಕೊಲ್ಲುವಿಕೆ ಆಹಾರವಾಗಿ ಬಳಸುವಂತಿಲ್ಲ. ಇದು ಕುಲದ ಚಿಹ್ನೆಯಾಗಿರುವುದರಿಂದ ಅದು ಗೌರವದ ಹಾಗೂ ಶ್ರೇಷ್ಠತೆಯ ಸಂಕೇತವಾಗಿ ಬಳಕೆಯಾಗುತ್ತದೆ. ಅದರಂತೆ ಆನೆ ಕುಲದವರು ಆನೆ ಸವಾರಿ ಮಾಡುವಂತಿಲ್ಲ. ಆದರೆ ಆನೆಯಿಂದ ಇತರೆ ಸೇವೆಗಳನ್ನು ಆ ಕುಲದವರು ಪಡೆಯಬಹುದಾಗಿದೆ. ಅತ್ತಿ ಕುಲದವರು ಅತ್ತಿ ಮರವನ್ನು ಕತ್ತರಿಸುವಂತಿಲ್ಲ. ಅಲ್ಲದೇ ಅತ್ತಿಯ ಹಣ್ಣನ್ನು ತಿನ್ನಬಾರದು ಎಂಬ ನಂಬಿಕೆ ಮನೆ ಮಾಡಿದೆ. ಹೀಗೆ ವಿಧಿ ನಿಷೇಧಗಳಿಗೊಳಪಟ್ಟು ರಕ್ತಸಂಬಂಧ ಬೆಳಸಿಕೊಳ್ಳಲು ಕುರುಬರು ಕೆಲವು ನಿಬಂಧನೆಗಳನ್ನು ಮಾಡಿಕೊಂಡವುಗಳೇ ಬೆಡಗುಗಳು ಎನಿಸಿಕೊಂಡವು. ಭಿನ್ನ ಬೆಡಗುಗಳಲ್ಲಿ ಸಂಬಂಧ ಕುದುರಿಸಿದರೆ, ಸಮ ಬೆಡಗುಗಳಲ್ಲಿ ಸಹೋದರ ಬಾಂಧವ್ಯ ಉಂಟಾಗುವುದರಿಂದ ರಕ್ತ ಸಂಬಂಧ ಬಳಸಲೇಬಾರದೆಂಬ ಅಭಿಪ್ರಾಯವಿದೆ.

ಬೆಡಗುಗಳು

"ಬನ್ನೆಲ್ಲವರು	ಬಸೇನವರು
ಗೆಜ್ಜಿನವರು	ಮನ್ನೆನವರು
ಮಲ್ಲೆನವರು	ಹೊನ್ನಮನ್ನೆಲ್ಲರು
ಮುತ್ತಿನವರು	ಎಮ್ಮೆಲ್ಲವರು
ಚವಡೆಲ್ಲವರು	ಹಾಲಿನವರು
ಹೂವಿನವರು	ಸೆಟ್ಟೆಲ್ಲವರು
ಸಂಪಗೆ	ಕೋತೆನ್ನವರು
ಹೊಚ್ಚಲವರು	ಹಂಡೇನವರ
ಅಮೋಘ	ಅಮಗೊಂಡೆ
ಜಗ್ಗಲವರು	ಪಾವಿನವರು
ಅರಳೆಲಿ	ಅವ್ವಲಗೊಂಡ್ಲ

ಉಣ್ಣಿ	ಎಮ್ಮೆಯವರು
ಸಾತಿ	ಕಬ್ಬಳೆ
ಕರಿಮಾವಿನ	ಕವಡ
ಕಂಚಲ	ಕೌವಡಿ
ಕುರಿ	ಕುರೇಲ
ಕುಂದಣ	ಕೋರೆಲ್ಲೇರು
ಬನ್ನೆ	ಗೋಪೆ
ಗೋಡೇಲ	ಚನಗೆಲ
ಚಲಿ	ಜಗ್ಗಲ
ಜಗ್ಗಲಿ	ಜಡಮಳೆ
ಜಂಗೀನ	ಜಂಡೆ
ಜಾಡಿ	ಜಾಲ
ಜನಗೆ	ಜೀರಿಗೆ
ಜೀವಳ	ಟಿಕ್ಕೇಲ
ಡೊಮ್ಮೆಲ್ಲ	ತುಪ್ಪದ
ತುರಾಯಿ	ತುರುಗಾರ
ತುಂಬೆ	ತೆವರಿಲ್ಲಿ
ತೋಟಿಲು	ದಂಡಲ
ದೇವಲ್	ನಡವಟ್ಟಲ
ನಾಗೋಲಿ	ಬನ್ನೇಲಿ
ಬಸಲೆಲ್ಲೇರು	ಬಸ್ಲೇನ
ಬಳ್ಳೇರ	ಬಂಡಗರ
ಬಂದೇಲ	ಬಾಸೇಲ
ಬಾಂಡಾರಿ	ಬೆಲು

ಬೀರ	ಬಿಲ್ಲಾರ
ಬಿಳಿಕುರಿ	ಬುಗುಡಿ
ಬುಸಾಲ	ಬುಡಲಿ
ಬೆಣಚಿ	ಭಂಡಾರ
ಬೋಸಲ	ಮಜರಿ
ಮನ್ನೆ	ಮಾಸಲ
ಮ್ಯಾಗಡ್ಡಿ	ಮೀಳೇನ
ಮುರುವು	ಹಿಂಡಿನ
ಯಕ್ಕೇಲ	ಯಕ್ಮೇಲಿ
ವಡಗೇಲ	ಸಣ್ಣಕ್ಕಿ
ಸಣ್ಣಕಂಬಳಿ	ಸಿಗಲೇರು
ಸುಗ್ಗಲ	ಸಲಪನ
ಸೊಂಟಲ"[೨೭]	

ಒಟ್ಟಾರೆಯಾಗಿ ಬೆಡಗುಗಳು ರಕ್ತ ಸಂಬಂಧದ ಬೇರೆ ಬೇರೆ ಗುಂಪುಗಳನ್ನು ನಿರ್ದೇಶಿಸುತ್ತವೆ. ಇವರು ತಮ್ಮ ಎಲ್ಲಾ ಬೆಡಗುಗಳ ನೆನಪಿಗಾಗಿ ಪ್ರತಿಯೊಂದು ಬೆಡಗುಗಳ ಆಧಾರದ ಮೇಲೆ ಅವರವರ ಮನೆತನದ ಅಡ್ಡ ಹೆಸರುಗಳಿಂದಲೂ ಕರೆಯಲು ಸಹಾಯಕವಾಗಿವೆ. ತಮ್ಮ ಹೆಸರು ಅಥವಾ ವಿಳಾಸ ಹೇಳುವಾಗ ಹೆಸರಿನ ಕೊನೆಯಲ್ಲಿ ಅವರ ಕುಲ ಅಥವಾ ಬೆಡಗನ್ನು ಸೇರಿಸಿ ಹೇಳುವುದು ವಾಡಿಕೆ. ಇದರಿಂದ ಆ ವ್ಯಕ್ತಿಯ ಯಾವ ಕುಲ ಅಥವಾ ಬೆಡಗಿಗೆ ಸೇರಿದವನೆಂಬ ವಿಷಯವು ಸುಲಭವಾಗಿ ತಿಳಿಯಲು ಸಾಧ್ಯವಾಗುತ್ತದೆ. ಕಾಲಚಕ್ರದಲ್ಲಿ ಇಂದು ಮದುವೆಯಂತಹ ಶಿಷ್ಟಾಚಾರದಲ್ಲಿಯೂ ಧಾರ್ಮಿಕ ಆಚರಣೆಯಲ್ಲಿ ಕುಲ ಬೆಡಗುಗಳು ಪ್ರಮುಖ ಪಾತ್ರವಹಿಸುತ್ತವೆ.

ಆಚರಣೆಗಳು

ಕುರುಬ ಸಮುದಾಯದವರು ಆಚರಣೆಗಳಿಗೆ ತುಂಬಾ ಮಹತ್ವ ಕೊಡುತ್ತಾರೆ. ಏಕೆಂದರೆ ಹಲವಾರು ವರ್ಷಗಳಿಂದ ತಮ್ಮ ಬಂಧುಗಳನ್ನು ಬೇಟೆಯಾಗಲು ವೃತ್ತಿಯು ಪ್ರತಿಕೂಲವಾಗಿರುತ್ತದೆ. ಅದಕ್ಕಾಗಿ ಅವರು ತಮ್ಮ ಸುಖ ಸಂತೋಷಗಳನ್ನು ಸಾಮೂಹಿಕವಾಗಿ ಹಂಚಿಕೊಳ್ಳಲು ಬಯಸುವರು ಚಿಕ್ಕ ಪುಟ್ಟ ಕಾರ್ಯವನ್ನು ವೈಭವೀಕರಿಸಿಕೊಂಡು ಆಚರಿಸುವ

ರೂಢಿಯನ್ನು ಇಟ್ಟುಕೊಂಡಿದ್ದಾರೆ. ಸಮುದಾಯಗಳು ನಡೆದು ಬಂದ ರೀತಿ ನೀತಿ ಆಚರಣೆಯು ಪದ್ಧತಿಯಾಗಿ ಆಯಾ ಸಮುದಾಯ ಪುರಾಣ ಕೃತಿಗಳಲ್ಲಿ ಅಭಿವ್ಯಕ್ತಗೊಂಡಿವೆ. ಇದು ಸಮಾಜದ ಸಂಸ್ಕೃತಿಯ ಬೆಳವಣಿಗೆಗೆ ಪ್ರೇರಣೆ ನೀಡುತ್ತಾ ಬಂದಿದೆ. ಏಕ ಸಂಸ್ಕೃತಿಯಾಗಿ ಬೆಳೆದು ಒಟ್ಟಾರೆ ಮಾನವ ಸಂಸ್ಕೃತಿಯನ್ನು ನಿರೂಪಿಸುವ ಸಾಮರ್ಥ್ಯ ಪುರಾಣಕ್ಕಿದೆ. ಜನಪದರ ಆಶ್ರಯದಲ್ಲಿ ಮೌಖಿಕ ಸಂಸ್ಕೃತಿಯಾಗಿ ಪುರಾಣಗಳಲ್ಲಿ ಪ್ರಮುಖ ವಸ್ತುವಾಗಿ ಆಚರಣೆಗಳು ಕಂಡುಬರುತ್ತವೆ. ಆದ್ದರಿಂದ ಸಮುದಾಯಗಳ ಸಾಂಸ್ಕೃತಿಕ ಅಧ್ಯಯನಕ್ಕೆ ಲಿಖಿತ ದಾಖಲೆಗಳ ಜೊತೆಗೆ ಪ್ರಸ್ತುತ ಜೀವನದಲ್ಲಿ ಆಚರಣೆಯ ಪದ್ಧತಿಯನ್ನು ಅವಲೋಕಿಸುವುದು ಉಚಿತ. ಸಮಾಜದಲ್ಲಿ ಮತ್ತೆ ಮತ್ತೆ ಸಂಸ್ಕೃತಿಯನ್ನು ಕಾಪಾಡಲು ನೀತಿ–ನಿಯಮಗಳ ಸೃಷ್ಟಿಯೂ ಆಗುತ್ತಲೇ ಇರುತ್ತವೆ. ಈ ಅಂಶಗಳಿಂದ ಸಮುದಾಯಗಳು ಜೀವನ ಕ್ರಮದಲ್ಲಿ ಭಿನ್ನತೆಯನ್ನು ಹೊಂದಿರುತ್ತವೆ. ಸಮುದಾಯಗಳ ಅಶೋತ್ತರಗಳನ್ನು ಹತೋಟಿಯಲ್ಲಿಡಲು ಕೆಲವು ನಿಷಿದ್ಧಗಳನ್ನು ಸೃಷ್ಟಿಸುವುದು ಸಮಾಜದ ವೈಜ್ಞಾನಿಕತೆ ಹೌದು. ಸಮಾಜದಲ್ಲಿ ಅನೇಕ ಸಮುದಾಯಗಳು ಒಂದೇ ಪ್ರದೇಶದಲ್ಲಿ ವಾಸಿಸುತ್ತಿದ್ದರೂ ಅವರ ಆಚರಣೆಗಳು ವೈರುಧ್ಯದಿಂದ ಕೂಡಿರುತ್ತವೆ. ಎಲ್ಲಾ ಸಮುದಾಯಗಳಿಗೂ ಆಯಾ ಕುಲದ ಆಚರಣೆ ಪದ್ಧತಿಗಳೆ ಪವಿತ್ರ ಮತ್ತು ಶ್ರೇಷ್ಠತೆಯನ್ನು ಪಡೆದಿರುತ್ತವೆ.

ಅ. ಕನ್ಯೆ ನೋಡುವುದು

ಆ. ನಿಶ್ಚಿತಾರ್ಥ

ಕನ್ಯೆ ನೋಡುವುದು

ಕುರುಬರಲ್ಲಿ ಮೊದಲಿಗೆ ಹುಡುಗಿಯನ್ನು ನೋಡುವ ಶಾಸ್ತ್ರವನ್ನು ಮಾಡಲಾಗುತ್ತದೆ. ಹೆಚ್ಚಿನ ಸಂಖ್ಯೆಯಲ್ಲಿ ಸಂಬಂಧಿಕರ ಅಥವಾ ಅಕ್ಕಪಕ್ಕದ ಕುಟುಂಬಗಳಲ್ಲಿಯೇ ಹೆಣ್ಣು ನೋಡುತ್ತಾರೆ. ಮೊದಲಿಗೆ ಹುಡುಗನ ಕಡೆಯವರೇ ಹೆಣ್ಣನ್ನು ಮದುವೆಯಾಗಲು ಸೂಚಿಸುತ್ತಾರೆ. ತರುವಾಯ ಹುಡುಗಿಯ ಮನೆಯವರಿಗೆ ತಮ್ಮ ಹುಡುಗಿಯನ್ನು ಆ ಹುಡುಗನಿಗೆ ಕೊಡಲು ಇಷ್ಟವಿದ್ದರೆ ಅವರು ಮುಂದಿನ ಮಾತುಕತೆ ಮುಂದುವರೆಯುತ್ತಾರೆ. ಹೆಣ್ಣನ್ನು ನೋಡುವುದಕ್ಕಿಂತ ಮುಂಚೆ ಅವರ ಮನೆತನ ಎಂಥಾದ್ದು ಬೆಡಗು ಯಾವುದು ಎಂದು ತಿಳಿದುಕೊಳ್ಳಲಾಗುವುದು. ನಂತರ ಹೆಣ್ಣನ್ನು ನೋಡಿ ಬಂದ ನಂತರ ಹೆಣ್ಣಿನ ಕಡೆಯವರು ಗಂಡಿನ ಮನೆತನ ನೋಡುವ ಶಾಸ್ತ್ರ ಮಾಡುತ್ತಾರೆ. ಹೆಣ್ಣಿನವರಿಗೆ ಗಂಡಿನ ಮನೆತನ, ಗಂಡಿನವರಿಗೆ ಹೆಣ್ಣಿನ ಮನೆತನ ಗಂಡು ಹೆಣ್ಣು ಪರಸ್ಪರ ಒಪ್ಪಿಗೆಯಾದ ಮೇಲೆ ಮದುವೆ ಮಾತುಕತೆಗಳು ನಡೆಯುತ್ತವೆ.

ಕನ್ಯೆಯನ್ನು ನೋಡಿದ ನಂತರ ಒಪ್ಪಿಗೆಯನ್ನು ಸಾರ್ವಜನಿಕವಾಗಿ ತಿಳಿಯಪಡಿಸುವ ಒಂದು ಸಭೆ ಕಾರ್ಯವೇ ನಿಶ್ಚಿತಾರ್ಥವೆಂದು ಹೇಳುತ್ತಾರೆ. ಈ ಸಮಾರಂಭವು ಸಮಾಜದ

ಹಿರಿಯರ ಸಮ್ಮುಖದಲ್ಲಿ ಗಂಡು ಹೆಣ್ಣು ಒಪ್ಪಿಕೊಂಡಿರುವುದನ್ನು ಕಾರ್ಯಕ್ರಮ ಮಾಡುವುದರ ಮೂಖಾಂತರ ತಿಳಿಯಪಡಿಸುತ್ತಾರೆ. ಕಂಬಳಿಯನ್ನು ಉತ್ತರಾಭಿಮುಖವಾಗಿ (ಗಂಗೆದಿಕ್ಕಿಗೆ) ಹಾಸುತ್ತಾರೆ. ಅದರ ಮೇಲೆ ಅಕ್ಕಿಯನ್ನು ಬೆಲ್ಲ ಐದು ಗುಂಪು ಕನ್ಯೆಯ ಮುಂದೆ ಇಡುತ್ತಾರೆ. ಇದನ್ನು ಮಹಿಳೆಯರು ಮದುವೆಯಾಗುವ ಹೆಣ್ಣಿಗೆ ಮಾಡುತ್ತಾರೆ. ಮನೆ ಹೊರಗಡೆ ಊರಿನ ಕುಲದವರು ಕಂಬಳಿಯನ್ನು ಹಾಸಿ ಅದರ ಮೇಲೆ ಪರಸ್ಪರ ಗಂಡು ಹೆಣ್ಣಿನ ಕಡೆವಯರು ಕುಳಿತುಕೊಂಡು ಮಾತುಕತೆಯಾದ ಮೇಲೆ ಗಂಡಿನ ಕಡೆಯವರು ಹೆಣ್ಣಿನ ಕಡೆಯವರು ಸೇರಿ ಸಮನಾಗಿ ಎಲೆ ಅಡಿಕೆಯನ್ನು ಸಮಾನಾಗಿ ಹಂಚಿಕೊಂಡು ಬಾಯಿಯನ್ನು ಸಿಹಿ ಮಾಡಿಕೊಳ್ಳುವುದರ ಮೂಲಕ ಸರ್ವಸಮ್ಮತಿಯನ್ನು ನೀಡುತ್ತಾರೆ. ಇಲ್ಲಿಯೇ ಮದುವೆ ದಿನವನ್ನು ನಿಶ್ಚಯಿಸುತ್ತಾರೆ. ಕುರುಬ ಸಮುದಾಯದಲ್ಲಿ ಹೆಚ್ಚಾಗಿ ಗಂಡಿನ ಕಡೆಯವರು ಅಧಿಕಾರವನ್ನು ಪಡೆಯುತ್ತಾರೆ. ಹೆಣ್ಣಿನ ಬಂಧುಗಳು ಮಗಳನ್ನು ದಾರೆ ಎರಿಯುವುದು ಮಾತ್ರ ಕರ್ತವ್ಯವಾಗಿದೆ.

ವರದಕ್ಷಿಣೆ

ಬಹುತೇಕ ಕುರುಬರಲ್ಲಿ ಆರ್ಥಿಕವಾಗಿ ಸದೃಢವಾಗಿ ಇರುವುದು ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತಾರೆ ಇವರಲ್ಲಿ ವರದಕ್ಷಿಣೆ ಎಂಬುದು ಕನಿಷ್ಠ ರೂಪಾಯಿ ೨೫,೦೦೦ ರಿಂದ ೧,೨೦,೦೦೦ ಸಾಮಾನ್ಯವಾಗಿ ಪಡೆದುಕೊಳ್ಳುವುದು ಕಂಡುಬರುತ್ತದೆ. ಸಾಮಾನ್ಯವಾಗಿ ಈ ಸಮುದಾಯದಲ್ಲಿ ಶಿಕ್ಷಿತರು ಮತ್ತು ಆರ್ಥಿಕವಾಗಿ ಅನುಕೂಲಸ್ಥರು ಆಗಿದ್ದರೆ ತಮ್ಮ ಸರಿ ಸಮಾನವಾದ ಸ್ಥಿತಿವಂತರಲ್ಲಿಯೇ ವೈವಾಹಿಕ ಸಂಬಂಧಗಳನ್ನು ಏರ್ಪಡಿಸಿಕೊಳ್ಳುವುದರಲ್ಲಿಯೇ ವಿವಾಹ ಸಂಬಂಧಗಳನ್ನು ಬೆಸೆದುಕೊಳ್ಳುವುದು ಸಹಜವಾಗಿವೆ.

ವೀಳ್ಯ ಶಾಸ್ತ್ರ

ಪರಸ್ಪರ ಒಪ್ಪಿಗೆಯಾದ ಮೇಲೆ ಹೆಣ್ಣಿನ ತಂದೆ ತಾಯಿಯರಿಗೆ ಒಪ್ಪಿಗೆಯಾದಲ್ಲಿ ಇಂಥ ದಿವಸ ಬರುವುದಾಗಿ ತಿಳಿಸಿ ಗಂಡನ ಮನೆಯನ್ನು ನೋಡುವುದಕ್ಕೆ ಗುರುಹಿರಿಯರೊಂದಿಗೆ ಹೋಗುತ್ತಾರೆ. "ಗಂಡಿನವರ ಆದರಾತಿಥ್ಯವನ್ನು ಸ್ವೀಕರಿಸಿದ ತರುವಾಯ ಹೆಣ್ಣಿನ ಮನೆಯವರಲ್ಲಿ ಗುರುಹಿರಿಯರ ಸಮ್ಮುಖದಲ್ಲಿ ಕೂಡುಕೊಳ್ಳುವಿಕೆಯ ವಿಚಾರವನ್ನು ಚರ್ಚಿಸಿ ಒಪ್ಪಂದಕ್ಕೆ ಬಂದಮೇಲೆ ಗಂಡು ಹೆಣ್ಣಿನವರು ವೀಳ್ಯವನ್ನು ವಿನಿಯೋಗಿಸಿ, ಗಂಡು ಹೆಣ್ಣಿನ ತಂದೆಯವರು ಸಕ್ಕರೆಯನ್ನು ಬಾಯಿಯಲ್ಲಿ ಹಾಕಿಕೊಳ್ಳವರು ನಂತರ ನೆರೆದವರಿಗೂ ಹಂಚುತ್ತಾರೆ. ಇದಕ್ಕೆ ಸಾಕ್ಷಿವೀಳ್ಯ ಅಥವಾ ನಿಶ್ಚಯ ಕಾರಣವೆಂದು ಕರೆಯುತ್ತಾರೆ. ಮುಂದೆ ಒಂದು ಶುಭದಿನದಂದು ಲಗ್ನವನ್ನು ನಿಶ್ಚಯಗೊಳಿಸಿ ಆಮಂತ್ರಣ ಪತ್ರಿಕೆಯನ್ನು ಮುದ್ರಿಸಿ, ಬಂದು ಭಾಂದವರಿಗೆ ಹಂಚುತ್ತಾರೆ."[೨೮]

ವಿವಾಹ

ಲೈಂಗಿಕ ಕ್ರಿಯೆ, ಸಂತಾನಾಭಿವೃದ್ಧಿ ಹಾಗೂ ಮಕ್ಕಳ ಲಾಲನೆ ಪಾಲನೆ ಪೋಷಣೆಗಾಗಿ ವಿವಾಹ ಅವಶ್ಯಕ. ಪರಂಪರಾಗತ ಪ್ರಿಯರಾದ ಪ್ರಕೃತಿಗೆ ಸಮೀಪವಾದ ಜೀವನದ ರೂಪಿಸಿಕೊಂಡು ಬಂದವರಾದ್ದರಿಂದ ಮದುವೆಯ ವಿಧಿಗಳು ತೀರ ಸಂಪ್ರದಾಯ ಬದ್ಧವಾಗಿವೆ. ಸಾಮಾನ್ಯವಾಗಿ ಕುರುಬರ ಮದುವೆಗಳು ಗಂಡಿನ ಮನೆಯಲ್ಲಿಯೇ ನಡೆಯುವುದು ವಾಡಿಕೆ. ಆದರೆ ಇತ್ತೀಚಿಗೆ ಹೆಣ್ಣಿನ ಮನೆಯಲ್ಲಿಯೂ ಕೆಲವು ಮದುವೆಗಳು ನಡೆಯುತ್ತವೆ. ಮುಂದುವರೆದವರು ಛತ್ರ, ಕಲ್ಯಾಣ ಮಂಟಪದಲ್ಲಿಯೂ ಅಥವಾ ಗಂಡನಿಗೆ ಕಡೆಯವರಿಗೆ ಹೆಣ್ಣಿನವರಿಗೆ ಹತ್ತಿರವಿರುವ ದೇವಸ್ಥಾನದ ಮುಂದೆ ಮದುವೆ ಮಾಡುತ್ತಿರುವುದು ಕಂಡುಬರುತ್ತಿದೆ. ಮದುವೆಯ ಮನೆಗೆ ಸುಣ್ಣ ಬಣ್ಣವನ್ನು ಬಳಿದು ತಳಿರು ತೋರಣಗಳಿಂದ ಅಲಂಕಾರಗೊಳಿಸುತ್ತಾರೆ. ಮದುವೆಗೆ ಮುಂಚೆ ಕುಲದೇವತಾ ಕಾರ್ಯ ಜರುಗುತ್ತದೆ. ತಮ್ಮ ಮನೆಯಲ್ಲಿ ಮದುವೆ ನಿರ್ವಿಘ್ನವಾಗಿ ಜರುಗುವಂತೆ ಗ್ರಾಮದೇವತೆಗಳಿಗೆ ಹಣ್ಣು ಕಾಯಿ ನೀಡುತ್ತಾರೆ. ಹಿಂದಿನ ಕಾಲದಲ್ಲಿ ಮದುವೆಗಳು ಐದು ದಿವಸಗಳ ಕಾಲ ನಡೆಯುತ್ತಿದ್ದವೆಂದು ಹಿರಿಯರು ಹೇಳುತ್ತಾರೆ. ಕೆಲವು ಕಡೆಗಳಲ್ಲಿ ಒಂದರಿಂದ ಒಂಭತ್ತು ದಿನಗಳವರೆಗೆ ನಡೆದಿರುವ ಬಗ್ಗೆ ದೇವತಾಕಾರ್ಯ, ಅರಿಶಿಣ, ಚಪ್ಪರ, ದಾರೆ, ಮರುವಲಿ, ಮಸಿಯೂಟ, ಕೋರೂಟ ಎಂಬುದಾಗಿ ಕುಲಸ್ಥರಿಗೆ ಊಟ ಹಾಕಿದ ಬಗ್ಗೆ ಉಲ್ಲೇಖಗಳು ದೊರೆಯುತ್ತವೆ. ಆದರೆ ಈಗ ಎಲ್ಲಾ ಜನರಂತೆ ಇವರ ವಿವಾಹಗಳು ಒಂದು ದಿನಕ್ಕೆ ಮೊಟಕುಗೊಳಿಸಿರುವುದು ಕಂಡುಬರುತ್ತದೆ.

ಮದುವೆಯ ಹಿಂದಿನ ದಿನವೇ ಗಂಡಿನ ಮನೆಯವರು ವರನ ಸೋದರ ಮಾವ ಅಥವಾ ಸಹೋದರಿಯ ಗಂಡನನ್ನು ಹೆಣ್ಣನ್ನು ಕರೆಯುವುದಕ್ಕೆ ಕಳಿಸಿಕೊಡುತ್ತಾರೆ. ಅವನ ಜೊತೆಗೆ ಅಕ್ಕಿ ಗಂಟನ್ನು ಕೊಟ್ಟಿರುತ್ತಾರೆ. ಇವು ಐದು ಸೇರು ಅಕ್ಕಿಯ ಎರಡು ಗಂಟುಗಳಿರುತ್ತವೆ. ಇದರಲ್ಲಿ ಕೊಬ್ಬರಿ ಬಟ್ಟಲು ಐದುರೂಪಾಯಿ ನಾಣ್ಯವನ್ನು ಇಟ್ಟು ಕುಲಸ್ವಾಮಿ ಕಟ್ಟಿಸಿರುತ್ತಾರೆ. ಬೀಗರು ಅದನ್ನು ತೆಗೆದುಕೊಂಡು ದೇವರ ಜಗುಲಿಯ ಮೇಲೆ ಇಡುತ್ತಾರೆ. ವಧು ವರರಿಗೆ ಅರಿಶಿಣವನ್ನು ಹಚ್ಚುವ ಕಾರ್ಯಕ್ರಮ ನಡೆಯುತ್ತದೆ. ನಂತರ ಮೂರನೆಯ ದಿವಸ ಬೆಳಿಗ್ಗೆಯೇ ಹೆಣ್ಣಿನ ಕಡೆಯ ಬೀಗರು ಬಂದು ಊರ ಮುಂದುಗಡೆಯ ದೇವಸ್ಥಾನದಲ್ಲಿ ಬೀಡುಬಿಟ್ಟಿರುತ್ತಾರೆ. ಗಂಡಿನವರು ವಾಲಗದೊಂದಿಗೆ ಬಾರಿಸುತ್ತಾ ಕಂಚು, ಕಳಸವನ್ನು ತೆಗೆದುಕೊಂಡು ಬೀಗರನ್ನು ಎದುರುಗೊಳ್ಳುವುದಕ್ಕೆ ಬರುತ್ತಾರೆ. ಬೀಗರನ್ನು ಎದುರುಗೊಳ್ಳುವುದು ತುಂಬ ವಿಶಿಷ್ಟವಾದ ಆಚರಣೆ ಗುಡಿಯ ಮುಂದುಗಡೆಯಲ್ಲಿ ಎದುರು ಬದುರಾಗಿ ಎರಡು ಕಂಬಳಿಗಳನ್ನು ಹಾಸಿರುತ್ತಾರೆ. ಆದರ ಮೇಲೆ ಒಂದು ಕಡೆ ಗಂಡಿನ ಕಡೆಯವರು ಅವರಿಗೆ ಎದುರಿನ ಕಂಬಳಿಯ ಮೇಲೆ

ಹೆಣ್ಣಿನ ಕಡೆಯವರು ಸಾಲಾಗಿ ಐದೈದು ಜನ ಕುಳಿತುಕೊಂಡಿರುತ್ತಾರೆ. ಮೊದಲು ಗಂಡಿನ ಕಡೆಯವರು ಹೆಣ್ಣಿನ ಬೀಗರ ಹಣೆಗೆ ಕುಂಕುಮವನ್ನು ಹಚ್ಚಿ ಬಾಯಿಯಲ್ಲಿ ಸಕ್ಕರೆಯನ್ನು ಹಾಕಿ ಎಲೆ ಅಡಿಕೆಯನ್ನು ಕೊಡುತ್ತಾರೆ. ನಂತರ ಹೆಣ್ಣಿನ ಕಡೆಯವರು ಗಂಡಿನವರಿಗೆ ಹಣೆಗೆ ಕುಂಕುಮವನ್ನು ಹಚ್ಚಿ ಬಾಯಿಯಲ್ಲಿ ಸಕ್ಕರೆಯನ್ನು ಹಾಕುತ್ತಾರೆ. ಇದಾದ ಮೇಲೆ ಎರಡು ಕಡೆಯವರು ಎದ್ದು ನಿಂತು ಹಸ್ತಲಾಘವನ್ನು ಮಾಡಿ ಆತ್ಮೀಯತೆಯಿಂದ ಬರಮಾಡಿಕೊಳ್ಳುತ್ತಾರೆ. ನಂತರ ಉಪಹಾರ ವ್ಯವಸ್ಥೆಯಾದ ನಂತರ ಮದುವೆಯ ಶಾಸ್ತ್ರಗಳು ಆರಂಭವಾಗುತ್ತದೆ.

ಸುರಗಿ ಸುತ್ತುವ ಶಾಸ್ತ್ರ

ಮದುವೆಯ ಮನೆಯ ಮುಂದುಗಡೆ ವಿಸ್ತಾರವಾಗಿ ಹಾಕಿರುವ ಹಂದರದಲ್ಲಿ ಎರಡು ಉದ್ದವಾದ ಹಲಗೆಗಳನ್ನು ಶಾವಿಗೆ ಮಣೆಗಳನ್ನು ಹಾಕಿರುತ್ತಾರೆ. ಅದರ ಸುತ್ತಲೂ ಚೌಕಾಕಾರವಾಗಿ ತುಂಬಿದ ನಾಲ್ಕು ತಂಬಿಗೆಗಳನ್ನು ಮುಂದಿನ ಭಾಗದಲ್ಲಿ ಇಟ್ಟು ನಡುವೆ ಒಂದು ಕಳಸ ತಂಬಿಗೆಯನ್ನು ಇಟ್ಟಿರುತ್ತಾರೆ. ಮಧ್ಯದಲ್ಲಿ ವಧು-ವರನನ್ನು ಕೂಡಿಸಿ ನೀರು ಹಾಕುತ್ತಾರೆ. ನಂತರ ವಧು-ವರರ ಕೈಗೆ ವೀಳ್ಯದೆಲೆ ಮತ್ತು ಅಡಕೆಯಿಂದ ಕಂಕಣ ಕಟ್ಟುತ್ತಾರೆ. ಆ ನಂತರ ಸುರಗಿ ಸುತ್ತಿದ ನೂಲನ್ನು ಒಂದೊಂದಾಗಿ ಎತ್ತಿ ಮಡಿಸಿ ಅದಕ್ಕೆ ಅರಿಶಿಣವನ್ನು ಹಚ್ಚಿ ಅದಕ್ಕೆ ಅರಿಶಿಣಬೊಟ್ಟು ಮತ್ತು ಎಲೆಯನ್ನು ಕಟ್ಟಿ ವಧುವರರ ಬಲಗೈಗೆ ಕಟ್ಟುತ್ತಾರೆ. ಈ ಕಂಕಣವನ್ನು ವಧುವರನ ಹಿಂದೆ ಕುಳಿತವರಿಗೂ ಮತ್ತು ಕಳಸವನ್ನು ಹಿಡಿದಿರುವ ಮುತ್ತೈದೆಗೂ ಕಟ್ಟುತ್ತಾರೆ.

ಅಷ್ಟೊತ್ತಿಗಾಗಲೇ ದೇವರ ಜಗುಲಿಯ ಮುಂದುಗಡೆ ಅಥವಾ ಹಂದರದಲ್ಲಿ ಕರಿಯ ಕಂಬಳಿಯ ಮೇಲೆ ಕುಲಸ್ವಾಮಿಯಾದ ಒಡೆಯರು ಇಲ್ಲವೆ ಜಂಗಮ ಸ್ವಾಮಿಯ ಹಸೆಯನ್ನು ಹಾಕಿ ವಧುವಿಗೆ ತಾಳಿ ಕಟ್ಟುವ ವ್ಯವಸ್ಥೆಯನ್ನು ಮಾಡುತ್ತಾರೆ. ನಂತರ ಕೊಬ್ಬರಿ ಬಟ್ಟಲಿನಲ್ಲಿ ಇಟ್ಟಿರುವ ತಾಳಿಯನ್ನು ಪೂಜಿಸಿ ಊದಿನ ಕಡ್ಡಿಯನ್ನು ಬೆಳಗಿ ಗುರು ಹಿರಿಯರು ಮುಟ್ಟಿ ನಮಸ್ಕರಿಸಿದ ನಂತರ ವರನ ಕೈಗೆ ವಧುವಿಗೆ ತಾಳಿಯನ್ನು ಕಟ್ಟಲು ಹೇಳುತ್ತಾರೆ. ತಾಳಿಕಟ್ಟುವ ಮಂತ್ರವು ಮುಗಿಯುತ್ತಿದ್ದಂತೆ ಅಲ್ಲಿ ನೆರೆದಿದ ಜನ ಸಮೂಹವೆಲ್ಲ ನೂತನ ದಂಪತಿಗಳ ಮೇಲೆ ಅಕ್ಷತೆಯನ್ನು ಹಾಕಿ ಶುಭಕೋರುತ್ತಾರೆ. ಆ ಮೇಲೆ ಜೋಡಿಯಾಗಿ ಕುಳಿತ ವಧುವರರು ಹೊದ್ದುಕೊಂಡಿರುವ ವಸ್ತ್ರಗಳ ಅಂಚನ್ನು ಕೂಡಿಸಿ ಗಂಟು ಹಾಕುತ್ತಾರೆ. ಅವರು ವಿವಾಹದ ಬಂಧನಕ್ಕೆ ಒಳಗಾದರು ಎಂಬುದರ ಸಂಕೇತವಿದ್ದು ಅಲ್ಲಿಗೆ ವಿವಾಹ ಮುಖ್ಯಶಾಸ್ತ್ರಗಳು ಮುಗಿದ ನಂತರ ನೆರೆದಿರುವ ಜನರೆಲ್ಲರಿಗೂ ಸಿಹಿ ಊಟವಿರುತ್ತದೆ. ಒಂದು ಶುಭ ದಿನವನ್ನು ನೋಡಿಕೊಂಡು ನವ ದಂಪತಿಗಳ ಪ್ರಥಮ ಸಮಾಗಮವನ್ನು ಏರ್ಪಡಿಸುತ್ತಾರೆ.

ವಿಧವಾ ವಿವಾಹ

ಕುರುಬರಲ್ಲಿ ವಿಧವಾ ವಿವಾಹಕ್ಕೆ ಅವಕಾಶವಿದೆಯಾದರೂ ಅವರ ವಿಧಿ-ವಿಧಾನಗಳು ವಾಡಿಕೆಯ ಮದುವೆಗಿಂತ ತುಂಬಾ ಭಿನ್ನವಾಗಿ ಅಂದರೆ ವಿಧವಾ ವಿವಾಹಕ್ಕೆ ಬಯಸುವ ಗಂಡು ಮತ್ತು ಹೆಣ್ಣು ಗೌಡ ಅಥವಾ ಹಿರಿಯರ ಸಮ್ಮುಖದಲ್ಲಿ ಮಾಡಿಕೊಳ್ಳುತ್ತಾರೆ. ಅದರಲ್ಲಿ ಮುತ್ತೈದೆ ಹೆಣ್ಣು ಮಕ್ಕಳ್ಯಾರು ಪಾಲ್ಗೊಳ್ಳುವುದಿಲ್ಲ. ವಿಧವಾ ವಿವಾಹಗಳು ಸಾಮಾನ್ಯವಾಗಿ ಸಂಜೆ ಜರುಗುತ್ತವೆ. ವಿವಾಹವಾಗಲಿರುವ ಗಂಡು ತಂದುಕೊಟ್ಟ ಹೊಸ ಸೀರೆ ಕುಪ್ಪಸಗಳನ್ನು ತೊಟ್ಟುಕೊಂಡು ಅಲಂಕೃತಳಾದ ಹೆಣ್ಣಿಗೆ ಗಂಡನಾಗಲಿರುವವನು ಪರಿಮಿತ ಸಂಖ್ಯೆಯ ಬಂಧುಗಳ ಸಮ್ಮುಖದಲ್ಲಿ ತಾಳಿಯನ್ನು ಕಟ್ಟುತ್ತಾನೆ. ಅಂದು ರಾತ್ರಿಯೇ ವಿಧವಾ ವಿವಾಹಕ್ಕೆ ಒಳಗಾದ ದಂಪತಿಗಳ ಪ್ರಥಮ ಸಮಾಗಮ ನಡೆಯುತ್ತದೆ.

ಸೀಮಂತ ಕಾರ್ಯ

ಸೀಮಂತ ಕಾರ್ಯ ಇತರ ಸಮುದಾಯದವರಂತೆ ಕುರುಬರು ಆಚರಿಸಿಕೊಂಡು ಬಂದಿರುವ ಆಚರಣೆಯಾಗಿದೆ. ಹೆಣ್ಣು ಮಗಳು ಚೊಚ್ಚಲ ಗರ್ಭಿಣಿಯಾದಾಗ ಏಳನೆಯ ಅಥವಾ ಒಂಭತ್ತನೆಯ ತಿಂಗಳಲ್ಲಿ ಒಂದು ಶುಭ ದಿನವನ್ನು ನೋಡಿಕೊಂಡು ಸೀಮಂತ ಕಾರ್ಯವನ್ನು ತಪ್ಪದೇ ಆಚರಿಸುತ್ತಾರೆ. ಸೀಮಂತ ಕಾರ್ಯಕ್ಕೆ ನಿಗದಿಪಡಿಸಿದ ಹಿಂದಿನ ದಿನವೇ ಗರ್ಭವತಿಯಾದ ಹೆಣ್ಣಿನ ತಂದೆ ತಾಯಿಯರು ತಮ್ಮ ಬಂಧು ಬಾಂಧವರನ್ನು ಕರೆದುಕೊಂಡು ಗಂಡಿನ ಮನೆಗೆ ಬರುತ್ತಾರೆ. ಸೀಮಂತ ಕಾರ್ಯಕ್ಕೆ ಬೇಕಾಗುವ ಎಲ್ಲಾ ಅಡುಗೆಯ ಪದಾರ್ಥಗಳನ್ನು ಅಳಿಯ ಮತ್ತು ಮಗಳಿಗೆ ಆಯೇರಿ ಅಥವಾ ಮುಯ್ಯಿ ಬಟ್ಟೆಗಳನ್ನು ತೆಗೆದುಕೊಂಡು ಬಂದಿರುತ್ತಾರೆ. ಅಂದು ರಾತ್ರಿಯೇ ಹೆಣ್ಣಿನ ತವರು ಮನೆಯವರು ಮಾಡಿಕೊಂಡು ಬಂದಿರುವ ಬಯಕೆಯ ಬುತ್ತಿಯನ್ನು ಓಣಿಯಲ್ಲಿರುವ ಬಂಧು ಬಾಂಧವರಿಗೆ ಹಂಚುತ್ತಾರೆ. ಇದಕ್ಕೆ ಬುತ್ತಿ ಬೀರುವುದು ಎಂದು ಕರೆಯುವರು. ಮರುದಿವಸ ಮುಂಜಾನೆ ತರತರದ ಭಕ್ಷ್ಯ ಭೋಜನವನ್ನು ಮಾಡಿ ಬಂಧು ಬಳಗದವರನ್ನು ಕರೆದು ಊಟ ಮಾಡಿಸುತ್ತಾರೆ. ಮರುದಿವಸ ಗರ್ಭವತಿಯಾದ ಹೆಣ್ಣು ಮಗಳು ದೇವಸ್ಥಾನಕ್ಕೆ ಹೋಗಿ ನಮಸ್ಕಾರ ಮಾಡಿಕೊಂಡು ಬಂದ ಮೇಲೆ ಉಡಿಯಕ್ಕಿಯನ್ನು ಹಾಕಿ ಚೊಚ್ಚಲ ಹೆರಿಗೆಗೆ ತವರು ಮನೆಗೆ ಕಳುಹಿಸುತ್ತಾರೆ.

ಜನನ

ಸಾಮಾನ್ಯವಾಗಿ ಪ್ರಥಮ ದ್ವಿತೀಯ ಹೆರಿಗೆ ಈ ಸಮುದಾಯದಲ್ಲಿ ಹೆಣ್ಣಿನ ತವರು ಮನೆಯಲ್ಲಿಯೇ ಆಗಬೇಕು. ಹೆರಿಗೆಯಾದ ದಿನದಿಂದ ಐದು ದಿನಗಳವರೆಗೆ ವಿಶೇಷ ದಿನಗಳೆಂದು ಪರಿಗಣಿಸಲಾಗುತ್ತದೆ. ಈ ಅವಧಿಯಲ್ಲಿ ದುಷ್ಟಶಕ್ತಿಗಳು ಕೂಸು ಹಾಗೂ ಬಾಣಂತಿಗೆ ಯಾವುದೇ ರೀತಿಯ ತೊಂದರೆ ಕೊಡಬಾರದೆಂದು ಸುರಕ್ಷಿತವಾಗಿ

ನೋಡಿಕೊಳ್ಳುತ್ತಾರೆ. ಹೆರಿಗೆಯಾದ ಐದು ಅಥವಾ ಹನ್ನೊಂದನೇ ದಿನಕ್ಕೆ ತೊಟ್ಟಿಲಲ್ಲಿ ಹಾಕಿ ಕೂಸಿಗೆ ನಾಮಕರಣ ಮಾಡುತ್ತಾರೆ.

ಮೈ ನೆರೆಯುವುದು

ಪ್ರಕೃತಿದತ್ತವಾಗಿ ಹೆಣ್ಣು ಮಕ್ಕಳು ವಯಸ್ಸಿಗೆ ಬಂದಾಗ ಮೈ ನೆರೆಯುವುದು ಒಂದು ಸಹಜ ಸ್ವಾಭಾವಿಕ ಕ್ರಿಯೆ. ಇದಕ್ಕೆ ಋತುಮತಿಯಾಗುವುದು, ದೊಡ್ಡವಳಾಗುವುದು, ಪ್ರಾದೇಶಿಕವಾಗಿ ಬೇರೆ ಬೇರೆಯಾಗಿ ಕರೆಯುತ್ತಾರೆ. ಈ ಅವಧಿಯಲ್ಲಿ ಐದರಿಂದ ಹತ್ತು ದಿನಗಳವರೆಗೆ ಮೈಲಿಗೆ ಎಂದು ಆಚರಿಸುತ್ತಾರೆ. ಪ್ರತಿ ದಿವಸ ಮೈ ನೆರೆದವಳಿಗೆ ತಲೆಗೆ ಎಣ್ಣೆ ಹಚ್ಚಿ ಮೈಗೆ ಅರಿಶಿಣ ಹಚ್ಚಿ ಬಿಸಿನೀರಿನಿಂದ ಸ್ನಾನವನ್ನು ಮಾಡಿಸಿ, ಹಸಿರು ಸೀರೆ ಕುಪ್ಪಸವನ್ನು ತೊಡಿಸಿ ಹೂವನ್ನು ಮುಡಿಸಿ ಸೋಬಾನೆ ಹಾಡುಗಳನ್ನು ಹಾಡಿ ಆರತಿಯನ್ನು ಬೆಳಗುತ್ತಾರೆ. ಅದೇ ದಿನ ಬಂಧುಗಳಿಗೆ ಸಿಹಿ ಊಟವನ್ನು ಮಾಡಿಸುತ್ತಾರೆ.

ಮರಣ

ಹುಟ್ಟು ಬದುಕಿನ ಪ್ರಾರಂಭವಾದರೆ, ಸಾವು ಬದುಕಿನ ಕೊನೆ ಘಟ್ಟ.. ಹುಟ್ಟು ಮತ್ತು ಸಾವು ಇಲ್ಲದೇ ಇರುವ ಮನೆಯೇ ಇಲ್ಲ ಎಂಬುದು ಸಾಮಾನ್ಯ ಮಾತು. ಕುರುಬರು ಸಾಮಾನ್ಯವಾಗಿ ಸತ್ತ ವ್ಯಕ್ತಿಯನ್ನು ಸರಿಯಾದ ರೀತಿಯಲ್ಲಿ ಶವ ಸಂಸ್ಕಾರ ಮಾಡಲಿಲ್ಲ ಎಂದರೆ ದೆವ್ವ ಭೂತಗಳ ಬಗೆಗೆ ಅಂಜಿಕೆಯಿಂದ ಸತ್ತವರನ್ನು ಸಾಮಾನ್ಯವಾಗಿ ಹೂಳುತ್ತಾರೆ. ಮರಣ ಸಂಭವಿಸಿದಾಗ ಹತ್ತಿರದಲ್ಲಿದ್ದ ಕುಲಸ್ಥರೆಲ್ಲ ಸೇರಿ ಬಿಸಿ ನೀರಿನಿಂದ ಹೆಣದ ಮೈಯನ್ನು ತೊಳೆದು ಹೊಸಬಟ್ಟೆಯನ್ನು ತೊಡಿಸಿ ಗೂಟಕ್ಕೆ ಬಡಿಯುತ್ತಾರೆ. ಆ ನಂತರ ಬಂಧು ಬಳಗಕ್ಕೆಲ್ಲ ಹೇಳಿಕಳಿಸುತ್ತಾರೆ. ಬಂಧು ಬಳಗದವರು ಬಂದು ಅಂತಿಮ ಸಂಸ್ಕಾರದಲ್ಲಿ ಪಾಲ್ಗೊಂಡ ನಂತರ ಕೆಲವರು ಬಾವಿ ಕೆರೆಗಳಲ್ಲಿ ಸ್ನಾನ ಮಾಡಿದರೆ ಇನ್ನು ಕೆಲವರು ಮನೆಯ ಹೊರಗೆ ಸ್ನಾನ ಮಾಡಿ ಮನೆಗೆ ಹೋಗುತ್ತಾರೆ.

ಧಾರ್ಮಿಕ ಆಚರಣೆಗಳು

ಕುರುಬರಿಗೆ ಅವರದೇ ಆದ ಸಂಸ್ಕೃತಿಯಿದೆ. ಇದರಲ್ಲಿ ಅವರ ಧಾರ್ಮಿಕ ವಿಚಾರವೂ ಒಂದು ಶೈವ ಸಂಪ್ರದಾಯಕ್ಕೆ ಸೇರಿದೆ. ಕುರುಬರ ಧಾರ್ಮಿಕ ಆಚರಣೆಗಳು ತುಂಬ ಕುತೂಹಲಕಾರಿಯಾದವುಗಳು ಮತ್ತು ವೈಶಿಷ್ಟ್ಯ ಪೂರ್ಣವಾದವುಗಳಾಗಿವೆ. ಸ್ವಭಾವತಃ ಮುಗ್ದರಾದ ಕುರುಬರು ದೇವರು ಎಂಬ ಶಬ್ದ ಕಿವಿಗೆ ಬಿದ್ದರೆ ಸಾಕು ಕೂಡಲೆ ನಂಬಿ ನಡೆಯುವವರು. ಮಹಾದೈವ ಭಕ್ತರು ಕುರುಬರು ಎಂದು ತಿಳಿಯುತ್ತದೆ. ಅಪನಂಬಿಕೆಗೆ ಅಲ್ಲಿ ಅವಕಾಶವೇ ಇಲ್ಲ. ಬೀರದೇವ, ಮಾಳಿಂಗರಾಯ, ಕರಿಸಿದ್ದ, ರೇವಣಸಿದ್ದ, ಅಮೋಘಸಿದ್ದ, ಮೈಲಾರಲಿಂಗ ಸಜ್ಜಲಗುಡ್ಡದ ಶರಣಮ್ಮ, ಇಟ್ಟಗಿ ಭೀಮವ್ವ ಮುಂತಾದ

ದೇವತೆಗಳ ಆರಾಧನೆ ಮಾಡುವುದರಿಂದ ಇವರಿಗೆ ಪೂಜಾರಿಗಳು ಎಂಬ ಅನ್ವರ್ಥಕ ನಾಮವು ಈ ಸಮುದಾಯಕ್ಕೆ ರೂಢಿಯಾಗಿದೆ ಎಂಬ ಮಾತು ಸತ್ಯ ಸಂಗತಿಯಾಗಿದೆ. ಏಕೆಂದರೆ ಉತ್ತರ ಕರ್ನಾಟಕ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಕುರುಬರನ್ನು ಪೂಜಾರಿಗಳೆಂದೇ ಕರೆಯುತ್ತಾರೆ. ಹೀಗೆ ಸರಳ ಬದುಕಿನ ದೈವಭಕ್ತರೂ ಸತ್ಯಶುದ್ಧರು, ಮುಗ್ಧ ಹೃದಯದವರೂ ಆದ ಇವರು ತಮ್ಮ ಸರಳವಾದ ನಡತೆಗಳಿಂದ ಇತರೆ ಸಮುದಾಯದವರಿಗೆ ಮಾದರಿಯಾಗಿದ್ದಾರೆ. ಪ್ರತಿಯೊಂದು ಶುಭಕಾರ್ಯಗಳಿಗೆ ಕುರುಬರೇ ಮೊದಲು ಇರಬೇಕಾಗುತ್ತದೆ. ಉದಾಹರಣೆಗೆ ಯುಗಾದಿ ಪಾಡ್ಯಕ್ಕೆ ಕುರುಬನ ಕುಂಟಿ ಊಳಲು ಮುಂದಾದರೆ ಬೆಳೆ ಸಮೃದ್ಧಿ ವ್ಯವಹಾರದಲ್ಲಿ ಕುರುಬನ ಬೋಣಿಗೆಯಾದರೆ ವ್ಯಾಪಾರ ಲಾಭದಾಯಕ. ಹೀಗೆ ಸಮಾಜದಲ್ಲಿ ಕುರುಬರಿಗೆ ಉನ್ನತ ಸ್ಥಾನ ಕಲ್ಪಿಸಿಕೊಟ್ಟಿದನ್ನು ಇಂದು ಕಾಣಬಹುದಾಗಿದೆ.

ಬೀರದೇವರ ಆಚರಣೆಗಳು

ಪ್ರತಿಯೊಂದು ಸಮುದಾಯದವರು ತಮ್ಮದೇ ಆದ ದೇವತೆಯೊಂದನ್ನು ರೂಪಿಸಿಕೊಂಡು ಕುಲದೇವತೆ ಎಂದು ಕರೆದು ಆರಾಧಿಸಿಕೊಂಡು ಬಂದಿರುವುದನ್ನು ಕಾಣುತ್ತೇವೆ. ಇದಕ್ಕೆ ಕರ್ನಾಟಕದ ಹಲವಾರು ಸಮುದಾಯಗಳಲ್ಲಿ ಒಂದಾದ ಕುರುಬ ಸಮುದಾಯವು ಹೊರತಾಗಿಲ್ಲ. ಬೀರಪ್ಪನನ್ನು ತಮ್ಮ ಕುಲದೈವವನ್ನಾಗಿ ಮಾಡಿಕೊಂಡು ಅತ್ಯಂತ ಶ್ರದ್ಧೆ, ಭಕ್ತಿಗಳಿಂದ ಹಿಂದಿನ ಕಾಲದಿಂದಲೂ ಆರಾಧಿಸಿಕೊಂಡು ಬಂದಿದ್ದಾರೆ. ಬೀರಲಿಂಗೇಶ್ವರನನ್ನು, ಪೂಜಿಸುವ ಏಕೈಕ ಸಮುದಾಯವೆಂದರೆ ಕುರುಬ ಸಮುದಾಯವಾಗಿದೆ. ಈ ಕುಲದವರನ್ನು ಬಿಟ್ಟು ಬೇರೆ ಯಾರು ಯಾವ ಸಮುದಾಯದವರು ಪೂಜಿಸುವುದು ಕಂಡುಬರುವುದಿಲ್ಲ. ಕಂಡುಬಂದರು ಅತಿ ಕಡಿಮೆ ಎಂದು ಹೇಳಬಹುದು. ಬೀರಪ್ಪ, ಬೀರಲಿಂಗೇಶ್ವರ, ಬೀರೇಶ್ವರ, ಕರಿಸಿದ್ದೇಶ್ವರ, ಶಿವಸಿದ್ದ, ಬೀರೇಶ, ಬೀರೇದೇವರು ಎಂದು ಮುಂತಾಗಿ ಕರೆಯುತ್ತಿರುವುದನ್ನು ಕಾಣುತ್ತೇವೆ. ಕುರುಬರ ಆರಾದ್ಯ ದೈವವಾದ ಬೀರಪ್ಪದೇವರ ಗುಡಿಗಳು ಕುರುಬರ ನೆಲೆಗಳಲ್ಲಿ ಇರುವುದನ್ನು ಸಾಮಾನ್ಯವಾಗಿ ಕಾಣಬಹುದಾಗಿದೆ. ಗುಡಿಗಳು ಇಲ್ಲವೇ ಚಿಕ್ಕದಾದ ಕಟ್ಟೆಯಾಕಾರದ ಗುಡಿಗಳು ಇವೆ.

"ಬೀರದೇವರು ಯಾರು? ಆತನನ್ನು ಕುರುಬರು ಕುಲದೇವತೆಯನ್ನಾಗಿ ಮಾಡಿಕೊಂಡಿರುವ ಬಗ್ಗೆ ವಿವರಣೆಯನ್ನು ನೀಡುವ ಕತೆಗಳು ಹಾಲುಮತ ಪುರಾಣ, ಡೊಳ್ಳಿನ ಹಾಡುಗಳಲ್ಲಿ ಪ್ರಚಲಿತದಲ್ಲಿರುವ ಅನೇಕ ಕಥೆ ಐತಿಹ್ಯಗಳನ್ನು ಕಾಣಬಹುದು. ಹಾಲುಮತದವರೆಂದರೆ ಬೀರದೇವರು, ಬೀರದೇವರೆಂದರೆ ಹಾಲುಮತದವರು ಎಂಬ ನುಡಿಗಟ್ಟಿಗೆ ಬೀರೇಶ್ವರನ ಪ್ರಭಾವ ಪ್ರೇರಣೆ ಈ ಸಮುದಾಯದ ಮೇಲೆ ಆಗಿದೆ. ಬೀರದೇವರ ಪಲ್ಲಕ್ಕಿ ಉತ್ಸವ ಮತ್ತು ಜಾತ್ರೆಗಳು ವಿಶೇಷವಾಗಿ ದೀಪಾವಳಿ, ಮಹಾನವಮಿ

ಮಹಾಶಿವರಾತ್ರಿ, ಯುಗಾದಿ ಸಂದರ್ಭದಲ್ಲಿ ಏರ್ಪಾಡಾಗಿರುತ್ತದೆ. ದೀಪಾವಳಿ ಮತ್ತು ಯುಗಾದಿಯ ಪಾಡ್ಯದಂದು ಬೀರದೇವರ ಪಲ್ಲಕ್ಕಿಗಳು ಹಿರಿಹೊಳಿಯ ಸ್ನಾನಕ್ಕೆ ಹೋಗುವುದು ಸಾಮಾನ್ಯವಾಗಿ ಉತ್ತರ ಕರ್ನಾಟಕದಲ್ಲಿ ಕಂಡುಬರುತ್ತವೆ. ಹಿರಿಹೊಳಿಯ ಸ್ನಾನವನ್ನು ಮಾಡಿಸಿ, ವಿಶೇಷ ಪೂಜೆಯನ್ನು ಮಾಡಿಸಿಕೊಂಡು ದೇವರನ್ನುಪಲ್ಲಕ್ಕಿಯಲ್ಲಿ ಇಟ್ಟುಕೊಂಡು ಕಲಾ ತಂಡದೊಂದಿಗೆ ಬೀದಿಗಳಲ್ಲಿ ಮೆರವಣಿಗೆಯನ್ನು ಮಾಡುತ್ತಾ ಮರಳಿ ದೇವಸ್ಥಾನಕ್ಕೆ ಬರುತ್ತಾರೆ. ಇದೇ ಸಂದರ್ಭದಲ್ಲಿ ದೇವರ ಭವಿಷ್ಯವಾಣಿ ಕೇಳುವುದು ಸಾಮಾನ್ಯವಾಗಿ ರೈತಾಪಿ ಜನರ ನಂಬಿಕೆಯಾಗಿದೆ. ಇಂಥ ಮಳೆ ಬೆಳೆಯನ್ನು ಕುರಿತು ಹೇಳುವ ಹೇಳಿಕೆಗಳಿಂದ ರೈತಾಪಿ ಜನರ ಬದುಕಿಗೆ ಭರವಸೆಯನ್ನು ಪಡೆಯುತ್ತಾರೆ."[೨೯]

ಹುಲ್ಲಿಜಂತಿ ಮಾಳಿಂಗರಾಯ

"ಕುರುಬರಿಂದ ಪೂಜೆಗೊಳ್ಳುವ ದೇವರುಗಳಲ್ಲಿ ಹುಲ್ಲಿಜಂತಿ ಮಾಳಿಂಗರಾಯ ದೇವರ ಬಗ್ಗೆ ಇವರಿಂದ ಪೂಜಿಸಲ್ಪಡುವ ವೀರಭದ್ರನಾಗಲಿ, ಮಾಳಿಂಗರಾಯನ ಸರಿಯಾದ ಸ್ಪಷ್ಟವಾದ ದಾಖಲೆಗಳು ಇಲ್ಲ, ಸಂಶೋಧನ ಗ್ರಂಥಗಳು ಲಭ್ಯವಿಲ್ಲ. ಆದರೆ ದೇವತೆಗಳ ಬಗ್ಗೆ ಕಟ್ಟಿ ಹಾಡಿದ ಜಾನಪದ, ಪೌರಾಣಿಕ ಹಿನ್ನೆಲೆಯನ್ನು ಕಾಣಬಹುದಾಗಿದೆ. ಕುರುಬರ ಡೊಳ್ಳಿನ ಹಾಡುಗಳಲ್ಲಿ ಅವರ ಸಮಗ್ರ ಜೀವನವೇ ತಿಳಿಸಲ್ಪಡುತ್ತದೆ. ಅಜ್ಞಾನದಿಂದ ಶಿಕ್ಷಣದಿಂದ ವಂಚಿತರಾಗಿ ಬೆಳೆದುಬಂದು ತಮ್ಮ ತಮ್ಮ ದೇವರ ಪೌರಾಣಿಕ ಚರಿತ್ರೆಯನ್ನು ಡೊಳ್ಳಿನ ಪದಗಳ ರೂಪದಲ್ಲಿ ಉಳಿಸಿ ಬೆಳೆಸಿಕೊಂಡು ಬಂದಿರುವುದು ಶ್ಲಾಘನೀಯವಾಗಿದೆ. ಕುರುಬ ಸಮುದಾಯದ ಇನ್ನೊಬ್ಬ ದೇವ ಮಾಳಿಂಗರಾಯನ ಪೌರಾಣಿಕ ಹಿನ್ನೆಲೆ ಸ್ಪಷ್ಟವಾಗಿ ಸಂಗ್ರಹಿಸುವುದು ಕಷ್ಟವಾದರು, ಮಹಾರಾಷ್ಟ್ರ ರಾಜ್ಯದ ಸೊಲ್ಲಾಪುರ ಜಿಲ್ಲೆಯ ಮಂಗಳವಾಡೆ ತಾಲೂಕಿನ ಹುಲಿಜಂತಿಯ ಪೂಜ್ಯರಾದ ಅಡಿವೆಪ್ಪ ಮಾಳಪ್ಪ ಸೋಮುತ್ತೆ ಬರೆದ ಹಾಲುಮತ ಪುರಾಣ ಮಹತ್ವದ ವಿಷಯವಾಗಿದೆ. ಕರ್ನಾಟಕ ಮಹಾರಾಷ್ಟ್ರದಲ್ಲಿ ಅತಿ ಹೆಚ್ಚು ಕುರುಬರು ಆರಾಧಿಸುವ ದೈವ ಎಂದು, ಪ್ರಸಿದ್ಧಿಯನ್ನು ಹೊಂದಿದ ದೇವರು ಎಂದು ತಿಳಿದುಬರುತ್ತಿದೆ."[೩೦]

ರೇವಣಸಿದ್ದೇಶ್ವರ

ಹಾಲುಮಮತ ಸಮುದಾಯಕ್ಕೆ ಸಂಬಂಧಿಸಿದ ಪುರಾಣ ಕೃತಿಗಳು ನಮಗೆ ಸ್ವತಂತ್ರವಾಗಿ ಮಾಹಿತಿ ಲಭ್ಯವಾಗುವುದು ತುಂಬಾ ಕಷ್ಟ. ಅವೆಲ್ಲವು ಈ ಸಮುದಾಯದ ಸಂಸ್ಕೃತಿಯ ಪ್ರತೀಕವೆಂಬಂತೆ ಡೊಳ್ಳಿನ ಹಾಡುಗಳಲ್ಲಿ ಅನೇಕ ಮಾಹಿತಿಗಳು ದೊರಕುತ್ತವೆ. ಹಾಲುಮತ ಸಮುದಾಯದ ಮೂಲ ಪುರುಷ ಎಂದು ಕರೆಯಿಸಿಕೊಳ್ಳುತ್ತಿರುವ, ಶ್ರೀ ರೇವಣ ಸಿದ್ದೇಶ್ವರ ಲೀಲಾ ಸಂಯುಕ್ತ ಹಾಲು ಮತ್ತೋಜಕ ಪುರಾಣಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಿದಂತೆ

ಕಾಣುತ್ತದೆ. ಇದರಿಂದ ತಿಳಿದುಬರುವ ಸಂಗತಿಯೇನೆಂದರೆ ಕುರುಬರು ಮೂಲದಲ್ಲಿ ಶೈವ ಮತಾವಲಂಬಿಗಳಾಗಿದ್ದು ರೇವಣಸಿದ್ದರಿಂದಾಗಿ ವೀರಶೈವ ಮತ ಅನುಸರಿಸಿರುವುದು ತಿಳಿದುಬರುತ್ತದೆ. ಈ ಅಂಶವನ್ನು ಪುಷ್ಟಿ ನೀಡುವಂತೆ ರೇಣುಕಾಚಾರ್ಯ ಚರಿತೆ ಎಂಬ ಪುರಾಣವನ್ನು ಈ ಸಮುದಾಯ ಆಧಾರದಿಂದ ಸಾಧ್ಯವಾಗಿದೆ. ಈ ಪುರಾಣವನ್ನು ರಸ್ತಾಪುರದ ಭೀಮಕವಿ ರಚಿಸಿದನೆಂಬ ಅಂಶ ತಿಳಿದುಬರುತ್ತದೆ. ರೇವಣಸಿದ್ದೇಶ್ವರ ದಾರುಕನ ಶಾಪದಿಂದ ಭೂಲೋಕದಲ್ಲಿ ಅವತರಿಸಿ ಅನೇಕ ಲೀಲೆಗಳು, ಪವಾಡಗಳನ್ನು ಮಾಡುವುದರ ಮೂಲಕ ತನ್ನ ಶಕ್ತಿಯನ್ನು ತಿಳಿಸಿದ್ದಾನೆ. ಇದರಿಂದ ಬಹುತೇಕ ಕುರುಬ ಸಮುದಾಯದವರು ತಮ್ಮ ಕುಲದ ಪೌರಾಣಿಕ ಪುರುಷನೆಂದು ಹೇಳುತ್ತಾರೆ. ಈತನ್ನು ಭಕ್ತಿಯಿಂದ ಆರಾಧಿಸುತ್ತಾರೆ.

ಸಜ್ಜಲಗುಡ್ಡದ ಶರಣಮ್ಮ

"ಸಜ್ಜಲಗುಡ್ಡದ ಶರಣಮ್ಮನವರು ಪೂರ್ವದ ಹೆಸರು ಯಮನವ್ವ, ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲೂಕಿನ ಮುದೆನೂರು ಎಂಬ ಒಂದು ಸಣ್ಣ ಗ್ರಾಮದಲ್ಲಿ ಕುರುಬರ ಮಗಳಾಗಿ ಸಾಮಾನ್ಯ ಮನೆತನದಲ್ಲಿ ಜನಿಸಿದಳು. ಮನೆಯೇ ಮೊದಲ ಪಾಠಶಾಲೆ. ವಿದ್ಯೆ ಕಲಿತ ಜನರು ಧನ್ಯರು ಎಂಬ ನುಡಿ ಶರಣಮ್ಮನ ಬದುಕಿಗೆ ಹೆಚ್ಚು ಅನ್ವಯಿಸುತ್ತದೆ. ತಾಯಿಯಾದ ಲಿಂಗಮ್ಮನ ಮೂಲಕವೇ ಯಮನವ್ವನಿಗೆ ಆಧ್ಯಾತ್ಮದ ಮೊದಲ ಪಾಠ ಮನೆಯೇ ಆಗಿತ್ತು. ಬಾಲ್ಯದಲ್ಲಿ ಬದುಕಿನ ಬವಣಿಯನ್ನೆಲ್ಲ ಉಂಡಿದ್ದ ಯಮನವ್ವನಿಗೆ ತಾಯಿಯಿಂದ ದತ್ತಾಸ್ತಿಯಾಗಿ ದೊರೆತದ್ದು ಆಧ್ಯಾತ್ಮ ಹೆಚ್ಚು ಆಕರ್ಷಿಸುತ್ತದೆ. ಈ ಕಾರಣದಿಂದ ಬಾಳರಥವನ್ನು ಎಳೆದು ಮಹೋನ್ನತಿಯನ್ನು ಸಾಧಿಸಿದ ಮಹಾ ಧಾರ್ಮಿಕ ಮಹಿಳೆಯಾದಳು."[೩೧]

ಇಂದಿನ ಲಿಂಗಾಯತ ಜಗದ್ಗುರುಗಳು ಲಿಂಗಾಯತರಲ್ಲಿದ್ದ ಜನರಿಗೆ ಪ್ರಾಂಜಲ ಮನಸ್ಸಿನಿಂದ ಲಿಂಗದೀಕ್ಷೆ ನೀಡಿ ಶರಣರ ನುಡಿಯಂತೆ ನಡೆದಿದ್ದರೆ ವೀರಶೈವರೆನಿಸಿಕೊಳ್ಳ ಯೋಗ್ಯತೆ ಉಳಿಯುತ್ತಿತ್ತು. ಸಂಕುಚಿತ ಜಿಡ್ಡುಗಟ್ಟಿ ನಾರುತ್ತಿರುವ ಸಮಾಜದಲ್ಲಿಯೂ ಅಂದಿನ ಕಾಲಗರ್ಭದಲ್ಲೊಂದೊಂದು ಅದಮ್ಯ ಶಕ್ತಿ ಚೇತನಗಳ ಆಗಾಗ ಜಗತ್ ಕಲ್ಯಾಣ ಕಾರ್ಯಕ್ಕೆ ಮುಂದಾಗಿದ್ದುಂಟು. ಇಂತಹ ಮಹಾಮಹಿಮರಲ್ಲಿ ಲಿಂಗೈಕ್ಯ ದೊಡ್ಡ ಬಸವಾರ್ಯರು ಒಬ್ಬರು. ಅನೇಕ ಪ್ರತಿರೋಧಗಳಿದ್ದಾಗ್ಯೂ ಕೂಡ ಶಿವಯೋಗ ಬಲದಿಂದ ಅದನ್ನೆಲ್ಲ ಹುಟ್ಟಿನಿಂದ ಲಿಂಗಾಯತರಲ್ಲದ ಯಮನವ್ವ ಮತ್ತು ಬಾಳಪ್ಪ ಎಂಬುವರಿಗೆ ಲಿಂಗದೀಕ್ಷೆಯನ್ನು ಶಾಸ್ತ್ರೋಕ್ತವಾಗಿಯೇ ಮಾಡಿದರು. ಲಿಂಗದೀಕ್ಷೆಯ ನಂತರ ಯಮನವ್ವ ಶರಣಮ್ಮಳಾಗಿ ಮೈದಳೆದಳು. ಧಾರ್ಮಿಕವಾಗಿ, ಸಾಮಾಜಿಕವಾಗಿ, ಸಾಹಿತಿಕವಾಗಿ, ಮಹಿಳೆಯರು ಮಾತನಾಡಲು ಕಲಿತಿದ್ದು ವಚನಕಾರರ ಸಂದರ್ಭದಲ್ಲಿಯೇ ಮಹಾಮಾನವತಾವಾದಿ ಬಸವಣ್ಣನವರು ವೈದಿಕ ಧರ್ಮದ ಹಂಗು ಹರಿದೊಗೆದು, ಸಮಾನತೆಯ ನೆಲೆಯ ಮೇಲೆ ಹೊಸ ಸಮಾಜ ಕಟ್ಟುವ ಸಲುವಾಗಿ ಹೆಣ್ಣು ಗಂಡೆಂಬ

ಮೇಲು ಕೀಳಿನ ಭೇದ ಮರೆತು ಹದಿನೆಂಟು ಜಾತಿಗಳಿಗೆ ಇಷ್ಟಲಿಂಗ ದೀಕ್ಷೆಯ ಮೂಲಕ ಅವರನ್ನೆಲ್ಲ ಸಂಘಟಿಸಿದರು.

ಶರಣಮ್ಮನವರು ಲಿಂಗ, ಜಂಗಮ, ಪ್ರಸಾದ ಪಾದೋದಕ ಎಲ್ಲವು ಆದ ಘನ ಮಹಿಮಳು. ಅನ್ನ ದಾಸೋಹ, ಜ್ಞಾನ ದಾಸೋಹ ನಿರಂತರ ತನ್ನ ನೆಲದಲ್ಲಿ ನೆಲೆಯೂರುವಂತೆ ಕಾರ್ಯ ಮಾಡಿದವಳು. ಬದುಕಿನುದ್ದಕ್ಕೂ ಜ್ಞಾನ ಪ್ರಸಾರಕ್ಕಾಗಿ ಶಕ್ತಿ ಮೀರಿಸಂಚರಿಸಿ ನಾಡಿನುದ್ದಕ್ಕೂ ಮಾನವತ್ವದ ಬೀಜ ಬಿತ್ತಿದವರು, ಶರಣ ಬೆಳೆ ಬೆಳೆದವರು. ಇದರಿಂದ ಅನೇಕ ಸಮುದಾಯದವರು ಉತ್ಸವ ಜಾತ್ರೆ ಮುಂತಾದ ಸಜ್ಜಲಗುಡ್ಡದ ಶರಣಮ್ಮ (ಸಜ್ಜಲಶ್ರೀ) ಕಾರ್ಯಕ್ರಮದಲ್ಲಿ ಭಕ್ತಿ ಭಾವದಿಂದ ಆದ್ಯಾತ್ಮವನ್ನು ಪೂಜ್ಯ ಭಾವನೆಯಿಂದ ಕಾಣುತ್ತಾರೆ. ಇದರಲ್ಲಿ ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಕುರುಬ ಸಮುದಾಯದವರು ಪಾಲುಗೊಳ್ಳುವುದು ವಿಶೇಷವಾದ ಸಂಗತಿಯಾಗಿದೆ.

ಕುರುಬರ ಧಾರ್ಮಿಕ ನೆಲೆಗಳು

ಕುರುಬರ ಅನೇಕ ಧಾರ್ಮಿಕ ನೆಲೆಗಳನ್ನು ಗುರುತಿಸಬಹುದು. ಅದರಲ್ಲಿ ಸರೂರ ಉತ್ಸವ ಮೈಲಾಪುರದ ಮಲ್ಲಯ್ಯನ ಜಾತ್ರೆ ಹೈಯಾಳದಪ್ಪನವರ ಜಾತ್ರೆ ಮುಂತಾದ ಅನೇಕ ಧಾರ್ಮಿಕ ಕೇಂದ್ರಗಳಲ್ಲಿ ವಿಶೇಷವಾಗಿ ಈ ಸಮುದಾಯದವರು ಭಕ್ತಿಯಿಂದ ನಡೆದುಕೊಳ್ಳುತ್ತಾರೆ.

ಕುರುಬ ಸಮುದಾಯದ ಸಾಮಾಜಿಕ ಸ್ಥಿತಿಗತಿಗಳು

ದೊಡ್ಡಿಗಳಲ್ಲಿ ವಾಸಿಸುವ ಕುರುಬರು ಸೌಮ್ಯ ಸ್ವಭಾವದವರು. ದೈಹಿಕವಾಗಿ ದಷ್ಟಪುಷ್ಟವಾದ ದೃಢವಾದ ಮೈಕಟ್ಟು ಹೊಂದಿದ್ದಾರೆ. ಕುರುಬರು ಅನ್ಯ ಸಮುದಾಯ ಮತ್ತು ನೆರೆಹೊರೆಯವರ ಜೊತೆ ಸಹಕಾರ ಸಹ ಜೀವನ ನಡೆಸುವುದನ್ನು ದೊಡ್ಡಿಗಳಲ್ಲಿ ಕಾಣಬಹುದು. ದೊಡ್ಡಿಗಳಲ್ಲಿ ನೆಲೆಸಿರುವ ಜನರು ಬಡವ ಶ್ರೀಮಂತ ಎನ್ನುವ ಯಾವುದೇ ಅಂತಸ್ಥಿನ ತಾರತಮ್ಯ ಕಂಡುಬರುವುದಿಲ್ಲ. ರಾಯಚೂರು ಜಿಲ್ಲೆಯಾದ್ಯಂತ ಕುರುಬ ಸಮುದಾಯ ಪ್ರತ್ಯೇಕವಾದ ದೊಡ್ಡಿಗಳು ಕಂಡುಬರುತ್ತವೆ. ಬೇಡರ ದೊಡ್ಡಿಗಳಲ್ಲಿ ಮತ್ತು ಕಬ್ಬಲಿಗ ಸಮುದಾಯಗಳ ಕುಟುಂಬಗಳೂ ಕಂಡುಬರುತ್ತವೆ. ಹೆಚ್ಚಿನ ಸಂಖ್ಯೆಯಲ್ಲಿ ಕುರುಬರ ದೊಡ್ಡಿಗಳಲ್ಲಿ ಬೇಡರು ನೆಲೆಸಿದ್ದಾರೆ. ಬೇಡರ ದೊಡ್ಡಿಗಳಲ್ಲಿ ಕುರುಬರು ನೆಲೆಸಿರುವುದು ಸಾಮಾನ್ಯವಾಗಿ ಕಾಣಬಹುದು. ಅದೇ ರೀತಿ ಈ ಎರಡು ಸಮುದಾಯ ದೊಡ್ಡಿಗಳಲ್ಲಿ ಬೆರಳೆಣಿಕೆಯಷ್ಟು ಕುಟುಂಬಗಳು ಕಬ್ಬಲಿಗ ಸಮುದಾಯದವರು ಕಂಡುಬರುತ್ತಾರೆ. ಈ ನೆಲೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕೃಷಿಕರಾಗಿದ್ದಾರೆ. ದೊಡ್ಡಿಗಳಲ್ಲಿ ಇರುವ ಜನರು ಮೊದಲು ಕುರುಬ ಸಮುದಾಯದವರು. ಮೊದಲಿಗೆ ಹೊಲಗಳ ಬಿತ್ತನೆಮಾಡಿದ ನಂತರ ಉಳಿದ ಬೇಡ ಮತ್ತು ಕಬ್ಬಲಿಗ ಸಮುದಾಯದವರು ಕೃಷಿ ಚಟುವಟಿಕೆ ಪ್ರಾರಂಭಿಸುತ್ತಾರೆ.

ಕುರುಬ ಸಮುದಾಯದವರ ಸಾಮಾಜಿಕವಾಗಿ ತುಂಬಾ ಗೌರವ ಸ್ಥಾನದಲ್ಲಿ ಕಾಣುತ್ತಾರೆ. ಕುರುಬರಿಗೆ ಪೂಜಾರಿಗಳು ಎಂದು ಕರೆಯುತ್ತಾರೆ. ಯಾವುದೇ ಶುಭ ಕಾರ್ಯಗಳನ್ನು ಮಾಡಗಬೇಕಾದರೆ ಕುರುಬರನ್ನು ಕರೆಯುತ್ತಾರೆ. ಹೊಸದಾಗಿ ಯಂತ್ರಗಳನ್ನು ಖರೀದಿಸಿದಾಗ ಮತ್ತು ದ್ವಿಚಕ್ರ ವಾಹನವಾಗಿರಬಹುದು ಟ್ರ್ಯಾಕ್ಟರ್ ಆಗಿರಬಹುದು ಅವುಗಳ ಪೂಜೆ ಮತ್ತು ಪ್ರಥಮ ಚಾಲನೆ ಕುರುಬರಿಂದ ಮಾಡಿಸುತ್ತಾರೆ. ಬಿತ್ತನೆ ಸಂದರ್ಭದಲ್ಲಿ ಮೊದಲಿಗೆ ಪೂಜಾರಿಗಳು ಬಿತ್ತನೆ ಮಾಡಿದರೆ ಒಳ್ಳೆಯದು ಆಗುತ್ತದೆ. ಫಸಲು ಸಮೃದ್ಧಿಯಾಗಿ ದೊರೆಯುತ್ತದೆ ಎಂದು ತಿಳಿದು ಇಂದಿಗೂ ಎಲ್ಲಾ ಶುಭ ಕಾರ್ಯಗಳಲ್ಲಿ ಕುರುಬರೇ ಪ್ರಧಾನವಾಗಿ ಇರುತ್ತಾರೆ. ರಾಯಚೂರು ಜಿಲ್ಲೆ ಪ್ರತಿಯೊಂದು ದೊಡ್ಡಿಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತದೆ. ಅಡವಿಯಲ್ಲಿ ಇರುವ ಕುರುಬರು ತನ್ನ ನೆರೆಹೊರೆ ಸಹೋದರ ಸಮುದಾಯಗಳಾದ ಬೇಡ ಮತ್ತು ಕಬ್ಬಲಿಗ ಸಮುದಾಯದವರ ಜೊತೆ ಉತ್ತಮ ಬಾಂಧವ್ಯ ಹೊಂದಿರುವುದು ಕಾಣಬಹುದಾಗಿದೆ. ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಒಬ್ಬರ ಹೆಸರು ಕೇಳಿದರೆ ಯಾವುದೇ ಕುಟುಂಬ ಇರಲಿ, ಯಾವುದೇ ಜಾತಿ ಇರಲಿ ಆ ಮನೆಯಲ್ಲಿ ಇರುವ ಎಲ್ಲರ ಹೆಸರುಗಳನ್ನು ಸರಳವಾಗಿ ಹೇಳುತ್ತಾರೆ. ದೊಡ್ಡಿಗಳಲ್ಲಿ ನೆಲೆಸಿರುವ ಸಮುದಾಯಗಳಲ್ಲಿ ಒಂದಾದ ಕುರುಬ ಸಮುದಾಯ ಸದಾ ದಿನನಿತ್ಯ ದುಡಿಮೆಯಲ್ಲಿ ಪಾಲುಗೊಳ್ಳುವುದು ಕಂಡುಬರುತ್ತದೆ. ಕುರುಬರಲ್ಲಿ ಕುಂತು ಕೆಟ್ಟವರಿಲ್ಲ ಎನ್ನುವ ಗಾದೆ ದೊಡ್ಡಿಗಳಲ್ಲಿ ಸಾಮಾನ್ಯವಾಗಿ ಹೇಳುವುದು ಕೇಳಬಹುದು. ಕುರುಬರು ಕಾಡು ಹರಠೆ ಒಡೆಯದೇ ಶ್ರಮ ಜೀವಿಗಳಾಗಿ ಬದುಕುವುದನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಕಂಡುಬಂದ ನೈಜ ಸಂಗತಿಯಾಗಿದೆ.

ಆರ್ಥಿಕ ಸ್ಥಿತಿಗತಿ

"ಪಶುಪಾಲನೆ : ಹೆಸರೇ ಸೂಚಿಸುವಂತೆ ಕುರುಬ ಸಮುದಾಯದವರ ಸಂಪ್ರದಾಯಿಕ ಕುಲ ಕಸುಬು ಕುರಿಸಾಕಾಣಿಕೆ, ಕಾಡು ಮೇಡುಗಳು ಹೆಚ್ಚಾಗಿದ್ದ ಕಾಲದಲ್ಲಿ ಹೆಚ್ಚಿಗೆ ಕುರಿಗಳನ್ನು ಸಾಕಿ ಅವುಗಳ ಹಾಲು ಮೊಸರು ಮಾರಿ ಜೀವನ ಸಾಗಿಸುತ್ತಿದ್ದರು. ಜೊತೆಗೆ ವ್ಯವಸಾಯವನ್ನು ಮಾಡುತ್ತಾರೆ. ಇವರಲ್ಲಿ ಜಮೀನು ಇರುವವರು ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತಾರೆ. ಕುರಿಸಾಕಾಣಿಕೆ ವ್ಯವಸಾಯಕ್ಕೆ ಅನುಕೂಲವಾಗುತ್ತವೆ. ಆ ಕುರಿಯು ಹಾಕುವ ಕುರಿ ಗೊಬ್ಬರ ಮತ್ತು ಗಂಜಿನಿಂದ ಹೊಲಗದ್ದೆಗಳಲ್ಲಿ ಫಸಲು ಸಮೃದ್ಧವಾಗಿ ಬೆಳೆಯುತ್ತದೆ. ಯಾವುದೇ ರಸಗೊಬ್ಬರ ಬಳಕೆ ಮಾಡದೇ ಸಾವಯವ ಗೊಬ್ಬರದಲ್ಲಿ ಕಡಿಮೆ ಖರ್ಚು ಮಾಡಿ ಹೆಚ್ಚಿನ ಲಾಭವನ್ನು ಪಡೆದುಕೊಳ್ಳುತ್ತಾರೆ. ಅಷ್ಟೇ ಅಲ್ಲದೆ ಇವರ ಭೂಮಿಯು ಯಾವುದೇ ಕಾರಣಕ್ಕೂ ಸತ್ವ ಕಳೆದುಕೊಳ್ಳುವುದಿಲ್ಲ ಎಂದು ಕೃಷಿ ತಜ್ಞರು ಅಭಿಪ್ರಾಯ ಪಡುತ್ತಾರೆ."[೩೨]

ಕುರುಬ ಸಮುದಾಯದಲ್ಲಿ ಶ್ರೀಮಂತಿಕೆ ನಿರ್ಧಾರವಾಗುವುದು ಅವರು ಎಷ್ಟು ಕುರಿ ಸಾಕುತ್ತಾರೆ ಎಂಬುದರ ಮೇಲೆ ಅವಲಂಭಿಸಿರುತ್ತದೆ. ಕನಿಷ್ಟ ಎರಡು ಅಥವಾ ಮೂರರಿಂದ ಹಿಡಿದು ಗರಿಷ್ಠ ೫೦೦ ಗಟ್ಟಲೆ ಕುರಿ ಸಾಕುವ ಜನರಿದ್ದಾರೆ. ರಾಯಚೂರು ಜಿಲ್ಲೆಯ ದೇವದುರ್ಗ, ಲಿಂಗಸ್ಗೂರು ತಾಲೂಕಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಇವರು ಕುರಿಸಾಕುತ್ತಾರೆ. ಇವರ ಮುಖ್ಯ ಜೀವನಾಧಾರ ಕುರಿ ಸಾಕಾಣಿಕೆ. ಕುರುಬರು ಕುರಿಗಳ ವಾಸ್ತವ್ಯಕೆ ಕುರಿ ರೊಪ್ಪಗಳನ್ನು ಜಾಲಿ ಕಳ್ಳಿ ಕಾರೆ ಮುಳ್ಳುಕಟ್ಟೆಗಳಿಂದ ನಿರ್ಮಿಸುತ್ತಾರೆ. ನಡುವೆ ಎತ್ತರವಾದ ಒಂದು ಮಂಚವನ್ನು ನಿರ್ಮಿಸಿಕೊಂಡು ಪುರುಷರು ಕುರಿಗಳ ಮಧ್ಯದಲ್ಲಿಯೇ ರಾತ್ರಿ ವೇಳೆಯಲ್ಲಿ ಮಲಗುತ್ತಾರೆ. ಜೊತೆಗೆ ತಾವು ಇರುವ ನೆಲೆಗಳ ಸಮೀಪದಲ್ಲಿ ಪ್ರಾಣಿಗಳ ದೊಡ್ಡಿಯನ್ನು ನಿರ್ಮಿಸಿಕೊಂಡಿರುತ್ತಾರೆ. ಕಳ್ಳಕಾಕರ ಮತ್ತು ತೋಳಗಳ ಹಾವಳಿಯನ್ನು ತಡೆಯಲು ನಾಯಿಗಳನ್ನು ಸಾಕಿಕೊಂಡಿರುತ್ತಾರೆ. ಜೊತೆಗೆ ಇವರೂ ರಾತ್ರಿಯಿಡೀ ಜಾಗೃತಿಯಿಂದ ಇರುತ್ತಾರೆ. ಕುರಿಗಳನ್ನು ಸರ್ಕಾರಿ ಗೋಮಾಳಗಳಲ್ಲೋ ಅಥವಾ ತಮ್ಮ ತಮ್ಮ ಹೊಲಗದ್ದೆಗಳಲ್ಲಿ ಮೇಯಿಸುತ್ತಾರೆ. ಬೇಸಿಗೆ ಕಾಲದಲ್ಲಿ ಬೇರೆ ಬೇರೆ ಪ್ರದೇಶಗಳಿಗೆ ವಲಸೆ ಹೋಗಿ ಕುರಿಗಳನ್ನು ಬೇರೆ ಸಮುದಾಯದವರ ತೋಟಗಳಿಗೆ ಮುಂದೆ ಬಿಡುತ್ತಾರೆ. ಕುರಿಗಳು ಹಾಕುವ ಕುರಿ ಗೊಬ್ಬರ ಮತ್ತು ಗಂಜಿನಿಂದ ಅವರ ತೋಟಗಳ ಸತ್ವವನ್ನು ತುಂಬಿಕೊಂಡು ಅತಿಹೆಚ್ಚು ಸಮೃದ್ಧಿಯ ಫಸಲನ್ನು ಬೆಳೆಯಲು ಅನುಕೂಲವಾಗುತ್ತದೆ. ಇದಕ್ಕೆ ಪ್ರತಿಯಾಗಿ ಕುರಿ ಹಿಂರಡು ತಮ್ಮ ಹೊಲದಲ್ಲಿ ತರಿಬಿಕೊಂಡವರು ಇವರಿಗೆ ಊಟ ಮತ್ತು ಧವಸ ಧಾನ್ಯಗಳನ್ನು ಕೊಡುವುದನ್ನು ಕಾಣಬಹುದು. ಸ್ವಲ್ಪ ದಿನಗಳ ನಂತರ ಮುಂದಿನ ಪ್ರದೇಶಕ್ಕೆ ಪ್ರಯಾಣ ಬೆಳೆಸುತ್ತಾರೆ. ಸಾಮಾನ್ಯವಾಗಿ ಕುರುಚಲು ಗುಡ್ಡಗಾಡುಗಳಿಂದ ಪ್ರದೇಶಗಳು ಬರಗಾಲ ಪ್ರದೇಶಗಳಾಗಿರುವುದರಿಂದ ಪ್ರದೇಶದಿಂದ ಪ್ರದೇಶಕ್ಕೆ ವಲಸೆ ಹೋಗುವುದು ಕಂಡುಬರುತ್ತದೆ. ಕುರಿ ಸಾಕಾಣಿ ಆರ್ಥಿಕವಾಗಿ ಲಾಭದಾಯವಾಗಿದ್ದರೂ, ಬಲು ಕಷ್ಟದ ಕೆಲಸ. ಬಾಲಕರಿಂದ ಹಿಡಿದು ಮಹಿಳೆಯರಾದಿಯಾಗಿ ಕುರಿ ಕಾಯಲು ಹೋಗುತ್ತಾರೆ. ಮಳೆ-ಗಾಳಿ ಬಿಸಿಲೆನ್ನದೆ, ಇಡೀ ದಿನ ಕುರಿಗಳು ಹೋದಹಾಗೆ ಅವುಗಳ ಹಿಂದೆ ಹೋಗುತ್ತಾರೆ. ಇವರು ಸಂಜೆ ಮರಳಿ ಮನೆಗೆ ಬರುವಾಗ ಸೊರಗಿ ಸೊಪ್ಪಾಗಿರುತ್ತಾರೆ. ಮುಖದ ಮೇಲೆ ಕಳೆ ಇರುವುದಿಲ್ಲ. ಕೆಲವು ಸಂದರ್ಭದಲ್ಲಿ ಇವರಿಗೆ ಕುಡಿಯಲು ನೀರು ಸಿಗುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಕುರಿಗಳಿಗೆ ನಾನಾ ತರಹದ ರೋಗಗಳು ಕಾಣಿಸಿಕೊಳ್ಳುತ್ತವೆ. ಇವುಗಳಲ್ಲಿ ರೋಗದಿಂದ ಅಲ್ಪಸ್ವಲ್ಪ ಕುರಿಗಳು ಸಾಯುತ್ತವೆ. ಆಗ ಇವರಿಗೆ ತುಂಬಾ ಆರ್ಥಿಕ ನಷ್ಟವಾಗುತ್ತದೆ.

ಇತ್ತೀಚೆಗೆ ಕಾಡುಗಳ ನಾಶ (ಗೋಮಾಳಗಳ) ಮತ್ತು ಕೃಷಿ ಕುರಿ ಸಾಕಾಣಿಕೆ ತುಂಬಾ ಕಷ್ಟದಾಯಕವಾಗಿ ಕಂಡುಬರುತ್ತಿದೆ. ಅದೇನೆ ಇರಲಿ ಕುರಿ ಸಾಕಾಣಿಕೆಯಿಂದ ಕುರುಬ ಸಮದಾಯದವರು ಎರಡು ರೀತಿಯಾಗಿ ಅನುಕೂಲವನ್ನು ಕಾಣಬಹುದು. ಕೃಷಿಗೆ ಯಾವುದೇ ರಸಗೊಬ್ಬರ ಅವಶ್ಯಕತೆ ಇಲ್ಲ ಜೊತೆಗೆ ಕುರಿಸಾಕಾಣಿಕೆ ಆರ್ಥಿಕವಾಗಿ ಸದೃಢವಾಗಲು ಅನುಕೂಲವಾಗಿದೆ.

ಬೇಡರಂತೆ ಇವರೂ ಸಹ ಕೃಷಿಯನ್ನು ಅವಲಂಬಿಸಿ ಜೀವನ ನಿರ್ವಹಿಸುತ್ತಿದ್ದಾರೆ. ಕೃಷಿಯಿಂದ ಬರುವ ಆದಾಯ ಕಡಿಮೆಯಿದ್ದರೂ ಕುಲ ಕಸುಬು ಇವರ ಜೀವನದ ಆದಾರ ಸ್ತಂಭವಾಗಿದೆ. "ಕುರಿ ಸಾಕಾಣಿಕೆಯಿಂದ ಸಾಕಷ್ಟು ಧಾನ್ಯಗಳು ಇವರ ಜೀವನ ನಿರ್ವಹಣೆಯ ಮೂಲವಾಗಿದೆ. ಕೃಷಿಯಲ್ಲಿ ಸರಿಯಾದ ಲಾಭ ಸಿಗದಿದ್ದರೆ ಪರ್ಯಾಯವಾಗಿ ಕುಲ ಕಸುಬು ಇವರ ಆದಾಯಗಳಿಸುವ ಮೂಲ ಮಾರ್ಗವಾಗಿದೆ."[೩೩] ಕುರಿ ಸಾಕಾಣಿಕೆ ಮೆಚ್ಚಿಕೊಂಡಿರುವವರ ಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಕೆಲವರು ಎಷ್ಟೇ ಕಷ್ಟವಾಗಲಿ ಮಕ್ಕಳಿಗೆ ಶಿಕ್ಷಣವನ್ನು ಕೊಡಿಸುತ್ತಿದ್ದಾರೆ. ಆರ್ಥಿಕ ಅನುಕೂಲತೆ ಇದ್ದುದರಿಂದ ಕೂಲಿ ಮಾಡಲು ಬೆಂಗಳೂರಿಗೆ ವಲಸೆ ಹೋಗಿ ದುಡಿಯುವುದು ಈ ಸಮುದಾಯದಲ್ಲಿ ತೀರ ಕಡಿಮೆಯೆಂದು ಹೇಳುತ್ತಾರೆ. ದೊಡ್ಡಿಗಳಲ್ಲಿ ಇರುವವರು ಎರಡು ಮೂರು ಉದ್ಯೋಗ ಹೊಂದಿದರೆ ಮಾತ್ರ ನೆಮ್ಮದಿಯಿಂದ ನಮ್ಮ ನಮ್ಮ ದೊಡ್ಡಿಗಳಿಂದ ಜೀವನ ಸಾಗಿಸಲು ಸಾಧ್ಯವಾಗಿದೆ ಎಂದು ಈ ಸಮುದಾಯದ ಹಿರಿಯ ಮಾಳಪ್ಪ ಹೇಳುತ್ತಾರೆ.

ಎಷ್ಟೇ ಆದಾಯವಿದ್ದರೂ ಕೆಲವು ಸಂದರ್ಭದಲ್ಲಿ ಮೂಲಭೂತ ಅವಶ್ಯಕತೆ ಪಡೆದುಕೊಳ್ಳಲು ತುಂಬಾ ಅನಾನುಕೂಲವಾಗುತ್ತದೆ ಎಂದು ಇಲ್ಲಿನವರ ಅಭಿಪ್ರಾಯವಾಗಿದೆ. ಯಾವುದೇ ಕಾಯಿಲೆ ಅಥವಾ ವಿಷಪೂರಿತ ಹಾವು ಚೇಳು ಕಚ್ಚಿದರೆ ತುಂಬಾ ಗಂಬೀರ ಸಮಸ್ಯೆ ಎದುರಿಸಬೇಕಾಗುತ್ತವೆ. ಅನೇಕ ತೊಂದರೆಗಳು ಇದ್ದರೂ ಕೃಷಿ ಕಾರ್ಯದಲ್ಲಿ ಪರಸ್ಪರ ಸಹಾಯ ಸಹಕಾರದ ಮೂಲಕ ಕೆಲಸ ನಿರ್ವಹಿಸುತ್ತಾರೆ. ಇದರಿಂದ ಅವರ ಆರ್ಥಿಕ ಸ್ಥಿತಿ ತುಂಬಾ ಸುಭದ್ರವಾಗಿದೆ ಎಂದು ಹೇಳಬಹುದಾಗಿದೆ.

ಶೈಕ್ಷಣಿಕ ಸ್ಥಿತಿಗತಿಗಳು

ರಾಯಚೂರು ಜಿಲ್ಲೆಯ ಕುರುಬ ಸಮುದಾಯದ ದೊಡ್ಡಿಗಳಲ್ಲಿ ಅಲ್ಪಸ್ವಲ್ಪ ಪ್ರಾಥಮಿಕ ಶಾಲೆಗಳು ಪ್ರಾರಂಭಿಸಲಾಗಿದೆ. ದೊಡ್ಡಿಗಳಲ್ಲಿ ವಾಸಿಸುವ ಕುರುಬ ಸಮುದಾಯದವರು ತಮ್ಮ ಮಕ್ಕಳನ್ನು ಬಹಳ ಶ್ರಮವಹಿಸಿ ಶಾಲೆಗೆ ಸೇರಿಸುತ್ತಿದ್ದಾರೆ. ಹಾಗೂ ಶಾಲೆ ಬಿಟ್ಟ ಮಕ್ಕಳನ್ನು ಶಾಲೆಗೆ ಕರೆತರುವಲ್ಲಿ ಸರ್ಕಾರ ಯೋಜನೆಗಳನ್ನು ರೂಪಿಸಿದೆ. ಇದರ ಫಲವಾಗಿ ಅನೇಕ ಮಕ್ಕಳಿಗೆ ಶಿಕ್ಷಣದ ಸೌಲಭ್ಯ ಸಿಗುತ್ತಿದೆ. ಇದರಿಂದ ಇಲ್ಲಿನ ನಿವಾಸಿಗಳಲ್ಲಿ ಎಷ್ಟೇ ಬಡತನವಿದ್ದರೂ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುತ್ತಿದ್ದಾರೆ. ಪ್ರಾರ್ಥಮಿಕ ಶಾಲೆ ಹಂತ ಮುಗಿದ ನಂತರ ಪ್ರೌಢಶಾಲೆಗಳಿಗೆ ಕಳುಹಿಸಲು ಕುರುಬ ಸಮುದಾಯ ಬಹಳ ಉತ್ಸಹಕತೆಯಿಂದ ಕೆಲಸ ಮಾಡುತ್ತಿದ್ದಾರೆ. ದೊಡ್ಡಿಯಲ್ಲಿ ನೆಲೆಸಿರುವವರು ಶಿಕ್ಷಣ ಪಡೆದವರು ಕಡಿಮೆ. ಶಿಕ್ಷಣ ಪಡೆದವರಿಂದ ತಮ್ಮ ಸಮುದಾಯಗಳ ಉಳುವಿಗಾಗಿ ಹಾಗೂ ತಮ್ಮ ಹಕ್ಕುಗಳನ್ನು ರಕ್ಷಣೆ ಮಾಡಿಕೊಳ್ಳಲು ಆಗುತ್ತದೆ ಎಂದು ತಿಳಿದು ಎಲ್ಲಾ ಮಕ್ಕಳನ್ನು ಶಾಲೆಗೆ ಕಳುಹಿಸುತ್ತಿದ್ದಾರೆ. ಇದರಿಂದ ದೊಡ್ಡಿಗಳ ಶೈಕ್ಷಣಿಕ ಸ್ಥಿತಿ ಸುಧಾರಣೆಯಾಗುತ್ತಿದೆ.

ರಾಜಕೀಯ ಸ್ಥಿತಿಗತಿ

ದೊಡ್ಡಿಗಳಲ್ಲಿ ಕುರುಬ ಸಮುದಾಯದ ರಾಜಕೀಯ ಸಂಘಟನೆಯು ಸಮುದಾಯದ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಇಂದಿನ ದಿನಮಾನಗಳಲ್ಲಿ ರಾಜಕೀಯ ಶಕ್ತಿಯು ಪ್ರತಿ ಹಂತದಲ್ಲಿಯು ಅಭಿವೃದ್ಧಿಗೆ ಪೂರಕ ವಾತಾವರಣ ನಿರ್ಮಿಸಲು ಸಹಾಯಕವಾಗುತ್ತದೆ. ಕುರುಬರಲ್ಲಿ ಇತ್ತೀಚಿನ ದಿನಗಳಲ್ಲಿ ರಾಜಕೀಯ ಇಚ್ಚಾಶಕ್ತಿ ಬೆಳೆದು ರಾಜಕೀಯ ಮೀಸಲಾತಿ ಅನ್ವಯ ಅಧಿಕಾರ ಪಡೆದು ಅಭಿವೃದ್ಧಿಯತ್ತ ಮುಖಮಾಡಿದ್ದಾರೆ. ಸ್ಥಳೀಯ ಗ್ರಾಮ ಪಂಚಾಯತಿಗಳಲ್ಲಿ ತಮ್ಮ ದೊಡ್ಡಿಯಲ್ಲಿ ಇರುವವರನ್ನೇ ಸದಸ್ಯರನ್ನಾಗಿ ಚುನಾಯಿಸುವ ಮೂಲಕ ರಾಜಕೀಯ ಮುಂಚೂಣಿಗೆ ಬರುತ್ತಿದ್ದಾರೆ. ಪಂಚಾಯತಿ ಸದಸ್ಯರಾಗಿ ಆಯ್ಕೆ ಆದ ಮೇಲೆ ಇವರು ಗ್ರಾಮ ಹಾಗೂ ತಾಲ್ಲೂಕು ಪಂಚಾಯತಿ ಅನುದಾನದ ಅಡಿಯಲ್ಲಿ ತಮ್ಮ ದೊಡ್ಡಿಗಳನ್ನು ಅಭಿವೃದ್ಧಿ ಮಾಡಲು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದಾರೆ. ಆದರೂ ಪಂಚಾಯಿತಿ ಸದಸ್ಯರ ಬೆಂಬಲದ ಕೊರತೆಯಿಂದ ಅನೇಕ ಅಭಿವೃದ್ಧಿ ಕೆಲಸಕ್ಕೆ ಅಕ್ಕ ಪಕ್ಕದ ಗ್ರಾಮದವರು ದೊಡ್ಡಿಗಳಿಗೆ ಯಾವುದೇ ಅಭಿವೃದ್ಧಿಗೆ ಯೋಜನೆಗಳು ಇರಲಿ ತಮ್ಮ ಗ್ರಾಮಗಳಿಗೆ ಹಾಕಿಕೊಳ್ಳುವುದರಿಂದ ದೊಡ್ಡಿಯಿಂದ ಆಯ್ಕೆಯಾದ ಸದಸ್ಯ ಪ್ರಯತ್ನ ಅನೇಕ ಬಾರಿ ವಿಫಲವಾಗಿದೆ ಎಂದು ಹೇಳುತ್ತಾರೆ. ಈ ರೀತಿಯಾಗಿ ದೊಡ್ಡಿಯ ರಾಜಕೀಯ ಡೋಲಾಯಮಾನವಾಗಿದೆ. ಒಟ್ಟಾರೆಯಾಗಿ ರಾಜಕೀಯದ ಫಲ ದೊಡ್ಡಿಗಳಿಗೆ ಗಗನ ಕುಸುಮವಾಗಿದೆ. ಎಷ್ಟೇ ಪ್ರಯತ್ನ ಮಾಡಿದರೂ ಕೇವಲ ಗ್ರಾಮ ಪಂಚಾಯತ ಸದಸ್ಯರ ಪ್ರಯತ್ನದಿಂದ ದೊಡ್ಡಿಗಳಿಗೆ ಮೂರರಿಂದ ನಾಲ್ಕು ಆಶ್ರಯ ಮನೆಗಳನ್ನು ಹಾಕಿಕೊಳ್ಳಬಹುದು. ರಾಜಕೀಯ ಸ್ವಾರ್ಥದಿಂದ ತಮ್ಮ ಕುಟುಂಬಗಳಿಗೆ ಆಶ್ರಯ ಮನೆಗಳನ್ನು ಮಾಡಿಕೊಳ್ಳುತ್ತಿರುವುದು ಸಹಜವಾಗಿದೆ. ಇದರಿಂದ ಯಾರು ಪ್ರತಿನಿಧಿಗಳು ಆಗುತ್ತಾರೆ. ಅವರ ಕುಟುಂಬ ಅಭಿವೃದ್ಧಿಯಾಗುತ್ತದೆ ಎಂದು ತಿಳಿದು ಚುನಾವಣೆಯಲ್ಲಿ ಕೇವಲ ಹಕ್ಕು ಚಲಾಯಿಸಿದರೆ ಇದರಿಂದ ಯಾವ ಪ್ರಯೋಜನವಾಗುವುದಿಲ್ಲ ಎಂದು ಅರಿತುಕೊಂಡಿದ್ದಾರೆ. ಇದರಿಂದಾಗಿ ಯಾವುದೇ ದೊಡ್ಡಿಗಳು ಇವತ್ತಿನವರೆಗೂ ಸಾಮಾನ್ಯ ಮೂಲಭೂತ ಅವಶ್ಯಕತೆ ಪಡೆದುಕೊಳ್ಳುವಲ್ಲಿ ವಿಫಲವಾಗಿವೆ ಎಂದು ಹೇಳಬಹುದಾಗಿದೆ.

೪.೩. ಕಬ್ಬಲಿಗ ಸಮುದಾಯದ ಪರಿಚಯ

ಭಾರತದಲ್ಲಿ ಯಾವುದೇ ಸಮುದಾಯವು ಸಾಮಾನ್ಯವಾಗಿ ವೃತ್ತಿ ಹಿನ್ನೆಲೆಯಲ್ಲಿ ಗುರುತಿಸಿಕೊಂಡು ಬಂದಿರುವುದು ಕಂಡುಬರುತ್ತದೆ. “ಒಂದೇ ವೃತ್ತಿಯನ್ನು ಮಾಡುವವರನ್ನು ಒಂದು ಸಮುದಾಯಕ್ಕೆ ಸೇರಿದವರು ಎಂದು ಮನಗಾಣಬಹುದು ಈ ಹಿನ್ನೆಲೆಯಲ್ಲಿ ಕಬ್ಬಲಿಗರು ಬಗ್ಗೆ ತಿಳಿದುಕೊಳ್ಳಬೇಕಾಗಿದೆ. ಇವರು ತಮ್ಮನ್ನು ಅಂಬಿಗರು, ಬೆಸ್ತರು, ಗಂಗಾಮತಸ್ಥರು, ಬಾರಿಕರು ಮುಂತಾದ ಹೆಸರುಗಳಿಂದ ಕರೆದುಕೊಂಡು ಬಂದ

ಸಮುದಾಯವೇ ಕಬ್ಬಲಿಗ ಸಮುದಾಯವೇ ಆಗಿದೆ. ಕರ್ನಾಟಕ ರಾಜ್ಯದ ಎಲ್ಲ ಭಾಗಗಳಲ್ಲೂ ವಾಸಿಸುತ್ತಿರುವುದನ್ನು ಕಾಣಬಹುದು. ನೀರನ್ನೇ ಆಶ್ರಯಿಸಿ ಅದನ್ನು ಆದಾಯದ ಮೂಲವಾಗಿಸಿಕೊಂಡ ಸಮುದಾಯಗಳು ಭಾರತದಲ್ಲಿ ನಾನಾ ಹೆಸರುಗಳಿಂದ ಕರೆಯಲ್ಪಡುತ್ತವೆ. ಇಂತಹ ಜಲಮೂಲ ಸಂಸ್ಕೃತಿಯ ಸಮುದಾಯಗಳಲ್ಲಿ ಕಬ್ಬಲಿಗ ಸಮುದಾಯವು ಒಂದು. ನದಿಯಲ್ಲಿ ದೋಣಿ ನಡೆಸುವ ಜಲಮಾರ್ಗದಲ್ಲಿ ಸರಕು ಸಾಗಣೆ ಮಾಡುವ ಮತ್ತು ಜಲಮೂಲದ ಮೀನುಗಾರಿಕೆ ಮತ್ತು ಅದರ ಸಂಬಂಧಿ ಪ್ರಾಣಿಗಳನ್ನು ಬೇಟೆಯಾಡುತ್ತಾ ತಮ್ಮ ಆಹಾರವನ್ನು ಕಂಡುಕೊಂಡಿದ್ದ ಸಮುದಾಯ ಕಬ್ಬಲಿಗ ಆಗಿದೆ."[೩೪] ಈ ಸಮುದಾಯ ಕಬ್ಬಲಿಗ ಎನ್ನುವ ಹೆಸರು ಯಾವ ಕಾಲದಲ್ಲಿ ಬಂದಿರಬಹುದು. ಅದಕ್ಕೆ ಕಾರಣಗಳೇನು ಎಂದು ತಿಳಿಸುವುದು ಸ್ವಲ್ಪ ಕಷ್ಟಕರವಾದ ಕಾರ್ಯವೆಂದೇ ಹೇಳಬೇಕಾಗುತ್ತದೆ. ಸಾಮಾನ್ಯವಾಗಿ ದೋಣಿ ನಡೆಸುವ ಮತ್ತು ಮೀನುಗಾರಿಕೆಯನ್ನು ಮುಖ್ಯ ವೃತ್ತಿಯಾಗಿಸಿಕೊಂಡ ಸಮುದಾಯವನ್ನು ಅಂಬಿಗ, ಸುಣಗಾರ ಬೆಸ್ತ, ಜಾಲಗಾರ ಬೋಯಿ, ಬೋಯಾ ಮುಂತಾದ ಹೆಸರುಗಳಿಂದಲೂ ಕರೆಯುತ್ತಾರೆ. 'ಅಂಬು'(ಬಾಣ) ಎನ್ನುವ ಸಂಸ್ಕೃತ ಮೂಲ ಪದದಿಂದ ಅಂಬಿ ಅಥವಾ ಅಂಬಿಗ ಪದ ಬಂದಿರಬಹುದು ಎಂದು ವಿದ್ವಾಂಸರು ತಿಳಿಸುತಾರೆ.

ಪದ ನಿಷ್ಪತ್ತಿ

'ಎಡ್ಗರ ಥರ್ಸ್ಟನ್,' 'ಎಂಥೋವಿನ,' 'ಫ್ರಾನ್ಸಿಸ್' ಮುಂತಾದ ಅಧ್ಯಯನಕಾರರು ಕಬ್ಬಲಿಗ ಸಮುದಾಯ ಕುರಿತು ಉಲ್ಲೇಖಿಸಿದ್ದಾರೆ. ಈ ಎಲ್ಲ ವಿದ್ವಾಂಸರು ಕಬ್ಬಲಿಗ ಸಮುದಾಯದ ಆಚರಣೆ, ವೃತ್ತಿ, ಪೂಜಿಸುವ ದೇವರು ಇತ್ಯಾದಿಗಳನ್ನು ತಿಳಿಸಿದ್ದಾರೆ. ಆ ಸಮುದಾಯ ಹೆಸರಿನ ನಿಷ್ಪತ್ತಿಯ ಸ್ಪಷ್ಟವಾಗಿ ತಿಳಿದಿಲ್ಲ. ಎಂಥೋವಿನರವರು ಕಬ್ಬಲಿಗ ಎನ್ನುವ ಸಮುದಾಯದ ಕುರಿತು ವಿವರಿಸುತ್ತಾ ಪ್ರಾಸಂಗಿಕವಾಗಿ ಕಬ್ಬಲಿಗ ಸಮುದಾಯವನ್ನು ಕಬ್ಬೇರ ಎಂದು ತಿಳಿಸುತ್ತಾರೆ.

ಬೆಸ್ತ : "ತೆಲುಗು ಮತ್ತು ಕನ್ನಡ ಭಾಷೆಗಳಲ್ಲಿ 'ಬೆಸದ' ಎಂದು ಕರೆಯುವ ಪದವಿದೆ. 'ಬೆಸದ' ಪದದ ಅರ್ಥ ಮೀನು ಹಿಡಿಯುವವರು ಎಂದು ಕರೆಯುತ್ತಾರೆ.

ಬೇಟೆಯಾಡಿ ಬೇಡನಾದ

ಬಲೆಬೀಸಿ ಬೆಸ್ತನಾದ

'ಜ.ಬಿ.ವೈರಮುಡಿ'ಯವರ ಅಭಿಪ್ರಾಯದಂತೆ

ಬೆಸ್ತ : 'ಬೆ' ಅಂದರೆ ಬೆತ್ತದಿಂದ

'ಸ್ತ' ಅಂದರೆ ಚಲಿಸತಕ್ಕವನು

ಕನ್ನಡ ಜಾನಪದ ಕೋಶದಲ್ಲಿ ಅಂಬಿಗ ಪದದ ಅರ್ಥ

ಅಂಬಿಗ ದೋಣಿ ಹರಿಗೋಲುಗಳನ್ನು ನಡೆಸುವವನು

ಅಂಬಿಗನೆಂದು ಕರೆಯುತ್ತಾರೆ."[೩೫]

ಕಬ್ಬಲಿಗ ವೃತ್ತಿ ಒಳಪಂಗಡಗಳು, ಆಚಾರ-ವಿಚಾರಗಳ ಕುರಿತು ಈ ರೀತಿ ತಿಳಿಸುತ್ತಾರೆ. ಇವರಲ್ಲಿ ವಿವಿಧ ವೃತ್ತಿಗಳನ್ನು ಮಾಡುವ ಉಪಪಂಗಡಗಳಿವೆ. ಉದಾಹರಣೆಗೆ ಬಾರಿಕ ಅಥವಾ ಬಾರಕೇಸ್ ಎನ್ನುವವರು ಗ್ರಾಮ ಸೇವಕರಾಗಿ ಗ್ರಾಮದ ಚಾವಡಿಯಲ್ಲಿ ನೇಮಿಸಿದವರಾಗಿರುತ್ತಾರೆ. ಜಾಲಗಾರರು ಎಂಬುವವರು ಬಂಗಾರದ ದೂಳನ್ನು ತೊಳೆಯುವರು ಇಲ್ಲವೆ ಕಸಕಡ್ಡಿಗಳಲ್ಲಿರುವ ಬಂಗಾರದ ದೂಳನ್ನು ಅವುಗಳಿಂದ ನೀರು ಹಾಕಿ ಜಾಲಿಸಿ ಬೇರ್ಪಡಿಸುವ ಕೆಲಸವನ್ನು ಮಾಡುತ್ತಾರೆ. ಮಡ್ಡೇರು ಎಂಬುವವರು ಬಣ್ಣ ಹಾಕುವವರು. ಇವರು ನಾರು ಬೇರುಗಳಿಂದ ತಯಾರಿಸಿದ ಮಡ್ಡಿ ಬಣ್ಣವನ್ನು ಬಳಸುವುದರಿಂದ ಮಡ್ಡೇರು ಆಗಿದ್ದಾರೆ. ಆದೇ ರೀತಿ ಬೆಸ್ತ ಎಂಬುವವನು ಇತರೆ ಮೇಲ್ಜಾತಿಗಳ ಚಾಕರಿ ಮಾಡುವವನಾಗಿರುತ್ತಾನೆ. ಬೋಯಿಗಳು ಪಲ್ಲಕಿ ಹೋರುವ ಸೇವಕರಾಗಿದ್ದಾರೆ. ಇಂದು ಈ ಪಲ್ಲಕಿ ಹೋರುವ ಕೆಲಸ ಇರದೇ ಇರುವುದರಿಂದ ಬೇರೆ ಕೆಲಸಗಳಲ್ಲಿ ನಿರತರಾಗಿದ್ದಾರೆ.

ಕರ್ನಾಟಕ ರಾಜ್ಯದ ಅನೇಕ ಭಾಗಗಳಲ್ಲಿ ನೆಲೆನಿಂತಿರುವ ಕಬ್ಬೇರರು ಬೇರೆ ಬೇರೆ ಹೆಸರಿನಿಂದ ಗುರುತಿಸಿಕೊಂಡಿದ್ದಾರೆ. ಅವರ ಮೂಲ ಉದ್ಯೋಗದೊಂದಿಗೆ ಹೆಸರುಗಳೆಲ್ಲಾ ಇರುವುದು ತಿಳಿದುಬರುತ್ತದೆ. ೧೯೫೪ರಲ್ಲಿ ಇಡೀ ರಾಜ್ಯದ ನಾನಾ ಹೆಸರುಗಳಿಂದ ಕರೆಯುವ ಕಬ್ಬೇರರೆಲ್ಲರೂ ಬೆಂಗಳೂರಿನಲ್ಲಿ ಸಭೆ ಸೇರಿ ನಾವೆಲ್ಲರೂ ಇನ್ನು ಮುಂದೆ ಗಂಗಾಮತಸ್ಥರೆಂದು ಕರೆದುಕೊಳ್ಳಬೇಕೆಂದು ನಿರ್ಣಯ ಕೈಗೊಂಡರು. ಆದರೆ ಆ ಸಭೆಯಲ್ಲಿ ತೆಗೆದುಕೊಂಡ ನಿರ್ಣಯ ನಿರ್ಣಯವಾಗಿಯೇ ಉಳಿದಿದೆ. ಇಂದಿಗೂ ಸಹ ಬೇರೆ ಬೇರೆ ಹೆಸರಿನಿಂದಲೇ ಕಬ್ಬೇರ ಸಮುದಾಯ ಗುರುತಿಸಿಕೊಳ್ಳುತ್ತಿದ್ದಾರೆ. ಆದರೆ ರಾಯಚೂರು ಜಿಲ್ಲೆಯಲ್ಲಿ ಕಬ್ಬೇರರು, ಬಾರಿಕರು, ಬೆಸ್ತರು, ಬೋವಿಗಳೆಂದು ತಮ್ಮ ಸಮುದಾಯವನ್ನು ಗುರಿತಿಸಿಕೊಂಡಿದ್ದಾರೆ.

ಕಬ್ಬಲಿಗ

ಕಬ್ಬಲಿಗರಲ್ಲಿ ನಾಟಿಕಾರ, ನಾಯಿಕೋಡಿ ಹೊದಲ್ಕರ ಪೋತಲಕಾರ ಕೊಲಕರ ಎಂಬ ಹೆಸರುಗಳಿಂದಲೂ ಕರೆಯಲಾಗುತ್ತದೆ. ಈ ಎಲ್ಲ ಹೆಸರುಗಳು ಅವರ ಮೂಲ ವಾಸ ಸ್ಥಳಗಳನ್ನು ಪ್ರತಿನಿಧಿಸುತ್ತವೆ. ಕಬ್ಬಲಿಗ ಯಾವ ಮೂಲದಿಂದ ಬಂದವರು ಎಂಬ ವಿಚಾರ ಬಹಳ ಪ್ರಮುಖವಾದ ಸಂಗತಿಯಾಗಿದೆ. ಇವರು ಪ್ರಾಚೀನ ಕಾಲದಲ್ಲಿ ಈ ಸಮುದಾಯದವರು ನದಿ ಸರೋವರಗಳ ತೀರದಲ್ಲಿ ಸಮುದ್ರ ದಡಗಳಲ್ಲಿ ವಾಸಿಸುತ್ತಿದ್ದು,

ನೀರಿನಲ್ಲಿಯೇ ಕಸುಬನ್ನು ಮಾಡುವವರಾಗಿದ್ದರು. ಕಬ್ಬಲಿಗರು ಮೂಲವೃತ್ತಿ ಜಲಮೂಲದ ಪ್ರಾಣಿಗಳನ್ನು ಬೇಟೆಯಾಡುವುದಾಗಿತ್ತು. ಬೇಡನಾಯಕರು ನೆಲಬೇಟೆಯಲ್ಲಿ ಪ್ರವೀಣರಾದರೆ ಕಬ್ಬಲಿಗರು ಜಲಬೇಟೆಯಲ್ಲಿ ಪ್ರವೀಣರಾಗಿರುವರು. ಗಂಗೆ ಮಕ್ಕಳು ನೀರಿನೊಂದಿಗೆ ಸಂಬಂಧ ವಿರಿಸಿಕೊಂಡಿದ್ದಾರೆ. ಡೋಣಿ ನಡೆಸುವುದು, ಮೀನು ಹಿಡಿಯುವುದು. ಇವರು ಕೃಷ್ಣ ತುಂಗಾಭದ್ರ ನದಿಯ ದಂಡೆಯ ಮೇಲೆ ಕಂಡುಬರುತ್ತಾರೆ. ದಕ್ಷಿಣ ಭಾರತದ ನದಿಗಳಲ್ಲಿ ಸಾಗಾಣಿಕೆ, ಪ್ರಯಾಣ, ಮೀನುಗಾರಿಕೆ ಮುಂತಾದವುಗಳಿಗೆ ದೋಣಿ ಉಪಯೋಗಿಸುತ್ತಾರೆ. ಉದಾಹರಣೆ: ಕೃಷ್ಣನದಿ, ಭೀಮಾ, ಘಟಪ್ರಭ, ಮಲಪ್ರಭ, ಭವಾನಿ ಮತ್ತು ತುಂಗಭದ್ರ ನದಿಗಳಲ್ಲಿ ದಾಟಿಸುವುದು. ದೊಡ್ಡ ದೊಡ್ಡ ಬುಟ್ಟಿಗಳಲ್ಲಿ ನದಿಯ ಈ ದಂಡೆಯಿಂದ ಆ ದಡಕ್ಕೆ ತಲುಪಿಸುವುದು. ನೀರು ತಾಗದಂತೆ ಪ್ಲಾಸ್ಟಿಕ್ ಹೊದಿಕೆಯಿಂದ ಕೂಡಿದ ಬುಟ್ಟಿ ಸುರಕ್ಷಿತವಾಗಿ ಜನರನ್ನು ದಡದಿಂದ ದಡಕ್ಕೆ ಸೇರಿಸಲು ಅವರಿಗೆ ಅನುಕೂಲವಾಗಿದೆ. ಕಾಲಾನಂತರದಲ್ಲಿ ಈ ಕಾಯಕದಿಂದ ಅವರಿಗೆ ಜೀವನ ಸಾಗಿಸಲು ಕಷ್ಟವಾಯಿತು. ನಂತರ ತಾವೇ ಬಲೆಗಳನ್ನು ನೇಯ್ದು ಮೀನು ಹಿಡಿದು ತಾವು ಉಪಯೋಗಿಸಿ ಉಳಿದ ಮೀನುಗಳ್ನು ಮಾರಿ ಜೀವನ ಸಾಗಿಸುತ್ತಿದ್ದರು. ಈ ವೃತ್ತಿ ಮಾಡುವುದರಿಂದ ಇವರಿಗೆ ಸಹಜವಾಗಿಯೇ ಗಂಗೆಯನ್ನು ನಂಬಿ ಬದುಕುತ್ತಿದ್ದರಿಂದ ಗಂಗೆಯ ಮಕ್ಕಳು ಗಂಗಪುತ್ರರು ಗಂಗಮತಸ್ಥರು ಎಂಬ ಹೆಸರು ಬಂತು. ನಂತರ ದೋಣಿ ನಡೆಸುವವರನ್ನು ಅಂಬಿಗರೆಂದು ಮೀನು ಹಿಡಿಯುವವರನ್ನು ಬೆಸ್ತರು ಅಥವಾ ಮೀನುಗಾರರೆಂದು ಕರೆಯತೊಡಗಿದರು.

ಪೌರಾಣಿಕ ಹಿನ್ನೆಲೆ

ಕಬ್ಬೇರ ಸಮುದಾಯದಲ್ಲಿ ಪ್ರಚಲಿತವಿರುವ ಪುರಾಣದ ಪ್ರಕಾರ ಬಹಳ ಕಾಲದ ಹಿಂದೆ ಗಂಗಾನದಿ ತೀರದಲ್ಲಿ ತಂಡೋಪ ತಂಡವಾಗಿ ವಾಸವಾಗಿದ್ದರು. "ಆ ಸಮುದಾಯಕ್ಕೆ ಒಬ್ಬ ಮುಖ್ಯಸ್ಥನಿದ್ದು ಅವನು ರಾಜನಾಗಿದ್ದನು. ಅವನಿಗೆ ಒಬ್ಬ ಸಾಕು ಮಗಳಿದ್ದಳು. ರಾಜ ಹೆಸರು ದಶರಾಜನೆಂದು. ಇವನಿಗೆ ಇದ್ದ ಸಾಕು ಮಗಳು ಅತ್ಯಂತ ಚೆಲುವೆಯಾಗಿದಳು. ಅವಳ ಹೆಸರು ಸತ್ಯವತಿ. ಗಂಗಾನದಿಯ ತೀರದಲ್ಲಿ ಈ ಸಮುದಾಯದವರು ಮೀನುಗಳನ್ನು ಹಿಡಿಯುವ ಕಾಯಕವನ್ನು ಮಾಡುತ್ತಿದ್ದರು. ಕೆಲಸದಲ್ಲಿಯೂ ಹೆಣ್ಣು ಮಕ್ಕಳ ಪಾಲ್ಗೊಳ್ಳುತ್ತಿದ್ದರು. ಒಂದು ದಿನ ಹಸ್ತಿನಾವತಿಯ ಚಕ್ರವರ್ತಿಯಾದ ಶಂತನು ಬೇಟೆಗಾಗಿ ಗಂಗಾನದಿಯ ತೀರಕ್ಕೆ ಪರಿವಾರದ ಸಮೇತ ಬಂದನು. ಬೇಟೆಯ ಶ್ರಮವನ್ನು ನಿವಾರಿಸಿಕೊಳ್ಳಲು ಗಂಗಾನದಿಯ ತೀರದಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಅತ್ಯಂತ ಸುಂದರಿಯಾದ ಸತ್ಯವತಿಯನ್ನು ನೋಡಿ ಮನಸೋತನು. ಮದುವೆಯಾಗಲು ನಿರ್ಧರಿಸಿದನು. ಆ ಸತ್ಯವತಿಯನ್ನು ಮದುವೆಯಾಗುವಂತೆ ಕೇಳುತ್ತಾನೆ. ಶಂತನ ಅಭಿಪ್ರಾಯಕ್ಕೆ ಅವಳು ನನಗಿಂತ ನನ್ನ ತಂದೆಯ ಅಭಿಪ್ರಾಯ ಮುಖ್ಯವಾದುದ್ದು, ಅವರು ಒಪ್ಪುವುದಾದರೆ ಆಗಲಿ ಆಗ ಮತ್ಸ್ಯಗಂಧಿಯ (ಸತ್ಯವತಿ) ತಂದೆ ಶಂತರಾಜನೊಂದಿಗೆ ಹೀಗೆ ಕೇಳುತ್ತಾನೆ.

ಚಕ್ರವರ್ತಿಗಳೇ, ನನ್ನ ಮಗಳಿಗೆ ಹುಟ್ಟುವ ಮಕ್ಕಳಿಗೆ ಪಟ್ಟ ಕಟ್ಟುವುದಾದರೆ ಮಾತ್ರ ಮದುವೆ ಮಾಡಿಕೊಡುತ್ತೇನೆ. ಇಲ್ಲದಿದ್ದರೆ ಈ ಕೆಲಸ ಆಗುವುದಿಲ್ಲ ಎಂದು ಹೇಳುತ್ತಾನೆ. ಅದಕ್ಕೆ ಒಪ್ಪದರಾಜ ಚಿಂತಿಸುತ್ತಾ ಹಸ್ತಿನಾಪುರಕ್ಕೆ ಬರುತ್ತಾನೆ. ಕೆಲವು ದಿನಗಳ ನಂತರ ಶಂತನ ಮಗನಾದ ದೇವವ್ರತ ತಂದೆಯ ಖಿನ್ನ ಸ್ಥಿತಿಗೆ ಕಾರಣವೇನು ಎಂದು ಅಂದು ಹೋಗಿದ್ದ ಆಪ್ತರನ್ನು ಕೇಳಿದನು. ಅವರಿಂದ ನಿಜವನ್ನು ತಿಳಿದ ದೇವವ್ರತ ಕೂಡಲೇ ದಶತರಾಜನ ಪಾಳಯಕ್ಕೆ ಹೊರಟನು. ಯುವರಾಜನು ಬಂದದ್ದನು ಕಂಡು ಆ ದಶರಾಜನು ಬಹಳ ಸಂಭ್ರಮದಿಂದ ದೇವವ್ರತನನ್ನು ಬರಮಾಡಿಕೊಂಡನು. ಬಳಿಕ ದಶರಾಜನು ಯುವರಾಜರೇ ನನ್ನಿಂದ ಯಾವ ಕಾರ್ಯವಾಗಬೇಕಾಗಿದೆ ಆಜ್ಞಾಪಿಸಿ ಎಂದನು. ಅದಕ್ಕೆ ದೇವವ್ರತನು ದಶರಾಜ ನಾನು ನನ್ನ ತಂದೆಯವರಿಗಾಗಿ ನಿನ್ನ ಮಗಳನ್ನು ಕೇಳಲು ಬಂದಿರುವೆ ಎಂದನು. ಅದಕ್ಕೆ ದಶರಾಜನು ಯುವರಾಜ ಇದು ನಮ್ಮ ಸೌಭಾಗ್ಯ ಆದರೆ ಒಂದು ನಿಯಮದ ಮೇಲೆ ನನ್ನ ಒಪ್ಪಿಗೆಯಿದೆ. ದೇವವ್ರತನು ದಶರಾಜ ನಿನ್ನ ನಿಯಮವೇನೆಂಬುದನ್ನು ಸಂಕೋಚವಿಲ್ಲದೇ ಹೇಳು ಎಂದನು. ಅದಕ್ಕೆ ದಶರಾಜನು ನನ್ನ ಮಗಳ ಹೊಟ್ಟೆಯಲ್ಲಿ ಹುಟ್ಟುವ ಮಕ್ಕಳಿಗೆ ಪಟ್ಟಕಟ್ಟಿಕೊಡ ಬೇಕೆಂಬುದು ನನ್ನ ಮಗಳ ಮಕ್ಕಳು ರಾಜರಾಗಬೇಕೆಂದು ಹೇಳಿ ಸುಮ್ಮನಾದನು. ರಾಜಸಿಂಹಾಸನಕ್ಕೆ ನಿಜವಾದ ಉತ್ತರಾಧಿಕಾರಿಯಾಗಬೇಕಾದ ಯುವರಾಜ ದೇವವ್ರತನಿಗೆ ದಶರಾಜನು ಹೀಗೆ ಹೇಳಲು ಹೇಗಾದರೂ ತನ್ನ ಪೂಜ್ಯನಾದ ತಂದೆಗೆ ಸಂತೋಷವನ್ನುಂಟು ಮಾಡಬೇಕೆಂಬ ಆಶಯದಿಂದ ದೇವವ್ರತನು ಹೀಗೆ ಪ್ರತಿಜ್ಞೆ ಮಾಡಿಬಿಟ್ಟನು. ಈ ಕ್ಷಣದಿಂದ ನಾನು ರಾಜಸಿಂಹಾಸನದ ಎಲ್ಲ ಅಧಿಕಾರವನ್ನು ಬಿಟ್ಟು ಬಿಟ್ಟಿದ್ದೇನೆ. ಇದಕ್ಕೆ ಪಂಚಭೂತಗಳು, ದೇವತೆಗಳು ಸಾಕ್ಷಿಯಾಗಿರಲಿ, ಇದು ನನ್ನ ಪ್ರತಿಜ್ಞೆ ಈ ರೀತಿ ಭೀಷಣವಾದ ಪ್ರತಿಜ್ಞೆಯನ್ನು ಮಾಡಿ ದೇವವ್ರತನು ಹೇಳುತ್ತಾನೆ: ದಶರಾಜ ಈಗ ನಿನಗೆ ಸಮಾಧಾನವಾಯಿತೆ. ಆದರೆ ದಶರಾಜನು ಹೇಳಿದನು ಯುವರಾಜರೇ ನೀವು ಹೇಳಿದುದು ಸರಿಯೇ. ಆದರೆ ನಿಮ್ಮ ಮಕ್ಕಳು ಒಪ್ಪಬೇಕಲ್ಲ ಅವರು ನನ್ನ ಮಗಳ ಮಕ್ಕಳಿಗೆ ತೊಂದರೆ ಕೊಟ್ಟರೆ ಏನು ಮಾಡುವುದು ಆಗ ದೇವವ್ರತನ ತಂದೆ ಪ್ರೀತಿಗಾಗಿ ಇನ್ನೊಂದು ಘೋರ ಪ್ರತಿಜ್ಞೆಯನ್ನು ಮಾಡಿದನು.”[೩೬] ಪಂಚಭೂತಗಳು ದೇವತೆಗಳ ಸಾಕ್ಷಿಯಾಗಿ ಹೇಳುತ್ತೇನೆ. ನಾನು ಈ ಜನ್ಮದಲ್ಲಿ ಮದುವೆಯಾಗುವುದೇ ಇಲ್ಲ. ಬ್ರಹ್ಮಚಾರಿಯಾಗಿಯೇ ಇರುತ್ತೇನೆ. ದೇವವ್ರತನು ಹೀಗೆ ಪ್ರತಿಜ್ಞೆ ಮಾಡುತ್ತಿದ್ದಂತೆಯೆ ಆಕಾಶದಲ್ಲಿ ದೇವತೆಗಳು ಪುಷ್ಪವೃಷ್ಟಿ ಮಾಡಿದರು. ಈ ವಿಧವಾದ ಭಯಂಕರವಾದ ಪ್ರತಿಜ್ಞೆಯನ್ನು ಯಾರೂ ಮಾಡಿರಲಿಲ್ಲ. ಭೀಷಣವಾದ ಪ್ರತಿಜ್ಞೆಗಳನ್ನು ಮಾಡಿದ ಈ ದೇವವ್ರತನು ಮುಂದೆ ಭೀಷ್ಮನೆಂದು ಪ್ರಸಿದ್ಧನಾಗಲಿ ಅಂದಿನಿಂದ ದೇವವ್ರತನು ಭೀಷ್ಮನೆಂದು ಪ್ರಸಿದ್ಧನಾದನು. ಹೀಗೆ ತ್ಯಾಗ ಮಾಡಿದ ತ್ಯಾಗಮಯಿ ಭೀಷ್ಮನನ್ನು ತಮ್ಮ ಕುಲದವನೆಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ.

ಆ ನಂತರ ಸತ್ಯವತಿಯನ್ನು ರಥದಲ್ಲಿ ಕೂರಿಸಿಕೊಂಡು ಬಂದ ಭೀಷ್ಮನು ರಾಜಧಾನಿಗೆ ಹಿಂದಿರುಗಿದನು. ಶಂತನು ಸತ್ಯವತಿಯ ವಿವಾಹವು ವೈಭವದಿಂದ ನಡೆಯಿತು. ತನ್ನ ಮಗನ ಮಹಾತ್ಯಾಗದಿಂದ ಸಂತೋಷಗೊಂಡು ಶಂತನು ಅವನಿಗೆ ಇಚ್ಛಾಮರಣಿಯಾಗು ಎಂಬ ವರವನ್ನಿತ್ತನು. ಶಂತನಿಗೆ ಇಬ್ಬರು ಗಂಡು ಮಕ್ಕಳು ಸತ್ಯವತಿಯ ಹೊಟ್ಟೆಯಲ್ಲಿ ಜನಿಸಿದರು. ಚಿತ್ರಾಂಗದ ಮತ್ತು ವಿಚಿತ್ರ ವೀರ್ಯ ಎಂದು ಹೆಸರಿಟ್ಟರು. ಅವರಿಗೆ ನಂತರದ ದಿನಗಳಲ್ಲಿ ಶಂತನು ಮರಣ ಹೊಂದಿದನು. ಚಿತ್ರಾಂಗದನನ್ನು ರಾಜನನ್ನಾಗಿ ಮಾಡಿದರು. ಬಹಳ ಪರಾಕ್ರಮಿಯಾಗಿದ್ದ ಚಿತ್ರಾಂಗದನು ತನಗೆ ಸಮಾನರಾದವರು ದೇವತೆಗಳಲ್ಲಿಯೂ, ದಾನವರಲ್ಲಿಯೂ, ಮನುಷ್ಯರಲ್ಲಿಯೂ ಇಲ್ಲವೆಂದು ಗರ್ವಪಟ್ಟನು. ಗರ್ವವನ್ನು ಸಹಿಸದ ಗಂಧರ್ವರಾಜನು ಚಿತ್ರಾಂಗದನನ್ನು ಕೊಲ್ಲುತ್ತಾನೆ. ನಂತರ ಆತನ ತಮ್ಮ ವಿಚಿತ್ರ ವೀರ್ಯನನ್ನೆ ರಾಜನನ್ನಾಗಿ ಮಾಡುತ್ತಾರೆ. ವಿಚಿತ್ರವೀರ್ಯನು ಮದುವೆಯಾಗಿ ಕೆಲವೇ ವರ್ಷಗಳಲ್ಲಿ ರೋಗ ಪೀಡಿತನಾಗಿ ಮರಣ ಹೊಂದಿದನು. ಇವನಿಗೂ ಸಹ ಮಕ್ಕಳಿರಲಿಲ್ಲ. ಮುಂದೆ ರಾಜ್ಯಭಾರಕ್ಕೆ ಉತ್ತರಾಧಿಕಾರಕ್ಕೆ ಮಕ್ಕಳಿಲ್ಲವೆಂದು ಚಿಂತಿಸಿದ ಭೀಷ್ಮ ಮತ್ತು ಸತ್ಯವತಿ ಕುರುವಂಶದ ಉದ್ಧಾರಕ್ಕಾಗಿ ವೇದವ್ಯಾಸರಿಂದ ಅಂಬಿಕ ಮತ್ತು ಅಂಬಾಲಿಕೆಯರಿಗೆ ಮಕ್ಕಳ ಭಾಗ್ಯವನ್ನು ಕರುಣಿಸುವಂತೆ ಕೋರಿಕೊಳ್ಳಲು ವೇದವ್ಯಾಸರು ಮಕ್ಕಳನ್ನು ಕರುಣಿಸಿದರು. ಮಹಾಭಾರತದ ಕತೆಯನ್ನೆಲ್ಲಾ ಗಂಗಾಮತಸ್ಥರು ತಮ್ಮದೆಂದೇ ಸಮರ್ಥಿಸಿಕೊಳ್ಳುತ್ತಾರೆ. ಮಹಾಭಾರತದ ಮುಖ್ಯ ಸ್ತಂಭಗಳಲ್ಲಿ ಒಬ್ಬನಾದ ದಾನಶೂರನಾದ ಕರ್ಣ ಕುಂಡಲವನ್ನೇ ದಾನ ಮಾಡಿದ ಕರುಣಾಮಯಿಯಾದ ಕರ್ಣನನ್ನು ಬೆಳೆಸಿದ್ದು ನಮ್ಮ ಕುಲದವರೇ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಮಹಾಭಾರತದಲ್ಲಿ ಕರ್ಣನನ್ನು ಬೆಸ್ತ ಸಮುದಾಯದವನು ಎಂದು ಹೇಳುತ್ತಾರೆ.

ಈ ಸಮುದಾಯದವರ ಸಾಹಿತ್ಯದ ಉಲ್ಲೇಖಗಳು

ಕಬ್ಬಲಿಗ ಜನಾಂಗದ ಬಗ್ಗೆ ಭಾರತೀಯ ಕಾವ್ಯಗಳಲ್ಲಿ ಅತ್ಯಂತ ಪ್ರಾಚೀನವಾದ ಮಹಾಭಾರತದಲ್ಲಿಯೇ ಬಹುಮುಖ್ಯವಾದ ಉಲ್ಲೇಖ ಬರುತ್ತದೆ. "ಮಹಾಭಾರತವು ಹಿಂದುಗಳ ದೃಷ್ಟಿಯಲ್ಲಿ ಪೂಜ್ಯನೀಯವಾದ ಪವಿತ್ರ ಗ್ರಂಥ. ಇದರ ಕರ್ತೃ ವ್ಯಾಸ ವ್ಯಾಸರು ಪರಾಶರ ಮುನಿ ಮತ್ತು ಮತ್ಸ್ಯಗಂಧಿಯರ ಸಮಾಗಮದಿಂದ ಜನಿಸಿದರು ಮತ್ಸ್ಯಗಂದಿ ಹೆಸರ್‍ರೇ ಹೇಳುವಂತೆ ಮೀನು ಹಿಡಿಯುವ, ಮಾರುವ ಬೆಸ್ತರು ೧೨ನೇ ಶತಮಾನ ವಚನಕಾರ ಬಸವಣ್ಣನವರು ವ್ಯಾಸ ಬೋಯಿಯ ಮಗ ಎಂದು ತನ್ನ ವಚನದಲ್ಲಿ ಹೇಳಿರುವುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು."[೩೭] ಬೋಯಿ ಎಂಬುದು ಕಬ್ಬಲಿಗ, ಬೆಸ್ತ, ಅಂಬಿಗ ವೃತ್ತಿ ಮಾಡುವವರನ್ನೆ ಕುರಿತು ಹೇಳುವ ಜಾತಿವಾಚಕ ಪದವಾಗಿದೆ. ಇಡೀ ಜಗತ್ತಿನಲ್ಲಿ ಭಕ್ತಿ ಭಾವದಿಂದ ಆರಾಧನೆಗೊಳ್ಳುತ್ತಿರುವ ಮಹಾಭಾರತ ಕೃತಿಯು ಬೆಸ್ತನಾದ ವ್ಯಾಸನಿಂದ ರಚಿತವಾಗಿದ್ದು ವಿಶೇಷ ಸಂಗತಿ.

ಪೌರಾಣಿಕವಾಗಿ ನೋಡುವುದಾದರೆ ಒಬ್ಬ ವ್ಯಕ್ತಿ ತನ್ನ ಜಾತಿಯ ಕಾರಣದಿಂದ ಅನೇಕ ಸ್ಥಾನಮಾನಗಳಿಂದ ವಂಚಿತನಾಗುತ್ತಾ ಬಂದಿರುವುದನ್ನು ಕಾಣುತ್ತೇವೆ. ರಾಮಾಯಣ, ಮಹಾಭಾರತ ಮೊದಲಾದ ಪುರಾಣ ಇತಿಹಾಸ ಕಾವ್ಯಗಳಲ್ಲಿ ಕಂಡುಬರುವ ಶೂದ್ರಕ, ಏಕಲವ್ಯ, ಕರ್ಣ ಮೊದಲಾದ ಪಾತ್ರಗಳು ತಮ್ಮ ಜಾತಿಯ ಕಾರಣದಿಂದ ಶೋಷಣೆಗೆ ಒಳಗಾಗಿ ನೋವು ಅಪಮಾನವನ್ನು ಅನುಭವಿಸಿದ್ದಾರೆ.

ಕರ್ಣ ಮಹಾಭಾರತದಲ್ಲಿ ಬರುವ ಪ್ರಮುಖ ಪಾತ್ರಗಳಲ್ಲಿ ಒಬ್ಬ ಮಹಾವೀರ ದುರ್ಯೋಧನನ ಅಚ್ಚು ಮೆಚ್ಚಿನ ಗೆಳೆಯ ದಾನಶೂರ ಎಂದೆಲ್ಲ ಈತನನ್ನು ಮಹಾಭಾರತದಲ್ಲಿ ಚಿತ್ರಿಸಲಾಗಿದೆ. ಈತನು ಕ್ಷತ್ರಿಯ ವಂಶಕ್ಕೆ ಸೇರಿದವನು. ಕುಂತಿಗೆ ವಿವಾಹಕ್ಕೆ ಮುನ್ನ ಹುಟ್ಟಿದ್ದರಿಂದ ಆಕೆ ಆತನನ್ನು ಗಂಗೆಯಲ್ಲಿ ತೇಲಿ ಬಿಟ್ಟಳೆಂದು, ಆ ಮಗು ಬೆಸ್ತ ಕುಲದ ದಾಶವೃದ್ಧ ಎಂಬುವವನಿಗೆ ದೊರಕಿತ್ತೆಂದು ಆತನೇ ಕರ್ಣನನ್ನು ಬೆಳೆಸಿದನೆಂದು ಮಹಾಭಾರತದಲ್ಲಿ ಹೇಳಲಾಗಿದೆ. ಕರ್ಣನ ಸಾಕು ತಾಯಿ ರಾಧೆ ಈ ಕಾರಣದಿಂದಲೇ ಕರ್ಣನಿಗೆ ಸೂತಪುತ್ರ, ರಾಧೇಯ ಎಂಬ ಹೆಸರುಗಳು ರೂಢಿಯಾದವು.

"ಬೆಸ್ತ ಕುಲದವರ ವೇಷ ಭೂಷಣದ ಬಗ್ಗೆ ಮಹಾಭಾರತದ ಕಾವ್ಯದಲ್ಲಿ ಮಾಹಿತಿ ಸಿಗುತ್ತದೆ. ಕರ್ಣನ ಸಾಕು ತಂದೆಯಾದ ದಾಶವೃದ್ಧನ ಪಾತ್ರವನ್ನು ವ್ಯಾಸರು ಅಚ್ಚುಕಟ್ಟಾಗಿ ಚಿತ್ರಿಸಿದ್ದಾರೆ. ಆದಿ ಪರ್ವದಲ್ಲಿ ಕುರು ಪಾಂಡವರು ಶಸ್ತ್ರಾಸ್ತ್ರ ಪ್ರದರ್ಶನ ರಂಗಮಂಟಪದಲ್ಲಿ ನಡೆಯುತ್ತಿದ್ದಾಗ ಕೃಪ, ಭೀಮನು ಕರ್ಣನನ್ನು ಜಾತಿಯ ಕಾರಣದಿಂದ ಅಪಮಾನಿಸಿದಾಗ ಅದನ್ನು ಕೇಳಿ ಸಹಿಸದ ದುರ್ಯೋಧನ ಕರ್ಣನಿಗೆ ಅಂಗರಾಜ್ಯ ಪಟ್ಟಾಭಿಷೇಕ ಮಾಡುತ್ತಾನೆ. ಅದನ್ನು ಕಂಡು ಸಂತೋಷಗೊಂಡ ಕರ್ಣನ ಸಾಕು ತಂದೆ ದಾಶವೃದ್ಧ 'ಕಂದಾ' ಎಂದು ಅಕ್ಕರೆಯ ದನಿಯೊಡನೆ ಓಡಿ ಬರುತ್ತಾನೆ. ಆಗ ವ್ಯಾಸರು ಆತನನ್ನು ಹೀಗೆ ಚಿತ್ರಿಸಿದ್ದಾರೆ. ನೆಲದವರೆಗೂ ಇಳಿಬಿದ್ದ ಉತ್ತರೀಯವನ್ನು ಹೊದ್ದುಕೊಂಡು, ಅಂಗಾಗಗಳಿಂದಲೂ ಬೆವರನ್ನು ಸುರಿಸುತ್ತಾ ತರ-ತರನೆ ನಡುಗುತ್ತಾ ಆಸರೆಯಕೋಲು ಹಿಡಿದು ಮಗನೆ ಎಂದು ಅಕ್ಕರೆಯ ದನಿಯೊಡನೆ ಅಧಿರಥನು ರಂಗ ಮಂಟಪವನ್ನು ಪ್ರವೇಶಿಸಿದನು."[೩೮]

ಹೀಗೆ ಬೆಸ್ತ ಕುಲದ ಉಲ್ಲೇಖ ಸಾಹಿತ್ಯದಲ್ಲಿ ಕಂಡುಬರುತ್ತದೆ. ವ್ಯಾಸ ಭಾರತದಲ್ಲಿ ಬೆಸ್ತರ ಬಗ್ಗೆ ಹಲವು ಉಲ್ಲೇಖಗಳು ದೊರಕುವುದರಿಂದ ಈ ಸಮುದಾಯದ ಪ್ರಾಚೀನತೆಯನ್ನು ತಿಳಿದುಕೊಳ್ಳಬಹುದು.

೧೨ನೇ ಶತಮಾನದಲ್ಲಿ ಅನುಭವ ಮಂಟಪದಲ್ಲಿ ಎಲ್ಲ ಸಮುದಾಯಗಳ ಶರಣರು ಒಳಗೊಂಡ ಸಭೆ ನಡೆಯುತ್ತಿತ್ತು. ಈ ಅನುಭವ ಮಂಟಪದಲ್ಲಿ ಕಬ್ಬಲಿಗ ಸಮುದಾಯಕ್ಕೆ ಸೇರಿದ ಕ್ರಾಂತಿಕಾರಿ ವಚನಗಳ ಮೂಲಕ ಸಮಾಜದ ಡಾಂಬಿಕ ಸಂಪ್ರದಾಯ ಆಚರಣೆಗಳ

ಕುರಿತು ಕಟುವಾಗಿ ಟೀಕಿಸಿದ ಶರಣರು ಇವರನ್ನು ನಿಜ ಶರಣ ಅಂಬಿಗರ ಚೌಡಯ್ಯ ಎಂದು ಹೇಳುತ್ತಾರೆ. ಇವರು ಕಬ್ಬಲಿಗ ಸಮುದಾಯದವರಿಗಾದ್ದಾರೆ.

ಕಬ್ಬಲಿಗ ಜೀವನಾವರ್ತನ ಆಚರಣೆಗಳು

ಸಾಮಾನ್ಯವಾಗಿ ಪ್ರತಿಯೊಂದು ಸಮುದಾಯದ ಜನರು ಜನನವನ್ನು ತುಂಬಾ ಸಂತೋಷ ಹಾಗೂ ಸಡಗರದಿಂದ ನೋಡುವರು. ಮಾನವನ ಹುಟ್ಟಿನಿಂದ ಆರಂಭವಾಗುವ ಸಂಸ್ಕಾರ ಸತ್ತ ನಂತರದಲ್ಲೂ ಸಂಸ್ಕಾರಗಳು ನಡೆಯುತ್ತವೆ. ಹಾಗೆಯೇ ನಾಮಕರಣ, ಋತುಮತಿಶಾಸ್ತ್ರ, ಮದುವೆ, ಸೀಮಂತ ಸಾವು ಹೀಗೆ ಮನುಷ್ಯನ ಹುಟ್ಟಿನಿಂದ ಸಾವಿನವರೆಗೆ ಪ್ರತಿಯೊಂದು ಆಚರಣೆಯಲ್ಲಿ ಕಬ್ಬಲಿಗ ಸಮುದಾಯ ತಮ್ಮದೇ ಆದ ಸಂಪ್ರದಾಯಗಳನ್ನು ರೂಢಿಸಿಕೊಂಡು ಬಂದಿದೆ.

೧. ಋತುಮತಿ ಶಾಸ್ತ್ರ

"ಒಂದು ಹೆಣ್ಣುಮಗು ಪ್ರೌಢವಸ್ಥೆಗೆ ಬಂದಾಗ ಋತುಮತಿಯಾಗುವುದು ಸಹಜವೇ ಆಗಿದೆ. ಕಬ್ಬಲಿಗ ಸಮುದಾಯ ತುಂಬಾ ಸಂಭ್ರಮ ಪಡುತ್ತದೆ. ಈ ಸಂದರ್ಭದಲ್ಲಿ ವಿವಿಧ ರೀತಿಯ ಆಚರಣೆಗಳನ್ನು ಹಮ್ಮಿಕೊಂಡು ಸಂಭ್ರಮ ಪಡುವುದನ್ನು ಕಾಣುತ್ತೇವೆ. ಋತುಮತಿಯಾದ ಹೆಣ್ಣನ್ನು ಪ್ರತ್ಯೇಕವಾದ ಗುಡಿಸಲಿನಲ್ಲಿ ಅಥವಾ ಮನೆಯ ಮೂಲೆಯಲ್ಲಿ ಇರಿಸಿ ರುಚಿ ರುಚಿಯಾದ ಅಡುಗೆಯನ್ನು ಮಾಡಿ ಉಣಬಡಿಸುತ್ತಾರೆ. ಒಂದು ರೀತಿಯಲ್ಲಿ ಆ ಮನೆಗಳಲ್ಲಿ ಸಂಭ್ರಮದ ವಾತಾವರಣವಿರುತ್ತದೆ. ಹದಿನಾರು ದಿನಗಳವರೆಗೆ ಋತುಮತಿಯಾದ ಹುಡುಗಿಯನ್ನು ದಿನಾಲೂ ರಾತ್ರಿ ಕೂಡಿಸಿ ವ್ಯವಸ್ಥೆ ಇದೆ. ಆಗ ಪ್ರತಿದಿನವೂ ಬೇರೆ ಬೇರೆ ಸೀರೆಗಳನ್ನು ಉಡುಸಿ ಕೂಡಿಸುತ್ತಾರೆ. ಕೇರಿಯ ಅಥವಾ ಓಣಿಯ ಮಹಿಳೆಯರು ಬಂದು ಸೋಬಾನ ಪದಗಳನ್ನು ಹೇಳುವ ಮೂಲಕ ಈ ಶಾಸ್ತ್ರಕ ಒಂದು ಮೆರಗನ್ನು ತರುವ ಪದ್ಧತಿಯನ್ನು ಕಬ್ಬಲಿಗ ಸಮುದಾಯದಲ್ಲಿ ಕಾಣಬಹುದಾಗಿದೆ."[೩೬]

೨. ಕನ್ಯಾ ನೋಡುವುದು

ಮದುವೆಗೆ ಮುಂಚಿತವಾಗಿ ಗಂಡಿನ ಮನೆಯವರು ಹೆಣ್ಣು ನೋಡುವುದಕ್ಕೆ ಹೋಗುತ್ತಾರೆ. ಮೊದಲೆಲ್ಲ ಹಿರಿಯರು ಹೆಣ್ಣನ್ನು ನೋಡಿ ಒಪ್ಪಿಗೆ ನೀಡಿದರೆ ಹೆಣ್ಣು ಗಂಡು ಹಿರಿಯರ ಮಾತಿಗೆ ಬೆಲೆಕೊಟ್ಟು ಮದುವೆ ಮಾಡಿಕೊಳ್ಳುತ್ತಿದ್ದರು. ಈಗ ಆಧುನಿಕತೆಯ ಪ್ರಭಾವದಿಂದ ಮೊದಲಿಗೆ ಗಂಡು ಒಪ್ಪಿದರೆ ಹೆಣ್ಣಿನವರಿಗೆ ಕೇಳುತ್ತಾರೆ. ಹೆಣ್ಣು ಒಪ್ಪಿಗೆ ನೀಡಿದ್ದಾಗ ಮುಂದಿನ ಕಾರ್ಯಗಳು ನಡೆಯುತ್ತದೆ. ಸಂಬಂಧದಲ್ಲಿ ಮದುವೆಗೆ ಅಕ್ಕನ ಮಗಳು, ಸೋದರ ಮಾವ ಮತ್ತು ಅತ್ತೆ ಮಗಳನ್ನು ಮದುವೆಯಾಗುವುದು ಕಬ್ಬಲಿಗ ಸಮುದಾಯದವರ ಪದ್ದತಿಯಾಗಿದೆ.

ವೀಳ್ಯಶಾಸ್ತ್ರ

ವೀಳ್ಯಶಾಸ್ತ್ರವನ್ನು ಮಾಡುವುದು ಕಬ್ಬಲಿಗ ಸಮುದಾಯದವರಲ್ಲಿ ಕಂಡುಬರುತ್ತವೆ. ಹೆಣ್ಣನ್ನು ನೋಡಿ ಬಂದ ನಂತರ ಪರಸ್ಪರ ಒಪ್ಪಿಗೆಯಾಗಿ ಕೆಲವು ದಿನಗಳ ನಂತರ ಒಂದು ಶುಭದಿನದಂದು ಹೆಣ್ಣಿಗೆ ಒಂದು ಹಸಿರು ಸೀರೆ, ಹೂವು, ಹಣ್ಣು, ಎಲೆ, ಅಡಿಕೆ, ಉಡಿ ಅಕ್ಕಿ ಇತ್ಯಾದಿಗಳನ್ನು ಸಲ್ಲಿಸಲಾಗುತ್ತದೆ. ಅಂದು ಒಂದು ಆಭರಣವನ್ನು ಸಹ ಹುಡುಗಿಗೆ ಕೊಡಲಾಗುತ್ತದೆ. ನಂತರ ಹುಡುಗಿಯ ಕಡೆಯವರು ಬಂಗಾರದ ಉಂಗುರ ಅಥವಾ ಬಂಗಾರ ಸರ ಹುಡುಗನಿಗೆ ಹಾಕುತ್ತಾರೆ. ನಂತರ ಪರಸ್ಪರ ಸಿಹಿ ಹಂಚಿಕೊಂಡು ಹುಡುಗಿಯನ್ನು ನಿಶ್ಚಯಿಸುತ್ತಾರೆ.

ಮದುವೆ

ಮದುವೆಯಾಗಲಿರುವ ಗಂಡಿನ ಮನೆಯ ಮುಂದೆ ತೆಂಗಿನ ಗರಿ ಮತ್ತು ಹೊಂಗೆಯ ಸೊಪ್ಪಿನಿಂದ ಚಪ್ಪರ ಹಾಕುವರು. ಮದುವೆಯ ಹಿಂದಿನ ದಿನ ಗಂಡು-ಹೆಣ್ಣು ಇಬ್ಬರನ್ನು ಮದುಮಗನನ್ನು ಮಾಡುವರು. ಬೆಳಿಗ್ಗೆ ವಧು-ವರ ಇಬ್ಬರಿಗೂ ಸುರಿಗೆ ನೀರು ಹಾಕುವರು ಅಂದರೆ ನೀರು ತುಂಬಿದ ನಾಲ್ಕು ಕೊಡಗಳನ್ನು ಇರಿಸಿ ಅವುಗಳಿಗೆ ಹಳದಿ ದಾರವನ್ನು ಸುತ್ತಿ ಪೂಜಿಸುವರು.

ಕಬ್ಬಲಿಗ ಸಮುದಾಯದ ಬೆಡಗುಗಳು

ಕಬ್ಬಲಿಗ ಸಮುದಾಯದಲ್ಲಿ ಇಪ್ಪತ್ತಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಬೆಡಗುಗಳು ಇವೆ. ಕೆಲವು ಈ ಕೆಳಗಿನಂತಿವೆ.

ಬೆಡಗುಗಳು

"ಹಗ್ಗದವರು	ದಂಡಿನವರು
ರತ್ನದವರು	ಕೋಲಿನವರು
ಹೊನ್ನಮಡಗಿನವರು	ಬನ್ನೇನವರು
ಹಾವಲೋರೋರು	ಬನ್ನೇಲೆವರು
ಹೆಬ್ಬುಲಿಯೋರು	ಚೆಕ್ಕೆಲೇರು
ಗಂಜೆಲ್ಲರು	ಗೋಣಿಲೇಯರು
ತೆಪ್ಪದವರು	ಜಲದವರು
ಗಂಟೆಲ್ಲಾರು	ಜಾಲದವರು

ಮ್ಯಾಗಟ್ಟೇರು	ಆಡಿನವರು
ಬೆಗಾಲದವರು	ದಿಡಿಗಿನವರು
ಗಂಟೆನ್ನವರ	ಮೆಣಸಿಲರು
ನೀರಬಾಯೇರು	ಜಾಲಗಾರ
ಹಾಲದವರು	ಹೊನ್ನುಮಾರುವವರು
ಮಗಟೇರು	ಭಾಗದವರು
ಅಬ್ಬಲೇರು	ಹಾಲಿನವರು
ಗಡ್ಡೆಲ್ಲಾರು	ಅಲ್ಲದವರು
ಸಿಗ್ಲೇರ	ಗೊಂಡೆಯಲೋರು
ಚುಟ್ಟಿಗರ	ಮುತ್ತಿನವರು
ಐಭೋಗದವರು	ಆನೇನವರು
ಬುಗಡೆಲ್ಲಾರು	ಶಿವನೇರೆಯವರು
ಬಾರ್ಕೀರು	ಕರಾಟೆಯವರು
ಒಂಟುಗೇರು	ಬಾಣದವರು
ಅಂಬೆಲ್ಲಾರು	ಬಿಲ್ಲಿನವರು
ಜಡೆಲ್ಲಾರು	ಕೋಣಿಲೇರು
ಬಿಳಿಛತ್ರಿ	ಬಿಳಿ ಆನೆ"[೬೦]

ಇವು ಕ್ಷೇತ್ರಕಾರ್ಯಕ್ಕೆ ಹೋದಾಗ ಕಂಡುಬಂದ ಬೆಡಗುಗಳಾಗಿವೆ. ಒಟ್ಟಾರೆಯಾಗಿ ಹೇಳುವುದಾದರೆ ವೈವಾಹಿಕ ಸಂಬಂಧಗಳು ಬೆಸೆಯುವ ಸಂದರ್ಭದಲ್ಲಿ ಮೊದಲಿಗೆ ಬೆಡಗುಗಳನ್ನು ನೋಡಿ ವೈವಾಹಿಕ ಸಂಬಂಧಗಳನ್ನು ಬೆಳೆಸುತ್ತಾರೆ. ಏಕೆಂದರೆ ಬೆಡಗು (ಗೋತ್ರ) ಹೊಂದಿಕೆಯಾದರೆ ಸಂಬಂಧ ಬೆಳೆಸುವುದು. ಹೆಣ್ಣು ಗಂಡಿನ ಬೆಡಗುಗಳು ಒಂದೆಯಾಗಿದ್ದರೆ ಅಣ್ಣ ತಮ್ಮಂದಿರು ಆಗುತ್ತಾರೆ ಎನ್ನುವ ನಂಬಿಕೆ ಇವರಲ್ಲಿದೆ. ಆದ್ದರಿಂದ ಬೇರೆಯಾದರೆ ಮಾತ್ರ ವೈವಾಹಿಕ ಸಂಬಂಧಗಳು ಕಬ್ಬಲಿಗ ಸಮುದಾಯದಲ್ಲಿ ಏರ್ಪಾಡುತ್ತವೆ. ಇನ್ನೊಂದು ಬಹು ಮುಖ್ಯವಾದ ಅಂಶವೆಂದರೆ ಈ ಬೆಡಗುಗಳಿಂದ ಜಾತಿಯ ಪಾವಿತ್ರತೆಯನ್ನು ಉಳಿಸಿಕೊಳ್ಳಲು ಅನುಕೂಲವಾಗಿದೆ ಎಂದು ಈ ಸಮುದಾಯದ ಹಿರಿಯರ ಅಭಿಪ್ರಾಯವಾಗಿದೆ.

ಕಬ್ಬೇರ ದೈವಗಳು ಮತ್ತು ಧಾರ್ಮಿಕ ಆಚರಣೆಗಳು

"ಕಬ್ಬೇರ/ಕಬ್ಬಲಿಗ ಪಂಗಡಗಳಲ್ಲಿ ಪ್ರಚಲಿತವಿರುವ ಆಚರಣೆಗಳು ಜಲ ಮೂಲದಿಂದ ಗುರುತಿಸಿಕೊಳ್ಳುವ ಅನೇಕ ಆಚರಣೆಗಳು ಕಂಡುಬರುತ್ತವೆ. ಇವರು ಆರಾಧಿಸುವ ಮುಖ್ಯ ದೈವಗಳು ಬಹುತೇಕ ಜಲ ದೇವರು ಆಗಿವೆ."[೬೧] ಉತ್ತರ ಕರ್ನಾಟಕದ ಬಹುತೇಕ ಪ್ರದೇಶಗಳಲ್ಲಿ ನೀರಿಗೆ ಸಂಬಂಧಪಟ್ಟ ಆಚರಣೆಗಳು ಅಸ್ತಿತ್ವದಲ್ಲಿವೆ. ಅವುಗಳು ಆಷಾಡ ಹುಣ್ಣಿಮೆಯಲ್ಲಿ ಬಹುತೇಕ ಕಬ್ಬಲಿಗ ಸಮುದಾಯದವರು ಮಳೆಗಾಗಿ ಊರಿನ ಗ್ರಾಮ ದೇವತೆಗಳಿಗೆ ನೀರು ನೀಡುವ ಕಾರ್ಯಕ್ರಮವನ್ನು ಮಾಡುತ್ತಾರೆ. ಜೊತೆಗೆ ಮಂಗಳವಾರ ಮತ್ತು ಶುಕ್ರವಾರ ಉಪವಾಸ ವ್ರತ ಮಾಡುವುದರ ಮುಖಾಂತರ ಮಳೆಗಾಗಿ ಪ್ರಾರ್ಥನೆ ಮಾಡುತ್ತಾರೆ. ಯಾಕೆಂದರೆ ಇವರ ಪ್ರಧಾನ ಕುಲ ಕಸುಬು ಇಂದಿಗೂ ನೀರಿಗೆ ಸಂಬಂಧ ಪಟ್ಟ ಉದ್ಯೋಗವಾಗಿರುವುದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಮಳೆಗಾಗಿ ವಿಶಿಷ್ಟವಾದ ಆಚರಣೆಗಳನ್ನು ಮಾಡುತ್ತಾರೆ. ಅದರಲ್ಲಿ ಇನ್ನು ಹಲವು ವಿಶೇಷವೆಂದರೆ ಕಪ್ಪೆ ಮದುವೆ, ಕತ್ತೆ ಮದುವೆ, ಈತರಹದ ಆಚರಣೆ ಮಾಡಿದರೆ ಮಳೆ ಬರುತ್ತದೆ ಎಂಬ ನಂಬಿಕೆ ಕಬ್ಬಲಿಗ ಸಮುದಾಯದಲ್ಲಿ ಕಂಡುಬರುತ್ತದೆ. ಹೈದ್ರಾಬಾದ್ ಕರ್ನಾಟಕದ ಬಹುತೇಕ ಪ್ರದೇಶಗಳಲ್ಲಿ, ಅನಂತನ ಹುಣ್ಣಿಮೆ, ಜೋಕುಮಾರನ ಹುಣ್ಣಿಮೆ, ಎಂದು ಖ್ಯಾತ ವಿಘ್ನೇಶ್ವರ ಭೂಲೋಕ ತೊರೆಯುತ್ತಿರುವಂತೆಯೇ ಭೂಮಿತಾಯಿ ಮಗನೆಂದು ಕರೆಸಿಕೊಳ್ಳಲು ಜೋಕುಮಾರ ಜನ್ಮ ತಾಳುತ್ತಾನೆ. ಭಾದ್ರಪದ ಶುದ್ಧ ಅಷ್ಟಮಿಯಂದು ಜನಿಸುವ ಜೋಕುಮಾರನ ಆಯುಷ್ಯ ೭ನೇ ದಿನವೆಂದು ಕೆಲವರು ನಂಬಿರುತ್ತಾರೆ. ಭಾದ್ರಪದ ಶುದ್ಧ ಅಷ್ಟಮಿಗೂ ಜೇಷ್ಠಾದೇವಿಗೂ ಸಂಬಂಧಿಸಿದ ಜಾನಪದ ಗೀತೆಯನ್ನು ತುಂಬಾ ಸೊಗಸಾಗಿ ಈ ರೀತಿ ಹಾಡುತ್ತಾರೆ.

"ಅಷ್ಟಮಿ ದಿನಾ ಹುಟ್ಟಿದಾನಂ ನನ ಕೊಮರಾ

ಜ್ಯೇಷ್ಠಾದೇವಿ ನಿನ್ನ ಮಗಾ ಜೋಕುಮಾರ

ಎಂಬ ಜೋಕುಮಾರನ ಹಾಡನ್ನು ಅನೇಕರು ಹಾಡುತ್ತಾರೆ. ಈ ಜೋಕುಮಾರನ ಮೆರವಣಿಗೆಯೊಂದು ಹೈದ್ರಾಬಾದ್ ಕರ್ನಾಟಕದ ಜಾನಪದ ಸಂಸ್ಕೃತಿಯ ವೈಶಿಷ್ಟ್ಯವಾಗಿದೆ. ನಮ್ಮ ನಾಡಿನಲ್ಲಿ ಜೋಕುಮಾರನ ವ್ಯಕ್ತಿತ್ವವನ್ನು ಸೂಚಿಸುವ ಕೆಲವು ಪಡೆನುಡಿಗಳಿವೆ. ಜೋಕುಮಾರನನ್ನು ಈಗಲೂ ಗಂಗಾಮತಸ್ಥರಾದ ಬಾರಿಕೇರ, ಕಬ್ಬೇರ, ಕಬ್ಬಲಿಗ, ಅಂಬಿಗರು ಇವರೆಲ್ಲರೂ ಒಂದೇ ಪಂಗಡಕ್ಕೆ ಸೇರಿದವರೇ ಆಗಿದ್ದರಿಂದ ಈ ಪಂಗಡದವರ ಮನೆಯಲ್ಲಿಯೇ ಜೋಕುಮಾರ ಜನ್ಮತಾಳುತ್ತಾನೆ. ಈ ಸಮುದಾಯದ ಹೆಣ್ಣು ಮಕ್ಕಳು ಜೋಕುಮಾರನನ್ನು ಹೊತ್ತು ಮೆರೆಸುವ ಹೆಣ್ಣು ಮಕ್ಕಳು ಒಂದು ವಿಶಿಷ್ಟ ದಾಟಿಯಲ್ಲಿ ಜೋಕುಮಾರನಿಗೆ ಸಂಬಂಧಿಸಿದ ಹಾಡುಗಳನ್ನು ಹೇಳುವರು. ಜೋಕುಮಾರನಿಗೂ ಕೃಷಿ ಕುಲಕ್ಕೂ

ಸಂಬಂಧವಿರುವ ಸಂಪ್ರದಾಯ ನಮ್ಮಲ್ಲಿದೆಯೆಂಬುದು ಸ್ಪಷ್ಟವಾಗಿ ಕಾಣುವುದು ಜೋಕುಮಾರನನ್ನು ಕಬ್ಬಲಿಗ ಹೆಣ್ಣು ಮಕ್ಕಳು ಹೊತ್ತುಕೊಂಡು ಕಾಲ್ನಡಿಗೆಯಲ್ಲಿಯೇ ನಾನಾ ಹಳ್ಳಿಗಳಲ್ಲಿ ಸಂಚರಿಸುತ್ತಾ ಓಣಿ ಕೇರಿಗಳಲ್ಲಿ ಮಹಿಳೆಯರು ಎಣ್ಣೆ, ಬೆಣ್ಣೆ, ಉಪ್ಪು, ಖಾರ, ಜೋಳ, ಅಕ್ಕಿ ಇತ್ಯಾದಿ ಆಹಾರ ಧಾನ್ಯ ಸಮರ್ಪಿಸಿ ಪೂಜೆಸಲ್ಲಿಸುವರು. ಕೆಲ ರೈತ ಮನೆಗಳಿಂದ ವರ್ಷ ಕಾಣಿಕೆಯನ್ನು ಪಡೆದು ಜೋಕುಮಾರ ಪ್ರಸಾದವಾಗಿ ಅಳ್ಳಂಬಲಿಯನ್ನು ಮನೆ ಮನೆಗೆ ಕೊಡುವರು ಅಂಬಲಿಯೆಂದರೆ ಬೂದಿ ಮತ್ತು ಬೇವಿನೆಲೆಗಳನ್ನು ಬೆರೆಸಿದ ಜೋಳದ ನುಚ್ಚು. ಒಕ್ಕಲಿಗರು ಇದನ್ನು ಸೀಗೆಯ ಹುಣ್ಣಿಮೆಯವರೆಗೂ ಜೋಪಾನವಾಗಿ ಕಾಯ್ದಿರಿಸಿ, ತಮ್ಮ ಹೊಲಗಳಿಗೆ ಚರಗ ಚಲ್ಲುವಾಗ ಅಂಬಲಿಯನ್ನು ಸೇರಿಸಿ ಹೊಲಗಳಿಗೆ ಚೆಲ್ಲುವರು. ಇದರಿಂದ ಹುಲುಸಾಗಿ ಬೆಳೆ ಬರುವುದೆಂದು ರೈತರ ನಂಬಿಕೆಯಾಗಿದೆ."[೬೨]

ಕಬ್ಬೇರ ಹೆಣ್ಣು ಮಕ್ಕಳ ತಲೆ ಮೇಲೆ ಏಳು ದಿನ ಏಳು ಊರು ಅಲೆಯುವ ಜೋಕುಮಾರ ಕೊನೆಗೆ ೭ನೇ ದಿನ ಸಾಯುತ್ತಾನೆ. ಇಂತಹ ಜೋಕುಮಾರನ ಆರಾಧನಾ ಸಂಪ್ರದಾಯವನ್ನು ಕಬ್ಬಲಿಗ ಸಮುದಾಯ ತಲಾತಲಾಂತರದಿಂದ ಆಚರಿಸಿಕೊಂಡು ಬಂದಿದ್ದಾರೆ. ಕಬ್ಬಲಿಗ ಸಮುದಾಯದವರು ಮಾತ್ರ ದೇವತಾರಾಧಕರಾಗಿದ್ದರೂ ಇವರು ಹುಲಿಗೆಮ್ಮ, ಯಲ್ಲಮ್ಮ, ದುರುಗಮ್ಮ ಮುಂತಾದ ಸ್ತ್ರೀ ದೈವಗಳನ್ನು ಪೂಜಿಸುವ ಈ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತಾರೆ. ಜೊತೆಗೆ ಮಲ್ಲಯ್ಯನ ಆರಾಧನೆ ಮಾಡುವುದು ಈ ಸಮುದಾಯದಲ್ಲಿ ಕಂಡುಬರುತ್ತದೆ.

ಕಬ್ಬಲಿಗ ಸಮುದಾಯದ ಸಾಮಾಜಿಕ ಸ್ಥಿತಿಗತಿ

ರಾಯಚೂರು ಜಿಲ್ಲೆಯ ದೊಡ್ಡಿಗಳಲ್ಲಿ ನೆಲೆಸಿರುವ ಸಮುದಾಯಗಳಲ್ಲಿ ಕಬ್ಬಲಿಗ ಸಮುದಾಯ ಒಂದಾಗಿದೆ. ಸಾಮಾಜಿಕವಾಗಿ ಕಬ್ಬಲಿಗ ಸಮುದಾಯ ಬೇಡ ಕುಲದವರಿಗಿಂತ ಹೆಚ್ಚಿನ ಸ್ಥಾನಮಾನದಲ್ಲಿ ಕಂಡುಬರುತ್ತಾರೆ. ಈ ಸಮುದಾಯ ರಾಯಚೂರು ಜಿಲ್ಲೆಯ ದೊಡ್ಡಿಗಳಲ್ಲಿ ಕೆಲವು ಕಡೆ ಪ್ರತ್ಯೇಕವಾಗಿ ಒಂದೇ ಸಮುದಾಯದವರು ಕೂಡಿಕೊಂಡು ನೆಲೆಸಿರುವುದು ಕಂಡುಬರುತ್ತದೆ. ಜೊತೆಗೆ ನೀರಿನ ಸಂಪನ್ಮೂಲಗಳು ಇರುವ ಕಡೆ ಕುರುಬ ಮತ್ತು ಬೇಡ ಸಮುದಾಯ ಜೊತೆಗೂಡಿ ನೆಲೆಸಿರುವುದು ಕಂಡುಬರುತ್ತದೆ. ಇವರು ಹೆಚ್ಚು ಕೃಷಿಯನ್ನು ನಂಬಿ ಬದುಕುತ್ತಿದ್ದಾರೆ. ಜೊತೆಗೆ ಕುಲಕಸುಬು ಕೂಡ ಇವರಿಗೆ ಒಂದು ರೀತಿ ಆರ್ಥಿಕತೆಗೆ ಅನುಕೂಲವಾಗಿದೆ. ಈ ಸಮುದಾಯದವರ ನೆಲೆನೋಡಿದಾಗ ಸಹಜವಾಗಿ ಇವರ ಒಗ್ಗಟ್ಟಿನ ಬಗ್ಗೆ ತಿಳಿದುಬರುತ್ತದೆ. ಪರಿಶಿಷ್ಟ ಪಂಗಡಕ್ಕೆ ಸೇರುವ ತವಕ ಇವರು ಒಗ್ಗಟ್ಟಿಗೆ ಕಾರಣವಾಗಿದೆ. ರಾಯಚೂರು ಜಿಲ್ಲೆಯಲ್ಲಿ ಸರ್ಕಾರಿ ಸೌಲಭ್ಯಗಳನ್ನು ಪಡೆದುಕೊಂಡವರಲ್ಲಿ ಈ ಸಮುದಾಯದವರು ಪ್ರಧಾನವಾಗಿದ್ದಾರೆ. ಕಬ್ಬಲಿಗ ದೊಡ್ಡಿಗಳಲ್ಲಿ ಒಗ್ಗಟ್ಟಿನ ಒಲವು ಇರುವುದರಿಂದ ತನ್ನ ಜೊತೆಗೆ ಸಮುದಾಯವನ್ನು ಮುಂದೆ ತರುವ ಮನೋಭಾವ ಇವರಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಇವರ ಸಾಮಾಜಿಕ

ಸ್ಥಾನಮಾನದ ಜೊತೆಗೆ ಇವರು ಪಡೆದುಕೊಂಡಿರುವ ಅಥವಾ ಗಳಸಿಕೊಂಡಿರುವ ಸಂಪನ್ಮೂಲಗಳ ಆಧಾರದ ಮೇಲೆ ಬೇಡ ಸಮುದಾಯಕ್ಕಿಂತ ಉತ್ತಮ ಸ್ಥಿತಿಯಲ್ಲಿ ಕಬ್ಬಲಿಗ ಸಮುದಾಯದವರು ಇದ್ದಾರೆ. ಭಾರತೀಯ ಜಾತಿ ವ್ಯವಸ್ಥೆ ಆಯಾ ಸಮಾಜದ ವೃತ್ತಿಯನ್ನಾಧರಿಸಿ ರಚನೆಯಾಗಿದೆ. ಅಂದರೆ ಪ್ರಾಚೀನ ಕಾಲದಲ್ಲಿ ಪ್ರತಿಯೊಂದು ಜಾತಿ ಪಂಗಡಗಳು ಒಂದೊಂದು ಬಗೆಯ ನಿರ್ದಿಷ್ಟವಾದ ವೃತ್ತಿಯನ್ನು ಅವಲಂಬಿಸಿದ್ದರಿಂದ ಅವುಗಳನ್ನೇ ಆಧಾರವಾಗಿಟ್ಟುಕೊಂಡು ಆ ಜನರ ಹೆಸರುಗಳು ಬಳಕೆಯಲ್ಲಿ ಬಂದವು ಉದಾ : ಕುರಿ ಕಾಯುವರನ್ನು ಕುರುಬರೆಂದು, ಸುಣ್ಣ ತಯಾರಿಸುವವರನ್ನು ಸುಣಗಾರರೆಂದು, ಕುಂಬಾರಿಕೆ ಮಾಡುವವರನ್ನು ಕುಂಬಾರರೆಂದು ಹೀಗೆ ಆಯಾ ಜನರ ವಿಶಿಷ್ಟ ವೃತ್ತಿಗಳನ್ನು ಅವಲಂಬಿಸಿ ಈ ಹೆಸರು ಅವರಿಗೆ ಕೊಡಲ್ಪಟ್ಟವು. ಅಂತೆಯೇ ಕಬ್ಬಲಿಗರು ದೋಣಿ ನಡೆಸುವವರು, ಮೀನು ಹಿಡಿಯುವ ಉದ್ಯೋಗಿಗಳಾದ್ದರಿಂದ ಬೆಸ್ತರು ಕಬ್ಬಲಿಗರು ಎಂದು ಹೆಸರು ಪ್ರಪ್ತಾವಾಯಿತು.

ಕಬ್ಬಲಿಗ ಅಥವಾ ಬೆಸ್ತರು ರಾಯಚೂರು ತುಂಬೆಲ್ಲ ವಾಸವಾಗಿದ್ದಾರೆ. ಅವರು ಪ್ರಾದೇಶಿಕವಾಗಿ ಬೇರೆ ಬೇರೆ ಉದ್ಯೋಗಗಳಲ್ಲಿ ತೊಡಗಿದ್ದರಿಂದ ಅವರನ್ನು ವಿಭಿನ್ನ ಹೆಸರುಗಳಿಂದ ಗುರುತಿಸಲಾಗುತ್ತಿದೆ. ಬೇಡ ಮತ್ತು ಕಬ್ಬಲಿಗ ಸಮುದಾಯಗಳ ರಾಯಚೂರು ಜಿಲ್ಲೆ ಜೊತೆ ಜೊತೆಗೆ ಸಹಕಾರ ಸಹಬಾಳ್ವೆಯಿಂದ ನೆಮ್ಮದಿಯಿಂದ ಜೀವನ ಸಾಗಿಸುತ್ತಿರುವುದು ಕಂಡುಬರುತ್ತದೆ. ಬೇಡ ಸಮಾಜದವರು ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬಂದರೆ ಕಬ್ಬಲಿಗ ಸಮುದಾಯ ಜಿಲ್ಲೆಯಲ್ಲಿ ಕಡಿಮೆ ಜನಸಂಖ್ಯೆ ಕಂಡುಬರುತ್ತದೆ. ದೊಡ್ಡಿಗಳಲ್ಲಿ ಕೆಲವು ತಾಲೂಕುಗಳಲ್ಲಿ ಕಂಡುಬಂದರೆ ಇನ್ನುಳಿದ ತಾಲೂಕುಗಳಲ್ಲಿ ಬೆರಳೆಣಿಕೆಯಷ್ಟು ಕಂಡುಬರುತ್ತಾರೆ.

ಆರ್ಥಿಕ ಸ್ಥಿತಿಗತಿ

ಕಬ್ಬಲಿಗ ಸಮುದಾಯವು ಆರ್ಥಿಕ ಉತ್ತಮ ಸ್ಥಿತಿಯಿಂದ ಜೀವನ ನಡೆಸುವುದು ಕಂಡುಬರುತ್ತದೆ. ಕೃಷಿ, ಮೀನುಗಾರಿಕೆ, ಕುರಿ, ಮೇಕೆ ಸಾಕಾಣಿಕೆ ಮಾಡುವುದರಿಂದ ಇವರಲ್ಲಿ ಆರ್ಥಿಕವಾಗಿ ಉತ್ತಮ ಸ್ಥಿತಿ ಕಾಣಬಹುದಾಗಿದೆ.

ಜಲಚರಗಳ ಬೇಟೆ ವೃತ್ತಿ

ಈ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಮೀನು ಹಿಡಿಯುವ ಕಾಯಕ ಮಾಡುತ್ತಾರೆ. ಹೆಚ್ಚು ಹೆಚ್ಚು ಆದಾಯ ಬರಬೇಕೆಂದು ಮೀನುಗಳನ್ನು ಹಿಡಿಯಲು ದೊಡ್ಡ ದೊಡ್ಡ ಬಲೆಗಳನ್ನು ಬಳಸುತ್ತಾರೆ. ಈ ಸಮುದಾಯದರವರು ಗುಡಗುಂಟಿ, ಟಣಮನಕಲ್ಲು, ಬುಂಕಲದೊಡ್ಡಿ, ದೇವದುರ್ಗ ಮತ್ತು ಲಿಂಗಸ್ಗೂರು ತಾಲೂಕಿನಲ್ಲಿ ಹೆಚ್ಚಿನ ಗ್ರಾಮದವರು ನದಿಯ ಪಕ್ಕದಲ್ಲಿ ವಾಸಿಸುತ್ತಿದ್ದು, ವಿಶಾಲವಾದ ಕೃಷ್ಣಾ ನದಿಯ ವಿಸ್ತಾರದಿಂದ ಈ

ಸಮುದಾಯ ದೊಡ್ಡಿಗಳಲ್ಲಿ ವಾಸಿಸುವ ಬಹುತೇಕ ಕುಟುಂಬದವರು ನದಿಯಲ್ಲಿ ದೊಡ್ಡ ದೊಡ್ಡ ಬಲೆಗಳನ್ನು ಬಿಟ್ಟು ಮೀನುಗಳನ್ನು ಹಿಡಿಯುತ್ತಾರೆ. ರಾತ್ರಿ ವೇಳೆಯಲ್ಲಿ ನಾಲ್ಕು ಐದು ಜನರು ಸೇರಿ ಹರಿಗೋಲಿನಲ್ಲಿ ಹೋಗಿ ಬಲೆಯನ್ನು ಬೀಸಿ ಬರುತ್ತಾರೆ. ನಂತರ ಬೆಳಿಗ್ಗೆ ಬೇಗ ಹೋಗಿ ಅಥವಾ ಅಲ್ಲಿಯೇ ರಾತ್ರಿ ಕಾವಲಿದ್ದು ಬಲೆಯನ್ನು ತೆಗೆದು ಸಿಕ್ಕ ಬೇಟೆಯಲ್ಲಿ ಎಲ್ಲರೂ ಸಮಾನವಾಗಿ ಹಂಚಿಕೊಳ್ಳುತ್ತಾರೆ. ಹಂಚಿಕೊಂಡ ಮೀನನ್ನು ಮನೆಗೆ ಸ್ವಲ್ಪ ಊಟಕ್ಕೆ ಉಳಿಸಿಕೊಂಡು ಉಳಿದ ಮೀನುಗಳನ್ನು ಮೀನುಗಾರರು ಪಕ್ಕದ ಗ್ರಾಮ ಅಥವಾ ಪಟ್ಟಣಕ್ಕೆ ತಂದು ಮಾರಾಟ ಮಾಡುತ್ತಾರೆ. ಇದರಿಂದ ಪ್ರತಿಯೊಬ್ಬ ವ್ಯಕ್ತಿಯು ದಿನಕ್ಕೆ ೨ ರಿಂದ ೩ ಸಾವಿರ ರೂಪಾಯಿಗಳು ಸಂಪಾದನೆ ಮಾಡುತ್ತಾರೆ. ಮೀನು ಬೇಟೆಗೆ ಹೋದಾಗ ಅಲ್ಪ ಸ್ವಲ್ಪ ಸಿಕ್ಕರೂ ಹೊಟ್ಟೆಗೆ ಮೊಸವಾಗುವುದಿಲ್ಲ ಎಂದು ಸ್ಥಳೀಯರು ಹೇಳುತ್ತಾರೆ. ಮೀನುಗಳು ಹೆಚ್ಚಾಗಿ ಸಿಕ್ಕರೆ ಅವುಗಳನ್ನು ಉಪ್ಪು ಖಾರ ಮಿಶ್ರಣಮಾಡಿ ಒಣಗಿಸಿ ದಿನನಿತ್ಯದ ಅಡುಗೆಗಳಲ್ಲಿ ಉಪಯೋಗಿಸುತ್ತಾರೆ. ಕೆರೆ, ಹಳ್ಳದ ಮೀನು ನಿತ್ಯದ ಬದುಕನ ಆರ್ಥಿಕ ಸುಭದ್ರತೆ ಅನುಕೂಲವಾಗಿದೆ.

ಒಕ್ಕಲುತನ

ಕೃಷಿ ಎಂಬುದು ಮಾನವನು ಅನಾಗರಿಕ ಸ್ಥಿತಿಯಿಂದ ನಾಗರೀಕತೆಯಡೆ ಬಂದ ನಂತರ ಒಂದು ಪ್ರಮುಖ ವೃತ್ತಿ. ಕಾಲ ಬದಲಾದಂತೆ ಮಾನವ ಭೂ ಕೃಷಿ ಮಾಡುವುದನ್ನು ಕಲಿತ. ಬೇಸಾಯದಿಂದ ಆರಂಭಿಸಿ ಉಳುಮೆಗಾಗಿ ಪ್ರಾಣಿಗಳನ್ನು ಬಳಸಿಕೊಂಡು ವ್ಯವಸಾಯ ಸ್ವಲ್ಪ ಮಟ್ಟಿಗೆ ಸುಧಾರಣೆ ಕಂಡಿತು. ಹಸಿಮಾಂಸದಿಂದ ಆರಂಭಿಸಿದ ಆಹಾರ ನಿಯಮಗಳಲ್ಲಿ ಅನೇಕ ರೀತಿಯ ಪರಿವರ್ತನೆ ಕಂಡುಕೊಳ್ಳಲಾಯಿತು. ಧಾನ್ಯಾಧಿಗಳನ್ನು ತಿಂದು ಬದುಕುವ ಮತ್ತು ಆದರ ಅವಶ್ಯಕತೆಯನ್ನು ತಿಳಿದುಕೊಂಡು ಮುಂದೆ ಕೃಷಿಯ ಮೂಲಕ ಭೂಮಿಯನ್ನು ಊಳಿ ತನೆಗೆ ಬೇಕಾದ ಬೆಳೆಗಳನ್ನು ಬಳೆದುಕೊಂಡು ಅದನ್ನೇ ಮುಖ್ಯ ಆಹಾರ ಎಂದು ಸ್ವೀಕರಿಸಿದ ಇಡೀ ಮಾನವ ಕುಲವೇ ಇಂದು ವ್ಯವಸಾಯದ ಮೇಲೆ ಜೀವಿಸುತ್ತಿರುವುದನ್ನು ಕಂಡರೆ ಬಹುಶಃ ಕೃಷಿಯನ್ನು ಅನಾವರಣ ಮಾಡಿದ ಪ್ರಾಚೀನರನ್ನು ಗೌರವಿಸಲೇ ಬೇಕಾಗುತ್ತದೆ. ಆದರೆ, ಇತ್ತೀಚಿಗೆ ಕೃಷಿಗೆ ಅನೇಕ ಸಮಸ್ಯೆಗಳು ಎದುರಾಗುತ್ತಿವೆ. ಅಧಿಕ ಬೆಲೆಯ ಧಾನ್ಯವನ್ನು ತಂದು ಬಿತ್ತನೆ ಮಾಡಿದರೆ ಸರಿಯಾದ ರೀತಿಯಲ್ಲಿ ಇಳುವರಿ ಬರದೇ ಅನೇಕ ರೈತರು ಆರ್ಥಿಕ ನಷ್ಟಕ್ಕೆ ಈಡಾಗುತ್ತಿದ್ದಾರೆ. ಆದರೂ ರೈತರು ಹೆದರದೆ ವಾಣಿಜ್ಯ ಬೆಳೆಗಳ ಮೊರೆ ಹೋಗಿ ತನಗೆ ಬೇಕಾಗುವ ಸ್ಥಿತಿಗೆ ತಕ್ಕಂತೆ ಆರ್ಥಿಕ ಸುಧಾರಣೆ ಮಾಡಿಕೊಳ್ಳುತ್ತಿದ್ದಾನೆ.

ಪಶುಪಾಲನೆ

ಕಬ್ಬಲಿಗ ಸಮುದಾಯದವರು ದೊಡ್ಡಿಗಳಲ್ಲಿ ಕೃಷಿ ಜೊತೆಗೆ ಪಶುಪಾಲನೆಯೆಂದರೆ ಹೈನುಗಾರಿಕೆಯೆಂದೆಲ್ಲಾ ತಮ್ಮ ಕೃಷಿ ಕಾರ್ಯಗಳಿಗೆ ಅನುಕೂಲನವಾಗುವಂತೆ ದನಕರುಗಳನ್ನು

ಹಸುಗಳನ್ನು ಸಾಕುತ್ತಾರೆ. ಜೊತೆಗೆ ಕೋಳಿ, ಮೇಕೆಗಳನ್ನು ಸಾಕುತ್ತಾರೆ. ಕೆಲವರು ತಮ್ಮ ದೈನಂದಿನ ಹಾಲು, ಮೊಸರು, ಮಜ್ಜಿಗೆ ಸಹಾಯಕವಾಗುವುದರ ಜೊತೆಗೆ ಪರ್ಯಾಯ ಉದ್ಯೋಗ ಲಾಭವನ್ನು ಗಳಿಸುವುದಕ್ಕೆ ಅನುಕೂಲವಾಗಿದೆ.

ಶೈಕ್ಷಣಿಕ ಸ್ಥಿತಿಗತಿ

ಕಬ್ಬಲಿಗ ಸಮುದಾಯದವರಲ್ಲಿ ಶಿಕ್ಷಣವು ಸ್ವಲ್ಪ ಪ್ರಮಾಣದಲ್ಲಿತ್ತು. ಯಾಕೆಂದರೆ ಈ ಕುಲದ ವೃತ್ತಿ ಮೀನು ಹಿಡಿಯುವುದು. ಅಲ್ಲದೇ ಒಂದು ಊರಿನಿಂದ ಇನ್ನೊಂದು ಊರಿಗೆ ವಲಸೆ ಹೋಗುವುದು. ಹೀಗಾಗಿ ಇವರು ನದಿ, ಕೆರೆ, ಹಳ್ಳದ ದಂಡೆಯಲ್ಲಿ ಹುಲ್ಲಿನ ಗುಡಿಸಲುಗಳನ್ನು ಹಾಕಿಕೊಂಡು ಮತ್ತು ಗುಡ್ಡಗಾಡು ಪ್ರದೇಶಗಳಲ್ಲಿ ವಾಸಿಸುವುದರಿಂದ ಇವರಿಗೆ ಹೆಚ್ಚಿನ ಶಿಕ್ಷಣಕ್ಕೆ ಮಹತ್ವ ಕೊಡಲಾಗಲಿಲ್ಲ. ಏಕೆಂದರೆ ಊರಿನಿಂದ ಊರಿಗೆ ವಲಸೆ ಹೋಗುವುದೇ ಮುಖ್ಯ ಉದ್ದೇಶ ಎಂದ ಮೇಲೆ ಶಿಕ್ಷಣದ ಕಡೆಗೆ ಯಾರೂ ಗಮನ ಹರಿಸಲಿಲ್ಲ. ಬರುಬರುತ್ತಾ ಜನ ಸಂದಣಿ ಹೆಚ್ಚಾದ ಹಾಗೆಲ್ಲ ಜನರು ಶಿಕ್ಷಣ ಜೊತೆಗೆ ಪರ್ಯಾಯ ಉದ್ಯೋಗ ಕಂಡುಕೊಂಡರು. ಆಗ ಅವರಿಗೆ ಶಿಕ್ಷಣದ ಜ್ಞಾನವೆಂಬ ಬೆಳಕು ಮನದಲ್ಲಿ ಮೂಡಿತ್ತು. ಆಗ ತಮ್ಮ ಮಕ್ಕಳನ್ನು ಪಾಠಶಾಲೆಗೆ ಕಳುಹಿಸಿಕೊಡಲು ಮುಂದಾದರು. ಕಬ್ಬಲಿಗ ಸಮುದಾಯದವರ ವೃತ್ತಿಯೇ ಬೇರೆಯಾಗಿತ್ತು. ಶಿಕ್ಷಣದ ಅವಶ್ಯಕತೆ ಅವರಿಗೆ ಬೇಕಾಗಿರಲಿಲ್ಲ. ಹಾಗಾಗಿ ಕಡಿಮೆ ಪ್ರಮಾಣದಲ್ಲಿ ಜನರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಿಕೊಡುತ್ತಿದ್ದರು. ಅದರಲ್ಲಿ ಹೆಚ್ಚಾಗಿ ಗಂಡು ಹೆಣ್ಣು ಎಂದು ಯಾವುದೇ ಬೇದಭಾವ ಮಾಡದೆ ಎಲ್ಲಾ ಮಕ್ಕಳನ್ನು ಶಾಲೆಗೆ ಕಳುಹಿಸುತ್ತಿದ್ದಾರೆ. ಕೆಲವು ವರ್ಷಗಳ ಹಿಂದೆ ಗಂಡು ಮಕ್ಕಳನ್ನು ಸಹ ಶಾಲೆಗೆ ಕಳುಹಿಸಿದರೆ ಅವರು ಸುಮಾರು ೫ ಮತ್ತು ೬ನೇ ತರಗತಿಗೆ ಬಂದ ಕೂಡಲೇ ಶಾಲೆ ಬಿಡಿಸಿ ದನ, ಕುರಿ, ಮೇಕೆಗಳನ್ನು ಕಾಯಲಿಕ್ಕೆ ಅಡವಿಗೆ ಕಳುಹಿಸುತ್ತಿದ್ದರು. ಸ್ವಲ್ಪ ದೊಡ್ಡವರಾದ ಮೇಲೆ ಕೂಲಿ ನಾಲಿಗೆ ಕಳಿಸುವುದು ಅವರ ಕರ್ತವ್ಯವಾಗಿತ್ತು. ಹೀಗೆ ಅವರು ಜೀವನವನ್ನು ಸಾಗಿಸುತ್ತಿದ್ದರು. ಅವರು ಮೂಢನಂಬಿಕೆಗಳಿಗೆ ಒಳಗಾಗಿ ಅದರಂತೆ ನಡೆಯುತ್ತಿದ್ದರು. ಕಬ್ಬಲಿಗ ಸಮುದಾಯದಲ್ಲಿ ಅವಿದ್ಯಾವಂತರೇ ಬಹಳ. ಅವರು ಶಿಕ್ಷಣದ ಕಡೆಗೆ ಹೆಚ್ಚು ಗಮನಹರಿಸದೇ ಅದರಿಂದ ನಮಗೇನು ಲಾಭ ದನ ಕರುಗಳನ್ನು ಕಾಯುವುದು ಮೀನುಬೇಟೆ ಮಾಡಿದರೆ ನಮ್ಮ ದೈನಂದಿನ ಹೊಟ್ಟೆ ಹೊರೆಯಲಿಕ್ಕೆ ಆದಾರವೆಂದು ತಿಳಿಯುತ್ತಿದ್ದರು. ಹೀಗಿರುವಾಗ ಮಕ್ಕಳಿಗೆ ವಿದ್ಯಾಭ್ಯಾಸ ಎಲ್ಲಿಂದ ಕಲಿಸಬೇಕು. ಹಾಗೂ ವಿದ್ಯೆಯ ಮಹತ್ವವೇ ಅಡವಿಯಲ್ಲಿ ವಾಸಿಸುವರಿಗೆ ಗೊತ್ತಿರಲಿಲ್ಲ. ಇದಕ್ಕೆ ಕಾರಣ ಕಬ್ಬಲಿಗ ಸಮುದಾಯ ಅಡವಿಯಲ್ಲಿ ದೊಡ್ಡಿಗಳ ನಿರ್ಮಾಣ ಮಾಡಿಕೊಂಡು ನೆಲೆಸಿರುವುದರಿಂದ ವಿದ್ಯಾಭ್ಯಾಸಕ್ಕೆ ಕೊಡಲಿ ಪೆಟ್ಟು ಬಿದ್ದಂತಾಗಿದೆ. ‘ವಿದ್ಯೆ ಇಲ್ಲದವನ ಬಾಳು ಹದ್ದಿಗಿಂತ ಕಡೆ’ ಎನ್ನುವಂತೆ ವಿದ್ಯೆ ಮನುಷ್ಯನ ಸರ್ವತೋಮುಖ ಏಳ್ಗೆಗಾಗಿ ಒಂದು ಆಧಾರ ಸ್ಥಂಬವಿದ್ದಂತೆ ಅದನ್ನು ಅರಿತುಕೊಂಡು ಅಂದಿನಿಂದಲೂ ಈ

ಸಮುದಾಯದವರು ವಿದ್ಯೆಗೆ ಬೆಲೆ ಕೊಟ್ಟಿದ್ದಾರೆ. ಎಷ್ಟೇ ಕಷ್ಟವಾದರೂ ತಮ್ಮ ಮಕ್ಕಳಿಗೆ ಶಿಕ್ಷಣದಲ್ಲಿ ಯಾವುದೇ ಕೊರತೆ ಆಗದಂತೆ ನೋಡಿಕೊಳ್ಳುತ್ತಿದ್ದಾರೆ. ಇಂದು ಸಹ ಕಬ್ಬಲಿಗ ಸಮುದಾಯದವರು ವಿದ್ಯೆ ಮೇಲೆ ಪ್ರೀತಿ ಬಹಳಷ್ಟು ಹೆಚ್ಚುತ್ತಿದೆ. ಇಂದಿನ ಸ್ಪರ್ಧಾಯುಗದಲ್ಲಿ ಎಲ್ಲಾ ಸಮುದಾಯದವರ ಸ್ಥಿತಿಗೆ ಅನುಗುಣವಾಗಿ ಬದುಕುತ್ತಿದ್ದಾರೆ. ಶೈಕ್ಷಣಿಕವಾಗಿ ಇವರ ಸ್ಥಿತಿ ದೊಡ್ಡಿಗಳಲ್ಲಿ ವಿದ್ಯಾವಂತರ ಪ್ರಮಾಣದಲ್ಲಿ ಶೇಕಡಾ ೧೦ರಷ್ಟು ಶಿಕ್ಷಣ ಪಡೆದಿದ್ದು, ಇದರಲ್ಲಿ ೧೦ನೇ ತರಗತಿವರೆಗೆ ಶೇಕಡಾ ೬ರಷ್ಟು ಪ್ರಮಾಣ, ಪದವೀಧರರ ಪ್ರಮಾಣ, ಶೇಕಡಾ ೩ರಷ್ಟು ಇತರೆ ಕ್ಷೇತ್ರಗಳಲ್ಲಿ ಇರುತ್ತಾರೆ. ಸರ್ಕಾರಿ ಹುದ್ದೆಗಳಲ್ಲಿ ನೆಮ್ಮದಿ ಪಡುವಂತಹದ್ದು. ಅಡವಿಯಲ್ಲಿ ಇರುವ ಸಮುದಾಯದಲ್ಲಿ ಸ್ವಲ್ಪ ಉತ್ತಮ ಎಂದು ಹೇಳಬಹುದು. ಒಟ್ಟಾರೆ ಸರ್ಕಾರಿ ನೌಕರರ ಸಂಖ್ಯೆಯಲ್ಲಿ ಶೇಕಡಾ ೦.೬ರಷ್ಟು ಜನರು ಸೇವೆಯಲ್ಲಿ ಇದ್ದಾರೆ. ಇದರಿಂದ ಶೈಕ್ಷಣಿಕವಾಗಿ ಕಬ್ಬಲಿಗ ಸಮುದಾಯದವರು ಶಿಕ್ಷಣಕ್ಕೆ ಹೆಚ್ಚು ಆದ್ಯತೆ ನೀಡುತ್ತಿರುವುದು ಕಾಣಬಹುದು.

ಅಡಿಟಿಪ್ಪಣಿಗಳು

೧. ಮಂಜುನಾಥ ಬೇವಿನಕಟ್ಟಿ ಮತ್ತು ತಾರಿಹಳ್ಳಿ ಹನುಮಂತಪ್ಪ (ಸಂ,) ೨೦೦೬, ವಾಲ್ಮೀಕಿ ಸಂಪದ, ಪು.ಸಂ.೮

೨. ಹರ್ತಿಕೋಟೆ ವೀರೇಂದ್ರ ಸಿಂಹ ಮತ್ತು ಅಮರೇಶ ಯತಗಲ್ (ಸಂ), ೨೦೦೮, ವಾಲ್ಮೀಕಿ ಮಂದಾರ, ಪು.ಸಂ.೧೮೬

೩. ಅದೇ, ಪು.ಸಂ. ೧೮೭

೪. ಜಗದೀಶ ಕುಮಾರ್, ೨೦೦೯, ಬೇಡ ಸಮುದಾಯದ ಮಹಿಳೆ, ಪು.ಸಂ. ೬೪

೫. ಮಂಜುನಾಥ ಬೇವಿನಕಟ್ಟಿ ಮತ್ತು ತಾರಿಹಳ್ಳಿ ಹನುಮಂತಪ್ಪ (ಸಂ,) ೨೦೦೬, ವಾಲ್ಮೀಕಿ ಸಂಪದ, ಪು.ಸಂ.೧೧

೬. ತಾರಿಹಳ್ಳಿ ಹನುಮಂತಪ್ಪ, (ಸಂ), ೨೦೧೨, ನಾಯಕರ ಮಹಾಸಂಸ್ಥಾನ ಸುರಪುರ, ಪು.ಸಂ೧೪೭

೭. ಡಂಗ ಡಿ.ಬಿ. ೧೯೮೮, ಬೇಡ ಜನಾಂಗದ ಪರಿಚಯ, ಪು.ಸಂ. ೧೨

೮. ವಿರೂಪಾಕ್ಷಿ ಪೂಜಾರಹಳ್ಳಿ, (ಸಂ), ೨೦೦೬, ವಾಲ್ಮೀಕಿ ಸಿರಿ, ಪು.ಸಂ. ೫

೯. ಯರ್ರಪ್ಪ ಡಿ, ೨೦೦೮, ಅಲೆಮಾರಿ ಕುರುಬ, ಪು.ಸಂ. ೩೯

೧೦. ಅದೇ, ಪು.ಸಂ. ೪೨

೧೧. ಗುರುಲಿಂಗಯ್ಯ ಎಂ. ೨೦೦೮, ಕಾಡುಗೊಲ್ಲ, ಪು.ಸಂ. ೧೦೩

೧೨. ಮಂಜುನಾಥ ಬೇವಿನಕಟ್ಟಿ (ಸಂ), ೨೦೦೯, ಜನಪದ ಕರ್ನಾಟಕ, ಪು.ಸಂ.೧೪೩

೧೩. ಅದೇ, ಪು.ಸಂ. ೧೪೪

೧೪. ಅದೇ, ಪು.ಸಂ. ೧೪೬

೧೫. ವಿರೂಪಾಕ್ಷಿ ಪೂಜಾರಹಳ್ಳಿ, ೨೦೦೨, ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು, ಪು.ಸಂ. ೪೮

೧೬. ಅದೇ, ಪು.ಸಂ. ೪೯

೧೭. ಅದೇ, ಪು.ಸಂ. ೫೦

೧೮. ತಾರಿಹಳ್ಳಿ ಹನುಮಂತಪ್ಪ (ಸಂ), ೨೦೧೩, ಕಮಲಾಪುರದ ಬೇಡ ನಾಯಕರ ಸಾಮಾಜಿಕ ಮತ್ತು ಸಾಂಸ್ಕೃತಿಕ ಬದಲಾವಣೆಗಳು, ಪು.ಸಂ.೨೧೧೮

೧೯. ಕೃಷ್ಣಮೂರ್ತಿ ಎನ್. ೨೦೦೯, ಒಡಿಗ ಬುಡಕಟ್ಟು, ಪು.ಸಂ.೧೯೭

೨೦. ಅದೇ, ಪು.ಸಂ. ೧೯೮

೨೧. ವಿರೂಪಾಕ್ಷಿ ಪೂಜಾರಹಳ್ಳಿ, ೨೦೦೮, ಬೇಡ ಬುಡಕಟ್ಟಿನ ಚರಿತ್ರೆ ಮತ್ತು ಸಂಸ್ಕೃತಿ, ಪು.ಸಂ. ೧೪೬

೨೨. ನಾಯ್ಕರ್ ಬ.ಪ. ೨೦೦೭, ಹಾಲುಮತಸ್ಥರು, ಪು.ಸಂ. ೩
೨೩. ಹಳ್ಳಿಕೇರಿ ಎಫ್.ಟಿ, (ಸಂ), ೨೦೦೭, ಕುರುಬರ ಗುರು ಒಡೆಯರು ಪು.ಸಂ.೬
೨೪. ಬಿರಾದರ ಬಿ.ಜಿ, ೨೦೧೦, ಕುರುಬರ ಗುರುಒಡೆಯರ ಸಾಂಸ್ಕೃತಿಕ ಅಧ್ಯಯನ, ಪು.ಸಂ. ೨೭
೨೫. ಒಡೆಯರ್ ಡಿ. ಹೆಗಡೆ, ೨೦೦೫, ಹಾಲುಮತ ಕುರುಬ ಜನಾಂಗದ ಚರಿತ್ರೆ, ಪು.ಸಂ. ೩೩
೨೬. ನಾಯ್ಕರ್ ಬ.ಪ. ೨೦೦೭, ಹಾಲುಮತಸ್ಥರು ಪು.ಸಂ. ೫
೨೭. ಅದೇ, ಪು.ಸಂ. ೨೫
೨೮. ಶಿವಾನಂದ ಗುಬ್ಬಣ್ಣನವರ, ೧೯೯೩, ಕರ್ನಾಟಕದ ಕುರುಬರು, ಪು.ಸಂ. ೨೭
೨೯. ಹಳ್ಳಿಕೇರಿ ಎಫ್.ಟಿ, (ಸಂ), ೨೦೦೯, ಹಾಲುಮತ ವ್ಯಾಸಂಗ-೧, ಪು.ಸಂ. ೨೨
೩೦. ಅದೇ, ಪು.ಸಂ. ೩೦
೩೧. ಚನ್ನಪ್ಪ ಕಟ್ಟಿ (ಸಂ), ೧೯೯೭, ಕುರುಬ ಜನಪದ, ಪು.ಸಂ. ೩೭
೩೨. ಶಂಕರನಾರಾಯಣ ತೀ.ನಂ, ೧೯೮೮, ಕಾಡುಗೊಲ್ಲರು, ಪು.ಸಂ. ೨೨
೩೩. ಗುರುಲಿಂಗಯ್ಯ ಎಂ, ೨೦೦೫, ಕರ್ನಾಟಕದ ಗೊಲ್ಲಸಮುದಾಯ, ಪು.ಸಂ.೬
೩೪. ಶ್ರೀನಿವಾಸ ಎಲ್, ೨೦೧೩, ಕರ್ನಾಟಕದ ಗಂಗಮತ ಹಾಗೂ ಅದರ ಉಪಜಾತಿಗಳ ಕುಲಶಾಸ್ತ್ರೀಯ ಅಧ್ಯಯನ ವರದಿ, ಪು.ಸಂ. ೮
೩೫. ಅದೇ, ಪು.ಸಂ. ೧೦
೩೬. ಕೃಷ್ಣೇಗೌಡ, ೨೦೧೦, ಗಂಗಮತಸ್ಥರ ಜಾನಪದ ಅಧ್ಯಯನ, ಪು.ಸಂ. ೨೫
೩೭. ಅದೇ, ಪು.ಸಂ. ೨೮
೩೮. ಅದೇ, ಪು.ಸಂ. ೩೨
೩೯. ಅದೇ, ಪು.ಸಂ. ೪೨
೪೦. ಅದೇ, ಪು.ಸಂ. ೪೯
೪೧. ಶ್ರೀನಿವಾಸ ಎಲ್, ೨೦೧೩, ಕರ್ನಾಟಕದ ಗಂಗಮತ ಹಾಗೂ ಅದರ ಉಪಜಾತಿಗಳ ಕುಲಶಾಸ್ತ್ರೀಯ ಅಧ್ಯಯನ ವರದಿ, ಪು.ಸಂ. ೪೮
೪೨. ಅದೇ, ಪು.ಸಂ. ೪೯

ಅಧ್ಯಾಯ ಐದು

ಸಮುದಾಯಗಳ ಜನಜೀವನ

೫.೧. ದೊಡ್ಡಿಗಳ ಸ್ಥಿತಿಗತಿ

೫.೨. ಕ್ಷೇತ್ರಕಾರ್ಯದ ಕೋಷ್ಟಕಗಳು

ಅಧ್ಯಾಯ ಐದು

ಸಮುದಾಯಗಳ ಜನಜೀವನ

೫.೧ ದೊಡ್ಡಿಗಳ ಸ್ಥಿತಿಗತಿ

ಬಿಲಿಬಿಂಚಿ ತಿಮ್ಮಯ್ಯನದೊಡ್ಡಿ ಈ ದೊಡ್ಡಿಯು ರಾಯಚೂರು ಜಿಲ್ಲೆ ಲಿಂಗಸ್ಗೂರು ತಾಲೂಕಿನ ಗುರುಗುಂಟಾ ಹೋಬಳಿಗೆ ಸೇರಿದ ತಾಲೂಕ ಕೇಂದ್ರದಿಂದ ಉತ್ತರ ದಿಕ್ಕಿಗೆ ೨೦.ಕೀ.ಮಿ.ದೂರದಲ್ಲಿದೆ. ಹೆಚ್ಚಿನ ಸಂಖ್ಯೆಯಲ್ಲಿ ಕಡುಬಡವರು ಈ ದೊಡ್ಡಿಯಲ್ಲಿ ನೆಲೆಸಿದ್ದಾರೆ. ಯಾವುದೇ ಮೂಲಭೂತ ಸೌಕರ್ಯಗಳು ವಸ್ತುಗಳು ಬೇಕಾದರೆ ಗುರುಗುಂಟಾಕ್ಕೆ ಬರಬೇಕಾಗುತ್ತದೆ. ಇದು ಅತ್ಯಂತ ಕುಗ್ರಾಮ ಎಂದು ಹೇಳಿದರೆ ತಪ್ಪಾಗಲಾರದು. ಇಲ್ಲಿಯವರ ಮುಖ್ಯ ಕಸುಬು ಒಕ್ಕಲುತನ. ನೀರಾವರಿ ಬಂದು ಹತ್ತು-ಹದಿನೈದು ವರ್ಷ ಕಳೆದರೂ ಇನ್ನು ಭೂಮಿ ಸಮತಟ್ಟಾಗಿಲ್ಲ, ಇದರಿಂದ ಇಲ್ಲಿನ ನಿವಾಸಿಗಳಿಗೆ ಭೂಮಿ ಇದ್ದರೂ ಸರಿಯಾದ ರೀತಿಯಲ್ಲಿ ಕೃಷಿಗೆ ಬಳಕೆಯಾಗುತ್ತಿಲ್ಲ. ಸ್ವಲ್ಪ ಭೂಮಿಯು ಕಾಲುವೆಯಿಂದ ಎತ್ತರವಾದ ಪ್ರದೇಶದಲ್ಲಿ ಇರುವುದರಿಂದ ನೀರಾವರಿ ಭಾಗ್ಯವಿಲ್ಲದಂತಾಗಿದೆ.

ಈ ದೊಡ್ಡಿಯಲ್ಲಿ ನೆಲೆಸಿರುವ ಸಮುದಾಯವೆಂದರೆ ಬೇಡ ಸಮುದಾಯ. ಹೆಚ್ಚಿನ ಸಂಖ್ಯೆಯಲ್ಲಿ ಗುಡಿಸಲುಗಳಿಂದ ಕೂಡಿದ ಚಿಕ್ಕ ದೊಡ್ಡಿಯಾಗಿದೆ. ಇವರಿಗೆ ಕೃಷಿಯೇ ಬದುಕು. ಕಡಿಮೆ ಜಮೀನು ಹೊಂದಿರುವವರು ಬೇರೆಯವರ ಭೂಮಿಯನ್ನು ಗುತ್ತಿಗೆ ಹಾಕಿಕೊಂಡು ಕೆಲಸವನ್ನು ಮಾಡುತ್ತಾರೆ. ಇನ್ನು ಒಂದು ಮನೆಯಲ್ಲಿ ಹೆಚ್ಚು ಮಕ್ಕಳಿದ್ದರೆ ಅವರನ್ನು ಚಿಕ್ಕ ವಯಸ್ಸಿನಲ್ಲಿ ಮದುವೆ ಮಾಡಿ ತಮ್ಮ ಜವಾಬ್ದಾರಿಯನ್ನು ಕಳೆದುಕೊಳ್ಳುತ್ತಾರೆ. ಚಿಕ್ಕ ವಯಸ್ಸಿನಲ್ಲಿ ದಾಂಪತ್ಯಕ್ಕೆ ಕಾಲಿಟ್ಟು ಕುಟುಂಬವನ್ನು ಸಾಕಲು ಭೂಮಿ ಇಲ್ಲದವರು ರಾಜ್ಯದ ರಾಜಧಾನಿ ಬೆಂಗಳೂರಿಗೆ ವಲಸೆ ಹೋಗುವುದು ಸಾಮಾನ್ಯವಾಗಿದೆ. ಕೃಷಿ ಬಿಟ್ಟು ಬೇರೆ ಕೆಲಸ ಮಾಡಲು ಅವಕಾಶಗಳು ಇಲ್ಲ, ಇದ್ದರೂ ಆರ್ಥಿಕವಾಗಿ ತೀರ ಹಿಂದುಳಿದವರಾದ್ದರಿಂದ ತಮ್ಮ ಹೊಟ್ಟೆಪಾಡಿಗಾಗಿ ಇಲ್ಲಿನ ಜನ ಗೂಳೆ ಹೋಗುವುದು ಸಹಜವಾಗಿ ಕಂಡುಬರುತ್ತದೆ. ಇಲ್ಲಿನ ನಿವಾಸಿಗಳಿಗೆ ಸರಿಯಾದ ರೀತಿಯಲ್ಲಿ ಶಿಕ್ಷಣ ಸೌಲಭ್ಯ ಇಲ್ಲದೆ ಇರುವುದರಿಂದ ಯಾವುದೇ ಕೆಲಸ ಮಾಡುವುದಕ್ಕೆ ಬರುವುದಿಲ್ಲ,

ಬಂದರೆ ಕೃಷಿ ಕೆಲಸ ಇಲ್ಲದಿದ್ದರೆ ನಗರಗಳಲ್ಲಿ ಕೂಲಿ ಮಾಡಿ ತಮ್ಮ ಸಂಸಾರವನ್ನು ಸಾಗಿಸುತ್ತಾರೆ.

ತಮ್ಮ ದೊಡ್ಡಿಯಲ್ಲಿ ಇದ್ದರೆ ಕಾಡಿನ ವನವಾಸ. ಇನ್ನೊಂದು ಕಡೆ ವಲಸೆ ಬಂದರೆ ನಗರದ ಕೊಳಚೆ ಪ್ರದೇಶದ ಸಹವಾಸ ಇದರಿಂದ ಕಾಯಿಲೆಗಳಿಂದ ತಮ್ಮ ಇಡೀ ಕುಟುಂಬವನ್ನು ಸಂಕಷ್ಟಕ್ಕೆ ಈಡುಮಾಡಿಕೊಳ್ಳುತ್ತಾರೆ. ಅಲ್ಲಿಗೂ ನಗರದ ಬದುಕಿನ ಸಹವಾಸದಿಂದ ಅವರಿಗೆ ತೊಂದರೆಯೂ ತಪ್ಪಿದ್ದಲ್ಲ.

ವಲಸೆ ಹೋಗಿ ಅಲ್ಪಸ್ವಲ್ಪ ಹಣ ಮಾಡಿಕೊಂಡು ತಮ್ಮ ದೊಡ್ಡಿಯಲ್ಲಿ ಮನೆಗಳನ್ನು ನಿರ್ಮಿಸಿಕೊಂಡಿದ್ದಾರೆ. ಇವರ ಅಲೆಮಾರಿ ಜೀವನದಿಂದ ಮಕ್ಕಳಿಗೆ ಶಿಕ್ಷಣ ಕೊಡುವುದಕ್ಕೆ ಆಗಿಲ್ಲವೆಂದು ಇಲ್ಲಿನ ನಿವಾಸಿಗಳ ಅಭಿಪ್ರಾಯವಾಗಿದೆ. ಒಟ್ಟಾರೆಯಾಗಿ ಈ ದೊಡ್ಡಿಯಲ್ಲಿ ಕೂಲಿ ಆಳುಗಳನ್ನು ಕಾಣಬಹುದೇ ವಿನಃ ಶಿಕ್ಷಣ ಪಡೆದವರನ್ನಲ್ಲ.

ಕಬ್ಬೇರ ದೊಡ್ಡಿ

ಈ ದೊಡ್ಡಿಯು ರಾಯಚೂರು ಜಿಲ್ಲೆ ಲಿಂಗಸ್ಗೂರು ತಾಲೂಕಿನ ಗುರುಗುಂಟಾ ಹೋಬಳಿಗೆ ಸೇರಿದೆ. ತಾಲೂಕು ಕೇಂದ್ರದಿಂದ ಈಶಾನ್ಯ ದಿಕ್ಕಿಗೆ ೨೩ ಕಿ..ಮೀ ದೂರದಲ್ಲಿದೆ. ಭೌಗೋಳಿಕವಾಗಿ ಚಿಂಚೋಡಿ ದೊಡ್ಡಿ ಗ್ರಾಮದ ವ್ಯಾಪ್ತಿಗೆ ಬರುತ್ತದೆ. ಸಾಕು ಪ್ರಾಣಿಗಳಾದ ಎತ್ತು, ಎಮ್ಮೆ, ಆಕಳು, ಆಡು ಕುರಿ ಸಾಕಾಣಿಕೆ ಮಾಡುವುದು ಇಲ್ಲಿ ಹೆಚ್ಚಾಗಿ ಕಂಡುಬರುತ್ತದೆ.

ಕಬ್ಬೇರ ದೊಡ್ಡಿಯಲ್ಲಿ ಬಹುಸಂಖ್ಯಾತರು ಇವರೆ ಆಗಿದ್ದು, ನಾಯಕ ಸಮುದಾಯದವರ ಸಂಖ್ಯೆ ಅಲ್ಪ ಪ್ರಮಾಣದ್ದಾಗಿದೆ. ಕನ್ನಡ ಪ್ರಮುಖ ಭಾಷೆ, ಮಧ್ಯಮ ವರ್ಗದವರು ಮತ್ತು ಕಡುಬಡವರು ಇರುವ ಈ ನೆಲೆಯಲ್ಲಿ ಕಾಂಕ್ರೀಟ್ ಮನೆ, ಮಣ್ಣಿನ ಮನೆ, ತಗಡಿನಮನೆ ಮತ್ತು ಗುಡಿಸಲು ಮನೆಗಳಿವೆ.

ಕೃಷಿ ಪ್ರಧಾನ ಉದ್ಯೋಗವಾಗಿದ್ದು, ಸಜ್ಜೆ, ಜೋಳ, ಶೇಂಗಾ, ಈರುಳ್ಳಿ ಪ್ರಮುಖ ಬೆಳೆಗಳನ್ನು ಬೆಳೆಯುತ್ತಾರೆ. ಜೊತೆಗೆ ಕುಲಕಸುಬುಗಳಾದ ಮೀನುಗಾರಿಕೆ ಹೈನುಗಾರಿಕೆಯನ್ನು ಮಾಡುತ್ತಾರೆ. ಕೃಷಿ ಚಟುವಟಿಕೆ ಇಲ್ಲದೇ ಇರುವಾಗ ಪಕ್ಕದ ಹಳ್ಳದಲ್ಲಿ ಮೀನು ಬೇಟೆಯಾಡಿ ಮೀನು ಮಾರಾಟ ಮಾಡಿ ಜೀವನ ಸಾಗಿಸುತ್ತಾರೆ.

ಈ ದೊಡ್ಡಿಯಲ್ಲಿ ಅನೇಕ ಕಬ್ಬೇರ ಕುಟುಂಬಗಳಿದ್ದು. ಮೀನು ಬೇಟೆಯಾಡುವ ಮೂಲಕ ಆರ್ಥಿಕವಾಗಿ ಸದೃಢವಾಗಿದ್ದಾರೆ. ಜೊತೆಗೆ ಕೃಷಿ ಕೆಲಸ ಮಾಡಿ ಸ್ವಾವಲಂಬಿ ಬದುಕು ಸಾಗಿಸುತ್ತಿದ್ದಾರೆ. ಎಷ್ಟೇ ಕಷ್ಟವಿದ್ದರೂ ತಮ್ಮ ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಡಿಸುವ ಕೆಲಸ ಮಾಡುತ್ತಿದ್ದಾರೆ. ನಾವು ಪಡುವ ಕಷ್ಟ ಮುಂದೆ ನಮ್ಮ ಮಕ್ಕಳು ಅನುಭವಿಸಬಾರದೆಂದು ಮಕ್ಕಳ ಭವಿಷ್ಯದ ಬದುಕು ಸುಂದರಗೊಳಿಸುವಂತೆ ಮಾಡುತ್ತಿದ್ದಾರೆ.

ಇಲ್ಲಿನ ನಿವಾಸಿಗಳಿಗೆ ವಿದ್ಯುತ್ ಮತ್ತು ರಸ್ತೆ ದೊಡ್ಡ ಸಮಸ್ಯೆಯಾಗಿದೆ. ವಿದ್ಯುತ್ ಟಿ.ಸಿ. ಕೆಟ್ಟರೆ ಎರಡು ಮೂರು ತಿಂಗಳು ಕತ್ತಲಲ್ಲಿ ಕಾಲ ಕಳೆಯಬೇಕಾಗುತ್ತದೆ. ಇದರಿಂದ

ಇಲ್ಲಿನ ಮಕ್ಕಳಿಗೆ ಶೈಕ್ಷಣಿಕವಾಗಿ ತೀರ ಅನಾನುಕೂಲವಾಗಿದೆ. ಜೊತೆಗೆ ಪಂಪಸೆಟ್‌ಗಳು ನಿಂತುಹೋಗುವುದರಿಂದ ಕೃಷಿ ಕೆಲಸಕ್ಕೆ ತೊಂದರೆಯಾಗುತ್ತಿದೆ. ಎಷ್ಟೋ ರೈತರು ವಿದ್ಯುತ್ ನಂಬಿ ಒಕ್ಕಲುತನ ಮಾಡುತ್ತಿದ್ದಾರೆ. ವಿದ್ಯುತ್ ಕೈಕೊಟ್ಟರೆ ಅವರ ಬದುಕು ತುಂಬಾ ಗಂಭೀರ ಪರಿಸ್ಥಿತಿ ಎದುರಿಸಬೇಕಾಗುತ್ತದೆ. ಲಕ್ಷಾಂತರ ರೂಪಾಯಿ ಖರ್ಚು ಮಾಡಿದ ಫಸಲು ಸರಿಯಾದ ರೀತಿಯಲ್ಲಿ ಬರದಿದ್ದರೆ ತುಂಬಾ ಆರ್ಥಿಕ ನಷ್ಟವನ್ನು ಅನುಭವಿಸಬೇಕಾಗುತ್ತದೆ.

ಗೋಪಾಲ ದೊಡ್ಡಿ

ಈ ದೊಡ್ಡಿಯಲ್ಲಿ ನಾಯಕರು ಹೆಚ್ಚಿನ ಪ್ರಮಾಣದಲ್ಲಿದ್ದರೆ. ಅಂಬಿಗರದು ಸಣ್ಣ ಸಮುದಾಯವಾಗಿದೆ. ಕನ್ನಡ ಭಾಷೆ ಮಾತನಾಡುತ್ತಾರೆ. "ಬಡವರು ಮತ್ತು ಮಧ್ಯಮ ವರ್ಗದವರು ಇಲ್ಲಿ ನೆಲೆಸಿರುವುದು ಕಂಡುಬರುತ್ತದೆ." ಈ ಸ್ಥಳದಲ್ಲಿ ತಗಡಿನ ಮನೆ ಮತ್ತು ಗುಡಿಸಲು ಮನೆಗಳಿವೆ. ಶೈಕ್ಷಣಿಕವಾಗಿ ಹೇಳುವುದಾದರೆ ಯಾವುದೇ ಶಾಲೆ ಈ ದೊಡ್ಡಿಯಲ್ಲಿ ಇರುವುದಿಲ್ಲ. ಶಾಲೆಗೆ ಮಕ್ಕಳನ್ನು ಕಳುಹಿಸುವ ಕೆಲಸ ಇಲ್ಲಿನ ನಿವಾಸಿಗಳು ಮಾಡುವುದಿಲ್ಲ. ಕಾರಣ ಇಷ್ಟೇ ಮಕ್ಕಳಿಂದ ಅನೇಕ ಕೆಲಸ ಕಾರ್ಯಗಳಲ್ಲಿ ಅನುಕೂಲ ಪಡೆದುಕೊಳ್ಳುವುದಕ್ಕಾಗಿ ಶಿಕ್ಷಣ ಕಲಿಯುವ ವಯಸ್ಸಿನಲ್ಲಿ ಬದುಕು ಕಲಿಯುವ ಕೆಲಸವನ್ನು ಇಲ್ಲಿನ ಪಾಲಕರು ಮತ್ತು ಪೋಷಕರು ಮಾಡುತ್ತಿದ್ದಾರೆ. ಒಬ್ಬ ಮಗ ತಮ್ಮ ಕೆಲಸದಲ್ಲಿ ಆಸರೆಯಾದರೆ ಇನ್ನೊಬ್ಬ ಮಗನನ್ನು ಕುರಿ ಮೇಕೆ ಕಾಯಲು ಕಳುಹಿಸುತ್ತಾರೆ. ಇನ್ನು ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಬಂದರೆ ಅವರ ಕಷ್ಟ ಹೇಳತೀರದು. ಹೆಣ್ಣುಮಕ್ಕಳು ಮನೆಯಲ್ಲಿ ಕೆಲಸ ಮಾಡಬೇಕು. ನಂತರ ಹೊಲದಲ್ಲಿ ಕೆಲಸ ಮಾಡಬೇಕು. ಇಲ್ಲವೆಂದರೆ ಮನೆಯಲ್ಲಿ ತಮ್ಮ ಚಿಕ್ಕ ಮಕ್ಕಳ ಆರೈಕೆ ಮಾಡುವ ಕೆಲಸ ಮಾಡಬೇಕು ಯಾಕೆ ಶಾಲೆಗೆ ಹೋಗುವುದಿಲ್ಲವೆಂದರೆ ಮನೆ ಕೆಲಸ ಮಕ್ಕಳನ್ನು ಆಡಿಸುವ ಕೆಲಸ ಯಾರು ಮಾಡುತ್ತಾರೆ. ಎಂದು ಅವರ ಕುಟುಂಬದವರು ಹೇಳುತ್ತಾರೆ. ಇಷ್ಟಕ್ಕೂ ಈ ಹೆಣ್ಣುಮಕ್ಕಳನ್ನು ಓದಿಸಿ ಯಾರನ್ನು ಸಾಕುಬೇಕು ಎಂದು ಹೇಳುತ್ತಾರೆ. ವಯಸ್ಸಿಗೆ ಬಂದ ಮೇಲೆ ಕೊಟ್ಟ ಮನೆಗೆ ಹೋಗುವವಳು ಇವರಿಗೆ ಓದಿಸುವುದರಿಂದ ಏನು ಲಾಭವಿಲ್ಲ ಎಂದು ಮಕ್ಕಳನ್ನು ಶಿಕ್ಷಣ ಹಕ್ಕುಗಳಿಂದ ವಂಚಿಸುವುದು ಮಾತ್ರವಲ್ಲದೇ ಬಹುತೇಕ ಬೇಡ ಕುಟುಂಬದ ಮಕ್ಕಳು ಬಾಲ ಕಾರ್ಮಿಕರಂತೆ ದನ ಕಾಯಲು ಹೋಗುತ್ತಾರೆ. ಹೆಣ್ಣು ಮಕ್ಕಳನ್ನು ಮನೆಯಲ್ಲಿ ಹೊಲದಲ್ಲಿ ಕೆಲಸಕ್ಕೆ ಕಳುಹಿಸುವುದು ಇಲ್ಲಿನ ಪ್ರಮುಖ ಶೋಷಣೆಯಾಗಿದೆ.

ಕಾಟಗಲ್ ದೊಡ್ಡಿ

ಈ ದೊಡ್ಡಿಯಲ್ಲಿ ನಾಯಕ, ಕುರುಬ ಸಮುದಾಯದವರು ೨೫-೩೦ ಕುಟುಂಬಗಳು ಕಂಡುಬರುತ್ತವೆ. ತೀರ ಬಡವರು ಮಧ್ಯಮ ವರ್ಗದ ಕುಟುಂಬಗಳು ಕಾಣುತ್ತೇವೆ. ಈ ನೆಲೆಯು ಗುಡಿಸಲುಗಳಿಂದ ಆವೃತವಾಗಿದೆ. ಈ ದೊಡ್ಡಿಗೆ ಕಾಲುವೆ ಮೇಲಿನ ಕಚ್ಚಾ ರಸ್ತೆ

ಮುಖಾಂತರ ಹೋಗಬೇಕಾಗುತ್ತದೆ. ಈ ದೊಡ್ಡಿಗೆ ಯಾವುದೇ ಬಸ್ಸು ಸಂಚಾರವಿಲ್ಲ. ಇಲ್ಲಿನ ಜನ ನಡೆದುಕೊಂಡು ಪಕ್ಕದ ಮುಖ್ಯರಸ್ತೆಗೆ ಬರಬೇಕು. ಅಲ್ಲಿನ ಖಾಸಗಿ ವಾಹನಗಳಲ್ಲಿ ತಾಲೂಕು ಕೇಂದ್ರಕ್ಕೆ ಹೋಗುವುದನ್ನು ಕಾಣುತ್ತೇವೆ. ಈ ದೊಡ್ಡಿಯಲ್ಲಿ ಕುರುಬ ಸಮುದಾಯದವರು ಆರ್ಥಿಕವಾಗಿ ಸ್ವಲ್ಪ ಮಟ್ಟಿಗೆ ನೆಮ್ಮದಿಯಿಂದ ಜೀವನ ಸಾಗಿಸುತ್ತಿದ್ದರೆ, ಬೇಡ ಸಮುದಾಯದವರು ಕೃಷಿ ಇಲ್ಲದಿದ್ದರೆ ನಗರಗಳಿಗೆ ವಲಸೆ ಹೋಗಿ ದುಡಿಯುತ್ತಾರೆ. ಕುರುಬ ಸಮುದಾಯದವರು ಕೃಷಿ ಜೊತೆಗೆ ಕುಲಕಸುಬು ಮಾಡಿಕೊಂಡು ಆರ್ಥಿಕವಾಗಿ ಸ್ವಾವಲಂಬಿಗಳಾಗಿದ್ದಾರೆ.

ಜೊತೆಗೆ ಕುರುಬ ಸಮುದಾಯದವರ ಆಸ್ತಿಯಲ್ಲಿ ಶ್ರೀಮಂತರು, ಈಗಾಗಿ ದೊಡ್ಡಿಯಲ್ಲಿ ಅಚ್ಚುಕಟ್ಟಾಗಿ ಜೀವನ ಸಾಗಿಸುತ್ತಿದ್ದಾರೆ. ಬೇಡ ಸಮುದಾಯದ ಕೆಲವರು ಕೃಷಿ ಜೊತೆಗೆ ಆಡು ಸಾಕಾಣಿಕೆ ಮಾಡುತ್ತಾ ಅಲ್ಪ ಸ್ವಲ್ಪ ಸದೃಢವಾಗಿ ನೆಲೆಸಿದ್ದಾರೆ. ಈ ದೊಡ್ಡಿಗೆ ಅಲ್ಪ ಸ್ವಲ್ಪ ನೀರಾವರಿ ಇದೆ. ಜೊತೆಗೆ ಪಂಪಸೆಟ್ ಮುಖಾಂತರ ನೀರಾವರಿಯ ಸೌಲಭ್ಯ ಪಡೆದುಕೊಳ್ಳುತ್ತಿದ್ದಾರೆ. ಆರ್ಥಿಕವಾಗಿ ಸದೃಢವಾದ ಕುಟುಂಬದವರಿಗೆ ಈ ನೆಲೆ ನೆಮ್ಮದಿಯ ತಾಣವಾಗಿದೆ.

ಕಾಟಗಲ್ ದೊಡ್ಡಿಯು ಶೈಕ್ಷಣಿಕವಾಗಿ ತೀರ ಹಿಂದುಳಿದ ದೊಡ್ಡಿ ಎಂದರೆ ತಪ್ಪಾಗಲಿಕ್ಕಿಲ್ಲ. ಈ ಸ್ಥಳದಲ್ಲಿ ಯಾವುದೇ ಅಂಗನವಾಡಿ ಶಾಲೆಯಾಗಲಿ ಇಲ್ಲ. ಇದರಿಂದ ನಿತ್ಯ ಮಕ್ಕಳು ಪಕ್ಕದ ಊರುಗಳಿಗೆ ಹೋಗಿ ಶಾಲೆ ಕಲಿಯಬೇಕಾದ ವಾತಾವರಣವಿದೆ. ಇದರಿಂದ ಕೆಲವರು ತಮ್ಮ ಮಕ್ಕಳನ್ನು ತಮ್ಮ ಸ್ವಂತ ದ್ವಿಚಕ್ರ ವಾಹನದಲ್ಲಿ ಬಿಟ್ಟು ಬಂದರೆ, ಆರ್ಥಿಕವಾಗಿ ತೀರ ಹಿಂದುಳಿದ ಜನರಿಗೆ ಕಾಲುಗಳೇ ದ್ವಿಚಕ್ರ ವಾಹನ ಎಂದು ದಿನನಿತ್ಯ ನಡೆದುಕೊಂಡು ಹೋಗಿ ಬರಬೇಕಾಗಿರುವುದರಿಂದ ಶಿಕ್ಷಣವನ್ನು ಅರ್ಧದಲ್ಲಿ ಮೊಟಕುಗೊಳಿಸುತ್ತಾರೆ ಎಂದು ಸ್ಥಳೀಯರು ಅಭಿಪ್ರಾಯ ಪಡುತ್ತಾರೆ. ಜೊತೆಗೆ ನಾವು ಎಷ್ಟೋ ಬಾರಿ ಮನವಿ ಸಲ್ಲಿಸಿದರು ಯಾವುದೇ ತರಹದ ಶಾಲೆ ಆರಂಭಿಸಲು ಸೂಕ್ತವಾದ ಕ್ರಮಕೈಗೊಂಡಿಲ್ಲ ಎಂದು ಈ ದೊಡ್ಡಿ ಜನರ ಗೋಳಾಗಿದೆ. ಸಮಾಜ ಕಲ್ಯಾಣ ಇಲಾಖೆಯಿಂದ ಹೊಸದಾಗಿ ಶಾಲೆ ಆರಂಭಿಸಬೇಕು ಎಂದು ಸರ್ಕಾರದ ಯೋಜನೆ ಸರಿಯಾದ ರೀತಿಯಲ್ಲಿ ಅನುಷ್ಠಾನಗೊಳಿಸದೆ ನೆನೆಗುದಿಗೆ ಬಿದ್ದಿರುವುದು ಮಾತ್ರ ಸತ್ಯ ಸಂಗತಿಯಾಗಿದೆ. ಕರ್ನಾಟಕ ಪ್ರಾದೇಶಿಕವಾಗಿ ಮುಂದುವರೆದ ಭಾಗಗಳಿಗೆ ಆಶ್ರಮ ಶಾಲೆಯ ಭಾಗ್ಯದೊರೆತಂತಿದೆ. ಈ ಭಾಗಕ್ಕೆ ಆಶ್ರಮ ಶಾಲೆಗಳು ಅಪರೂಪವಾಗಿವೆ ಎಂದು ವಿದ್ಯಾವಂತ ನಾಗರೀಕರ ಅಭಿಪ್ರಾಯವಾಗಿದೆ.

ಒಟ್ಟಾರೆ ಯಾರಿಗೂ ಬೇಡವಾಗುವ ಸ್ಥಿತಿಯಲ್ಲಿ ದೊಡ್ಡಿ ಜನರು ಜೀವನ ಸಾಗಿಸುತ್ತಿದ್ದಾರೆ. ಗ್ರಾಮ ಪಂಚಾಯತ್ ಯೋಜನೆಗಳ ಲಾಭ ಕೂಡ ಇಲ್ಲಿನವರಿಗೆ ತಲುಪಿಲ್ಲದಿರುವುದು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಕಂಡುಬಂದಿದೆ.

ಸ್ಥಳಿಯ ಸಂಸ್ಥೆಯ ಚುನಾವಣೆಯಲ್ಲಿ ಇವರು ಪಾಲುಗೊಳ್ಳುವುದು ತೀರ ಕಡಿಮೆ. ರಾಜಕಾರಣಿಗಳು ಕೇವಲ ಇವರನ್ನು ಮತ ಹಾಕಿಸಿಕೊಳ್ಳುವುದಕ್ಕೆ ಮಾತ್ರ ಬಳಸಿಕೊಳ್ಳುತ್ತಾರೆ. ಸೌಲಭ್ಯದ ವಿಷಯಕ್ಕೆ ಬಂದಾಗ ಇವರನ್ನು ಯಾವುದೇ ರೀತಿ ಪರಿಗಣಿಸುವುದಿಲ್ಲ ಎಂಬುದು ಕಂಡುಬರುತ್ತದೆ.

ನಿಂಬಾರ ದೊಡ್ಡಿ

ಈ ದೊಡ್ಡಿಯಲ್ಲಿ ನಾಯಕ ಕುರುಬ ಸಮುದಾಯದವರು ಒಟ್ಟಿಗೆ ನೆಲೆಸಿದ್ದಾರೆ. ಮೊದಲಿನಿಂದಲೂ ಈ ಎರಡು ಸಮುದಾಯಗಳು ನೆಲೆ ನಿಂತಿರುವುದು ಕಂಡುಬರುತ್ತದೆ. ಈ ಸ್ಥಳದಲ್ಲಿ ತಗಡಿನಮನೆ ಗುಡಿಸಲುಗಳಿಂದ ಕೂಡಿರುವ ಮನೆಗಳು ಹೆಚ್ಚಾಗಿ ಕಂಡುಬರುತ್ತವೆ. ಬಹುತೇಕ ನೀರಾವರಿ ಭೂಮಿ ಹೆಚ್ಚಾಗಿ ಕಂಡುಬರುತ್ತದೆ. ಒಕ್ಕಲುತನವನ್ನು ಮಾಡಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಕೃಷಿ ಜೊತೆಗೆ ಇಲ್ಲಿನ ಕುರುಬ ಸಮುದಾಯದವರು ಕುರಿ ಸಾಕಾಣಿಕೆ ಮಾಡಿದರೆ, ನಾಯಕ ಸಮುದಾಯದವರು ಮೇಕೆ, ಹಸು ಸಾಕಾಣಿಕೆ ಮಾಡಿಕೊಂಡಿದ್ದಾರೆ.

ಅವರು ನಿವಾಸಗಳಲ್ಲಿ ಬೇಸಿಗೆ ಕಾಲ ಬಂದರೆ ನೀರಿನ ಗಂಭೀರ ಸ್ವರೂಪ ಪಡದುಕೊಳ್ಳುತ್ತದೆ. ವರ್ಷದಲ್ಲಿ ಎಂಟು ತಿಂಗಳು ನೀರಿನ ಸೌಲಭ್ಯ ಸಂಪೂರ್ಣವಾಗಿ ಸಿಕ್ಕರೆ, ನಾಲ್ಕು ತಿಂಗಳು ನೀರಿಗಾಗಿ ತೊಂದರೆ ಅನುಭವಿಸುವುದನ್ನು ಕಾಣಬಹುದಾಗಿದೆ. ಕೊಳವೆ ಬಾವಿ ಇದ್ದರೂ ಬೇಸಿಗೆಯಲ್ಲಿ ನೀರಿನ ಕೊರತೆಯನ್ನು ನೀಗಿಸಲು ಸಾಧ್ಯವಾಗುತ್ತಿಲ್ಲ. ಇದರ ಮೇಲೆ ಹೆಚ್ಚು ಜನ ಅವಲಂಬನೆಯಾಗಿರುವುದರಿಂದ ಈ ಕೊಳವೆ ಬಾವಿಗಳು ಕೆಲವೊಂದು ಸಂದರ್ಭದಲ್ಲಿ ಕೆಟ್ಟು ನಿಲ್ಲುತವೆ. ಏಳೆಂಟು ತಿಂಗಳು ಕಾಲ ನಿರಂತರ ನೀರಿನ ಸಂಪತ್ತು ಕಂಡ ಜನರಿಗೆ ನಾಲ್ಕು ತಿಂಗಳಲ್ಲಿ ನೀರಿಗಾಗಿ ತೊಂದರೆ ಅನುಭವಿಸುತ್ತಾರೆ.

ಶೈಕ್ಷಣಿಕ ವಿಚಾರಕ್ಕೆ ಬಂದರೆ ಹೇಳಿಕೊಳ್ಳಲು ತುಂಬಾ ಯೋಚಿಸುತ್ತಾರೆ. ಇಲ್ಲಿ ಯಾವುದೇ ಶಾಲೆ ಇರುವುದಿಲ್ಲ. ಇಲ್ಲಿನ ಮಕ್ಕಳು ಶಾಲೆಯನ್ನು ಕಲಿಯಲು ಪಕ್ಕದ ದೊಡ್ಡಿಗಳಿಗೆ ಹೋಗುತ್ತಾರೆ. ಅಲ್ಲಿಯೂ ೫ನೇ ತರಗತಿಯವರಿಗೆ ಮಾತ್ರ ಶಾಲೆ ಇದೆ. ಆ ಶಾಲೆಗೆ ಒಬ್ಬರೇ ಶಿಕ್ಷಕರು. ಒಬ್ಬ ಶಿಕ್ಷಕರಿಂದ ಇಲ್ಲಿನ ಮಕ್ಕಳಿಗೆ ಸರಿಯಾದ ನಿಟ್ಟಿನಲ್ಲಿ ಕಲಿಸಲು ಆಗುತ್ತಿಲ್ಲ ಎಂಬುದು ಪೋಷಕರ ಅಭಿಪ್ರಾಯವಾಗಿದೆ. ಎಷ್ಟೋ ಬಾರಿ ಶಿಕ್ಷಕರ ನೇಮಕಾತಿ ಆದರು ಇಂತಹ ಸ್ಥಳಗಳಿಗೆ ಶಿಕ್ಷಕರು ಬರುತ್ತಿಲ್ಲ. ಒಂದು ವೇಳೆ ಶಿಕ್ಷಕರನ್ನು ದೊಡ್ಡಿಗೆ ಹಾಕಿದರೆ ಅಂತವರು ೭ ದಿನದಲ್ಲಿ ಮೂರು ದಿನ ಅನಧಿಕೃತ ಗೈರುಹಾಜರಿ ಆಗುತ್ತಾರೆ. ಕಾರಣ ಯಾವುದೇ ಅಧಿಕಾರಿ ಇಲ್ಲಿಗೆ ಭೇಟಿ ಕೊಡಲು ಆಗುತ್ತಿಲ್ಲ. ಇದರಿಂದ ಮಕ್ಕಳು ಶೈಕ್ಷಣಿಕ ಸೌಲಭ್ಯದಿಂದ ವಂಚಿತರಾಗುತ್ತಿದ್ದಾರೆ.

ರಾಜಕೀಯವಾಗಿ ದೊಡ್ಡಿಯಲ್ಲಿ ಜನರು ಚುನಾವಣೆ ಸಂದರ್ಭದಲ್ಲಿ ಕೇವಲ ಮತ ಹಾಕುವ ಕೆಲಸ ಮಾತ್ರ ಮಾಡುತ್ತಾರೆ. ಸ್ಥಳೀಯ ಸಂಸ್ಥೆಯ ಚುನಾವಣೆಯಲ್ಲಿ ಸ್ಪರ್ಧಿಸುವುದು

ಬಹಳ ಕಡಿಮೆ. ಸ್ಪರ್ಧಿಸಿದ ವ್ಯಕ್ತಿ ಜಯಗಳಿಸುವುದು ತುಂಬಾ ಕಷ್ಟ. ಹಣದಿಂದ ಮತವನ್ನು ಕೊಂಡುಕೊಳ್ಳುವ ಇಂದಿನ ರಾಜಕೀಯ ನಾಯಕರು ಜನಸಾಮಾನ್ಯರ ಬದುಕಿಗೆ ಸ್ಪಂದಿಸುವುದಿಲ್ಲ. ವಾರ್ಡ್‌ಗಳ ವಿಂಗಡನೆ ಮಾಡುವ ಸಂದರ್ಭದಲ್ಲಿ ಅರ್ಧ ಊರು, ಉಳಿದ ದೊಡ್ಡಿ ಇವುಗಳನ್ನು ಸೇರಿಸಿ ವಾರ್ಡ್‌ಗಳನ್ನು ಮಾಡುತ್ತಾರೆ. ಹಳ್ಳಿಯವರು ಯಾರು ದೊಡ್ಡಿಯಲ್ಲಿ ಇರುವವರಿಗೆ ಮತ ಹಾಕುವುದಿಲ್ಲ. ದೊಡ್ಡಿಯಲ್ಲಿ ಇರುವ ಜನರು ಎಲ್ಲರು ಅಲ್ಲಿನ ನಿವಾಸಿಗಳ ಪರವಾಗಿ ಇರುವುದು ತುಂಬಾ ಕಡಿಮೆ. ಒಂದು ವೇಳೆ ದೊಡ್ಡಿಯ ನಿವಾಸಿ ಗೆದ್ದರೂ ಆ ಸದಸ್ಯ ಕೇವಲ ತನ್ನ ಮನೆಗೆ ಮಾತ್ರ ಲಾಭ ಮಾಡಿಕೊಳ್ಳುತ್ತಾನೆ. ಊರಿನಲ್ಲಿ ಇರುವ ಜನ ದೊಡ್ಡಿಗಳಿಗೆ ಕೆಲಸಗಳನ್ನು ಮಾಡಲು ಬಿಡುವುದಿಲ್ಲ ರಾಜಕೀಯ ಅಧಿಕಾರ ಹಳ್ಳಿಯ ಜನರಿಗೆ ಮಾತ್ರ ಸಿಗುತ್ತಿದೆ.

ರಸ್ತೆ ಸಂಪರ್ಕ ವಿಚಾರಕ್ಕೆ ಬಂದರೆ, ದೊಡ್ಡಿಗೆ ಸರಿಯಾದ ರಸ್ತೆ ಇಲ್ಲ. ಇಲ್ಲಿನ ಮೂಲಭೂತ ಅವಶ್ಯಕತೆ ಪೂರೈಸಿಕೊಳ್ಳಲು ರಸ್ತೆ ಸಾರಿಗೆ ಸಂಪರ್ಕ ಇಲ್ಲದಿರುವುದರಿಂದ ಮಕ್ಕಳು ಶಾಲೆಗೆ ಹೋಗಲು ಆಗುತ್ತಿಲ್ಲ. ರಾತ್ರಿ ಸಮಯದಲ್ಲಿ ತೀರ ಕಷ್ಟ ಅನುಭವಿಸ ಬೇಕಾಗುತ್ತದೆ. ಯಾವುದೇ ವಿದ್ಯುತ್ ಸಂಪರ್ಕ ಇಲ್ಲದಿರುವುದರಿಂದ ಸಂಜೆ ಬೇಗನೆ ಮನೆ ಸೇರಿಕೊಳ್ಳುತ್ತಾರೆ. ಬೇರೆ ಊರಿಗೆ ಹೋಗಿ ಪುನಃ ತಮ್ಮ ದೊಡ್ಡಿಗಳಿಗೆ ಬರಬೇಕಾದರೆ ದೊಡ್ಡ ಸಾಹಸ ಮಾಡಿದಂತಾಗುತ್ತದೆ ಎಂದು ಇಲ್ಲಿನ ಸ್ಥಳೀಯರು ತಮ್ಮ ಅಸಾಹಾಯಕತೆಯನ್ನು ತೊಡಿಕೊಳ್ಳುತ್ತಾರೆ.

ವಿದ್ಯುತ್ ಸಂಪರ್ಕ : ಈ ದೊಡ್ಡಿಯಲ್ಲಿ ವಿದ್ಯುತ್ ಸೌಲಭ್ಯ ಇದೆ. ಗಂಗಾ ಕಲ್ಯಾಣ ಯೋಜನೆಯಿಂದ ಇಲ್ಲಿನ ನಿವಾಸಿಗಳು ವಿದ್ಯುತ್ ಸೌಲಭ್ಯ ಪಡೆದುಕೊಂಡಿದ್ದಾರೆ. ಜಮೀನಿಗೆ ಬಂದ ವಿದ್ಯುತ್ ತಮ್ಮ ಮನೆಗಳಿಗೆ ಬಳಸಿಕೊಂಡಿದ್ದಾರೆ. ವಿದ್ಯುತ್ ಕೈ ಕೊಟ್ಟರೆ ಎರಡು ತಿಂಗಳು ವಿದ್ಯುತ್ ಸರಿಪಡಿಸಲು ಕಾಯುತ್ತಾರೆ. ತಕ್ಷಣದಲ್ಲಿ ಯಾರೂ ಈ ಕಡೆ ಗಮನ ಹರಿಸುವುದಿಲ್ಲ. ಇದರಿಂದ ಬೆಳೆಗಳು ನಷ್ಟವಾಗುತ್ತವೆ. ಜೊತೆಗೆ ಕತ್ತಲಲ್ಲಿ ೨-೩ ತಿಂಗಳು ಕಾಲ ಕಳೆಯುವುದು ಕಂಡುಬರುತ್ತದೆ. ಕೇವಲ ತಮ್ಮ ಮನೆಗಳಿಗೆ ಮಾತ್ರ ವಿದ್ಯುತ್ ದೀಪ ಹಾಕಿಕೊಂಡಿರುತ್ತಾರೆ. ಇವತ್ತಿಗೂ ರಸ್ತೆಗಳಿಗೆ ಬೀದಿ ದೀಪವಿಲ್ಲ. ಅಡವಿಯ ವನವಾಸ ಮುಖ್ಯರೋದನವಾಗಿದೆ. ಯಾರು ಈ ಕಡೆ ಗಮನ ಹರಿಸದಿರುವುದು ಕಂಡುಬರುತ್ತದೆ. ಚುನಾವಣೆ ಸಂದರ್ಭದಲ್ಲಿ ರಾಜಕಾರಣಿಗಳು ಭರವಸೆಗಳ ಮಹಾಪೂರ, ಇಲ್ಲವೇ ಹಣ, ಮದ್ಯದ ಆಸೆ ತೋರಿಸಿ ಮತವನ್ನು ಹಾಕಿಸಿಕೊಳ್ಳುತ್ತಾರೆ ಎಂದು ಇಲ್ಲಿನ ಜನರು ಹೇಳುತ್ತಾರೆ. ದೀಪದ ಕೆಳಗೆ ಕತ್ತಲು ಎನ್ನುವಂತೆ ರಾಜ್ಯಕ್ಕೆ ಆರಷ್ಟು ವಿದ್ಯುತ್ ಒದಗಿಸುವ ರಾಯಚೂರು ಜಿಲ್ಲೆಯಲ್ಲಿ ವಿದ್ಯುತ್ ಇಲ್ಲದೇ ಅನೇಕ ದೊಡ್ಡಿಗಳ ನಿವಾಸಿಗಳು ಪರದಾಡುವಂತಾಗಿದೆ.

ಮಲೆಯರ ದೊಡ್ಡಿ

ದೊಡ್ಡಿಯ ಜನಜೀವನ ಹಾಗೂ ಸಮಸ್ಯೆಗಳನ್ನು ಅರಿತುಕೊಳ್ಳಲು ಮಾಡಿದ ಪ್ರಯತ್ನಗಳೆಂದರೆ ಸಮಾಜ ವಿಜ್ಞಾನಿಗಳು ಮಾತ್ರವಲ್ಲ ಸಾಮಾನ್ಯ ಜನರೂ, "ಸಂವೇದನಾ ಶೀಲರಾದ ಸುಶಿಕ್ಷಿತರು ಪ್ರತ್ಯೇಕ ನೆಲೆಗಳ ಬಗ್ಗೆ ಪ್ರತಿಕ್ರಿಯೆಗಳನ್ನು ವ್ಯಕ್ತಪಡಿಸಿದ್ದಿದೆ."[೨] ಪ್ರಾದೇಶಿಕವಾಗಿ, ಪ್ರತ್ಯೇಕವಾಗಿ ಗ್ರಾಮೀಣ ಭಾಗದಲ್ಲಿ ನೆಲೆಸಿರುವ ಮಧ್ಯಕರ್ನಾಟಕದ ನೆಲೆಗಳಿಗೆ ಹಟ್ಟಿಯೆಂದು ಕರೆದರೆ ಹೈದ್ರಾಬಾದ್ ಕರ್ನಾಟಕ ಪ್ರದೇಶದ ಹಳ್ಳಿಗಳನ್ನು ಬಿಟ್ಟು ಪ್ರತ್ಯೇಕ ನೆಲೆಗಳಲ್ಲಿ ವಾಸಿಸುವ ಸ್ಥಳಗಳಿಗೆ ದೊಡ್ಡಿ ಎಂದು ಕರೆಯುತ್ತಾರೆ. ಇದುವರೆಗೆ ಮಧ್ಯ ಕರ್ನಾಟಕದಲ್ಲಿ ಇರುವ ಗೊಲ್ಲರಹಟ್ಟಿ, ಬೇಡರ ಹಟ್ಟಿಗಳ ಬಗ್ಗೆ ಅಧ್ಯಯನಗಳು ನಡೆದಿರುವುದು ತಿಳಿದುಬರುತ್ತದೆ. ಒಟ್ಟಾರೆಯಾಗಿ ಗ್ರಾಮೀಣ ಭಾಗದಲ್ಲಿ ಇರುವ ದೊಡ್ಡಿಯಲ್ಲಿ ನೆಲೆನಿಂತಿರುವವರ ಬದುಕಿನ ಸಮಸ್ಯೆಗಳಿಗೆ ತಮ್ಮ ಅಧ್ಯಯನ ಮುಖಾಂತರ ಆ ನೆಲೆಗಳ ಮೇಲೆ ಬೆಳಕು ಚೆಲ್ಲುವ ಕೆಲಸವನ್ನು ಮಾಡಿದ್ದಾರೆ. ಅದೇ ರೀತಿಯಲ್ಲಿ ಇರುವ ರಾಯಚೂರು ಜಿಲ್ಲೆಯ ದೊಡ್ಡಿಗಳು ಸರ್ಕಾರದ ಗಮನಕ್ಕೆ ಬರದೇ ಇನ್ನೂ ಅತ್ಯಂತ ದುಃಸ್ಥಿತಿಯಲ್ಲಿ ಇರುವುದನ್ನು ಅಧ್ಯಯನದಿಂದ ತಿಳಿದುಬರುತ್ತದೆ. ಈ ಭಾಗದ ದೊಡ್ಡಿಯ ಬದುಕಿನ ವಾಸ್ತವ ಬದುಕು ಮತ್ತು ಅಲ್ಲಿನ ಗಂಭೀರ ಸಮಸ್ಯೆಗಳನ್ನು ನಾವು ಕಾಣಬಹುದಾಗಿದೆ.

ಮಲೆಯರ ದೊಡ್ಡಿಗೆ ಹೋಗಬೇಕಾದರೆ ದಾರಿ ಯಾವ ಕಡೆ? ಬಸ್ಸು ಯಾವುದಿದೆ? ಎಂದು ಕೇಳಿದಾಗ ಆ ಜನ ಗೊತ್ತಿಲ್ಲ ಎಂದು ಹೇಳಿಬಿಡುತ್ತಾರೆ. ಗುರುಗುಂಟಾ ಗ್ರಾಮದಲ್ಲಿ ಇಳಿದು ಅಲ್ಲಿನ ಜನರಿಗೆ ವಿಚಾರಿಸಿದಾಗ ಪೈ ದೊಡ್ಡಿ ಬಸ್ಸಿಗೆ ಹೋಗಬೇಕು. ಪೈ ದೊಡ್ಡಿಯೇ ಕೊನೆಯ ನಿಲ್ದಾಣ, ಮುಂದೆ ಮಲೆಯರ ದೊಡ್ಡಿಗೆ ಹೋಗಬೇಕಾದರೆ ನಡೆದುಕೊಂಡು ೩ ಮತ್ತು ೪ ಕಿ.ಮೀ ಹೋದರೆ ಮಲೆಯರ ದೊಡ್ಡಿ ಬರುತ್ತದೆ. ಹೀಗೆ ಬೆಟ್ಟಗಳ ಮಧ್ಯ ನಡೆದುಕೊಂಡು ಬರುವಾಗ ಆ ದೊಡ್ಡಿಯ ಕಾಲುದಾರಿಯಲ್ಲಿ ಬಡಕಲು ದೇಹದ ಕಪ್ಪು ಹೆಣ್ಣುಮಗಳು ತಲೆಯ ಮೇಲೊಂದು, ಕಂಕುಳಲ್ಲೊಂದು ಮಣ್ಣಿನ ಕೊಡಗಳನ್ನು ಹೊತ್ತುಕೊಂಡು ಬರುತ್ತುವುದು ಕಂಡುಬಂತು. ಅವರು ನೀರಿಗಾಗಿ ದೊಡ್ಡ ಸಾಹಸವೇ ಮಾಡುತ್ತಾರೆ. ನೀರಿಗಾಗಿ ಒಂದು ಮೈಲು ದೂರದಲ್ಲಿ ಇರುವ ಕೊಳವೆ ಬಾವಿಯಿಂದ ಎರಡು ಕೊಡಗಳನ್ನು ಹೊತ್ತುಕೊಂಡು ತಮ್ಮ ದೊಡ್ಡಿಗಳಿಗೆ ಬರುವುದನ್ನು ಕಂಡಾಗ ಅವರ ಸ್ಥಿತಿ ತುಂಬಾ ಶೋಚನೀಯವಾಗಿದೆ ಎಂದು ಅನಿಸುತ್ತದೆ. ಆಗ ಹನುಮಂತ ಎನ್ನುವ ವ್ಯಕ್ತಿಗೆ ವಿಚಾರಿಸಿದರೆ ಈ ಸ್ಥಳಕ್ಕೆ ಯಾರು ಹೆಣ್ಣು ಕೊಡುತ್ತಾರೆ ಎಂದು ಕೇಳಿದರೆ ಅದಕ್ಕೆ ಆ ವ್ಯಕ್ತಿ ಹೇಳಿದ ನಮ್ಮ ದೊಡ್ಡಿಗೆ ಹೆಣ್ಣು ಕೊಡಲು ವಿಚಾರ ಮಾಡುತ್ತಾರೆ ಸರ್. ಈ ನೀರಿನ ಕಷ್ಟವನ್ನು ನೋಡಿದರೆ ಈ ದೊಡ್ಡಿಗೆ ಹೆಣ್ಣು ಕೊಡಲು ಭಯಪಡುತ್ತಾರೆ ಎಂಬ ಸತ್ಯ ಸಂಗತಿ ತಿಳಿದುಬರುತ್ತದೆ. ಇರುವ ೨೫-೩೦ ಕುಟುಂಬಗಳು

ಅವಲಂಬಿಸಿರುವುದು ಬೇಸಾಯವನ್ನು ಆದರೆ ಬಹಳಷ್ಟು ಕುಟುಂಬಗಳಿಗೆ ಎರಡರಿಂದ ಮೂರು ಎಕರೆ ಜಮೀನು ಗುಡ್ಡಗಾಡಿನ ನೆಲೆಯಾಗಿದೆ. ಮಳೆ ಬಂದರೆ ಬೆಳೆ ಇಲ್ಲದಿದ್ದರೆ, ವಲಸೆ ಹೋಗುವುದು ಸಾಮಾನ್ಯ ಸಂಗತಿಯಾಗಿದೆ. ಏಳೆಂಟು ಮಧ್ಯಮ ವರ್ಗದ ಕುಟುಂಬಗಳಿದ್ದು, ಅವರು ಕುರುಬ ಸಮುದಾಯದವರು ಬಿಟ್ಟರೆ ಉಳಿದೆಲ್ಲಾ ಕುಟುಂಬಗಳು ಬೇಡ ಸಮುದಾಯದವರು. ಮಧ್ಯಮ ವರ್ಗದವರೇ ಶ್ರೀಮಂತ ವರ್ಗವನ್ನು ಇಲ್ಲಿ ಪ್ರತಿನಿಧಿಸುತ್ತಾರೆ. ದರ್ಪ ಶೋಷಣೆ ಬಲತ್ಕಾರಗಳಲ್ಲಿ ಇವರೇ ಮಿಕ್ಕವರನ್ನು ಆಳುತ್ತಾರೆ. ಬೇಸಾಯಕ್ಕೆ ಮಳೆನೀರೆ ಪ್ರಧಾನವಾಗಿದೆ. ತಗ್ಗು ದಿನ್ನೆ ಗುಂಡುಗಳ ಮಧ್ಯದಲ್ಲಿ ನಡೆದುಕೊಂಡು ಮುಂದಿನ ದೊಡ್ಡಿಗಳಿಗೆ ಹೋಗುತ್ತಾರೆ. ಹಳೆಯ ಕಾಲದ ಗುಡಿಸಲು ಮುಂದೆ ದನ ಕರು ಎಮ್ಮೆಗಳನ್ನು ಕಟ್ಟಿಹಾಕುತ್ತಾರೆ. ಕೆಲವರು ಕುರಿಗಳನ್ನು ಸಾಕಿಕೊಂಡು ಬಹಳ ನೆಮ್ಮದಿಯಿಂದ ಜೀವನ ಸಾಗಿಸುತ್ತಿದ್ದಾರೆ. ಈ ನೆಲೆಗೆ ಶಾಲೆ ಇಲ್ಲ. ಇಲ್ಲಿಂದ ಮೂರು ನಾಲ್ಕು ಮೈಲು ದೂರದಲ್ಲಿರುವ ಪೈ ದೊಡ್ಡಿಯಲ್ಲಿ ಪ್ರಾಥಮಿಕ ಶಾಲೆಯೊಂದಿದೆ. ಈ ಪೈ ದೊಡ್ಡಿಗೆ ಬರುವ ಶಿಕ್ಷಕರು ಬಹಳ ವರ್ಷ ಇರುವುದಿಲ್ಲ. ಹಿಂದೆ ಶಾಲೆಗೆ ಒಬ್ಬರು ಇಲ್ಲವೇ ಇಬ್ಬರು ಶಿಕ್ಷಕರು ಇರುತ್ತಿದ್ದರು. ಅದರಲ್ಲಿ ಮೂರು ದಿನ ಒಬ್ಬರೆ ಇನ್ನು ಮೂರು ದಿನ ಇನ್ನೊಬ್ಬರು ಬರುತ್ತಿದ್ದಾರೆ ಎನ್ನುವುದು ಪೈದೊಡ್ಡಿಯ ಜನರ ಅಭಿಪ್ರಾಯವಾಗಿದೆ. ಈ ದೊಡ್ಡಿಯ ವಿದ್ಯಾರ್ಥಿಗಳು ಪ್ರಾಥಮಿಕ ಶಾಲೆ ಕಲಿಯಲು ಪಕ್ಕದ ದೊಡ್ಡಿಗೆ ಎರಡು ಮೂರು ಮೈಲು ದೂರ ನಡೆದುಕೊಂಡು ಹೋಗಬೇಕಾಗುತ್ತದೆ. ಕಷ್ಟ ಪಟ್ಟು ಪ್ರಾಥಮಿಕ ಶಾಲೆ ಮುಗಿಸಿದ ನಂತರ ಮಾಧ್ಯಮಿಕ, ಪ್ರೌಢಶಾಲೆಯನ್ನು ಕಲಿಯಲು ಪ್ರತಿನಿತ್ಯ ಎರಡು ಮೂರು ಮೈಲು ದೂರ ನಡೆದುಕೊಂಡು ಹೋಗಿ ಪಕ್ಕದ ದೊಡ್ಡಿಯಿಂದ ಬಸ್ಸುಗಳ ಮುಖಾಂತರ ಗುಡಗುಂಟಿ ಇಲ್ಲವೇ ಎರಿಜಂತಿಗೆ ಹೋಗಿ ಕಲಿಯಬೇಕಾಗುತ್ತದೆ. ಅಲ್ಲಿ ಪಾಸಾದ ಮಕ್ಕಳಿಗೆ ಹಣವಿದ್ದವರೂ ತಾಲೂಕು ಕೇಂದ್ರವಾದ ಲಿಂಗಸ್ಗೂರುಗೆ ಕಳುಹಿಸುತ್ತಾರೆ. ಹಣವಿಲ್ಲದ ತಂದೆ ತಾಯಿಗಳು ಮಕ್ಕಳ ಶಿಕ್ಷಣವನ್ನು ಅರ್ಧಕ್ಕೆ ಕೊನೆಗೊಳಿಸುತ್ತಾರೆ. ಓದುವ ಹಂಬಲ ಇದ್ದರೂ ಸೌಲಭ್ಯದ ಕೊರತೆಯಿಂದ ಶಿಕ್ಷಣ ವಂಚಿತರಾಗಿದ್ದರೆ.

ಈ ದೊಡ್ಡಿಯಲ್ಲಿ ಒಂದೂ ಬಾವಿ ಇಲ್ಲ. ಗುಡ್ಡಗಾಡುಗಳಿಂದ ಆವೃತವಾಗಿದೆ. ಎಷ್ಟೋ ಕಡೆ ಬಾವಿ ತೆಗೆಯಲು ಹೋದರೆ ನೀರು ಬರುವುದಿಲ್ಲ. ಇತ್ತೀಚೆಗೆ ಕೊಳವೆ ಬಾವಿಯನ್ನು ಹಾಕಿಸಿದ್ದಾರೆ. ಎಷ್ಟೋ ಹಳ್ಳಿಗಳಿಗೆ ನೀರು, ವಿದ್ಯುತ್, ರಸ್ತೆ ಇಲ್ಲದೇ ಇರುವುದನ್ನು ಕಾಣುತ್ತೇವೆ. ಇನ್ನು ಹಳ್ಳಿಗಳನ್ನು ಬಿಟ್ಟು ಪ್ರತ್ಯೇಕವಾಗಿ ಹೊಲಗದ್ದೆಗಳಲ್ಲಿ ಗುಡಿಸಲುಗಳನ್ನು ಹಾಕಿಕೊಂಡವರ ಪರಿಸ್ಥಿತಿ ತೀರ ಅನಾನುಕೂಲತೆಯಿಂದ ಇರುವುದನ್ನು ಮನಗಾಣಬೇಕಾಗಿದೆ. ಈ ದೊಡ್ಡಿಯ ಸುತ್ತಮುತ್ತಲಿನ ಎರಡು ಮೂರು ದೊಡ್ಡಿಗಳಲ್ಲಿ ವಿದ್ಯುತ್ ದೀಪವಿಲ್ಲ. ಸೀಮೆ ಎಣ್ಣೆಯ ಬುಡ್ಡಿಗಳಲ್ಲಿಯೇ ಬೆಳಕು ಕಾಣಬೇಕು. ಹೊರ ಜಗತ್ತಿನ ಅರಿವಂತೂ ತೀರ ಕಡಿಮೆ, ಬದುಕು ಮಾಡುವುದೇ ನರಕ ಯಾತನೆಯಾಗಿರುವಾಗ

ಇವರ ಪ್ರಾಥಮಿಕ ಅವಶ್ಯತೆಗಳು ಈಡೇರುತ್ತವೆ ಎಂಬುದನ್ನು ಕಾದುನೋಡಬೇಕು. ಬೇಸಿಗೆ ದಿನಗಳಲ್ಲಿ ನೀರಿನ ಕೊರತೆಯಿಂದಾಗಿ ಮಲೆಯರ ದೊಡ್ಡಿಯ ಜನರು ತಿಂಗಳಿಗೊಮ್ಮೆ ಅಥವಾ ಎರಡು ವಾರಗಳಿಗೊಮ್ಮೆ ಸ್ನಾನ ಮಾಡುತ್ತಾರೆ. ದೊಡ್ಡಿಯ ಪಕ್ಕದಲ್ಲಿ ೨-೩ ಮೈಲು "ದೂರದಲ್ಲಿರುವ ತಗ್ಗಾದ ಪ್ರದೇಶದಲ್ಲಿ ನಿಂತ ನೀರಿನಲ್ಲಿ, ಸಂಸಾರ ಸಮೇತ ಮೀಯುತ್ತಾರೆ."[೩] ಇಲ್ಲಿನ ಮಕ್ಕಳು ವಿದ್ಯೆ ಕಲಿಯುವುದು ತೀರಾ ಕಷ್ಟ. ಒಂದು ವೇಳೆ ಕಲಿತದ್ದೇ ಆದರೆ ಪವಾಡವೇ ಸರಿ. ಅದಕ್ಕಾಗಿ ಪಡುವ ಪಾಡು ಅನುಭವಿಸಿಯೇ ತಿಳಿಯಬೇಕು.

ಅಂಕುಶ ದೊಡ್ಡಿ

ಈ ದೊಡ್ಡಿಯು ರಾಯಚೂರು ಜಿಲ್ಲೆಯ ಲಿಂಗಸ್ಗೂರು ತಾಲೂಕಿನಿಂದ ೧೮ ಕಿ.ಮೀ. ದೂರದಲ್ಲಿದೆ. ಸಿಂಧನೂರು ಮತ್ತು ಲಿಂಗಸ್ಗೂರು ಮುಖ್ಯ ರಸ್ತೆಗೆ ಹೊಂದಿಕೊಂಡಿರುವ ದೊಡ್ಡಿ ಮೊದಲಿಗೆ ಬೇಡ ಸಮುದಾಯಗಳ ಮೂಲ ನೆಲೆಯಾಗಿತ್ತು. ಈ ದೊಡ್ಡಿಯು ದೊಡ್ಡ ಗ್ರಾಮವಾಗಿ ಪರಿವರ್ತನೆಯಾಗಿದೆ. ಈ ದೊಡ್ಡಿಯಲ್ಲಿ ೪೦೦ರಿಂದ ೫೦೦ ಮನೆಗಳು ಕಂಡುಬರುತ್ತವೆ. ಜೊತೆಗೆ ಗ್ರಾಮ ಪಂಚಾಯತ್ ಕಛೇರಿ ಒಳಗೊಂಡಂತೆ ಎಲ್ಲಾ ರೀತಿಯ ಅನುಕೂಲ ಕೂಡ ಈ ದೊಡ್ಡಿಗೆ ಇದೆ. ಮುಖ್ಯ ರಸ್ತೆಯ ಪಕ್ಕದಲ್ಲಿ ಇರುವುದರಿಂದ ಎಲ್ಲ ಅನುಕೂಲಗಳು ಪಡೆದುಕೊಳ್ಳಲು ಸಹಾಯಕವಾಗಿದೆ. ಈಗ ಈ ಸ್ಥಳದಲ್ಲಿ ಎಲ್ಲಾ ಸಮುದಾಯಗಳು ಕಂಡುಬರುತ್ತವೆ. ಬಹುತೇಕ ಜನರು ಕೃಷಿಯನ್ನು ನಂಬಿಕೊಂಡು ಜೀವನ ನಡೆಸುತ್ತಿದ್ದಾರೆ. ಇನ್ನು ಕೆಲವರು ಕೂಲಿ ಕೆಲಸವನ್ನು ನಂಬಿ ಪಕ್ಕದ ಲಿಂಗಸ್ಗೂರು ತಾಲೂಕು ಕೇಂದ್ರಕ್ಕೆ ಹೋಗಿ ಬರುತ್ತಾರೆ.

ಶೈಕ್ಷಣಿಕ ವ್ಯವಸ್ಥೆ

ಈ ಸ್ಥಳದಲ್ಲಿ ಶೈಕ್ಷಣಿಕವಾಗಿ ತುಂಬಾ ಅನುಕೂಲಕರ ಸ್ಥಿತಿ ಕಂಡುಬರುತ್ತದೆ. ಪ್ರಾಥಮಿಕ ಶಾಲೆಯಿಂದ ಪ್ರೌಢಶಾಲೆಯವರೆಗೆ ಶೈಕ್ಷಣಿಕ ಸೌಲಭ್ಯ ಇದೆ ಮತ್ತು ಬಹುತೇಕ ಎಲ್ಲಾ ಮಕ್ಕಳು ಶಿಕ್ಷಣವನ್ನು ಪಡೆದುಕೊಳ್ಳುತ್ತಿದ್ದಾರೆ. ಜೊತೆಗೆ ಈ ದೊಡ್ಡಿಯಲ್ಲಿ ಶಾಲೆಯ ಮುಖ್ಯೋಪಾಧ್ಯಾಯರು ಸ್ಥಳೀಯರಾದ ಕೃಷ್ಣಪ್ಪ ಇವರ ಕರ್ತವ್ಯ ನಿಷ್ಠೆಯಿಂದ ಬಹುತೇಕ ಮಕ್ಕಳಿಗೆ ಇವರ ಜೀವನವೇ ಸ್ಫೂರ್ತಿದಾಯಕವಾಗಿದೆ ಎಂದು ಈ ದೊಡ್ಡಿಯ ಜನರ ಅಭಿಪ್ರಾಯವಾಗಿದೆ. ಇಲ್ಲಿನ ಪೋಷಕರು ಮಕ್ಕಳಿಗಾಗಿ ಆಸ್ತಿ ಮಾಡುವುದಕ್ಕಿಂತ ಮಕ್ಕಳನ್ನೇ ಆಸ್ತಿಯನ್ನಾಗಿ ಮಾಡಿಕೊಂಡಿದ್ದಾರೆ. ಪ್ರತಿಭೆಯನ್ನು ಬೆಳೆಸಲು ಸದಾ ತಂದೆ-ತಾಯಿಗಳು ತಮ್ಮ ಮಕ್ಕಳು ತಮ್ಮಂತೆ ಅನಕ್ಷರಸ್ಥರಾಗಬಾರದು ಎಂದು ಮಕ್ಕಳ ಭವಿಷ್ಯದ ಬಗ್ಗೆ ಕಾಳಜಿವಹಿಸಿಕೊಂಡು ಉತ್ತಮ ಶಿಕ್ಷಣ ಕೊಡಿಸುತ್ತಿದ್ದಾರೆ.

ಆರ್ಥಿಕ ವ್ಯವಸ್ಥೆ

ಈ ದೊಡ್ಡಿಯಲ್ಲಿ ನೆಲೆಸಿರುವ ಬೇಡ, ಕುರುಬ ಮತ್ತು ಕಬ್ಬಲಿಗ ಸಮುದಾಯಗಳು ಆರ್ಥಿಕವಾಗಿ ಸ್ವಾವಲಂಬಿಗಳಾಗಿ ಜೀವನ ನಡೆಸುತ್ತಿದ್ದಾರೆ. ಉದ್ಯೋಗ ಖಾತರಿ ಯೋಜನೆ ಫಲವಾಗಿ ಅನೇಕ ಜನರು ಇದರ ಪ್ರಯೋಜನೆಯನ್ನು ಪಡೆದುಕೊಂಡು ಸ್ಥಳೀಯವಾಗಿ ಸಿಗುವ ಕೆಲಸವನ್ನು ಮಾಡಿಕೊಂಡು ನೆಮ್ಮದಿಯಿಂದ ಜೀವನ ಸಾಗಿಸುತ್ತಿದ್ದಾರೆ. ಜೊತೆಗೆ ಗ್ರಾಮ ಪಂಚಾಯತಿಯು ಅನೇಕ ರೀತಿಯ ಯೋಜನೆಗಳನ್ನು ಒದಗಿಸಿದೆ. ಕೃಷಿಗೆ ಅನುಕೂಲವಾಗುವಂತೆ ಕೃಷಿ ಹೊಂಡಾ, ರಸ್ತೆ ಸುಧಾರಣೆಯಂತಹ ಅನೇಕ ಯೋಜನೆಗಳ ಮುಖಾಂತರ ಇಲ್ಲಿನವರ ಬದುಕು ತುಂಬಾ ಸುಧಾರಣೆಯಾಗಿದೆ ಎಂದು ಸ್ಥಳೀಯರು ಅಭಿಪ್ರಾಯ ಪಡುತ್ತಾರೆ. ಸ್ಥಳೀಯ ಸಂಸ್ಥೆಯ ಪ್ರತಿನಿಧಿಗಳು ಇದೆ ನೆಲೆಯವರು ಆಗಿರುವುದರಿಂದ ಎಲ್ಲಾ ಯೋಜನೆ ಸಂಪೂರ್ಣವಾಗಿ ಅನುಷ್ಠಾನಗೊಳಿಸಲು ಪ್ರಯತ್ನ ಮಾಡುತ್ತಿರುವುದು ಕಂಡುಬರುತ್ತದೆ. ಅಭಿವೃದ್ಧಿ ಕೆಲಸ ಮಾಡುವುದರಿಂದ ಸ್ಥಳೀಯರಿಗೆ ಹೆಚ್ಚು ಹೆಚ್ಚು ಉದ್ಯೋಗ ಕೊಡಲು ಸಾಧ್ಯವಾಗಿದೆ.

ರಾಜಕೀಯ

ಈ ದೊಡ್ಡಿಯ ರಾಜಕೀಯ ವಿಷಯಕ್ಕೆ ಬಂದರೆ ತುಂಬಾ ಪ್ರಗತಿದಾಯಕವಾಗಿದೆ ಎಂದು ತಿಳಿದುಬರುತ್ತದೆ. ಮುಖ್ಯರಸ್ತೆಗೆ ಹೊಂದಿಕೊಂಡಿರುವ ದೊಡ್ಡಿಯಲ್ಲಿ ಎರಡು ಮೂರು ಹಳ್ಳಿಗಳನ್ನು ಸೇರಿಸಿ ಗ್ರಾಮ ಪಂಚಾಯತ್ ನಿರ್ಮಿಸಿದ್ದಾರೆ. ಗ್ರಾಮ ಪಂಚಾಯತ್ ಸದಸ್ಯರು, ಅಧ್ಯಕ್ಷರು ಈ ದೊಡ್ಡಿಯ ಪ್ರಗತಿಗೆ ಶ್ರಮಿಸುತ್ತಿದ್ದಾರೆ. ಪಂಚಾಯತ್ ದೊಡ್ಡಿಯಲ್ಲಿ ಇರುವುದರಿಂದ "ಮೊದಲಿಗೆ ಅಕ್ಕಪಕ್ಕದ ಜನರನ್ನು ಸುಧಾರಿಸುವುದು ಜೊತೆಗೆ ಎಲ್ಲಾ ಜನಸಾಮಾನ್ಯರು ಸರ್ಕಾರದ ಯೋಜನೆಗಳನ್ನು ಬಳಸಿಕೊಳ್ಳಲು ಆತೊರೆಯುತ್ತಾರೆ." ಇದರಿಂದ ಯೋಜನೆಗಳ ಬಗ್ಗೆ ಮಾಹಿತಿ ಕೊಟ್ಟು ಆ ಯೋಜನೆ ಸರಿಯಾದ ರೀತಿಯಲ್ಲಿ ಜಾರಿಗೆ ತರುವ ಕೆಲಸವನ್ನು ಪ್ರತಿನಿಧಿ ಮಾಡುತ್ತಾರೆ. ಇಲ್ಲದಿದ್ದರೆ ದೊಡ್ಡಿಯಲ್ಲಿ ಸಾಕಷ್ಟು ವಿದ್ಯಾವಂತರು ಇರುವುದರಿಂದ ಯೋಜನೆ ವಿಳಂಬವಾದರೆ ಅಥವಾ ಯೋಜನೆ ಕೈ ಬಿಟ್ಟರೆ ಪಂಚಾಯತಿಗೆ ಬೀಗ ಹಾಕಿ ಪ್ರತಿಭಟಿಸುತ್ತಾರೆ. ಸ್ಥಳೀಯ ಜನಪ್ರತಿನಿಧಿಗಳು ತಮ್ಮ ದೊಡ್ಡಿ ಅಭಿವೃದ್ಧಿಯಾದರೆ ನಾವು ಅಭಿವೃದ್ಧಿ ಆದಂತೆ ಎಂದು ಪ್ರಗತಿಪರ ಮನಸ್ಸಿನಿಂದ ದೊಡ್ಡಿ ಪ್ರಗತಿಗೆ ಕಾರಣವಾಗಿದ್ದಾರೆ. ಬೀದಿ ದೀಪ, ಶೌಚಾಲಯ, ರಸ್ತೆ, ಅಂಗನವಾಡಿ ಎಲ್ಲ ಕ್ಷೇತ್ರಕ್ಕೂ ಅನೂಕೂಲಕರ ವಾತಾವರಣ ನಿರ್ಮಿಸಿದ್ದಾರೆ. ಇದರಿಂದ ಅವರ ಬದುಕು ಹಳ್ಳಿಗಳಿಗಿಂತ ಹೆಚ್ಚು ಅಭಿವೃದ್ಧಿಯಾಗಲು ಸಾಧ್ಯವಾಗಿದೆ.

ಟಣಮನಕಲ್ ದೊಡ್ಡಿ

ಟಣಮನಕಲ್ ದೊಡ್ಡಿಯು ಭೌಗೋಳಿಕವಾಗಿ ಟಣಮನಕಲ್ ಗ್ರಾಮದ ವ್ಯಾಪ್ತಿಗೆ ಬರುತ್ತದೆ. ಪೈ ದೊಡ್ಡಿ ಗ್ರಾಮ ಪಂಚಾಯತಿಗೆ ಸೇರಿರುವ ದೊಡ್ಡಿಯಲ್ಲಿ ಅಂಬಿಗರು

ದೊಡ್ಡ ಸಮುದಾಯವಾದರೆ, ಬೇಡ ಸಮುದಾಯ ಅತಿ ಕಡಿಮೆ ಸಂಖ್ಯೆಯಲ್ಲಿರುವುದು ತಿಳಿದುಬರುತ್ತದೆ. ಬಡವರು ಮತ್ತು ಹಿಂದುಳಿದವರು ದೊಡ್ಡಿಯಲ್ಲಿ ಕಾಂಕ್ರೀಟ್ ಮನೆ, ತಗಡಿನಮನೆ, ಗುಡಿಸಲು ಮನೆಗಳು ಇವೆ. ಈ ಭೂಮಿಯು ಕೃಷಿ ಪ್ರಧಾನ ಉದ್ಯೋಗವಾಗಿದ್ದು ಸಜ್ಜೆ, ಜೋಳ, ಶೇಂಗಾ, ಪ್ರಮುಖ ಬೆಳೆಗಳನ್ನು ಬೆಳೆಯುತ್ತಾರೆ. ಜೊತೆಗೆ ಸಂಪ್ರದಾಯಿಕ ಹೈನುಗಾರಿಕೆ ಇದೆ. ಅಂಬಿಗರ ಕುಲಕಸುಬು ಇರುವುದರಿಂದ ಅನುಕೂಲಕರವಾದ ಸ್ಥಳವಾಗಿದೆ. ಪಕ್ಕದಲ್ಲಿ ಕೃಷ್ಣ ನದಿ ಇದೆ. ಇದರಲ್ಲಿ ಕೆಲವು ಕುಟುಂಬದವರು ಮೀನು ಬೇಟೆ ಆಡಿದರೆ, ಇನ್ನು ಕೆಲವು ಕುಟುಂಬದವರು ದೋಣಿಯನ್ನು ನಡೆಸುತ್ತಾರೆ. ಲಿಂಗಸ್ಗೂರು ಮತ್ತು ಸುರಪುರ ತಾಲೂಕಿನ ಕೆಲವು ಹಳ್ಳಿಗಳಿಗೆ ದೋಣಿ ಮುಖಾಂತರ ಸಂಪರ್ಕ ಪಡೆದುಕೊಂಡಿದ್ದಾರೆ. ಕಡಿಮೆ ವೆಚ್ಚ ಕಡಿಮೆ ಸಮಯದಲ್ಲಿ ಎರಡು ತಾಲೂಕಿನ ತೀರದ ಹಳ್ಳಿಗಳಿಗೆ ದೋಣಿಯೇ ಆಸರೆ. ಮೀನು ಬೇಟೆಯಾಡುವುದು ದೋಣಿ ನಡೆಸುವುದರ ಮುಖಾಂತರ ಸ್ವಾವಲಂಬನೆಯ ಜೀವನ ನಡೆಸುತ್ತಿದ್ದಾರೆ. ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಲು ಉತ್ಸಾಹದಿಂದ ಇಂಥ ಕೆಲಸಗಳನ್ನು ಮಾಡುತ್ತಿದ್ದಾರೆ.

ಟಣಮಕಲ್ ದೊಡ್ಡಿ ಶೈಕ್ಷಣಿಕವಾಗಿ ತೀರ ಹಿಂದುಳಿದ ದೊಡ್ಡಿಯಾಗಿದೆ. ಈ ಸ್ಥಳದಲ್ಲಿ ಯಾವುದೇ ಅಂಗನವಾಡಿ, ಪ್ರಾಥಮಿಕ ಶಾಲೆ ಇರುವುದಿಲ್ಲ. ಶಾಲೆ ಕಲಿಯಲು ಟಣಮನಕಲ್ ಗ್ರಾಮಕ್ಕೆ ಬರಬೇಕಾಗುತ್ತದೆ. ಇತ್ತೀಚಿಗೆ ರಾಜ್ಯ ಸರ್ಕಾರ ಸರ್ಕಾರಿ ಶಾಲೆ ಮಕ್ಕಳಿಗೆ ಸೈಕಲ್ ವಿತರಣೆ ಮಾಡಿದೆ. ೧೫-೨೦ ಕುಟುಂಬಗಳು ಇರುವ ಈ ನೆಲೆ ಶಾಲೆ ಇಲ್ಲದಿದ್ದರಿಂದ ಇಲ್ಲಿನ ಮಕ್ಕಳಿಗೆ ಶಾಲೆ ಕಲಿಯಲು ಇಷ್ಟ ಇದ್ದರೂ ಶಾಲೆ ದೂರ ಇರುವುದರಿಂದ ಪೋಷಕರು ತಮ್ಮ ಮಕ್ಕಳನ್ನು ಕಳುಹಿಸಲು ಯೋಚಿಸುತ್ತಾರೆ. ಆರ್ಥಿಕವಾಗಿ ಸದೃಢವಾಗಿರುವವರು ತಮ್ಮ ಮಕ್ಕಳನ್ನು ಶಾಲೆಗೆ ಬಿಟ್ಟು ಬರುತ್ತಾರೆ. ಹೆಸರಿಗೆ ಮಾತ್ರ ಶಾಲೆಯಲ್ಲಿ ದಾಖಲೆ ಇರುತ್ತದೆ. ಆದರೆ ಮಕ್ಕಳು ಮಾತ್ರ ಕೃಷಿ ಚಟುವಟಿಕೆಯಲ್ಲಿ ನಿರತರಾಗುತ್ತಾರೆ.

ಗಾಲೇರ ದೊಡ್ಡಿ

ರಾಯಚೂರು ಜಿಲ್ಲೆಯ ದೇವದುರ್ಗಾ ತಾಲೂಕಿನ ಇರುಬಗೇರಿ ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿ ಎರಡು ಮೂರು ಮೈಲು ದೂರದಲ್ಲಿದೆ. ಸುಮಾರು ೧೫-೧೮ ಕುಟುಂಬಗಳು ವಾಸಿಸುತ್ತಿವೆ. ಬೇಡ ಸಮುದಾಯಕ್ಕೆ ಸೇರಿದ ದೊಡ್ಡಿಯಾಗಿವೆ. ಬಹುತೇಕ ಕುಟುಂಬದವರು ಕೃಷಿಯನ್ನೇ ನಂಬಿ ಬದುಕುತ್ತಿದ್ದಾರೆ. ನೀರಾವರಿ ಇರುವ ಕಾರಣ ಅಲ್ಪ ಸ್ವಲ್ಪ ಭೂಮಿಯನ್ನು ಹೊಂದಿರುವ ಇವರು ಕೃಷಿ ಬಿಟ್ಟು ಬೇರೆ ಯಾವ ಕೆಲಸವನ್ನು ಮಾಡುವುದು ಕಾಣುವುದಿಲ್ಲ. ಅದರಲ್ಲಿ ಅಲ್ಪ ಅಂದರೆ ತೀರ ಕಡಿಮೆ ಎಂದರೆ ಎರಡು ಮೂರು ಕುಟುಂಬದವರು

ಮಾತ್ರ ಮೇಕೆ, ಹಸು, ಎಮ್ಮೆಯನ್ನು ಸಾಕಿಕೊಂಡಿದ್ದಾರೆ. ರಸ್ತೆ ವಿಷಯಕ್ಕೆ ಬಂದರೆ ತುಂಬಾ ಕಷ್ಟವನ್ನು ಎದುರಿಸಿ ಬದುಕುತ್ತಿರುವುದನ್ನು ಕಾಣಬಹುದಾಗಿದೆ. ಈ ದೊಡ್ಡಿಯವರು ಬಸ್ಸು ನೋಡಿಲ್ಲ ಅದು ನೋಡಿದರೆ ದೇವದುರ್ಗಾ ಅಥವಾ ದೊಡ್ಡ ಹಳ್ಳಿಗಳಿಗೆ ಬಸ್ಸುಗಳು ಹೋಗುವುದನ್ನು ಮಾತ್ರ ನೋಡುತ್ತಾರೆ ಎಂದು ಹೇಳುತ್ತಾರೆ. ಇಲ್ಲಿನ ಬಹುತೇಕ ಹಳ್ಳಿಗಳಿಗೆ ಬಸ್ಸಿನ ಸೌಕರ್ಯವಿಲ್ಲ.

ಅಲ್ಲಿ ವಾಸಿಸುವ ಜನರ ಮುಖ ಭಾವದಲ್ಲಿ ಮುಗ್ಧತೆ ಎದ್ದು ಕಾಣುತ್ತದೆ. ಸರ್ಕಾರದ ಯೋಜನೆಗಳು ಪಕ್ಕದ ತಾಂಡಗಳಿಗೆ ಇವೆ. ಆದರೆ ಪ್ರತ್ಯೇಕವಾಗಿ ಇರುವ ದೊಡ್ಡಿಗಳಿಗೆ ಶಾಲೆಗಳು ಇರುವುದಿಲ್ಲ ಪಕ್ಕದ ತಾಂಡಗಳಿಗೆ ಹೋಗಿ ವಿದ್ಯೆಯನ್ನು ಕಲಿಯಬೇಕಾದ ಪರಿಸ್ಥಿತಿ ಇದೆ. ಕೆಲವರು ಶಾಲೆಗೆ ಕಳುಹಿಸಿದರೆ ಇನ್ನೂ ಕೆಲವರು ತಮ್ಮ ಮಕ್ಕಳನ್ನು ಶಿಕ್ಷಣದಿಂದ ವಂಚಿತರನ್ನಾಗಿ ಮಾಡಿರುವುದು ಕಂಡುಬರುತ್ತದೆ. ಇನ್ನು ಹೆಣ್ಣು ಮಕ್ಕಳ ಶಿಕ್ಷಣವಾದ ಅತ್ಯಂತ ದುಃಸ್ಥಿತಿಯಲ್ಲಿ ಇರುವುದು ಕಂಡುಬರುತ್ತದೆ. ಪುರುಷ ಪ್ರಧಾನದ ವಿಚಾರಕ್ಕೆ ಬಂದರೆ ಕುಟುಂಬದಲ್ಲಿ ಹಕ್ಕುಗಳನ್ನು ಕಳೆದುಕೊಂಡು ಬದುಕುತ್ತಿದ್ದಾರೆ. ಮಹಿಳೆಯರ ಬಗ್ಗೆ ವಿಶ್ವವಿದ್ಯಾಲಯದ ಮಟ್ಟದಲ್ಲಿ ಚರ್ಚೆಯಾಗುತ್ತಿದ್ದರೂ, ಯಾವುದೇ ಪ್ರಯೋಜನವಾಗಿಲ್ಲ. ಈ ದೊಡ್ಡಿಯಲ್ಲಿ ಹೆಣ್ಣು ಮಕ್ಕಳು ದುಡಿಯುವ ಯಂತ್ರಗಳಾಗಿವೆ. ಕೃಷಿ ಮತ್ತು ಮನೆ ಕೆಲಸ ಬಿಟ್ಟು ಹೊರಗಿನ ಜಗತ್ತಿನ ಅರಿವು ಅವರಿಗೆ ಇಲ್ಲದೇ ಜೀವನ ಸಾಗಿಸುತ್ತಿದ್ದಾರೆ.

ದೊಡ್ಡಿಯಲ್ಲಿ ವಾಸಿಸುವವರ ಆರೋಗ್ಯ ತೀರ ಶೋಚನೀಯ ಸ್ಥಿತಿಯಲ್ಲಿದೆ. ಕಲುಶಿತ ನೀರು ಸೇವನೆಯಿಂದ, ಅಪೌಷ್ಟಿಕತೆಯಿಂದ ನರಳುತ್ತಿದ್ದಾರೆ. ದೇವದುರ್ಗ ತಾಲೂಕಿನಲ್ಲಿ ಅದು ಹೆಚ್ಚಾಗಿ ಕಂಡುಬರುತ್ತದೆ. ಹೆಣ್ಣುಮಕ್ಕಳಿಗೆ ಮದುವೆ ವಯಸ್ಸು ಇಲ್ಲದಿದ್ದರೆ ಮದುವೆ ಮಾಡುತ್ತಾರೆ. ಇದರಿಂದ ಚಿಕ್ಕ ವಯಸ್ಸಿನಲ್ಲಿ ಮಕ್ಕಳು ಆಗುವುದರಿಂದ ತಾಯಿ ಮತ್ತು ಮಕ್ಕಳ ಆರೋಗ್ಯ ಗಂಭೀರ ಸ್ವರೂಪವನ್ನು ಪಡೆದುಕೊಳ್ಳುತ್ತದೆ. "ಆಳಾಗುತ್ತಿರುವುದು ಸಾಮಾನ್ಯವಾಗಿ ಇಲ್ಲಿನ ಮಕ್ಕಳು ಮತ್ತು ಮಹಿಳೆಯರ ಸ್ಥಿತಿ ನೋಡಿದರೆ ತಿಳಿಯುತ್ತದೆ."[೫]

ಈ ದೊಡ್ಡಿಯಲ್ಲಿ ಕೆಲವರು ಆರ್ಥಿಕವಾಗಿ ಅಲ್ಪಸ್ವಲ್ಪ ಭೂಮಿ ಹೊಂದಿದ್ದಾರೆ. ಕುಟುಂಬಗಳ ಬೆಳವಣಿಗೆಯಿಂದ ಪ್ರತಿಯೊಂದು ಕುಟುಂಬದವರಿಗೆ ೨-೩ ಎಕರೆ ಭೂಮಿ ಹೊಂದಿದ್ದರೆ ಅದೇ ದೊಡ್ಡದು. ಇದರಿಂದ ಬರುವ ಆದಾಯ ಸಾಕು ಆಗದಿದ್ದರೆ ನೆರೆಯ ನಗರಗಳಿಗೆ ಗೂಳೆ ಹೋಗುತ್ತಾರೆ.

ಇವರಿಗೆ ಸರಿಯಾದ ವಿದ್ಯೆ ಇಲ್ಲವೆಂದರೆ ಎಲ್ಲಿಗೆ ಹೋದರು ತಪ್ಪದ ವನವಾಸ ಎಂದು ತಿಳಿದುಕೊಂಡ ಹಿರಿಯರು ಹೇಳುತ್ತಾರೆ. ಆದರೆ ಬಡತನ ಮಕ್ಕಳ ಶಿಕ್ಷಣ ಕಸಿದುಕೊಳ್ಳುವುದರ ಜೊತೆಗೆ ಬಾಲ್ಯದ ಆಟವನ್ನು ಕಸಿದುಕೊಂಡು ಚಿಕ್ಕ ವಯಸ್ಸಿನಲ್ಲಿ ಸಂಸಾರದ ಭಾರಹೊರುವುದು ಸಂದರ್ಶನಕ್ಕೆ ಹೋದಾಗ ತಿಳಿದುಬಂದಿದೆ.

ದೊಡ್ಡಿಯಲ್ಲಿ ಕನ್ನಡ, ತೆಲಗು ಮಿಶ್ರಿತ ಭಾಷೆಯನ್ನು ಮಾತನಾಡುತ್ತಾರೆ. ಈ ಭಾಷೆಗೆ ಕಂದೆಲಗು ಗದ್ವಾಲ್ ತೆಲುಗು ಎಂದು ಹೇಳುತ್ತಾರೆ. ಬಹುತೇಕ ಕುಟುಂಬದವರ ಕಂದೆಲಗುನಲ್ಲಿ ಮಾತಾಡುತ್ತಾರೆ. ಬೇರೆಯವರ ಜೊತೆ ಮಾತಾನಾಡುವಾಗ ಕನ್ನಡ ಮಾತಾಡುತ್ತಾರೆ.

ಕಂಬ್ಳೇರ ದೊಡ್ಡಿ

ಈ ದೊಡ್ಡಿ ರಾಯಚೂರು ಜಿಲ್ಲೆ ಲಿಂಗಸ್ಗೂರು ತಾಲ್ಲೂಕಿನ ಗುರುಗುಂಟಾ ಹೋಬಳಿಗೆ ಸೇರಿದೆ. ತಾಲೂಕ ಪ್ರದೇಶದಿಂದ ವಾಯುವ್ಯ ದಿಕ್ಕಿಗೆ ೨೫ ಕಿ.ಮೀ. ದೂರದಲ್ಲಿದೆ. ೨೫ಕ್ಕೂ ಹೆಚ್ಚು ಕುಟುಂಬದವರು ವಾಸಿಸುತ್ತಿರುವುದು ಕಂಡುಬರುತ್ತದೆ. ಜೀವನಕ್ಕೆ ಎಲ್ಲರೂ ಅವಲಂಬಿಸಿರುವುದು ಬೇಸಾಯವನ್ನು ಕುರುಬ ಮತ್ತು ಬೇಡ ಸಮುದಾಯದವರು ಈ ಸ್ಥಳದಲ್ಲಿ ನೆಲೆಸಿರುವುದು ಕಂಡುಬರುತ್ತದೆ. ಕುರುಬರ ಸಮುದಾಯದವರು ಆರ್ಥಿಕವಾಗಿ ಸ್ವಲ್ಪ ಸದೃಢವಾಗಿ ಕಂಡುಬಂದರೆ, ಬೇಡ ಸಮುದಾಯದವರು ಆರ್ಥಿಕವಾಗಿ ತೀರ ಕಡು ಬಡತನದವರಾಗಿದ್ದಾರೆ. ಈ ಸಮುದಾಯದವರು ಎರಡು ಎಕರೆಗಿಂತ ಹೆಚ್ಚು ಆಸ್ತಿಯನ್ನು ಹೊಂದಿಲ್ಲ. ಮಳೆ ಬಿದ್ದರೆ ಆ ವರ್ಷದ ಬಿತ್ತನೆ ಇಲ್ಲದಿದ್ದರೆ ದೂರದ ನಗರಗಳಿಗೆ ವಲಸೆ ಹೋಗುತ್ತಾರೆ. ಈ ಭಾಗದಲ್ಲಿ ನೀರಾವರಿ ಇದ್ದರೂ ಇವರು ನೆಲಿಸಿರುವ ಭೂಮಿಗಳಿಗೆ ನೀರಿನ ಸೌಲಭ್ಯವಿಲ್ಲ. ಕಾರಣ ಇಷ್ಟೇ ದೀಪದ ಕೆಳಗೆ ಕತ್ತಲೂ ಎನ್ನುವಂತೆ ಪಕ್ಕದಲ್ಲಿ ಕೃಷ್ಣ ನದಿಯ ಕಾಲುವೆ ತುಂಬಿ ಹರಿದರು ಅವರಿಗೆ ನೀರಾವರಿಯ ಭಾಗ್ಯವಿಲ್ಲ. ಕಾಲುವೆ ಅತ್ಯಂತ ಕೆಳ ಭಾಗದಲ್ಲಿ ಹೋಗಿ ಭೂಮಿಯು ಅತ್ಯಂತ ಮೇಲ್ಭಾಗದಲ್ಲಿ ಇರುವುದರಿಂದ ಕೆಲವರು ಆರ್ಥಿಕವಾಗಿ ಸಪಲರಾದವರು ಸೌಲಭ್ಯ ಪಡೆದುಕೊಂಡಿದ್ದಾರೆ ಹಣವಿಲ್ಲದವರು ಅದರ ಗೋಜಿಗೆ ಹೋಗಿಲ್ಲ ರಸ್ತೆ ಈ ದೊಡ್ಡಿಗೆ ಅಂಕುಡೊಂಕಾದ ರಸ್ತೆಗಳಿವೆ.

ಪಕ್ಕದ ದೊಡ್ಡಿಯಲ್ಲಿ ಪ್ರಾಥಮಿಕ ಶಾಲೆಯೊಂದಿದೆ. ಶಾಲೆ ಪ್ರಾರಂಭವಾಗಿ ಐದಾರು ವರ್ಷಗಳಾದರೂ ದೊಡ್ಡಿಗೆ ಬರುವ ಯಾವ ಶಿಕ್ಷಕರು ಬಹಳ ಕಾಲ ಇಲ್ಲಿ ಇರುವುದಿಲ್ಲ. ಶಾಲೆಗೆ ಮೂರು ದಿನ ಬಂದರೆ ಇನ್ನು ಮೂರು ದಿನ ಬರುವುದಿಲ್ಲ ಮೇಲಾಗಿ ಇಲ್ಲಿಗೆ ಯಾವುದೇ ಅಧಿಕಾರಿಗಳು ಬರುವುದಿಲ್ಲ. ಒಂದು ವೇಳೆ ಬಂದರು ಅವರು ಬರುವ ಮುಂಚಿತವಾಗಿ ಅವರಿಗೆ ಯಾವುದೇ ರೀತಿಯ ಸಹಕಾರ ನೀಡದೆ ಜಾಣತನದಿಂದ ತಪ್ಪಿಸಿಕೊಳ್ಳುವುದು ತಿಳಿದುಬರುತ್ತದೆ. ದೊಡ್ಡಿಯ ಮಕ್ಕಳು ಕಷ್ಟಪಟ್ಟು ಪ್ರಾಥಮಿಕ ಶಾಲೆ ಮುಗಿಸಿದ ನಂತರ ಮೂರು ನಾಲ್ಕು ಮೈಲು ನಡೆದುಕೊಂಡು ಪಕ್ಕದ ಗ್ರಾಮದ ಮಾದ್ಯಮಿಕ, ಪ್ರೌಢಶಾಲೆಗೆ ಪ್ರತಿನಿತ್ಯ ನಡೆದಾಡಿಕೊಂಡು ಹೋಗಬೇಕಾಗುತ್ತದೆ. ಸರ್ಕಾರಿ ಯೋಜನೆ ಪ್ರಕಾರ ಸೈಕಲ್ ವಿತರಣೆ ಮಾಡಿದರೆ ವಿತರಣೆ ಆದ ಒಂದು ವರ್ಷದಲ್ಲೇ ಆ ಸೈಕಲ್ ಈ ಕಚ್ಚ ರಸ್ತೆಗೆ ಮೂಲೆ ಸೇರುತ್ತದೆ. ಆಗೋ ಈಗೋ ಕಷ್ಟಪಟ್ಟು ಪಾಸಾದರೂ ತಂದೆತಾಯಿಗಳು ಮದ್ಯದಲ್ಲಿ ಮಕ್ಕಳನ್ನು ಶಾಲೆಯಂದ ಬಿಡಿಸುವುದು ತಿಳಿದುಬರುತ್ತದೆ.

ಈ ದೊಡ್ಡಿ ಎಲ್ಲ ಸಂಕಷ್ಟಗಳ ಮಧ್ಯೆ ಹೇಗೊ ಇಲ್ಲಿಯ ಜನರ ಬದುಕಿನಲ್ಲಿ ರಾಜಕೀಯ ತಲೆ ಹಾಕಿದೆ. ಸ್ಥಳೀಯ ಸಂಸ್ಥೆಯ ಚುನಾವಣೆಯಾಗಲಿ ಮತ್ಯಾವುದೇ ಚುನಾವಣೆಯಾಗಲಿ ಬದುಕನ್ನು ವೈಷಮ್ಯದ ಕಡೆಗೆ ಕೊಂಡೊಯ್ದಿದೆ. ಇವರಿಗೆ ಯಾವ ರಾಜಕೀಯ ಸಿದ್ಧಾಂತಗಳೂ ಗೊತ್ತಿರದಿದ್ದರೂ ವೈಯಕ್ತಿಕ ಮಟ್ಟದಲ್ಲಿ ವ್ಯಕ್ತಿ ದ್ವೇಷದ ರೀತಿಯಲ್ಲಿ ಅದು ಕಾಡುತ್ತಿವೆ. ಈ ದೊಡ್ಡಿಯ ಜನರ ಮಧ್ಯದಲ್ಲಿಯೇ ಎರಡು ಗುಂಪುಗಳಾಗಿ ದೊಡ್ಡಿಯ ಎರಡು ಭಾಗವನ್ನಾಗಿ ಮಾಡಿದೆ ಇದರಿಂದಾಗಿ ಅನೇಕ ಜನರು ಕೂಳಿಗಿಲ್ಲದೆ ಬಡ ರೈತರು ಕೋರ್ಟು ಕಛೇರಿ ಮೆಟ್ಟಿಲನ್ನು ತುಳಿಯಬೇಕಾಗಿದೆ.

ನಾಯಕರ ದೊಡ್ಡಿ

ರಾಯಚೂರು ಜಿಲ್ಲೆಯ ಲಿಂಗಸ್ಗೂರು ತಾಲೂಕಿನ ಗುರುಗುಂಟಾ ಹೋಬಳಿಗೆ ಸೇರಿದೆ. ತಾಲೂಕು ಕೇಂದ್ರದಿಂದ ಉತ್ತರಕ್ಕೆ ೨೦ ಕಿ.ಮೀ. ದೂರದಲ್ಲಿದೆ. ನಾಯಕರದು ಏಕೈಕ ದೊಡ್ಡ ಸಮುದಾಯ. ಕನ್ನಡ ಪ್ರಮುಖ ಭಾಷೆ. ಮಧ್ಯಮ ವರ್ಗದವರು ತೀರ ಬಡತನದ ಕುಟುಂಬಗಳು ಕಂಡುಬರುತ್ತವೆ. ಮುನ್ನೂರು ಜನರಿಂದ ಕೂಡಿದ ನೆಲೆ, ಮೂವತ್ತಕ್ಕೂ ಹೆಚ್ಚು ಮನೆಗಳನ್ನು ಹೊಂದಿದೆ. ಈ ನೆಲೆಗೆ ಹೋಗಬೇಕಾದರೆ ಖಾಸಗಿ ವಾಹನವೇ ಗತಿ, ನೂರಾ ಇಪ್ಪತ್ತಕ್ಕೂ ಹೆಚ್ಚು ಮತದಾರರು ಹೊಂದಿರುವ ನೆಲೆಯಾಗಿದೆ. ಬಹುತೇಕ ನಾಯಕ ಸಮುದಾಯದ ಕುಟುಂಬಗಳು ಕಂಡು ಬಂದರೂ ಯಾವುದೇ ಸರ್ಕಾರಿ ನೌಕರನು ಈ ನೆಲೆಯಲ್ಲಿ ಕಂಡುಬರುವುದಿಲ್ಲ. ಈ ನೆಲೆ ಹೆಸರಿಗೆ ಮಾತ್ರ ಜನವಸತಿ ಪ್ರದೇಶ. ಆದರೆ ಸರ್ಕಾರದ ಯಾವುದೇ ಯೋಜನೆಗಳು ಇವರನ್ನು ತಲುಪಿಲ್ಲ. ಈ ನೆಲೆಯಲ್ಲಿ ಮಣ್ಣಿನ ಮನೆಗಳು, ತಗಡುಮನೆ ಹೆಚ್ಚಿನ ಸಂಖ್ಯೆಯಲ್ಲಿ ಗುಡಿಸಲುಗಳು ಹೊಂದಿರುವ ನೆಲೆಯಾಗಿದೆ. ಇಲ್ಲಿ ಇರುವ ಜನರು ಕೃಷಿಕ ಮತ್ತು ಕೃಷಿ ಕಾರ್ಮಿಕರಾಗಿದ್ದಾರೆ. ಇವರಿಗೆ ಬರುವ ಆದಾಯದಿಂದ ಹೊಟ್ಟೆ ಬಟ್ಟೆ ವಸತಿಯನ್ನು ಕಟ್ಟಿಕೊಳ್ಳುವುದು ಕಷ್ಟವೇ ಎಂದು ತಿಳಿದುಬರುತ್ತದೆ.

"ಹೆಚ್ಚಿನ ಭೂಮಿ ಮಳೆಯಾಧಾರಿತ ವ್ಯವಸಾಯವಾಗಿದೆ. ಕೃಷಿಯಿಂದ ಜೀವನ ಕಷ್ಟಕರವಾಗಿ ಮಾರ್ಪಟ್ಟು ನಗರಗಳಿಗೆ ವಲಸೆ ಹೋದವರು ಕೆಲವರಾದರೆ, ವ್ಯವಸಾಯವನ್ನೇ ನಂಬಿ ಕುಳಿತವರಿಗೆ ತಮ್ಮ ಕೆಲಸದಿಂದ ಯಾವುದೇ ಅನುಕೂಲವಾಗದೇ ಹೊಟ್ಟೆ ಹೊರೆಯುವುದೇ ಕಷ್ಟವಾಗಿದೆ."[೬] ಹೀಗೆ ಪಾರಂಪರಿಕವಾದ ಕೃಷಿ ಪದ್ಧತಿಯನ್ನೇ ನಂಬಿದ ಜನ ತಮ್ಮ ಅಸ್ತಿತ್ವಗಳನ್ನು ಉಳಿಸಿಕೊಳ್ಳುವುದೇ ಕಷ್ಟವಾಗಿದೆ. ಸುಧಾರಿತವಾದ ಕೃಷಿ ಪದ್ಧತಿಯನ್ನು ಅಳವಡಿಸಿ ಸುಧಾರಣೆಗಳ ಬೆನ್ನತಿ ಹೋದ ಕೃಷಿ ಪದ್ಧತಿಯ ಪರಿಸ್ಥಿತಿ ತೊಂದರೆಗೆ ಸಿಲುಕಿದೆ. ಹೀಗಾಗಿ ಇಂದು ಕೃಷಿಕನಿಗೆ ಪರಂಪರಾಗತವಾಗಿ ಕೃಷಿ ಪದ್ಧತಿಯಿಂದ ದೊರೆಯುತ್ತಿದ್ದ ತೃಪ್ತಿ, ಸಮಾಧಾನ ನೆಮ್ಮದಿಗಳು ಮಾಯಾವಾಗಿ ವ್ಯವಹಾರಿಕ ದೃಷ್ಟಿಕೋನ

ಹೆಚ್ಚು ತೀಕ್ಷ್ಣವಾಗಿ ಕೆಲಸಮಾಡುತ್ತಿವೆ. ನೀರಾವರಿ ಸೌಲಭ್ಯ ಇಲ್ಲದಿದ್ದರೂ ಕೆಲವು ಕಡೆ ಕೂಲಿಯನ್ನು ಹುಡುಕಿಕೊಂಡು ಪಕ್ಕದ ಗ್ರಾಮಗಳಿಗೆ ಕೂಲಿಗೆ ಹೋಗುತ್ತಾರೆ. ದಿನನಿತ್ಯ ಸರಿಯಾದ ಕೂಲಿ ಸಿಗದಿದ್ದಾಗ ಆರು ತಿಂಗಳ ವನವಾಸ ಇನ್ನು, ಆರು ತಿಂಗಳ ನಗರವಾಸ ಎಂಬುವ ಸ್ಥಿತಿ ಈ ನೆಲೆಯಲ್ಲಿ ವಾಸಿಸುವವರ ಬದುಕಾಗಿದೆ. ಈ ನೆಲೆಗೆ ಪ್ರಾಥಮಿಕ ಆರೋಗ್ಯ ಕೇಂದ್ರ, ನ್ಯಾಯಬೆಲೆ ಅಂಗಡಿ ಅಂಗನವಾಡಿ ಶಾಲೆ ಸೌಲಭ್ಯಗಳಿಲ್ಲ. ಸ್ವ-ಸಹಾಯ ಸಂಘಗಳು ರಚನೆಗೊಂಡಿಲ್ಲ. ಹೀಗೆ ಅನೇಕ ಸೌಲಭ್ಯಗಳ ಕೊರತೆ ಇಂದಿಗೂ ಇದೆ. ಬೇಡ ಸಮುದಾಯ ಹಲವಾರು ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿದೆ.

ಕೊಲ್ಲೇರದೊಡ್ಡಿ

ಈ ಗ್ರಾಮವು ರಾಯಚೂರು ಜಿಲ್ಲೆ ದೇವದುರ್ಗಾ ತಾಲೂಕಿನ ಜಾಲಹಳ್ಳಿ ಹೋಬಳಿ ವ್ಯಾಪ್ತಿಗೆ ಸೇರಿದೆ. ತಾಲೂಕು ಕೇಂದ್ರ ೩೦ ಕಿ.ಮೀ. ದೂರದಲ್ಲಿ ನಾಯಕ ಸಮುದಾಯದ ಏಕೈಕ ನೆಲೆಯಾಗಿದೆ. ಈ ದೊಡ್ಡಿಯಲ್ಲಿ ವಾಸಿಸುವವರು ನಾಯಕ ಸಮುದಾಯದವರು. ತೀರ ಹಿಂದುಳಿದ ನೆಲೆಯಾಗಿದೆ. ಇವರಿಗೆ ಒಂದು ಎರಡು ಎಕರೆ ಭೂಮಿ ವ್ಯವಸಾಯಕ್ಕೆ ಇದ್ದರೂ ಬಹುತೇಕ ಮಳೆ ಆಶ್ರಿತವಾದ ಭೂಮಿ ಇದೆ. ಮಳೆಯನ್ನು ನಂಬಿ ಬದುಕುವ ಜನರು ಇವರಾಗಿದ್ದಾರೆ. ಮಳೆ ಬರದಿದ್ದರೆ ಕೂಲಿ ಮಾಡುತ್ತಾರೆ. ನೀರಾವರಿ ಇರುವ ಹೊಲಗಳಿಗೆ ಹೋಗುತ್ತಾರೆ. ಒಂದು ವೇಳೆ ಕೂಲಿ ಕೆಲಸ ದೊರೆಯದಿದ್ದಾಗ ದೊಡ್ಡ ದೊಡ್ಡ ನಗರಗಳಿಗೆ ವಲಸೆ ಹೋಗುತ್ತಾರೆ.

ಗುಡಿಸಲುಗಳನ್ನು ಕಟ್ಟಿಕೊಂಡು ಜೀವಿಸುತ್ತಿದ್ದಾರೆ. ಇವರ ವಾಸಿಸುವ ಸ್ಥಳಗಳಲ್ಲಿ ೧೫ ಮನೆಗಳು ಒಂದೇ ಕಡೆ ಇರುತ್ತವೆ. ಎಲ್ಲ ಕುಟುಂಬಗಳು ಒಂದೇ ಕುಲಕ್ಕೆ ಸೇರಿದ ಮನೆಗಳಾಗಿವೆ.

ಈ ನೆಲೆಯಲ್ಲಿ ಯಾವುದೇ ಶಾಲೆ ಇಲ್ಲ. ಇಲ್ಲಿನವರಿಗೆ ಶಿಕ್ಷಣವನ್ನು ಕೊಡಿಸಬೇಕಾದರೆ ಹೋಬಳಿ ಕೇಂದ್ರವಾದ ಜಾಲಹಳ್ಳಿ ಇಲ್ಲವೆ ಲಿಂಗಸ್ೂಗುರು ತಾಲೂಕಿನ ಗುರುಗುಂಟಾ ಹೋಬಳಿಯ ಪೈದೊಡ್ಡಿಗೆ ಶಿಕ್ಷಣ ಪಡೆಯಲು ಹೋಗಬೇಕು. ಇಲ್ಲಿನವರ ಪರಿಸ್ಥಿತಿಯಾಗಿದೆ. ಈ ನೆಲೆಯಲ್ಲಿ ವಾಸಿಸುವ ನಾಯಕ ಈ ಸಮುದಾಯ "ಆರ್ಥಿಕವಾಗಿ ಸ್ವಲ್ಪ ಮಟ್ಟಿಗೆ ಚೆನ್ನಾಗಿದ್ದರೆ ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸುತ್ತಿದ್ದಾರೆ. ಉಳಿದಂತೆ ತಂದೆ ಮಾಡಿದ ಕಾಯಕದಂತೆ ಮಕ್ಕಳು ಕೂಲಿನಾಲಿ ಮಾಡುವುದು ಸಾಮಾನ್ಯವಾಗಿ ಕಂಡುಬರುತ್ತದೆ."[೭]

ಇಲ್ಲಿನ ನಿವಾಸಿಗಳು ಬಹುತೇಕ ಜನರು ಕೃಷಿಯನ್ನು ನಂಬಿ ಬದುಕುತ್ತಿದ್ದಾರೆ. ಕೃಷಿ ಜೊತೆಗೆ ಕೂಲಿ ಕೆಲಸ ಮಾಡುತ್ತಾರೆ. ನೆಲೆಗೆ ಪೂರಕವಾಗಿ ದನ ಕರುಗಳನ್ನು ಸಾಕಿಕೊಂಡು ಜೀವನ ನಡೆಸುತ್ತಿದ್ದಾರೆ. ಆರ್ಥಿಕವಾಗಿ ಸ್ವಲ್ಪ ಮಟ್ಟಿಗೆ ಉಳ್ಳವರು ಬೋರ್‌ವೆಲ್ ಮುಖಾಂತರ ವರ್ಷದಲ್ಲಿ ಎರಡು ಬೆಳೆಯನ್ನು ಬೆಳೆಯುತ್ತಾರೆ.

೫.೨. ಕ್ಷೇತ್ರಕಾರ್ಯದ ಕೋಷ್ಟಕಗಳು

ಕೋಷ್ಟಕ –೧ ಗ್ರಾಮವಾರು ಜಾತಿಗಳ ವಿಂಗಡಣೆ

ಕ್ರಸಂ	ಊರು	ಕುರುಬರು			ಕಬ್ಬಲಿಗರು			ನಾಯಕರು (ಎಸ್.ಟಿ)			ಒಟ್ಟು		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೦೧	ಇರಬಗೇರಿ	೦	೦	೦	೦	೦	೦	೧೮	೪೦	೮೮	೪೮	೪೦	೮೮
೦೨	ಕೊತ್ತದೊಡ್ಡಿ	೦	೦	೦	೪೫	೩೪	೭೯	೦	೦	೦	೪೫	೩೪	೭೯
೦೩	ಬುಂಕಲದೊಡ್ಡಿ	೪೧	೩೨	೭೩	೦	೦	೦	೦	೦	೦	೪೧	೩೨	೭೩
೦೪	ಗೋವಿಂದದೊಡ್ಡಿ	೦	೦	೦	೦	೦	೦	೪೧	೨೭	೬೮	೪೧	೨೭	೬೮
೦೫	ತಪ್ಪಲದೊಡ್ಡಿ	೦	೦	೦	೪೨	೨೮	೭೦	೦	೦	೦	೪೨	೨೮	೭೦
೦೬	ಯರಮಲದೊಡ್ಡಿ	೪೯	೩೧	೮೦	೦	೦	೦	೦	೦	೦	೪೯	೩೧	೮೦
೦೭	ಕೊತ್ತದೊಡ್ಡಿ	೧೮	೧೬	೩೪	೦	೦	೦	೧೮	೧೮	೩೬	೩೬	೩೪	೭೦
೦೮	ಮಾಮಡದೊಡ್ಡಿ	೧೪	೧೩	೨೭	೦	೦	೦	೦	೦	೦	೧೪	೧೩	೨೭
೦೯	ಮಾಲದೊಡ್ಡಿ	೧೫	೧೨	೨೭	೦	೦	೦	೨೫	೧೩	೩೮	೪೦	೨೫	೬೫
೧೦	ಹನುಮಾನದೊಡ್ಡಿ	೦	೦	೦	೩೫	೩೬	೭೧	೦	೦	೦	೩೫	೩೬	೭೧
೧೧	ಗುರುಗುಂಟಾ	೦	೦	೦	೩೮	೩೨	೭೦	೦	೦	೦	೩೮	೩೨	೭೦
೧೨	ಗೌಡೂರು	೫೫	೫೩	೧೦೮	೦	೦	೦	೦	೦	೦	೫೫	೫೩	೧೦೮
೧೩	ತಿಂಕಿಮಚೇರಿ	೦	೦	೦	೦	೦	೦	೩೮	೩೪	೭೨	೩೮	೩೪	೭೨
೧೪	ಉಪ್ಪಲದೊಡ್ಡಿ	೨೪	೨೪	೪೮	೦	೦	೦	೦	೦	೦	೨೪	೨೪	೪೮
೧೫	ಚಿಂತಮಾನದೊಡ್ಡಿ	೦	೦	೦	೩೬	೨೯	೬೫	೦	೦	೦	೩೬	೨೯	೬೫
೧೬	ಯದ್ದಲದೊಡ್ಡಿ	೦	೦	೦	೦	೦	೦	೩೨	೩೧	೬೩	೩೨	೩೧	೬೩
	ಒಟ್ಟು	೨೧೬	೧೮೧	೩೯೭	೧೯೬	೧೫೯	೩೫೫	೨೦೨	೧೬೩	೩೬೫	೬೧೪	೫೦೩	೧೧೧೭

ಮೂಲ : ಪ್ರಾಥಮಿಕ ಅಂಕಿ ಅಂಶಗಳು

ಕೋಷ್ಟಕ –೨ ತಾಲ್ಲೂಕುವಾರು ಜಾತಿಗಳ ವಿಂಗಡಣೆ

ಕ್ರ.ಸಂ.	ತಾಲ್ಲೂಕು	ಕುರುಬರು			ಕಬ್ಬಲಿಗರು			ಬೇಡರು			ಒಟ್ಟು		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೦೧	ದೇವದುರ್ಗ	೪೧	೩೨	೭೩	೪೫	೩೪	೭೯	೪೮	೪೦	೮೮	೧೩೪	೧೦೬	೨೪೦
೦೨	ಮಾನ್ವಿ	೪೯	೩೧	೮೦	೪೨	೩೮	೮೦	೪೧	೨೭	೬೮	೧೩೨	೯೬	೨೧೮
೦೩	ರಾಯಚೂರು	೪೭	೪೧	೮೮	೩೫	೩೬	೭೧	೪೩	೩೧	೭೪	೧೨೫	೧೦೮	೨೩೩
೦೪	ಲಿಂಗಸೂಗೂರು	೫೫	೫೩	೧೦೮	೩೮	೩೨	೭೦	೩೮	೩೪	೭೨	೧೩೧	೧೧೯	೨೫೦
೦೫	ಸಿಂಧನೂರು	೨೪	೨೪	೪೮	೩೬	೨೯	೬೫	೩೨	೩೧	೬೩	೯೨	೮೪	೧೭೬
	ಒಟ್ಟು	೨೧೬	೧೮೧	೩೯೭	೧೯೬	೧೫೯	೩೫೫	೨೦೨	೧೬೩	೩೬೫	೬೧೪	೫೦೩	೧೧೧೭

ಮೂಲ : ಪ್ರಾಥಮಿಕ ಅಂಕಿ ಅಂಶಗಳು

ಕೋಷ್ಟಕ–೧ ಮತ್ತು ೨ರಲ್ಲಿ ಇರುವಂತೆ ದೇವದುರ್ಗ ತಾಲ್ಲೂಕಿನ ಇರಬಗೇರಿ ದೊಡ್ಡಿಯಲ್ಲಿ ಬೇಡ ಸಮುದಾಯಕ್ಕೆ ಸೇರಿದ ಒಟ್ಟು ೮೮ ಜನಸಂಖ್ಯೆ ಇರುವುದನ್ನು ಕಾಣಬಹುದು. ಇದರಲ್ಲಿ ೪೮ ಪುರುಷರು ಹಾಗೂ ೪೦ ಮಹಿಳೆಯರು ಇರಬಗೇರಿ ದೊಡ್ಡಿಯಲ್ಲಿ ಇರುವುದನ್ನು ಕಾಣಬಹುದು. ಹಾಗೆಯೇ ಕೊತ್ತದೊಡ್ಡಿಯಲ್ಲಿ ಒಟ್ಟು ೭೯ ಜನಸಂಖ್ಯೆ ಇರುವುದನ್ನು ಕಾಣುತ್ತೇವೆ. ಇವರೆಲ್ಲ ಕಬ್ಬಲಿಗ ಜನಾಂಗಕ್ಕೆ ಸೇರಿದವರಾಗಿದ್ದಾರೆ. ಇವರಲ್ಲಿ ೪೫ ಪುರುಷರು ಹಾಗೂ ೩೪ ಮಹಿಳೆಯರು ಇರುವುದನ್ನು ಕಾಣಬುದು. ಹಾಗೆಯೇ ದೇವದುರ್ಗಾ ತಾಲ್ಲೂಕಿನ ಇನ್ನೊಂದು ದೊಡ್ಡಿ ಬುಂಕಲದೊಡ್ಡಿ ಈ ದೊಡ್ಡಿಯಲ್ಲಿ ಕುರುಬ ಜನಾಂಗಕ್ಕೆ ಸೇರಿದ ಒಟ್ಟು ೭೩ ಜನಸಂಖ್ಯೆ ಇರುವುದನ್ನು ಕಾಣಬಹುದು. ಇದರಲ್ಲಿ ೪೧ ಪುರುಷರು ಹಾಗೂ ೩೨ ಮಹಿಳೆಯರು ಇರುವುದನ್ನು ಕಾಣಬಹುದು.

ಒಟ್ಟಾರೆಯಾಗಿ ದೇವದುರ್ಗ ತಾಲ್ಲೂಕಿನ ಇರಬಗೇರಿ ದೊಡ್ಡಿಯಲ್ಲಿ ಒಟ್ಟು ೮೮ ಜನಸಂಖ್ಯೆ ಕೊತ್ತದೊಡ್ಡಿಯಲ್ಲಿ ೭೯ ಜನಸಂಖ್ಯೆ ಹಾಗೂ ಬುಂಕಲ ದೊಡ್ಡಿಯಲ್ಲಿ ೭೩ ಜನಸಂಖ್ಯೆಯನ್ನು ಹಾಗೂ ಒಟ್ಟು ೨೪೦ ಜನರನ್ನು ದೇವದುರ್ಗ ತಾಲ್ಲೂಕಿನಲ್ಲಿ ಸಮೀಕ್ಷೆಗೆ ಒಳಪಡಿಸಲಾಗಿದೆ. ಹಾಗೆಯೇ ಕೋಷ್ಟಕ ೧ ಮತ್ತು ೨ರಲ್ಲಿ ಇರುವಂತೆ ಮಾನ್ವಿ ತಾಲ್ಲೂಕಿನ ಗೋವಿಂದದೊಡ್ಡಿಯಲ್ಲಿ ಒಟ್ಟು ನಾಯಕ ಜನಾಂಗಕ್ಕೆ ಸೇರಿದ ೬೮ ಜನರು ಇರುವುದನ್ನು ಕಾಣಬಹುದು. ಇವರಲ್ಲಿ ೪೧ ಪುರುಷರು ಹಾಗೂ ೨೭ ಮಹಿಳೆಯರು ಈ ದೊಡ್ಡಿಯಲ್ಲಿ ಇರುವುದನ್ನು ಕಾಣುತ್ತೇವೆ. ಹಾಗೆಯೇ ತಪ್ಪಲದೊಡ್ಡಿಯಲ್ಲಿ ಕಬ್ಬಲಿಗ ಜನಾಂಗಕ್ಕೆ ಸೇರಿದ ೭೦ ಜನರು ಇರುವುದನ್ನು ಕಾಣುತ್ತೇವೆ ಇವರಲ್ಲಿ ೪೨ ಪುರುಷರು ಹಾಗೂ ೨೮ ಮಹಿಳೆಯರು ಇರುವುದನ್ನು ನಾವು ಕಾಣಬಹುದಾಗಿದೆ.

ಹಾಗೆಯೇ ಮಾನ್ವಿ ತಾಲ್ಲೂಕಿನ ಇನ್ನೊಂದು ದೊಡ್ಡಿಯಾದ ಯರಮಲದೊಡ್ಡಿಯಲ್ಲಿ ಒಟ್ಟು ೮೦ ಜನರು ನನ್ನ ಕಾರ್ಯ ಕ್ಷೇತ್ರದಲ್ಲಿ ಗುರುತಿಸಲಾಗಿದೆ. ಅವರಲ್ಲಿ ೪೯ ಪುರುಷರು ಹಾಗೂ ೩೧ ಮಹಿಳೆಯರನ್ನು ನಾವು ಕಾಣುತ್ತೇವೆ ಇವರೆಲ್ಲ ಕುರುಬ ಜನಾಂಗಕ್ಕೆ ಸೇರಿದವರಾಗಿದ್ದಾರೆ.

ಒಟ್ಟಾರೆಯಾಗಿ ಮನ್ವಿ ತಾಲ್ಲೂಕಿನ ಗೋವಿಂದ ದೊಡ್ಡಿಯಲ್ಲಿ ಒಟ್ಟು ಜನಸಂಖ್ಯೆ ೬೮, ತಪ್ಪಲದೊಡ್ಡಿಯಲ್ಲಿ ೭೦ ಜನಸಂಖ್ಯೆ ಹಾಗೂ ಯರಮಲದೊಡ್ಡಿಯಲ್ಲಿ ೮೦ ಜನಸಂಖ್ಯೆಯನ್ನು ಹಾಗೂ ಒಟ್ಟು ೨೧೮ ಜನರನ್ನು ಮನ್ವಿ ತಾಲ್ಲೂಕಿನಲ್ಲಿ ಸಮೀಕ್ಷೆಗೆ ಒಳಪಡಿಸಲಾಗಿದೆ.

ಕೋಷ್ಠಕ ೧ ಮತ್ತು ೨ರಲ್ಲಿರುವಂತೆ ರಾಯಚೂರು ತಾಲ್ಲೂಕಿನ ಕೊತ್ತದೊಡ್ಡಿಯಲ್ಲಿ ಕುರುಬ ಜನಾಂಗಕ್ಕೆ ಸೇರಿದ ಒಟ್ಟು ೩೪ ಜನರಲ್ಲಿ ೧೮ ಪುರುಷರು ಮತ್ತು ೧೬ ಮಹಿಳೆಯರನ್ನು ಗುರುತಿಸಲಾಗಿದೆ. ಹಾಗೆಯೇ ಇದೇ ದೊಡ್ಡಿಯಲ್ಲಿ ನಾಯಕ ಜನಾಂಗಕ್ಕೆ ಸೇರಿದ ೩೬ ಜನರಲ್ಲಿ ೧೮ ಪುರುಷರು ೧೮ ಮಹಿಳೆಯರನ್ನು ಈ ದೊಡ್ಡಿಯಲ್ಲಿ ಗುರುತಿಸಲಾಗಿದೆ. ರಾಯಚೂರು ತಾಲ್ಲೂಕಿನ ಇನ್ನೊಂದು ದೊಡ್ಡಿಯಾದ ಮಾಮಡದೊಡ್ಡಿಯಲ್ಲಿ ಕುರುಬ ಜನಾಂಗಕ್ಕೆ ಸೇರಿದ ೨೭ ಜನರಲ್ಲಿ ೧೪ ಪುರುಷರು ಹಾಗೂ ೧೩ ಮಹಿಳೆಯರನ್ನು ಕಾಣಬಹುದು. ಹಾಗೆಯೇ ಮಾಲದೊಡ್ಡಿಯ ಒಟ್ಟು ೬೫ ಜನರಲ್ಲಿ ೨೭ ಜನರು ಕುರುಬ ಜನಾಂಗಕ್ಕೆ ಸೇರಿದವರಾಗಿದ್ದಾರೆ. ಇವರಲ್ಲಿ ೧೫ಪುರುಷರು ೧೨ ಮಹಿಳೆಯರು ಇರುವುದನ್ನು ಕಾಣಬಹುದು. ಹಾಗೆಯೇ ನಾಯಕ ಜನಾಂಗಕ್ಕೆ ಸೇರಿದ ಒಟ್ಟು ೩೮ ಜನರಲ್ಲಿ ೨೫ ಪುರುಷರು ೧೩ ಮಹಿಳೆಯರು ಇರುವುದನ್ನು ಕಾಣಬಹುದು. ಹಾಗೆಯೇ ರಾಯಚೂರು ತಾಲ್ಲೂಕಿನ ಇನ್ನೊಂದು ಗ್ರಾಮವಾದ ಹನುಮಾನದೊಡ್ಡಿಯಲ್ಲಿ ಕಬ್ಬಲಿಗ ಜನಾಂಗಕ್ಕೆ ಸೇರಿದ ೭೧ ಜನರನ್ನು ಕಾಣಬಹುದು. ಇವರಲ್ಲಿ ೩೫ ಪುರುಷರು ಹಾಗೂ ೩೬ ಮಹಿಳೆಯರನ್ನು ಸಮೀಕ್ಷೆಗೆ ಒಳಪಡಿಸಲಾಗಿದೆ.

ಒಟ್ಟಾರೆಯಾಗಿ ರಾಯಚೂರು ತಾಲ್ಲೂಕಿನ ಕೊತ್ತದೊಡ್ಡಿಯಲ್ಲಿ ೭೦, ಮಾಮಡದೊಡ್ಡಿಯಲ್ಲಿ ೨೭, ಮಾಲದೊಡ್ಡಿಯಲ್ಲಿ ೬೫ ಮತ್ತು ಹನುಮಾನದೊಡ್ಡಿಯಲ್ಲಿ ೭೧ ಜನರು ಒಟ್ಟು ೨೩೩ ಜನರನ್ನು ರಾಯಚೂರು ತಾಲ್ಲೂಕಿನಲ್ಲಿ ಸಮೀಕ್ಷೆ ನಡೆಸಲಾಗಿದೆ.

ಕೋಷ್ಠಕ ೧ ಮತ್ತು ೨ರಲ್ಲಿರುವಂತೆ ಲಿಂಗಸೂಗೂರು ತಾಲ್ಲೂಕಿನ ಗುರುಗುಂಟಾ ದೊಡ್ಡಿಯಲ್ಲಿ ಕಬ್ಬಲಿಗ ಜನಾಂಗಕ್ಕೆ ಸೇರಿದ ೭೦ ಜನರಲ್ಲಿ ೩೮ ಪುರುಷರು ಹಾಗೂ ೩೨ ಮಹಿಳೆಯರನ್ನು ಕಾಣಬಹುದು. ಗೌಡೂರು ದೊಡ್ಡಿಯಲ್ಲಿ ಕುರುಬ ಜನಾಂಗಕ್ಕೆ ಸೇರಿದ ೧೦೮ ಜನರನ್ನು ಕಾಣುತ್ತೇವೆ. ಇವರಲ್ಲಿ ೫೫ ಪುರುಷರು ಹಾಗೂ ೫೩ ಮಹಿಳೆಯರನ್ನು ಗುರುತಿಸಿ ಸಮೀಕ್ಷೆ ನಡೆಸಲಾಗಿದೆ. ಲಿಂಗಸೂಗೂರು ತಾಲ್ಲೂಕಿನ ಇನ್ನೊಂದು ದೊಡ್ಡಿಯಾದ ತಿಂಕಿಮಚೇರಿ ದೊಡ್ಡಿಯಲ್ಲಿ ೭೨ ಜನರು ನಾಯಕ ಜನಾಂಗಕ್ಕೆ ಸೇರಿದವರಾಗಿದ್ದಾರೆ. ಇವರಲ್ಲಿ ೩೮ ಪುರುಷರು ಹಾಗೂ ೩೪ ಮಹಿಳೆಯರನ್ನು ಕಾಣಬಹುದು.

ಒಟ್ಟಾರೆಯಾಗಿ ಲಿಂಗಸೂಗೂರು ತಾಲ್ಲೂಕಿನಲ್ಲಿ ಗುರುಗುಂಟಾ ೭೦, ಗೌಡೂರು ೧೦೮, ಮತ್ತು ತಿಂಕಿಚೇರಿ ದೊಡ್ಡಿಯಲ್ಲಿ ೭೨ ಒಟ್ಟು ೨೫೦ ಜನರಲ್ಲಿ ೧೩೧ ಪುರುಷರು ೧೧೯ ಮಹಿಳೆಯರನ್ನು ಜಾತಿ ಸಮೀಕ್ಷೆಗೆ ಒಳಪಡಿಸಲಾಗಿದೆ.

ಕೊಷ್ಠಕ ೧ ಮತ್ತು ೨ರಲ್ಲಿರುವಂತೆ ಸಿಂಧನೂರು ತಾಲ್ಲೂಕಿನ ಉಪ್ಪಲದೊಡ್ಡಿಯಲ್ಲಿ ೪೮ ಜನರನ್ನು ಜಾತಿ ಸಮೀಕ್ಷೆ ನಡೆಸಿದಾಗ ಇವರೆಲ್ಲ ಕುರುಬ ಜನಾಂಗಕ್ಕೆ ಸೇರಿದವರಾಗಿದ್ದಾರೆಂದು ಗುರುತಿಸಲಾಗಿದೆ. ಇವರಲ್ಲಿ ೨೪ ಮಹಿಳೆಯರು ಇರುವುದನ್ನು ಕಾಣಬಹುದು. ಚಿಂತಮಾನದೊಡ್ಡಿಯಲ್ಲಿ ಒಟ್ಟು ೬೫ ಜನರಲ್ಲಿ ೩೬ ಪುರುಷರು ಹಾಗೂ ೨೯ ಮಹಿಳೆಯರು ಕಬ್ಬಲಿಗ ಜನಾಂಗಕ್ಕೆ ಸೇರಿದವರಾಗಿದ್ದಾರೆಂದು ತಿಳಿಯುತ್ತದೆ. ಹಾಗೆಯೇ ಸಿಂಧನೂರು ತಾಲ್ಲೂಕಿನ ಯದ್ದಲದೊಡ್ಡಿಯಲ್ಲಿ ಒಟ್ಟು ೬೩ ಜನರಲ್ಲಿ ೩೨ ಪುರುಷರು ಹಾಗೂ ೩೧ ಮಹಿಳೆಯರು ನಾಯಕ ಜನಾಂಗಕ್ಕೆ ಸೇರಿದವರಾಗಿದ್ದಾರೆಂದು ಸಮೀಕ್ಷೆಯಿಂದ ಗುರುತಿಸಲಾಗಿದೆ.

ಒಟ್ಟಾರೆಯಾಗಿ ಸಿಂಧನೂರು ತಾಲ್ಲೂಕಿನ ಉಪ್ಪಲದೊಡ್ಡಿಯಲ್ಲಿ ೪೮, ಚಿಂತಮಾನದೊಡ್ಡಿಯಲ್ಲಿ ೬೫ ಹಾಗೂ ಯದ್ದಲದೊಡ್ಡಿಯಲ್ಲಿ ೬೩ ಜನರು ಒಟ್ಟು ೧೭೬ ಜನರಲ್ಲಿ ೯೨ ಪುರುಷರು ಹಾಗೂ ೮೪ ಮಹಿಳೆಯರನ್ನು ಜಾತಿ ಸಮೀಕ್ಷೆಗೆ ಒಳಪಡಿಸಲಾಗಿದೆ.

ಕೋಷ್ಠಕ ೧ ಮತ್ತು ೨ರಲ್ಲಿ ರಾಯಚೂರು ಜಿಲ್ಲೆಯಲ್ಲಿ ಒಟ್ಟು ೧೧೧೭ ಜನರನ್ನು ಜಾತಿ ಸಮೀಕ್ಷೆಗೆ ಒಳಪಡಿಸಲಾಗಿದೆ. ೬೧೪ ಪುರುಷರು ಹಾಗೂ ೫೦೩ ಮಹಿಳೆಯರನ್ನು ಈ ಜಾತಿ ಸಮೀಕ್ಷೆಗೆ ಒಳಪಡಿಸಲಾಗಿದೆ. ಇವರಲ್ಲಿ ಕುರುಬ ಜನಾಂಗಕ್ಕೆ ಸೇರಿದ ೩೯೭ ಜನರನ್ನು ಕಾಣಬಹುದು. ಕಬ್ಬಲಿಗ ಜನಾಂಗಕ್ಕೆ ಸೇರಿದ ಒಟ್ಟು ೩೫೫ ಜನರನ್ನು ಕಾಣುತ್ತೇವೆ. ನಾಯಕ ಜನಾಂಗಕ್ಕೆ ಸೇರಿದ ೩೬೫ ಜನರನ್ನು ರಾಯಚೂರು ಜಿಲ್ಲೆಯಲ್ಲಿ ಜಾತಿ ಸಮೀಕ್ಷೆಗೆ ಒಳಪಡಿಸಲಾಗಿದೆ.

ಕೋಷ್ಟಕ –೩ ಗ್ರಾಮವಾರು ಶೈಕ್ಷಣಿಕ ಸ್ಥಿತಿಗತಿ

ಕ್ರಸಂ.	ಊರು	ಅನಕ್ಷರಸ್ಥರು			ಪ್ರಾಥಮಿಕ ಶಿಕ್ಷಣ			ಪ್ರೌಢಶಿಕ್ಷಣ			ಉನ್ನತ ಶಿಕ್ಷಣ			ಒಟ್ಟು		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೦೧	ಇರಬಗೇರಿ	೪೦	೩೬	೭೬	೭	೩	೧೦	೦	೧	೧	೧	೦	೧	೪೮	೪೦	೮೮
೦೨	ಕೊತ್ತದೊಡ್ಡಿ	೨೪	೨೨	೪೬	೧೧	೯	೨೦	೯	೩	೧೨	೧	೦	೧	೪೫	೩೪	೭೯
೦೩	ಬುಂಕಲದೊಡ್ಡಿ	೨೧	೨೭	೪೮	೧೦	೪	೧೪	೭	೧	೮	೩	೦	೩	೪೧	೩೨	೭೩
೦೪	ಗೋವಿಂದದೊಡ್ಡಿ	೧೦	೧೦	೨೦	೮	೬	೧೪	೧೩	೧೦	೨೩	೧೦	೧	೧೧	೪೧	೨೭	೬೮
೦೫	ತಪ್ಪಲದೊಡ್ಡಿ	೨೧	೧೫	೩೬	೫	೮	೧೩	೧೧	೫	೧೬	೫	೦	೫	೪೨	೨೮	೭೦
೦೬	ಯರಮಲದೊಡ್ಡಿ	೨೫	೧೯	೪೪	೧೨	೮	೨೦	೬	೪	೧೦	೬	೦	೬	೪೯	೩೧	೮೦
೦೭	ಕೊತ್ತದೊಡ್ಡಿ	೨೨	೨೫	೪೭	೧೧	೯	೨೦	೨	೦	೨	೧	೦	೧	೩೬	೩೪	೭೦
೦೮	ಮಾಮಡದೊಡ್ಡಿ	೨	೮	೧೦	೧೦	೩	೧೩	೧	೨	೩	೧	೦	೧	೧೪	೧೩	೨೭
೦೯	ಮಾಲದೊಡ್ಡಿ	೨೦	೧೭	೩೭	೧೦	೮	೧೮	೬	೧	೭	೪	೦	೪	೪೦	೨೫	೬೫
೧೦	ಹನುಮಾನದೊಡ್ಡಿ	೮	೧೪	೨೨	೧೦	೧೧	೨೧	೬	೬	೧೨	೧೧	೫	೧೬	೩೫	೩೬	೭೧
೧೧	ಗುರುಗುಂಟಾ	೧೫	೧೬	೩೧	೧೦	೧೦	೨೦	೩	೪	೭	೧೦	೨	೧೨	೩೮	೩೨	೭೦
೧೨	ಗೌಡೂರು	೩೨	೩೧	೬೩	೧೮	೨೦	೩೮	೩	೨	೫	೨	೦	೨	೫೫	೫೩	೧೦೮
೧೩	ತಿಂಕಮಚೇರಿ	೨೩	೨೭	೫೦	೧೪	೬	೨೦	೧	೧	೨	೦	೦	೦	೩೮	೩೪	೭೨
೧೪	ಉಪ್ಪಲದೊಡ್ಡಿ	೩	೧೫	೧೮	೧೩	೭	೨೦	೬	೧	೭	೨	೧	೩	೨೪	೨೪	೪೮
೧೫	ಚಿಂತಮಾನದೊಡ್ಡಿ	೨೦	೧೫	೩೫	೮	೯	೧೭	೪	೩	೭	೪	೨	೬	೩೬	೨೯	೬೫
೧೬	ಯದ್ದಲದೊಡ್ಡಿ	೧೧	೨೧	೩೨	೧೬	೯	೨೫	೩	೧	೪	೨	೦	೨	೩೨	೩೧	೬೩
	ಒಟ್ಟು	೨೯೭	೩೧೮	೬೧೫	೧೭೩	೧೩೦	೩೦೩	೮೧	೪೫	೧೨೬	೬೩	೧೧	೭೪	೬೧೪	೫೦೩	೧೧೧೭

ಮೂಲ : ಪ್ರಾಥಮಿಕ ಅಂಕಿಅಂಶಗಳು

ಕೋಷ್ಟಕ –೪ ತಾಲ್ಲೂಕುವಾರು ಶೈಕ್ಷಣಿಕ ಸ್ಥಿತಿಗತಿ

ಕ್ರಸಂ.	ತಾಲ್ಲೂಕು	ಅನಕ್ಷರಸ್ಥರು			ಪ್ರಾಥಮಿಕ ಶಿಕ್ಷಣ			ಪ್ರೌಢಶಿಕ್ಷಣ			ಉನ್ನತ ಶಿಕ್ಷಣ			ಒಟ್ಟು		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೦೧	ದೇವದುರ್ಗ	೮೫	೮೫	೧೭೦	೨೮	೧೬	೪೪	೧೬	೫	೨೧	೫	೦	೫	೧೩೪	೧೦೬	೨೪೦
೦೨	ಮಾನ್ವಿ	೫೬	೪೪	೧೦೦	೨೫	೨೨	೪೭	೩೦	೧೯	೪೯	೨೧	೧	೨೨	೧೩೨	೮೬	೨೧೮
೦೩	ರಾಯಚೂರು	೫೨	೬೪	೧೧೬	೪೧	೩೧	೭೨	೧೫	೯	೨೪	೧೭	೫	೨೨	೧೨೫	೧೦೮	೨೩೩
೦೪	ಲಿಂಗಸೂಗೂರು	೭೦	೭೪	೧೪೪	೪೨	೩೬	೭೮	೭	೭	೧೪	೧೨	೨	೧೪	೧೩೧	೧೧೯	೨೫೦
೦೫	ಸಿಂಧನೂರು	೩೪	೫೧	೮೫	೩೭	೨೫	೬೨	೧೩	೫	೧೮	೮	೩	೧೧	೯೨	೮೪	೧೭೬
	ಒಟ್ಟು	೨೯೭	೩೧೮	೬೧೫	೧೭೩	೧೩೦	೩೦೩	೮೧	೪೫	೧೨೬	೬೩	೧೧	೭೪	೬೧೪	೫೦೩	೧೧೧೭

ಮೂಲ : ಪ್ರಾಥಮಿಕ ಅಂಕಿಅಂಶಗಳು

ಕೋಷ್ಟಕ ೩ ಮತ್ತು ೪ರಲ್ಲಿರುವಂತೆ ಗ್ರಾಮವಾರು ಶೈಕ್ಷಣಿಕ ಸ್ಥಿತಿಗತಿಯ ಕುರಿತು ವಿಶ್ಲೇಷಿಸಲಾಗಿದೆ. ಅದರಂತೆ ದೇವದುರ್ಗ ತಾಲ್ಲೂಕಿನ ಇರಬಗೇರಿ ದೊಡ್ಡಿಯಲ್ಲಿ ಒಟ್ಟು ೮೮ ಜನರ ಪೈಕಿ ೪೮ ಪುರುಷರು ೪೦ ಮಹಿಳೆಯರಲ್ಲಿ ಅನಕ್ಷರಸ್ಥರು ೭೬ ಜನರು ಇರುವುದನ್ನು ಕಾಣಬಹುದು. ಇವರಲ್ಲಿ ೪೦ ಪುರುಷರು ಮತ್ತು ೩೬ ಮಹಿಳೆಯರಿದ್ದಾರೆ. ಇನ್ನು ಪ್ರಾಥಮಿಕ ಶಿಕ್ಷಣ ಪೂರೈಸಿದ ಜನರು ೧೦ ಮಂದಿ ಮಾತ್ರ ಇವರಲ್ಲಿ ೭ ಪುರುಷರು ಹಾಗೂ ೩ ಮಹಿಳೆಯರು, ಹಾಗೆಯೇ ಪ್ರೌಢಶಿಕ್ಷಣ ಪೂರೈಸಿದ ಏಕೈಕ ಮಹಿಳೆ ಇದ್ದಾರೆ. ಇನ್ನು ಉನ್ನತ ಶಿಕ್ಷಣ ಪಡೆದ ಒಬ್ಬ ಪುರುಷ ಇರುವುದನ್ನು ಕಾಣಬಹುದು. ಹಾಗೆಯೇ ದೇವದುರ್ಗ ತಾಲ್ಲೂಕಿನ ಇನ್ನೊಂದು ಗ್ರಾಮವಾದ ಕೊತ್ತದೊಡ್ಡಿ ವ್ಯಾಪ್ತಿಯಲ್ಲಿ ೭೯ ಜನರಲ್ಲಿ ೪೫ ಪುರುಷರು ಮತ್ತು ೩೪ ಮಹಿಳೆಯರು ಇರುವುದನ್ನು ಕಾಣುತ್ತೇವೆ. ಇವರಲ್ಲಿ ೪೬ ಜನ ಅನಕ್ಷರಸ್ಥರಾಗಿದ್ದಾರೆ. ಇವರಲ್ಲಿ ೨೪ ಪುರುಷರು ಹಾಗೂ ೨೨ ಮಹಿಳೆಯರು ಇರುವುದನ್ನು ಕಾಣಬಹುದು. ಹಾಗೆಯೇ ಪ್ರಾಥಮಿಕ ಶಿಕ್ಷಣ ಮಗಿಸಿದ ೨೦ ಜನರಲ್ಲಿ ೧೧ ಪುರುಷರು ಮತ್ತು ೯ ಮಹಿಳೆಯರನ್ನು ಕಾಣುತ್ತೇವೆ. ಹಾಗೆಯೇ ಉನ್ನತ ಶಿಕ್ಷಣ ಮುಗಿಸಿದ ಒಬ್ಬ ಪುರುಷನನ್ನು ನಾವು ಈ ದೊಡ್ಡಿಯಲ್ಲಿರುವುದನ್ನು ಕಾಣಬಹುದು. ಅಂತೆಯೇ ದೇವದುರ್ಗ ತಾಲ್ಲೂಕಿನ ಇನ್ನೊಂದು ಗ್ರಾಮವಾದ ಬುಂಕಲದೊಡ್ಡಿಯಲ್ಲಿ ಒಟ್ಟು ೭೩ ಜನರಲ್ಲಿ ೪೧ ಪುರುಷರು ೩೨ ಮಹಿಳೆಯರನ್ನು ಕಾಣಬಹುದು. ಇವರಲ್ಲಿ ೪೮ ಜನ ಅನಕ್ಷರಸ್ಥರಾಗಿದ್ದಾರೆ. ಅವರಲ್ಲಿ ೨೧ ಪುರುಷರು ಹಾಗೂ ೨೭ ಮಹಿಳೆಯರನ್ನು ಗುರುತಿಸಲಾಗಿದೆ. ಇನ್ನು ಪ್ರಾಥಮಿಕ ಶಿಕ್ಷಣ ಪೂರೈಸಿದ ೧೪ ಜನರಲ್ಲಿ ೧೦ ಪುರುಷರು ಹಾಗೂ ೪ ಮಹಿಳೆಯರನ್ನು ಕಾಣಬಹುದು. ಹಾಗೆಯೇ ಪ್ರೌಢ ಶಿಕ್ಷಣ ಪೂರೈಸಿದ ಒಟ್ಟು ೮ ಜನರಲ್ಲಿ ೭ ಪುರುಷರು ಒಬ್ಬ ಮಹಿಳೆ ಇರುವುದನ್ನು ಕಾಣಬಹುದು. ಇನ್ನು ಉನ್ನತ ಶಿಕ್ಷಣ ಪೂರೈಸಿದ ೩ ಪುರುಷರನ್ನು ಬುಂಕಲದೊಡ್ಡಿಯಲ್ಲಿ ಗುರುತಿಸಲಾಗಿದೆ.

ಒಟ್ಟಾರೆಯಾಗಿ ಕೋಷ್ಟಕ ೩ ಮತ್ತು ೪ರಲ್ಲಿ ದೇವದುರ್ಗ ತಾಲ್ಲೂಕಿನ ಒಟ್ಟು ೨೪೦ ಜನರಲ್ಲಿ ೧೩೪ ಪುರುಷರು ಹಾಗೂ ೧೦೬ ಮಹಿಳೆಯರಲ್ಲಿ ೧೭೦ ಜನ ಅನಕ್ಷರಸ್ಥರನ್ನು ಕಾಣಬಹುದು. ಇವರಲ್ಲಿ ೮೫ ಪುರುಷರು ೮೫ ಮಹಿಳೆಯರನ್ನು ಗುರಿತಿಸಲಾಗಿದೆ. ಹಾಗೆಯೇ ಪ್ರಾಥಮಿಕ ಶಿಕ್ಷಣ ಮುಗಿಸಿದ ೪೪ ಜನರನ್ನು ಕಾಣಬಹುದು. ಇವರಲ್ಲಿ ೨೮ ಪುರುಷರು ೧೬ ಮಹಿಳೆಯರು ಇರುವುದನ್ನು ಕಾಣುತ್ತೇವೆ. ಹಾಗೆಯೇ ಪ್ರೌಢಶಿಕ್ಷಣ ಪೂರೈಸಿದ ೨ ಜನರನ್ನು ಕಾಣಬಹುದು. ಇವರಲ್ಲಿ ೧೬ ಪುರುಷರು ೫ ಮಹಿಳೆಯರಿದ್ದಾರೆ. ಇನ್ನು ಉನ್ನತ ಶಿಕ್ಷಣ ಪಡೆದ ೫ ಪುರುಷರನ್ನು ಮಾತ್ರ ಕಾಣಬಹುದು. ಈ ದೊಡ್ಡಿಗಳಲ್ಲಿ ಉನ್ನತ ಶಿಕ್ಷಣ ಪಡೆದ ಯಾವುದೇ ಮಹಿಳೆಯರು ಇರದೇ ಇರುವುದನ್ನು ಕಾಣಬಹುದು.

ಕೋಷ್ಟಕ ೩ ಮತ್ತು ೪ರಲ್ಲಿರುವಂತೆ ಮಾನ್ವಿ ತಾಲ್ಲೂಕಿನ ಗೋವಿಂದ ದೊಡ್ಡಿಯಲ್ಲಿ ಒಟ್ಟು ೬೮ ಜನರಲ್ಲಿ ೪೧ ಪುರುಷರು ಹಾಗೂ ೨೭ ಮಹಿಳೆಯರಿದ್ದಾರೆ. ಇವರಲ್ಲಿ ೨೦ ಜನ ಅನಕ್ಷರಸ್ಥರಿದ್ದಾರೆ. ಇವರಲ್ಲಿ ೧೦ ಪುರುಷರು ೧೦ ಮಹಿಳೆಯರಿದ್ದಾರೆ. ಇನ್ನು ಪ್ರಾಥಮಿಕ ಶಿಕ್ಷಣ ಪಡೆದ ೧೪ ಜನರಲ್ಲಿ ೮ ಪುರುಷರು ೬ ಮಹಿಳೆಯರಿದ್ದಾರೆ. ಹಾಗೆಯೇ ಪ್ರೌಢಶಿಕ್ಷಣ ಮುಗಿಸಿದ ೨೩ ಜನರನ್ನು ಕಾಣಬಹುದು. ಇವರಲ್ಲಿ ೧೩ ಪುರುಷರು ೧೦ ಮಹಿಳೆಯರನ್ನು ಕಾಣಬಹುದು. ಹಾಗೆಯೇ ಉನ್ನತ ಶಿಕ್ಷಣ ಪಡೆದ ೧೧ ಜನರಲ್ಲಿ ೧೦ ಪುರುಷರು ಹಾಗೂ ಏಕೈಕ ಮಹಿಳೆ ಇರುವುದನ್ನು ಗೋವಿಂದ ದೊಡ್ಡಿಯನ್ನು ಗುರುತಿಸಲಾಗಿದೆ. ಅಂತೆಯೇ ಮಾನ್ವಿ ತಾಲ್ಲೂಕಿನ ತಪ್ಪಲದೊಡ್ಡಿಯಲ್ಲಿ ೭೦ ಜನರಲ್ಲಿ ೪೨ ಪುರುಷರು ೨೮ ಮಹಿಳೆಯರು ಇರುವುದನ್ನು ಕಾಣಬಹುದು. ಇವರಲ್ಲಿ ೩೬ ಜನ ಅನಕ್ಷರಸ್ಥರು ಇರುವುದನ್ನು ಕಾಣಬಹುದು. ಇವರಲ್ಲಿ ೨೧ ಪುರುಷರು ೧೫ ಮಹಿಳೆಯರನ್ನು ಗುರುತಿಸಲಾಗಿದೆ. ಹಾಗೆಯೇ ಪ್ರಾಥಮಿಕ ಶಿಕ್ಷಣ ಪಡೆದ ೧೩ ಜನರಲ್ಲಿ ೫ ಪುರುಷರು ಹಾಗೂ ೮ ಮಹಿಳೆಯರನ್ನು ಕಾಣಬಹುದು. ಅಂತೆಯೇ ಪ್ರೌಡಶಿಕ್ಷಣ ಪಡೆದ ಒಟ್ಟು ೧೬ ಜನರಲ್ಲಿ ೧೧ ಪುರುಷರು ಹಾಗೂ ೫ ಮಹಿಳೆಯರನ್ನು ಗುರುತಿಸಲಾಗಿದೆ. ಹಾಗೆಯೇ ಉನ್ನತ ಶಿಕ್ಷಣ ಪಡೆದ ೫ ಪುರುಷರನ್ನು ಕಾಣಬಹುದು. ಉನ್ನತ ಶಿಕ್ಷಣ ಪಡೆದ ಯಾವುದೇ ಮಹಿಳೆ ತಪ್ಪಲದೊಡ್ಡಿಯಲ್ಲಿ ಇಲ್ಲದಿರುವುದನ್ನು ಕಾಣಬಹುದು. ಹಾಗೆಯೇ ಮಾನ್ವಿ ತಾಲ್ಲೂಕಿನ ಇನ್ನೊಂದು ಗ್ರಾಮವಾದ ಯರಮಲದೊಡ್ಡಿಯಲ್ಲಿ ಒಟ್ಟು ೮೦ ಜನರಲ್ಲಿ ೪೯ ಪುರುಷರು ೩೧ ಮಹಿಳೆಯರು ಇರುವುದನ್ನು ಕಾಣಬಹುದಾಗಿದೆ. ಇವರಲ್ಲಿ ೪೪ ಜನ ಅನಕ್ಷರಸ್ಥರನ್ನು ಗುರುತಿಸಲಾಗಿದೆ. ಅವರಲ್ಲಿ ೨೫ ಪುರುಷರು ಹಾಗೂ ೧೯ ಮಹಿಳೆಯರು ಇರುವುದನ್ನು ಕಾಣಬಹುದು. ಇನ್ನು ಪ್ರಾಥಮಿಕ ಶಿಕ್ಷಣ ಪಡೆದ ೨೦ ಜನರಲ್ಲಿ ೧೨ ಪುರುಷರು ಹಾಗೂ ೮ ಮಹಿಳೆಯರು ಇರುವುದನ್ನು ಕಾಣಬಹುದು. ಹಾಗೆಯೇ ಪ್ರೌಢ ಶಿಕ್ಷಣ ಪಡೆದ ೦ ಜನರಲ್ಲಿ ೬ ಪುರುಷರು ಮತ್ತು ೪ ಮಹಿಳೆಯರು ಇರುವುದನ್ನು ಕಾಣಬಹುದು. ಇನ್ನು ಉನ್ನತ ಶಿಕ್ಷಣ ಪಡೆದ ೬ ಪುರುಷರು ಇರುವುದನ್ನು ಕಾಣುತ್ತೇವೆ. ಉನ್ನತ ಶಿಕ್ಷಣ ಪಡೆದ ಯಾವುದೇ ಮಹಿಳೆ ಯರಮಲದೊಡ್ಡಿಯಲ್ಲಿ ಇಲ್ಲದಿರುವುದನ್ನು ಕಾಣಬಹುದು.

ಒಟ್ಟಾರೆಯಾಗಿ ಕೋಷ್ಟಕ ೩ ಮತ್ತು ೪ರಲ್ಲಿ ಇರುವಂತೆ ಮಾನ್ವಿ ತಾಲ್ಲೂಕಿನ ಒಟ್ಟು ೨೧೮ ಜನರಲ್ಲಿ ೧೩೨ ಪುರುಷರು ಹಾಗೂ ೮೬ ಮಹಿಳೆಯರು ಇರುವುದನ್ನು ಕಾಣಬಹುದು. ಇವರಲ್ಲಿ ೧೦ ಜನ ಅನಕ್ಷರಸ್ಥರು ಇರುವುದನ್ನು ಕಾಣುತ್ತೇವೆ. ಅವರಲ್ಲಿ ೫೬ ಪುರುಷರು ಹಾಗೂ ೪೪ ಮಹಿಳೆಯರು ಇರುವುದನ್ನು ಗುರುತಿಸಲಾಗಿದೆ. ಇನ್ನು ಪ್ರಾಥಮಿಕ ಶಿಕ್ಷಣ ಪಡೆದ ಒಟ್ಟು ೪೭ ಜನರಲ್ಲಿ ೨೫ ಪುರುಷರು ಮತ್ತು ೨೨ ಮಹಿಳೆಯರು ಇರುವುದನ್ನು ಕಾಣಬಹುದು. ಹಾಗೆಯೇ ಪ್ರೌಢ ಶಿಕ್ಷಣ ಪಡೆದ ೪೯

ಜನರಲ್ಲಿ ೩೦ ಪುರುಷರು ೧೯ ಮಹಿಳೆಯರು ಇರುವುದನ್ನು ಕಾಣುತ್ತೇವೆ. ಇನ್ನು ಉನ್ನತ ಶಿಕ್ಷಣ ಪಡೆದ ೨೨ ಜನರಲ್ಲಿ ೨೧ ಪುರುಷರು ಹಾಗೂ ಏಕೈಕ ಮಹಿಳೆ ಮಾನ್ವಿ ತಾಲ್ಲೂಕಿನ ದೊಡ್ಡಿಗಳಲ್ಲಿ ಇರುವುದನ್ನು ಗುರುತಿಸಲಾಗಿದೆ.

ಕೋಷ್ಟಕ ೩ ಮತ್ತು ೪ರಲ್ಲಿ ಇರುವಂತೆ ರಾಯಚೂರು ತಾಲ್ಲೂಕಿನ ಕೊತ್ತದೊಡ್ಡಿಯಲ್ಲಿ ಒಟ್ಟು ೭೦ ಜನರಲ್ಲಿ ೩೬ ಪುರುಷರು ಹಾಗೂ ೩೪ ಮಹಿಳೆಯರು ಇರುವುದನ್ನು ಕಾಣಬಹುದು. ಇವರಲ್ಲಿ ೪೭ ಜನ ಅನಕ್ಷರಸ್ಥರಾಗಿರುವುದನ್ನು ಕಾಣುತ್ತೇವೆ. ಅವರಲ್ಲಿ ೨೨ ಪುರುಷರು ಹಾಗೂ ೨೫ ಮಹಿಳೆಯರು ಇರುವುದನ್ನು ಗುರುತಿಸಲಾಗಿದೆ. ಹಾಗೆಯೇ ಪ್ರಾಥಮಿಕ ಶಿಕ್ಷಣ ಪಡೆದ ೨೦ ಜನರಲ್ಲಿ ೧೧ ಪುರುಷರು ಹಾಗೂ ೯ ಮಹಿಳೆಯರು ಇರುವುದನ್ನು ಕಾಣಬಹುದು. ಇನ್ನು ಪ್ರೌಢ ಶಿಕ್ಷಣ ಪಡೆದ ೨ ಪುರುಷರನ್ನು ಮಾತ್ರ ಇಲ್ಲಿ ಕಾಣಬಹುದು. ಹಾಗೆಯೇ ಮಾಮಡ ದೊಡ್ಡಿಯಲ್ಲಿ ೨೭ ಜನರಲ್ಲಿ ೧೪ ಪುರುಷರು ಹಾಗೂ ೧೩ ಮಹಿಳೆಯರು ಇರುವುದನ್ನು ಕಾಣಬಹುದು. ಇವರಲ್ಲಿ ೧೦ ಜನ ಅನಕ್ಷರಸ್ಥರಲ್ಲಿ ೨ ಪುರುಷರು ಹಾಗೂ ೮ ಮಹಿಳೆಯರು ಇರುವುದನ್ನು ಕಾಣಬಹುದಾಗಿದೆ. ಇನ್ನು ಪ್ರಾಥಮಿಕ ಶಿಕ್ಷಣ ಪಡೆದ ೧೩ ಜನರಲ್ಲಿ ೧೦ ಪುರುಷರು ಹಾಗೂ ೧೩ ಮಹಿಳೆಯರು ಇರುವುದನ್ನು ಕಾಣುತ್ತೇವೆ. ಹಾಗೆಯೇ ಪ್ರೌಢ ಶಿಕ್ಷಣ ಪಡೆದ ಒಟ್ಟು ೩ರಲ್ಲಿ ೧ ಪುರುಷ ಹಾಗೂ ೨ ಮಹಿಳೆಯರನ್ನು ಕಾಣಬಹುದು. ಇನ್ನು ಉನ್ನತ ಶಿಕ್ಷಣ ಪಡೆದ ಏಕೈಕ ಪುರುಷನನ್ನು ಮಾಮಡ ದೊಡ್ಡಿಯಲ್ಲಿ ಇರುವುದನ್ನು ಸಮೀಕ್ಷೆಯಿಂದ ಗುರುತಿಸಲಾಗಿದೆ. ಹಾಗೆಯೇ ರಾಯಚೂರು ತಾಲ್ಲೂಕಿನ ಇನ್ನೊಂದು ಗ್ರಾಮವಾದ ಮಾಲದೊಡ್ಡಿಯಲ್ಲಿ ಒಟ್ಟು ೬೫ ಜನರಲ್ಲಿ ೪೦ ಪುರುಷರು, ೨೫ ಮಹಿಳೆಯರಲ್ಲಿ ೩೭ ಜನ ಅನಕ್ಷರಸ್ಥರು ಇರುವುದನ್ನು ಕಾಣುತ್ತೇವೆ. ಇವರಲ್ಲಿ ೨೦ ಪುರುಷರು ೧೭ ಮಹಿಳೆಯರು ಇರುವುದನ್ನು ಕಾಣಬಹುದಾಗಿದೆ. ಇನ್ನು ಪ್ರಾಥಮಿಕ ಶಿಕ್ಷಣ ಪಡೆದ ಒಟ್ಟು ೧೮ ಜನರಲ್ಲಿ ೧೦ ಪುರುಷರು ಹಾಗೂ ೮ ಮಹಿಳೆಯರು ಇರುವುದನ್ನು ನೋಡಬಹುದು. ಹಾಗೆಯೇ ಪ್ರೌಢ ಶಿಕ್ಷಣ ಪಡೆದ ೭ ಜನರಲ್ಲಿ ೬ ಪುರುಷರು ಹಾಗೂ ಏಕೈಕ ಮಹಿಳೆ ಇರುವುದನ್ನು ಸಮೀಕ್ಷೆಯಿಂದ ಕಾಣಬಹುದಾಗಿದೆ. ಇನ್ನು ಉನ್ನತ ಶಿಕ್ಷಣ ಪಡೆದ ೪ ಪುರುಷರನ್ನು ಕಾಣಬಹುದು. ಮಾಲದೊಡ್ಡಿಯಲ್ಲಿ ಉನ್ನತ ಶಿಕ್ಷಣ ಪಡೆದ ಯಾವ ಮಹಿಳೆಯರು ಇಲ್ಲಿ ಇಲ್ಲದೆ ಇರುವುದನ್ನು ನೋಡಬಹುದಾಗಿದೆ. ಇನ್ನು ರಾಯಚೂರು ತಾಲ್ಲೂಕಿನ ಹನುಮಾನ ದೊಡ್ಡಿಯಲ್ಲಿ ೭೧ ಜನರಲ್ಲಿ ೨೨ ಅನಕ್ಷರಸ್ಥರು ಇರುವುದನ್ನು ಕಾಣಬಹುದು. ಪ್ರಾಥಮಿಕ ಶಿಕ್ಷಣ ಪಡೆದ ೨೧ ಜನರು ಹಾಗೂ ಪ್ರೌಢ ಶಿಕ್ಷಣ ಪಡೆದ ೧೨ ಜನ ಮತ್ತು ಉನ್ನತ ಶಿಕ್ಷಣ ಪಡೆದ ೧೬ ಜನರನ್ನು ಹನುಮಾನ ದೊಡ್ಡಿಯಲ್ಲಿ ಇರುವುದನ್ನು ಕಾಣಬಹುದಾಗಿದೆ.

ಒಟ್ಟಾರೆಯಾಗಿ ರಾಯಚೂರು ತಾಲ್ಲೂಕಿನ ಒಟ್ಟು ೨೩೩ ಜನರಲ್ಲಿ ೧೧೬ ಜನ ಅನಕ್ಷರಸ್ಥರು, ೭೨ ಜನ ಪ್ರಾಥಮಿಕ ಶಿಕ್ಷಣ ಪಡೆದವರು, ೨೪ ಜನ ಪ್ರೌಢಶಿಕ್ಷಣ

ಪೂರೈಸಿದವರು ಹಾಗೂ ೨೨ ಜನ ಉನ್ನತ ಶಿಕ್ಷಣ ಪಡೆದವರು ಇರುವುದನ್ನು ನಾವು ಸಮೀಕ್ಷೆ ಇಂದ ಗುರುತಿಸಲಾಗಿದೆ.

ಕೋಷ್ಟಕ ೩ ಮತ್ತು ೪ರಲ್ಲಿ ಇರುವಂತೆ ಲಿಂಗಸೂಗೂರು ತಾಲ್ಲೂಕಿನ ಗುರುಗುಂಟಾ ದೊಡ್ಡಿಯಲ್ಲಿ ಒಟ್ಟು ೭೦ ಜನರಲ್ಲಿ ೩೧ ಜನ ಅನಕ್ಷರಸ್ಥರು ೨೦ ಜನ ಪ್ರಾಥಮಿಕ ಶಿಕ್ಷಣ ಪಡೆದವರನ್ನು ಕಾಣಬಹುದಾಗಿದೆ. ಹಾಗೆಯೇ ಲಿಂಗಸೂಗೂರು ತಾಲ್ಲೂಕಿನ ಇನ್ನೊಂದು ದೊಡ್ಡಿಯಾದ ಗೌಡೂರಿನಲ್ಲಿ ಒಟ್ಟು ೧೦೮ ಜನರಲ್ಲಿ ೬೩ ಜನ ಅನಕ್ಷರಸ್ಥರು, ೩೮ ಜನ ಪ್ರಾಥಮಿಕ ಶಿಕ್ಷಣ ಪಡೆದವರು, ೫ ಜನ ಪ್ರೌಢಶಿಕ್ಷಣ ಪಡೆದವರು ಹಾಗೂ ಇಬ್ಬರು ಉನ್ನತ ಶಿಕ್ಷಣ ಪಡೆದವರನ್ನು ಗೌಡೂರು ದೊಡ್ಡಿಯಲ್ಲಿ ಗುರುತಿಸಲಾಗಿದೆ. ಇನ್ನು ಕೊನೆಯದಾಗಿ ಲಿಂಗಸೂಗೂರು ತಾಲ್ಲೂಕಿನ ಚಿಂರೆಮಚೇರಿ ದೊಡ್ಡೆಯಲ್ಲಿ ಒಟ್ಟು ೭೨ ಜನರಲ್ಲಿ ೫೦ ಜನ ಅನಕ್ಷರಸ್ಥರು, ೨೦ ಜನ ಪ್ರಾಥಮಿಕ ಶಿಕ್ಷಣ ಪಡೆದವರು, ಇಬ್ಬರು ಪ್ರೌಢ ಶಿಕ್ಷಣ ಪೂರೈಸಿದವರು ಇರುವುದನ್ನು ಕಾಣಬಹುದು. ಇಲ್ಲಿ ಉನ್ನತ ಶಿಕ್ಷಣ ಪಡೆದ ಯಾರು ಇಲ್ಲದಿರುವುದನ್ನು ಕಾಣಬಹುದಾಗಿದೆ.

ಒಟ್ಟಾರೆಯಾಗಿ ಲಿಂಗಸೂಗೂರು ತಾಲ್ಲೂಕಿನಲ್ಲಿ ೨೫೦ ಜನರಲ್ಲಿ ೧೪೪ ಜನ ಅನಕ್ಷರಸ್ಥರು ೭೮ ಜನ ಪ್ರಾಥಮಿಕ ಶಿಕ್ಷಣ ಪಡೆದವರು, ೧೪ ಜನ ಪ್ರೌಢ ಶಿಕ್ಷಣ ಮುಗಿಸಿದವರು, ಹಾಗೂ ೧೪ ಜನ ಉನ್ನತ ಶಿಕ್ಷಣ ಪಡೆದವರು ಇರುವುದನ್ನು ಲಿಂಗಸೂಗೂರು ತಾಲ್ಲೂಕಿನಲ್ಲಿ ಸಮೀಕ್ಷೆಯಿಂದ ಗುರುತಿಸಲಾಗಿದೆ.

ಕೋಷ್ಟಕ ೩ ಮತ್ತು ೪ರಲ್ಲಿ ಇರುವಂತೆ ಸಿಂಧನೂರು ತಾಲ್ಲೂಕಿನ ಉಪ್ಪಲದೊಡ್ಡಿಯಲ್ಲಿ ಇರುವ ಒಟ್ಟು ೪೮ ಜನರಲ್ಲಿ ೧೮ ಜನ ಅನಕ್ಷರಸ್ಥರು, ೨೦ ಜನ ಪ್ರಾಥಮಿಕ ಶಿಕ್ಷಣ ಪೂರೈಸಿದವರು. ೭ ಜನ ಪ್ರೌಢ ಶಿಕ್ಷಣ ಪಡೆದವರು ಹಾಗೂ ೩ ಜನ ಉನ್ನತ ಶಿಕ್ಷಣ ಪಡೆದವರು ಇರುವುದನ್ನು ಕಾಣಬಹುದು. ಹಾಗೆಯೇ ಚಿಂತಮಾನ ದೊಡ್ಡಿಯ ಒಟ್ಟು ೬೫ ಜನರಲ್ಲಿ ೩೫ ಅನಕ್ಷರಸ್ಥರು, ೧೭ ಜನ ಪ್ರಾಥಮಿಕ ಶಿಕ್ಷಣ ಪಡೆದವರು ೭ ಜನ ಪ್ರೌಢ ಶಿಕ್ಷಣ ಪಡೆದವರು ಹಾಗೂ ೬ ಜನ ಉನ್ನತ ಶಿಕ್ಷಣವನ್ನು ಮುಗಿಸಿದವರನ್ನು ಗುರುತಿಸಲಾಗಿದೆ. ಇನ್ನು ಕೊನೆಯದಾಗಿ ಸಿಂಧನೂರು ತಾಲ್ಲೂಕಿನ ಯದ್ದಲದೊಡ್ಡಿಯಲ್ಲಿರುವ ೬೩ ಜನರಲ್ಲಿ ೩೨ ಜನ ಅನಕ್ಷರಸ್ಥರು, ೨೫ ಜನ ಪ್ರಾಥಮಿಕ ಶಿಕ್ಷಣ ಪಡೆದವರು, ೪ ಜನ ಪ್ರೌಢ ಶಿಕ್ಷಣ ಪೂರೈಸಿದವರು, ಹಾಗೂ ಉನ್ನತ ಶಿಕ್ಷಣ ಪಡೆದ ಇಬ್ಬರನ್ನು ಯದ್ದಲದೊಡ್ಡಿಯಲ್ಲಿ ಗುರುತಿಸಲಾಗಿದೆ.

ಒಟ್ಟಾರೆಯಾಗಿ ಸಿಂಧನೂರು ತಾಲ್ಲೂಕಿನ ಒಟ್ಟು ೧೭೬ ಜನರಲ್ಲಿ ೮೬ ಜನ ಅನಕ್ಷರಸ್ಥರು, ೬೨ ಜನ ಪ್ರಾಥಮಿಕ ಶಿಕ್ಷಣ ಪೂರೈಸಿದವರು, ೧೮ ಜನ ಪ್ರೌಢ ಶಿಕ್ಷಣ ಮುಗಿಸಿದವರು ಹಾಗೂ ೧೧ ಜನ ಉನ್ನತ ಶಿಕ್ಷಣ ಪಡೆದವರು ಇರುವುದನ್ನು ಸಮೀಕ್ಷೆಯಿಂದ ಗುರುತಿಸಲಾಗಿದೆ.

ಕೋಷ್ಟಕ -೫ ಗ್ರಾಮವಾರು ಆರ್ಥಿಕ ಸ್ಥಿತಿಗತಿ (ಕುಟುಂಬವಾರು ವಾರ್ಷಿಕ ಆದಾಯ)

ಕ್ರ.ಸಂ.	ಗ್ರಾಮ	೦-೧೦೦೦೦ ರೂ	೧೦೦೦೧-೨೦೦೦೦ರೂ	೨೦೦೦೦ಕ್ಕಿಂತ ಹೆಚ್ಚು	ಒಟ್ಟು ಕುಟುಂಬಗಳು
೦೧	ಇರಬಗೇರಿ	೧೨	೨	೧೧	೧೫
೦೨	ಕೊತ್ತದೊಡ್ಡಿ	೨	೩	೧೦	೧೫
೦೩	ಬುಂಕಲದೊಡ್ಡಿ	೦	೨	೧೩	೧೫
೦೪	ಗೋವಿಂದದೊಡ್ಡಿ	೨	೦	೧೩	೧೫
೦೫	ತಪ್ಪಲದೊಡ್ಡಿ	೧೦	೪	೧	೧೫
೦೬	ಯರಮಲದೊಡ್ಡಿ	೧೨	೨	೧	೧೫
೦೭	ಕೊತ್ತದೊಡ್ಡಿ	೧೦	೦	೫	೧೫
೦೮	ಮಾಮಡದೊಡ್ಡಿ	೦	೦	೫	೫
೦೯	ಮಾಲದೊಡ್ಡಿ	೫	೧	೬	೧೨
೧೦	ಹನುಮಾನದೊಡ್ಡಿ	೨	೧	೧೨	೧೫
೧೧	ಗುರುಗುಂಟಾ	೦	೩	೯	೧೨
೧೨	ಗೌಡೂರು	೦	೧೦	೧೪	೧೫
೧೩	ತಿಂಕಿಮುಚೇರಿ	೧೫	೧	೦	೧೬
೧೪	ಉಪ್ಪಲದೊಡ್ಡಿ	೦	೨	೧೩	೧೫
೧೫	ಚಿಂತಮಾನದೊಡ್ಡಿ	೧	೪	೧೦	೧೫
೧೬	ಯದ್ದಲದೊಡ್ಡಿ	೧೪	೧	೦	೧೫
	ಒಟ್ಟು				

ಮೂಲ : ಪ್ರಾಥಮಿಕ ಅಂಕಿಅಂಶಗಳು

ಕೋಷ್ಟಕ -೬ ತಾಲ್ಲೂಕುವಾರು ಆರ್ಥಿಕ ಸ್ಥಿತಿಗತಿ (ಕುಟುಂಬವಾರು ವಾರ್ಷಿಕ ಆದಾಯ)

ಕ್ರ.ಸಂ.	ತಾಲ್ಲೂಕು	೦-೧೦೦೦೦ ರೂಪಾಯಿ	೧೦೦೦೧-೨೦೦೦೦ರೂ	೨೦೦೦೦ಕ್ಕಿಂತ ಹೆಚ್ಚು	ಒಟ್ಟು ಕುಟುಂಬಗಳು
೦೧	ದೇವದುರ್ಗ	೧೪	೦೭	೨೪	೪೫
೦೨	ಮಾನ್ವಿ	೨೪	೦೬	೧೫	೪೫
೦೩	ರಾಯಚೂರು	೧೭	೦೧	೨೭	೪೫
೦೪	ಲಿಂಗಸೂಗೂರು	೧೫	೦೫	೨೫	೪೫
೦೫	ಸಿಂಧೂನೂರು	೧೫	೦೭	೨೩	೪೫
	ಒಟ್ಟು	೮೫	೨೬	೧೧೪	೨೨೫

ಮೂಲ : ಪ್ರಾಥಮಿಕ ಅಂಕಿಅಂಶಗಳು

ಕೋಷ್ಟಕ ೫ ಮತ್ತು ೬ರಲ್ಲಿ ರಾಯಚೂರು ಜಿಲ್ಲೆಯ ದೊಡ್ಡಿಗಳ ಅಧ್ಯಯನದಲ್ಲಿ ಗ್ರಾಮವಾರು ಮತ್ತು ತಾಲ್ಲೂಕುವಾರು ಕುಟುಂಬಗಳ ವಾರ್ಷಿಕ ಆದಾಯದ ವಿಶ್ಲೇಷಣೆ ಮಾಡಲಾಗಿದೆ. ಅದರಂತೆ ದೇವದುರ್ಗ ತಾಲ್ಲೂಕಿನ ಇರಬಗೇರಿ ಗ್ರಾಮದ ಒಟ್ಟು ೧೫ ಕುಟುಂಬಗಳ ವಾರ್ಷಿಕ ತಲಾದಾಯ ರೂ. ೧೦,೦೦೦ಕ್ಕಿಂತ ಕಡಿಮೆ ಇರುವವರು ೧೨ ಕುಟುಂಬಗಳಿದ್ದಾರೆ. ೧೦೦೦೦ ದಿಂದ ೨೦೦೦೦ ವಾರ್ಷಿಕ ತಲಾದಾಯ ಇರುವವರು ಎರಡು ಕುಟುಂಬ ಇರಬಗೇರಿಯಲ್ಲಿರುವುದನ್ನು ಕಾಣಬಹುದು. ಹಾಗೆಯೇ ದೇವದುರ್ಗ ತಾಲ್ಲೂಕಿನ ಕೊತ್ತದೊಡ್ಡಿ ಗ್ರಾಮದ ಒಟ್ಟು ೧೫ ಕುಟುಂಬಗಳಲ್ಲಿ ೧೦ ಸಾವಿರಕ್ಕಿಂತ ಕಡಿಮೆ ಇರುವ ಎರಡು ಕುಟುಂಬಗಳಿವೆ, ೧೦ ಸಾವಿರದಿಂದ೨೦ ಸಾವಿರ ತಲಾದಾಯ ಹೊಂದಿರುವ ೧೦ ಕುಟುಂಬಗಳನ್ನು ಕಾಣುತ್ತೇವೆ. ಹಾಗೆಯೇ ದೇವದುರ್ಗ ತಾಲ್ಲೂಕಿನ ಇನ್ನೊಂದು ಗ್ರಾಮವಾದ ಬುಂಕಲದೊಡ್ಡಿಯಲ್ಲಿ ಒಟ್ಟು ೧೫ ಕುಟುಂಬಗಳಲ್ಲಿ ೧೦ ಸಾವಿರದಿಂದ ೨೦ ಸಾವಿರ ತಲಾದಾಯ ಹೊಂದಿರುವ ಎರಡು ಕುಟುಂಬಗಳು ವಾಸವಾಗಿದ್ದಾರೆ. ೨೦ ಸಾವಿರಕ್ಕಿಂತ ಹೆಚ್ಚು ತಲಾದಾಯ ಹೊಂದಿರುವ ೧೩ಕುಟುಂಬಗಳು ಬುಂಕಲದೊಡ್ಡಿಯಲ್ಲಿ ಗುರುತಿಸಲಾಗಿದೆ.

ಒಟ್ಟಾರೆಯಾಗಿ ದೇವದುರ್ಗ ತಾಲ್ಲೂಕಿನ ಕುಟುಂಬವಾರು ತಲಾ ಆದಾಯದಲ್ಲಿ ೪೫ ಕುಟುಂಬಗಳಲ್ಲಿ ೧೦ ಸಾವಿರಕ್ಕಿಂತ ಕಡಿಮೆ ತಲಾದಾಯ ಹೊಂದಿರುವ ೧೪ ಕುಟುಂಬಗಳನ್ನು ಕಾಣುತ್ತೇವೆ. ೯೦ ಸಾವಿರದಿಂದ ೨೦ ಸಾವಿರ ತಲಾದಾಯ ಹೊಂದಿರುವ ೭ ಕುಟುಂಬಗಳನ್ನು ಗುರುತಿಸಲಾಗಿದೆ. ೨೦ ಸಾವಿರಕ್ಕಿಂತ ಹೆಚ್ಚು ತಲಾದಾಯ ಹೊಂದಿರುವ ೨೪ ಕುಟುಂಬಗಳನ್ನು ನಾವು ದೇವದುರ್ಗ ತಾಲ್ಲೂಕಿನಲ್ಲಿ ಸಮೀಕ್ಷೆಗೆ ಒಳಪಡಿಸಿ ಗುರುತಿಸಲಾಗಿದೆ.

ಕೋಷ್ಟಕ ೫ ಮತ್ತು ೬ರಲ್ಲಿರುವಂತೆ ಮಾನ್ವಿ ತಾಲ್ಲೂಕಿನ ಗೋವಿಂದ ದೊಡ್ಡಿಯಲ್ಲಿರುವ ಒಟ್ಟು ೧೫ ಕುಟುಂಬಗಳಲ್ಲಿ ೧೦ ಸಾವಿರಕ್ಕಿಂತ ಕಡಿಮೆ ತಲಾದಾಯ ಹೊಂದಿರುವ ಎರಡು ಕುಟುಂಬಗಳಿವೆ. ಹಾಗೆಯೇ ೨೦ ಸಾವಿರಕ್ಕಿಂತ ಹೆಚ್ಚು ತಲಾದಾಯ ಹೊಂದಿರುವ ೧೩ ಕುಟುಂಬಗಳನ್ನು ಗುರುತಿಸಲಾಗಿದೆ. ಅದೇ ರೀತಿ ಮಾನ್ವಿ ತಾಲ್ಲೂಕಿನ ತಪ್ಪಲ ದೊಡ್ಡಿಯಲ್ಲಿರುವ ಒಟ್ಟು ೧೫ ಕುಟುಂಬಗಳಲ್ಲಿ ೧೦ ಸಾವಿರಕ್ಕಿಂತ ಕಡಿಮೆ ತಲಾದಾಯ ಹೊಂದಿರುವ ೧೦ ಕುಟುಂಬಗಳನ್ನು ಗುರುತಿಸಲಾಗಿದೆ. ೧೦ ಸಾವಿರದಿಂದ ೨೦ ಸಾವಿರ ತಲಾದಾಯ ಹೊಂದಿರುವ ೪ ಕುಟುಂಬಗಳಿವೆ. ಹಾಗೆಯೇ ೨೦ ಸಾವಿರಕ್ಕಿಂತ ಹೆಚ್ಚು ವಾರ್ಷಿಕ ಆದಾಯ ಹೊಂದಿರುವ ಒಂದು ಕುಟುಂಬವನ್ನು ತಪ್ಪಲದೊಡ್ಡಿಯಲ್ಲಿ ಗುರುತಿಸಲಾಗಿದೆ. ಮಾನ್ವಿ ತಾಲ್ಲೂಕಿನ ಇನ್ನೊಂದು ಗ್ರಾಮವಾಃವ ಯರಮಲದೊಡ್ಡಿಯಲ್ಲಿರುವ ಒಟ್ಟು ೧೫ ಕುಟುಂಬಗಳಲ್ಲಿ ಹತ್ತು ಸಾವಿರಕ್ಕಿಂತ ಕಡಿಮೆ ವಾರ್ಷಿಕದಾಯ ಹೊಂದಿರುವ

೧೨ ಕುಟುಂಬಗಳಿವೆ. ಇನ್ನು ೧೦ ಸಾವಿರದಿಂದ ೨೦ ಸಾವಿರ ತಲಾದಾಯ ಹೊಂದಿರುವ ಎರಡು ಕುಟುಂಬಗಳಿವೆ. ೨೦ ಸಾವಿರಕ್ಕಿಂತ ಹೆಚ್ಚು ತಲಾದಾಯ ಹೊಂದಿದ ಒಂದು ಕುಟುಂಬ ಯರಮಲ ದೊಡ್ಡಿಯಲ್ಲಿ ಗುರುತಿಸಲಾಗಿದೆ.

ಒಟ್ಟಾರೆಯಾಗಿ ಮಾನ್ವಿ ತಾಲ್ಲೂಕಿನ ಒಟ್ಟು ೪೫ ಕುಟುಂಬಗಳಲ್ಲಿ ೧೦ ಸಾವಿರಕ್ಕಿಂತ ಕಡಿಮೆ ತಲಾದಾಯ ಹೊಂದಿರುವ ೨೪ ಕುಟುಂಬಗಳಿವೆ. ೧೦ ಸಾವಿರದಿಂದ ೨೦ ಸಾವಿರಕ್ಕಿಂತ ಹೆಚ್ಚು ವಾರ್ಷಿಕ ಆದಾಯ ಹೊಂದಿರುವ ೧೫ ಕುಟುಂಬಗಳು ಇರುವುದನ್ನು ಮಾನ್ವಿ ತಾಲ್ಲೂಕಿನಲ್ಲಿ ಗುರುತಿಸಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಕೋಷ್ಟಕ ೫ ಮತ್ತು ೬ರಲ್ಲಿರುವಂತೆ ರಾಯಚೂರು ತಾಲ್ಲೂಕಿನ ಕೊತ್ತದೊಡ್ಡಿಯಲ್ಲಿ ಒಟ್ಟು ೧೫ ಕುಟುಂಬಗಳಲ್ಲಿ ೧೦ ಸಾವಿರಕ್ಕಿಂತ ಕಡಿಮೆ ತಲಾದಾಯ ಹೊಂದಿರುವ ೧೦ ಕುಟುಂಬಗಳಿವೆ. ೨೦ ಸಾವಿರಕ್ಕಿಂತ ಹೆಚ್ಚು ತಲಾದಾಯ ಹೊಂದಿರುವ ೫ ಕುಟುಂಬಗಳನ್ನು ಕೊತ್ತದೊಡ್ಡಿಯಲ್ಲಿ ಗುರುತಿಸಲಾಗಿದೆ. ಹಾಗೆಯೇ ಮಾಮಡದೊಡ್ಡಿಯಲ್ಲಿ ಒಟ್ಟು ೫ ಕುಟುಂಬಗಳ ಪೈಕಿ ೫ ಕುಟುಂಬಗಳು ೨೦ ಸಾವಿರಕ್ಕಿಂತ ಹೆಚ್ಚು ವಾರ್ಷಿಕ ಆದಾಯವನ್ನು ಹೊಂದಿವೆ. ಹಾಗೆಯೇ ಮಾಲದೊಡ್ಡಿಯ ಒಟ್ಟು ೧೨ ಕುಟುಂಬಗಳಲ್ಲಿ ೧೦ ಸಾವಿರಕ್ಕಿಂತ ಕಡಿಮೆ ತಲಾದಾಯ ಹೊಂದಿರುವ ೫ ಕುಟುಂಬಗಳಿವೆ. ೧೦ ಸಾವಿರದಿಂದ ೨೦ ಸಾವಿರ ತಲಾದಾಯ ಹೊದಿರು ಒಂದು ಕುಟುಂಬವಿದೆ. ಇನ್ನು ೨೦ ಸಾವಿರಕ್ಕಿಂತ ಹೆಚ್ಚು ತಲಾದಾಯ ಹೊದಿರುವ ೬ ಕುಟುಂಬಗಳನ್ನು ಮಾಲದೊಡ್ಡಿಯಲ್ಲಿ ಗುರುತಿಸಲಾಗಿದೆ. ಅದರಂತೆ ರಾಯಚೂರು ತಾಲ್ಲೂಕಿನ ಇನ್ನೊಂದು ಗ್ರಾಮವಾದ ಹಮುಮಾನದೊಡ್ಡಿಯಲ್ಲಿ ಒಟ್ಟು ೧೫ ಕುಟುಂಬಗಳಿವೆ. ಇದರಲ್ಲಿ ೯೦ ಸಾವಿರದಿಂದ ೨೦ ಸಾವಿರ ತಲಾದಾಯ ಹೊದಿರುವ ಒಂದು ಕುಟುಂಬವಿದೆ. ಅದೇರೀತಿ ೨೦ ಸಾವಿರಕ್ಕಿಂತ ಹೆಚ್ಚು ವಾಷರ್ಇಕ ವರಮಾನ ಹೊಂದಿರುವ ೧೨ ಕುಟುಂಬಗಳನ್ನು ಹನುಮಾನದೊಡ್ಡಿಯಲ್ಲಿ ಗುರುತಿಸಲಾಗಿದೆ. ಒಟ್ಟಾರೆಯಾಗಿ ರಾಯಚೂರು ತಾಲ್ಲೂಕಿನ ದೊಡ್ಡಿಗಳ ಅಧ್ಯಯನದಲ್ಲಿ ಒಟ್ಟು ೪೬ ಕುಟುಂಬಗಳ ವಾರ್ಷಿಕ ಆದಾಯವನ್ನು ಗಮನಿಸಿದಾಗ ೧೦ ಸಾವಿರಕ್ಕಿಂತ ಕಡಿಮೆ ತಲಾದಾಯ ಹೊದಿರುವ ೧೭ ಕುಟುಂಬಗಳನ್ನು ಗುರುತಿಸಲಾಗಿದೆ. ಹಾಗೆಯೇ ೧೦ ಸಾವಿರದಿಂದ ೨೦ ಸಾವಿರ ತಲಾದಾಯ ಹೊದಿರುವ ಎರಡು ಕುಟುಂಬಗಳಿವೆ. ಇನ್ನು ೨೦ ಸಾವಿರಕ್ಕಿಂತ ಹೆಚ್ಚು ತಲಾದಾಯ ಹೊಂದಿರುವ ೨೭ ಕುಟುಂಬಗಳನ್ನು ರಾಯಚೂರು ತಾಲ್ಲೂಕಿನಲ್ಲಿ ಗುರುತಿಸಲಾಗಿದೆ.

ಕೋಷ್ಟಕ ೫ ಮತ್ತು ೬ರಲ್ಲಿರುವಂತೆ ಲಿಂಗಸೂಗೂರು ತಾಲ್ಲೂಕಿನ ಗುರುಗುಂಟಾ ದೊಡ್ಡಿಯಲ್ಲಿಯ ಒಟ್ಟು೧೨ ಕುಟುಂಬಗಳಲ್ಲಿ ೧೦ ಸಾವಿರದಿಂದ ೨೦ ಸಾವಿರ ತಲಾದಾಯ ಹೊಂದಿರುವ ಮೂರು ಕುಟುಂಬಗಳಿವೆ. ೨೦ ಸಾವಿರಕ್ಕಿಂತ ಹೆಚ್ಚು ತಲಾದಾಯ ಹೊಂದಿರುವ ೯ ಕುಟುಂಬಗಳನ್ನು ಗುರುಗುಂಟಾ ದೊಡ್ಡಿಯಲ್ಲಿ ಗುರುತಿಸಲಾಗಿದೆ. ಹಾಗೆಯೇ ಗೌಡೂರು

ದೊಡ್ಡಿಯಲ್ಲಿರುವ ಒಟ್ಟು ೧೫ ಕುಟುಂಬಗಳಲ್ಲಿ ೧೦ ಸಾವಿರದಿಂದ ೨೦ ಸಾವಿರ ತಲಾದಾಯ ಹೊಂದಿರುವ ಒಂದು ಕುಟುಂಬ ಹೊಂದಿದೆ. ಅದೇರೀತಿ ೨೦ ಸಾವಿರಕ್ಕಿಂತ ಹೆಚ್ಚು ತಲಾದಾಯ ಹೊಂದಿರುವ ೧೪ ಕುಟುಂಬಗಳನ್ನು ಗೌಡೂರು ದೊಡ್ಡಿಯಲ್ಲಿ ಕಾಣಬಹುದಾಗಿದೆ. ಹಾಗೆಯೇ ಲಿಂಗಸೂಗೂರು ತಾಲ್ಲೂಕಿನ ಇನ್ನೊಂದು ಗ್ರಾಮವಾದ ತಿಂಕಮಚೇರಿ ದೊಡ್ಡಿಯಲ್ಲಿ ಒಟ್ಟು ೧೬ ಕುಟುಂಬಗಳಲ್ಲಿ ೧೫ ಕುಟುಂಬಗಳು ೧೦ ಸಾವಿರಕ್ಕಿಂತ ಕಡಿಮೆ ತಲಾದಾಯ ಹೊಂದಿವೆ. ಇನ್ನು ಒಂದು ಕುಟುಂಬ ೧೦ ಸಾವಿರದಿಂದ ೨೦ ಸಾವಿರ ತಲಾದಾಯ ಹೊದಿರುವ ವ್ಯಾಪ್ತಿಯಲ್ಲಿ ಬರುತ್ತದೆ.

ಒಟ್ಟಾರೆಯಾಗಿ ಲಿಂಗಸೂಗೂರು ತಾಲ್ಲೂಕಿನ ದೊಡ್ಡಿಗಳ ಅಧ್ಯಯನದಲ್ಲಿ ಒಟ್ಟು ೪೬ ಕುಟುಂಬಗಳ ವಾರ್ಷಿಕ ಆದಾಯದಲ್ಲಿ ೧೦ ಸಾವಿರಕ್ಕಿಂತ ಕಡಿಮೆ ತಲಾದಾಯ ಹೊಂದಿರುವ ೧೫ ಕುಟುಂಬಗಳಿವೆ. ೧೦ ಸಾವಿರದಿಂದ ೨೦ ಸಾವಿರ ತಲಾದಾಯ ಹೊಂದಿರುವ ೬ ಕುಟುಂಬಗಳಿವೆ. ಅದೇ ರೀತಿ ೨೦ ಸಾವಿರಕ್ಕಿಂತ ಹೆಚ್ಚು ತಲಾದಾಯ ಹೊಂದಿರುವ ೨೫ ಕುಟುಂಬಗಳಿರುವುದನ್ನು ಗುರುತಿಸಲಾಗಿದೆ.

ಕೋಷ್ಟಕ ೫ ಮತ್ತು ೬ರಲ್ಲಿರುವಂತೆ ಸಿಂಧನೂರು ತಾಲ್ಲೂಕಿನ ಉಪ್ಪಲದೊಡ್ಡಿಯಲ್ಲಿ ಒಟ್ಟು ೧೫ ಕುಟುಂಬಗಳಲ್ಲಿ ೧೦ ಸಾವಿರದಿಂದ ೨೦ ಸಾವಿರ ತಲಾದಾಯ ಹೊಂದಿರುವ ಎರಡು ಕುಟುಂಬಗಳಿವೆ. ಇನ್ನು ೨೦ ಸಾವಿರಕ್ಕಿಂತ ಹೆಚ್ಚು ತಲಾದಾಯ ಹೊಂದಿರುವ ೧೩ ಕುಟುಂಬಗಳನ್ನು ಉಪ್ಪಲದೊಡ್ಡಿಯಲ್ಲಿ ಗುರುತಿಸಲಾಗಿದೆ. ಸಿಂಧನೂರು ತಾಲ್ಲೂಕಿನ ಚಿಂತಮಾನ ದೊಡ್ಡಿಯಲ್ಲಿ ಒಟ್ಟು ೧೫ ಕುಟುಂಬಗಳಲ್ಲಿ ೧೦ ಸಾವಿರಕ್ಕಿಂತ ಕಡಿಮೆ ತಲಾದಾಯ ಹೊಂದಿರುವ ಒಂದು ಕುಟುಂಬವಿದೆ. ೧೦ ಸಾವಿರದಿಂದ ೨೦ ಸಾವಿರ ತಲಾದಾಯ ಹೊಂದಿರುವ ನಾಲ್ಕು ಕುಟುಂಬಗಳನ್ನು ಗುರುತಿಸಲಾಗಿದೆ. ಹಾಗೆಯೇ ೨೦ ಸಾವಿರಕ್ಕಿಂತ ಹೆಚ್ಚು ತಲಾದಾಯ ಹೊಂದಿರುವ ೧೦ ಕುಟುಂಬಗಳನ್ನು ನಾವು ಚಿಂತಮಾನದೊಡ್ಡಿಯಲ್ಲಿ ಗುರುತಿಸಲಾಗಿದೆ. ಅದೇರೀತಿ ಸಿಂಧನೂರು ತಾಲ್ಲೂಕಿನ ಯದ್ದಲದೊಡ್ಡಿಯಲ್ಲಿರುವ ಒಟ್ಟು ೧೬ ಕುಟುಂಬಗಳಲ್ಲಿ ೧೦ ಸಾವಿರಕ್ಕಿಂತ ಕಡಿಮೆ ತಲಾದಾಯ ಹೊಂದಿರುವ ೧೪ ಕುಟುಂಬಗಳಿವೆ. ೧೦ ಸಾವಿರದಿಂದ ೨೦ ಸಾವಿರ ತಲಾದಾಯ ಹೊಂದಿರುವ ಒಂದು ಕುಟುಂಬ ಯದ್ದಲದೊಡ್ಡಿಯಲ್ಲಿರುವುದನ್ನು ಕಾಣಬಹುದು.

ಒಟ್ಟಾರೆಯಾಗಿ ಸಿಂಧನೂರು ತಾಲ್ಲೂಕಿನ ದೊಡ್ಡಿಗಳ ಅಧ್ಯಯನದ ಒಟ್ಟು ೪೫ ಕುಟುಂಬಗಳಲ್ಲಿ ೧೦ ಸಾವಿರಕ್ಕಿಂತ ಕಡಿಮೆ ತಲಾದಾಯ ಹೊಂದಿರುವ ೧೫ ಕುಟುಂಬಗಳಿವೆ. ೧೦ ಸಾವಿರದಿಂದ ೨೦ ಸಾವಿರ ತಲಾದಾಯ ಹೊಂದಿರುವ ೭ ಕುಟುಂಬಗಳು ಸಿಂಧನೂರು ತಾಲ್ಲೂಕಿನ ದೊಡ್ಡಿಗಳಲ್ಲಿದ್ದಾರೆ. ೨೦ ಸಾವಿರಕ್ಕಿಂತ ಹೆಚ್ಚು ತಲಾದಾಯ ಹೊಂದಿರುವ ೨೩ ಕುಟುಂಬಗಳು ಸಿಂಧನೂರು ತಾಲ್ಲೂಕಿನ ದೊಡ್ಡಿಗಳಲ್ಲಿರುವುದನ್ನು ಗುರುತಿಸಲಾಗಿದೆ.

ಕೋಷ್ಟಕ –೭ ಗ್ರಾಮವಾರು ಕುಟುಂಬಗಳ ಮನೆಗಳ ಮಾದರಿ

ಕ್ರ.ಸಂ.	ಊರು	ಕುಟುಂಬಗಳ			ಪಕ್ಕಮನೆ			ಕಚ್ಚಮನೆ		
		ಕುರುಬ	ಕಬ್ಬಲಿಗ	ಬೇಡರು	ಕುರುಬ	ಕಬ್ಬಲಿಬ	ನಾಯಕ	ಕುರುಬ	ಕಬ್ಬಲಿಗ	ಬೇಡರು
೦೧	ಇರಬಗೇರಿ	೦	೦	೧೫	೦	೦	೬	೦	೦	೯
೦೨	ಕೊತ್ತದೊಡ್ಡಿ	೦	೧೫	೦	೦	೧೪	೦	೦	೧	೦
೦೩	ಬುಂಕಲದೊಡ್ಡಿ	೧೫	೦	೦	೧೪	೦	೦	೧	೦	೦
೦೪	ಗೋವಿಂದದೊಡ್ಡಿ	೦	೦	೧೫	೦	೦	೧೧	೦	೦	೪
೦೫	ತಪ್ಪಲದೊಡ್ಡಿ	೦	೧೫	೦	೦	೧೦	೦	೦	೫	೦
೦೬	ಯರಮಲದೊಡ್ಡಿ	೧೫	೦	೦	೧೨	೦	೦	೩	೦	೦
೦೭	ಕೊತ್ತದೊಡ್ಡಿ	೫	೦	೧೦	೧೨	೦	೧	೩	೦	೯
೦೮	ಮಾಮಡದೊಡ್ಡಿ	೫	೦	೦	೫	೦	೦	೦	೦	೦
೦೯	ಮಾಲದೊಡ್ಡಿ	೫	೦	೫	೪	೦	೧	೨	೦	೪
೧೦	ಹನುಮಾನದೊಡ್ಡಿ	೦	೧೫	೦	೦	೧೨	೦	೦	೩	೦
೧೧	ಗುರುಗುಂಟಾ	೦	೧೫	೦	೦	೧೧	೦	೦	೧	೦
೧೨	ಗೌಡೂರು	೧೫	೦	೦	೧೮	೦	೦	೦	೦	೦
೧೩	ತಿಂಕಮಚೇರಿ	೦	೦	೧೫	೦	೦	೧೬	೦	೦	೦
೧೪	ಉಪ್ಪಲದೊಡ್ಡಿ	೧೫	೦	೦	೧೦	೦	೦	೫	೦	೦
೧೫	ಚಿಂತಮಾನದೊಡ್ಡಿ	೦	೧೫	೦	೦	೧೪	೦	೦	೧	೦
೧೬	ಯದ್ದಲದೊಡ್ಡಿ	೦	೦	೧೫	೦	೦	೨	೦	೦	೧೩
	ಒಟ್ಟು	೭೫	೭೫	೭೫	೬೫	೬೧	೩೭	೧೪	೧೦	೩೯

ಮೂಲ : ಪ್ರಾಥಮಿಕ ಅಂಕಿಅಂಶಗಳು

ಕೋಷ್ಟಕ –೮ ಗ್ರಾಮವಾರು ಕುಟುಂಬಗಳ ಮನೆಗಳ ಮಾದರಿ

ಕ್ರ.ಸಂ.	ತಾಲ್ಲೂಕು	ಕುಟುಂಬಗಳು			ಪಕ್ಕಮನೆ			ಕಚ್ಚಮನೆ		
		ಕುರುಬ	ಕಬ್ಬಲಿಗ	ಬೇಡರು	ಕುರುಬ	ಕಬ್ಬಲಿಬ	ನಾಯಕ	ಕುರುಬ	ಕಬ್ಬಲಿಗ	ಬೇಡರು
೦೧	ದೇವದುರ್ಗ	೧೫	೧೫	೧೫	೧೩	೧೪	೬	೧	೧	೯
೦೨	ಮಾನ್ವಿ	೧೫	೧೫	೧೫	೧೨	೧೦	೧೦	೩	೫	೪
೦೩	ರಾಯಚೂರು	೧೫	೧೫	೧೫	೧೧	೧೨	೨	೫	೩	೧೩
೦೪	ಲಿಂಗಸೂಗೂರು	೧೫	೧೫	೧೫	೧೫	೧೧	೧೬	೦	೧	೦
೦೫	ಸಿಂಧನೂರು	೧೫	೧೫	೧೫	೧೦	೧೫	೨	೫	೦	೧೩
	ಒಟ್ಟು	೭೫	೭೫	೭೫	೭೫	೬೧	೩೭	೧೪	೧೦	೩೯

ಮೂಲ : ಪ್ರಾಥಮಿಕ ಅಂಕಿಅಂಶಗಳು

ಕೋಷ್ಟಕ ೭ ಮತ್ತು ೮ರಲ್ಲಿರುವಂತೆ ದೇವದುರ್ಗ ತಾಲ್ಲೂಕಿನ ಒಟ್ಟು ೪೫ ಕುಟುಂಬಗಳಲ್ಲಿ ಪಕ್ಕಾಮನೆಗಳನ್ನು ಹೊಂದಿರುವ ಕುರುಬ ಮತ್ತು ಕಬ್ಬಲಿಗ ಜನಾಂಗಗಳಲ್ಲಿ ಇರುವುದನ್ನು ಕಾಣಬಹುದು. ತಾಲ್ಲೂಕಿನ ದೊಡ್ಡಿಗಳಲ್ಲಿ ಬೇಡ ಸಮುದಾಯಕ್ಕೆ ಸೇರಿದ ಮನೆಗಳು ಪಕ್ಕಾಮನೆಯಲ್ಲದಿರುವುದನ್ನು ಈ ಸಮೀಕ್ಷೆಯಿಂದ ಗುರುತಿಸಲಾಗಿದೆ. ಹಾಗೆಯೇ ಮಾನ್ವಿ ತಾಲ್ಲೂಕಿನ ದೊಡ್ಡಿಗಳ ಅಧ್ಯಯನದಲ್ಲಿ ಬೇಡ ಸಮುದಾಯಕ್ಕೆ ಸೇರಿದ ಮನೆಗಳು ಪಕ್ಕಾ ಆಗಿರುವುದನ್ನು ಕಾಣಬಹುದು. ಈ ತಾಲ್ಲೂಕಿನಲ್ಲಿ ಕುರುಬ ಸಮುದಾಯಕ್ಕೆ ಸೇರಿದ ಮನೆಗಳು ಅಷ್ಟು ಉತ್ತಮ ಸ್ಥಿತಿಯಲ್ಲಿರದಿರುವುದನ್ನು ಕಾಣಬಹುದಾಗಿದೆ. ಅದೇರೀತಿ ರಾಯಚೂರು ತಾಲ್ಲೂಕಿನ ಕುಟುಂಬಗಳ ಮನೆ ಮಾದರಿಗಳನ್ನು ಗಮನಿಸಿದಾಗ ಕುರುಬ ಮತ್ತು ಕಬ್ಬಲಿಗ ಜನಾಂಗಕ್ಕೆ ಸೇರಿದ ಮನೆಗಳು ಉತ್ತಮ ಸ್ಥಿತಿಯಲ್ಲಿರುವುದನ್ನು ಕಾಣುತ್ತೇವೆ. ಹಾಗೆಯೇ ಲಿಂಗಸೂಗೂರು ತಾಲ್ಲೂಕಿನ ದೊಡ್ಡಿಗಳಲ್ಲಿ ಇರುವ ಕುಟುಂಬಗಳ ಮನೆಗಳ ಮಾದರಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಉತ್ತಮ ಮನೆಗಳನ್ನು ಎಲ್ಲರು ಹೊಂದಿರುವುದನ್ನು ಕಾಣಬಹುದು. ಸಿಂಧನೂರು ತಾಲ್ಲೂಕಿನ ದೊಡ್ಡಿಗಳ ಮನೆಗಳನ್ನು ಗಮನಿಸಿದಾಗ ಕುರುಬ ಹಾಗೂ ಕಬ್ಬಲಿಗ ಸಮುದಾಯಕ್ಕೆ ಸೇರಿದ ಮನೆಗಳು ಉತ್ತಮ ಸ್ಥಿತಿಯಲ್ಲಿರುವುದನ್ನು ಗಮನಿಸಬಹುದಾಗಿದೆ. ಒಟ್ಟಾರೆಯಾಗಿ ಹೆಚ್ಚಿನ ಸಂಖ್ಯೆಯಲ್ಲಿ ಕುರುಬ ಮತ್ತು ಕಬ್ಬಲಿಗ ಜನಾಂಗಕ್ಕೆ ಸೇರಿದ ಮನೆಗಳು ರಾಯಚೂರು ಜಿಲ್ಲೆಯ ದೊಡ್ಡಿಗಳಲ್ಲಿ ಉತ್ತಮ ಸ್ಥಿತಿಯಲ್ಲಿರುವುದನ್ನು ಗುರುತಿಸಬಹುದಾಗಿದೆ.

ಕೋಷ್ಟಕ –೯ ಗ್ರಾಮವಾರು ಕೃಷಿ ಹಾಗೂ ಕೃಷಿಯೇತರ ವಿವರಣೆ

(ಕುಟುಂಬವಾರು ವಿಂಗಡಣೆ)

ಕ್ರ.ಸಂ.	ಗ್ರಾಮ	ಕೃಷಿ	ಕೃಷಿಕೂಲಿ	ಕೃಷಿಯೇತರ	ಒಟ್ಟು
೦೧	ಇರಬಗೇರಿ	೧೨	೦೨	೧	೦
೦೨	ಕೊತ್ತದೊಡ್ಡಿ	೧೩	೦	೧	೧
೦೩	ಬುಂಕಲದೊಡ್ಡಿ	೧೩	೦	೦	೦
೦೪	ಗೋವಿಂದದೊಡ್ಡಿ	೧೨	೦	೩	೦
೦೫	ತಪ್ಪಲದೊಡ್ಡಿ	೧೨	೦	೩	೦
೦೬	ಯರಮಲದೊಡ್ಡಿ	೧೪	೦	೦	೧
೦೭	ಕೊತ್ತದೊಡ್ಡಿ	೫	೧೦	೦	೦
೦೮	ಮಾಮಡದೊಡ್ಡಿ	೪	೧	೦	೦
೦೯	ಮಾಲದೊಡ್ಡಿ	೬	೪	೧	೦
೧೦	ಹನುಮಾನದೊಡ್ಡಿ	೧೨	೦	೨	೧
೧೧	ಗುರುಗುಂಟಾ	೧೦	೦	೦	೨
೧೨	ಗೌಡೂರು	೧೫	೦	೩	೦
೧೩	ತಿಂಕಿಮಚೇರಿ	೮	೦	೮	೦
೧೪	ಉಪ್ಪಲದೊಡ್ಡಿ	೧೫	೦	೦	೦
೧೫	ಚಿಂತಮಾನದೊಡ್ಡಿ	೧೨	೦	೩	೦
೧೬	ಯದ್ದಲದೊಡ್ಡಿ	೧೨	೨	೧	೦
	ಒಟ್ಟು	೧೭೫	೧೯	೨೬	೦೫

ಮೂಲ : ಪ್ರಾಥಮಿಕ ಅಂಕಿಅಂಶಗಳು

ಕೋಷ್ಟಕ –೧೦ ತಾಲ್ಲೂಕುವಾರು ಕೃಷಿ ಹಾಗೂ ಕೃಷಿಯೇತರ ವಿವರಣೆ

(ಕುಟುಂಬವಾರು ವಿಂಗಡಣೆ)

ಕ್ರ.ಸಂ.	ತಾಲ್ಲೂಕು	ಕೃಷಿ	ಕೃಷಿಕೂಲಿ	ಕೃಷಿಯೇತರ	ಒಟ್ಟು
೦೧	ದೇವದುರ್ಗ	೩೮	೦೨	೦೨	೦೧
೦೨	ಮಾನ್ವಿ	೩೮	೦೦	೦೬	೦೧
೦೩	ರಾಯಚೂರು	೨೭	೧೫	೦೩	೦೧
೦೪	ಲಿಂಗಸೂಗೂರು	೩೩	೦೦	೧೧	೦೨
೦೫	ಸಿಂಧನೂರು	೩೯	೦೨	೦೪	೦೦
	ಒಟ್ಟು	೧೭೫	೧೯	೨೬	೦೫

ಮೂಲ : ಪ್ರಾಥಮಿಕ ಅಂಕಿಅಂಶಗಳು

ಕೋಷ್ಟಕ ೯ ಮತ್ತು ೧೦ರಲ್ಲಿರುವಂತೆ ದೇವದುರ್ಗ ತಾಲ್ಲೂಕಿನ ದೊಡ್ಡಿಗಳನ್ನು ಸಮೀಕ್ಷೆ ನಡೆಸಿದಾಗ ಕೃಷಿಯನ್ನು ಮಾಡುವ ಕುಟುಂಬಗಳು ಹೆಚ್ಚಾಗಿರುವುದನ್ನು ಗುರುತಿಸಬಹುದು. ಹಾಗೆಯೇ ಮಾನ್ವಿ ತಾಲ್ಲೂಕಿನ ದೊಡ್ಡಿಗಳಲ್ಲಿ ಇರುವ ಕುಟುಂಬಗಳು ಸಹ ಕೃಷಿಯನ್ನು ಅವಲಂಬಿಸಿರುವ ಕುಟುಂಬಗಳಾಗಿವೆ. ಬೆರಳೆಣಿಕೆಯಷ್ಟು ಕುಟುಂಬಗಳು ಮಾತ್ರ ಕೃಷಿಯೇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವುದನ್ನು ಗುರುತಿಸಲಾಗಿದೆ. ರಾಯಚೂರು ತಾಲ್ಲೂಕಿನ ದೊಡ್ಡಿಗಳಲ್ಲಿ ಕೃಷಿ ಹಾಗೂ ಕೃಷಿ ಕೂಲಿಯನ್ನು ಅವಲಂಬಿಸಿರುವ ಕುಟುಂಬಗಳು ಹೆಚ್ಚಿನ ಸಂಖ್ಯೆಯಲ್ಲಿರುವುದನ್ನು ಸಮೀಕ್ಷೆಯಿಂದ ಗುರುತಿಸಲಾಗಿದೆ. ಲಿಂಗಸೂಗೂರು ತಾಲ್ಲೂಕಿನ ದೊಡ್ಡಿಗಳಲ್ಲಿ ಹೆಚ್ಚಾಗಿ ಕೃಷಿಯನ್ನು ಅವಲಂಬಿಸಿರುವ ಕುಟುಂಬಗಳಿವೆ. ಕೆಲವು ಕುಟುಂಬಗಳು ಕೃಷಿಯೇತರ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವುದನ್ನು ಕಾಣಬಹುದು. ಅದೇರೀತಿಯಾಗಿ ಸಿಂಧನೂರು ತಾಲ್ಲೂಕಿನ ದೊಡ್ಡಿಗಳಲ್ಲಿ ನೆಲೆಸಿರುವ ಕುಟುಂಬಗಳು ಸಹ ಕೃಷಿಯಲ್ಲಿ ತೊಡಗಿಕೊಂಡಿರುವುದನ್ನು ಕಾಣುತ್ತೇವೆ. ಒಟ್ಟಾರೆಯಾಗಿ ರಾಯಚೂರು ಜಿಲ್ಲೆಯಲ್ಲಿ ಅಧ್ಯಯನ ನಡೆಸಿದ ದೊಡ್ಡಿಗಳಲ್ಲಿನ ಕುಟುಂಬಗಳು ಕೃಷಿಯಲ್ಲಿ ಹೆಚ್ಚಾಗಿ ತೊಡಗಿಕೊಡಿರುವುದನ್ನು ಕಾಣಬಹುದಾಗಿದೆ.

ಅಡಿಟಿಪ್ಪಣಿಗಳು

೧. ಎಚ್.ವಿ. ನಾಗೇಶ್, ೧೯೮೬, ಭಾರತೀಯ ಗ್ರಾಮ, ಪು.ಸಂ. ೩೬

೨. ಅದೇ, ಪು.ಸಂ. ೪೭

೩. ಅದೇ, ಪು.ಸಂ. ೬೧

೪. ಅದೇ, ಪು.ಸಂ. ೪೯

೫. ಗುರುಲಿಂಗಯ್ಯ ಎಂ, ೨೦೦೮, ಕಾಡುಗೊಲ್ಲ, ಪು.ಸಂ. ೯೮

೬. ಗುರುಲಿಂಗಯ್ಯ ಎಂ, ೨೦೦೫, ಕರ್ನಾಟಕದಲ್ಲಿ ಗೋಲ್ಲಸಮುದಾಯ, ಪು.ಸಂ.೩೯

೭. ಅದೇ, ಪು.ಸಂ. ೪೬

ಅಧ್ಯಾಯ ಆರು

ದೊಡ್ಡಿಗಳ ಸಮಸ್ಯೆಗಳು

೬.೧. ಸಾಮಾಜಿಕ ಸಮಸ್ಯೆಗಳು

೬.೨. ಆರ್ಥಿಕ ಸಮಸ್ಯೆಗಳು

೬.೩. ಶೈಕ್ಷಣಿಕ ಸಮಸ್ಯೆಗಳು

೬.೪. ರಾಜಕೀಯ ಸಮಸ್ಯೆಗಳು

೬.೫. ಸಾರಿಗೆ ಸಮಸ್ಯೆ

ಅಧ್ಯಾಯ ಆರು

ದೊಡ್ಡಿಗಳ ಸಮಸ್ಯೆಗಳು

ದೊಡ್ಡಿಗಳಲ್ಲಿ ವಾಸಿಸುವ ಬೇಡ, ಕುರುಬ, ಕಬ್ಬಲಿಗ ಸಮುದಾಯಗಳ ಸಾಮಾಜಿಕ ಸಮಸ್ಯೆಗಳ ಅಧ್ಯಯನ ಪ್ರಮುಖ ಉದ್ದೇಶವಾಗಿದ್ದರಿಂದ ಸಮಸ್ಯೆ ಪದದ ಅರ್ಥದ ಬಗ್ಗೆ ಸ್ಪಷ್ಟ ಕಲ್ಪನೆ ಅವಶ್ಯಕ. ಜೀವನದ ಪ್ರತಿಯೊಂದು ಹಂತದಲ್ಲಿಯೂ ನಾವು ಸಮಸ್ಯೆಗಳನ್ನು ಎದುರಿಸುತ್ತೇವೆ. ನಾವು ಎದುರಿಸುವಂತಹ ಸಮಸ್ಯೆಗಳು ಸ್ಥಳದಿಂದ ಸ್ಥಳಕ್ಕೆ ಭಿನ್ನವೆನಿಸುತ್ತವೆ ಸಾಮಾನ್ಯವಾದ ಸಮಸ್ಯೆ, ಸಾಮಾಜಿಕ ಸಮಸ್ಯೆಯಾಗಿ ಪರಿವರ್ತನೆಯಾಗಬಹುದು. ಸಮಾಜಶಾಸ್ತ್ರಜ್ಞ 'ಗಿಲಿನ್' ಅವರು ಸಾಮಾಜಿಕ ಸಮಸ್ಯೆಗಳು ಎಂಬ ತಮ್ಮ ಹೊತ್ತಿಗೆಯಲ್ಲಿ ಸಮುದಾಯಗಳಲ್ಲಿ ತಲೆದೂರಿರುವ ವಾದಗ್ರಸ್ತವಾದ ಪ್ರಮುಖ ಸಮಸ್ಯೆಗೆ ಸಾಮಾಜಿಕ ಸಮಸ್ಯೆ ಎಂದು ವ್ಯಾಖ್ಯಾನಿಸಿದ್ದಾರೆ. ದೊಡ್ಡಿಯಲ್ಲಿ ವಾಸಿಸುವ ಸಮುದಾಯಗಳ ಏಳಿಗೆಯ ದೃಷ್ಟಿಯಿಂದ ಇಂತಹ ವಾದಗ್ರಸ್ತ ಸಮಸ್ಯೆಗಳ ನಿವಾರಣೆಯು ಅತ್ಯಂತ ಮಹತ್ವದ್ದಾಗಿದೆ. ಕೆಲವು ಸಮಸ್ಯೆಗಳು ಮಾತ್ರ ಸಾಮಾಜಿಕ ಸ್ವರೂಪವನ್ನು ಪಡೆಯುತ್ತವೆ.

ಸಾಮಾಜಿಕ ಸಮಸ್ಯೆಗಳು ಸಮುದಾಯಗಳ ಅನಾರೋಗ್ಯಕರ ಪರಿಸ್ಥಿತಿ ಸೂಚಿಸುತ್ತವೆ. ಈ ಸಾಮಾಜಿಕ ಸಮಸ್ಯೆಗಳ ಸಂಖ್ಯೆ ಮತ್ತು ತೀವ್ರತೆ ದೊಡ್ಡಿಗಳಲ್ಲಿ ನೆಲೆಸಿರುವ ಸಮುದಾಯಗಳಲ್ಲಿ ಭಿನ್ನವಾಗಿರಬಹುದು. ದೊಡ್ಡಿಗಳಲ್ಲಿ ವಾಸಿಸುವ ಜನರ ಅಭಿವೃದ್ಧಿ ದೃಷ್ಟಿಯಿಂದ ಈ ಸಾಮಾಜಿಕ ಸಮಸ್ಯೆಗಳ ನಿವಾರಣೆ ಅತ್ಯಂತ ಅವಶ್ಯ. ಲಾಭದಾಯಕವಲ್ಲದ ಕೃಷಿ ಪ್ರಧಾನ ಆರ್ಥಿಕ ವ್ಯವಸ್ಥೆ ಹಲವು ನಂಬಿಕೆ ಮತ್ತು ಪದ್ಧತಿಗಳು ಅನೇಕ ರೀತಿಯ ಸಮಸ್ಯೆಗಳಿಗೆ ಅನುವು ಮಾಡಿಕೊಟ್ಟಿವೆ. ಸೌಲಭ್ಯವಿಲ್ಲದ ನೆಲೆಗಳು, ಲಾಭದಾಯಕವಲ್ಲದ ಕೃಷಿ ಕಸುಬು, ಸಾಲದ ಹೊರೆ, ನಿರುದ್ಯೋಗ ಸಮಸ್ಯೆ, ನಿರಂತರವಾಗಿ ನಾಗರಾಭಿಮುಖವಾಗಿ ವಲಸೆ(ಗುಳೆ), ಮಹಿಳೆಯರಿಗೆ ಶಿಕ್ಷಣದ ಕೊರತೆ ಇತ್ಯಾದಿ. ಇದರಿಂದ ಹಳ್ಳಿ ಬದುಕಿಗಿಂತ ದೊಡ್ಡಿಯಲ್ಲಿ ವಾಸಿಸುವ ಬದುಕು ಅತ್ಯಂತ ಕೆಳಮಟ್ಟದಾಗಿದೆ.

ರಾಯಚೂರು ಜಿಲ್ಲೆಯ ದೊಡ್ಡಿಗಳು ಬಹು ದಿನಗಳಿಂದಲೂ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಶೈಕ್ಷಣಿಕ ನ್ಯೂನ್ಯತೆಗಳನ್ನು ಅನುಭವಿಸುತ್ತಾ ಬಂದಿವೆ. ಅನಾದಿ

ಕಾಲದಿಂದಲೂ ಹಳ್ಳಿಗಳನ್ನು ಬಿಟ್ಟು ದೊಡ್ಡಿಗಳಲ್ಲಿ ಉಳಿದುಕೊಡಿದ್ದಾರೆ. ಹಳ್ಳಿಯ ಜನರು ತಮ್ಮ ಮೌಲ್ಯಗಳಿಂದ ದೊಡ್ಡಿಯಲ್ಲಿರುವ ಜನರ ಬದುಕನ್ನು ಅಳೆದು ತೀರ್ಮಾನಕ್ಕೆ ಬರುವ ಕ್ರಮ ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಇದರಿಂದ ಗ್ರಾಮೀಣ ಪ್ರದೇಶ ಹಳ್ಳಿಗಳ ಗುಮಮಟ್ಟಕ್ಕೆ ಅನುಸಾರವಾಗಿ ಯೋಜನೆಗಳನ್ನು ಜಾರಿಗೆ ತರಲಾಗುತ್ತಿದೆ. ಇವುಗಳಿಂದ ಹಳ್ಳಿಗಳನ್ನು ಬಿಟ್ಟು ಪ್ರತ್ಯೇಕವಾಗಿರುವವರಿಗೆ ಇದರ ಪ್ರಯೋಜನೆ ತೀರ ಅಲ್ಪಮಟ್ಟದಾಗಿದೆ. ಇಂತಹ ಪರಿಸ್ಥಿತಿಯಿಂದ ಇನ್ನಷ್ಟು ನಿಕೃಷ್ಟವಾದ ಜೀವನ ಮಟ್ಟಕ್ಕೆ ಇಳಿಮುಖವಾಗಲೂ ಕಾರಣವಾಗಿದೆ. ದೊಡ್ಡಿಗಳಲ್ಲಿ ನೆಲೆಸಿರುವ ಸಮುದಾಯದವರಿಗೆ ಹಿಂದಿನ ಕಾಲದ ರೀತಿಯಲ್ಲಿ ಅರಣ್ಯ, ಹೊಲಗಳು ಅವರ ಮೂಲಭೂತ ಅವಶ್ಯಕತೆಗಳನ್ನು ಪೂರೈಸುತ್ತಿಲ್ಲವಾದ್ದರಿಂದ ತಮ್ಮ ಮೂಲಭೂತ ಅವಶ್ಯಕತೆಗಳ ಪೂರೈಕೆಗೆ ಅವರು ಹೊರಗಿನ ಲೋಕದೊಂದಿಗೆ ಸಂಪರ್ಕ ಹೊಂದುವುದು ಅನಿವಾರ್ಯವಾಗಿದೆ. ಹೀಗೆ ಹಳ್ಳಿಗಳ ಸಂಪರ್ಕದಿಂದ ದೊಡ್ಡಿಗಳಲ್ಲಿ ಸಮುದಾಯಗಳ ಬದುಕಿನ ಕ್ರಮವನ್ನೇ ಬದಲಾಯಿಸುತ್ತದೆ. ಈ ಬದಲಾವಣೆಗಳು ಆಗುವುದು ಅನಿವಾರ್ಯ. ಇಂತಹ ಬೆಳವಣಿಗೆಯಿಂದ ಅಡವಿಯಲ್ಲಿ ಪ್ರತ್ಯೇಕವಾಗಿ ಬದುಕಿಗೆ ಸ್ವಲ್ಪ ಮಟ್ಟಿಗಾದರೂ ಅನುಕೂಲವಾಗುತ್ತವೆ. ಆದರೆ ದೊಡ್ಡಿಗಳ ನಿವಾಸಿಗಳಿಗೆ ಶಿಕ್ಷಣದ ಕೊರತೆಯಿಂದ ತಮಗೆ ಇರುವ ಸೌಲಭ್ಯಗಳನ್ನು ಪಡೆದುಕೊಳ್ಳುವಲ್ಲಿ ದೊಡ್ಡ ತೊಡಕಾಗಿವೆ. ಇಲ್ಲಿನ ವೈರುಧ್ಯ ಎಂದರೆ ದೊಡ್ಡಿಗಳಲ್ಲಿ ಸಮುದಾಯಗಳು ಮುಖ್ಯವಾಹಿನಿಗೆ ಬರಬೇಕಾದರೆ ಆರ್ಥಿಕ ಚೈತನ್ಯ ನೀಡುವುದು ಅವಶ್ಯಕ. ದೊಡ್ಡಿಯು ಅವರ ಮೂಲ ನೆಲೆ ಇಂದು ಆರ್ಥಿಕವಾಗಿ ಹಿಂದುಳಿಯಲು ಕಾರಣವಾಗಿದೆ. ತಮ್ಮ ಮೂಲ ನೆಲೆ ಉಳಿಸಿಕೊಳ್ಳುವ ಪ್ರಯತ್ನದಿಂದ ಆರ್ಥಿಕವಾಗಿ ತೀರ ಸಂಕಷ್ಟವನ್ನು ಎದುರಿಸುತ್ತಿದ್ದಾರೆ.

ರಾಯಚೂರು ಜಿಲ್ಲೆಯ ದೊಡ್ಡಿಗಳ ಸಮಸ್ಯೆ ಒಂದೇ ತೆರನಾಗಿಲ್ಲ. ಹಲವು ದೊಡ್ಡಿಗಳು ಗುರುತಿಸಲ್ಪಡದೇ ಅಭಿವೃದ್ಧಿಯ ವಾಹಿನಿಯಿಂದ ದೂರ ಉಳಿದಿದೆ ಮತ್ತು ಗಂಭೀರ ಸ್ವರೂಪದ ಸಮಸ್ಯೆಗಳನ್ನು ಎದುರಿಸುತ್ತಿವೆ. ಕೆಲವು ದೊಡ್ಡಿಗಳಲ್ಲಿ ಇರುವವರು ಶಿಕ್ಷಣದ ಸದುಪಯೋಗ ಪಡಿಸಿಕೊಂಡರೆ ಬಹುತೇಕ ದೊಡ್ಡಿಗಳಲ್ಲಿ ವಾಸಿಸುವವರು ಶಿಕ್ಷಣಕ್ಕೂ ತಮಗೂ ಯಾವುದೇ ರೀತಿಯ ಸಂಬಂಧವಿಲ್ಲ ಎನ್ನುವಂತೆ ಕಷ್ಟಗಳ ಕಡಲಲ್ಲಿ ಕಾಲಕಳೆಯುತ್ತಿದ್ದಾರೆ.

ದೇವದುರ್ಗಾ ತಾಲೂಕಿನ ದೊಡ್ಡಿಗಳು ಗುಡ್ಡಗಾಡುಗಳಿಗೆ ಸಮೀಪ ಇಲ್ಲವೇ ಗುಡ್ಡಗಾಡುಗಳೇ ದೊಡ್ಡಿಗಳಾಗಿವೆ. ಇಲ್ಲಿ ವಾಸಿಸುವ ಸಮುದಾಯ ಬಹುತೇಕ ಹೆಚ್ಚಿನ ಸಂಖ್ಯೆಯಲ್ಲಿ ಬೇಡರು ಕಂಡುಬರುತ್ತಾರೆ. ಮೂಲಭೂತ ಸವಲತ್ತುಗಳಿಲ್ಲದೇ ತುಂಬಾ ಶೋಚನೀಯ ಸ್ಥಿತಿಯಲ್ಲಿವೆ ಎಂಬುದು ಅವರ ನೆಲೆಗಳನ್ನು ನೋಡಿದರೆ ಗೊತ್ತಾಗುತ್ತದೆ. ಹೇಳಿ ಕೇಳಿ ದೇವದುರ್ಗಾ ತಾಲೂಕು ಏಷ್ಯಾದಲ್ಲಿ ಅತ್ಯಂತ ಹಿಂದುಳಿದ ತಾಲೂಕು ಎನ್ನುವ ಅಪಕೀರ್ತಿಯನ್ನು ಪಡೆದಿದೆ ಕಾರಣ ಇಂತಹ ದೊಡ್ಡಿಗಳಿಂದಲೇ ಈ ಹೆಸರು ಬಂದಿರಬಹುದು. ಇಂತಹ ದೊಡ್ಡಿಗಳಲ್ಲಿ ವಾಸಿಸುವ ಸಮುದಾಯದವರು ತಮ್ಮಷ್ಟಕ್ಕೆ

ತಾವು ಪ್ರತ್ಯೇಕವಾಗಿದ್ದರೂ ಸಹ ಸರ್ಕಾರದ ಕಾರ್ಯಕ್ರಮಗಳಲ್ಲಿ ಇವರ ಪಾಲ್ಗೊಳ್ಳುವಿಕೆ ಇದೆ. ಇನ್ನು ಅನೇಕ ದೊಡ್ಡಿಗಳ ಸ್ಥಳಗಳಲ್ಲಿ ಅಂದರೆ ಕಂದಾಯ ಗ್ರಾಮವೆಂದು ಸರ್ಕಾರದಿಂದ ಘೋಷಿಸದೇ ಇರುವಂತಹ ನೆಲೆಗಳ ಪ್ರದೇಶ ಮತ್ತು ಕಂದಾಯ ನೆಲೆಗಳಿಲ್ಲದಿರುವಂತಹ ದೊಡ್ಡಿಯ ನೆಲೆಗಳಿಗೆ ಹಲವು ಮೂಲ ಸೌಕರ್ಯಗಳಿಲ್ಲದೇ ಅವರ ದಿನನಿತ್ಯದ ಜೀವನ ನಿರ್ವಹಣೆಗೆ ತುಂಬಾ ಸಂಕಷ್ಟವಾಗಿರುವುದು ಕಂಡುಬರುತ್ತದೆ. ದೊಡ್ಡಿಯ ಜನರು ನಾಗರೀಕ ಸಮಾಜದಿಂದ ದೂರವಿದ್ದುದರಿಂದ ಯಾವುದೇ ಸೌಲಭ್ಯ ಕೊಡದೇ ಇರುವುದರಿಂದ ಆರ್ಥಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದಿದ್ದರಿಂದ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ದೊಡ್ಡಿಗಳಲ್ಲಿ ಇರುವ ಜನರು ಎದುರಿಸುವ ಪ್ರಮುಖ ಸಮಸ್ಯೆಗಳೆಂದರೆ, ಅಲ್ಪ ಸ್ವಲ್ಪ ಭೂಮಿ, ಬಡತನ, ಅನಕ್ಷರತೆ, ಆರೋಗ್ಯದ ಕೊರತೆ, ನಿರುದ್ಯೋಗ, ವಸತಿ, ಸಂಪರ್ಕ ಕೊರತೆ, ಬರಗಾಲ, ಉದ್ಯೋಗದ ಕೊರತೆ ಇತ್ಯಾದಿ ಸಮಸ್ಯೆಗಳು.

ಇಲ್ಲಿ ಪ್ರಮುಖ ಸಮಸ್ಯೆ ಎಂದರೆ ಶೈಕ್ಷಣಿಕ ಅವಕಾಶಗಳ ಕೊರತೆಯೇ ಆಗಿದೆ ಎನ್ನಬಹುದು. ಏಕೆಂದರೆ ಶಿಕ್ಷಣವಿಲ್ಲದ ಇವರಿಗೆ ಕೃಷಿ, ಕೂಲಿಯ ಹೊರತು ಹೆಚ್ಚಿನ ಆದಾಯ ನೀಡುವಂತಹ ಉದ್ಯೋಗ ದೊರಕುವುದು ಅಸಾಧ್ಯ. ಹೆಚ್ಚಿನ ಆದಾಯವಿಲ್ಲದೇ ಬಂಡವಾಳಕ್ಕೆ ಹಣ ಕೂಡಿಸುವದಕ್ಕಾಗಲಿ ಅಥವಾ ಹಣ ಹೂಡುವುದಾಗಲಿ ಅಸಾಧ್ಯವಾದ ಸ್ಥಿತಿಯಾಗಿದೆ. ಇನ್ನು ಈ ಸಮುದಾಯದವರು ರಾಜಕೀಯ ಅಧಿಕಾರದಲ್ಲಿ ಈ ನೆಲೆಯಲ್ಲಿ ವಾಸಿಸುವವರಿಗೆ ಚುನಾವಣೆ ಬಂದಾಗ ಸಿಗುತ್ತಾರೆ. ನಂತರ ಅವರು ಬೇಟಿಯಾಗ ಬೇಕಾದರೆ ತುಂಬಾ ಕಷ್ಟ. ಇವರು ಅವರ ಮನೆಗೆ ಹೋದಾಗ ಬೆಂಗಳೂರಿಗೆ ಹೋಗಿದ್ದಾರೆ. ಎಂದು ಹೇಳುತ್ತಾರೆ. ಒಂದು ವೇಳೆ ಸಿಕ್ಕರೂ ಜನಪ್ರತಿನಿಧಿ ಬೆಂಬಲಿಗರು ಅವರಿಗೆ ಸಿಗುವ ಅವಕಾಶ ಕಸಿದುಕೊಳ್ಳುತ್ತಾರೆ. ಇಲ್ಲವೇ ದುಡ್ಡು ತೆಗೆದುಕೊಂಡು ಸೌಲಭ್ಯಕೊಡುತ್ತಾರೆ. ಇನ್ನು ಸ್ಥಳೀಯ ಸಂಸ್ಥೆಗಳಲ್ಲಿ ಸೌಲಭ್ಯಗಳನ್ನು ಪಡೆಯಬಹುದಾಗಿತ್ತು. ಪ್ರತಿ ತಾಲೂಕುಗಳಲ್ಲಿ ಚಿಕ್ಕ ಪುಟ್ಟ ಪಂಚಾಯಿತಿ ಮಟ್ಟದ ೧ರಿಂದ ೨ ಸ್ಥಾನಗಳು ಸದಸ್ಯರಾಗಿದ್ದಾರೆ. ಯಾವುದೇ ತಮ್ಮ ಸ್ಥಳಗಳಿಗೆ ಮೂಲಭೂತ ಸೌಲಭ್ಯ ಬೇಕಾದರೆ ಗ್ರಾಮ ಸಭೆ ಪಂಚಾಯತಿ ಸಭೆಯಲ್ಲಿ ಒಪ್ಪಿಗೆ ಸಿಗಬೇಕಾದರೆ ಬಹುಮತ ಬೇಕು ಸದಸ್ಯರ ಬೆಂಬಲ ಬೇಕು ಇಲ್ಲವೆಂದರೆ ಪಂಚಾಯತಿ ಸದಸ್ಯರಾದರೂ ಪ್ರಯೋಜನವಿಲ್ಲ.

ಒಟ್ಟಿನಲ್ಲಿ ಹೆಳುವುದಾದರೆ ಸಾಮಾಜಿಕ ಸಮಸ್ಯೆಗಳು ಆರ್ಥಿಕ ಸಮಸ್ಯೆಗಳು, ಶೈಕ್ಷಣಿಕ ಸಮಸ್ಯೆಗಳು ಮತ್ತು ರಾಜಕೀಯ ಸಮಸ್ಯೆಗಳು ಪ್ರಮುಖವಾದವುಗಳು ಇತರೆ ಸಮಸ್ಯೆಗಳೆಂದರೆ ಭೂಮಿ ಕೊರತೆ, ವಸತಿ ಸಮಸ್ಯೆಗಳು ಆರೋಗ್ಯ ನೈರ್ಮಲ್ಯದ ಸಮಸ್ಯೆ ನೈಸರ್ಗಿಕ ಸಮಸ್ಯೆ, ಮೂಢನಂಬಿಕೆ, ಸಮಸ್ಯೆಗಳು, ಬಡತನದ ಸಮಸ್ಯೆ ಪ್ರತ್ಯೇಕತೆಯ ಸಮಸ್ಯೆ ಮತ್ತು ಸರ್ಕಾರಿ ಸೌಲಭ್ಯಗಳಿಂದ ವಂಚಿತರಾಗಿರುವುದು ಪ್ರಸ್ತುತ ಅಧ್ಯಯನದಲ್ಲಿ ಈ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವ ಪ್ರಯತ್ನ ಮಾಡಲಾಗಿದೆ.

೬.೧. ಸಾಮಾಜಿಕ ಸಮಸ್ಯೆಗಳು

ಹಳ್ಳಿಗಳನ್ನು ಬಿಟ್ಟು ನಾಗರೀಕ ಸಮಾಜದಿಂದ ಎರಡು-ಮೂರು ಮೈಲು ದೂರವಿರುವಂಥ ತಮ್ಮ ಹೊಲಗದ್ದೆ ಅಥವಾ ಗುಡ್ಡಗಳ ಸಾಲಿನಲ್ಲಿ ಅಡವಿಗಳ ಮಧ್ಯೆ ವಸತಿಗಳನ್ನು ನಿರ್ಮಿಸಿಕೊಂಡು ಸಮುದಾಯಗಳು ದೊಡ್ಡಿಗಳಲ್ಲಿ ಪ್ರತ್ಯೇಕವಾಗಿ ಜೀವಿಸುತ್ತಾರೆ. ಹಳ್ಳಿಗಳ ಜನರ ಜೊತೆ ಸಂಪರ್ಕ ಬಹಳ ಕಡಿಮೆ. ಇವರ ಬಗ್ಗೆ ಚಿಂತಿಸುವವರಿಗೆ ಇದು ಗಂಭೀರ ಸಮಸ್ಯೆಯೆನಿಸಿದರೂ ಕೂಡ ಸ್ವತಃ ತಾವು ಆಯಿತು ತಮ್ಮ ಹೊಲ ಮನೆ ಬೇಸಾಯ ಮತ್ತು ಸಂಸಾರ ಆಯಿತು. ಆದರೆ ಅವರಿಗೆ ವೇಗವಾಗಿ ಬೆಳೆಯುತ್ತಿರುವ ಜಗತ್ತಿನ ಬಗ್ಗೆ ಅಷ್ಟೊಂದು ಚಿಂತೆ ಇಲ್ಲದಿರುವುದು ಒಂದು ವಿಷಾಧನೀಯ ಸಂಗತಿಯಾಗಿದೆ.

ಬಾಲ್ಯ ವಿವಾಹ

ದೊಡ್ಡಿಗಳಲ್ಲಿ ವಾಸಿಸುವವರು ತಮ್ಮ ಮಕ್ಕಳಿಗೆ ಸರಿಯಾದ ಆಸ್ತಿ ಇಲ್ಲದಿದ್ದರೂ ಅತಿ ಚಿಕ್ಕ ವಯಸ್ಸಿನಲ್ಲಿ ಮದುವೆ ಮಾಡಿ ಬೀಡುತ್ತಾರೆ. ಮದುವೆ ಮಾಡಿದ ತಕ್ಷಣ ತಮ್ಮ ಜವಾಬ್ದಾರಿ ಕಳೆಯಿತು ಎಂದು ತಿಳಿದುಕೊಳ್ಳುವವರ ಸಂಖ್ಯೆ ಹೆಚ್ಚು. ತಮ್ಮ ಮಕ್ಕಳಿಗೆ ಶಿಕ್ಷಣ ಕಲಿಸದಿದ್ದರೂ ಬಡತನದ ಅನುಭವ ಮಾತ್ರ ಸರಿಯಾದ ರೀತಿಯಲ್ಲಿ ಕಲಿಸಿರುತ್ತಾರೆ. ಮಕ್ಕಳನ್ನು ಶಾಲೆಗೆ ಕಳುಸುವ ಬದಲು ತಮ್ಮ ಜೊತೆಗೆ ಕೃಷಿ ಕೆಲಸಕ್ಕೆ ಅಥವಾ ಕೂಲಿ ಕೆಲಸಕ್ಕೆ ಕರೆದುಕೊಂಡು ಹೋಗುತ್ತಾರೆ. ಬದುಕಿನ ತುಂಬಾ ದುಸ್ಥರವನ್ನು ಬಾಲ್ಯದಲ್ಲಿಯೇ ಇಲ್ಲಿನ ಮಕ್ಕಳು ಅನುಭವಿಸುವುದನ್ನು ಕಾಣುತ್ತೇವೆ. ಬಾಲ್ಯ ವಿವಾಹ ವ್ಯವಸ್ಥೆಯಲ್ಲಿ ೭ರಿಂದ ೧೪ವರ್ಷ ಪ್ರಾಯದ ಮಕ್ಕಳು ವಿವಾಹವೆಂಬ ಬಂಧನದೊಳಗೆ ತಳ್ಳಲ್ಪಟ್ಟು ಜೀವನವಿಡಿ ಅದರ ದುಷ್ಪರಿಣಾಮಗಳನ್ನು ಎದುರಿಸಬೇಕಾಗಿ ಬರುವುದು. ದೈಹಿಕವಾಗಿ, ಬೌದ್ಧಿಕವಾಗಿ ವಿಕಸನ ಹೊಂದದ ಮಕ್ಕಳು ವಿವಾಹವೆಂಬ ಜವಾಬ್ದಾರಿಯನ್ನು ಹೊರಲು ಅಸಮರ್ಥರಾಗಿರುತ್ತಾರಾದ್ದರಿಂದ ಇದರ ಪರಿಣಾಮವಾಗಿ ದೈಹಿಕ ನಿಶ್ಯಕ್ತತೆ ಮಾನಸಿಕ ದೌರ್ಬಲ್ಯ ಮುಂತಾದ ಸಮಸ್ಯೆಗಳನ್ನು ಎದುರಿಸಬೇಕಾಗುವುದು.

ಇನ್ನು ಚಿಕ್ಕ ವಯಸ್ಸಿನಲ್ಲಿಯೇ ಆಡಿ ಓದಿ ಬೆಳೆಯಗಬೇಕಾದ ಹೆಣ್ಣುಮಕ್ಕಳನ್ನು ಬಾಲ್ಯ ವಿವಾಹದ ಮೂಲಕ ಸಂಸಾರವೆಂಬ ನೌಕೇ ನಾವಿಕರನ್ನಾಗಿ ಮಾಡಿಬಿಡುತ್ತಾರೆ. ಶಿಕ್ಷಣದಿಂದ ವಂಚಿಸಿ ಅಂದಃಕಾರದಲ್ಲಿ ನೂಕುವುದರಿಂದ ಅವರು ಜೀವನವಿಡಿ ಅನೇಕ ಸಂಕಷ್ಟಗಳನ್ನು ಅನುಭವಿಸಬೇಕಾಗುತ್ತದೆ. ಅಪ್ರಾಪ್ತ ವಯಸ್ಸಿನಲ್ಲೇ ವಿವಾಹವಾಗುವ ಹೆಣ್ಣುಮಕ್ಕಳು ಎಳೆಯ ವಯಸ್ಸಿನಲ್ಲಿಯೇ ತಾಯಿತನದ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ. ಇದರಿಂದ ಅವರ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗಿ ರಕ್ತಹೀನತೆ, ದೈಹಿಕ ಕ್ಷೀಣತೆ, ಮಾನಸಿಕ ದೌರ್ಬಲ್ಯ ಮುಂತಾದ ತೊಂದರೆಗಳಿಗೆ ಬಲಿಯಾಗಬೇಕಾಗುತ್ತದೆ. ಪದೇ ಪದೇ ಗರ್ಭದಾರಣೇ, ಮಕ್ಕಳ ಪಾಲನೆ-ಪೋಷಣೆ ಜವಾಬ್ದಾರಿ ಮನೆಯಲ್ಲಿ ಅವಿರತ ದುಡಿಮೆ ಈ ವಿಷವರ್ತುಲದೊಳಗೆ ಸಿಲುಕಿದ ಸ್ತ್ರೀಯರು ತಮ್ಮ ಹೆಣ್ಣು ಮಕ್ಕಳ

ವಿಚಾರದಲ್ಲೂ ಇದೇ ತಪ್ಪನ್ನು ಮರುಕಳಿಸುವುದು. ಶೋಚನೀಯ ಸಂಗತಿ. ಬಡ ಕುಟುಂಬಗಳಲ್ಲಂತೂ ದೈಹಿಕ ಮಾನಸಿಕ ತೊಂದರೆಗಳೊಡನೆ ಅಪೌಷ್ಟಿಕತೆ, ಅನಾರೋಗ್ಯಗಳು ಸೇರಿ ಸಮಸ್ಯೆಗಳನ್ನು ಇನ್ನಷ್ಟು ಗಂಭೀರ ಸ್ವರೂಪ ಪಡೆದುಕೊಳ್ಳುತ್ತವೆ ಅಲ್ಲದೇ ತೀವ್ರವೇಗದಲ್ಲಿ ಏರುತ್ತಿರುವ ಭಾರತದ ಜನಸಂಖ್ಯೆಯ ಹೆಚ್ಚಳಕ್ಕೆ ಇಂತಹ ಬಾಲ್ಯವಿವಾಹಗಳು ಪೂರಕವಾಗುತ್ತಿವೆ. ಬಾಲ್ಯವಿವಾಹಕ್ಕೆ ಬಲಿಯಾದ ಹೆಣ್ಣು ಮಕ್ಕಳು ಇಂತಹ ಅನಾರೋಗ್ಯಕ್ಕೆ ಬಲಿಯಾಗುತ್ತವೆ ಎಂಬುದನ್ನು ಇಲ್ಲಿ ಮನಗಾಣಬಹುದು. ಅಪ್ರಾಪ್ತ ವಯಸ್ಸಿನ ಹೆಣ್ಣು ಮಕ್ಕಳ ವಿವಾಹಗಳು ಸೃಷ್ಟಿಸುವ ಸಮಸ್ಯೆಗಳು ಇಂದು ದೇಶದಾದ್ಯಂತ ಮಹಿಳಾ ಅಭಿವೃದ್ಧಿಗೆ ಒಂದು ದೊಡ್ಡ ಸವಾಲಾಗಿದೆ. ಹೀಗೆ ಬಾಲ್ಯವಿವಾಹ ಮಕ್ಕಳ ಆರೋಗ್ಯ ದೃಷ್ಟಿಯಿಂದ ಹಾಗೂ ಸಮುದಾಯದ ಆರೋಗ್ಯ ದೃಷ್ಟಿಯಿಂದ ಹಾನಿಕಾರಕ ಅಂಶವಾಗಿದೆ.

ದೊಡ್ಡಿಗಳಲ್ಲಿ ಬಾಲ್ಯ ವಿವಾಹವು ಮೊದಲಿಗೆ ಅತಿಹೆಚ್ಚಿನ ಸಂಖ್ಯೆಯಲ್ಲಿ ನಡೆಯುತ್ತಿದ್ದವು. ಆದರೆ ಇತ್ತೀಚಿಗೆ ಅಪೌಷ್ಟಿಕತೆ ಪ್ರಭಾವವೋ, ಕಾನೂನಿನ ಕಾರ್ಯಾಚರಣೆಯೋ ಬಾಲ್ಯ ವಿವಾಹ ಕಡಿಮೆ ಆಗುತ್ತಿವೆ. ಆದರೆ ಸಂಪೂರ್ಣವಾಗಿ ಕಡಿಮೆ ಆಗಿಲ್ಲ. ಮೊದಲನೆಯ ಪತ್ನಿಗೆ ಮಕ್ಕಳಾಗಿಲಿಲ್ಲವೆಂದರೆ ಅಥವಾ ಗಂಡುಮಗು ಜನಿಸದಿದ್ದರೆ ಮೊದಲನೇ ಪತ್ನಿ ಜೀವಂತ ವಿರುವಾಗಲೇ ಯಾವುದೇ ರೀತಿ ವಿಚಾರ ಮಾಡದೇ ಎರಡನೇ ಮದುವೆಯನ್ನು ಮಾಡುವ ಸಂಪ್ರದಾಯ ದೊಡ್ಡಿಗಳಲ್ಲಿ ವಾಸಿಸುವ ಕುರುಬ, ಕಬ್ಬಲಿಗ ಸಮುದಾಯಗಳಿಗೆ ಹೊಲಿಕೆ ಮಾಡಿದರೆ ಬೇಡ ಸಮಾಜದಲ್ಲಿ ಈಗಲೂ ಚಾಲ್ತಿಯಲ್ಲಿದೆ. ಈ ಬಹುಪತ್ನಿತ್ವ ವಿವಾಹದಿಂದ ಕುಟುಂಬ ನಿರ್ವಹಣೆಯು ಆರ್ಥಿಕವಾಗಿ ಬಹಳ ಕಷ್ಟಕರವಾಗುತ್ತದೆ. ಅಲ್ಲದೇ ಜೈವಿಕ, ಲೈಂಗಿಕ, ಮಾನಸಿಕ ಸಮಸ್ಯೆಗಳನ್ನು ಹುಟ್ಟು ಹಾಕಬಹುದು. ಲೈಂಗಿಕವಾಗಿ ಒಬ್ಬ ಪುರುಷ ಒಬ್ಬ ಸ್ತ್ರೀಯನ್ನು ಮಾತ್ರ ತೃಪ್ತಿಗೊಳಿಸಬಲ್ಲ. ಹೀಗಾಗಿ ಇನ್ನುಳಿದ ಹೆಂಡಂದಿರು ಅತೃಪ್ತರಾಗಿಯೇ ಉಳಿಯಗಬೇಕಾಗಬಹುದು. ಈ ಪದ್ದತಿಯಿಂದಾಗಿ ಸವತಿಯರ ನಡುವೆ ಅಸೂಯೆ, ಮನಸ್ತಾಪ, ಕಚ್ಚಾಟ ಇವುಗಳಿಗೆ ಆಸ್ಪದ ಕೊಟ್ಟಂತಾಗಿ ಮಕ್ಕಳ ಪೋಷಣೆಗೆ ದಕ್ಕೆಯಾಗುವ ಸಂಭವವನ್ನು ಅಲ್ಲಗಳೆಯುವಂತಿಲ್ಲ. ಬಹುಪತ್ನಿತ್ವವು ಪುರುಷ ಪ್ರಾಬಲ್ಯದ ಸಂಕೇತ ಗಂಡನು ಇನ್ನೊಬ್ಬ ಹೆಂಡತಿಯನ್ನು ನಿಕೃಷ್ಟವಾಗಿ ಕಾಣಬಹುದು. ಈ ಪ್ರವೃತ್ತಿಯಿಂದ ಸ್ತ್ರೀಯರ ಸ್ವಾಭಿಮಾನಕ್ಕೆ ಸ್ಥಾನಮಾನಕ್ಕೆ ದಕ್ಕೆಯುಂಟಾಗುತ್ತದೆ ಇಲ್ಲಿ ಹೆಂಡಂದಿರ ಸಂಖ್ಯೆ ಅಧಿಕವಾಗಿರುವುದರಿಂದ ಮಲತಾಯಿ ದೋರಣೆ ಉಂಟಾಗಿ ಮಕ್ಕಳ ಮಾನಸಿಕ ಸ್ಥಿತಿ ಹದಗೆಡಲು ಕಾರಣವಾಗುತ್ತದೆ.

ಮೂಢನಂಬಿಕೆ

ದೊಡ್ಡಿಗಳಲ್ಲಿ ಮೂಢನಂಬಿಕೆಯಿಂದ ಗಂಡು ಸಂತಾನಕ್ಕಾಗಿ ತಮ್ಮ ಆರೋಗ್ಯವನ್ನು ನಿರ್ಲಕ್ಷಿಸುತ್ತಾರೆ. ಕಾರಣ ಕುಟುಂಬದ ಹಿರಿಯರ ವಾಡಿಕೆಯಂತೆ ಬದುಕು ಸಾಗಿಸಬೇಕು ಎನ್ನುವ ನಿಯಮ ವಂಶದ ಬೆಳವಣಿಗೆಗಾಗಿ ತಮ್ಮ ಆರೋಗ್ಯ ನಿರ್ಲಕ್ಷಿಸಬೇಕಾಗುತ್ತದೆ.

ಒಂದು ವೇಳೆ ಆರೋಗ್ಯ ಕಡೆ ಗಮನ ಹರಿಸಿದರೆ ಪತಿಗೆ ಇನ್ನೊಂದು ಮದುವೆ ಮಾಡುವ ಕುಟುಂಬದ ಸದಸ್ಯರು ಅನೇಕ ಇದರಿಂದ ಅನಿವಾರ್ಯವಾಗಿ ಅನಾರೋಗ್ಯಕ್ಕೆ ಮಹಿಳೆಯರು ತುತ್ತಾಗುತ್ತಿದ್ದಾರೆ.

ಸಾಮಾಜಿಕ ತಿಳುವಳಿಕೆಯ ಕೊರತೆ

ಸರ್ಕಾರವು ಸ್ತ್ರೀಯರಿಗೆ ಅನುಕೂಲಕ್ಕಾಗಿ ಹತ್ತು ಹಲವು ಕಾರ್ಯಕ್ರಮ ಜಾರಿಗೆ ತಂದರೆ ಅಜ್ಞಾನ ಅಧಃಕಾರದಿಂದ ಸರಿಯಾದ ರೀತಿಯಲ್ಲಿ ಆ ಯೋಜನೆಗಳು ತಲುಪದೇ ಇರುವುದು ದೊಡ್ಡಿಗಳಲ್ಲಿ ಕೇವಲ ಗಂಡು ಮಕ್ಕಳನ್ನು ಶಾಲೆ ಕಳುಹಿಸಿದರೆ ಹೆಣ್ಣು ಮಕ್ಕಳನ್ನು ಮನೆ ಕೆಲಸ ಮತ್ತು ನಾಲ್ಕು ಗೋಡೆಗಳ ಮಧ್ಯೆ ಸೀಮಿತವಾಗಿ ಇರುವಂತೆ ಹೊರಗಿನ ನೆರೆಹೊರೆ ಅರಿವು ಇಲ್ಲದಂತೆ ಇವರು ಅಡವಿಯಲ್ಲಿ ಇರುವುದರಿಂದ ಸಾಮಾಜಿಕ ತಿಳುವಳಿಕೆಯ ಕೊರತೆಯನ್ನು ಎದುರಿಸುತ್ತಾಳೆ.

ಬಾಲಕಾರ್ಮಿಕರ ಸಮಸ್ಯೆ

ಪ್ರತಿಯೊಂದು ದೇಶದ ನಿಜವಾದ ಸಂಪತ್ತೆಂದರೆ ಮಕ್ಕಳು. ಒಂದು ದೇಶದ ಅಭಿವೃದ್ಧಿ ಅಲ್ಲಿರುವ ಮಕ್ಕಳ ಗುಣಾತ್ಮಕ ಬೆಳವಣಿಗೆ ಮೇಲೆ ನಿಂತಿದೆ. ಮಕ್ಕಳಿಗೆ ಉತ್ತಮ ಶಿಕ್ಷಣ, ಆರೋಗ್ಯ ಪೌಷ್ಠಿಕ ಆಹಾರ ಮನೋರಂಜನೆ, ಮಾನವೀಯ ಹಾಗೂ ಸಾಮಾಜಿಕ ಕಳಕಳಿಯ ವಾತಾವರಣ ಪೂರೈಸಿದರೆ ಅವರೆಲ್ಲರೂ ಭವಿಷ್ಯದ ಸಬಲ ಸತ್ಪ್ರಜೆಯಾಗುವುದರಲ್ಲಿ ಸಂಶಯವಿಲ್ಲ.

ಆದರೆ ಹಣದಾಸೆಗೆ ಮಕ್ಕಳನ್ನು ದುಡಿಮೆಗೆ ಕಳುಹಿಸಿಕೊಡುವ ಪಾಲಕರು ಒಂದು ಕಡೆಯಾದರೆ, ಪರಿಸ್ಥಿತಿಗಳೇ ಮುಗ್ಧ ಮಕ್ಕಳನ್ನು ದುಡಿಮೆಗೆ ಒಡ್ಡುತ್ತಿವೆ. ಯಾವುದೇ ವಯಸ್ಸು ಲೆಕ್ಕಿಸದೆ ನಿಸ್ಸಹಾಯಕರಾದ ಪೋಷಕರು ಅನಿವಾರ್ಯವಾಗಿ ತಮ್ಮ ಮಕ್ಕಳನ್ನು ಶಾಲೆ ಬಿಡಿಸಿ ಬದುಕಿನ ಬಂಡಿ ಓಡಿಸಲು ಹೆಗಲು ಕೊಡುವಂತಾಗಿದೆ.

"ಆಟ-ಪಾಠದೊಂದಿಗೆ ನಲಿಯುತ್ತ-ಕಲಿಯುತ್ತ ಬಾಲ್ಯ ಕಳೆಯುವುದು ಪ್ರತಿಯೊಂದು ಮಗುವಿನ ಜನ್ಮಸಿದ್ದ ಹಕ್ಕು. ಆದರೆ ಅನೇಕ ನತದೃಷ್ಟ ಮಕ್ಕಳು ಬಾಲ್ಯದಲ್ಲಿ ಸಂತಸದ ಕ್ಷಣಗಳನ್ನು ಕಾಣದೆ ಈ ಹಕ್ಕಿನಿಂದ ವಂಚಿತರಾಗುತ್ತಿದ್ದಾರೆ. ಅಪ್ರಾಪ್ತ ವಯಸ್ಸಿನ ಮಕ್ಕಳ ಬಾಲ್ಯದ ಕನಸುಗಳು ಕಮರಿ ಹೋಗುತ್ತಿವೆ. ಶಾಲೆಗೆ ಹೋಗುವ ವಯಸ್ಸಿನಲ್ಲಿ ದುಡಿಯುವ ಮಕ್ಕಳ ಸ್ಥಿತಿ ಇನ್ನೂ ಶೋಚನೀಯವಾಗಿದೆ."[೧]

ಒಂದೆಡೆ ಕಿತ್ತು ತಿನ್ನುವ ಬಡತನ, ಮನೆಯಲ್ಲಿ ಅನಾರೋಗ್ಯ, ಗಗನಕ್ಕೇರಿರುವ ಬೆಲೆಗಳು ಇವೆಲ್ಲವು ದೊಡ್ಡಿಗಳಲ್ಲಿ ವಾಸಿಸುವ ಸಮುದಾಯಗಳನ್ನು ಪ್ರಪಾತಕ್ಕೆ ತಳ್ಳುತ್ತಿವೆ. ತಕ್ಷಣಕ್ಕೆ ದುಡ್ಡಿನ ಅವಶ್ಯಕತೆಯನ್ನು ಸರಿದೂಗಿಸಲು ಮುಂದಿನ ಭವಿಷ್ಯವನ್ನು ಯಾರೂ ಯೋಚಿಸದಂತಾಗಿದೆ. ಅಸಹಾಯಕರಾದ ತಂದೆ-ತಾಯಿಗಳು ತಮ್ಮ ಮಕ್ಕಳನ್ನು ದುಡಿದು ತರಲು ದೂಡುತ್ತಿದ್ದಾರೆ. ಇದರಿಂದ ಬಾಲಕಾರ್ಮಿಕರ ಸಮಸ್ಯೆ ಹೆಚ್ಚಾಗುತ್ತಿದೆ.

ಅಸಹಾಯಕಳಾದ ತಾಯಿ, ಕುಡಿತದ ಚಟಕ್ಕೆ ಬಲಿಯಾದ ತಂದೆ ಇದರಿಂದ ನೊಂದ ಮಕ್ಕಳು ಕೂಡ ಸ್ವಯಂ ಪ್ರೇರಿತರಾಗಿ ತಾವೇ ಕೃಷಿ ಕೂಲಿ ಅಥವಾ ಕುರಿ, ಮೇಕೆ ಕಾಯುವುದು. ಇನ್ನು ಹೆಣ್ಣುಮಕ್ಕಳು ಚಿಕ್ಕ ವಯಸ್ಸಿನಲ್ಲಿ ಕೃಷಿ ಕೆಲಸದಲ್ಲಿ ಕೂಲಿ ಆಳಾಗಿ ದುಡಿಯುತ್ತಿದ್ದಾರೆ. ಮಕ್ಕಳ ಆರೋಗ್ಯದ ಕಡೆಗೂ ಭವಿಷ್ಯದ ಕಡೆಗೂ ಸ್ವತಃ ತಂದೆ ತಾಯಿಗಳೇ ಯೋಚಿಸದಂತಾಗಿದೆ.

ಇತ್ತೀಚಿನ ದಿನಗಳಲ್ಲಿ ಕೃಷಿ ಕೆಲಸಗಳಲ್ಲಿ ಮಕ್ಕಳನ್ನು ಹೆಚ್ಚು ದುಡಿಸಿಕೊಳ್ಳಲಾಗುತ್ತಿದೆ. ರಾಯಚೂರು ಜಿಲ್ಲೆಯ ಭತ್ತದ ಗದ್ದೆಯಲ್ಲಿ ಜೊತೆಗೆ ಕುರಿ ಮೇಕೆ ಕಾಯುವುದಕ್ಕೆ ಮಕ್ಕಳನ್ನು ಹಚ್ಚುತ್ತಿದ್ದಾರೆ. ಇದರಿಂದ ಬಾಲಕಾರ್ಮಿಕರ ಸಂಖ್ಯೆ ಹೆಚ್ಚುತ್ತದೆ. ಅಲ್ಲದೆ ಶಾಲೆಬಿಟ್ಟ ಮಕ್ಕಳೂ ಕೂಡ ಹೆಚ್ಚಾಗುತ್ತಿದ್ದಾರೆ. ಹಣದ ಆಸೆಗಾಗಿ ಪಾಲಕರು ತಮ್ಮ ಮಕ್ಕಳನ್ನು ಶಾಲೆ ಬಿಡಿಸಿ ಕೆಲಸಕ್ಕೆ ಕಳುಹಿಸುತ್ತಿದ್ದಾರೆ. ಶಾಲೆಯಲ್ಲೂ ಶಿಕ್ಷಕರು ಕೂಡ ಸರ್ಕಾರಕ್ಕೆ ತಪ್ಪು ಮಾಹಿತಿಯನ್ನು ಕೊಡುತ್ತಿದ್ದಾರೆ. ಇದರಿಂದ ಬಿಸಿಯೂಟದಲ್ಲಿ ಮೇಷ್ಟ್ರುಗಳು ಮಕ್ಕಳ ಸುಳ್ಳು ಲೆಕ್ಕವನ್ನು ಕೊಟ್ಟು ವಂಚಿಸುತ್ತಿದ್ದಾರೆ. ಇದರಿಂದ ಮುಖ್ಯಗುರುಗಳಿಗೆ ಬಿಸಿಯೂಟಕ್ಕೆ ಸಂಬಂಧಿಸಿದಂತೆ ಶಾಲೆಬಿಟ್ಟ ಮಕ್ಕಳ ಹಣವು ಹೋಗುತ್ತದೆ. ಅಲ್ಲದೇ ಅಡುಗೆಯವರು ಕೂಡ ಬಿಸಿಯೂಟದ ದಾಸ್ತಾನುವನ್ನು ಕಳ್ಳತನದಿಂದ ತಮ್ಮ ಮನೆಗಳಿಗೆ ಸಾಗಿಸುತ್ತಿದ್ದಾರೆ. ಸುಳ್ಳು ಹಾಜರಾತಿಯಿಂದ ಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಪಾಲಕರು ಮಕ್ಕಳನ್ನು ಶಾಲೆಗೆ ಕಳುಹಿಸದಿರುವುದಕ್ಕೆ ಇನ್ನೊಂದು ಕಾರಣವೇನೆಂದರೆ ಈಗಿನ ವ್ಯವಸ್ಥೆಯಲ್ಲಿ ತಮ್ಮ ಮಕ್ಕಳಿಗೆ ಸರ್ಕಾರಿ ಕೆಲಸ ಸಿಗುವುದು ಅಷ್ಟರಲ್ಲಿಯೇ ಇದೆ. ಚಿಕ್ಕವರಾಗಿ ಇರುವಾಗಲೇ ಮೈ ಬಗ್ಗಿಸಿ ದುಡಿಯಬೇಕು. ಹಾಗಾದಾಗ ಮಾತ್ರ ದೊಡ್ಡವರಾದ ದುಡಿಯುವ ಸ್ಥಿತಿಗೆ ಹೊಂದಿಕೊಳ್ಳುತ್ತಾರೆ ಎಂಬ ಮನೋಭಾವ ಹಾಗೂ ವಿದ್ಯಾವಂತ ನಿರುದ್ಯೋಗಿಗಳು ಅವರ ಕಣ್ಣ ಮುಂದೆಯೇ ಇರುವುದರಿಂದ ಪೋಷಕರು ನಿಷೇದಾತ್ಮಕವಾಗಿ ಯೋಚಿಸುತ್ತಾರೆ. ಬಾಲಕಾರ್ಮಿಕರು ಕೇವಲ ಶಿಕ್ಷಣದಿಂದ ಮಾತ್ರ ವಂಚಿತರಾಗುತ್ತಿಲ್ಲ ಬದಲಿಗೆ ಅವರೆಲ್ಲರೂ ತಮ್ಮ ಅಮೂಲ್ಯವಾದ ಬಾಲ್ಯಾವಸ್ಥೆಯಿಂದ ವಂಚಿತರಾಗುತ್ತಿದ್ದಾರೆ. ಅವರಿಗೆ ಬಾಲ್ಯದಲ್ಲಿ ಅನುಭವಿಸಬೇಕಾದ ಸಿಹಿ ಘಟನೆಗಳು ಅವರಿಗೆ ಸಿಗುತ್ತಿಲ್ಲ. ಜೊತೆಗೆ ಅವರು ಕಲಿಯುತ್ತಿರುವ ಶಾಲೆಗಳು ಸರ್ಕಾರಿ ಶಾಲೆಗಳಾಗಿರುವುದರಿಂದ ಅಲ್ಲಿಯ ಸೋಮಾರಿ ಶಿಕ್ಷಕರು ಸರಿಯಾದ ಸಮಯಕ್ಕೆ ಶಾಲೆಗೆ ಬರದೆ ಅನಧಿಕೃತವಾದ ಗೈರು ಹಾಜರಿ ಆಗುವುದರಿಂದ ದೊಡ್ಡಿಗಳಲ್ಲಿ ಮಕ್ಕಳ ಶಿಕ್ಷಣದ ಆಸಕ್ತಿ ಕೊರತೆ ಕಂಡುಬರುತ್ತದೆ. ಇದರಿಂದ ಮಕ್ಕಳ ಆಸಕ್ತಿಯನ್ನು ನಿರ್ಜೀವಗೊಳಿಸಲು ಕಾರಣವಾಗುತ್ತಾರೆ.

ದೊಡ್ಡಿಗಳಲ್ಲಿ ಒಂದು ಪ್ರಾಥಮಿಕ ಶಾಲೆ ಒಬ್ಬ ಶಿಕ್ಷಕರು. ಇದರಿಂದ ಮಕ್ಕಳ ಶಿಕ್ಷಣ ಸರಿಯಾದ ರೀತಿಯಲ್ಲಿ ಆಗದೇ ಹೆಸರಿಗೆ ಮಾತ್ರ ಒಂದು ಶಾಲೆ ಒಬ್ಬ ಶಿಕ್ಷಕ. ೫ನೇ ತರಗತಿವರೆಗೆ ಇರುವ ಶಾಲೆ ಒಂದು ತರಗತಿ ಪಾಠ ಮಾಡಿದರೆ ಉಳಿದ ತರಗತಿ

ವಿದ್ಯಾರ್ಥಿಗಳಿಗೆ ಆಟದ ಸಮಯ ಇದರಿಂದ ಯಾವ ಮಕ್ಕಳು ಸರಿಯಾಗಿ ಕಲಿಯುವುದಕ್ಕೆ ಆಗುವುದಿಲ್ಲ. ಇದರಿಂದ ಶಾಲೆಗೆ ಹೋಗುವುದರಿಂದ ನಮಗೆ ಏನು ಸಿಕ್ಕುವುದಿಲ್ಲ ಎನ್ನುವ ಮನೋಧೋರಣೆಯಿಂದ ಮಕ್ಕಳು ಕೂಡ ಶಾಲೆಯನ್ನು ತಪ್ಪಿಸುತ್ತಿದ್ದಾರೆ.

ಪೌಷ್ಠಿಕ ಆಹಾರದ ಕೊರತೆ

ಕೃಷಿ ಕೆಲಸಕ್ಕೆ ಹೋಗುವ ಮಕ್ಕಳು ತುಂಬಾ ಅಪೌಷ್ಠಿಕತೆಯಿಂದ ನರಳುತ್ತಿದ್ದಾರೆ. ಇತ್ತೀಚೆಗೆ ಅಪೌಷ್ಠಿಕತೆ ದೇಶಾದ್ಯಾಂತ ಸುದ್ದಿ ಮಾಡಿದ ಕುಖ್ಯಾತಿ ರಾಯಚೂರು ಜಿಲ್ಲೆಗೆ ಇದೆ.

ಸರ್ಕಾರ ರಿಯಾಯಿತಿ ದರದಲ್ಲಿ ಅಕ್ಕಿ ವಿತರಿಸುತ್ತಿದೆ. ಅದರಲ್ಲಿ ಅರ್ಧ ನ್ಯಾಯಬೆಲೆ ಅಂಗಡಿಯವರು ತಿಂದರೆ, ಅಲ್ಪಸ್ವಲ್ಪ ದೊಡ್ಡಿಯ ಜನರಿಗೆ ಸಿಗುವುದರಿಂದ ರೊಟ್ಟಿ ಮಾಡುವುದು ಕಡಿಮೆಯಾಗುತ್ತಿದೆ. ಬೆಳಿಗ್ಗೆ ಅನ್ನ ಬೇಯಿಸಿ ಇಟ್ಟರೆ ಮುಗಿಯಿತು ಅದನ್ನೇ ತಿಂದು ಬದುಕಬೇಕು.

ಇತ್ತೀಚಿಗೆ ಮಳೆಯ ಪ್ರಮಾಣ ಕಡಿಮೆ ಆದುದ್ದರಿಂದ ಜೋಳಕ್ಕೆ ಬಂಗಾರದ ಬೆಲೆ ಬಂದಿದೆ. ಇದರಿಂದ ಕಾಳಸಂತೆಯಲ್ಲಿ ಅಕ್ಕಿಯನ್ನು ಕೊಂಡು ತಂದು ಜೀವನ ನಿರ್ವಹಿಸುತ್ತಿದ್ದಾರೆ. ದೊಡ್ಡಿಗಳಲ್ಲಿ ಮಹಿಳೆಯರು ಬೆಳಿಗ್ಗೆ ನಾಲ್ಕು ಗಂಟೆಗೆ ಎದ್ದು ರೊಟ್ಟಿ ಮಾಡಲು ತೊಡಗುತ್ತಿದ್ದರು. ಹೆಚ್ಚಾಗಿ ಅವಿಭಕ್ತ ಕುಟುಂಬಗಳಿದ್ದುದರಿಂದಾಗಿ ಸಾಮಾನ್ಯಾವಾಗಿ ಒಂದು ಮನೆಯಲ್ಲಿ ನಾಲ್ಕು ಐದು ಜನ ಸ್ತ್ರೀಯರು ಇರುತ್ತಿದ್ದರು. ಒಬ್ಬರು ರೊಟ್ಟಿ ಮಾಡುತ್ತಿದ್ದರೆ. ಉಳಿದ ಸ್ತ್ರೀಯರು ಮಜ್ಜಿಗೆ ಮಾಡುವುದು ದನಗಳ ಹಾಲು ಕರೆಯುವುದು. ಕಾಳುಗಳನ್ನು ಬೇಯಿಸಿ ಪಲ್ಯಗಳನ್ನು ಮತ್ತು ಬಗೆ ಬಗೆಯ ಚಟ್ನಿ ತಯಾರಿಸುತ್ತಾ ಇರುತ್ತಿದ್ದರು. ಇದರಿಂದ ಎಂಟು ಗಂಟಿಗೆಲ್ಲಾ ಘಮ ಗಮಿಸುವ ಬಿಸಿ ಬಿಸಿ ರೊಟ್ಟಿ, ಪಲ್ಯ, ಮೊಸರು, ಚಟ್ನಿ, ಮಜ್ಜಿಗೆ ಊಟಕ್ಕೆ ಸಿದ್ಧವಾಗಿರುತ್ತಿತ್ತು. ಇಡೀ ಮನೆಗಳು ದಿನಪ್ರತಿ ಹಬ್ಬದ ವಾತಾವರಣವೆನ್ನುವಂತೆ ಇರುತ್ತಿತ್ತು. ಆದರೆ ಇತ್ತೀಚಿಗೆ ರೊಟ್ಟಿ ಪಲ್ಯಗಳು ಹಬ್ಬಕ್ಕೆ ಮಾತ್ರ ಮೀಸಲಾಗಿದೆ ಏನೋ ಅನಿಸುತ್ತಿದೆ.

“ಅನಕ್ಷರಸ್ಥರಾದ ಪೋಷಕರು ಮಕ್ಕಳ ಪೌಷ್ಠಿಕತೆಯ ಬಗ್ಗೆ ಯೋಚಿಸುವುದಿಲ್ಲ ಜೀವನ ನಿರ್ವಹಣೆಗಾಗಿ ಮಾಡಿಕೊಂಡ ಉಪಕಸುಬುಗಳಾದ ದನ ಸಾಗಾಣಿಕೆ, ಕುರಿ ಸಾಕಾಣಿಕೆ, ಕೋಳಿ ಸಾಕಾಣಿಕೆ ಮುಂತಾದವುಗಳನ್ನು ಅವರ ಆರ್ಥಿಕಕತೆಯನ್ನು ಹೆಚ್ಚಿಸಲು ಬಳಸಿಕೊಳ್ಳುತ್ತಾರೆಯೇ ವಿನಃ ದಿನಾಲು ಕೋಳಿಯಿಂದ ಪಡೆಯುವ ಮೊಟ್ಟೆಗಳಲ್ಲಿ ಮಕ್ಕಳಿಗೆ ಒಂದು ಕಪ್ ಹಾಲನ್ನು ಕೊಡುವುದಿಲ್ಲ.”[೨] ಇದರ ಜೊತೆ ಮನೆಯಲ್ಲೇ ಹಿರಿಯರು, ಮುದುಕರು ಮೊದಲು ಪೌಷ್ಠಿಕವಾದ ಆಹಾರ ತಿನ್ನಬೇಕು. ಮಕ್ಕಳು ತಿನ್ನುವಂತೆ ಮಾಡಬೇಕು. ಆದರೆ ಇಂದಿನ ದಿನಮಾನಗಳಲ್ಲಿ ಮಕ್ಕಳ ಪೌಷ್ಠಿಕತೆಯ ಕಡೆಗೆ ಮನೆಯ ಇತರರು ಮತ್ತು ಸ್ವತಃ ತಂದೆ ತಾಯಿಗಳೇ ಯೋಚನೆ ಮಾಡುವುದಿಲ್ಲ.

ಹೆಚ್ಚಿನ ಹಣದ ಆಮಿಷಕ್ಕೆ ಬಲಿಯಾಗಿ ಶಾಲೆಗೆ ಹೋಗುತ್ತಿರುವ ಮಕ್ಕಳಿಗೆ ಹೊಡೆದು ಬಡಿದು ಕೃಷಿ ಕೆಲಸಕ್ಕೆ ಕಳುಹಿಸಲಾಗುತ್ತಿದೆ. ಅವರು ದುಡಿದು ತಂದ ಹಣವನ್ನು ಮಾಡಿದ ಸಾಲ ಬಡ್ಡಿ ತೀರಿಸಲು ಉಪಯೋಗಿಸುತ್ತಾರೆ. ಹೋಗಲಿ ಅವರಿಗೆ ತೊಡಲು ಸರಿಯಾದ ಬಟ್ಟೆಗಳು ಇರುವುದಿಲ್ಲ.

ವಲಸೆ

ವಲಸೆ ಒಂದು ಸಾಮಾಜಿಕ ಪ್ರಕ್ರಿಯೆ, ಪ್ರತಿಯೊಂದು ಸಮಾಜದಲ್ಲೂ ಇದು ನಿರಂತರವಾಗಿ ನಡೆಯುವ ಪರಿಕಲ್ಪನೆಯಾಗಿದೆ. ಒಂದು ನಿರ್ದಿಷ್ಟ ಭೂ ಪ್ರದೇಶದ ಜನಸಂಖ್ಯೆಯ ಗಾತ್ರದ ಬದಲಾವಣೆ, ಬೆಳವಣಿಗೆ, ನಗರೀಕರಣ, ಕೈಗಾರೀಕರಣ ಮತ್ತು ಸಂಪರ್ಕ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ವಲಸೆಯ ಪಾತ್ರ ಮಹತ್ತರವಾದದ್ದು. ವಲಸೆ ಎಂದರೆ ಒಬ್ಬ ವ್ಯಕ್ತಿ ಇಲ್ಲವೇ ಸಮುದಾಯಗಳ ಅಲಕ್ಷಿತವಾದ ನೆಲೆಯಿಂದ ದೈಹಿಕವಾಗಿ ಒಂದು ಸಾಮಾಜಿಕ ಪರಿಸರದಿಂದ ಇನ್ನೊಂದು ಸಾಮಾಜಿಕ ಪರಿಸರದಲ್ಲಿ ತಾತ್ಕಾಲಿಕವಾಗಿ ಅಥವಾ ಶಾಶ್ವತವಾಗಿ ನೆಲೆಸುವುದು. ವಲಸೆ(ಗೂಳೆ) ಇಲ್ಲವೇ ಋತುಮಾನ ಕಾಲದ ವಲಸೆ ಆಗಿರಬಹುದು. ವಿಶೇಷವಾಗಿ ಋತುಮಾನದ ಕಾಲದ ವಲಸೆ ಬಗೆಗೆ ಬಹುತೇಕ ಅಧ್ಯಯನ/ಸಂಶೋಧನ ಕಾರ್ಯ ಆಗಿಲ್ಲ. ದೊಡ್ಡಿಗಳಲ್ಲಿ ನೆಲೆಸಿರುವ ಸಮುದಾಯದವರು ಬಹುತೇಕ ಜನರು ಋತುಮಾನ ಕಾಲದ ವಲಸೆಗಾರರಾಗಿರುತ್ತಾರೆ. ಇವರ ಮೇಲೆ ಸಂಶೋಧನಾ ಕಾರ್ಯದ ಅವಶ್ಯಕತೆ ಇರುತ್ತದೆ. ಋತುಮಾನದ ವಲಸೆಗೆ ಹಲವು ಕಾರಣಗಳಿವೆ ಅವು ಬಡತನ, ಬರಗಾಲ ಬೆಳೆಯ ವೈಫಲ್ಯ, ನಿರುದ್ಯೋಗ, ನೈಸರ್ಗಿಕ ವಿಕೋಪ ಪರಸ್ಥಳದಲ್ಲಿ ಉತ್ತಮ ಕೂಲಿ, ದುಡಿಮೆ ವಿಶೇಷವಾಗಿ ಋತುಮಾನ ವಲಸೆಗೆ ಕಾರಣಗಳಾಗಿರುತ್ತವೆ.

ಇದು ಆಧುನಿಕ ಯುಗ, ಅತಿವೇಗವಾಗಿ ಬೆಳೆಯುತ್ತಿರುವ ನಗರೀಕರಣ, ಔದ್ಯೋಗಿಕರಣ ಮತ್ತು ಸಂಪರ್ಕ ಮಾಧ್ಯಮ ಇಂತಹ ಯುಗದಲ್ಲಿಯೂ ರಾಯಚೂರು ಜಿಲ್ಲೆಯ ದೊಡ್ಡಿಗಳಲ್ಲಿ ವಾಸಿಸುವ ಸಮುದಾಯದವರು ಶಿಕ್ಷಣದಿಂದ ವಂಚಿತರಾಗಿ ಸರ್ಕಾರದ ಸೌಲಭ್ಯಗಳಿಂದ ವಂಚಿತರಾಗಿ ಕಡುಬಡತನದ ಕತ್ತಲಿನಲ್ಲಿಯೇ ಜೀವಿಸುತ್ತಿದ್ದಾರೆ. ಕ್ಷೇತ್ರಕಾರ್ಯದ ಪ್ರಕಾರ ೫೦ಕ್ಕೂ ಹೆಚ್ಚು ದೊಡ್ಡಿಗಳು ಇಂದಿಗೂ ವಿದ್ಯುತ್‌ನಿಂದ ವಂಚಿತವಾಗಿವೆ.

ಪ್ರಸ್ತುತವಾಗಿ ರಾಯಚೂರು ಜಿಲ್ಲೆಯಲ್ಲಿ ೧೫೦ಕ್ಕೂ ಹೆಚ್ಚು ದೊಡ್ಡಿಗಳು ಕಂಡುಬರುತ್ತವೆ. ಬಹುತೇಕ ದೊಡ್ಡಿಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬೇಡ ಸಮುದಾಯದವರು ಕಂಡುಬಂದರೆ ೫೦% ರಷ್ಟು ದೊಡ್ಡಿಯಲ್ಲಿ ಕಡಿಮೆ ಸಂಖ್ಯೆಯಲ್ಲಿ ಬೇಡರ ಜೊತೆ ಕುರುಬರು ನೆಲೆಸಿರುವುದು ಕಾಣಬಹುದು. ಅದೇ ರೀತಿ ಶೇ ೨೫ರಷ್ಟು ದೊಡ್ಡಿಗಳಲ್ಲಿ ಕಬ್ಬಲಿಗ ಸಮುದಾಯವು ನೆಲೆನಿಂತುರುವುದು ಅಧ್ಯಯನದಿಂದ ತಿಳಿದುಕೊಳ್ಳಲಾಗಿದೆ. ಆರ್ಥಿಕ ಮುಗ್ಗಟ್ಟು ಕಿತ್ತು ತಿನ್ನುವ ಬಡತನ ಇದರಿಂದ ಸಾಕಷ್ಟು ಸಮಸ್ಯೆಗಳಿಗೊಳಗಾಗಿರುವ ದೊಡ್ಡಿಗಳ ನಿವಾಸಿಗಳು ಹೊಟ್ಟೆಪಾಡಿಗಾಗಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಉತ್ತಮ ಕೂಲಿಗಾಗಿ

ಜೀವನ ನಿರ್ವಹಣೆಗೆ ಕಷ್ಟದಿಂದ ವಲಸೆ ಹೋಗುತ್ತಿದ್ದಾರೆ. ಒಣಬೇಸಾಯ ಮಾಡುವ ಜನರು ಅತಿ ಕಡಿಮೆ ಆಸ್ತಿಯನ್ನು ಹೊಂದಿರುವ ಕುಟುಂಬದವರು ಜೊತೆಗೆ ಪರ್ಯಾಯ ಕುಲಕಸುಬು ಇಲ್ಲದ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ೬-೮ ತಿಂಗಳು ಬೇರೊಂದು ಊರಿಗೆ ವಲಸೆ ಹೋಗಿ ಇನ್ನೊಂದು ಸ್ಥಳದಲ್ಲಿ ಇದ್ದು ಕಷ್ಟಪಟ್ಟು ಕೂಲಿ ಕೆಲಸ ಮಾಡಿ ಜೀವನ ಸಾಗಿಸುತ್ತಿದ್ದಾರೆ. ಗೂಳೆ ಹೋದವರು ಹೆಚ್ಚಾಗಿ ರಾಜ್ಯದ ರಾಜಧಾನಿಯಾದ ಬೆಂಗಳೂರಿಗೆ ಕೆಲಸ ಹರಸಿ ವಲಸೆ ಹೋಗುತ್ತಾರೆ.

೬.೨ ಆರ್ಥಿಕ ಸಮಸ್ಯೆಗಳು

ಬೇಡ ಸಮುದಾಯದ ಮೂಲ ಉದ್ಯೋಗ ಬೇಟೆಯಾಡುವುದು. ನಂತರ ಬೇಟೆ ನಿಷೇಧ ಕಾಯ್ದೆಯಿಂದ ಬೇಟೆ ಆಡುವುದು ನಿಲ್ಲಿಸಿದರು. ಇಂದು ಅವರು ತಮ್ಮ ಮೂಲ ಉದ್ಯೋಗವನ್ನು ಅವಲಂಭಿಸಿಕೊಂಡು ಬದುಕುವಂತಹ ಸ್ಥಿತಿ ಇಲ್ಲ. ಒಕ್ಕಲುತನದ ಜೊತೆಗೆ ಮೇಕೆ ಸಾಕಾಣಿಕೆ ಮಾಡುತ್ತಿದ್ದಾರೆ. "ಈಗೀಗ ದನಕರುಗಳಿಗೆ ಸಾಕಾಗುವಷ್ಟು ಆಹಾರ ಅಡವಿಗಳಲ್ಲಿ ದೊರಕುವುದಿಲ್ಲ."[೩] ಒಂದು ಕಾಲಕ್ಕೆ ಅಡವಿಯಲ್ಲಿ ವಾಸಿಸುವ ಬೇಡ ಸಮುದಾಯವು ಸ್ವಾವಲಂಬಿ ಹಾಗೂ ಸ್ವಯಂ ಪರಿಪೂರ್ಣವಾಗಿತ್ತು ಎಂದು ಹೇಳಲಾಗುತ್ತದೆ. ಏಕೆಂದರೆ ಆ ಕಾಲದಲ್ಲಿ ಅವರ ಅವಶ್ಯಕತೆಗಳು ಸೀಮಿತವಾಗಿದ್ದವು ಹಾಗೂ ಎಲ್ಲಾ ಅವಶ್ಯಕತೆಗಳನ್ನು ತಮ್ಮ ಆದಾಯದಲ್ಲಿಯೇ ಪೂರೈಸಿಕೊಳ್ಳುತ್ತಿದ್ದರು. ಇವರು ತಮ್ಮ ಹಳೆಯ ಕಾಲದ ವ್ಯವಸಾಯ ಪದ್ದತಿ ಆಹಾರ ಅವಲಂಬಿಸಿದ್ದಾರೆ. ಇವರು ಬೆಳೆದ ಬೆಳೆಯ ಆಕಾಲಿಕ ಮಳೆಯಿಂದಾಗಿ ಅಥವಾ ಅನಾವೃಷ್ಟಿಯಿಂದಾಗಿ ಬೆಳೆನಾಶ ಆದರೆ ಇವರಿಗೆ ಪರಿಹಾರ ಸಿಗುವುದೇ ಇಲ್ಲ. ಈ ದೊಡ್ಡಿಗಳಲ್ಲಿ ವಾಸಿಸುವ ಬೇಡ, ಕುರುಬ, ಕಬ್ಬಲಿಗ ಸಮುದಾಯ ನೆಲೆಗಳು ಕಂದಾಯ ಇಲಾಖೆಯಿಂದ ಮಾನ್ಯತೆ ಪಡೆದಿಲ್ಲ. ಹೆಚ್ಚಿನ ಜನರು ಕೃಷಿ ಕೂಲಿಯನ್ನೇ ಅವಲಂಭಿಸಿದ್ದಾರೆ. ಸರ್ಕಾರದ ವಿವಿಧ ಯೋಜನೆಗಳು ದೊಡ್ಡಿಗಳಲ್ಲಿ ಇರುವವರಿಗೆ ಲಾಭ ಇವರಿಗೆ ಸರಿಯಾದ ರೀತಿಯಲ್ಲಿ ಮುಟ್ಟುತ್ತಿಲ್ಲ. ಕೃಷಿ ಕೂಲಿಯನ್ನು ಬಿಟ್ಟರೆ ಬೇರೆ ಪರ್ಯಾಯ ಉದ್ಯೋಗ ಇಲ್ಲದೆ ಇರುವುದರಿಂದ ಬೇಡ ಸಮುದಾಯದವರು ರಾಜ್ಯದ ರಾಜಧಾನಿಗೆ ಹೋಗಿ ಚಿಕ್ಕ ಪುಟ್ಟ ಕೆಲಸ ಮಾಡಿ ಹಣ ಸಂಪಾದನೆ ಮಾಡಿಕೊಂಡು ಬರಲು ತಾತ್ಕಾಲಿಕವಾಗಿ ಗುಳೆ ಹೋಗುತ್ತಾರೆ. ಆದರೆ ಇದು ಎಲ್ಲರಿಗೂ ಸಾಧ್ಯವಾಗುವ ಮಾತಲ್ಲ.

ಅಡವಿಗಳಲ್ಲಿ ವಾಸಿಸುವವರಿಗೆ ಬೆಂಬಿಡದೇ ಕಾಡುತ್ತಿರುವ ಸಮಸ್ಯೆಗಳಲ್ಲಿ ನಿರುದ್ಯೋಗ ಮತ್ತು ಅರೆ ನಿರುದ್ಯೋಗ ಮುಖ್ಯವಾದಂತಹ ಸಮಸ್ಯೆಗಳಾಗಿವೆ. ಇವರು ಪ್ರತ್ಯೇಕವಾಗಿ ತಮ್ಮದೇ ಆದ ನೆಲೆಗಳಲ್ಲಿ ವಾಸಿಸುವುದರಿಂದ ನಗರ ಸಮಾಜದಲ್ಲಿ ದೊರೆಯುವಂತಹ ಉದ್ಯೋಗದ ಅವಕಾಶಗಳು ಬುಡಕಟ್ಟು ಜನರಿಗೆ ದೊರೆಯುವುದಿಲ್ಲ ಸಾಂಪ್ರದಾಯಿಕ ಕಸುಬುಗಳನ್ನು ಬಿಟ್ಟರೆ ಆ ಸಾಂಪ್ರದಾಯಿಕ ಜಾತಿ ಮುಕ್ತ ಉದ್ಯೋಗದ ಅವಕಾಶಗಳು

ಇವರಿಗೆ ದೊರೆಯುವುದಿಲ್ಲ. ಇವರಲ್ಲಿ ಸರಕಾರಿ ಹುದ್ದೆಗಳಲ್ಲಿರುವವರು ತುಂಬಾ ಕಡಿಮೆ. ದಿನನಿತ್ಯದ ಕೆಲಸಗಳಿಂದ ಇವರ ಆರ್ಥಿಕ ಜೀವನಕ್ಕೆ ಸಾಕಾಗುವಷ್ಟು ಆದಾಯ ಬರುವುದಿಲ್ಲ ಕೃಷಿ, ಕೂಲಿಯನ್ನು ನಂಬಿ ಬದುಕುವವರು ಬೇಡ ಸಮುದಾಯದವರಾದರೆ ಕೃಷಿ ಕುರಿಸಾಕಾಣಿಕೆ ಹೈನುಗಾರಿಕೆ ಅವಲಂಬಿಸಿ ಬದುಕು ಸಾಗಿಸುವವರು ಕುರುಬ ಸಮುದಾಯದವರಾಗಿದ್ದಾರೆ. ಜೊತೆ ಕೃಷಿ ಕುಲ ಕಸುಬುಗಳನ್ನು ಮಾಡಿಕೊಂಡು ಅಲ್ಪ ಸ್ವಲ್ಪ ಆರ್ಥಿಕವಾಗಿ ಸದೃಢವಾಗಿ ಜೀವನ ನಡೆಸುತ್ತಿರುವವರಲ್ಲಿ ಕಬ್ಬಲಿಗ ಸಮುದಾಯದವರೂ ಕಂಡುಬರುತ್ತಾರೆ. ಉದ್ಯೋಗದ ದೃಷ್ಟಿಯಿಂದ ಸಂದರ್ಶಿಸಿದ ಒಟ್ಟು ಜನರಲ್ಲಿ ಅರ್ಧದಷ್ಟು ಕುಟುಂಬಗಳು ಕೃಷಿ ಕಾರ್ಮಿಕರಿದ್ದು ಕೆಲವರು ಹೈನುಗಾರಿಕೆಯನ್ನು ಅವಲಂಬಿಸಿವೆ. ಹೆಚ್ಚಿನ ಸಂಖ್ಯೆಯಲ್ಲಿ ಕುರಿ ಮೇಕೆ ಸಾಕಾಣಿಕೆಗಳಲ್ಲಿ ಹಲವರು ತೊಡಗಿಸಿಕೊಂಡಿದ್ದಾರೆ. ಈ ಬಾಗದಲ್ಲಿ ಒಂದು ಬೇಸಿಗೆ ಇನ್ನೊಂದು ಅತಿಬೇಸಿಗೆ ಎರಡೂ ಕಾಲ ಕಂಡುಬರುತ್ತವೆ. ದನಕರುಗಳನ್ನು ಮೇಯಿಸುವವರಿಗೆ ಮೇವು ಮತ್ತೆ ನೀರಿನ ಅಭಾವದಿಂದ ಸಹಜವಾಗಿ ದನಕರು ಕುರಿಮರಿಗಳು ಕಡಿಮೆಯಾಗುತ್ತಿವೆ. ಕೃಷಿಗೆ ಸಂಬಂಧಪಟ್ಟಂತೆ ಹೇಳುವುದಾದರೆ ಇವರ ಬದುಕು ತುಂಬಾ ಗೊಂದಲವಾಗಿ ಬಿಡುತ್ತದೆ. ವರ್ಷದ ಆರು ತಿಂಗಳು ನದಿ, ಹಳ್ಳ, ಕೊಳ್ಳ ಕಾಲುವೆ ತುಂಬಿ ಹರಿದರೆ ನಾಲ್ಕು ರಿಂದ ಐದು ತಿಂಗಳ ನೀರಿಲ್ಲದೆ ಜೀವನ ಸಾಗಿಸಬೇಕಾಗುತ್ತದೆ.

೬.೩ ಶೈಕ್ಷಣಿಕ ಸಮಸ್ಯೆಗಳು

ಅನಕ್ಷರತೆಯೇ ದೊಡ್ಡಿ ನಿವಾಸಿಗಳ ಎಲ್ಲ ಸಮಸ್ಯೆಗಳಿಗೆ ಮೂಲ ಎಂದರೆ ತಪ್ಪಾಗಲಾರದು. ಇದರಿಂದ ಅಜ್ಞಾನ, ಮೂಢನಂಬಿಕೆ ದೌರ್ಜನ್ಯಕ್ಕೆ ಒಳಗಾಗುವುದು ಹೆಚ್ಚಾಗುತ್ತದೆ. ಸಾಕ್ಷರತೆಯ ಪ್ರಮಾಣ ದೊಡ್ಡಿ ಜನರಲ್ಲಿ ನಿಧಾನಗತಿಯಲ್ಲಿ ಹೆಚ್ಚುತ್ತಿದ್ದು ಇದೊಂದರಿಂದಲೇ ಅಭಿವೃದ್ಧಿಯನ್ನು ಸಾದಿಸಲು ಸಾಧ್ಯವಾಗುತ್ತಿಲ್ಲ. ೨೦೦೧ರ ಜನಗಣತಿಯ ಪ್ರಕಾರ ಬುಡಕಟ್ಟು ಸಾಕ್ಷರತೆ ದೇಶದ ಸರಾಸರಿ ಸಾಕ್ಷರತೆಯ ಪ್ರತಿಶತ ೧೦ಕ್ಕಿಂತಲೂ ಕಡಿಮೆಯಿದೆ. ಬಹುಸಂಖ್ಯಾತ ಆದಿವಾಸಿಗಳು ನಿರಕ್ಷರಿ ೭೨% ಹೆಚ್ಚು ಆದಿವಾಸಿಗಳು ನಿರಕ್ಷರಿಯಾಗಿದ್ದಾರೆ. "ಬಹುಸಂಖ್ಯಾತ ಆದಿವಾಸಿಗಳಿಗೆ ತಮ್ಮದೇ ಆದ ಲಿಪಿಯಿಲ್ಲ ನೆರೆಹೊರೆಯವರ ಭಾಷೆ ಸಂಪೂರ್ಣವಾಗಿ ಮಾತುನಾಡುವುದಿಲ್ಲ. ಅವರ ಮಾತೃ ಭಾಷೆಯಲ್ಲಿ ಶಿಕ್ಷಣಕೊಡಿಸುವುದು ದೂರದ ಮಾತು. ನಗರದಿಂದ ಶಿಕ್ಷಕರು ದೊಡ್ಡಿಗಳಿಗೆ ಹೋಗಿ ಶಿಕ್ಷಣ ನೀಡುವುದು ನಗರವಾಸಿಗಳಿಗೆ ತೊಂದರೆಯ ವಿಷಯ. ಆದಿವಾಸಿಗಳಿಗೆ ಶಿಕ್ಷಣ ಮಹತ್ವ ಅರಿಯದೇ ಇರುವುದರಿಂದ ಶಿಕ್ಷಣ ನೀಡುವುದು ಬಹಳ ತೊಂದರೆ , ÀUÀAiÀÄVzÉ'

ಅಧ್ಯಯನ ಪ್ರಕಾರ ರಾಯಚೂರು ಜಿಲ್ಲೆಯ ದೊಡ್ಡಿಗಳಲ್ಲಿ ವಾಸ ಮಾಡುತ್ತಿರುವ ಬೇಡ ಸಮುದಾಯದ ಸಾಕ್ಷರತೆ ತೀರ ಕಡಿಮೆ ಸ್ಥಾನದಲ್ಲಿದೆ. ದೇವದುರ್ಗಾ, ರಾಯಚೂರು, ಮಾನವಿ ತಾಲೂಕುಗಳಲ್ಲಿ ದೊಡ್ಡಿಯ ನಿವಾಸಿಗಳು ಇವರು ಮಾತನಾಡುವ ಭಾಷೆ ಕನ್ನಡ

ಮತ್ತು ತೆಲುಗು ಮಿಶ್ರವಾದ ಭಾಷೆಯಾಗಿದ್ದು ಆ ಭಾಷೆಗೆ ಸ್ವತಂತ್ರವಾದ ಲಿಪಿ ಇಲ್ಲ. ಇದರಿಂದ ಇವರಿಗೆ ಶಿಕ್ಷಣ ನೀಡಲು ಸಮರ್ಪಕ ಮಾಧ್ಯಮ ಭಾಷೆಯ ಕರೊತೆಯಿರುವುದು ಸ್ಪಷ್ಟ. ತಮಗಾಗಲಿ, ತಮ್ಮ ಮಕ್ಕಳಿಗೆ ಆಗಲಿ ವಿದ್ಯೆ ಅಗತ್ಯವಿದೆಯೆಂದು ಇವರು ಭಾವಿಸುವುದಿಲ್ಲ ಚಿಕ್ಕ ವಯಸ್ಸಿನಲ್ಲೇ ತಮ್ಮ ಮಕ್ಕಳನ್ನು ಅವರ ಇಚ್ಚೆಯ ವಿರುದ್ಧವಾಗಿ ದುಡಿಮೆಯಲ್ಲಿ ತೊಡಗಿಸಿ ಅನಕ್ಷರತೆ ಕಾರಣವಾಗಿದೆ.

ಬೇಡ ಸಮುದಾಯದ ರೀತಿಯಲ್ಲಿ ಭೌಗೋಳಿಕವಾಗಿ ಪ್ರತ್ಯೇಕವಾಗಿರುವ ಕುರುಬ, ಕಬ್ಬಲಿಗ ಸಮುದಾಯದ ದೊಡ್ಡಿಗಳಿಗೆ ಔಪಚಾರಿಕ ಶಿಕ್ಷಣ ನೀಡುವಂತಹ ಸಂಸ್ಥೆಗಳನ್ನು ಸ್ಥಾಪಿಸಲು ಸಾಧ್ಯವಾಗದಂತಹ ಪರಿಸ್ಥಿತಿ ಇದೆ. ಇತ್ತೀಚಿಗೆ ಕರ್ನಾಟಕ ಸರ್ಕಾರ ೧ ರಿಂದ ೫ನೇ ತರಗತಿಗಳವರೆಗೆ ಶಿಕ್ಷಣ ನೀಡಲು ಮೂರು ನಾಲ್ಕು ದೊಡ್ಡಿಗಳ ಮಧ್ಯಮ ಶಾಲೆಯನ್ನು ಒದಗಿಸಿಕೊಟ್ಟಿದೆ. ಹೀಗಿದ್ದರೂ ಶಿಕ್ಷಕರೇ ಮನೆ ಮನೆಗೆ ಹೋಗಿ ಮಕ್ಕಳನ್ನು ಶಾಲೆಗಳಿಗೆ ಕಳಿಸಲು ಸರ್ಕಾರ ಜಾಗೃತಿ ಕಾರ್ಯಕ್ರಮ ಮಾಡಬೇಕಾಗುತ್ತವೆ. ಕೆಲವು ದೊಡ್ಡಿಗಳಲ್ಲಿ ಅಂಗನವಾಡಿಗಳನ್ನು ಆರಂಭಿಸಲಾಗಿದೆ. ಹೆಣ್ಣುಮಕ್ಕಳನ್ನು ಹೈಸ್ಕೂಲ್ ಅಥವಾ ಕಾಲೇಜು ಶಿಕ್ಷಣ ಒದಗಿಸಲು ನಗರಗಳಿಗೆ ಪ್ರದೇಶಗಳಿಗೆ ಕಳುಹಿಸುವುದು ತುಂಬಾ ವಿರಳ. ಗಂಡು ಮಕ್ಕಳು ಕೂಡ ಒಂದು ನಿಶ್ಚಿತ ಹಂತದವರೆಗೂ ಓದದೇ ನಡುವೆಯೇ ಶಾಲೆ ಬಿಡುವುದು ಕಂಡುಬರುತ್ತದೆ. ಉನ್ನತ ಶಿಕ್ಷಣ ಎಂದರೆ ಪದವಿ, ಸ್ನಾತಕೋತ್ತರ ಅಧ್ಯಯನ ಮಾಡುವವರು ಸಂಖ್ಯೆ ಬೆರಳೆಣಿಕೆಯಷ್ಟಿದೆ ಎಂದರೆ ಈ ಸಮಸ್ಯೆಯ ಗಂಭೀರತೆಯ ಅರಿವು ಉಂಟಾಗುವುದು.

ಅನಕ್ಷರತೆಯೇ ಇವರ ಎಲ್ಲಾ ಸಮಸ್ಯೆಗಳ ಮೂಲಕ ಕಾರಣವಾಗಿದೆ ಎನ್ನಬಹುದು. ಅಜ್ಞಾನ ಮೂಢನಂಬಿಕೆ, ದೌರ್ಜನ್ಯವನ್ನು ವಿರೋಧಿಸದೇ ಇರುವುದು ಶೋಷಣೆಗೆ ಒಳಗಾಗುವುದು ಇವೆಲ್ಲಕ್ಕೂ ನಿರಕ್ಷರತೆಯೇ ಕಾರಣ. ಸರ್ಕಾರ ಅನೇಕ ಕ್ರಮಗಳನ್ನು ಕೈಗೊಂಡಿದ್ದರೂ ಇವರಲ್ಲಿ ಸಾಕ್ಷರತೆಯ ಪ್ರಮಾಣ ಅತಿ ನಿದಾನಗತಿಯಲ್ಲಿ ಹೆಚ್ಚಳವಾಗುತ್ತಿದ್ದು ಅವರ ಅಭಿವೃದ್ಧಿಯಲ್ಲಿ ಇದು ಕೂಡ ಒಂದು ಸಮಸ್ಯೆಯಾಗಿದೆ.

ಇತ್ತೀಚಿಗೆ ಸಾಮಾನ್ಯವಾಗಿ ಅಲ್ಪ ಸ್ವಲ್ಪ ದೊಡ್ಡಿಗಳಲ್ಲಿ ಅಂಗನವಾಡಿ ಹಾಗೂ ಕಿರಿಯ ಪ್ರಾಥಮಿಕ ಶಾಲೆಗಳು (೪೦%) ಇರುವುದರಿಂದ ಮತ್ತು ೨-೩ ಕಿ.ಮೀ. ಅಂತರದಲ್ಲಿ ಹಿರಿಯ ಪ್ರಾಥಮಿಕ ಶಾಲೆಯನ್ನು ಹೊಂದಿರುವುದರಿಂದ ಪ್ರಾಥಮಿಕ ಶಿಕ್ಷಣಮಟ್ಟ ೨೫%ರಷ್ಟು ಏರಿದೆಯನ್ನಬಹುದು. ಯಾವ ದೊಡ್ಡಿಗಳಲ್ಲಿಯೂ ಮಾಧ್ಯಮಿಕ ಶಾಲೆಗಳು ಇರುವುದಿಲ್ಲ. ಆದ್ದರಿಂದ ೭ನೇ ತರಗತಿವರೆಗೆ ಮಾತ್ರ ಮಕ್ಕಳನ್ನು ಶಾಲೆ ಕಳುಹಿಸುತ್ತಾರೆ. ಆದರೆ ಆನಂತರ ಹೈಸ್ಕೂಲ್ ಶಿಕ್ಷಣ ದೂರದ ಊರುಗಳಿಗೆ ಕಳುಹಿಸಲು ಇಷ್ಟಪಡುವುದಿಲ್ಲ. ಯಾಕೆಂದರೆ ಮಾಧ್ಯಮಿಕ ಶಿಕ್ಷಣದ ಸಲುವಾಗಿ ದೊಡ್ಡಿಯಿಂದ ದೂರ ಕಳುಹಿಸಲು ಯೋಚನೆ ಮಾಡುತ್ತಾರೆ. ನಡೆದುಕೊಂಡು ದಿನ ನಿತ್ಯ ಅಲೆದಾಟದಿಂದ ಬೇಸತ್ತು ಮಕ್ಕಳ ತಮ್ಮ ಶಿಕ್ಷಣ ಅರ್ಧಕ್ಕೆ ಬಿಟ್ಟು ಬಿಡುತ್ತಾರೆ. ಇನ್ನು ಹೆಣ್ಣು ಮಕ್ಕಳ ಶಿಕ್ಷಣ ವಿಷಯ

ಬಂದಾಗ ಸಾಂಪ್ರದಾಯಿಕ ಕಟ್ಟಳೆಗಳು ಅಡ್ಡಿ ಬರುತ್ತವೆ. ಪ್ರೌಢಾವಸ್ಥೆಯಲ್ಲಿ ಹೆಣ್ಣು ಪ್ರಕೃತಿ ದತ್ತವಾಗಿ ಋತುಮತಿಯಾದ ದಿನದಿಂದ ಲೈಂಗಿಕ ದೌರ್ಜನ್ಯದ ಭಯದಿಂದ ಶಾಲೆಗೆ ಹೋಗುವುದನ್ನು ಬಿಡಿಸಿ ಮದುವೆ ಮಾಡಲು ಸಿದ್ದರಾಗುತ್ತಾರೆ. ಗಂಡು ಮಕ್ಕಳು ಸಹಿತ ತಮ್ಮ ದೊಡ್ಡಿಯಲ್ಲಿದ್ದ ಪ್ರಾಥಮಿಕ ಶಿಕ್ಷಣದ ನಂತರ ಹೈಸ್ಕೂಲ್ ಶಿಕ್ಷಣಕ್ಕೆ ಬೇರೆ ಊರಿಗೆ ಹೋಗುವ ಬದಲು ಪಾಲಕರ ಜೊತೆಗೆ ಕೂಲಿಗೆ ಹೋಗುವುದೇ ಹೆಚ್ಚು. ಇಲ್ಲದಿದ್ದರೆ ಮನೆಯಲ್ಲಿ ಕುರಿ ಮೆಕೆಯನ್ನು ಕಾಯಲು ಹೋಗುತ್ತಾರೆ.

ಅಜ್ಞಾನ

ಕೋಟಿ ವಿದ್ಯೆಗಿಂತ ಮೇಟಿ ವಿದ್ಯೆ ಲೇಸು ಎಂದು ತಿಳಿದು ಶಿಕ್ಷಣ ಕಲಿತರೂ ದುಡಿಮೆ ಮಾಡಬೇಕು. ಶಿಕ್ಷಣ ಕಲಿಯದಿದ್ದರು ದುಡಮೆ ಮಾಡಬೇಕು ಎನ್ನುವ ಪಾಲಕರೂ ತಪ್ಪು ಗ್ರಹಿಕೆಯಿಂದ ಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಇದರಿಂದ ಅನಕ್ಷರಸ್ಥರಾದ ಇವರಿಗೆ ಸರ್ಕಾರ ಯಾವುದೇ ಮಹತ್ವದ ಯೋಜನೆ ಜಾರಿಗೆ ತಂದರು ಶಿಕ್ಷಣ ಕೊರತೆಯಿಂದ ಆ ಎಲ್ಲ ಯೋಜನೆಗಳ ಫಲದಿಂದ ವಂಚಿತರಾಗುತ್ತಿದ್ದಾರೆ.

ಶಿಕ್ಷಣ ಪಡೆಯುವಲ್ಲಿ ಎದುರಿಸುತ್ತಿರುವ ಸಮಸ್ಯೆಗಳು

ದೊಡ್ಡಿಗಳಲ್ಲಿನ ಜನರಲ್ಲಿ ಅಕ್ಷರಸ್ಥರ ಸಂಖ್ಯೆ ಕಡಿಮೆ ಎಂದು ಹೇಳಬಹುದು. ಅವರಲ್ಲಿನ ಅನಕ್ಷರತೆಯು ಅವರ ಅಭಿವೃದ್ಧಿಗೆ ಬಹಳ ತೊಡಕಾಗಿದೆ ಎಂದರೆ ತಪ್ಪಾಗಲಾರದು. ನಾವು ಯಾವ ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆ? ನಾವುಗಳು ಹೇಗೆ ನಾಗರೀಕ ಸಮಾಜದಿಂದ ಶೋಷಣೆಗೆ ಒಳಗಾಗುತ್ತಿದ್ದೇವೆ? ನಮ್ಮ ಅಭಿವೃದ್ಧಿಗಾಗಿ ಸರ್ಕಾರ ಯಾವ ಯಾವ ಕಾರ್ಯಕ್ರಮಗಳನ್ನು ಜಾರಿಗೊಳಿಸಿದೆ? ಆ ಕಾರ್ಯಕ್ರಮಗಳ ಪ್ರಯೋಜನವನ್ನು ಹೇಗೆ ಪಡೆಯಬೇಕು? ನಾವು ಸಾಮಾಜಿಕವಾಗಿ ಆರ್ಥಿಕವಾಗಿ ಹೇಗೆ ಅಭಿವೃದ್ಧಿಯಾಗಬೇಕು ಎಂಬುದರ ಬಗ್ಗೆ ಚಿಂತನೆ ಮಾಡಲು ಹಾಗೂ ತಮ್ಮ ನೆಲೆಗಳನ್ನು ಅಭಿವೃದ್ಧಿ ಪಡಿಸಿಕೊಳ್ಳಲು ಅವರಿಗೆ ಪ್ರಮುಖವಾಗಿ ಶಿಕ್ಷಣಬೇಕು. ಅವರು ಅಕ್ಷರಸ್ಥರಾಗಬೇಕು ಜಾಗತಿಕ ಸಮಾಜದಲ್ಲಿ ತಮ್ಮ ಅಸ್ಥಿತ್ವವನ್ನು ಉಳಿಸಿಕೊಳ್ಳಲು ದೊಡ್ಡಿಗಳಲ್ಲಿನ ಜನರಿಗೆ ಶಿಕ್ಷಣಬೇಕಾಗಿದೆ.

ನಮ್ಮ ದೇಶ ಮಾಹಿತಿ ತಂತ್ರಜ್ಞಾನದಲ್ಲಿ ಮುನ್ನುಗ್ಗುತ್ತಿದ್ದು ಜಾಗತೀಕರಣದೊಳಗೆ ಸ್ಪರ್ಧೆಗಳಿದ್ದರೂ ರಾಯಚೂರು ಜಿಲ್ಲೆಯ ಬಹುಪಾಲು ದೊಡ್ಡಿಗಳ ಜನರು ಇನ್ನು ಕುಗ್ರಾಮ ಬೆಟ್ಟಗುಡ್ಡ ನಿರ್ಜನ ಪ್ರದೇಶಗಳಲ್ಲಿ ದೊಡ್ಡಿಗಳನ್ನು ಮಾಡಿಕೊಂಡು ನೆಲೆಸಿದ್ದಾರೆ. ನಾಗರೀಕ ಸಮಾಜದಿಂದ ಉಳಿದಿದ್ದಾರೆ. ಅವರಿನ್ನು ಅವರೇ ಹೆಣೆದುಕೊಂಡಿರುವ ಅನೇಕ ಸಮಸ್ಯೆಗಳಲ್ಲಿ ಸಿಲುಕಿದ್ದಾರೆ. "ಅವರಲ್ಲಿ ಇನ್ನು ಬಾಲ್ಯವಿವಾಹ ಮೂಢನಂಬಿಕೆ ಹೆಣ್ಣು ಮಕ್ಕಳು ಹೊರಗಿನ ಪ್ರಪಂಚದ ಅರಿವು ಇಲ್ಲದಿರುವುದು ಬಹುಪತ್ನಿತ್ವ ಮುಂತಾದ ಸಂಪ್ರದಾಯ ಪದ್ಧತಿಗಳಿವೆ."[೫] ಇದಕ್ಕೆಲ್ಲಾ ಕಾರಣ ಅವರು ಅವಿದ್ಯಾವಂತರು, ಅವರು

ವಿದ್ಯಾವಂತರಾದರೆ ಮೇಲೆ ತಿಳಿಸಿದ ಎಲ್ಲಾ ಸಮಸ್ಯೆಗಳಿಂದ ಮುಕ್ತರಾಗಬಹುದು. ತಮಗೆ ಕೊಡುವ ಸೌಲಭ್ಯವನ್ನು ನ್ಯಾಯಯುತವಾಗಿ ಪಡೆದುಕೊಳ್ಳಲು ಅನುಕೂಲವಾಗುತ್ತದೆ. ತಮಗೆ ಅನ್ಯಾಯವನ್ನು ಸ್ವಲ್ಪವಾದರೂ ಸರಿಪಡಿಸಿಕೊಳ್ಳಬಹುದು.

ಸರ್ಕಾರ ಜನರ ಸರ್ವತೋಮುಖ ಅಭಿವೃದ್ಧಿಗೆ ಏನೆಲ್ಲಾ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದರೂ ಅವರುಗಳಲ್ಲಿ ಅವಿದ್ಯಾವಂತರ ಸಂಖ್ಯೆ ಹೆಚ್ಚಾಗಿರಲು ಮತ್ತು ಮಧ್ಯದಲ್ಲೇ ಶಾಲೆಗಳನ್ನು ಬಿಡಲು ಕಾರಣವೇನೆಂದು ಈ ಕೆಳಗಿನ ಅಂಶಗಳಿಂದ ತಿಳಿದುಕೊಳ್ಳಬಹುದು.

೧. ಇಂದಿಗೂ ಹಲವು ಸಮುದಾಯದವರು ದೊಡ್ಡಿಗಳಲ್ಲಿ ವಾಸಮಾಡುತ್ತಿದ್ದಾರೆ. ಇಂತಹ ಪ್ರದೇಶಗಳಲ್ಲಿ ಅನೇಕ ಕಡೆಗಳಲ್ಲಿ ಶಾಲಾ ವ್ಯವಸ್ಥೆಯನ್ನು ಇನ್ನು ಕಲ್ಪಿಸಿಲ್ಲ. ಕೆಲವು ದೊಡ್ಡಿಗಳಲ್ಲಿನ ಜನರು ಇಂದಿಗೂ ಶಾಲೆಗಳನ್ನು ನೋಡಿಲ್ಲ. ಶಿಕ್ಷಣದ ಬಗ್ಗೆ ಅಷ್ಟೊಂದು ತಿಳುವಳಿಕೆ ಇಲ್ಲ.

೨. ಚಿಕ್ಕ ಚಿಕ್ಕ ಗುಂಪುಗಳಾಗಿ ಹಳ್ಳಿಗಳಿಂದ ೨-೩ ಮೈಲೂ ದೂರದಲ್ಲಿ ಪ್ರತ್ಯೇಕವಾಗಿ ನೆಲೆಸಿರುವುದರಿಂದ ಇಂತಹ ದೊಡ್ಡಿ ಎಂದು ಕರೆಯುತ್ತಾರೆ. ಹಳ್ಳಿಗಳಿಂದ ಪ್ರತ್ಯೇಕವಾಗಿ ದೂರ ಉಳಿದಿರುವುದರಿಂದ ಈ ಜನರಿಗೆ ವಿದ್ಯಾಭ್ಯಾಸದ ಮಹತ್ವ ತೀರ ಕಡಿಮೆ ತಿಳುವಳಿಕೆ ಮತ್ತು ಅವರ ವಿದ್ಯಾಭ್ಯಾಸದ ಮಹತ್ವ ತೀರ ಕಡಿಮೆ. ಅವರ ವಿದ್ಯಾಭ್ಯಾಸಕ್ಕಾಗಿ ಸರ್ಕಾರ ಒದಗಿಸುತ್ತಿರುವ ಶೈಕ್ಷಣಿಕ ಸೌಲಭ್ಯಗಳ ಬಗ್ಗೆ ಯಾವುದೇ ಅರಿವಿಲ್ಲವೆಂದು ಹೇಳಬಹುದು.

ಮಕ್ಕಳು ಪಾಲಕರೊಂದಿಗೆ ಗೂಳೆ ಹೋಗುವುದರಿಂದ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಬಡತನದ ಬವಣೆಯಿಂದ ಬಳಲುತ್ತಿದ್ದವರ ಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ.

೩. ದೊಡ್ಡಿಗಳಲ್ಲಿನ ಜನರ ಬಡತನವೂ ಸಹ ಶಿಕ್ಷಣ ಪಡೆಯುವುದಕ್ಕೆ ಮಾರಕವಾಗಿದೆ. ಬಡತನದ ಕಾರಣದಿಂದಾಗಿ ಈ ಜನರು ತಮ್ಮ ಮಕ್ಕಳನ್ನು ಶಾಲೆಗಳಿಗೆ ಕಳುಹಿಸುವುದರ ಬದಲು ತಮ್ಮ ಜೊತೆ ಕೂಲಿ ಅಥವಾ ತಮ್ಮ ತಮ್ಮ ಹೊಲದ ಕೆಲಸಕ್ಕೆ ಕರೆದುಕೊಂಡು ಹೋಗುತ್ತಾರೆ. ವಿದ್ಯಾಭ್ಯಾಸದ ಬದಲು ತಮ್ಮ ಕುಲ ಕಸುಬನ್ನು ಕಲಿಸಲು ಪ್ರೋತ್ಸಾಹಿಸುತ್ತಾರೆ. ಆದರ ಮೂಲಕ ಜೀವನ ಸಾಗಿಸಲು ಮುಂದಾಗಿದ್ದಾರೆ.

೪. ಭಾಷಾ ಮಾಧ್ಯಮವು ಕೂಡ ದೊಡ್ಡಿಗಳಲ್ಲಿನ ಜನರಿಗೆ ಶಿಕ್ಷಣ ಪಡೆಯುವಲ್ಲಿ ಬಹಳ ತೊಡಕಾಗಿದೆ. ದೇವದುರ್ಗಾ ತಾಲ್ಲೂಕಿನ ಬಹುತೇಕ ಬೇಡ ಸಮುದಾಯದ ದೊಡ್ಡಿಗಳಲ್ಲಿ ಕನ್ನಡ ತೆಲುಗು ಮಿಶ್ರಿತ ಮಾತು ಆಡುವುದರಿಂದ ಪ್ರಾಥಮಿಕ ಶಿಕ್ಷಣದಲ್ಲಿ ಅಲ್ಪ ಸ್ವಲ್ಪ ಸಮಸ್ಯೆಯಾಗುತ್ತದೆ. ಇದರಿಂದ ಅನೇಕ ಮಕ್ಕಳು ಅರ್ಧದಲ್ಲಿ ಶಾಲೆಯನ್ನು ಬಿಟ್ಟಿದ್ದಾರೆ. ಇದು ಕೂಡ ಸಮಸ್ಯೆಯಾಗಿದೆ.

೫. ಯಾವುದೇ ಒಬ್ಬ ವ್ಯಕ್ತಿ ವಿದ್ಯಾವಂತನಾಗಲು ಆ ವ್ಯಕ್ತಿಗೆ ವಿದ್ಯೆದಾನ ಮಾಡಿದ ಶಿಕ್ಷಕನ ಪಾತ್ರ ಪ್ರಮುಖವಾದುದು ಶಿಕ್ಷಣದ ಯಶಸ್ಸು ಕೂಡ ಶಿಕ್ಷಕರ ಗುಣಮಟ್ಟವನ್ನು ಅವಲಂಬಿಸಿರುತ್ತದೆ. ದೊಡ್ಡಿಗಳ ಜನರಿಗೆ ವಿದ್ಯಾಭ್ಯಾಸವನ್ನು ನೀಡಲು ಬರುವ ಶಿಕ್ಷಕರು ಹೊರಗಿನವರಾಗಿದ್ದಾರೆ. ಬೇರೆ ಬೇರೆ ಜಿಲ್ಲೆಗಳಿಂದ ನಗರ ಪ್ರದೇಶದಿಂದ ಬಂದ ಉಪಾಧ್ಯಾಯರಾಗಿದ್ದಾರೆ. ಇವರುಗಳಿಗೆ ದೊಡ್ಡಿಗಳ ಪರಿಸ್ಥಿತಿ ಜನರ ಜೀವನ ಸ್ಥಿತಿಗತಿ ಬಗ್ಗೆ ತಿಳುವಳಿಕೆ ಇರುವುದಿಲ್ಲ ಹಾಗೆಯೇ ಉಪಾಧ್ಯಾಯ ಮತ್ತು ದೊಡ್ಡಿಗಳಲ್ಲಿನ ಜನರು ಒಬ್ಬರಿಗೊಬ್ಬರು ಪರಿಚಿತರಲ್ಲದವರಾದುದರಿಂದ ಅಪರಿಚಿತರಂತೆ ವರ್ತಿಸುತ್ತಾರೆ. ಉದ್ಯೋಗ ಸಿಕ್ಕ ಅನಿವಾರ್ಯಕ್ಕಾಗಿ ಇಲ್ಲಿ ಬರುವವರು ಈ ಸ್ಥಳದಿಂದ ಕುಂಟು ನೆಪಾ ಹೇಳಿ ಇಲ್ಲಿಂದ ವರ್ಗಾವಣೆ ಮಾಡಿಸಿಕೊಳ್ಳುತ್ತಾರೆ. ಮೊದಲೇ ಶಾಲೆ ಇಲ್ಲವೆಂದ ಕಡೆ ಸರ್ಕಾರ ಶಾಲೆ ನಿರ್ಮಿಸಿದೆ ಆದರೆ ಇಲ್ಲಿಗೆ ಬರುವ ಶಿಕ್ಷಕರು ಕಡಿಮೆ ಬಂದರೂ ಎರಡು ಮೂರು ವರ್ಷಗಳಲ್ಲಿ ವರ್ಗಾವಣೆ ಇಲ್ಲವೇ ಕೆಲವು ತಿಂಗಳವರೆಗೆ ಹೆಚ್ಚುವರಿ ಕಾರ್ಯಬಾರದ ಮೇಲೆ ಬೇರೆ ಹಳ್ಳಿಗಳಿಗೆ ನಿಯುಕ್ತಗೊಳಿಸಿಕೊಳ್ಳುತ್ತಾರೆ. ಇದರಿಂದ ಶಾಲೆ ಇದ್ದು ಶಿಕ್ಷಕರು ಇರುವುದಿಲ್ಲ. ಶಿಕ್ಷಕರು ಇದ್ದ ಕಡೆ ಶಾಲೆ ಇರುವುದಿಲ್ಲ ಇಂತಹ ಸಮಸ್ಯೆ ಮಕ್ಕಳ ವಿದ್ಯಾಭ್ಯಾಸ ಕುಂಠಿತಗೊಳ್ಳಲು ಕಾರಣವಾಗಿದೆ.

೬. ದೊಡ್ಡಿಗಳ ಮಕ್ಕಳ ತಂದೆ-ತಾಯಿಗಳಿಗೆ ಶಿಕ್ಷಣದ ಗೊತ್ತಿಲ್ಲದರಿಂದ ಅವರು ತಮ್ಮ ಮಕ್ಕಳನ್ನು ವಿದ್ಯಾವಂತರಾಗಿ ಎಂದು ಪ್ರೋತ್ಸಾಹಿಸುವುದಿಲ್ಲ. ಮನೆಯಲ್ಲಿಯೂ ವಿದ್ಯಾಭ್ಯಾಸ ಕಲಿಯುವ ಪೂರಕ ವಾತಾವರಣ ಇಲ್ಲದಿರುವುದರಿಂದ ಮಕ್ಕಳಲ್ಲಿ ಸಹಜವಾಗಿ ವಿದ್ಯಾಭ್ಯಾಸದ ಕಡೆ ಆಸಕ್ತಿ ಇರುವುದಿಲ್ಲ. ಬರೀ ಸಂಬಳಕ್ಕಾಗಿ ಶಿಕ್ಷಕರಾಗಿರುವ ಶಿಕ್ಷಕರು ಹೆಚ್ಚಿನ ಆಸಕ್ತಿವಹಿಸಿ ಆ ಮಕ್ಕಳನ್ನು ವಿದ್ಯಾವಂತರನ್ನಾಗಿಸಲು ಮುಂದೆ ಬರುವುದಿಲ್ಲ. ತಿಂಗಳಲ್ಲಿ ಹಲವು ದಿನಗಳು ಶಿಕ್ಷಕರು ಶಾಲೆಗೆ ಗೈರು ಹಾಜರಾಗಿರುತ್ತಾರೆ. ಕೆಲವು ಶಿಕ್ಷಕರು ೧೦ ಗಂಟೆ ಶಾಲೆಗೆ ಹೋಗಬೇಕಾದ ಸಮಯಕ್ಕೆ ಸರಿಯಾಗಿ ಹೋಗದೇ ವಿಳಂಬವಾಗಿ ಬೇಗ ಶಾಲೆಯಿಂದ ಮರಳಿ ಪಟ್ಟಣಕ್ಕೆ ಬರುತ್ತಾರೆ. ಒಬ್ಬ ಶಿಕ್ಷಕರಿರುವ ಕಡೆ ಆ ಶಿಕ್ಷಕ ಶಾಲೆ ಕಡೆ ಹೋದರೆ ಶಾಲೆ ಇರುತ್ತದೆ. ಆ ಒಬ್ಬ ಶಿಕ್ಷಕ ರಜೆ ಹಾಕಿದರೆ ಇಡೀ ಶಾಲೆಗೆ ರಜೆ ನೀಡಿದಂತೆ ಇದಕ್ಕಿಂತ ಹೆಚ್ಚಾಗಿ ನಾಗರೀಕ ಸಮಾಜ ಶಿಕ್ಷಕರುಗಳು ಹಳ್ಳಿಗಳು ಬಿಟ್ಟು ಪ್ರತ್ಯೇಕ ಅಡವಿಯಲ್ಲಿ ದೊಡ್ಡಿಗಳ ಶಾಲೆಗೆ ಶಿಕ್ಷಕರಾಗಲು ಇಷ್ಟಪಡುವುದಿಲ್ಲ ಅವರು ಹೆಚ್ಚಾಗಿ ಪಟ್ಟಣ ಪ್ರದೇಶಗಳಲ್ಲಿ ನೆಲೆಸಲು ಇಷ್ಟಪಡುತ್ತಾರೆ. ತಮ್ಮ ವಿದ್ಯಾರ್ಥಿಗಳ ಓದಿನ ಬಗ್ಗೆ ಯಾವುದೇ ರೀತಿ ಕಾಳಜಿ ವಹಿಸುವುದಿಲ್ಲ.

೭. ದೊಡ್ಡಿಗಳಲ್ಲಿ ವಾಸಿಸುತ್ತಿರುವ ಜನರಿಗೆ ಯಾವುದೇ ಸೌಲಭ್ಯ ದೊರೆಯುತ್ತಿಲ್ಲವೆಂದು ಹೇಳಬಹುದು. ಅಲ್ಪ ಸ್ವಲ್ಪ ದೊಡ್ಡಿಗಳಲ್ಲಿ ಶಾಲೆ ನಿರ್ಮಿಸಿದ್ದಾರೆ ಅಲ್ಲಿ ಎಷ್ಟು ಶಿಕ್ಷಕರು

ಇದ್ದಾರೆ. ಎಷ್ಟು ಮಕ್ಕಳು ಇದ್ದಾರೆ ಶಿಕ್ಷಣದ ಪ್ರಗತಿ ಬಗ್ಗೆ ಯಾವುದೆ ವರದಿ ಇಲ್ಲದೆ ಕೇವಲ ಪ್ರತಿ ವರ್ಷ ಬಂದ ವಿದ್ಯಾರ್ಥಿಗಳಿಗೆ ಪಾಠ ಮಾಡದೆ ಪಾಸು ಮಾಡುವ ಶಿಕ್ಷಕರು ಇದ್ದಾರೆ. ಮಕ್ಕಳ ಭವಿಷ್ಯ ಅತಂತ್ರವಾಗಿದೆ. ಸರ್ಕಾರ ಕೇವಲ ಶಾಲೆ ನಿರ್ಮಿಸಿ ಶಿಕ್ಷಕರ ನೇಮಕಾತಿ ಮಾಡಿದರೆ ಸಾಲದು ಶಾಲೆ ಮತ್ತು ಶಿಕ್ಷಕರ ಬಗ್ಗೆ ಸರಿಯಾದ ನಿಗವಹಿಸಿದ್ದರೆ ಮಾತ್ರ ಶಿಕ್ಷಣ ಕಾರ್ಯಕ್ರಮಗಳ ಯಶಸ್ವಿಯಾಗುತ್ತವೆ. ಇಲ್ಲದಿದ್ದರೆ ಸರ್ಕಾರ ಸಾಕಷ್ಟೂ ಹಣ ಖರ್ಚು ಮಾಡಿದರೂ ಅದರ ಅನುಷ್ಠಾನದಲ್ಲಿ ವಿಫಲವಾಗುತ್ತದೆ. ಇದರಿಂದ ಸುಂದರ ಭವಿಷ್ಯ ನಿರ್ಮಿಸಿಕೊಳ್ಳಬೇಕಾದ ಮಕ್ಕಳ ಭವಿಷ್ಯ ಕುಗ್ಗಿಹೋಗುತ್ತದೆ.

೬.೪ ರಾಜಕೀಯ ಸಮಸ್ಯೆಗಳು

ದೊಡ್ಡಿಯಲ್ಲಿ ವಾಸಿಸುವ ಸಮುದಾಯದವರು ರಾಜಕೀಯದಲ್ಲಿ ಪಾಲ್ಗೊಳ್ಳುವಿಕೆಯ ಕೊರತೆಯಿಂದಲೋ ಅಥವಾ ಸರ್ಕಾರ ದೊಡ್ಡಿಯಲ್ಲಿ ಯಾವ ಯಾವ ಸಮುದಾಯ ನೆಲೆಸಿದೆ ಸವಲತ್ತು ಮತ್ತು ಸಮಸ್ಯೆಗಳ ಕುರಿತು ಗುರುತಿಸಲು ಸಾಧ್ಯವಾಗದೇ ಇರುವುದರಿಂದಲೋ ಅಥವಾ ಇಲ್ಲಿನ ಜನರು ತಮ್ಮ ಸಮಸ್ಯೆಗಳನ್ನು ಸರಿಯಾಗಿ ನಾಯಕತ್ವ ಹಾಗೂ ವೇದಿಕೆಯ ಕೊರತೆಯಿಂದಲೋ ಅನೇಕ ದೊಡ್ಡಿಗಳು ಸರ್ಕಾರದಿಂದ ಸ್ಥಾನಮಾನ ಪಡೆಯುವುದೇ ಇಲ್ಲ. ಭಾರತದಾದ್ಯಂತ ಇಂತಹ ಅನೇಕ ಉದಾಹರಣೆಗಳನ್ನು ಕಾಣಬಹುದು. ಸ್ಥಳೀಯ ಸಂಸ್ಥೆ ಚುನಾವಣೆ ಸಂದರ್ಭದಲ್ಲಿ ಮೀಸಲಾತಿ ನೀತಿ ರೂಪಿಸುವ ಹಳ್ಳಿಗಳಿಂದ ಬೇರೆಯಾಗಿ ಉಳಿದಿರುವ ದೊಡ್ಡಿಗಳು ಯಾವುವು ಅವು ಎಷ್ಟು ಇವೆ. ಅವುಗಳಿಗೆ ಯಾವರೀತಿ ಮೀಸಲಾತಿ ಕಲ್ಪಿಸಿದರೆ ಅನುಕೂಲವಾಗುತ್ತದೆ ಎಂಬ ಅರಿವಿನ ಕೊರತೆಯಿಂದಾಗಿ ರಾಯಚೂರು ಜಿಲ್ಲೆಯ ಗ್ರಾಮ ಪಂಚಾಯತ್ ಚುನಾವಣೆಯ ಮೀಸಲಾತಿ ನೀತಿ ಮತ್ತು ಆಯೋಗಗಳ ಶಿಫಾರಸ್ಸುಗಳು ದೊಡ್ಡಿಯಲ್ಲಿ ವಾಸಿಸುವವರಿಗೆ ಅವಕಾಶ ಒದಗಿಸಲು ಸಾಧ್ಯವಾಗುವುದಿಲ್ಲ. ಇಂಥ ಸಂದರ್ಭದಲ್ಲಿ ದೊಡ್ಡಿಗಳು ಯಾವ ಹಳ್ಳಿಗೆ ಸಂಬಂಧಪಟ್ಟಿರುತ್ತದೆ. ಆ ಹಳ್ಳಿಗಳಿಗೆ ಸೇರಿಸಿ ವಾರ್ಡ್‌ಗಳನ್ನು ಮಾಡಿರುತ್ತಾರೆ. ಇದರಿಂದ ಅನೇಕ ದೊಡ್ಡಿಗಳಿಗೆ ಯಾವ ರೀತಿಯ ರಾಜಕೀಯ ಸ್ಥಾನವು ಇಲ್ಲ. ಮೂಲಭೂತ ಅವಶ್ಯಕತೆಗಳು ಇಲ್ಲದಂತಾಗಿವೆ. ದೊಡ್ಡಿಯಲ್ಲಿ ವಾಸಿಸುವವರಿಗೆ ಯಾವುದೇ ಅನುಕೂಲಬೇಕಾದರೆ ಹಳ್ಳಿಯ ಸ್ಥಳೀಯ ಜನಪ್ರತಿನಿಧಿಯನ್ನು ಕೇಳಿದರೆ ಬರುವ ಸೌಲಭ್ಯಗಳು ನಮ್ಮ ಹಳ್ಳಿಗಳಿಗೆ ಸಾಕಾಗುತ್ತಿಲ್ಲ. ಇನ್ನು ನಿಮ್ಮ ದೊಡ್ಡಿಗಳಿಗೆ ಎಲ್ಲಿಂದ ಅನುದಾನ ತರಬೇಕು ಎಂದು ದೊಡ್ಡಿಯ ಜನರಿಗೆ ಜನಪ್ರತಿನಿಧಿಗಳು ಪ್ರಶ್ನೆ ಹಾಕುತ್ತಾರೆ. ಇದು ಒಂದು ದೊಡ್ಡಿಯ ಸಮಸ್ಯೆಯಾಗಿಲ್ಲ ಇಡೀ ಜಿಲ್ಲೆಯಾದ್ಯಂತ ಇರುವ ದೊಡ್ಡಿಗಳಲ್ಲಿ ವಾಸಿಸುವವರ ಯಕ್ಷ ಪ್ರಶ್ನೆಯಾಗಿ ಕಾಡುತ್ತಿದೆ. ಇಂಥ ಸಂದರ್ಭದಲ್ಲಿ ಆರ್ಥಿಕವಾಗಿ ಸದೃಢವಾಗಿರುವ ಹಾಗೂ ರಾಜಕೀಯ ಹಿಂಬಾಲಕರಿಗೆ ದೊಡ್ಡಿಗೆ ಬರುವ ಎಲ್ಲ ಸೌಲಭ್ಯಗಳನ್ನು ಪಡೆಯುತ್ತಿದ್ದಾರೆ. ನಿಜವಾಗಿಯೂ ಕಡು

ಬಡವರಾಗಿದ್ದು ಹಳ್ಳಿಗಳಿಂದ ದೂರವಿರುವ ಎಷ್ಟೋ ದೊಡ್ಡಿಗಳು ಯಾವುದೇ ಆಶ್ರಯ ಮನೆಗಳು ಇಲ್ಲದೇ ಇಂದಿಗೂ ಗುಡಿಸಲುಗಳಲ್ಲಿ ವಾಸಿಸುತ್ತಾ ಸರ್ಕಾರದ ಯಾವುದೇ ಪ್ರಯೋಜನ ಪಡೆಯದೆ ಎಲ್ಲ ಅವಕಾಶಗಳಿಂದ ವಂಚಿತವಾಗಿದ್ದಾರೆ ಎಂದರೆ ತಪ್ಪಿಲ್ಲ.

ಕರ್ನಾಟಕದ ವಿಧಾನಸಭೆ ಸದಸ್ಯರ ೧೨೪ ಸಂಖ್ಯೆಯಾದರೆ ಅದರಲ್ಲಿ ಪರಿಶಿಷ್ಟ ಪಂಗಡದವರ ೧೫ ಕ್ಷೇತ್ರಗಳಾಗಿವೆ. ಅವುಗಳಲ್ಲಿ ವಿಶೇಷವಾಗಿ ರಾಯಚೂರು ಜಿಲ್ಲೆಯಲ್ಲಿ ೪ ಜನ ಪರಿಶಿಷ್ಟ ಪಂಗಡದ ವಿಧಾನಸಭಾ ಸದಸ್ಯರನ್ನು ಹೊಂದಿದೆ. ಆದರೆ ಏನು ಪ್ರಯೋಜನ ಎಂದು ಇಲ್ಲಿನ ಜನರ ಗೋಳು ಕೇಳುತ್ತಿಲ್ಲ ಎಂದು ದೊಡ್ಡಿಯ ಜನರ ಅಭಿಪ್ರಾಯವಾಗಿದ್ದು ವಿಧಾನಸಭೆಯ ಸದಸ್ಯರು, ಲೋಕಸಭೆಯ ಸದಸ್ಯರು ಯಾವತ್ತು ಇಲ್ಲಿಗೆ ಬಂದು ಮತ ಕೇಳಿಲ್ಲ ಅಂದ ಮೇಲೆ ಇಲ್ಲಿನ ಕಷ್ಟ ಅವರಿಗೆ ಏನು ಗೊತ್ತು ಎಂದು ಸ್ಥಳೀಯ ತಳವಾರ ದೊಡ್ಡಿಯ ಮುದಕಪ್ಪ ಹೇಳುತ್ತಾನೆ.

ದೀಪದ ಕೆಳಗೆ ಕತ್ತಲು ಎನ್ನುವಂತೆ ೪ ಜನ ಪರಿಶಿಷ್ಟ ಪಂಗಡದ ವಿಧಾನಸಭೆಯ ಸದಸ್ಯರನ್ನು ಹೊಂದಿದರು ಕೇವಲ ಮತದ ಆಸೆ ಆಧಿಕಾರದ ದಾಹದಿಂದ ಮುಂದುವರೆದ ಬಲಿಷ್ಟ ಸಮುದಾಯಗಳ ಕೈಗೊಂಬೆಗಳಾಗಿ ಕೆಲಸ ಮಾಡುತ್ತಿದ್ದಾರೆ. ಇದರಿಂದ ಡಾ.ಬಿ.ಆರ್.ಅಂಬೇಡಕ್ಕರ್ ಅವರು ರಾಜಕೀಯ ಮೀಸಲಾತಿ ಕಲ್ಪಿಸುವುದರ ಮುಖಾಂತರ ಆ ಸಮುದಾಯಗಳ ಬೆಳವಣಿಗೆಯಾಗುತ್ತವೆ ಎಂದು ತಿಳಿದು ರಾಜಕೀಯ ಮೀಸಲಾತಿ ಕಲ್ಪಿಸಿದರೆ ಸಂವಿಧಾನದ ಆಶಯಕ್ಕೆ ದಕ್ಕೆ ತರುವಂತೆ ಶೋಷಿತರ ಪರವಾಗಿ ನಿಲ್ಲಬೇಕಾಗಿದ್ದ ಜನಪ್ರತಿನಿಧಿಗಳು ಅಧಿಕಾರದ ದುರಾಸೆಯಿಂದ ಬಲಿಷ್ಟ ಸಮುದಾಯಗಳ ಕೈಯಲ್ಲಿ ಕೆಲಸ ಮಾಡುವ ಗುಲಾಮರಾಗುತ್ತಿದ್ದಾರೆ. ಇದರಿಂದ ರಾಜಕೀಯ ಸೌಲಭ್ಯ ಪಡೆದಿದ್ದರೆ ಕೇವಲ ಒಬ್ಬ ವ್ಯಕ್ತಿಯಾದರೆ ಮೀಸಲಾತಿ ಸೌಲಭ್ಯ ಪಡೆದ ವ್ಯಕ್ತಿ ಎಲ್ಲರಿಗೂ ಅವಕಾಶ ಒದಗಿಸುವುದರಲ್ಲಿ ವಿಫಲ. ಈ ರೀತಿಯಾಗಿ ಜನಪ್ರತಿನಿಧಿಗಳು ತಮಗೆ ಇರುವ ಅಧಿಕಾರವನ್ನು ಸರಿಯಾದ ರೀತಿಯಲ್ಲಿ ಬಳಕೆ ಮಾಡದೆ ಕೆಲವೆ ಕೆಲವು ಜನರ ಉದ್ದಾರಕ್ಕಾಗಿ ಮೀಸಲಾತಿಯಲ್ಲಿ ಆಯ್ಕೆಯಾಗಿ ಮೀಸಲು ಕ್ಷೇತ್ರದ ಜನರಿಗೆ ಸೌಲಭ್ಯ ಒದಗಿಸುವುದರಲ್ಲಿ ವಿಫಲವಾಗಿ ಇಡೀ ಮೀಸಲಾತಿ ನೀತಿಯನ್ನು ತಲೆಕೆಳಗೆ ಆಗುವಂತೆ ಮಾಡುತ್ತಿದ್ದಾರೆ. ಇದರಿಂದ ಪರಿಶಿಷ್ಟ ಪಂಗಡದವರ ಮತ್ತು ಹಿಂದುಳಿದವರ ಬದುಕು ಒಂದು ಕಡೆಯಾದರೆ ಹಳ್ಳಿಯಿಂದ ಪ್ರತ್ಯೇಕವಾಗಿ ನೆಲೆಸಿರುವವರ ಬದುಕು ನಿರೀಕ್ಷಿತ ಪ್ರಮಾಣದಲ್ಲಿ ಸುಧಾರಣೆಯಾಗದಿರುವುದು ವಿಷಾದನೀಯ ಸಂಗತಿ ಆಗಿದೆ. ಇದರ ಒಂದು ಪ್ರಮುಖ ಕಾರಣವೆಂದರೆ ದೊಡ್ಡಿಗಳ ನಿವಾಸಿಗಳಿಗೆ ಯಾವುದೇ ವೈಭವದ ಬದುಕು ಬೇಕಾಗಿಲ್ಲ. ಇವರಿಗೆ ನಾಗರೀಕ ಸಂಪರ್ಕ ಮೂಲಭೂತ ಅವಶ್ಯಕತೆ ಒದಗಿಸಿದರೆ ಸಾಕು ಎಂದು ಹೇಳುವರು. ಅವರ ಬೇಡಿಕೆ ಸಣ್ಣ ಬೇಡಿಕೆಗಳ ಇಂದಿಗೂ ಪೂರೈಸಲು ಅಸಾಧ್ಯವಾಗಿದೆ. ಇದರೊಂದಿಗೆ ಸರ್ಕಾರಿ ಅಧಿಕಾರಿಗಳ ದಿವ್ಯ ನಿರ್ಲಕ್ಷ್ಯ, ಲಂಚಕೋರತನ, ರಾಜಕೀಯ ನಾಯಕರ ಪೊಳ್ಳು ಆಶ್ವಾಸನೆಗಳು ಅಲ್ಲದೆ ದೊಡ್ಡಿಗಳ ಕುರಿತು ವಸ್ತುನಿಷ್ಠ ಅಧ್ಯಯನಗಳ ಕೊರತೆ ಈ ಜನರ ಪ್ರಗತಿಗೆ ಪ್ರಮುಖ ಅಡೆತಡೆಗಳಾಗಿವೆ.

ನೈಸರ್ಗಿಕ ಸಮಸ್ಯೆಗಳು

ಕಡು ಬಡತನದಲ್ಲಿಯೇ ನಿಸರ್ಗದ ಮಡಿಲಲ್ಲಿ ಬದುಕುತ್ತಿರುವ ಬೇಡ, ಕುರುಬ, ಕಬ್ಬಲಿಗ ಸಮುದಾಯಗಳು ನೈಸರ್ಗಿಕ ಸಮಸ್ಯೆಗಳಿಂದ ಮುಕ್ತರಾಗಿಲ್ಲ. ಉದಾಹರಣೆ ಭತ್ತದ ಗದ್ದೆಗೆ ಅಥವಾ ಶೇಂಗಾದ ಬೆಳೆಗಳಿಗೆ ರೋಗ ಬಿದ್ದು ಬೆಳೆ ನಾಶ ಆದರೆ ಕೂಲಿ ಕೆಲಸಕ್ಕೆ ಹೋದಾಗ ವಿಷಪೂರಿತ ಹಾವುಗಳ ಕಡಿತ, ದನಕರು, ಕುರಿಗಳಿಗೆ ರೋಗ ಬಂದು ಸತ್ತರೆ ಆರ್ಥಿಕವಾಗಿ ನಷ್ಟ ಅನುಭವಿಸಬೇಕಾಗುತ್ತದೆ. ವಿಚಿತ್ರವೆಂದರೆ ೨೧ನೇ ಶತಮಾನದಲ್ಲಿಯೂ ಹಲ್ಲು ನೋವಿಗೆ, ಹಾವು ಕಡಿತಕ್ಕೆ, ಜ್ವರಕ್ಕೆ, ನಾಯಿ ಕಡಿತಕ್ಕೆ ಮನೆಯಲ್ಲಿಯೇ ಇರುವ ಅಥವಾ ಅಕ್ಕ ಪಕ್ಕದವರು ಗಿಡ ಮೂಲಿಕೆ ಔಷಧಿಯನ್ನು ನೀಡುತ್ತಾರೆ. ಆದರೆ ಗಂಭೀರ ಸ್ಥಿತಿಯಲ್ಲಿ ಇದು ಪ್ರಯೋಜನಕಾರಿ ಆಗದು, ಇದಲ್ಲದೆ ಶುದ್ಧ ಆಹಾರ ಕೊರತೆ ಕುಡಿಯುವ ನೀರಿನ ಕೊರತೆ, ಅನಾರೋಗ್ಯಕರ ಹವಾಗುಣ, ಅರಣ್ಯ ಬೆಟ್ಟಗುಡ್ಡ ಹಾಗೂ ಕೊರಕಲು ಪ್ರದೇಶದಂತಹ ದುರ್ಗಮ ವಾತಾವರಣ ಇಂತಹ ಹಲವಾರು ರೀತಿಯ ನೈಸರ್ಗಿಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಕುರುಚಲು ಗುಡ್ಡ ವಿಪರೀತ ಬಿಸಿಲಿನ ತಾಪಮಾನ ಕಂಡುಬರುತ್ತದೆ. ರಾಯಚೂರು ಜಿಲ್ಲೆಯಲ್ಲಿ ಮಳೆ ಬಂದರೆ ಅತಿವೃಷ್ಟಿ ಬರದಿದ್ದರೆ ಅನಾವೃಷ್ಟಿಯೆಂದು ಇಲ್ಲಿನ ರೈತರ ಗೋಳು ಇವುಗಳಿಂದ ತಕ್ಕ ಮಟ್ಟಿಗೆ ಬೆಳೆಯನ್ನು ಬೆಳೆದರೆ ಬೆಳೆದ ಫಸಲಿಗೆ ಸರಿಯಾದ ಬೆಲೆ ಸಿಗದೆ ಆತಾಶನಾಗುತ್ತಾರೆ. ಒಟ್ಟಾರೆಯಾಗಿ ಈ ಭಾಗದಲ್ಲಿ ರೈತರ ಜೊತೆ ಮಳೆ ಜೂಜಾಟ ಆಡುತ್ತದೆ ಎಂದು ಹೇಳಿದರೆ ತಪ್ಪಾಗಲಾರದು.

ಆರೋಗ್ಯ ಹಾಗೂ ನೈರ್ಮಲ್ಯದ ಸಮಸ್ಯೆಗಳು

“ಅಡವಿಯಲ್ಲಿನ ಜನರು ಸರ್ವ ಚೇತನವಾದಿಗಳಾದುದರಿಂದ ಅನಾರೋಗ್ಯದ ನಿವಾರಣೆಗೆ ದೇವರ ಮೊರೆ ಹೋಗುತ್ತಾರೆ.”[೬] ಆದುದರಿಂದ ಇವರು ಅನೇಕ ರೋಗ-ರುಜಿನಗಳಿಂದ ಬಳಲುತ್ತಾರೆ. ಆರೋಗ್ಯಕ್ಕೆ ಸಂಬಂಧಪಟ್ಟ ಅರಿವಿನ ಕೊರತೆಯಿಂದಾಗಿ ಅನಾರೋಗ್ಯ ಸಮಸ್ಯೆ ಇವರಲ್ಲಿ ಗಂಭೀರ ಸಮಸ್ಯೆಯಾಗಿದೆ. ಕೆಲವು ದೊಡ್ಡಿಗಳಲ್ಲಿ ಇರುವ ಮಹಿಳೆಯರಲ್ಲಿ ಹೆರಿಗೆಯ ಸಮಯದಲ್ಲಿ ತಾಯಿ ಮತ್ತು ಮಗು ಸಾವನ್ನಪ್ಪುವ ಪ್ರಸಂಗಗಳೂ ಹೆಚ್ಚಾಗಿವೆ. ಇದಕ್ಕೆ ಇವರಲ್ಲಿನ ಮೂಢನಂಬಿಕೆಗಳೇ ಕಾರಣ. ಅನಾರೋಗ್ಯ ವಾತಾವರಣದಿಂದಾಗಿ ದೊಡ್ಡಿಯ ಜನರು ಮಲೇರಿಯಾ ಜ್ವರ ಅಪೌಷ್ಟಿಕತೆ, ಸಾಂಕ್ರಾಮಿಕ ರೋಗ ಇತರೆ ರೋಗಗಳಿಂದ ಬಳಲುತ್ತಿರುವುದು ಕಂಡುಬರುತ್ತದೆ.

ಬೇಡ, ಕುರುಬ, ಕಬ್ಬಲಿಗ ಸಮುದಾಯಗಳು ವಾಸ ಮಾಡುವ ದೊಡ್ಡಿಗಳು ಅಡವಿಯಲ್ಲಿರುವ ದುರ್ಗಮ ಪ್ರದೇಶಗಳಲ್ಲಿ ಇರುವುದರಿಂದ ಇವರು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಅಲ್ಲಿಗೆ ಆರೋಗ್ಯ ಇಲಾಖೆಯ ವಾಹನ ಹೋಗಲಿಕ್ಕೆ ಯೋಗ್ಯವಾದ

ಮಾರ್ಗವಿಲ್ಲ. ಕೆಲಕಡೆಗೆ ಮಾತ್ರ ಕಚ್ಚಾ ಮಾರ್ಗವಿದ್ದರೂ ಕೂಡ ಮಳೆಗಾಲದಲ್ಲಿ ಅಲ್ಲಿ ಕೆಸರುಂಟಾಗಿ ನಡೆದುಕೊಂಡು ಹೋಗುವುದು ಕೂಡಾ ಕಷ್ಟ ಸಾಧ್ಯವಾಗುತ್ತದೆ. ಇಲ್ಲಿನ ಜನರಿಗೆ ಕಾಯಿಲೆ ಬಂದರೆ ನಡೆಯುವುದಕ್ಕೆ ಸಾಧ್ಯವಾಗದಿದ್ದಾಗ ವರಸಿನ ಮೇಲೆ ಕೂರಿಸಿಕೊಂಡು ಪಕ್ಕದ ರಸ್ತೆಗೆ ಬರುತ್ತಾರೆ. ಇದರಿಂದ ಸರ್ಕಾರಿ ಆರೋಗ್ಯ ವ್ಯವಸ್ಥೆಯ ಲಾಭವನ್ನು ಇವರಾಗಿಯೇ ಪಡೆದುಕೊಳ್ಳುವುದಾಗಲಿ ಅಥವಾ ಇವರು ವಾಸ ಮಾಡುವ ಸ್ಥಳಗಳಿಗೆ ಅದನ್ನು ತಲುಪಿಸುವುದಾಗಲಿ ಅಸಾಧ್ಯವಾಗುವಂತಹ ಸ್ಥಿತಿ ಇದೆ. ಇವರು ನೆಲೆಸಿರುವ ಕಡೆ ಸಾಮಾನ್ಯವಾಗಿ ವಿಷಪೂರಿತ ಜಂತುಗಳು ಇರುವುದರಿಂದ ಒಂದು ವೇಳೆ ಹಾವು ಕಚ್ಚಿದರೆ ಅವರ ಸ್ಥಿತಿ ಗಂಭೀರವಾಗುತ್ತದೆ. ಸರಿಯಾದ ಸಮಯದಲ್ಲಿ ಗಿಡಮೂಲಿಕೆ ಹಾಕಬೇಕು. ಒಂದು ವೇಳೆ ವಿಷಪೂರಿತ ಹಾವು ಆಗಿದ್ದರೆ ಸಾವು ಖಚಿತವೆ ಸರಿ. ಆಸ್ಪತ್ರೆಗೆ ಹೋಗಲು ಯಾವುದೇ ಅನುಕೂಲ ಇಲ್ಲದೇ ಇವರು ನೆಲೆಸಿರುವ ಬಹುತೇಕ ಸ್ಥಳಗಳಿಗೆ ಯಾವುದೇ ವಾಹನ ಹೋಗಲು ಅಸಾಧ್ಯ ಸ್ಥಿತಿ ಇದೆ.

ರಾತ್ರಿಯ ಸಮಯದಲ್ಲಿ ಆರೋಗ್ಯದಲ್ಲಿ ಏರುಪೇರು ಆದರೆ ಗಿಡಮೂಲಿಕೆ ಔಷಧಿಯ ಮೊರೆ, ಇಲ್ಲವೇ ದೇವರ ಮೊರೆ ಹೋಗಬೇಕು. ಆಸ್ಪತ್ರೆ ಅಂತ ರಾತ್ರಿಯಲ್ಲಿ ನಡೆದುಕೊಂಡು ಹೋಗುವುದರಲ್ಲಿ ರೋಗಿಯ ಸ್ಥಿತಿ ಚಿಂತಾಜನಕ ಪರಿಸ್ಥಿತಿ ತಲುಪುತ್ತದೆ. ಇದರಿಂದ ಅನೇಕರು ಕಾಯಿಲೆಯಿಂದ ಸರಿಯಾದ ಸಮಯಕ್ಕೆ ವೈದ್ಯಕೀಯ ಸೇವೆ ಇಲ್ಲದೇ ಮರಣ ಹೊಂದಿದ್ದೂ ಉಂಟೆಂದು ಅಲ್ಲಿನ ಜನರು ತಮ್ಮ ಗೋಳು ತೋಡಿಕೊಳ್ಳುತ್ತಾರೆ.

ದೊಡ್ಡಿಗಳಲ್ಲಿ ವಾಸಮಾಡುವವರ ದಿನನಿತ್ಯದ ಆಹಾರವು ಕೂಡ ಪೌಷ್ಟಿಕಾಂಶಗಳನ್ನು ಹೊಂದಿರುವುದಿಲ್ಲ ಜೋಳದ ರೊಟ್ಟಿ, ಅನ್ನ ಸಾರು ಹಾಗೂ ಹಬ್ಬ-ಹರಿದಿನಗಳ ಆಚರಣೆಗಳಲ್ಲಿ ಮಾತ್ರ ಮಾಂಸದೂಟವಿರುತ್ತದೆ. ಇದರಿಂದ ಅವರಲ್ಲಿ ಜೀವಸತ್ವಗಳ ಕೊರತೆ ವ್ಯಾಪಕವಾಗಿದೆ. ಗಂಭೀರ ಕಾಯಿಲೆಗಳ ವಿರುದ್ಧ ಇವರಿಗೆ ರೋಗ ನಿರೋಧಕ ಶಕ್ತಿಯ ಕೊರತೆ ಇದೆ. ದನಗಳ ಪಕ್ಕದಲ್ಲಿ ಕೊಳಚೆ ಹಾಗೂ ಜವುಗು ಸ್ಥಳಗಳಲ್ಲಿ ವಾಸಿಸುವುದರಿಂದ ಇವರು ಅನೇಕ ಪ್ರಕಾರದ ಕಾಯಿಲೆಗಳಿಗೆ ಸುಲಭವಾಗಿಯೇ ತುತ್ತಾಗುವ ಸಾಧ್ಯತೆ ಹೆಚ್ಚು. "ದಿನ ನಿತ್ಯವು ಸ್ನಾನ ಮಾಡುವ ರೂಢಿ ಇವರಲ್ಲಿ ಇಲ್ಲವಾದ್ದರಿಂದ ಇದರಿಂದಾಗುವ ಶಾರೀರಿಕವಾಗಿಯೂ ಇವರು ಅನೇಕ ರೋಗ ರುಜಿನೆಗಳಿಗೆ ಬಲಿಯಾಗುವ ಸಾಧ್ಯತೆ ಹೆಚ್ಚಾಗುವುದು."[೭]

ವರ್ಷದ ಎಂಟು ತಿಂಗಳು ಶುದ್ಧ ಕುಡಿಯುವ ನೀರಿನ ಸೌಲಭ್ಯ ಪಡೆದುಕೊಂಡರೆ ಇನ್ನು ನಾಲ್ಕು ತಿಂಗಳು ಶುದ್ಧ ಕುಡಿಯುವ ನೀರಿನ ಕೊರತೆಯನ್ನು ಎದುರಿಸಬೇಕಾಗುತ್ತದೆ. ನಾಲ್ಕು ತಿಂಗಳ ಅವದಿಯು ಹಳ್ಳದಲ್ಲಿ, ಕಾಲುವೆಯಲ್ಲಿ ನಿಂತ ನೀರನ್ನು ಕುಡಿಯುವುದರಿಂದ ರೋಗಗಳು ಗಂಭೀರ ಸ್ವರೂಪದ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಕೆಲವರು

ಸರ್ಕಾರಿ ಯೋಜನೆಯಡಿ ಕೊಳವೆ ಬಾವಿಯನ್ನು ಹಾಕಿಸಿಕೊಂಡಿದ್ದಾರೆ. ಬೇಸಿಗೆ ಸಮಯದಲ್ಲಿ ಎರಡು ಮೂರು ತಿಂಗಳ ಕಾಲ ವಿದ್ಯುತ್ ಇರುವುದಿಲ್ಲ. ವಿದ್ಯುತ್ ನಂಬಿಕೊಂಡ ರೈತಾಪಿ ಜನರಿಗೆ ಕೊಳವೆ ಬಾವಿಯ ನೀರು ಇಲ್ಲ ಎನ್ನುವ ಸ್ಥಿತಿ ಇದೆ. ಇನ್ನು ಕೆಲವು ಕಡೆ ಕೈ ಪಂಪ್ ಹಾಕಿಸಿದ್ದಾರೆ. ಅವುಗಳು ಇಲ್ಲಿನವರಿಗೆ ಆಧಾರವಾಗಿ ಅದರಲ್ಲಿ ಬರುವ ನೀರು ಫ್ಲೋರೈಡ್‌ಯುಕ್ತವಾಗಿವೆ. ಇದೂ ಒಂದು ದೊಡ್ಡ ಸಮಸ್ಯೆಯಾಗಿದೆ. ಒಟ್ಟಾರೆಯಾಗಿ ವರ್ಷದ ೮ ತಿಂಗಳ ನೆಮ್ಮದಿಯಿಂದ ಕಾಲಕಳೆಯುವ ದೊಡ್ಡಿಯ ಜನರಿಗೆ ಬೇಸಿಗೆ ನಾಲ್ಕು ತಿಂಗಳು ನೆಮ್ಮದಿಯನ್ನು ಹಾಳುಮಾಡುತ್ತದೆ. ಇಲ್ಲಿನ ಎಷ್ಟೋ ನಿವಾಸಿಗಳಿಗೆ ಮನೆಗಳೇ ಇಲ್ಲ. ಇನ್ನು ಶೌಚಾಲಯದ ವಿಷಯ ಬಂದರೆ ಶೋಚನೀಯವೆನಿಸುತ್ತದೆ. ಎಲ್ಲಿ ಅಂದರೆ ಅಲ್ಲಿ ಮಲಮೂತ್ರ ವಿಸರ್ಜನೆ ಮಾಡುವುದರಿಂದ ಅಸುರಕ್ಷತೆಯ ವ್ಯಾಪಕತೆಯಿಂದ ಅನೇಕ ರೋಗ ಹರಡುವ ತಾಣಗಳಾಗಿ ದೊಡ್ಡಿಗಳು ಪರಿವರ್ತನೆ ಹೊಂದುತ್ತಿವೆ. ಇವುಗಳಿಂದ ದೊಡ್ಡಿಯ ನಿವಾಸಿಗಳ ಸಮಸ್ಯೆಗಳು ಇನ್ನಷ್ಟು ಜಟಿಲಗೊಳಿಸಿವೆ.

೬.೫ ಸಾರಿಗೆ ಸಮಸ್ಯೆ

ಒಂದು ದೇಶ ಅಭಿವೃದ್ಧಿಯಾಗಿದೆ ಎಂಬುದನ್ನು ತಿಳಿದುಕೊಳ್ಳಬೇಕಾದರೆ ಸಾರಿಗೆ ಅಭಿವೃದ್ಧಿಯು ಸಹಜವಾಗಿದೆ ಆದರೆ ಭಾರತವು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಒಂದಾಗಿದೆ ಎಂದರ್ಥ. ಇಲ್ಲಿ ಸಮರ್ಪಕ ಸಾರಿಗೆ ಅಭಿವೃದ್ಧಿಯಾಗದೆ ಇರುವುದನ್ನು ಕಾಣಬಹುದು. ಅನೇಕ ದೊಡ್ಡಿಗಳಲ್ಲಿ ವಾಸಿಸುತ್ತಿರುವ ಜನರು ಇಂದೂ ಸಹ ಗ್ರಾಮಗಳಿಂದ ಗ್ರಾಮಗಳಿಗೆ ಕಾಲುದಾರಿಯಿಂದಲೇ ನಡೆದುಕೊಂಡೇ ಹೋಗುತ್ತಾರೆ ವಿನಃ ಅಲ್ಲಿ ರಸ್ತೆಗಳಿಲ್ಲ ನಾನು ಸಂದರ್ಶಿಸಿದ ಕ್ಷೇತ್ರಗಳನ್ನು ಗಮನಿಸಿದಾಗ ಇತ್ತೀಚಿಗೆ ಅಲ್ಲಿ ಖಾಸಗಿ ವಾಹನಗಳು ಸಂಚರಿಸುತ್ತಿವೆ. ಆದರೆ ಅಲ್ಲಿ ರಸ್ತೆ ಸರಿಯಾಗಿಲ್ಲವೆಂದು ಹೇಳಬಹುದು.

ಎಷ್ಟೋ ಸಂದರ್ಭದಲ್ಲಿ ದೊಡ್ಡಿಗಳಲ್ಲಿ ನೆಲೆಸಿರುವ ಜನಸಮೂಹ ಕೆಲವು ಕಡೆ ವಾಹನಗಳಿಲ್ಲದೆ ದೊಡ್ಡಿಗಳಿಂದ ಹಳ್ಳಿಗೆ ಬಂದು ಅಲ್ಲಿಂದ ವಾಹನ ಹಿಡಿದುಕೊಂಡು ಹೋಗುತ್ತಾರೆ. ಉದಾಹರಣೆಗೆ ಚಿಕ್ಕಲೇರದೊಡ್ಡಿಗೆ ವಾಹನಗಳ ಸೌಲಭ್ಯ ಇರದೇ ಇರುವುದರಿಂದ ೨ ಕಿ.ಮೀ. ದೂರವಿರುವ ಹಳ್ಳಿಯವರೆಗೆ ನಡೆದು ಅಲ್ಲಿಂದ ವಾಹನ ಹಿಡಿದು ಬೇರೆ ಊರಿಗೆ ಹೋಗುತ್ತಾರೆ.

ರಾಯಚೂರು ಜಿಲ್ಲೆಯ ಬಹುತೇಕ ದೊಡ್ಡಿಗಳಿಗೆ ಸರ್ಕಾರಿ ಬಸ್ಸುಗಳು ಅಪರೂಪ. ಆದರೆ ಹೆಚ್ಚಾಗಿ ಖಾಸಗಿ ವಾಹನಗಳ ಸಂಚಾರ ಇದೆ. ತಗ್ಗು ದಿನ್ನೆಗಳಿಂದ ಕೂಡಿದ ಕಚ್ಚಾ ರಸ್ತೆ ಆಗಿದೆ. ಇದರಿಂದ ಖಾಸಗಿ ಬಸ್ಸುಗಳ ಸಂಚಾರವು ಬಹಳ ಆಪತ್ತಿನಿಂದ ಕೂಡಿದೆ. ಇನ್ನು ರಾತ್ರಿಯ ಸಮಯಕ್ಕೆ ಇಂತಹ ದೊಡ್ಡಿಗಳಿಗೆ ಹೋಗುವುದಕ್ಕೆ ಯಾವುದೇ ವಾಹನ ಸೌಲಭ್ಯವಿಲ್ಲ. ಇದರಿಂದ ದೊಡ್ಡಿ ಜನರು ಬಸ್ಸು ನಿಲ್ದಾಣವೇ ಗತಿ ಎಂದು ತಿಳಿಯುತ್ತಾರೆ.

ಕೃಷಿ ಉತ್ಪನ್ನಗಳನ್ನು, ಸರಕುಗಳನ್ನು ನಗರ ಪ್ರದೇಶಗಳಿಗೆ ಮಾರಾಟಕ್ಕೆ ತರಬೇಕಾದರೆ ವಾಹನಗಳಿಲ್ಲದೆ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಇದರಿಂದ ಸರಕುಗಳನ್ನು ಮಧ್ಯವರ್ತಿಗಳಿಗೆ ದಲ್ಲಾಳಿಗಳಿಗೆ ಕಡಿಮೆ ಬೆಲೆಯಲ್ಲಿ ಮಾರಾಟ ಮಾಡುತ್ತಾರೆ. ಆರ್ಥಿಕವಾಗಿ ನಷ್ಟವನ್ನು ಅನುಭವಿಸುತ್ತಿದ್ದಾರೆ.

ನಗರಗಳು ಬೆಳೆದಂತೆ ಜನಸಂಖ್ಯೆ ಏರುತ್ತಿದ್ದಂತೆ ಅವರಿಗೆ ಮೂಲಭೂತ ಸೌಕರ್ಯ ಒದಗಿಸುವುದು ಕಷ್ಟದ ಕೆಲಸ. ಸರ್ಕಾರ ಸಾರಿಗೆ ಅಭಿವೃದ್ಧಿಪಡಿಸುವುದಕ್ಕೆ ಸಾಕಷ್ಟು ಹಣವನ್ನು ಖರ್ಚುಮಾಡುತ್ತಿದೆ. ಆದರೆ ಸಮರ್ಪಕ ಸಾರಿಗೆ ವ್ಯವಸ್ಥೆಯನ್ನು ಹಳ್ಳಿಗಳಿಗೆ ಒದಗಿಸಲು ಸಾಧ್ಯವಾಗುತ್ತಿಲ್ಲ. ದೊಡ್ಡಿಯ ಜನರಿಗೆ ಸಾರಿಗೆ ಸೌಲಭ್ಯವು ದೊರೆಯದೆ ಇರುವುದೂ ಸಹ ಅವರ ಹಿಂದುಳಿಯುವಿಕೆಗೆ ಕಾರಣವಾಗಿದೆ.

ಅಡಿಟಿಪ್ಪಣಿಗಳು

೧. ಜೋಗಿನಕಟ್ಟಿ ವಿಠ್ಠಲ್, ೨೦೧೪, ಬಾಲಕಾರ್ಮಿಕರ ಸಾಮಾಜಿಕ ಆರ್ಥಿಕ ಸ್ಥಿತಿಗತಿಗಳು, ಪು.ಸಂ. ೬೭

೨. ಕೇಶವನ್ ಪ್ರಸಾದ್ ಕೆ, ಮತ್ತು ಗಂಗಾಧರ ದೈವಜ್ಞ, (ಸಂ), ೨೦೦೮, ಬುಡಕಟ್ಟು ಅಧ್ಯಯನ ಸಂಪುಟ-೫, ಪು.ಸಂ. ೩೨

೩. ಮಂಜುನಾಥ ಬೇವಿನಕಟ್ಟಿ, (ಸಂ), ೨೦೦೯, ಜನಪದ ಕರ್ನಾಟಕ, ಪು.ಸಂ.೬೨

೪. ಅದೇ, ಪು.ಸಂ. ೭೩

೫. ಸಣ್ಣೊಬಯ್ಯ ಎಸ್.ಕೆ, ೨೦೦೨, ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟು ಒಂದು ಸಮಾಜ ಶಾಸ್ತ್ರೀಯ ಅಧ್ಯಯನ, ಪು.ಸಂ. ೧೦

೬. ಮಧು ಗುಂಡ್ಲುಪೇಟೆ, ೨೦೦೨, ಕರ್ನಾಟಕ ಬುಡಕಟ್ಟು ಜನಾಂಗಗಳ ಅಭಿವೃದ್ಧಿ, ಪು.ಸಂ. ೧೮೧

೭. ಅದೇ, ಪು.ಸಂ. ೮೩

ಅಧ್ಯಾಯ ಏಳು

ಸಮುದಾಯಗಳ ನಡುವಿನ ಸಾಮ್ಯತೆ ಮತ್ತು ವ್ಯತ್ಯಾಸಗಳು

೭.೧. ಬೇಡ ಮತ್ತು ಕುರುಬ ಸಮುದಾಯದ ನಡುವಿನ ಹೋಲಿಕೆ ಮತ್ತು ವ್ಯತ್ಯಾಸಗಳು

೭.೨. ಕಬ್ಬಲಿಗ ಮತ್ತು ಬೇಡ ಸಮುದಾಯದ ನಡುವಿನ ಹೋಲಿಕೆ ಮತ್ತು ವ್ಯತ್ಯಾಸಗಳು

೭.೩. ಕುರುಬ ಮತ್ತು ಕಬ್ಬಲಿಗ ಸಮುದಾಯದ ನಡುವಿನ ಹೋಲಿಕೆ ಮತ್ತು ವ್ಯತ್ಯಾಸಗಳು

ಅಧ್ಯಾಯ ಏಳು

ಸಮುದಾಯಗಳ ನಡುವಿನ ಸಾಮ್ಯತೆ ಮತ್ತು ವ್ಯತ್ಯಾಸಗಳು

ಬೇಡರೊಡನೆ ಇತರೆ ಸಮುದಾಯಗಳಾದ ಕುರುಬ ಮತ್ತು ಕಬ್ಬಲಿಗ ಸಮುದಾಯಗಳು ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯವಾಗಿ ಸಾಮ್ಯತೆ, ಭಿನ್ನತೆಗಳನ್ನು ಕುರಿತಂತೆ ತೌಲನಿಕ ಅಧ್ಯಯನ ನಡೆಸಲಾಗಿದೆ. ಬೇಡ ಸಮುದಾಯದ ಜೊತೆಗೆ ಕುರುಬ,ಕಬ್ಬಲಿಗ ಸಮುದಾಯಗಳ ವಕ್ತೃಗಳ ಹೇಳಿಕೆಗಳ ಆಧಾರದ ಮೇಲೆ ಈ ಅಧ್ಯಾಯವನ್ನು ರೂಪಿಸಲಾಗಿದೆ. ತೌಲನಿಕ ಅಧ್ಯಯನದ ವ್ಯಾಪ್ತಿಗೆ ಕೆಲವು ಅಂಶಗಳನ್ನು ಮಾತ್ರ ಇಲ್ಲಿ ತೆಗೆದುಕೊಳ್ಳಲಾಗಿದೆ.

ವಾಸಸ್ಥಳ

ಸಾಮಾನ್ಯವಾಗಿ ಬಹುತೇಕ ದೊಡ್ಡಿಗಳೆ ಊರ ಹೊರಗೆ ಹಳ್ಳಿಯ ವಾತಾವರಣದಿಂದ ದೂರದ ಪ್ರಶಾಂತವಾದ ಅಡವಿ ಪರಿಸರದಲ್ಲಿ ವಾಸವಿದ್ದು, ಕುರುಚಲು ಗುಡ್ಡಗಳ ಆಜು-ಬಾಜು ಬೇಡರು ವಾಸಿಸುವುದು ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತದೆ. ಅದೇ ರೀತಿ ಕುರುಬ ಮತ್ತು ಕಬ್ಬಲಿಗ ಸಮುದಾಯಗಳು ಅದೇ ನೆಲೆಯಲ್ಲಿ ಇಲ್ಲವೇ ಅಕ್ಕಪಕ್ಕದ ನೆಲೆಯಲ್ಲಿ ನೆಲೆಸಿರುವುದು ಸಹಜವಾಗಿದೆ. ಇದರಲ್ಲಿ ಕೆಲವು ಕುಟುಂಬಗಳು ಮುಂಚಿನಿಂದಲೂ ಅಡವಿಯಲ್ಲಿ ವಾಸವಾಗಿರುವುದು ಬೇಡ ಸಮುದಾಯದ ಕುಟುಂಬಗಳು ಹೆಚ್ಚಿನ ಸಂಖ್ಯೆಯಲ್ಲಿ ಮೊದಲಿನಿಂದಲೂ ತಮ್ಮ ವಾಸಸ್ಥಾನ ಅದೇ ಎಂದು ಹೇಳುತ್ತಾರೆ.

ಭಾಗಶಃ ಕುರುಬ ಕಬ್ಬಲಿಗ ಸಮುದಾಯದವರು ನೀರಾವರಿ ಬಂದ ಮೇಲೆ ಗುಡಗುಂಟಿ, ಪೈದೊಡ್ಡಿ, ಬಂಡೆಬಾವಿ, ಬುಂಕಲದೊಡ್ಡಿ, ಗೊಲಪಲ್ಲಿ, ಐದಬಾವಿ, ಟಣಮಕಲ್ಲು ಗ್ರಾಮಗಳ ಸುತ್ತಮುತ್ತ ಅಡವಿಯಲ್ಲಿ ನೆಲೆಸಿರುವುದು ಕಂಡುಬರುತ್ತದೆ. ಆಹಾರ ಪದ್ಧತಿಯೂ ಕೂಡ ಆಯಾಯ ಪ್ರದೇಶಗಳಲ್ಲಿ ಸಿಗುವ ವಸ್ತುಗಳ ಆಧಾರದ ಮೇಲೆ ಅವಲಂಬಿತವಾಗಿದ್ದರೂ ಎಲ್ಲ ಸಮುದಾಯದವರು ಮಾಂಸಹಾರಿಗಳಾಗಿರುತ್ತಾರೆ. ಇವರು ನೆಲೆಸಿರುವ ವಾಸಸ್ಥಾನ ಬಹುತೇಕ ಗ್ರಾಮಗಳಾಗಿ ಪರಿವರ್ತನೆ ಹೊಂದಿವೆ. ಉದಾ: ಇನ್ನೂ ಅನೇಕ ನೆಲೆಗಳು ಯಾವುದೇ ಪರಿವರ್ತನೆ ಹೊಂದದೆ ಕಂದಾಯ ಗ್ರಾಮವಾಗದೆ ಉಳಿದಿವೆ.

ರಾಯಚೂರು ಜಿಲ್ಲೆಯಲ್ಲಿ ಹಲವು ಸಮುದಾಯದ ನೆಲೆಗಳು ವಿಭಿನ್ನವಾಗಿ ಗುರುತಿಸಿಕೊಳ್ಳುತ್ತವೆ. ಬೇಡ, ಕುರುಬ ಮತ್ತು ಕಬ್ಬಲಿಗ ಸಮುದಾಯದವರು ತಾವು ವಾಸಿಸುವ ಊರುಗಳನ್ನು ದೊಡ್ಡಿಗಳು ಎಂದು ಕರೆದುಕೊಂಡರೆ, ಗೊಲ್ಲರು ತಮ್ಮ ಊರುಗಳಿಗೆ ಗೊಲ್ಲರ ಹಟ್ಟಿ ಎಂದು ಕರೆದುಕೊಳ್ಳುವರು. ಅದೇ ರೀತಿ ಲಂಬಾಣಿ ಸಮುದಾಯದವರು ತಾಂಡ ಎಂದು ಕರೆದುಕೊಳ್ಳುತ್ತಾರೆ. ಅದೇ ರೀತಿಯಾಗಿ ಆಂಧ್ರದಿಂದ ವಲಸೆ ಬಂದ ರೈತರು ನೆಲೆಸಿರುವ ತಮ್ಮ ನೆಲೆಗಳಿಗೆ ಕ್ಯಾಂಪ್ ಎಂದು ಹೇಳಿಕೊಳ್ಳುತ್ತಾರೆ. ಉದಾಹರಣೆಗೆ; ಆಂಜನೇಯ ಕ್ಯಾಂಪ್, ಪಗಡದಿನ್ನಿ ಕ್ಯಾಂಪ್ ಎಂದು ಕರೆದುಕೊಳ್ಳುವರು.

ನಾಗರಿಕ ಸಂದರ್ಭದ ಸ್ಥಾನಮಾನ

ಕಂದಾಯ ಗ್ರಾಮವಾಗಿರದ ದೊಡ್ಡಿಗಳು ಆ ನೆಲೆಯಲ್ಲಿ ವಾಸಿಸುವ ಸಮುದಾಯಗಳು ಇಂದಿಗೂ ಬಹಳಷ್ಟು ಸಂದಿಗ್ಧ ಪರಿಸ್ಥಿತಿಯಲ್ಲಿವೆ. ಇವರ ವಾಸಸ್ಥಾನವನ್ನು ನೋಡಿ ಪುನಾ ಮಹಾವಿದ್ಯಾಲಯದ ಪ್ರಾಧ್ಯಾಪಕರಾದ 'ಕೆ ಪೆದ್ದಯ್ಯ' ಅವರು ದೊಡ್ಡಿಗಳು ಆದಿ ಮಾನವನ ನೆಲೆಗಳನ್ನು ಹೋಲುತ್ತವೆ ಎಂದು ಹೇಳಿದ್ದಾರೆ. ಯಾವುದೇ ಮೂಲಭೂತ ಸೌಲಭ್ಯ ಇಲ್ಲದೆ ಇರುವ ಇಂತಹ ಸ್ಥಳಗಳಲ್ಲಿ ನಾಗರಿಕರು ಎನಿಸಿಕೊಂಡವರು ಆದಿವಾಸಿ ಸ್ಥಿತಿಯಲ್ಲಿ ಬಾಳಿ ಬದುಕುವುದು ಕಷ್ಟ ಎಂಬ ಅನುಮಾನ ಮಾನವಶಾಸ್ತ್ರಜ್ಞರಲ್ಲಿದೆ. ಇದಕ್ಕೆ ಕಾರಣಗಳು ಇಲ್ಲದಿಲ್ಲ. ನಾಗರಿಕ ಪ್ರಭಾವದಿಂದ ಬಹುತೇಕ ದೊಡ್ಡಿಗಳು ಗ್ರಾಮಗಳಾಗಿ ಪರಿವರ್ತನೆಯಾಗಿವೆ ಇವರು ಇನ್ನು ಪ್ರತ್ಯೇಕವಾಗಿ ಉಳಿದುಕೊಳ್ಳಲಾರರು. ನಾಗರಿಕ ಪ್ರಪಂಚದ ಸಂಪರ್ಕದಿಂದ ತಮ್ಮ ಜೀವನ ಮಟ್ಟ ಸುಧಾರಣೆಯಾಗಿದೆ, ನಂಬಿಕೆಗಳನ್ನು ಬಿಟ್ಟು ಬದಲಾಗುತ್ತಿರುವ ಜಗತ್ತಿಗೆ ಹೊಂದಿಕೆಯಾಗುತ್ತಿದ್ದಾರೆ. ಭಾರತದಲ್ಲಿ ಇತ್ತೀಚಿಗೆ ಸಾಮಾಜಿಕ ಪರಿವರ್ತನೆ ತೀವ್ರವಾಗಿ ನಡೆಯುತ್ತಿದೆ. ಕರ್ನಾಟಕ ರಾಜ್ಯದ ರಾಯಚೂರು ಜಿಲ್ಲೆಯ ದೊಡ್ಡಿಗಳ ನಿವಾಸಿಗಳೂ ಸಹ ಇದಕ್ಕೆ ಹೊರತಾಗಿಲ್ಲ.

ದೊಡ್ಡಿಗಳ ವಸತಿ ವ್ಯವಸ್ಥೆ

ಬೇಡ, ಕುರುಬ ಮತ್ತು ಕಬ್ಬಲಿಗರು ದೊಡ್ಡಿಯಲ್ಲಿ ವಾಸಿಸುವ ಈ ಸಮುದಾಯದವರು ಅನೇಕ ದೊಡ್ಡಿಗಳಲ್ಲಿ ವಾಸಕ್ಕೆಂದು ಜನತಾ ಮನೆಗಳು ಇಂದಿರಾ, ಅಂಬೇಡ್ಕರ್, ಬಸವ ಆವಾಸ್ ಯೋಜನೆಗಳ ಅಡಿಯಲ್ಲಿ ಮನೆಗಳನ್ನು ಕಟ್ಟಿಸಿಕೊಂಡಿದ್ದಾರೆ. ಆದರೆ ರಾಜಕೀಯ ಹಿಂಬಾಲಕರು ಮತ್ತು ಇಂತಹ ನೆಲೆಗಳಲ್ಲಿ ಆರ್ಥಿಕವಾಗಿ ಸದೃಢವಾಗಿರುವ ಕೆಲವೇ ಕೆಲವು ಕುಟುಂಬಗಳು ಇದರ ಲಾಭವನ್ನು ಪಡೆದುಕೊಂಡಿದ್ದಾರೆ. ದೊಡ್ಡಿಗಳಲ್ಲಿ ವಾಸಿಸುವ ಬೇಡ, ಕುರುಬ ಮತ್ತು ಕಬ್ಬಲಿಗರಲ್ಲಿ ಕುರುಬ ಮತ್ತು ಕಬ್ಬಲಿಗ ಸಮುದಾಯದವರು ಆರ್ಥಿಕವಾಗಿ ಸದೃಢವಾಗಿ ಕಂಡುಬರುತ್ತಾರೆ. ದೊಡ್ಡಿಗಳಲ್ಲಿ ಕಾಂಕ್ರೇಟ್(ಆರ್‌ಸಿಸಿ) ಮನೆ, ಮಾಳಿಗೆ ಮನೆ, ದೊಡ್ಡ ದೊಡ್ಡ ಮನೆಗಳನ್ನು ಕಟ್ಟಿಸಿಕೊಂಡಿದ್ದಾರೆ. ಈ ಎರಡು ಸಮುದಾಯದಲ್ಲಿ ತೀರ ಬಡತನದಲ್ಲಿರುವ ಕುಟುಂಬಗಳು ಆಶ್ರಯ ಯೋಜನೆಯ

ಲಾಭವನ್ನು ಪಡೆದುಕೊಂಡು ಸದೃಢವಾಗಿ ವಸತಿಯನ್ನು ನಿರ್ಮಿಸಿಕೊಂಡಿರುವುದು ಕಂಡುಬರುತ್ತದೆ. ಅದೇ ರೀತಿ ಬೇಡ ಸಮುದಾಯ ಆರ್ಥಿಕವಾಗಿ ಸದೃಢವಾಗಿದ್ದು ಕೆಲವು ಕುಟುಂಬಗಳು ಕಾಂಕ್ರೀಟ್ ಮನೆಗಳನ್ನು ಕಟ್ಟಿಕೊಂಡು ನೆಲೆಸಿದ್ದಾರೆ. ಇವರಲ್ಲಿ ಅಲ್ಪಸ್ವಲ್ಪ ಆರ್ಥಿಕ ಸುಸ್ಥಿತಿಯಲ್ಲಿರುವ ಮತ್ತು ರಾಜಕೀಯ ಹಿಂಬಾಲಕರ ಪರವಾಗಿ ತಿರುಗುವವರು ಆಶ್ರಯ ಯೋಜನೆಯ ಫಲವನ್ನು ಪಡೆದುಕೊಂಡಿದ್ದಾರೆ. ಉಳಿದಂತೆ ಈ ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬೇಡರು ಗುಡಿಸಲುಗಳನ್ನು ಕಟ್ಟಿಕೊಂಡು ನೆಲೆಸಿರುವುದು ಕಾಣಬಹುದಾಗಿದೆ. ಅದರಲ್ಲೂ ನೀರಾವರಿ ಇಲ್ಲದ ರಾಯಚೂರು "ತಾಲ್ಲೂಕಿನ ಸುತ್ತಮುತ್ತಲಿನ ಬದುಕಿನ ಬವಣೆ ಹೇಳತೀರದು, ದೊಡ್ಡಿಯ ಬದುಕು ವನವಾಸ" ಎಂದು ಕೊತ್ತ ದೊಡ್ಡಿಯ ನಾಗಮ್ಮ ಎಂಬ ಮಹಿಳೆ ಈ ಕುರಿತು ಬೇಸರದಿಂದ ಹೇಳುತ್ತಾಳೆ.

೭.೧. ಬೇಡ ಮತ್ತು ಕುರುಬ ಸಮುದಾಯದ ನಡುವಿನ ಹೋಲಿಕೆ ಮತ್ತು ವ್ಯತ್ಯಾಸಗಳು

ಸಾಮಾಜಿಕ ಹೋಲಿಕೆ ಮತ್ತು ವ್ಯತ್ಯಾಸ

ಬೇಡ ಸಮುದಾಯವು ಸಾಮಾನ್ಯವಾಗಿ ರಾಯಚೂರು ಜಿಲ್ಲೆ ಹೊಲಗಳಲ್ಲಿ ವಾಸಿಸುತ್ತಾರೆ. ಈ ಸಮುದಾಯವು ಆರಂಭದಿಂದಲೂ ಆಯ್ಕೆ ಮಾಡಿಕೊಂಡದ್ದು ಅಡವಿಗಳು. ಈ ಬಗ್ಗೆ ಜನರಹಿತ ನೆಲೆಗಳು ಎಂಬುದನ್ನು ಸೂಕ್ಷ್ಮವಾಗಿ ನೋಡಿದರೆ ಈ ಆಯ್ಕೆಯ ಹಿನ್ನೆಲೆಯನ್ನು ಗುರುತಿಸಿಕೊಳ್ಳುವ ಅಗತ್ಯವಿದೆ. ಪ್ರತ್ಯೇಕವಾಗಿ ನೆಲೆಸುವಿಕೆಯನ್ನು ನೋಡಿದಾಗ ಬೇಡ ಸಮುದಾಯವು ಸಂಸ್ಕೃತಿಯನ್ನು ಸಂರಕ್ಷಿಸಿಕೊಂಡಿರುವುದನ್ನು ಕಾಣಬಹುದಾಗಿದೆ. ಆದರೆ ನಾಗರಿಕ ಸಮಾಜ ಅನುಭವಿಸುತ್ತಿರುವ ಜೀವನ ಶೈಲಿಯನ್ನು ದೊಡ್ಡಿಗಳಲ್ಲಿ ನೆಲೆಸಿರುವ ಬೇಡ ಸಮುದಾಯ ಅನುಭವಿಸದಿದ್ದರೂ ಇತ್ತೀಚಿಗೆ ಕೆಲವು ಆಧುನಿಕ ಶೈಲಿಯ ಶಿಸ್ತುಗಳಿಂದ ಪ್ರಭಾವಕ್ಕೆ ಈ ಸಮುದಾಯ ಒಳಗಾಗುತ್ತಿರುವುದು ಸಹಜವಾಗಿ ಕಂಡುಬರುತ್ತದೆ. ಸಾಮಾಜಿಕವಾಗಿ ದೊಡ್ಡಿಗಳಲ್ಲಿ ಸಾಮಾನ್ಯವಾಗಿ ಮನೆವಿನ್ಯಾಸ ಟಿ.ವಿ. ವಸ್ತ್ರ ವಿನ್ಯಾಸ, ಜೀವನ ಶೈಲಿ ದಿನ ನಿತ್ಯದ ಜೀವನದಲ್ಲಿ ದೊಡ್ಡಿಯಲ್ಲಿ ಬದುಕುವ ಅನೇಕರು ಇನ್ನು ಅನಾಗರಿಕ ಸ್ಥಿತಿಯಲ್ಲಿ ಉಳಿದಿರುವುದನ್ನು ನೋಡಿದರೆ ಪರಿವರ್ತನೆ ಪ್ರಮಾಣ ನಿಧಾನ ಗತಿಯಲ್ಲಿ ಆಗುತ್ತಿರುವುದು ಗುರುತಿಸಬಹುದು. ತಮ್ಮನ್ನು ಬೇರೆಯವರು ಏನು ತಿಳಿದುಕೊಳ್ಳುತ್ತಾರೆ ಎನ್ನುವ ಕನಿಷ್ಟ ವಿವೇಚನೆಯು ಕೂಡ ಇವರಲ್ಲಿ ಕಂಡುಬರುವುದಿಲ್ಲ. ಸಾಮಾಜಿಕವಾಗಿ ಸಮಾಜದಲ್ಲಿ ತಮ್ಮದೆ ರೀತಿಯ ಮಾನ್ಯತೆ ಇದೇ ಎನ್ನುವ ಆಲೋಚನೆಯು ಇವರಲ್ಲಿ ಇಲ್ಲ. ಸಾಮಾನ್ಯವಾಗಿ ಅಡವಿಯಲ್ಲಿ ಇರುವವರು ಅಂದರೆ ಸಾಕು ಇವರಲ್ಲಿ ಮೋಸ ಹೋಗುವುದು ಹೆಚ್ಚಾಗಿ ಕಂಡುಬರುತ್ತದೆ. ಲಿಂಗಸ್ಗೂರು ತಾಲೂಕಿನ ಪೈದೊಡ್ಡಿ ಹತ್ತಿರ ಬರುವ ಗೊಲ್ಲಪಲ್ಲೇರ ದೊಡ್ಡಿಯ ಬೇಡ ಸಮುದಾಯದ ಕುಟುಂಬದವರು ನ್ಯಾಯಬೆಲೆ ಅಂಗಡಿಯಲ್ಲಿ ಕಡಿಮೆ ಆಹಾರ ವಿತರಣೆ ಮಾಡಿದರೂ ಅವರು ಕೊಟ್ಟಷ್ಟೆ ಆಹಾರ ತೆಗೆದುಕೊಂಡು ಬರುತ್ತಾರೆ ಎಂದು ಪಕ್ಕದ ಗ್ರಾಮದವರು ಹೇಳುತ್ತಾರೆ. ಅವರಿಗೆ

ಈ ಬಗ್ಗೆ ಹಳ್ಳಿಯವರು ತಿಳುವಳಿಕೆ ಹೇಳಿದರೆ ಅದನ್ನು ಯಾವ ರೀತಿಯ ತಮ್ಮ ಹಕ್ಕುಗಳನ್ನು ಕೇಳಬೇಕು ಎಂಬ ಅರಿವು ಅವರಲ್ಲಿ ಕಂಡುಬರುವುದಿಲ್ಲ. ಹಾಗೆ ಏನಾದರೂ ಕೇಳಿದರೆ ಎಲ್ಲಿ ನಮಗೆ ಆಹಾರ ವಿತರಣೆ ಮಾಡುವುದು ನಿಲ್ಲಿಸುತ್ತಾರೆ ಎನ್ನುವ ಭಯದಿಂದ ಅವರು ಕೊಟ್ಟಷ್ಟು ತೆಗೆದುಕೊಳ್ಳುತ್ತಾರೆ. ಇವರು ಮೋಸ ಹೋಗುದನ್ನು ನೋಡಿದರೆ ಜಗತ್ತಿನ ಅರಿವು ಬಹಳ ಕಡಿಮೆ ಎಂದು ಗೊತ್ತಾಗುತ್ತದೆ.

ಮಾನ್ವಿ ತಾಲೂಕಿನ ಯರಮಲ ದೊಡ್ಡಿಯಲ್ಲಿ ಎಲ್ಲ ಕುಟುಂಬದವರಿಗೆ ಎ.ಪಿ.ಎಲ್ ಕಾರ್ಡ್ ವಿತರಣೆ ಮಾಡಿದ್ದಾರೆ. ಅದೇ ಕಾರ್ಡ್ ಇಟ್ಟುಕೊಂಡು ಯಾವುದೇ ನ್ಯಾಯಬೆಲೆ ಅಂಗಡಿಯಿಂದ ಆಹಾರ ತೆಗೆದುಕೊಳ್ಳದೆ ಬಡತನದಲ್ಲಿ ಕಷ್ಟ ಪಟ್ಟು ಕೆಲಸ ಮಾಡಿ ಅಂಗಡಿಗಳಿಂದ ಆಹಾರ ಖರೀದಿಸುತ್ತಾರೆ. ಎ.ಪಿ.ಎಲ್. ಕಾರ್ಡ್ ವಾಪಸ್ಸು ಮಾಡಿ ಬಿ.ಪಿ.ಎಲ್. ಕಾರ್ಡ್ ಹೇಗೆ ಪಡೆದುಕೊಳ್ಳಬೇಕು ಎನ್ನುವ ಕನಿಷ್ಠ ಪ್ರಜ್ಞೆ ಇವರಲ್ಲಿ ಇಲ್ಲದಿರುವುದು ಕಂಡುಬರುತ್ತದೆ. ಕಾರಣ ಕಿತ್ತು ತಿನ್ನುವ ಬಡತನದಿಂದಾಗಿ ಬಹುತೇಕ ಜನರು ಅಜ್ಞಾನ ಅಂಧಕಾರದಲ್ಲಿ ಇರುವುದು ಕಂಡುಬರುತ್ತದೆ. ಕೃಷಿ ಜೊತೆಗೆ ಶ್ರಮ ಜೀವಿಗಳಾಗಿರುವ ಇವರು ಬಟ್ಟೆ ಸೌಂದರ್ಯಕ್ಕೆ ಹೆಚ್ಚು ಆದ್ಯತೆ ನೀಡುವುದಿಲ್ಲ. ದೊಡ್ಡಿಗಳಲ್ಲಿ ವಾಸಿಸುವ ಬೇಡ ಸಮುದಾಯದವರಿಗೆ ಸರ್ಕಾರ ಯೋಜನೆಗಳ ಬಗ್ಗೆ ಯಾವುದೇ ತರಹದ ಮಾಹಿತಿಗಳಿಲ್ಲ. "ಸರ್ಕಾರದ ಹತ್ತು ಹಲವಾರು ಯೋಜನೆ ಜಾರಿಗೆ ತಂದರೂ ಸೌಲಭ್ಯ ಪಡೆದುಕೊಳ್ಳುವುದರಲ್ಲಿ ಹಿಂದುಳಿದ್ದಾರೆ."[೧] ಬೇಡ ಸಮುದಾಯದ ನೆಲೆಗಳ ಜೀವನ ಮಟ್ಟ ತೀರ ಅತ್ಯಂತ ತಳಮಟ್ಟದಲ್ಲಿ ಇದೇ ಎಂದು ಹೇಳಬಹುದು. ಅವರನ್ನು ಯಾರು ಅಷ್ಟಾಗಿ ಗೌರವದಿಂದ ಕಾಣುವುದಿಲ್ಲ. ಬೇಡರು ಆರು ತಿಂಗಳು ಕಾಲ ದೊಡ್ಡಿಯಲ್ಲಿ ಜೀವನ ಮಾಡಿದರೆ ಇನ್ನು ಆರು ತಿಂಗಳು ದೂರದ ಪಟ್ಟಣಗಳಿಗೆ ಗೂಳೆ ಹೋಗುತ್ತಾರೆ. ಇದರಿಂದ ಆ ಪಟ್ಟಣದಲ್ಲಿಯೂ ಇವರಿಗೆ ಗುರುತಿಸುವುದಿಲ್ಲ. ಈ ಕಡೆ ತಮ್ಮ ದೊಡ್ಡಿಗಳಲ್ಲಿ ಇವರನ್ನು ಸರಿಯಾದ ರೀತಿಯಲ್ಲಿ ಗುರುತಿಸುವುದಿಲ್ಲ. ಹೀಗಾಗಿ ಬೇಡರ ಸ್ಥಿತಿ ಆರಕ್ಕೂ ಏರದೆ ಮೂರಕ್ಕೂ ಇಳಿಯದೆ ಅಲೆಮಾರಿಯಾಗಿ ಜೀವನ ನಡೆಸುತ್ತಿದ್ದಾರೆ.

ಇದರಿಂದ ಬೇಡರ ನೆಲೆಯು ಸಮಾಜದ ಕಟ್ಟ ಕಡೆಯ ನೆಲೆಯಾಗಿ ಕಂಡುಬರುತ್ತದೆ. ಬೇಡರ ನೆಲೆಗಳು ಗುಡ್ಡಗಳ ಹತ್ತಿರ ಅಥವಾ ಹಳ್ಳಿಗಳಿಂದ ಯಾವುದೇ ರಸ್ತೆಗಳಿಲ್ಲದ ಸ್ಥಳಗಳಲ್ಲಿ ನೆಲೆಸಿ ಹಳ್ಳಿಯ ಜನರಿಗೆ ಗೊತ್ತಿಲ್ಲದಂತೆ ಬದುಕುತ್ತಿದ್ದಾರೆ. ದೊಡ್ಡಿಗಳಲ್ಲಿ ನೆಲೆಸಿರುವುದರಿಂದ ಇಂದಿಗೂ ಸರ್ಕಾರದ ಸವಲತ್ತುಗಳನ್ನು ಪಡೆಯದೇ ವನವಾಸಿಗಳಾಗಿ ಉಳಿದುಕೊಂಡಿದ್ದಾರೆ. ಇವರ ಜೊತೆಗೆ ಇರುವ ಕುರುಬರು ಸಮಾಜದ ಮುಖ್ಯವಾಹಿನಿಗೆ ಬರುವುದರಲ್ಲಿ ಇವರ ಆರ್ಥಿಕ ಮೂಲ ಸಮುದಾಯ ಎಲ್ಲ ಸೌಲಭ್ಯ ಪಡೆದುಕೊಂಡು ಅಡವಿಯಲ್ಲಿ ಇದ್ದರೂ ತಮ್ಮ ಅಕ್ಕಪಕ್ಕದಲ್ಲಿ ಏನು ನಡೆಯುತ್ತಿದೆ ಎಂದು ತಿಳಿದುಕೊಳ್ಳುವ ಸಾಮರ್ಥ್ಯ ಬೆಳಸಿಕೊಂಡಿದ್ದಾರೆ.

ಬೇಡರಿಗೆ ಹೋಲಿಕೆ ಮಾಡಿದಾಗ ಕುರುಬರು ಸಾಮಾಜಿಕವಾಗಿ ಉತ್ತಮ ಸ್ಥಾನದಲ್ಲಿ ಇದ್ದಾರೆ. ಆರ್ಥಿಕವಾಗಿ ಸದೃಢವಾಗಿ ಇರುವ ಕುರುಬರು ಸಹಜವಾಗಿ ಸಮಾಜದಲ್ಲಿ ಉನ್ನತ ಸ್ಥಾನಮಾನ ಪಡೆದುಕೊಳ್ಳುವುದರಲ್ಲಿ ಸಹಜವಾಗಿ ಸಮುದಾಯ ಮುಂದುವರಿಯುತ್ತಿದೆ. ಹಣದಿಂದ ತಮಗೆ ಸಿಗಬೇಕಾದ ಸವಲತ್ತುಗಳನ್ನು ಪಡೆದುಕೊಳ್ಳುವುದರಲ್ಲಿ ಯಶಸ್ವಿಯಾಗುತ್ತಿದ್ದಾರೆ. ಮೇಲಾಗಿ ಕುರುಬರು ದೈವಿಕ ಆಚರಣೆಯಲ್ಲಿ ಮೊದಲನೆಯ ಪಂಥಿಯಲ್ಲಿ ಇರುವುದರಿಂದ ಸಹಜವಾಗಿ ಇವರನ್ನು ಗುರುತಿಸುತ್ತಾರೆ. ಬೇಡ ಸಮುದಾಯದ ದೊಡ್ಡಿಗಳಲ್ಲಿ ಕುರುಬ ಸಮುದಾಯದವರ ಕುಟುಂಬಗಳೂ ಕಂಡುಬರುತ್ತವೆ. ಅವರ ಮನೆ, ಅವರು ಪಡೆದುಕೊಂಡಿರುವ ಸವಲತ್ತುಗಳು, ಈ ಸಮುದಾಯಕ್ಕೆ ಇರುವ ಆರ್ಥಿಕ ಮೂಲಗಳನ್ನು ನೋಡಿದರೆ ಅವರ ಸಾಮಾಜಿಕ ಜೀವನ ಮಟ್ಟ ತಿಳಿದುಬರುತ್ತದೆ. ಜೊತೆಗೆ ಸಾಂಪ್ರದಾಯಿಕ ಕಾರ್ಯಕ್ರಮಗಳಲ್ಲಿ ಪೂಜಾರಿಗಳೆಂದು ಮೊದಲ ಸ್ಥಾನಮಾನ ಇರುವುದರಿಂದ ಸಾಮಾಜಿಕವಾಗಿ ಬೇಡ ಸಮುದಾಯಕ್ಕೆ ಹೋಲಿಕೆ ಮಾಡಿದರೆ ಕುರುಬರು ಸಾಮಾಜಿಕ ಆರ್ಥಿಕವಾಗಿ ಉತ್ತಮವಾದ ಸ್ಥಾನಮಾನ ಪಡೆದುಕೊಂಡಿದ್ದಾರೆ. ಆರ್ಥಿಕವಾಗಿ ಬೇಡರು ಅತ್ಯಂತ ತಳಮಟ್ಟದಲ್ಲಿ ಇರುವುದರಿಂದ ದೊಡ್ಡಿಗಳಲ್ಲಿ ನೆಲೆಸಿರುವ ಈ ಎರಡು ಸಮುದಾಯಗಳಾದ ಬೇಡ ಮತ್ತು ಕುರುಬ ಸಮುದಾಯಗಳನ್ನು ಹೋಲಿಕೆ ಮಾಡಿದಾಗ ಸಾಕಷ್ಟು ವೈರುದ್ಯತೆಗಳು ಇರುವುದು ತಿಳಿದುಬರುತ್ತದೆ. ಕುರುಬರು ಅಡವಿಯಲ್ಲಿ ಇದ್ದರೂ ಸಮಾಜದ ನೆರೆಹೊರೆಯವರ ಜೊತೆಗೆ ಅವರ ಸ್ಥಾನಮಾನಗಳಿಗೆ ತಕ್ಕಂತೆ ಬದಲಾವಣೆಯನ್ನು ಹೊಂದಿ ಸಮಾಜದಲ್ಲಿ ತಮ್ಮನ್ನು ತಾವು ಗುರುತಿಸಿಕೊಳ್ಳುತ್ತಿದ್ದಾರೆ. ಆರ್ಥಿಕವಾಗಿ ದುಸ್ಥಿತಿಯಲ್ಲಿ ಇರುವ ಬೇಡರು ಸರಕಾರದ ಯಾವುದೇ ಸೌಲಭ್ಯ ಪಡೆದುಕೊಂಡಿಲ್ಲ. ಜೊತೆಗೆ ಇವರನ್ನು ಯಾರು ಇಲ್ಲಿಯವರೆಗೆ ಗುರುತಿಸಿಲ್ಲ. ದೊಡ್ಡಿಯನ್ನು ಬಿಟ್ಟು ಹೊರಗಿನವರು ಜೊತಗೆ ಒಡನಾಟ ಇಲ್ಲದಿರುವುದರಿಂದ ಅರಣ್ಯವಾಸಿಗಳಾಗಿ ಉಳಿದಿದ್ದಾರೆ. ಬೇಡರು ಸಾಮಾಜಿಕ ತುಳಿತಕ್ಕೊಳಗಾದರೂ ಅವರಲ್ಲಿ ಸಾಮಾನ್ಯ ತಿಳುವಳಿಕೆ ಕೂಡ ಇವರಲ್ಲಿ ಇಲ್ಲ. ಅಲ್ಪಸ್ವಲ್ಪ ವಿದ್ಯಾವಂತರು ನೆರೆಹೊರೆಯವರ ಜೊತೆ ಉತ್ತಮ ಸಂಬಂಧ ಹೊಂದಿದ್ದಾರೆ. ಅಕ್ಷರಸ್ಥರಾದ ಬೇಡ ಕುಟುಂಬದವರು ಸಾಮಾಜಿಕವಾಗಿ ಮುಂದೆ ಬರಲು ಪ್ರಯತ್ನಿಸುತ್ತಿರುವುದು ನೈಜವಾದ ಸಂಗತಿಯಾಗಿದೆ. ಅನಕ್ಷರಸ್ಥರ ಪಾಡು ಕಣ್ಣು ಇದ್ದರೂ ಕುರುಡರಂತೆ ಬದುಕುತ್ತಿರುವುದು ಕಂಡುಬರುತ್ತದೆ. ಕುರುಬರು ತಾವು ಅನಕ್ಷರಸ್ಥರಾದರೂ ಸಮಾಜದ ನೆರೆಹೊರೆಯವರ ಸಹವಾಸದಿಂದ ಕುರುಬರಿಗೆ ಸಾಮಾಜಿಕ ತಿಳುವಳಿಕೆ ಜೊತೆಗೆ ವ್ಯವಹಾರಿಕ ಬದುಕಿನಲ್ಲಿ ಆಗುವ ಅನ್ಯಾಯ ಇದರಿಂದ ಪಾಠ ಕಲಿತ ಕುರುಬರು ತಮ್ಮ ಮಕ್ಕಳಿಗೆ ಇಂತಹ ಅನ್ಯಾಯ ಆಗಬಾರದು ಎಂದು ತಿಳಿದುಕೊಂಡು ಅಕ್ಷರಸ್ಥರನ್ನಾಗಿ ಮಾಡುತ್ತಿದ್ದಾರೆ. ಸಾಮಾಜಿಕ ಉನ್ನತ ಸ್ಥಾನಮಾನ ಪಡೆದುಕೊಳ್ಳುತ್ತಿದ್ದಾರೆ.

ಒಟ್ಟಾರೆಯಾಗಿ ಹೇಳುವುದಾದರೆ ದೊಡ್ಡಿಗಳಲ್ಲಿ ವಾಸಿಸುವ ಬೇಡರು ಮತ್ತು ಕುರುಬರ ಸ್ಥಾನಮಾನದಲ್ಲಿ ಸಾಕಷ್ಟು ವೈರುದ್ಯತೆ ಇದೆ. ಕುರುಬರ "ಸಮಾಜಿಕ ಜೀವನ ನೋಡಿದರೆ

ನಾಗರಿಕ ಜೀವನಕ್ಕೆ ಪರಸ್ಪರವಾಗಿ ಹೊಂದಿಕೊಳ್ಳುತ್ತಿದ್ದಾರೆ."[೨] ಬೇಡರ ಸಾಮಾಜಿಕ ಜೀವನ ನೋಡಿದರೆ ಕುರುಬರಿಗಿಂತ ಕೆಳಮಟ್ಟದ ಸ್ಥಾನಮಾನದಲ್ಲಿ ಕಂಡುಬರುತ್ತಾರೆ. ಎಂದು ಕ್ಷೇತ್ರಕಾರ್ಯಕ್ಕೆ ಹೋದಾಗ ತಿಳಿದುಬಂದ ಸಂಗತಿಯಾಗಿದೆ. ಸಾಮಾನ್ಯವಾಗಿ ಇವತ್ತಿನ ದಿನಮಾನದಲ್ಲಿ "ದುಡ್ಡು ಇದ್ದವನೆ ದೊಡ್ಡವನು" ಎನ್ನುವ ಮಾತು ಇಲ್ಲಿ ಇವರ ಸಾಮಾಜಿಕ ಸ್ಥಾನಮಾನ ನೋಡಿದಾಗ ಈ ಗಾದೆ ಮಾತು ಅಕ್ಷರ ಸಹ ಸತ್ಯವಾಗಿದೆ.

ಆರ್ಥಿಕ ಹೋಲಿಕೆ ಮತ್ತು ವ್ಯತ್ಯಾಸ

ರಾಯಚೂರು ಜಿಲ್ಲೆಯ ದೊಡ್ಡಿಗಳಲ್ಲಿ ಬೇಡ ಸಮುದಾಯದ ತರುವಾಯ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಕುರುಬರು ಕಂಡುಬರುತ್ತಾರೆ. ಈ ಸಮುದಾಯದವರು ಮೂಲತಃ ಕುರಿ ಸಾಕುವ ವೃತ್ತಿ ಆರಂಭಗೊಂಡಂದಿನಿಂದಲೇ ಕುರುಬರ ಇತಿಹಾಸ ಪ್ರಾರಂಭವಾಯಿತು. ಪೂರ್ವದಲ್ಲಿ ಮನುಷ್ಯನಿಗೆ ಆಹಾರ ಸಂಗ್ರಹಿಸುವದು ಕಷ್ಟ ಸಾಧ್ಯವಾದಾಗ ಅವನು ಕುರಿ, ಮೇಕೆ ಮತ್ತು ಆಕಳು ಇತ್ಯಾದಿ ಪ್ರಾಣಿಗಳನ್ನು ತನ್ನ ಆಹಾರಕ್ಕಾಗಿ ಸಾಕಲು ಪ್ರಾರಂಭಿಸಿದ.

ಕುರುಬರ ಮನೆಗಳು ಕೃಷಿನಿರತ ಮನೆಗಳಾಗಿವೆ. ಸಾಮಾನ್ಯವಾಗಿ ಎಲ್ಲ ವರ್ಗದವರ ಜೊತೆಯಲ್ಲಿ ಕೂಡಿಕೊಂಡು ಜೀವನ ನಡೆಸುತ್ತಾರೆ. ಕುರುಬ ಸಮುದಾಯವು ಸಾಮಾಜಿಕವಾಗಿ ಬೇಡರಿಗಿಂತ ಉನ್ನತವಾದ ಸ್ಥಾನವನ್ನು ಪಡೆದುಕೊಂಡಿದೆ. ಈ ಸಮುದಾಯದವರು ಒಗ್ಗಟಿನಿಂದ ಇರುವುದು ಕಂಡುಬರುತ್ತದೆ.

ರಾಯಚೂರು ಜಿಲ್ಲೆಯ ದೊಡ್ಡಿಗಳಲ್ಲಿ ಬೇಡರಿಗೆ ಆರ್ಥಿಕವಾಗಿ ಹೋಲಿಕೆ ಮಾಡಿದರೆ ಉತ್ತಮ ಸ್ಥಿತಿಯಲ್ಲಿ ಜೀವನ ನಡೆಸುವುದು ಕಂಡುಬರುತ್ತದೆ. ಕುರುಬರು ಮುಂದುವರೆದ ಸಮುದಾಯದವರಂತೆ ಕಾಂಕ್ರೀಟ್ ಮನೆ, ಮಾಳಿಗೆ ಮನೆ, ಜನತಾ ಮನೆಗಳು ಕಂಡುಬರುತ್ತವೆ, ಆದರೂ ಇನ್ನೂ ಕೆಲವರು ಗುಡಿಸಲುಗಳಲ್ಲೇ ವಾಸಿಸುತ್ತಿರುವುದನ್ನು ನೋಡಬಹುದು.

ಕುರುಬರ ದಿನನಿತ್ಯದ ಆಹಾರ ನುಚ್ಚಿನ ಅಂಬಲಿ. ಅಂಬಲಿಯೇ ಅವರಿಗೆ ಮೃಷ್ಟಾನ್ನ ಭೋಜನ. ಜೊತೆಗೆ ಜೋಳದ ರೊಟ್ಟಿ, ಸಜ್ಜಿ ರೊಟ್ಟಿ ಮತ್ತು ಜೋಳದ ನುಚ್ಚಿನಿಂದ ತಯಾರಿಸಿದ ಅಂಬಲಿಯೊಂದಿಗೆ ಕುರಿ ಹಾಲು ಸೇರಿಸಿ ಊಟ ಮಾಡುವ ಕುರುಬರು ಉತ್ತಮ ದೇಹದಾರ್ಢ್ಯ ಹೊಂದಿರುತ್ತಾರೆ. ಕುರುಬರು ಕುರಿಗಳನ್ನು ಮೇಯಿಸುವುದಕ್ಕಾಗಿ ಸದಾ ಅಡವಿಯಲ್ಲಿರಬೇಕಾಗುವುದರಿಂದ ಮಳಿ-ಚಳಿಯಿಂದ ರಕ್ಷಿಸಿಕೊಳ್ಳುವುದಕ್ಕಾಗಿ ಮೈಮೇಲೆ ಯಾವಾಗಲು ಕಂಬಳಿ ಇರುತ್ತದೆ.

ಬೇಡರ ಜೊತೆ ಕುರುಬರ ಹೋಲಿಕೆ ಮಾಡಿದರೆ, ಬೇಡರು ಮಾಡಿದರೆ ಒಕ್ಕಲುತನ ಮಾಡಬೇಕು ಇಲ್ಲವೇ ಉದ್ಯೋಗ ಹರಸಿ ಬೆಂಗಳೂರುಗಳಂತಹ ನಗರಕ್ಕೆ ಗುಳೆ ಹೋಗಬೇಕು. ಆದರೆ ಕುರುಬ ಸಮುದಾಯದವರು ಒಕ್ಕಲುತನದಲ್ಲಿ ಸರಿಯಾದ ಲಾಭ ಸಿಗಲಿಲ್ಲ ಅಂದರೆ ಅವರ ಕುಲ ಕಸುಬು ಕುರಿಸಾಕಾಣಿಕೆ ಅವರಿಗೆ ಆದಾರ ಮತ್ತು ಆರ್ಥಿಕವಾಗಿ ಸದೃಢವಾಗಲು ಇದೊಂದು ಉತ್ತಮ ಕಸುಬಾಗಿದೆ.

ಆರ್ಥಿಕವಾಗಿ ಬೇಡರಿಗಿಂತ ಕುರುಬರು ತುಂಬಾ ಉತ್ತಮ ಸ್ಥಿತಿಯಲ್ಲಿ ಇದ್ದಾರೆ. ಸಾಮಾನ್ಯವಾಗಿ ಇವರ ಪೂರ್ವಿಕರು ಅತಿ ಹೆಚ್ಚು ಭೂಮಿಯನ್ನು ಹೊಂದಿದ್ದಾರೆ. ಪೂರ್ವಿಕರಿಂದ ಅವರೇ ಪಿತ್ರಾರ್ಜಿತ ಆಸ್ತಿಯನ್ನು ಹಂಚಿಕೊಳ್ಳುತ್ತಾರೆ. ಕುರಿಗಳನ್ನು ಹೊಂದಿದ ಕುಟುಂಬಗಳು ಒಟ್ಟಾಗಿ ಕುರಿಗಳನ್ನು ಮೇಯಿಸುವುದುಂಟು. ಈ ಕುಟುಂಬಗಳಲ್ಲಿ ಹೆಚ್ಚು ಕುರಿ ಇರುವುದರಿಂದ ಸಾವಯವ ಗೊಬ್ಬರ ಅತಿ ಹೆಚ್ಚು ಸಿಗುತ್ತದೆ. "ಭೂಮಿಯಲ್ಲಿ ಅತಿಹೆಚ್ಚು ಫಸಲು ಪಡೆಯಲು ಅನುಕೂಲವಾಗಿದೆ. ಕುರಿಯನ್ನು ಬೇರೆ ಹೊಲಗಳಲ್ಲಿ ನಿಲ್ಲಿಸಿದರೆ ಅದರಿಂದ ಹಣವನ್ನು ಪಡೆದುಕೊಳ್ಳುತ್ತಾರೆ."[೩] ಒಟ್ಟಾರೆಯಾಗಿ ಹೇಳುವುದಾದರೆ ಕುರುಬರು ಬೇಡರಿಗಿಂತ ಉತ್ತಮ ಸ್ಥಿತಿಯಲ್ಲಿ ಜೀವನ ನಡೆಸುತ್ತಿದ್ದಾರೆ.

ದೊಡ್ಡಿಗಳಲ್ಲಿ ವ್ಯವಸಾಯದ ಜೊತೆಗೆ ಕುಲಕಸುಬು ಇಲ್ಲಿನ ಜನರ ಜೀವಾಳವಾಗಿದೆ. ಈಗಿನ ಪರಿಸ್ಥಿತಿಯಲ್ಲಿ ಇಲ್ಲಿನ ಕುರುಬರಿಗೆ ಇದು ಬೇಸಾಯಕ್ಕಿಂತಲೂ ಆರ್ಥಿಕವಾಗಿ ಲಾಭದಾಯಕವಾದ ಉದ್ಯಮವಾಗಿದೆ. ಹಿಂದೆಲ್ಲ ಕಾಡುಮೇಡುಗಳನ್ನು ಅಲೆಯುತ್ತಾ ಕುರಿಗಳ ರಕ್ಷಣೆಯಲ್ಲಿರುತ್ತಿದ್ದ ಕುರುಬರಿಗೆ ಕ್ರಮೇಣ ಸುಲಭವಾಗಿ ಒಗ್ಗುವ ವೃತ್ತಿಯಾಗಿ ಕುರಿ ಸಾಕಾಣಿಯನ್ನು ಕುಲ ಕಸುಬು ಮಾಡಿಕೊಂಡರು. ಈ ಜನರಿಗೆ ಕುರಿಸಾಕಾಣಿಕೆ ಹೊಸ ವೃತ್ತಿ ಏನು ಅಲ್ಲ. ಇವರು ಸಾಕುವ ಪ್ರಾಣಿಯನ್ನು ದೈವ ಎಂಬ ರೀತಿಯಲ್ಲಿ ನಂಬಿದ್ದಾರೆ. ಇವರಿಗೆ ಕುರಿ ಸಾಕಾಣಿಕೆ ಆರ್ಥಿಕತೆಯ ದೊಡ್ಡ ಮೂಲ ಎಂದು ಹೇಳುತ್ತಾರೆ. ಇದೇ ಹೊತ್ತಲಿ ದೊಡ್ಡಿಗಳಲ್ಲಿ ಇರುವ ಕುರುಬರು ಕುರಿಸಾಕಾಣಿಕೆಯ ಜೊತೆಗೆ ಕೃಷಿ ಕೆಲಸವನ್ನು ಪ್ರಮುಖ ವೃತ್ತಿಯನ್ನಾಗಿ ಅವಲಂಬಿಸಿದ್ದಾರೆ. ಕುರಿ ಸಾಕಿ ಕುಬೇರರಾಗಿ ಎಂಬ ಮಾತುಗಳನ್ನು ದೊಡ್ಡಿಯ ಜನರು ಅಕ್ಷರಶಃ ಪಾಲಿಸುತ್ತಿದ್ದಾರೆ. ಹೀಗಾಗಿ ದೊಡ್ಡಿಯಲ್ಲಿ ಬೇಡ, ಕುರುಬ ಮತ್ತು ಕಬ್ಬಲಿಗ ಮನೆಗಳಲ್ಲೂ ಕುರಿ ಅಥವಾ ಮೇಕೆಗಳಿವೆ. ಅವರವರ ಶಕ್ತ್ಯಾನುಸಾರವಾಗಿ ಕಡಿಮೆ ಎಂದರೆ ಐವತ್ತು ಕುರಿಗಳಿಂದ ಮೊದಲುಗೊಂಡು ಎರಡು ನೂರು ಕುರಿಗಳನ್ನು ಹೊಂದಿರುವ ಕುಟುಂಬಗಳೂ ಇವೆ. ಅದು ಏನೇ ಇರಲಿ ದೊಡ್ಡಿಗಳಲ್ಲಿ ವಾಸಿಸುವ ಬೇಡ ಮತ್ತು ಕುರುಬ ಸಮುದಾಯವು ಆರ್ಥಿಕವಾಗಿ ಜೀವನ ಸುಧಾರಣೆ ನಿಟ್ಟಿನಲ್ಲಿ ಬೇಡರು ಹೆಚ್ಚಾಗಿ ಕೃಷಿಯನ್ನು ನಂಬಿ ಜೀವನ ನಡೆಸುತ್ತಿರುವುದು ಕಂಡುಬರುತ್ತದೆ. ನೀರಾವರಿ ಇರುವ ಕಡೆಗಳಲ್ಲಿ ಬೇಡರ ಸ್ಥಿತಿ ತುಂಬಾ ಸುಧಾರಣೆ ಕಂಡುಬರುತ್ತದೆ. ಬೇಡ ಕುಟುಂಬದವರು ಕೃಷಿಯ ಜೊತೆ ಪರ್ಯಾಯ ಉದ್ಯೋಗ ಹೊಂದಿ ದೊಡ್ಡಿಗಳಲ್ಲಿ ನೆಮ್ಮದಿಯ ಜೀವನ ನಡೆಸುತ್ತಿರುವುದು ಕಂಡುಬರುತ್ತದೆ. ಈ ಸಮುದಾಯಕ್ಕೆ ಯಾವುದೇ ಕುಲ ಕಸುಬು ಇಲ್ಲ, ಆರ್ಥಿಕವಾಗಿ ಲಾಭ ತರುವ ಉದ್ಯೋಗ ಇವರಿಗೆ ಅಷ್ಟಾಗಿ ಗೊತ್ತಿಲ್ಲ ಎಂದು ಹೇಳಿದರೆ ತಪ್ಪಾಗಲಾರದು.

ಕುರುಬರನ್ನು ಬೇಡರಿಗೆ ಹೋಲಿಕೆ ಮಾಡಿದರೆ ಆರ್ಥಿಕವಾಗಿ ತೀರಾ ಹಿಂದುಳಿದ ಕುಟುಂಬಗಳು ಬೇಡರಲ್ಲಿ ಕಂಡುಬರುತ್ತವೆ. ಕಾರಣ ಬೇಡರು ಕೇವಲ ಕೃಷಿಯನ್ನು ಅವಲಂಬಿಸಿ ಬದುಕುವ ಕುಟುಂಬಗಳ ಜೊತೆಗೆ ಅಲ್ಪ ಸ್ವಲ್ಪ ನೀರಾವರಿ ಹೊಂದಿರುವ

ಭೂಮಿ ಮತ್ತು ದೊಡ್ಡ ಪ್ರಮಾಣದಲ್ಲಿ ಖುಷ್ಕಿ (ಒಣ ಬೇಸಾಯ) ಭೂಮಿಯನ್ನು ಹೊಂದಿದ್ದಾರೆ. ಆದರೆ ಕುರುಬರು ಕೃಷಿ ಮತ್ತು ಕುಲ ಕಸುಬು ಎರಡು ವೃತ್ತಿಗಳನ್ನು ಸರಿಯಾಗಿ ಮಾಡಿಕೊಂಡು ಹೋಗುವುದನ್ನು ಕಾಣುತ್ತೇವೆ. ಆದ್ದರಿಂದ ಆರ್ಥಿಕವಾಗಿ ಸದೃಢರಾಗಿದ್ದಾರೆ. ಬೇಡರರಂತೆ ಕುರುಬರು ಕೇವಲ ಕೃಷಿಯನ್ನೇ ನಂಬಿದರೆ ಆರ್ಥಿಕವಾಗಿ ತುಂಬಾ ಸಂಕಷ್ಟ ಎದುರಿಸಬೇಕಾಗುತ್ತಿತ್ತು. ಕುರುಬರಿಗೆ ಕೃಷಿಯಲ್ಲಿ ನಷ್ಟವಾದರೆ ಕುಲ ಕಸುಬು ಯಾವತ್ತು ಅವರನ್ನು ಕೈಬಿಟ್ಟಿಲ್ಲ ಎಂದು ಹೇಳುವುದು ಈ ಜಿಲ್ಲೆಯಲ್ಲಿ ಸಾಮಾನ್ಯವಾದ ಮಾತು. ಕುರುಬರು ಸಾಕಷ್ಟು ಜಮೀನು ಹೊಂದಿರುವುದು ಕಂಡುಬರುತ್ತದೆ.

ಒಟ್ಟಾರೆಯಾಗಿ ಹೇಳುವುದಾದರೆ ಕುರುಬ ಸಮುದಾಯ ದೊಡ್ಡಿಗಳಲ್ಲಿ ಮತ್ತು ಬೇಡ ಸಮುದಾಯದ ದೊಡ್ಡಿಗಳಲ್ಲಿ ಈ ಎರಡು ಸಮುದಾಯದ ನೆಲೆಗಳನ್ನು ನೋಡಿದಾಗ ತಿಳಿದುಬರುವುದೇನೆಂದರೆ ಯಾವುದೇ ಸಮುದಾಯವಾಗಿರಲಿ ಹೆಚ್ಚು ಭೂ ಹಿಡುವಳಿಯನ್ನು ಹೊಂದಿರುವ ಮತ್ತು ಆ ಭೂಮಿಗೆ ನೀರಾವರಿ ಸೌಲಭ್ಯ ಇರುವ ಕುಟುಂಬದವರು ಆರ್ಥಿಕವಾಗಿ ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತದೆ. ಇದರ ಜೊತೆಯಲ್ಲಿ ರಾಯಚೂರು ಜಿಲ್ಲೆಯ ದೊಡ್ಡಿಗಳಲ್ಲಿ ನೆಲಸಿರುವ ಸಮುದಾಯದ ಆರ್ಥಿಕ ಸ್ಥಿತಿ ತಾಲೂಕಿನಿಂದ ತಾಲೂಕಿಗೆ ಸಾಕಷ್ಟು ವ್ಯತ್ಯಾಸ ಕಂಡುಬರುತ್ತದೆ. ಸಿಂಧನೂರು ಮತ್ತು ಲಿಂಗಸ್ಗೂರು ತಾಲೂಕಿನ ನೀರಾವರಿ ಭೂಮಿಯಿಂದ ಜನರ ಆರ್ಥಿಕ ಸ್ಥಿತಿ ಸುಧಾರಣೆಯಾಗುತ್ತಿದೆ. ಆದರೆ ರಾಯಚೂರು ಮತ್ತು ದೇವದುರ್ಗ ತಾಲೂಕಿನ ದೊಡ್ಡಿಗಳಲ್ಲಿ ವಾಸಿಸುವ ಬೇಡ ಸಮುದಾಯದವರು ಆರ್ಥಿಕವಾಗಿ ಅತ್ಯಂತ ದುಸ್ಥಿತಿಯಲ್ಲಿ ಜೀವನ ಸಾಗಿಸುತ್ತಿದ್ದಾರೆ. ಇಲ್ಲಿನ ಬೇಡರು ಭೂಮಿಯನ್ನು ನಂಬಿಕೊಂಡು ಬದುಕುತ್ತಿದ್ದಾರೆ. ಅದರಲ್ಲೂ ಮಳೆ ಆಶ್ರಿತವಾದ ಭೂಮಿ ಹೆಚ್ಚಿನ ಪ್ರಮಾಣದಲ್ಲಿದೆ. ಒಂದು ವೇಳೆ ಮಳೆ ಬರದಿದ್ದರೆ ಇವರ ಬದುಕು ಅತ್ಯಂತ ನಿಕೃಷ್ಟವಾಗಿ ಬಿಡುತ್ತದೆ. ಮಳೆ ಬರದಿದ್ದಾಗ ಇಲ್ಲಿನ ನಿವಾಸಿಗಳು ಬಹುತೇಕ ವಲಸೆ ಹೋಗುತ್ತಾರೆ. ಇಲ್ಲಿನ ಯಾವುದೇ ನಿವಾಸಿಗಳಿಗೆ ಸರಕಾರಿ ಯೋಜನೆಗಳು ಹತ್ತು ಹಲವಾರು ಬಂದರು ಇಲ್ಲಿನ ನಿವಾಸಿಗಳಿಗೆ ತಲುಪುತ್ತಿಲ್ಲ. ಅಧ್ಯಯನದ ಸಂದರ್ಭದಲ್ಲಿ ಇಲ್ಲಿನ ಯಾವುದೇ ನಿವಾಸಿಗಳಿಗೆ ಉದ್ಯೋಗ ಖಾತ್ರಿ ಉದ್ಯೋಗ ಕಾರ್ಡ್ ಹೊಂದಿಲ್ಲದಿರುವುದು ಕಂಡುಬರುತ್ತದೆ. ಉದ್ಯೋಗ ಖಾತ್ರಿ ಯೋಜನೆಯಲ್ಲಿ ಶ್ರಮಸಾಂದ್ರ ತಂತ್ರಜ್ಞಾನವನ್ನು ಬಳಸಿಕೊಳ್ಳದೇ ಬಂಡವಾಳಸಾಂದ್ರ ತಂತ್ರಜ್ಞಾನವನ್ನು ಬಳಕೆ ಮಾಡಿಕೊಂಡು ಕೆಲಸ ಮಾಡಿಸುತ್ತಿದ್ದಾರೆ. ಇದರಿಂದ ಕೂಲಿ ಕೆಲಸ ಸಿಗದೇ ಇಲ್ಲಿನ ನಿವಾಸಿಗಳು ನೆರೆಯ ಮಹಾನಗರಗಳಿಗೆ ಸಾಮಾನ್ಯವಾಗಿ ವಲಸೆ ಹೋಗುತ್ತಿರುವುದು ಕಂಡುಬರುತ್ತದೆ. ಉದ್ಯೋಗವಿಲ್ಲದೇ ಅತಂತ್ರ ಸ್ಥಿತಿ ಒಂದು ಕಡೆಯಾದರೆ ಇಲ್ಲಿನ ನಿವಾಸಿಗಳಿಗೆ "ಸರ್ಕಾರದ ಆಶ್ರಯ ಯೋಜನೆಯಲ್ಲಿ ವಸತಿಯನ್ನು ಬಡವರಿಗೆ ಕಲ್ಪಿಸುವುದು"[೪] ಮತ್ತು ಬಡಜನರು ಗುಡಿಸಲುಗಳಿಂದ ಮುಕ್ತವಾಗಲಿ ಎಂಬ ಆಶಯ ಸರ್ಕಾರದ್ದಾಗಿದೆ. ಆದರೆ ಈ ಉದ್ದೇಶ

ಈಡೇರುತ್ತಿಲ್ಲ. ಕಾರಣ ರಾಜಕೀಯ ಇಚ್ಛಾಶಕ್ತಿಯ ಕೊರತೆ ಕಂಡುಬರುತ್ತದೆ. ಜೊತೆಗೆ ಇಲ್ಲಿನ ನಿವಾಸಿಗಳು ೬ ತಿಂಗಳು ದೊಡ್ಡಿಯಲ್ಲಿ ಇದ್ದರೆ ಇನ್ನು ೬ ತಿಂಗಳು ಮಹಾನಗರಗಳಿಗೆ ವಲಸೆ ಹೋಗುವುದರಿಂದ ಸರ್ಕಾರ ಯೋಜನೆಯ ಲಾಭ ಪಡೆದುಕೊಳ್ಳುವಲ್ಲಿ ವಿಫಲವಾಗುತ್ತಿದ್ದಾರೆ. ಜೊತೆಗೆ ಯಾವುದೇ ಸರ್ಕಾರದ ಯೋಜನೆ ಇರಲಿ, ಹಣ ಖರ್ಚು ಮಾಡಿದರೆ ಮಾತ್ರ ಅದರ ಸದುಪಯೋಗ ಜನರು ಪಡೆದುಕೊಳ್ಳಬಹುದು ಇಲ್ಲದಿದ್ದರೆ ಹಣವಂತರ ಪಾಲಾಗುತ್ತದೆ ಎಂದು ಇಲ್ಲಿನ ನಿವಾಸಿಗಳ ವಿಚಾರವಾಗಿದೆ. ಕೇವಲ ಕುರುಬರು ಮಾತ್ರವಲ್ಲದೇ ಬೇಡ ಸಮುದಾಯದ ಕೆಲವು ಕುಟುಂಬಗಳು ಕುರಿ ಸಾಕಾಣಿಕೆಯ ಕಾಯಕದಲ್ಲಿ ತೊಡಗಿರುವ ಜನರು ಆರ್ಥಿಕವಾಗಿ ಸಾಕಷ್ಟು ಸುಧಾರಣೆಯಾಗುತ್ತಿರುವುದು ಕಂಡುಬಂದಿದೆ.

ಕೊನೆಯದಾಗಿ ಹೇಳುವುದಾದರೆ ದೊಡ್ಡಿಗಳು ಹಳ್ಳಿಗಳಾಗಿ ಪರಿವರ್ತನೆ ಹೊಂದಿರುವ ಇಂದು ಸರ್ಕಾರದ ಯೋಜನೆಗಳು ಸ್ವಲ್ಪ ಮಟ್ಟಿಗೆ ಸಿಗುತ್ತಿರುವುದು ಅಧ್ಯಯನದ ಮುಖಾಂತರ ಕಂಡುಬಂದಿದೆ. ಕುಟುಂಬದ ಆರ್ಥಿಕ ಸುಧಾರಣೆ ಮತ್ತು ಸರ್ಕಾರದ ಹತ್ತು ಹಲವಾರು ಯೋಜನೆಗಳ ಲಾಭಗಳು ಇಂತಹ ಗ್ರಾಮಗಳಿಗೆ ದೊರಕುತ್ತಿರುವುದರಿಂದ ಸಾಕಷ್ಟು ದೊಡ್ಡಿಗಳು ಪರಿವರ್ತನೆಯಾಗುತ್ತಿವೆ. ಬೇಡ ಮತ್ತು ಕುರುಬ ಸಮುದಾಯದ ಆರ್ಥಿಕ ಸ್ಥಿತಿ ನೋಡಿದರೆ ಯಾವುದೇ ಸಮುದಾಯವಾಗಿರಲಿ ಎರಡು ಉದ್ಯೋಗಗಳನ್ನು ನಂಬಿಕೊಂಡಿರುವ ಸಮುದಾಯ ಆರ್ಥಿಕವಾಗಿ ಸುಧಾರಣೆಯಾಗುತ್ತಿವೆ. ಆದರೂ ಇಲ್ಲಿನ ಬಹುತೇಕ ದೊಡ್ಡಿಗಳಲ್ಲಿ ಅವರ ನಿವಾಸಗಳು ಗುಡಿಸಲುಗಳಿಂದ ಕೂಡಿರುತ್ತವೆ. ಈ ಅಧ್ಯಯನದ ಸಂಧರ್ಭದಲ್ಲಿ ಯಾವುದೇ ಸರ್ಕಾರಿ ನೌಕರರು ಕಂಡುಬಂದಿಲ್ಲ.

ಶೈಕ್ಷಣಿಕ ಹೋಲಿಕೆ ಮತ್ತು ವ್ಯತ್ಯಾಸ

ಶಿಕ್ಷಣವೇ ಶಕ್ತಿ ಎಂದು ಹೇಳುವಂತೆ, ಶಿಕ್ಷಣ ಮಾನವನ ನಿಪುಣತೆ ಮತ್ತು ಬೌದ್ಧಿಕ ಸಾಮರ್ಥ್ಯವನ್ನು ಹೆಚ್ಚಿಸುವಲ್ಲಿ ಮಹತ್ವ ಪೂರ್ಣ ಸ್ಥಾನ ಪಡೆದಿದೆ. ಶಿಕ್ಷಣವು ಅಭಿವೃದ್ಧಿಯ ಮೂಲಮಂತ್ರ ಹಾಗೂ ಸಾಮಾಜಿಕ ಪರಿವರ್ತನೆಯ ಮೂಲ ಸಾಧನ. ಶಿಕ್ಷಣವನ್ನು ಅಲಕ್ಷಿಸಿ ಯಾವುದೇ ದೇಶ ಮುಂದುವರಿಯುವುದು ಸಾಧ್ಯವಿಲ್ಲ. ಮಾನವನ ಸಾಮಾಜಿಕ ಬದುಕು ಶಿಕ್ಷಣದ ಮೇಲೆ ನಿಂತಿದೆ. ಆದುದರಿಂದಲೇ ಶೈಕ್ಷಣಿಕ ಪ್ರಗತಿ ಸಾಧಿಸಿರುವ ಯಾವುದೇ ದೇಶವಾದರೂ ಅತೀ ಸುಲಭವಾಗಿ ಮುಂದುವರಿಯುತ್ತದೆ. ಇಂದು ಜಗತ್ತಿನಲ್ಲಿ ನಾವು ನೋಡುತ್ತಿರುವ ಅನೇಕ ಸಮುದಾಯಗಳು ಶಿಕ್ಷಣದಲ್ಲಿ ಹಿಂದುಳಿದವುಗಳಾಗಿವೆ. ಅಕ್ಷರ ಜ್ಞಾನವಿಲ್ಲದ ಮನುಷ್ಯ ಪಶುವಿಗೆ ಸಮಾನ. ಶಿಕ್ಷಣವು ಮಾನವನ ಜೀವನ ಸುಧಾರಣೆಯಾಗುವಲ್ಲಿ ಬಹು ಮುಖ್ಯ ಪಾತ್ರ ವಹಿಸುತ್ತದೆ. ಆದ್ದರಿಂದಲೇ ಶಿಕ್ಷಣ ರಕ್ಷಣೆಯಷ್ಟೇ ಮುಖ್ಯ ಎಂದು ಖ್ಯಾತ ಶಿಕ್ಷಣ ತಜ್ಞ ಡಾ.ಎಚ್.ನರಸಿಂಹಯ್ಯವರು ಹೇಳುತ್ತಾರೆ. "ಅಂತೆಯೇ ಶಿಕ್ಷಣದ ಪಾತ್ರವನ್ನು ಸಮರ್ಥವಾಗಿ ಮನಗಂಡಿದ್ದ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ

ಅವರು ಶಿಕ್ಷಣವನ್ನು 'ಪ್ರಜ್ಞೆಯ ಅಭಿವೃದ್ಧಿ ಮತ್ತು ಸಮಾಜದ ಮರು ಸಂಘಟನೆಯ ಮೂಲ ಸಾಧನ ಎಂದು ಕರೆದಿದ್ದರು.' ಡಾ.ಬಿ.ಆರ್.ಅಂಬೇಡ್ಕರ್ ಅವರು 'ಶಿಕ್ಷಣದಿಂದ ಮಾತ್ರ ಶೋಷಣೆ ನಿರ್ಮೂಲನೆ ಸಾಧ್ಯವೆಂದು' ತಿಳಿಸಿದ್ದರು."[೫] ಅವರು ಹೇಳುವಂತೆ ಶಿಕ್ಷಣವೊಂದೇ ದಲಿತರನ್ನು ಮೇಲಕ್ಕೆತ್ತುವ ಸಾಧನ ಓದು, ಓದು ಓದು ಎಡೆಬಿಡದೆ ಓದು ಮತ್ತು ಆಳವಾದ ಚಿಂತನೆ ನಮ್ಮ ಬುದ್ಧಿವಂತಿಕೆಯನ್ನು ಹೆಚ್ಚಿಸಬೇಕು ವೈಚಾರಿಕವಾಗಿ ಚಿಂತಿಸಬೇಕು. ಆಗ ಮಾತ್ರ ದಲಿತರು ಮೇಲಕ್ಕೆ ಬರಲು ಸಾಧ್ಯವಾಗುತ್ತದೆ ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು. ಈ ಹಿನ್ನೆಲೆಯಲ್ಲಿ ಯಾವುದೇ ದೇಶದ ಅಭಿವೃದ್ಧಿಯು ಅಲ್ಲಿನ ಶಿಕ್ಷಣವನ್ನು ಅವಲಂಬಿಸಿರುತ್ತದೆ. ಈ ಕಾರಣದಿಂದಲೇ ವಿಶ್ವ ಅಭಿವೃದ್ಧಿ ವರದಿಯು ಪ್ರಸ್ತುತ ಪಡಿಸಿರುವಂತೆ ದೇಶದ ಅಭಿವೃದ್ಧಿಯ ಮಾನದಂಡಗಳಾಗಿರುವ ಮಾನವ ಅಭಿವೃದ್ಧಿ ಸೂಚಂಕ ಹಾಗೂ ಜೀವನದ ಭೌತಿಕ ಅನುಸೂಚಿಯಲ್ಲಿ ಶಿಕ್ಷಣವನ್ನು ಪ್ರಮುಖ ಸೂತ್ರವನ್ನಾಗಿ ಬಳಸಿಕೊಂಡಿದೆ. ಈ ಮೂಲಕ ಗೋಡೆ ಮೇಲೆ ಜಾಹಿರಾತು ಬಿತ್ತಿ ಚಿತ್ರಗಳು ಜಾಗೃತಗೊಳಿಸುವ ಕೆಲಸ ಮಾಡುತ್ತಿರುವುದು ಕಂಡುಬರುತ್ತದೆ. ಅಷ್ಟೇ ಅಲ್ಲದೇ ವೇದ ಸುಳ್ಳಾದರೂ ಗಾದೆ ಸುಳ್ಳು ಆಗುವುದಿಲ್ಲ ಎಂಬುವಂತೆ ಹೆಬ್ಬೆಟ್ಟಿನ ಸಹಿ ಬಾಳಿಗೆ ಕಹಿ ಎನ್ನುವ ಮಾತು ಜೀವಂತ ಸಾಕ್ಷಿಯಾಗಿದೆ. ಇಂತಹ ಗಾದೆಗಳು ಗೋಡೆ ಬರಹ ಬಿತ್ತಿ ಚಿತ್ರಗಳು ಮಾನವ ಅಭಿವೃದ್ಧಿಯ ವರದಿಯು ಸಮುದಾಯಗಳನ್ನು ಎಚ್ಚರಿಸುತ್ತಿದೆ. ಜೊತೆಗೆ ಶಿಕ್ಷಣಕ್ಕಾಗಿ ಭಾರತ ಸರ್ಕಾರವು ಸಂವಿಧಾನದ ನಾಲ್ಕನೇಯ ಪರಿಚ್ಛೇದ ನಿರ್ದೇಶಕ ಸೂತ್ರಗಳಲ್ಲಿ ಬರುವ ೪೫ನೇ ವಿಧಿಯ ಪ್ರಕಾರ ೬ ರಿಂದ ೧೪ ವರ್ಷದ ವಯೋಮಾನದವರೆಗಿನ ಎಲ್ಲಾ ಮಕ್ಕಳಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣ ಒದಗಿಸಲು ಕ್ರಮವಹಿಸುತ್ತಿದೆ. ಇದರಿಂದಾಗಿ ಮಾನವನಿಗೆ ಸಾಕ್ಷರತೆ ಎಷ್ಟೊಂದು ಅವಶ್ಯಕತೆ ಎಂದು ತಿಳಿದುಬರುತ್ತದೆ. ಸರ್ಕಾರ ಹತ್ತು ಹಲವು ಯೋಜನೆಗಳನ್ನು ಜಾರಿಗೆ ತಂದು ಶಿಕ್ಷಣ ನೀಡಲು ಪ್ರಯತ್ನಿಸುತ್ತಿದ್ದರೂ ಸಹ ಇದನ್ನು ಸರಿಯಾಗಿ ಉಪಯೋಗಿಸಿಕೊಳ್ಳಲು ರಾಯಚೂರು ಜಿಲ್ಲೆಯಲ್ಲಿ ದೊಡ್ಡಿಗಳಲ್ಲಿ ನೆಲೆಸಿರುವ ಸಮುದಾಯಗಳಿಗೆ ಸಾಧ್ಯವಾಗುತ್ತಿಲ್ಲ.

ಆಧುನಿಕ ಅಥವಾ ಔಪಚಾರಿಕ ಶಿಕ್ಷಣ ಜಾರಿಗೆ ಬಂದ ಮೇಲೆ ರಾಜ್ಯದ ಬೇರೆ ಬೇರೆ ಸಮುದಾಯಗಳು ಅವರವರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳಿಗೆ ತಕ್ಕಂತೆ ಶಿಕ್ಷಣವನ್ನು ಪಡೆದು ವಿದ್ಯಾವಂತರಾಗ ತೊಡಗಿದರು. ಆದರೆ ರಾಯಚೂರು ಜಿಲ್ಲೆಯಲ್ಲಿ ದೊಡ್ಡಿಗಳಲ್ಲಿ ವಾಸಿಸುವ ಕುರುಬ ಸಮುದಾಯದವರಿಗೆ ಔಪಚಾರಿಕ ಶಿಕ್ಷಣದ ಅವಕಾಶ ಸಿಕ್ಕಿದ್ದು, ಅಲ್ಪ ಸ್ವಲ್ಪ ಅತಿ ಹಿಂದುಳಿದ ಬೇಡ ಕುಟುಂಬದ ಮಕ್ಕಳಿಗೆ ಶಿಕ್ಷಣ ತೀರ ಕಡಿಮೆ ಪ್ರಮಾಣದಲ್ಲಿ ದೊರೆತಿರುವುದು ಕಂಡುಬರುತ್ತಿದೆ. ಬೇಡ ಸಮುದಾಯದವರು ಕೇವಲ ಭೂಮಿಯನ್ನು ನಂಬಿಕೊಂಡು ಅಡವಿಯಲ್ಲಿ ಜೀವನ ನಡೆಸುವುದು ತುಂಬಾ ಕಷ್ಟ ಮತ್ತು ಕಠಿಣವಾದ ಬದುಕು. ಕುರುಬರು ಆಸ್ತಿಯಲ್ಲಿ ಬೇಡರಿಗೆ ಹೋಲಿಕೆ ಮಾಡಿದರೆ

ಉತ್ತಮರಾಗಿದ್ದಾರೆ. ಜೊತೆಗೆ ಕುಲಕಸುಬು ಕುರುಬರಿಗೆ ದೊಡ್ಡ ಆರ್ಥಿಕ ಭದ್ರತೆಯನ್ನು ನೀಡುವ ಕುಸುಬಾಗಿದೆ. ಆದರೆ ಅದೇ ನೀರಾವರಿ ಹೊಂದಿರುವ ತಾಲೂಕುಗಳಲ್ಲಿ ಬೇಡರು ಇದ್ದ ಆಸ್ತಿಯಲ್ಲಿ ಸದೃಢವಾದ ಜೀವನ ನಡೆಸುತ್ತಾ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುತ್ತಿರುವುದು ಕಂಡುಬರುತ್ತದೆ. ಆದರೆ ನೀರಾವರಿಯಿಂದ ವಂಚಿತವಾದ ಭೂಮಿಯನ್ನು ನಂಬಿಕೊಂಡು ಬದುಕುವವರ ಸ್ಥಿತಿ ತೀರ ಗಂಭೀರವಾಗಿದೆ. ಆರ್ಥಿಕವಾಗಿ ಸದೃಢವಾದಾಗ ಮಾತ್ರ ಮಕ್ಕಳಿಗೆ ಶಿಕ್ಷಣ ಕೊಡಿಸಲು ಸಾಧ್ಯವಾಗುತ್ತದೆ. ಬೇಡರಿಗೆ ಕೃಷಿ ಹೊರತುಪಡಿಸಿದರೆ ಬೇರೆ ಕಸುಬು ಮಾಡುವುದು ವಿರಳ, ಅದರಲ್ಲೂ ದೊಡ್ಡಿಗಳಲ್ಲಿ ಕೂಲಿ ಕೆಲಸವು ಸಿಗುವುದಿಲ್ಲ. ಕೂಲಿ ಮಾಡಬೇಕಾದರೆ ಪಕ್ಕದ ಹಳ್ಳಿ ಅಥವಾ ತಾಲೂಕು ಕೇಂದ್ರಗಳಿಗೆ ಕೂಲಿ ಮಾಡಲು ಹೋಗಬೇಕಾಗುತ್ತದೆ. ಕೆಲಸ ಸಿಕ್ಕರೂ ವರ್ಷಪೂರ್ತಿ ಇರುವುದಿಲ್ಲ. ಒಂದು ವಾರ ಕೆಲಸ ಇದ್ದರೆ ಒಂದು ವಾರ ಕೆಲಸವಿಲ್ಲದೆ ನಿರುದ್ಯೋಗಿಯಾಗಿ ಇರಬೇಕು. ಇದರಿಂದ ದೊಡ್ಡಿಯಲ್ಲಿ ಇರುವ ಬೇಡ ಮತ್ತು ಕುರುಬರು ಕೇವಲ ಕೃಷಿಯನ್ನು ಮಾತ್ರ ನಂಬಿಕೊಂಡಿರುವ ಕುಟುಂಬವು ಬೆಂಗಳೂರು ನಗರಕ್ಕೆ ಗುಳೆ ಹೋಗಬೇಕಾಗುತ್ತದೆ. ಇದರಿಂದ ಈ ಕುಟುಂಬಗಳಲ್ಲಿ ಇರುವ ಮಕ್ಕಳ ಶೈಕ್ಷಣಿಕ ಸ್ಥಿತಿ ಅತಂತ್ರವಾಗುತ್ತದೆ. ಹೊಟ್ಟೆಗೆ ಊಟವಿಲ್ಲ ಅಂದ ಮೇಲೆ ಜುಟ್ಟಿಗೆ ಯಾಕೆ ಮಲ್ಲಿಗೆ ಹೂ ಅಂತ ಕೇಳುವವರು ಸಂಖ್ಯೆ ಸಾಮಾನ್ಯವಾಗಿ ಕಂಡುಬರುತ್ತದೆ. ಅತಿವೃಷ್ಟಿ ಆದರೂ ವಲಸೆ ಹೋಗುತ್ತಾರೆ. ದೊಡ್ಡಿಗಳಲ್ಲಿ ಆರು ತಿಂಗಳು ಕೆಲಸ ಸಿಕ್ಕರೆ ಇನ್ನು ಆರು ತಿಂಗಳು ನಿರುದ್ಯೋಗಿಗಳು ಆಗುತ್ತಾರೆ. ಇದರಿಂದ ಮಕ್ಕಳ ಭವಿಷ್ಯದ ಮೇಲೆ ಆಗಾದ ಪರಿಣಾಮ ಬೀರುತ್ತದೆ. ಅಲ್ಲದೆ ಮಹಾನಗರಗಳಿಗೆ ವಲಸೆ ಹೋಗುವುದರಿಂದ ದೊಡ್ಡಿಗಳಲ್ಲಿ ವಾಸಿಸುವ ಮಕ್ಕಳು ಹೈಸ್ಕೂಲು ಮಟ್ಟಕ್ಕೆ ಅಥವಾ ೧೦ನೇ ತರಗತಿ ಪಾಸು ಅಥವಾ ಫೇಲಾದರೂ ಕೆಲಸಕ್ಕೆ ಹೋಗಬೇಕಾದ ಅನಿವಾರ್ಯ ಎದುರಾಗುತ್ತದೆ. ಬೇಡ ಸಮುದಾಯದವರ ಮಕ್ಕಳು ಬೆಂಗಳೂರಿಗೆ ಕೂಲಿ ಅರಿಸಿ ಹೋದರೆ ಕುರುಬ ಸಮುದಾಯದವರ ಮಕ್ಕಳು ಇಬ್ಬರು ಗಂಡು ಮಕ್ಕಳು ಇದ್ದರೆ ಒಬ್ಬನಿಗೆ ಶಾಲೆಗೆ ಕಳುಹಿಸಿದರೆ ಇನ್ನೊಬ್ಬನಿಗೆ ಕುರಿ ಕಾಯಲು ಕಳಿಹಿಸುತ್ತಾರೆ. ದೊಡ್ಡಿಗಳು ಎಂದರೆ ಅವಿದ್ಯಾವಂತರು, ಅನಕ್ಷರಸ್ಥರ ತಾಣ ಎಂದು ಹೇಳುತ್ತಾರೆ. ಆರ್ಥಿಕವಾಗಿ ಯಾವ ಕುಟುಂಬವು ಸುಧಾರಣೆ ಹೊಂದಿದೆ ಅಂಥವರ ಮಕ್ಕಳು ಶಿಕ್ಷಣ ಕಲಿಯಲು ಅನುಕೂಲವಾಗಿದೆ. ಅದರಲ್ಲೂ ದೊಡ್ಡಿಗಳಲ್ಲಿ ಮೊದಲು ಶಾಲೆಗಳು ಇರಲಿಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ಸರ್ಕಾರ ಶಾಲೆಗಳನ್ನು ದೊಡ್ಡಿಗಳಲ್ಲಿ ಪ್ರಾರಂಭಿಸಿದೆ. ಆದರೆ ದೊಡ್ಡಿಗಳಲ್ಲಿ ಇರುವ ಶಾಲೆಗಳಲ್ಲಿ ಮಕ್ಕಳ ಕೊರತೆ ಎದ್ದು ಕಾಣುತ್ತಿದೆ. ಇಲ್ಲಿನ ನಿವಾಸಿಗಳು ಬೇಜವಾಬ್ದಾರಿತನದಿಂದ ಮಕ್ಕಳು ಶಾಲೆ ಬಿಟ್ಟರೆ ಕೇಳುವುದಿಲ್ಲ ಮತ್ತು ಶಾಲೆಗೆ ಬರುವ ಶಿಕ್ಷಕರು ಸರಿಯಾಗಿ ಶಾಲೆಗೆ ಬರುತ್ತಾರೋ ಇಲ್ಲವೋ ಎನ್ನುವ ಪ್ರಶ್ನೆ ಯಾರೂ ಕೇಳುವುದಿಲ್ಲ. ೧೦ ಗಂಟೆಗೆ ಬರುವ ಶಿಕ್ಷಕ ೧೨ಗಂಟೆಗೆ ಬಂದರೂ ಕೇಳುವವರಿಲ್ಲ ಊಟದ ಸಮಯಕ್ಕೆ ಮಕ್ಕಳನ್ನು ಶಾಲೆಗೆ ಕಳುಹಿಸುತ್ತಾರೆ. ಊಟ ಮಾಡಿ ಮತ್ತೆ ಮಕ್ಕಳ ಮನೆಗೆ ಬರುತ್ತಾರೆ.

ಹೆಸರಿಗೆ ಮಾತ್ರ ಮಕ್ಕಳು ೫ನೇ ತರಗತಿ, ೭ನೇ ತರಗತಿ ಓದುತ್ತಿದ್ದಾರೆ ಎಂದು ಹೇಳುತ್ತಾರೆ. ಆದರೆ ಆ ಮಕ್ಕಳಿಗೆ ೨ನೇ ತರಗತಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಇರುವ ಬುದ್ಧಿವಂತಿಕೆ ಈ ಮಕ್ಕಳಿಗೆ ಇರುವುದಿಲ್ಲ. ಅಂತಹ ಸಮುದಾಯಗಳಲ್ಲಿ ಬೇಡ ಸಮುದಾಯ ಒಂದು. ಇವರಲ್ಲಿ ಶಿಕ್ಷಣದ ಕೊರತೆ ಬಹಳಷ್ಟು ಕಂಡುಬರುತ್ತದೆ. ದೊಡ್ಡಿಗಳಲ್ಲಿ ವಾಸಿಸುವ ಕುರುಬ ಸಮುದಾಯಕ್ಕೆ ಹೋಲಿಕೆ ಮಾಡಿದರೆ ಬೇಡ ಸಮುದಾಯದವರಲ್ಲಿ ಶಿಕ್ಷಣದ ಸ್ಥಿತಿ ಕೆಳಮಟ್ಟದಲ್ಲಿ ಇರುವುದು ಕಾಣಬಹುದು. ದೊಡ್ಡಿಗಳಲ್ಲಿ ನೀರಾವರಿ ಹೊಂದಿದ ತಾಲೂಕುಗಳಲ್ಲಿ ಬೇಡ, ಕುರುಬ ಸಮುದಾಯದ ಮಕ್ಕಳು ಶಿಕ್ಷಣ ಪಡೆದುಕೊಳ್ಳುತ್ತಿರುವುದು ಕಾಣುತ್ತೇವೆ. ವೆರಿಯರ್ ಎಲ್ವಿನ್ ಅವರು ಹೇಳುವಂತೆ: "ಬೆಳೆಯುತ್ತಿರುವ ಗಂಡು ಮತ್ತು ಹೆಣ್ಣು ಮಕ್ಕಳನ್ನು ಶಾಲೆಗೆ ಕಳಿಸಿಕೊಡುವುದು ಮೂಲದಲ್ಲಿ ಅವರ ಅರ್ಥವ್ಯವಸ್ಥೆಗೆ ಮತ್ತು ಸಾಂಪ್ರದಾಯಿಕ ಶ್ರಮವಿಭಜನೆ ಅಡ್ಡ ಬರುತ್ತದೆ"[೬] ಎಂಬ ಹೇಳಿಕೆಯಲ್ಲಿ ಸತ್ಯಾಂಶವಿದೆ. ಈ ಹೇಳಿಕೆಗೆ ಅನುಗುಣವಾಗಿ ದೊಡ್ಡಿಗಳಲ್ಲಿ ಇರುವ ಜನರು ಹೆಚ್ಚಿನ ಸಂಖ್ಯೆ ಅನಕ್ಷರಸ್ಥರು ಇರುವುದು ಕ್ಷೇತ್ರ ಕಾರ್ಯದಿಂದ ಕಂಡುಬರುತ್ತದೆ.

ರಾಜಕೀಯ ಹೋಲಿಕೆ ಮತ್ತು ವ್ಯತ್ಯಾಸಗಳು

ರಾಯಚೂರು ಜಿಲ್ಲೆಯಲ್ಲಿ ಬೇಡ ಸಮುನದಾಯವು ಹೆಚ್ಚಿನ ಸಂಖ್ಯೆಯಲ್ಲಿ ವಾಸವಾಗಿದೆ. ನಂತರದಲ್ಲಿ ಕುರುಬ ಸಮುದಾಯ ಹೆಚ್ಚಿನ ಜನ ಸಂಖ್ಯೆಯನ್ನು ಹೊಂದಿದೆ. ರಾಯಚೂರು ದೊಡ್ಡಿಗಳಲ್ಲಿ ಬೇಡ ಸಮುದಾಯದ ಜೊತೆ ಜೊತೆಗೆ ಕುರುಬ ಸಮುದಾಯದ ನೆಲೆಗಳು ಕಂಡುಬರುತ್ತವೆ. ಜನಸಂಖ್ಯೆ ದೃಷ್ಟಿಯಿಂದ ನೋಡುವುದಾದರೆ ಬೇಡ ಸಮುದಾಯಕ್ಕಿಂತ ಕಡಿಮೆ ಜನಸಂಖ್ಯೆಯನ್ನು ಹೊಂದಿದ್ದ ಸಂಘಟನೆಯಲ್ಲಿ ಉತ್ತಮ ಸಂಬಂಧ ಹೊಂದಿದ್ದಾರೆ. ಇದರಿಂದ ಸ್ಥಳೀಯ ಚನಾವಣೆಯಲ್ಲಿ ಇವರದೇ ಪ್ರಾಬಲ್ಯ ಕಂಡುಬರುತ್ತದೆ.

ಈ ಜಿಲ್ಲೆಯಲ್ಲಿ ನಾಲ್ಕು ಪರಿಶಿಷ್ಟ ಪಂಗಡದ ವಿಧಾನಸಭಾ ಮೀಸಲು ಕ್ಷೇತ್ರವಿದ್ದರೂ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ಈ ಕ್ಷೇತ್ರದ ಅಭಿವೃದ್ಧಿ ಪಡಿಸುವಲ್ಲಿ ವಿಫಲವಾಗಿದ್ದಾರೆ. ಕಾರಣ ಇಷ್ಟೇ ರಾಜಕೀಯ ದೃಷ್ಟಿಯಿಂದ ಇನ್ನೊಂದು ಸಮುದಾಯ ಓಟ್ ಬ್ಯಾಂಕ್ ರಾಜಕಾರಣದಿಂದಾಗಿ ಈ ಮೀಸಲು ಕ್ಷೇತ್ರದ ಶಾಸಕರಿಂದ ಯಾವುದೇ ಹೇಳಿಕೊಳ್ಳುವಷ್ಟು ಈ ಸಮುದಾಯಗಳ, ಜೊತೆಗೆ ಇವರ ನೆಲೆಗಳಿಗೆ ಯಾವುದೆ ಮೂಲಭೂತ ಸೌಲಭ್ಯ ಒದಗಿಸಿಲ್ಲ ಎಂದು ನಿವಾಸಿಗಳು ಹೇಳುತ್ತಾರೆ. ಹೀಗಾಗಿ ಈ ಸಮುದಾಯದವರು ಹೆಸರಿಗೆ ಮಾತ್ರ ಶಾಸಕರಾಗುತ್ತಾರೆ. ಅಭಿವೃದ್ಧಿ ಎನ್ನುವ ಪ್ರಶ್ನೆ ಬೇಡ ಸಮುದಾಯದವರಿಗೆ ಮರೀಚಿಕೆಯಾಗಿದೆ.

ಸ್ಥಳೀಯ ಸಂಸ್ಥೆಯ ಚುನಾವಣೆ ಮೀಸಲು ಇರುವ ಕ್ಷೇತ್ರಕ್ಕೆ ಟಿಕೆಟ್ ಕೊಡುತ್ತಾರೆ. ಹೆಚ್ಚಿನ ಸಂಖ್ಯೆಯಲ್ಲಿ ಬೇಡ ಸಮುದಾಯದವರು ಇದ್ದರೂ ಸಾಮಾನ್ಯ ಕ್ಷೇತ್ರ ಎಂದು

ಬಂದಿದ್ದರೆ ಸಾಮಾನ್ಯ ಅಭ್ಯರ್ಥಿಗಳಿಗೆ ಟಿಕೆಟ್ ಕೊಡುತ್ತಾರೆ. ರಾಜಕೀಯ ಲಾಭದಿಂದ ಸಮುದಾಯದ ಹೊಲ್ಯೆಕೆಯಿಂದ ಈ ಸಮುದಾಯದವರು ಅತ್ಯಂತ ಕಳಪೆ ಮಟ್ಟದ ಜೀವನ ನಡೆಸುತ್ತಿದ್ದಾರೆ. ಇದರಿಂದ ರಾಯಚೂರು ಜಿಲ್ಲೆಯ ನಾಲ್ಕು ವಿಧಾನ ಸಭಾಕ್ಷೇತ್ರ ಪರಿಶಿಷ್ಟ ಪಂಗಡಕ್ಕೆ ಮೀಸಲು ಇದ್ದರು ಅಭಿವೃದ್ಧಿ ಮಾತ್ರ ಇತರೆ ಸಮುದಾಯಗಳದ್ದೇ ಆಗಿರುತ್ತದೆ. ಎಂದು ಇಲ್ಲಿನ ನಿವಾಸಿಯಾದ ಶಿವಪ್ಪ ಬೇಸರದಿಂದ ಹೇಳುತ್ತಾರೆ.

ಒಟ್ಟಾರೆ ರಾಜಕೀಯವಾಗಿ ದೊಡ್ಡಿಗಳಲ್ಲಿ ಒಂದು ಇಲ್ಲವೇ ಎರಡು ಅಭ್ಯರ್ಥಿಗಳು ಗ್ರಾಮಪಂಚಾಯತಿಗೆ ಆಯ್ಕೆ ಆಗುತ್ತಾರೆ. ಬಹುತೇಕ ಆಯ್ಕೆಯಾದ ಅಭ್ಯರ್ಥಿ ಮೊದಲಿಗೆ ತನ್ನ ಮನೆ ನಂತರ ತನ್ನ ಸಂಬಂಧಿಗಳು ಉಳಿದಂತೆ ಸಮುದಾಯದವರ ಹಿತ ಕಾಯುತ್ತಾರೆ. ಇದರಿಂದ ಯಾವುದೇ ದೊಡ್ಡಿಗಳಿಗೆ ಮೂಲಭೂತ ಅವಶ್ಯಕತೆ ಈಡೇರಿಸಿಕೊಳ್ಳಲು ಆಗುತ್ತಿಲ್ಲ. ಇದರಿಂದ ಜನಸಂಖ್ಯೆಯಲ್ಲಿ ಒಗ್ಗಟ್ಟಾಗಿ ಆರ್ಥಿಕವಾಗಿ ಸದೃಢವಾದ ಸಮುದಾಯ ಮಾತ್ರ ರಾಜಕೀಯ ಲಾಭ ಪಡೆದುಕೊಂಡಿದೆ. ಕೆಲವು ಕಡೆ ಸ್ಥಳೀಯ ಬೇಡ ಸಮುದಾಯ ಪ್ರಾತಿನಿಧ್ಯ ಸ್ಥಾಪಿಸಿದರೆ ಸಾಮಾನ್ಯ ಕ್ಷೇತ್ರಗಳಲ್ಲಿ ಬಹುತೇಕ ಸ್ಥಳೀಯ ಸಂಸ್ಥೆಯ ಚುನಾವಣೆ ಕುರುಬ ಸಮುದಾಯವು ಪ್ರಾತಿನಿಧ್ಯ ಸ್ಥಾಪಿಸಿಕೊಂಡಿದೆ.

ಹಲವು ವೈರುಧ್ಯಗಳ ಮಧ್ಯೆಯೂ ಬೇಡ ಮತ್ತು ಕುರುಬ ಸಮುದಾಯಗಳು ರಾಜಕೀಯ ಪೈಪೋಟಿ ಮೊದಲಿನಿಂದಲು ನಡೆಸಿಕೊಂಡು ಬಂದಿವೆ. ಮೀಸಲಾತಿಯಿಂದ ಬೇಡ ಸಮುದಾಯ ಪ್ರಾತಿನಿಧ್ಯ ಪಡೆದುಕೊಂಡರೆ ಸಾಮಾನ್ಯ ಕ್ಷೇತ್ರದಲ್ಲಿ ಆರ್ಥಿಕ ಬಲ ಜನಬಲದಿಂದ ಕುರುಬ ಸಮುದಾಯದವರು ಪ್ರಾತಿನಿದ್ಯ ಪಡೆದುಕೊಂಡಿದ್ದಾರೆ.

೬.೨ ಕಬ್ಬಲಿಗ ಮತ್ತು ಬೇಡ ಸಮುದಾಯದ ನಡುವಿನ ಹೋಲಿಕೆ ಮತ್ತು ವ್ಯತ್ಯಾಸಗಳು

ಸಾಮಾಜಿಕ ಹೋಲಿಕೆ ಮತ್ತು ವ್ಯತ್ಯಾಸಗಳು

ರಾಯಚೂರು ಜಿಲ್ಲೆಯ ದೊಡ್ಡಿಗಳ ಸಾಮಾಜಿಕ ವ್ಯವಸ್ಥೆಯನ್ನು ಕುರಿತು ಚರ್ಚಿಸುವಾಗ ಸಮಾಜದ ರಚನೆ ಎಷ್ಟರಮಟ್ಟಿಗೆ ಹೆಣೆದುಕೊಂಡು ಬಂದಿದೆ ಎಂಬುದನ್ನು ಅವಲೋಕಿಸಬೇಕಾದುದು ಸಂಶೋಧನೆಯ ದೃಷ್ಟಿಯಿಂದ ಅನಿವಾರ್ಯವಾಗುತ್ತದೆ. ಆದ್ದರಿಂದ ಕಬ್ಬಲಿಗ ಕುಲಕಸುಬುಗಳಿಗೆ ಅಂಟಿಕೊಂಡು ಬಂದಿರುವುದು ಎಲ್ಲರಿಗೂ ತಿಳಿದ ಸಂಗತಿಯೇ. ಈ ಹಿನ್ನೆಲೆಯಿಂದ ದೊಡ್ಡಿಗಳಲ್ಲಿ ನೆಲೆಸಿರುವ ಬೇಡ ಕಬ್ಬಲಿಗ ಸಮುದಾಯವು ಜೊತೆ ಜೊತೆಗೆ ಆಗಿರಬಹುದು, ಇಲ್ಲವೆ ಪ್ರತ್ಯೇಕವಾಗಿ ಆಗಿರಬಹುದು, ಈ ಎರಡೂ ಸಮುದಾಯಗಳ ಸಾಮಾಜಿಕ ವ್ಯವಸ್ಥೆಯು ತೀವ್ರಗತಿಯಲ್ಲಿ ಕಬ್ಬಲಿಗ ಸಮುದಾಯಗಳ ಕುಟುಂಬದ ಆಚಾರ ವಿಚಾರ ಸಾಮಾಜಿಕ ಜೀವನ ಶೈಲಿ ದಿನನಿತ್ಯದ ಜೀವನದಲ್ಲಿ ಬಳಸುವ ಉಡುಪುಗಳು ಅವರ ದೊಡ್ಡಿಗಳು ಪರಿವರ್ತನೆ ಕಡೆ ಸಾಗುತ್ತಿರುವುದು ಈ ಸಮುದಾಯದ ನೆಲೆಗಳನ್ನು ಅವಲೋಕಿಸಿದರೆ ಸಹಜವಾಗಿ ಗೋಚರಿಸುತ್ತದೆ. ಆಧುನಿಕತೆಗೆ ಎಷ್ಟರ ಮಟ್ಟಿಗೆ ಸಂಪರ್ಕದ ಸೇತುವೆ ಏರ್ಪಟ್ಟಿದೆ ಎಂಬುದನ್ನು ಇಲ್ಲಿ ಗಮನಿಸಬಹುದಾಗಿದೆ.

ಕಬ್ಬಲಿಗ ಸಮುದಾಯದ ಮನೆಗಳಲ್ಲಿ ಆಧುನಿಕತೆಯ ಪ್ರಭಾವ ಕೃಷಿ ಮೇಲೆ ಆಗಿರಬಹುದು. ಇಲ್ಲವೇ ಕುಲಕಸುಬುಗಳಿಗೆ ಬಳಸುವ ಪರಿಕರಗಳ ಬದಲಾವಣೆಯಾಗಿವೆ. ಜೊತೆಗೆ ಪ್ರತಿಯೊಂದು ಮನೆಯಲ್ಲಿ ಟಿ.ವಿ. ಇರುವುದರಿಂದ ಸರ್ಕಾರದ ಯೋಜನೆ ಮತ್ತು ಸುತ್ತಮುತ್ತ ನಡೆಯುವ ಘಟನಾವಳಿಗಳ ಬಗ್ಗೆ ಮಾಹಿತಿ ಪಡೆದುಕೊಳ್ಳುತ್ತಾರೆ. ಕಬ್ಬಲಿಗ ಸಮುದಾಯದ ಆರ್ಥಿಕವಾಗಿ ಇತ್ತೀಚಿಗೆ ಪ್ರಬಲರಾಗುತ್ತಿದ್ದಾರೆ. ಇದರಿಂದ ಸಾಮಾಜಿಕ ಜೀವನ ಮಟ್ಟ ಸುಧಾರಣೆಯಾಗುತ್ತಿದೆ. ಕಬ್ಬಲಿಗರಲ್ಲಿ ಅಂತಹ ಯಾವುದೇ ಅನಿಷ್ಠ ಆಚರಣೆಗಳು ಕಂಡುಬರುವುದಿಲ್ಲವಾದರೂ ಮೂಢನಂಬಿಕೆಗಳು ಮಾತ್ರ ಕಂಡುಬರುತ್ತವೆ. ಕಬ್ಬಲಿಗ ಸಮುದಾಯ ಅನ್ಯ ಸಮುದಾಯದ ಹುಡುಗನ ಜೊತೆಗೆ ಈ ಸಮುದಾಯದ ಯುವತಿ ಮದುವೆ ಮಾಡಿಕೊಂಡರೆ ಕುಲ ಪಂಚಾಯತಿ ಕರೆದು ಆ ದಂಪತಿಗಳಿಗೆ ದಂಡ ವಿಧಿಸಿ ಆ ಮದುವೆಗೆ ಹಿರಿಯರು ಮಾನ್ಯತೆ ನೀಡುತ್ತಾರೆ.

ಕಬ್ಬಲಿಗ ಸಮುದಾಯದ ಜೊತೆ ಬೇಡ ಸಮುದಾಯವನ್ನು ಹೋಲಿಕೆ ಮಾಡಿದಾಗ ಬೇಡರ ದೊಡ್ಡಿಗಳಿಗೆ ಇನ್ನು ಆಧುನಿಕತೆ ಪ್ರಭಾವ ತೀರ ಕಡಿಮೆ ಎಂದು ಹೇಳಬಹುದು. ಆದರೆ ಪಟ್ಟಣಕ್ಕೆ ಹತ್ತಿರ ಇರುವ ಬೇಡರ ದೊಡ್ಡಿಗಳ ಆಧುನಿಕತೆ ಪ್ರಭಾವಕ್ಕೆ ಒಳಗಾಗಿವೆ. ಕಬ್ಬಲಿಗರ ದೊಡ್ಡಿಗಳಿಗೆ ತುಲನೆ ಮಾಡಿ ನೋಡಿದಾಗ ಮನೆಗಳ ಸ್ಥಿತಿ ಜೀವನ ಮಟ್ಟ ಅವರು ಪಡೆದುಕೊಂಡಿರುವ ಸವಲತ್ತು ನೋಡಿದರೆ ಕಬ್ಬಲಿಗರಗಿಂತ ಬೇಡರು ಕೆಲವು ಕಡೆ ಸಮಾನವಾಗಿ ಪರಿವರ್ತನೆ ಹೊಂದಿದ್ದಾರೆ. ಇನ್ನು ಹಲವು ಕಡೆ ಬೇಡರ ಮನೆಗಳಿಗೆ ಯಾವುದೇ ವಿದ್ಯುತ್ ಸೌಲಭ್ಯಗಳಿಲ್ಲ. ಕಬ್ಬಲಿಗರ ನಂತರ ಸ್ಥಾನವನ್ನು ಬೇಡರು ಪಡೆದುಕೊಂಡಿದ್ದಾರೆ. ಬೇಡರಲ್ಲಿ ಅನಿಷ್ಠ ಆಚರಣೆ ಕಂಡುಬರದಿದ್ದರೂ ಮೂಢನಂಬಿಕೆ ಮಡಿಲಲ್ಲಿ ಜೀವನ ನಡೆಸುತ್ತಿರುವುದು ಮಾತ್ರ ನಿಜವಾದ ಸಂಗತಿಯಾಗಿದೆ. ಈ ಸಮುದಾಯದಲ್ಲಿ ವರ್ಷದಲ್ಲಿ ಎಷ್ಟೇ ಕಷ್ಟವಿದ್ದರೂ ಗ್ರಾಮ ದೇವತೆಗಳಾದ ಯಲ್ಲಮ್ಮ, ಮಾರೆಮ್ಮ, ಈ ಎರಡು ದೇವತೆಗಳ ಹೆಸರಿನಲ್ಲಿ ದೇವರಿಗೆ ಪ್ರಾಣಿ ಬಲಿಕೊಡುವುದು ಮಾತ್ರ ಕಂಡುಬರುತ್ತದೆ. ಇದರಿಂದ ಸಾಮಾಜಿಕವಾಗಿ ದುರ್ಬಲವಾಗಿದ್ದರು ಸಾಲ ಮಾಡಿಯಾದರೂ ಗ್ರಾಮ ದೇವತೆಯನ್ನು ಆಚರಣೆ ಮಾಡುತ್ತಾರೆ. ಇದರಿಂದ ಸಾಮಾಜಿಕ ಸಾಲದ ಸುಳಿಗೆ ಬೇಡರು ಸಿಲುಕುತ್ತಿರುವುದು ಕಂಡುಬರುತ್ತದೆ.

ಸಾಮಾಜಿಕವಾಗಿ ಬೇಡರ ದೊಡ್ಡಿಗಳಲ್ಲಿರುವ ಈ ಸಮುದಾಯದ ಯುವಕ, ಯುವತಿಯರು ಅನ್ಯ ಸಮುದಾಯದ ಯುವಕ, ಯುವತಿಯನ್ನು ಮದುವೆಯಾದರೆ ಕುಲ ಪಂಚಾಯತಿ ಮಾಡಿ ಜಾತಿಯಿಂದ ಬಹಿಷ್ಕಾರ ಹಾಕುತ್ತಾರೆ. ದೊಡ್ಡಿಗಳಲ್ಲಿ ಅವರನ್ನು ಯಾರು ಸೇರಿಸಿಕೊಳ್ಳಬಾರದು ಎಂದು ತೀರ್ಮಾನ ಮಾಡಿಕೊಳ್ಳುತ್ತಾರೆ. ಅಂತರ ಜಾತಿ ವಿವಾಹ ಮಾಡಿಕೊಂಡು ಸಂಬಂಧ ಮುರಿದು ಬಿದ್ದರು ಅವರನ್ನು ಮತ್ತೆ ತಮ್ಮ ದೊಡ್ಡಿಯಲ್ಲಿ

ಕರೆದುಕೊಳ್ಳುವುದಿಲ್ಲ. ಕಠಿಣ ತೀರ್ಮಾನಗಳು ಬೇಡ ಸಮುದಾಯದ ಸಾಮಾಜಿಕ ಜೀವನದಲ್ಲಿ ಕಾಣಬಹುದು. ಕಬ್ಬಲಿಗ ಮತ್ತು ಬೇಡ ಸಮುದಾಯ ಸಾಮಾಜಿಕವಾಗಿ ಹೋಲಿಕೆ ಮಾಡಿದಾಗ ಈ ಎರಡೂ ಸಮುದಾಯದ ಮಧ್ಯೆ ಸಾಮಾಜಿಕ ಸ್ಥಾನಮಾನದಲ್ಲಿ ಸಾಕಷ್ಟು ವೈರುದ್ಯತೆ ಕಂಡುಬರುತ್ತದೆ. ಕಬ್ಬಲಿಗ ಸಮುದಾಯದಲ್ಲಿ ಜಾತಿಯ ನಿಯಂತ್ರಣ ಬಹಳಷ್ಟು ಕಡಿಮೆ ಎಂದು ಸಾಮಾಜಿಕ ಜೀವನ ನೋಡಿದಾಗ ತಿಳಿದುಬರುತ್ತದೆ. ಇಲ್ಲಿ ಸ್ವಾತಂತ್ರ್ಯಕ್ಕೆ ಹೆಚ್ಚಿನ ಅವಕಾಶ ಇದೆ.

ಬೇಡ ಸಮುದಾಯದಲ್ಲಿ ಜಾತಿಯ ನಿಯಂತ್ರಣ ಹೆಚ್ಚಿನ ಪ್ರಮಾಣದಲ್ಲಿ ಕೆಲಸ ಮಾಡುತ್ತದೆ. ಕಾರಣ ಬುಡಕಟ್ಟುಗಳಲ್ಲಿ ಅಂತರ ಜಾತಿಯ ವಿವಾಹ ಮಾಡಿಕೊಂಡರೆ ತಮ್ಮ ಸಮುದಾಯದ ಪಾವಿತ್ರತೆ ಕಡಿಮೆ ಆಗುತ್ತದೆ ಎನ್ನುವ ಮನೋಭಾವದಿಂದ ಬೇಡರ ದೊಡ್ಡಿಗಳಲ್ಲಿ ಸಮುದಾಯದವರು ಎಷ್ಟೇ ಸ್ವಾತಂತ್ರವಿದ್ದರೂ ವಿವಾಹ ವಿಷಯಕ್ಕೆ ಬಂದಾಗ ಸಮುದಾಯದ ನಿಯಂತ್ರಣ ಜಾತಿಯೇ ಆಗಿದೆ ಅಂದ ಅಭಿಮಾನ ಮಾತ್ರ ಸ್ವ ಜಾತಿಯಲ್ಲಿ ವಿವಾಹ ಮಾಡಿಕೊಳ್ಳುವಂತೆ ಮಾಡುತ್ತದೆ. ಅದನ್ನು ಮೀರಿದರೆ ಬೇಡರ ಜಾತಿಯಲ್ಲಿ ಬಹಿಷ್ಕಾರ ಇದೆ. ಆದರೆ ಕಬ್ಬಲಿಗರಲ್ಲಿ ಅಂತಹ ಕಠಿಣ ನಿರ್ಧಾರ ಕಂಡುಬರುವುದಿಲ್ಲ. ಬೇಡರು ಆರ್ಥಿಕವಾಗಿ ಬಡವರು ಇರುವುದರಿಂದ ಸರಳವಾದ ಜೀವನ ಮಾಡುವುದು ಅವರಲ್ಲಿದೆ. ಕಬ್ಬಲಿಗರು ಬಡತನವಿದ್ದರೂ ವಸ್ತ್ರವಿನ್ಯಾಸದಲ್ಲಿ ಸಾಕಷ್ಟು ಬದಲಾವಣೆಯನ್ನು ಹೊಂದಿದ್ದಾರೆ. "ಸಾಮಾಜಿಕವಾಗಿ ಯಾವುದೇ ವ್ಯಕ್ತಿಯನ್ನು ಅವರು ಹಾಕಿಕೊಳ್ಳುವ ವಸ್ತ್ರಗಳಿಂದ ಮತ್ತು ವ್ಯವಹಾರಿಕ ತಿಳುವಳಿಕೆಯಿಂದ ಸ್ಥಾನಮಾನ ದೊರೆಯುತ್ತವೆ."[೭] ಕಬ್ಬಲಿಗರು ಎಷ್ಟೇ ಅಡವಿಯಲ್ಲಿ ಇದ್ದರೂ ಆಧುನಿಕತೆಗೆ ಹೊಂದಿಕೊಳ್ಳುವ ಹಾಗೆ ಅವರು ಉಡುಪುಗಳು ಇರುತ್ತವೆ.

ಬೇಡರು ಸೌಂದರ್ಯಕ್ಕೆ ಹೆಚ್ಚು ಹೊತ್ತುಕೊಡುವುದಿಲ್ಲ. ಹೊಲಗದ್ದೆಗಳಲ್ಲಿ ಕೆಲಸ ಮಾಡುವುದರಿಂದ ಅರೆಬರೆ ಮಾಸಿದ ಬಟ್ಟೆಯನ್ನು ಹಾಕಿಕೊಳ್ಳುತ್ತಾರೆ. ಇದರಿಂದ ಅವರು ಎಷ್ಟೇ ಒಳ್ಳೆಯವರೇ ಆಗಿದ್ದರು ಯಾರು ನ್ಯಾಯ ಪಂಚಾಯಿತಿಗೆ ಅಷ್ಟಾಗಿ ಪ್ರಾಧಾನ್ಯತೆ ಕೊಡುವುದಿಲ್ಲ. ಹೀಗಾಗಿ ಸಾಮಾಜಿಕವಾಗಿ ಬೇಡ ಮತ್ತು ಕಬ್ಬಲಿಗ ಸಮುದಾಯದವರನ್ನು ನೋಡಿದಾಗ ಸಾಮಾಜಿಕವಾಗಿ ತಿಳುವಳಿಕೆ ಆಧುನಿಕ ಪ್ರಭಾವ ಕಬ್ಬಲಿಗರ ಪರಿವರ್ತನೆ ಮಾಡಿದೆ. ಬೇಡ ಸಮುದಾಯದವರು ನೆರೆಹೊರೆಯವರ ಸಂಪರ್ಕದ ಕೊರತೆಯಿಂದ ಇನ್ನು ಹಳೆಯ ಕಾಲದ ರೀತಿಯಲ್ಲಿ ಜೀವನ ಸಾಗಿಸುತ್ತಿದ್ದಾರೆ.

ಆರ್ಥಿಕ ಹೋಲಿಕೆ ಮತ್ತು ವ್ಯತ್ಯಾಸಗಳು

ಕಬ್ಬಲಿಗ ಮತ್ತು ಬೇಡ ಸಮುದಾಯಕ್ಕೆ ಆರ್ಥಿಕವಾಗಿ ಹೋಲಿಕೆ ಮಾಡಿದಾಗ ಕಬ್ಬಲಿಗರು ಎರಡು ಕಸುಬು ಮಾಡುವುದನ್ನು ಕಾಣಬಹುದು ಕಬ್ಬಲಿಗ ಸಮುದಾಯದವರ

ಕುಲ ಕಸುಬು ಮೀನು ಹಿಡಿಯುವುದು. ಎರಡನೇ ಕಸುಬು ಕೃಷಿ ಮಾಡುವುದು. ಕೃಷಿಯಲ್ಲಿ ಲಾಭ ಸಿಗದಿದ್ದಾಗ ಮೀನುಗಾರಿಕೆ ಅವರ ಆರ್ಥಿಕ ಸ್ಥಿತಿಯನ್ನು ಸುಧಾರಣೆ ಮಾಡುತ್ತದೆ. ಮೀನುಗಾರಿಕೆಯಲ್ಲಿ ಲಾಭ ಸಿಗದಿದ್ದಾಗ ಕೃಷಿಯಲ್ಲಿ ಲಾಭ ಸಿಗುತ್ತದೆ. ಒಂದು ಬಿಟ್ಟರೆ ಇನ್ನೊಂದು ಉದ್ಯೋಗ ಕಬ್ಬಲಿಗರು ಮಾಡುತ್ತಾರೆ. ಈ ಎರಡು ವೃತ್ತಿ ಈ ಸಮುದಾಯದವರು ಆರ್ಥಿಕವಾಗಿ ಸುಧಾರಣೆ ಹೊಂದಿರುವುದಕ್ಕೆ ಕಾರಣವಾಗಿ ಕ್ಷೇತ್ರಕಾರ್ಯಕ್ಕೆ ಹೋದಾಗ ಕಂಡುಬಂದಿರುವ ಸಂಗತಿಯಾಗಿದೆ.

ಬೇಡರಿಗೆ ಒಂದೇ ಉದ್ಯೋಗ ಯಾವುದೇ ಕುಲ ಕಸುಬು ಇಲ್ಲ. ಬೇಡರು ಮಾಡಿದರೆ ವ್ಯವಸಾಯ ಮಾಡಬೇಕು ಇಲ್ಲದಿದದರೆ ಅಲ್ಪ ಸ್ವಲ್ಪ ಹಸು ಸಾಕಾಣಿಕೆ ಮಾಡುತ್ತಾರೆ. ಇವತ್ತಿನ ದಿನಮಾನದಲ್ಲಿ ಅತಿ ಹೆಚ್ಚು ಕೃಷಿಯನ್ನು ನಂಬಿ ಬದುಕುವ ಬೇಡರು ಅವರ ಭೂಮಿ ಬಹುತೇಕ ಮಳೆ ಆಶ್ರಿತ ಭೂಮಿಗಳಾಗಿ ನೀರಾವರಿ ಭೂಮಿಯನ್ನು ಹೊಂದಿದ್ದು ಬೇಡರು ಆರ್ಥಿಕವಾಗಿ ಸದೃಢವಾಗಿರುವುದು ಕಾಣಬಹುದು. ಆದರೆ ಬಹುಪಾಲು ಬೇಡರು ಮಳೆ ಆಶ್ರಿತ ಭೂಮಿಯನ್ನು ನಂಬಿ ಬದುಕುತ್ತಿದ್ದಾರೆ. ಮಳೆ ಬಂದರೆ ಕೃಷಿಯಲ್ಲಿ ಲಾಭ ಪಡೆದುಕೊಳ್ಳುವರು ಇಲ್ಲದಿದ್ದರೆ ಅಕ್ಕಪಕ್ಕದ ನೀರಾವರಿ ಭೂಮಿಯಲ್ಲಿ ಕೂಲಿ ಮಾಡುತ್ತಾರೆ. ಇಲ್ಲದಿದ್ದರೆ ದೊಡ್ಡಿಯಲ್ಲಿ ಬೇಡರ ಅರೆ ಅಲೆಮಾರಿಗಳಾಗಿ ಬಿಡುತ್ತಾರೆ. ಹೀಗಾಗಿ ಕಬ್ಬಲಿಗರು ಆರ್ಥಿಕವಾಗಿ ಬೇಡರಿಗಿಂತ ಕಬ್ಬಲಿಗರ ಸ್ಥಿತಿ ಸುಧಾರಣೆಯಾಗಿರುವುದು ಅಧ್ಯಯನದ ಮುಖಾಂತರ ಕಂಡುಬಂದಿರುವ ಅಂಶವಾಗಿದೆ. ಕೆಲವು ತಾಲೂಕುಗಳಲ್ಲಿ ನೀರಾವರಿ ಹೊಂದಿರುವ ಬೇಡರು ವಲಸೆ ಹೋಗುವುದು ಕಂಡುಬರುವುದಿಲ್ಲ. ಮಳೆ ಆಶ್ರಿತವಾಗಿರುವ ಬೇಡ ಮತ್ತು ಕಬ್ಬಲಿಗ ವಲಸೆ ಹೋಗುತ್ತಾರೆ. ವಲಸೆ ಹೋಗುವುದರಲ್ಲಿ ಬಹುಪಾಲು ಬೇಡರು ಎಂದು ಹೇಳಲಾಗುತ್ತದೆ. ಮನೆಗಳನ್ನು ಬೀಗಾ ಹಾಕಿಕೊಂಡು ವಲಸೆ ಹೋಗಿರುವ ಬೆಡರ ಕುಟುಂಬ ಕ್ಷೇತ್ರ ಅಧ್ಯಯನಕ್ಕೆ ಹೋದಾಗ ಕಂಡುಬಂದ ದೃಶ್ಯ. ಕಬ್ಬಲಿಗರಿಗೆ ಕುಲಕಸುಬು ಒಂದು ಕಡೆ ನೆಲೆನಿಂತು ಆರ್ಥಿಕ ಸಾಮಾಜಿಕವಾಗಿ, ಶೈಕ್ಷಣಿಕ ಸೌಲಭ್ಯ ಪಡೆದುಕೊಳ್ಳುವಲ್ಲಿ ಯಶಸ್ವಿಯಾಗುತ್ತಿದ್ದಾರೆ. ಬೇಡರ ಆರ್ಥಿಕ ಕೊರತೆ ನೀಗಿಸಿಕೊಳ್ಳಲು ವಲಸೆ ಹೋದಾಗ ಅವರ ಮಕ್ಕಳು ಶೈಕ್ಷಣಿಕವಾಗಿ ವಂಚಿತರಾಗುತ್ತಿದ್ದಾರೆ.

ಕಬ್ಬಲಿಗ ಸಮುದಾಯದಲ್ಲಿ ದುಡಿಮೆಗೆ ಹೆಚ್ಚಿನ ಆದ್ಯತೆ ಕೊಡುತ್ತಾರೆ. ಆದರೆ ಬೇಡರ ಸಮುದಾಯಗಳಲ್ಲಿ ತಾವು ದುಡಿಯದೇ ಮಕ್ಕಳಿಗೆ ಕೆಲಸಕ್ಕೆ ಕಳುಹಿಸುತ್ತಾರೆ. ಕಡಿಮೆ ಆದಾಯದ ಜೊತೆಗೆ ಮಕ್ಕಳ ಭವಿಷ್ಯದ ಮೆಲೆ ಕಪ್ಪು ಛಾಯೆ ಓದುವ ವಯಸ್ಸಿನಲ್ಲಿ ಕೆಲಸ ಮಾಡುವುದು ಕಂಡುಬರುತ್ತದೆ. ದೊಡ್ಡಿಗಳಲ್ಲಿ ಬೇಡ ಸಮುದಾಯದ ಮಧ್ಯ ವಯಸ್ಕರು ಕೆಲಸಕ್ಕೆ ಹೋಗದೆ ವ್ಯರ್ಥ ಕಾಲಹರಣ ಮಾಡುತ್ತಾರೆ. ಜೊತೆ ಕೃಷಿ ಬಿಟ್ಟು ಬೇರೆ ಯಾವ ಉದ್ಯೋಗ ಇವರಿಗೆ ಬರುವುದಿಲ್ಲ. ಈ ನೆಲೆಗಳಲ್ಲಿ ಬೇಡ ಸಮುದಾಯದವರಿಗೆ ಪರ್ಯಾಯ ಉದ್ಯೋಗ ಇಲ್ಲದೇ ಇರುವುದರಿಂದ ಕಬ್ಬಲಿಗ ಸಮುದಾಯಕ್ಕಿಂತ ಆರ್ಥಿಕವಾಗಿ

ಹಿಂದುಳಿದ ಸಮುದಾಯವಾಗಿದೆ. ಒಟ್ಟಾರೆಯಾಗಿ ಆರ್ಥಿಕವಾಗಿ ಈ ಎರಡು ಸಮುದಾಯಗಳು ಅಡವಿಯಲ್ಲಿ ಇದ್ದರೂ ದೈಹಿಕ ಶ್ರಮದಿಂದ ಕಬ್ಬಲಿಗ ಸಮುದಾಯದವರು ಕುಲಕಸುಬು ಮತ್ತು ಕೃಷಿ ಎರಡು ಉದ್ಯೋಗದಿಂದ ಆರ್ಥಿಕವಾಗಿ ಸದೃಢವಾದ ಜೀವನ ನಡೆಸುತ್ತಿದ್ದಾರೆ. ಈ ಎರಡು ಸಮುದಾಯ ಹೋಲಿಕೆ ಮಾಡಿದಾಗ ಆರ್ಥಿಕವಾಗಿ ಅಷ್ಟೇನೂ ವೈರುದ್ಯ ಕಂಡುಬರುವುದಿಲ್ಲ. ಆರ್ಥಿಕ ಸುಭದ್ರವಾದ ಜೀವನ ನಡೆಸುತ್ತಾರೆ. ಬೇಡರ ನೆಲೆಗಳು ಮೊದಲಿನಿಂದಲೂ ಯಾವುದೇ ಯೋಜನೆ ಮಾಡದೆ ಆಗಿನ ಪರಿಸ್ಥಿತಿಗೆ ಅನುಗುಣವಾಗಿ ಇವರ ನೆಲೆಗಳು ರೂಪುಗೊಂಡವು. ಆದರೆ ಕಬ್ಬಲಿಗರ ವಾಸದ ನೆಲೆಗಳು ಎಲ್ಲ ರೀತಿಯಿಂದ ಅನುಕೂಲತೆಯನ್ನು ಹೊಂದಿರುವ ಕಬ್ಬಲಿಗರ ಸ್ಥಳ ಸುಧಾರಣೆಯಾಗಲು ಅನುಕೂಲವಾಯಿತು ಎಂದು ದೇವದುರ್ಗ ತಾಲೂಕಿನ ಅಂಬಿಗೇರ ಗಂಗಪ್ಪ ಹೇಳುತ್ತಾರೆ. ಬೆಡರಿಗಿಂತ ಕಬ್ಬಲಿಗ ನೆಲೆ ಅಲ್ಪ ಸ್ವಲ್ಪ ಇದ್ದರೂ ಆರ್ಥಿಕವಾಗಿ ಕಬ್ಬಲಿಗ ಸಮುದಾಯದವರು ಉತ್ತಮ ಸ್ಥಿತಿಯನ್ನು ಹೊಂದಿದ್ದಾರೆ.

ಶೈಕ್ಷಣಿಕ ಹೋಲಿಕೆ ಮತ್ತು ವ್ಯತ್ಯಾಸಗಳು

ರಾಯಚೂರು ಜಿಲ್ಲೆಯ ಎಲ್ಲ ದೊಡ್ಡಿಗಳಿಗೆ ಶಾಲೆಗಳಿಲ್ಲದಿದ್ದರು ಕಬ್ಬಲಿಗ ಮತ್ತು ಬೇಡ ಸಮುದಾಯ ಶೈಕ್ಷಣಿಕ ಸ್ಥಿತಿಯ ಬಗ್ಗೆ ಹೋಲಿಕೆ ಮಾಡಿ ನೋಡಿದಾಗ ಮೊದಲಿನಿಂದಲೂ ಹಳ್ಳದ ದಂಡಿಗೆ ಇರುವ ಗುಡ್ಡಗಾಡುಗಳ ವಾರಿಗಳಲ್ಲಿ ಇರುವ ಬೆಡರು ಮಕ್ಕಳನ್ನು ಇಂದಿಗೂ ಮೂರು ನಾಲ್ಕು ಮೈಲು ದೂರದ ಹಳ್ಳಿಗೆ ಶಾಲೆಗೆ ಕಳುಹಿಸುವುದಕ್ಕೆ ಪಾಲಕರು ಹಿಂದೆಟು ಹಾಕುವರು. ಇದರಿಂದಾಗಿ ಕೆಲವು ಪ್ರದೇಶಗಳು ಶೈಕ್ಷಣಿಕವಾಗಿ ಅನಕ್ಷರಸ್ಥರಾಗಿದ್ದಾರೆ. ಕಬ್ಬಲಿಗರು ಶೈಕ್ಷಣಿಕವಾಗಿ ಮಕ್ಕಳನ್ನು ಶಾಲೆಗೆ ಕಳುಹಿಸುವ ಪ್ರಯತ್ನ ಈ ಸಮುದಾಯದಲ್ಲಿ ಕಂಡುಬರುತ್ತದೆ. ಆದರೂ ಇತ್ತೀಚಿಗೆ ಈ ಮಕ್ಕಳ ಶಿಕ್ಷಣವನ್ನು ಪಡೆದುಕೊಳ್ಳುತ್ತಿದ್ದಾರೆ ಎಂದು ಚಿಂತಮಾನದೊಡ್ಡಿ ಶಿವಕುಮಾರ ಹೇಳುತ್ತಾರೆ. ಮಹಿಳಾ ಶಿಕ್ಷಣ ಬಗ್ಗೆ ಈ ಎರಡು ಸಮುದಾಯದಲ್ಲಿ ಮಹಿಳೆಯರ ಶಿಕ್ಷಣದ ಬಗೆಗೆ ತೀರ ಪ್ರೋತ್ಸಾಹ ಕಡಿಮೆ ಇದೆ. ಇಲ್ಲಿನ ಮಕ್ಕಳು ಶಾಲೆ ಕಲಿತರು ೭ನೇ ತರಗತಿಗೆ ಕೊನೆಯಾಗಿರುತ್ತದೆ. ಅಲ್ಲಿ ಇಲ್ಲಿ ಮಹಿಳಾ ಪದವಿದರು ಸಿಗುವುದು ಅಪರೂಪ ಎಂದು ಹೇಳುವರು ಇತ್ತೀಚಿಗೆ ಮನೆಗಳ ಸಂಖ್ಯೆ ಹೆಚ್ಚಿದಂತೆ ಬಹಳ ದೊಡ್ಡಿಗಳಲ್ಲಿ ಶಾಲೆಗಳನ್ನು ಆರಂಭಿಸಿದ್ದಾರೆ ಆದರೆ ಕಲಿಸುವ ಆಸಕ್ತಿ ಶಿಕ್ಷಕರಲ್ಲಿ ಕೊರತೆ ಕಂಡುಬರುತ್ತದೆ. ಆ ಸ್ಥಳಗಳಿಗೆ ಹೋಗುವುದು ಎಂದರೆ ಕಷ್ಟದ ಕೆಲಸ ಎಂದು ತಿಳಿದುಕೊಂಡ ಶಿಕ್ಷಕರು ಅದೇ ದೊಡ್ಡಿಯ ಅಕ್ಕ ಪಕ್ಕ ಹಳ್ಳಿಗಳಿಗೆ ತಾತ್ಕಾಲಿಕ ವರ್ಗವಣೆ ಮಾಡಿಸಿಕೊಳ್ಳುತ್ತಾರೆ. ಇದರಿಂದ ಶಾಲೆ ಇದ್ದರೂ ಶಿಕ್ಷಕರು ಇಲ್ಲ ಹೆಸರಿಗೆ ಮಾತ್ರ ಶಾಲೆ. ಯಾವುದೇ ಶೈಕ್ಷಣಿಕ ಚಟುವಟಿಕೆ ಕಂಡುಬರುವುದಿಲ್ಲ. ಕಬ್ಬಲಿಗ ಸಮುದಾಯದವರು ತಮ್ಮ ನೆಲೆಗಳಲ್ಲಿ ಶಾಲೆ ಇಲ್ಲದಿದ್ದರೂ ಪಕ್ಕದ ಗ್ರಾಮಗಳಿಗೆ ಕಲಿಸುವ ಆಸಕ್ತಿ ಇತ್ತೀಚಿಗೆ ನಡೆಯುತ್ತಿವೆ. ಬೇಡರ ಹಳೆಯ ಕಾಲದ

ಗಾದೆಯನ್ನು ಇಟ್ಟುಕೊಂಡು ಆಧುನಿಕ ಯುಗದ ಮಕ್ಕಳನ್ನು ಕೋಟಿವಿದ್ಯೆಗಿಂತ ಮೇಟಿ ವಿದ್ಯೆ ಲೇಸು ಎಂದು ಮಕ್ಕಳನ್ನು ಚಿಕ್ಕ ವಯಸ್ಸಿನಲ್ಲಿ ಕೆಲಸದ ಹೊರೆಯನ್ನು ಹೊರೆಸುತ್ತಿದ್ದಾರೆ. ಕಬ್ಬಲಿಗ ಸಮುದಾಯದವರ ದಿನನಿತ್ಯದ ಜೀವನದಲ್ಲಿ ಆಗುವ ತೊಂದರೆಗಳನ್ನು ನಮ್ಮ ಮಕ್ಕಳು ಅನುಭವಿಸಬಾರದೆಂದು ಕಬ್ಬಲಿಗ ಸಮುದಾಯದವರು ಮಕ್ಕಳ ಭವಿಷ್ಯಕ್ಕಾಗಿ ಕೆಲಸ ಮಾಡುತ್ತಿರುವುದು ಕಂಡುಬರುತ್ತದೆ. ಬೇಡ ಸಮುದಾಯದವರಲ್ಲಿ ಓದಿದರೆ ಸರ್ಕಾರಿ ನೌಕರಿ ಸಿಗುವುದಿಲ್ಲ ಎನ್ನುವ ಮನೋಭಾವದಿಂದಾಗಿ ಶಾಲೆಗೆ ಕಳಿಸದೇ ಇರುವುದು ಪ್ರಬಲವಾದ ಕಾರಣವಾಗಿದೆ. ಜೊತೆಗೆ ಓದಿದ ವಿದ್ಯಾವಂತ ಮಕ್ಕಳು ಕೃಷಿ ಕೆಲಸ ಮಾಡುವುದಿಲ್ಲ ಎಂದು ತಿಳಿದು ಅಲ್ಪಸ್ವಲ್ಪ ಕಲಿಸುತ್ತಾರೆ.

ಬೇಡ ಮತ್ತು ಕಬ್ಬಲಿಗ ಸಮುದಾಯದವರಿಗೆ ಹೋಲಿಕೆ ಮಾಡಿದಾಗ ಶಿಕ್ಷಣದ ಬಗ್ಗೆ ಇರುವ ಕಾಳಜಿ ಬೇಡರಲ್ಲಿ ಅಲ್ಪ ಸ್ವಲ್ಪ ಆದರೆ ಕಬ್ಬಲಿಗ ಸಮುದಾಯದಲ್ಲಿ ಭವಿಷತ್ತಿನ ಬಗ್ಗೆ ಯೋಚಿಸುವ ವಿವೇಕದಿಂದಾಗಿ ಇಂದು ಕಬ್ಬಲಿಗರು ಶಿಕ್ಷಣಕ್ಕೆ ಹೆಚ್ಚಿನ ಹೊತ್ತು ನೀಡುತ್ತಿದ್ದಾರೆ.

ಬೇಡರು ಕಲಿತ ಮೇಲೆ ನೌಕರಿ ಸಿಕ್ಕರೆ ಒಳ್ಳೆಯದು ಇಲ್ಲದಿದ್ದರೆ ನಿರುದ್ಯೋಗಿಗಳಾಗಿ ವಿದ್ಯೆ ವ್ಯರ್ಥವಾಗುತ್ತದೆ ಎಂಬ ಮನಸ್ಥಿತಿಯಿದೆ. ಆದರೆ ಕಬ್ಬಲಿಗ ಸಮುದಾಯದವರು ಕಲಿತರೆ ಸ್ವತಂತ್ರವಾಗಿ ಬದುಕಲು, ಬುದ್ಧಿಶಕ್ತಿ, ಜೀವನ ಮಟ್ಟವನ್ನು ಸುಧಾರಿಸಿಕೊಳ್ಳಲು ಅನುಕೂಲಕರ ಸಂಗತಿ ಎಂದು ತಿಳಿದುಕೊಂಡಿದ್ದಾರೆ. ಒಟ್ಟಾರೆಯಾಗಿ ಹೇಳುವುದಾದರೆ ಶಿಕ್ಷಣದ ಬಗ್ಗೆ ವಿಭಿನ್ನ ನಿಲುವನ್ನು ಹೊಂದಿದ್ದಾರೆ. ಆ ಎರಡು ನಿಲುವು ಸತ್ಯವಾದರೂ ಸಾರ್ವಜನಿಕ ಜೀವನ ಬಹುಮುಖ್ಯವಾಗಿ ಶಿಕ್ಷಣದ ಅವಶ್ಯಕತೆ ಕಂಡುಬರುತ್ತದೆ.

ಶಿಕ್ಷಣ ಉದ್ಯೋಗಕ್ಕೆಂದು ಮಾತ್ರ ಪರಿಗಣಿಸದೆ ಬದುಕಿನ ಕತ್ತಲೆಯನ್ನು ದೂರ ಮಾಡಿಕೊಳ್ಳುವ ಪ್ರಯತ್ನದಲ್ಲಿ ಕಬ್ಬಲಿಗ ಸಮುದಾಯ ಯಶಸ್ವಿಯಾಗಿದೆ. ಅಡವಿಯಲ್ಲಿ ಇರುವ ಬೇಡರು ಮತ್ತಷ್ಟು ಶಿಕ್ಷಣದಿಂದ ವಂಚಿತರಾಗಿ ಅಜ್ಞಾನದ ಅಂಧಃಕಾರಕ್ಕೆ ಒಳಗಾಗುತ್ತಿದ್ದಾರೆ ಎಂಬ ವ್ಯತ್ಯಾಸವನ್ನು ಗಮನಿಸಬಹುದಾಗಿದೆ.

ಸಮಾಜದಲ್ಲಿ ದಿನನಿತ್ಯ ಜೀವನದಲ್ಲಿ ಆಗುವ ಅನ್ಯಾಯವನ್ನು ಆ ಕ್ಷಣದಲ್ಲಿ ವಿಚಾರ ಮಾಡಿ ಮರೆತು ಬಿಡುವುದು ಜೊತೆಗೆ ಬೇಡರಿಗೆ ಹೊಟ್ಟೆಪಾಡಿಗಾಗಿ ಎಲ್ಲವನ್ನು ಮರೆತು ಪುನಃ ದುಡಿಯಲು ಸಿದ್ಧರಾಗುತ್ತಾರೆ. ಬೇಡರಿಗೆ ಭವಿಷ್ಯತ್ತಿನ ಬಗ್ಗೆ ಯಾವುದೇ ಅರಿವು ಸಾಮಾನ್ಯ ತಿಳುವಳಿಕೆ ಇಲ್ಲದ ಜನರು ಒಂದು ಕಡೆಯಾದರೆ ಸವಲತ್ತುಗಳು ಕಾಣದೇ ಅತ್ಯಂತ ಪ್ರಾಚೀನ ಕಾಲದ ಸ್ಥಿತಿಯಲ್ಲಿ ಅನೇಕ ಬೇಡರ ಗುಂಪು ರಾಯಚೂರು ಜಿಲ್ಲೆಯ ಅನೇಕ ಸೂಕ್ಷ್ಮವಾಗಿ ನೋಡಿದಾಗ ಅರಿವಿಗೆ ಬರುತ್ತದೆ. ಇಂತಹ ವೈರುದ್ಯತೆ ಪ್ರತಿಯೊಂದು ತಾಲೂಕಿನ ಪ್ರತಿಯೊಂದು ದೊಡ್ಡಿಯ ಶಿಕ್ಷಣ ವ್ಯವಸ್ಥೆ ಸಾಕಷ್ಟು ಏಳು ಬೀಳುಗಳಿಂದ

ಕೂಡಿದೆ. ಶಿಕ್ಷಣ ಕೊರತೆ ಕೇವಲ ಒಂದು ಜಾತಿ ಅಥವಾ ಒಂದು ಸ್ಥಳ ಭಿನ್ನ ರೀತಿಯಲ್ಲಿ ಕಾಣಬಹುದು ಕ್ಷೇತ್ರಕಾರ್ಯಕ್ಕೆ ಹೋದಾಗ ತಪ್ಪಲದೊಡ್ಡಿ ಶಿಕ್ಷಕರಾದ ಬಸವರಾಜ ಆಶ್ಚರ್ಯವಾಗಿ ನೋಡಿದರು. ದಿನನಿತ್ಯ ಇವರ ಮಧ್ಯೆ ಒಡನಾಟದಿಂದ ಇಲ್ಲಿನ ಜನರ ಪ್ರಭಾವಕ್ಕೆ ಒಳಗಾಗಿ ಮಂದಗತಿ ಶಾಲೆಯನ್ನು ಮುನ್ನೆಡೆಸುತ್ತಿದ್ದಾರೆ.

"ಶಾಲೆಗಳಲ್ಲಿ ಕೊಡುವ ಬಿಸಿಊಟಕ್ಕೆ ಮಾತ್ರ ವಿದ್ಯಾರ್ಥಿಗಳು ಬರುತ್ತಾರೆ."[೮] ಊಟ ಮಾಡಿದನಂತರ ತಮ್ಮ ತಮ್ಮ ಮನೆಗಳಿಗೆ ಹೋಗುತ್ತಾರೆ ಎನ್ನುವ ಮಾತು ಇದೆ. ದೊಡ್ಡಿಗಳಲ್ಲಿ ಕೆಲಸ ಮಾಡುವ ಶಿಕ್ಷಕರ ಉತ್ತರವಾಗಿದ್ದು. ಕಲಿಯುವ ಆಸಕ್ತಿ ಮಕ್ಕಳಲ್ಲಿ ಇದ್ದರೆ, ಕಲಿಸುವ ಆಸಕ್ತಿ ತಂದೆ ತಾಯಿಗಳಲ್ಲಿ ಇಲ್ಲ. ಕಲಿಸುವ ಆಸಕ್ತಿ ಪಾಲಕರಲ್ಲಿ ಇದ್ದರೆ ಕಲಿಯುವ ಆಸಕ್ತಿ ಮಕ್ಕಳಲ್ಲಿ ಇಲ್ಲ. ಮಕ್ಕಳ ಕಲಿಯುವ ಮತ್ತು ತಂದೆ ತಾಯಿಗಳಿಗೆ ಕಲಿಸುವ ಆಸಕ್ತಿ ಇದ್ದರೆ ಶಾಲೆ ಇಲ್ಲ. ಶಾಲೆ ಇದ್ದರೆ ಶಿಕ್ಷಕರಿಲ್ಲ. ಶಾಲೆ ಮತ್ತು ಶಿಕ್ಷಕರು ಇದ್ದರೂ ಕಲಿಸುವ ತಾಳ್ಮೆ ಶಿಕ್ಷಕರಲ್ಲಿ ಇಲ್ಲ. ಇಂತಹ ಶೈಕ್ಷಣಿಕ ವೈರುದ್ಯತೆಗಳು ರಾಯಚೂರು ಜಿಲ್ಲೆಯ ದೊಡ್ಡಿಗಳಲ್ಲಿ ಸಮುದಾಯ ನೆಲೆಯಿಂದ ಹೋಲಿಕೆ ಮಾಡಿ ನೋಡಿದಾಗ ನೆಲೆಯಿಂದ ನೆಲೆಗೆ ಸಮುದಾಯದಿಂದ ಸಮುದಾಯಕ್ಕೆ ವಿಭಿನ್ನವಾದ ಶೈಕ್ಷಣಿಕ ವೈರುದ್ಯತೆಗಳನ್ನು ಗಮನಿಸಬಹುದಾಗಿದೆ.

ರಾಜಕೀಯ ಹೋಲಿಕೆ ಮತ್ತು ವ್ಯತ್ಯಾಸಗಳು

ರಾಯಚೂರು ಜಿಲ್ಲೆಯಲ್ಲಿ ಕಬ್ಬಲಿಗ ಸಮುದಾಯವು ರಾಜಕೀಯವಾಗಿ ಸಾಕಷ್ಟು ಹಿಂದುಳಿದಿದೆ. ಇದಕ್ಕೆ ಕಾರಣ ಸಂಘಟನೆ ಕೊರತೆ ಎದ್ದು ಕಾಣುತ್ತದೆ. ಕ್ಷೇತ್ರ ಪುನರ್ವಿಂಗಡನೆ ಪೂರ್ವದಲ್ಲಿ ರಾಯಚೂರು ವಿಧಾನಸಭಾ ಕ್ಷೇತ್ರ ಪೈಕಿ ರಾಯಚೂರು ತಾಲೂಕಿನ ಕಲ್ಮಲಾ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಈ ಸಮುದಾಯದವರು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಮತದಾರರನ್ನು ಹೊಂದಿದೆ. ಇದರಿಂದಾಗಿ ಹಿಂದೆ ೧೯೮೫-೮೬ರ ಚುನಾವಣೆಯಲ್ಲಿ ಈ ಸಮುದಾಯದವರಾದ ದಿ॥ ಕೆ.ಕೃಷ್ಣಮೂರ್ತಿಯವರು ಶಾಸಕರಾಗಿ ಆಯ್ಕೆಯಾಗಿ ಮತ್ತು ಸಚಿವರಾಗಿ ಕಾರ್ಯನಿರ್ವಹಿಸಿದ್ದಾರೆ. ಅಲ್ಲದೇ ಹಿಂದಿನ ಜನತಾದಳ ಸರ್ಕಾರ ರಾಜ್ಯದಲ್ಲಿ ಆಡಳಿತದಲ್ಲಿದ್ದಾಗ ರಾಯಚೂರು ತಾಲೂಕಿನ ಈ ಸಮುದಾಯದವರಾದ ದಿ॥ ರಂಗದೊಡ್ಡಿ ಗಂಗಣ್ಣ ಕಲ್ಮಲಾ ಇವರನ್ನು ವಿಧಾನ ಪರಿಷತ್ತಿಗೆ ಆಯ್ಕೆ ಮಾಡಲಾಗಿತ್ತು. ೨೦೦೮ರಲ್ಲಿ ವಿಧಾನಸಭೆ ಮತ್ತು ಲೋಕಸಭೆ ಕ್ಷೇತ್ರಗಳ ಪುನರ್ ವಿಂಗಡಣೆ ಆದ ನಂತರ ರಾಯಚೂರು ಜಿಲ್ಲೆಯಲ್ಲಿ ನಾಲ್ಕು ವಿಧಾನಸಭಾ ಒಂದು ಲೋಕಸಭಾ ಕ್ಷೇತ್ರವನ್ನು ಪರಿಶಿಷ್ಟ ಪಂಗಡಕ್ಕೆ ಮೀಸಲು ಮಾಡಲಾಯಿತು. ಸಾಮಾನ್ಯ ಕ್ಷೇತ್ರವಿದ್ದಾಗ ಕಬ್ಬಲಿಗ ಸಮುದಾಯದವರು ರಾಜಕೀಯ ಪ್ರಾಬಲ್ಯ ಹೊಂದಿದ್ದರು ಎನ್ನುವುದಕ್ಕೆ ಹಿಂದಿನ ರಾಜಕಾರಣ ವ್ಯವಸ್ಥೆಯನ್ನು ನೋಡಿದರೆ ಸಂಘಟನೆ ಕೊರತೆಯ ಮಧ್ಯೆಯು ಶಾಸಕರಾಗಿ ಈ ಸಮುದಾಯದವರು

ಬಲಿಷ್ಠರಾಗಿದ್ದರು. ಈ ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬೇಡರ ಸಂಖ್ಯೆ ಇದ್ದರೂ ರಾಜಕೀಯವಾಗಿ ಕೆಲವು ತಾಲೂಕುಗಳಲ್ಲಿ ಶಾಸಕರಾಗಿ ಆಯ್ಕೆಯಾಗಿದ್ದಾರೆ. ೨೦೦೮ರ ನಂತರದಲ್ಲಿ ಬೇಡರು ನಾಲ್ಕು ಜನ ಶಾಸನಕರನ್ನು ಹೊಂದಿದರು ಗುಡಿಸಲು ಇರುವ ಬೇಡರ ಸಂಖ್ಯೆ ಏನು ಕಡಿಮೆ ಇಲ್ಲ. ನಮ್ಮ ದೇಶ ರಾಮ ರಾಜ್ಯವಾದರೂ ರಾಗಿ ಬಿಸುವುದು ತಪ್ಪುವುದಿಲ್ಲ ಎಂದು ಹಿರಿಯರು ಹೇಳುತ್ತಾರೆ. ಆದರೆ ಈ ಮಾತು ಬೆಡರನ್ನು ಕುರಿತು ಹೇಳಿದ ಹಾಗೆಯೇ ಇದೆ. ಬೇಡರಿಗೆ ಮೀಸಲಾತಿ ಇದ್ದರೆ ಮಾತ್ರ ಅವರಿಗೆ ಅಧಿಕಾರ, ಇಲ್ಲದಿದ್ದರೆ ಯಾವ ಅಧಿಕಾರವು ಇಲ್ಲ. ಹಿಂದಿನ ಕಾಲದಲ್ಲಿ ಬೇಡರು ಶಕ್ತಿಯಿಂದ ರಾಜ ಮಹಾರಾಜರಾಗಿ ಅಧಿಕಾರ ಮಾಡಿದ್ದಾರೆ. ಸ್ವಾರ್ಥ ರಾಜಕಾರಣ ಮಾಡಿಲ್ಲ. ಇಂದು ಕೂಡ ಅದೇ ಪರಿಸ್ಥಿತಿ ಇದೆ. ಯಾರೇ ಶಾಸಕರಾದರೂ ಮತಗಳಿಗಾಗಿ ಇನ್ನೊಂದು ಸಮುದಾಯದ ಹೊಲೈಕೆಯಿಂದ ಬಡವರು ಬಡವರಾಗಿಯೇ ಉಳಿಯುತ್ತಿದ್ದಾರೆ. ಶ್ರೀಮಂತರು ಶ್ರೀಮಂತರಾಗುತ್ತಿದ್ದಾರೆ. ಮೀಸಲಾತಿಯ ಉದ್ದೇಶ ಅತಿ ಹೆಚ್ಚು ಸಂಖ್ಯೆಯನ್ನು ಹೊಂದಿರುವ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಕ್ಷೇತ್ರಗಳ ಮೀಸಲಾತಿಗೆ ಒಳಪಡಿಸಿ ಆ ಮುಖಾಂತರ ರಾಜಕೀಯ ನ್ಯಾಯವನ್ನು ದೊರಕಿಸಿಕೊಡುವ ಸಂವಿಧಾನದತ್ತ ಆಶಯವಾಗಿದೆ. ಆದರೆ ಇಂದು ಸಂವಿಧಾನಕ್ಕೆ ವಿರೋಧವಾಗಿ ಮೀಸಲಾತಿ ಆಶಯ ಯಶಸ್ವಿಯಾಗುತ್ತಿಲ್ಲ. ಬಂಡವಾಳ ಶಾಹಿಗಳ ಕಪಿ ಮುಷ್ಠಿಗೆ ಸಿಕ್ಕು ನರಳುತ್ತಿವೆ. ಕಬ್ಬಲಿಗರು ರಾಜಕೀಯವಾಗಿ ಸ್ಥಳೀಯ ಸಂಸ್ಥೆಗಳಲ್ಲಿ ಸಂಘಟನೆ ಮುಖಾಂತರ ರಾಜಕೀಯ ಸ್ಥಾನಮಾನ ಪಡೆದುಕೊಳ್ಳುತ್ತಿದ್ದಾರೆ.

ಬೇಡ ಸಮುದಾಯದವರು ಶಾಸಕರು ಮತ್ತು ಸಂಸದರು ಆದರೂ ಗುಡಿಸಲುಗಳಿಂದ ಮುಕ್ತವಾಗಿಲ್ಲ. ಎರಡು ಬಾರಿ ಮೀಸಲಾತಿಯಿಂದ ಅಧಿಕಾರ ಪಡೆದುಕೊಂಡರೂ ದೊಡ್ಡಿಯಲ್ಲಿ ನೆಲಸಿರುವವರ ಹತ್ತಿರ ಇಂದಿಗೂ ಯಾವುದೇ ಶಾಸಕರು ಹೋಗದೇ ಇರುವುದು ದುರಂತವೇ ಸರಿ. ಚುನಾವಣೆ ಬಂದಾಗ ಮಾತ್ರ ದೊಡ್ಡಿಗಳಲ್ಲಿ ಇರುವ ಶ್ರೀಮಂತ ಕುಟುಂಬದವರಿಗೆ ಹಣ ಮುಟ್ಟಿಸುತ್ತಾರೆ. ಒಂದು ಬಾರಿ ಬಂದು ಹೋದರೆ ಮತ್ತೆ ಚುನಾವಣೆ ದಿನವೇ ಬರುತ್ತಾರೆ. ರಾಜಕಾರಣಿಗಳಲ್ಲಿ ಸಮುದಾಯದ ಅಭಿವೃದ್ಧಿ ಬಗ್ಗೆ ಕಾಳಜಿ ಇಲ್ಲ. ಸ್ವಾರ್ಥಕ್ಕಾಗಿ, ಅಧಿಕಾರಕ್ಕಾಗಿ ಸಾಮಾನ್ಯ ಜನರನ್ನು ಬಲಿಕೊಡುತ್ತಿದ್ದಾರೆ. ಜಿಲ್ಲೆಯ ಬಹುತೇಕ ತಾಲೂಕುಗಳಲ್ಲಿ ದೊಡ್ಡಿಯಲ್ಲಿ ನೆಲೆಸಿರುವ ಬದುಕು ತೀರ ಕಳಪೆ ಗುಣಮಟ್ಟದಾಗಿದೆ. "ಯಾರಿಗೆ ಬಂತು ಎಲ್ಲಿಗೆ ಬಂತು ನಲವತ್ತೇಳರ ಸ್ವಾತಂತ್ರ್ಯ ರಾಜಕಾರಣಿಗಳ ಓಟಿಗೆ ಬಂತು ಪೋಲೀಸರ ಬೂಟಿಗೆ ಬಂತು" ಎನ್ನುವ ಸ್ಥಿತಿ ರಾಜಕಾರಣವಾಗಿದೆ.

ಒಟ್ಟಾರೆಯಾಗಿ ಹೇಳುವುದಾದರೆ ರಾಜಕೀಯವಾಗಿ ಕಬ್ಬಲಿಗ ಬೇಡರನ್ನು ಹೋಲಿಕೆ ಮಾಡಿದರೆ ರಾಜಕೀಯದಲ್ಲಿ ಬೇಡರು ಮೀಸಲಾತಿಯಿಂದ ಅಧಿಕಾರ ಪಡೆದುಕೊಳ್ಳುತ್ತಿದ್ದಾರೆ.

ಆದರೆ ಅಧಿಕಾರದಿಂದ ಯಾವುದೇ ದೊಡ್ಡಿಗಳು ಹೇಳಿಕೊಳ್ಳುವಷ್ಟು ಸುಧಾರಣೆ ಆಗಿಲ್ಲ ಎಂದು ಸ್ಥಳೀಯರು ಹೇಳುತ್ತಾರೆ.

ಕಬ್ಬಲಿಗ ಸಮುದಾಯದವರು ಸಾಮಾನ್ಯ ಕ್ಷೇತ್ರದಲ್ಲಿ ಸಂಘಟನೆ, ರಾಜಕೀಯವಾಗಿ ಸಂಘಟಿತರಾಗುವ ಮೂಲಕ ಸ್ಥಳೀಯವಾಗಿ ಪ್ರಬಲವಾಗುತ್ತಿದ್ದಾರೆ. ಬೇಡರು ರಾಜಕೀಯವಾಗಿ ಅಧಿಕಾರ ಪಡೆದುಕೊಂಡವರು ನಗರವಾಸಿಗಳಾಗಿದ್ದಾರೆ. ಸ್ಥಳೀಯ ಸಂಸ್ಥೆಯ ಚುನಾವಣೆಗೆ ನಿಲ್ಲಲು ಅವಕಾಶ ಸಾಮಾನ್ಯ ಕ್ಷೇತ್ರವಾದರೆ ಇವರಿಗೆ ಯಾವುದೇ ರಾಜಕೀಯ ಪಕ್ಷ ಟಿಕೇಟ್ ನೀಡುವುದಿಲ್ಲ. ಹೀಗಾಗಿ ಮೀಸಲಾತಿಯಿಂದ ರಾಜಕೀಯವಾಗಿ ಬೇಡರು ಮುಂದೆ ಬರುತ್ತಿದ್ದಾರೆ. ಸ್ವಂತ ಸಾಮರ್ಥ್ಯದಿಂದ ಕಬ್ಬಲಿಗ ಸಮುದಾಯದವರು ರಾಜಕೀಯ ಅನುಭವದಿಂದ ಕೇವಲ ಸ್ಥಳೀಯ ಸಂಸ್ಥೆಯಲ್ಲಿ ಅಧಿಕಾರ ಪಡೆದುಕೊಳ್ಳುತ್ತಿದ್ದಾರೆ. ಈ ಎರಡು ಸಮುದಾಯದವರು ರಾಜಕೀಯವಾಗಿ ಸ್ಥಾನ-ಮಾನದಲ್ಲಿ ವೈರುದ್ಯತೆಗಳು ಕಂಡುಬರುತ್ತವೆ. ದೊಡ್ಡಿಗಳಲ್ಲಿ ನೆಲೆಸಿರುವ ಯಾವುದೇ ಸಮುದಾಯದವರು ಎಂ.ಎಲ್‌ಸಿ ಆಗಿಲ್ಲ. ಸ್ಥಳೀಯ ಚನಾವಣೆಯಲ್ಲಿಯೂ ದೊಡ್ಡಿಗಳನ್ನು ಹಳ್ಳಿಗಳಲ್ಲಿ ಪ್ರಭಾವಿಗಳ ಪಾಲು ಆಗುತ್ತಿವೆ. ರಾಜಕೀಯ ಅಧಿಕಾರ ದೊಡ್ಡಿಗಳಲ್ಲಿ ಇರುವ ಯಾವುದೇ ವ್ಯಕ್ತಿ ಗ್ರಾಮ ಪಂಚಾಯತ ಸದಸ್ಯರು ಆದರೂ ಆ ಪಂಚಾಯತಿಯಿಂದ ಹೇಳಿಕೊಳ್ಳುವ ಅಭಿವೃದ್ಧಿ ಕೆಲಸ ಮಾಡಿಕೊಳ್ಳಲು ಆಗಿಲ್ಲ. ಗ್ರಾಮ ಪಂಚಾಯಿತಿ ಸದಸ್ಯರಾದವರು ವೈಯಕ್ತಿಕವಾಗಿ ಅಭಿವೃದ್ಧಿಯಾಗುತ್ತಿದ್ದಾರೆ ಎನ್ನುವ ಮಾತು ಕೇಳಿಬರುತ್ತದೆ. ಕ್ಷೇತ್ರಕಾರ್ಯಕ್ಕೆ ಹೋದಾಗ ಸೂಕ್ಷ್ಮವಾಗಿ ಗಮನಿಸಿದ ಸಂಗತಿ ಎಂದರೆ ದೊಡ್ಡಿಗಳಿಂದ ಆಯ್ಕೆಯಾದ ಸದಸ್ಯರ ಮಾತು ಗ್ರಾಮ ಪಂಚಾಯತಿಯಲ್ಲಿ ನಡೆಯುವುದಿಲ್ಲ. ಬಹುತೇಕ ದೊಡ್ಡಿಗಳಲ್ಲಿ ಗ್ರಾಮ ಸಭೆ ಎಂದರೆ ಯಾರಿಗೂ ಗೊತ್ತಿಲ್ಲ. ಬೇಡರು ಕಬ್ಬಲಿಗರಿಗಿಂತ ರಾಜಕೀಯವಾಗಿ ಪ್ರಭಲವಾಗಿದ್ದಾರೆ ಆದರೆ ಅಭಿವೃದ್ಧಿಯಲ್ಲಿ ಸ್ಥಳೀಯ ಸಂಸ್ಥೆಯ ಚನಾವಣೆಗಳಲ್ಲಿ ಸ್ಪರ್ಧಿಸಿ ಅಧಿಕಾರ ಹಿಡಿಯುವ ಪ್ರಯತ್ನ ಕಬ್ಬಲಿಗರು ಮಾಡುತ್ತಿದ್ದಾರೆ. ಕಬ್ಬಲಿಗರು ಆರ್ಥಿಕವಾಗಿ ಅಭಿವೃದ್ಧಿಯಾಗುತ್ತಿದ್ದಾರೆ ಬೇಡರು ಆರ್ಥಿಕವಾಗಿ ತೀರ ನಿಕೃಷ್ಟವಾದ ಸ್ಥಿತಿಯಲ್ಲಿ ಬದುಕುತ್ತಿದ್ದಾರೆ.

ಕಬ್ಬಲಿಗರು ಸ್ಥಳೀಯವಾಗಿ, ರಾಜಕೀಯದಲ್ಲಿ ಬೆಳವಣಿಗೆ ಆಗುತ್ತಿದ್ದಾರೆ. ಆರ್ಥಿಕವಾಗಿ ಸುಧಾರಣೆ ಆಗುತ್ತಿರುವುದು ಕಂಡುಬರುತ್ತದೆ. ರಾಜಕೀಯ ಲಾಭಕ್ಕಾಗಿ ಈ ಎರಡು ಸಮುದಾಯ ಮದ್ಯೆ ಸ್ಥಳೀಯ ಚುನಾವಣೆಯಲ್ಲಿ ಪೈಪೋಟಿ ನಡೆಯುವುದನ್ನು ಕಾಣಬಹುದು. ರಾಜಕೀಯದಲ್ಲಿ ಬೇಡ ಸಮುದಾಯದವರಿಗೆ ಸಂಬಂಧ ಪಟ್ಟವರು ಅಧಿಕಾರ ಮಾಡುತ್ತಿದ್ದಾರೆ. ಅದರ ಫಲ ಪಡೆದುಕೊಳ್ಳುವುದರಲ್ಲಿ ಹಿಂದುಳಿದಿದ್ದಾರೆ. ರಾಜಕೀಯವಾಗಿ ಉನ್ನತ ಅಧಿಕಾರ ಸಿಗದಿದ್ದರೂ ರಾಜಕಾರಣದಿಂದ ಸ್ಥಳೀಯ ಮಟ್ಟದಲ್ಲಿ ಕಬ್ಬಲಿಗ ಸಮುದಾಯದವರು ಮುಂಚೂಣಿಯಲ್ಲಿ ಇದ್ದಾರೆ.

೬.೩ ಕುರುಬ ಮತ್ತು ಕಬ್ಬಲಿಗ ಸಮುದಾಯದ ನಡುವಿನ ಹೋಲಿಕೆ ಮತ್ತು ವ್ಯತ್ಯಾಸಗಳು

ಸಾಮಾಜಿಕ ಹೋಲಿಕೆ ಮತ್ತು ವ್ಯತ್ಯಾಸಗಳು

ಕುರುಬ ಸಮುದಾಯ ಸಾಮಾಜಿಕ ವ್ಯವಸ್ಥೆಯಲ್ಲಿ ಮೇಲಸ್ಥರದಲ್ಲಿದೆ. ಕಬ್ಬಲಿಗ ಸಮುದಾಯ ಶ್ರೇಣಿಕೃತ ವರ್ಗವ್ಯವಸ್ಥೆಯಲ್ಲಿ ಕುರುಬ ಸಮುದಾಯಕ್ಕಿಂತಲೂ ಕೆಳಸ್ತರದಲ್ಲಿದೆ. ಈ ರೀತಿಯ ಮೇಲು-ಕೀಳು ಭಾವವು ಎರಡು ಸಮುದಾಯಗಳಲ್ಲಿ ಭಾವನಾತ್ಮಕವಾಗಿ ಕಂಡುಬರುವುದಿಲ್ಲ. ಸಾಮಾಜಿಕ ವ್ಯವಸ್ಥೆಯಲ್ಲಿ, ಶ್ರೇಣಿಕೃತವರ್ಗ ವ್ಯವಸ್ಥೆಯಲ್ಲಿ ಎರಡು ಸಮುದಾಯಗಳು ಹಿಂದುಳಿದ ವರ್ಗಗಳೇ, ಆದರೆ ಸಮಾಜಿಕ ವ್ಯವಸ್ಥೆಯಲ್ಲಿ ಕುರುಬ ಸಮುದಾಯವು ಮೇಲ್ಪಂಕ್ತಿಯ ಸ್ಥಾನ ಹೊಂದಿದೆ. ಈ ರೀತಿಯ ವ್ಯವಸ್ಥೆಯಲ್ಲಿ ಹಿಂದುಳಿದ ವರ್ಗಗಳಲ್ಲಿ ಇಂದಿಗೂ ಕುರುಬ ಸಮುದಾಯವನ್ನು ಮೇಲುಸ್ತರದಲ್ಲಿ ನೋಡಲಾಗುತ್ತದೆ. ಇದಕ್ಕೆ ಸಾಮಾಜಿಕವಾಗಿ ಇನ್ನುಳಿದ ಸಮುದಾಯಗಳು, ಕಬ್ಬಲಿಗರನ್ನು ಒಳಗೊಂಡು, ಕುರುಬ ಸಮುದಾಯವನ್ನು ಅದರ ಸಂಪ್ರದಾಯ ಆಚರಣೆ ನಡುವಳಿಕೆಗಳಿಂದ ಸಾಮಾಜಿಕ ವ್ಯವಸ್ಥೆಯಲ್ಲಿ ಇವರಿಗೆ ಮನ್ನಣೆ ನೀಡಲಾಗಿದೆ. ಇದಕ್ಕೆ ಕಾರಣಗಳೆಂದರೆ ಕುರುಬ ಸಮುದಾಯವು ತನ್ನ ಪರಂಪರೆಯಲ್ಲಿ ಸಮಾಜವನ್ನು ಹಾಗೂ ಸಮುದಾಯಗಳನ್ನು ಅಪ್ಪಿಕೊಂಡು ಮಲ್ಲಯ್ಯ, ಮೈಲಾರಲಿಂಗ, ಎಲ್ಲಮ್ಮ, ದ್ಯಾಮವ್ವ ದೇವರುಗಳ ಆರಾಧಕರಾಗಿ ಜನಸಮುದಾಯದಲ್ಲಿ ಪೂಜ್ಯನೀಯ ಸ್ಥಾನವನ್ನು ಪಡೆದಿರುವುದು. ನಮ್ಮ ಜನಸಮುದಾಯಗಳ ನಂಬಿಕೆ ಗಾಢವಾದುದ್ದು. ಈ ನಂಬಿಕೆಯ ಬದುಕು ಸಮುದಾಯಗಳನ್ನು ಒಂದಾಗಿಸಿದೆ. ಕುರುಬ ಸಮುದಾಯದವರು ಎದುರು ಬಂದರೆ, ಕುರುಬ ಸಮುದಾಯದ ಮಹಿಳೆ ತುಂಬಿದ ಕೊಡ ಹೊತ್ತು ಮಹಿಳೆ ಊರಿನಿಂದ ಹೋರಡುವವರಿಗೆ ಎದುರುಗೊಂಡರೆ, ಹಾಗೂ ಕೂರಿಗೆ, ಕುಂಟೆ, ರಾಶಿಮಾಡುವ ಸಮಯದಲ್ಲಿ ಕುರುಬ ಸಮುದಾಯದ ವ್ಯಕ್ತಿಯಿಂದ ಮೊದಲು ಮಾಡಿದರೆ ಶುಭವಾಗುವುದೆಂಬ ಶ್ರದ್ಧಾಭಾವವೇ ಕುರುಬ ಸಮುದಾಯವನ್ನು ಹಿಂದುಳಿದ ವರ್ಗಗಳಲ್ಲಿ ಅಗ್ರಸ್ಥಾನಕ್ಕೆ ಏರಿಸಿರುವುದಾಗಿದೆ. ಕಬ್ಬಲಿಗ ಸಮುದಾಯವು ಕುರುಬ ಸಮುದಾಯದಂತೆ ಯಾವ ರೀತಿಯ ಗೌರವಾಧರಗಳಿಗೆ ಒಳಗಾಗದಿದ್ದರೂ ಕೂಡ, ಸಾಮಾಜಿಕ ವ್ಯವಸ್ಥೆಯ ಶ್ರೇಣಿಕೃತ ವ್ಯವಸ್ಥೆಯಲ್ಲಿ ಮೇಲಕ್ಕೇರದೆ ಕೆಳಕ್ಕೂ ಇಳಿಯದೆ ಮಧ್ಯದ ಸ್ಥಾನದಲ್ಲಿದೆ. ಅಂದರೆ ಕಬ್ಬಲಿಗರು ಹಿಂದುಳಿದ ವರ್ಗದವರಾದರೂ ವರ್ಗವ್ಯವಸ್ಥೆಯಲ್ಲಿ ಕೆಳಗಿನವರಲ್ಲ. ಇದು ಎರಡು ಸಮುದಾಯಗಳ ಸಾಮಾಜಿಕ ಬದುಕಿನ ವರ್ಗವ್ಯವಸ್ಥೆಯ ಸ್ಥಾನಮಾನದ ಸೂಚಿಯಾಗಿದೆ. ಸಾಮಾಜಿಕ ವ್ಯವಸ್ಥೆಯಲ್ಲಿ ಎರಡು ಸಮುದಾಯಗಳ ನಡುವಿನ ಭಿನ್ನತೆಯಲ್ಲಿ ಕೆಲವು ಆಘಾತಕಾರಿ ಅಂಶಗಳಿವೆ. ಇವುಗಳಲ್ಲಿ ಮೊದಲನೆಯದು ಕುರುಬ ಸಮುದಾಯದಲ್ಲಿ ನೆಲೆಯೂರಿರುವ ಅಂಧಶ್ರದ್ಧೆ ಇದಕ್ಕೆ ಬಾಲ್ಯವಿವಾಹ, ವಿಧವಾ ವಿವಾಹಕ್ಕೆ ಆಸ್ಪದ ನೀಡದಿರುವುದು ಒಂದು ಉಧಾಹರಣೆ ಇದರಾಚೆಗೆ ಇನ್ನೂ ಅನೇಕ ರೀತಿಯ ಕಂದಾಚಾರಗಳಿಗೆ ಕುರುಬ ಸಮುದಾಯ

ಬಲಿಯಾಗಿದೆ. ಇದಕ್ಕೆ ತದ್ವಿರುದ್ಧವಾದ ಅಂಶಗಳನ್ನು ರೂಢಿಸಿಕೊಂಡಿರುವ ಕಬ್ಬಲಿಗ ಸಮುದಾಯದಲ್ಲಿ ಬಾಲ್ಯವಿವಾಹ ಪದ್ಧತಿ ವಿರಳ, ಹಾಗೆಯೇ ಆಧುನಿಕತೆಯ ಬದುಕಿಗೆ ಹೊಂದಿಕೊಂಡಿರುವ ಕಬ್ಬಲಿಗ ಸಮುದಾಯ ತನ್ನ ಹಿಂದಿನ ಸಂಪ್ರದಾಯಗಳನ್ನು ಧಿಕ್ಕರಿಸಿ ವಿಧವಾ ವಿವಾಹಕ್ಕೆ ಆಸ್ಪದ ನೀಡಿದೆ. ಇದು ಕಬ್ಬಲಿಗ ಸಮುದಾಯವು ಈ ಯುಗದ ಜಾಯಮಾನಕ್ಕೆ ಹೊರಳುತ್ತಿರುವುದರ ಸಂಕೇತವಾಗಿದೆ. ಏಕೆಂದರೆ ದೊಡ್ಡಿಯೆಂದರೆ ಅದೊಂದು ಕಗ್ಗಾಡು. ನಾಗರಿಕ ಸಮಾಜದ ಸಂಪರ್ಕವಿಲ್ಲದ ಅರಣ್ಯ ಇಂತಹ ಪರಿಸರದಲ್ಲಿ ಮೌಢ್ಯಗಳನ್ನು ನೂಕಿ ಬದುಕುವ ಕಬ್ಬಲಿಗ ಸಮುದಾಯ ಬದಲಾವಣೆ ಹಾದಿಯಲ್ಲಿದೆ.

ಆರ್ಥಿಕ ಹೋಲಿಕೆ ಮತ್ತು ವ್ಯತ್ಯಾಸ

ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಭಿನ್ನತೆಗಳಿರುವಂತೆ ಆರ್ಥಿಕ ಭಿನ್ನತೆಗಳು ಕಂಡುಬರುತ್ತವೆ. ಇದಕ್ಕೆ ಸಾಕಷ್ಟು ಕಾರಣಗಳಿವೆ. ದೊಡ್ಡಿಗಳ ತೌಲನಿಕ ಅಧ್ಯಯನದ ಮುಖ್ಯ ಧ್ಯೇಯ ಸಮುದಾಯಗಳ ಬದುಕುವಿಕೆಯಲ್ಲಿ ಕಂಡುಬರುವ ಎಲ್ಲಾ ರೀತಿಯ ಸಾಮ್ಯತೆ ಭಿನ್ನತೆಗಳನ್ನು ಅರಿವುದು. ಈ ಅಂಶವನ್ನು ಕೇಂದ್ರಿಕರಿಸಿ ನಾವು ಶೋಧಿಸಿದ ತೌಲನಿಕ ವಿವೇಚನೆಯಲ್ಲಿ ಬಹುಮುಖ್ಯವಾದ ಅಂಶ ಆರ್ಥಿಕವಾದ ಸಾಮ್ಯತೆ ಎಲ್ಲಿಯೂ ಕಂಡುಬರದಿರುವುದು. ಬದಲಾಗಿ ಆರ್ಥಿಕವಾದ ಭಿನ್ನತೆ ಸಮುದಾಯ-ಸಮುದಾಯಗಳ ಮಧ್ಯೆ ಕಂಡುಬರುತ್ತದೆ. ಕುರುಬ ಮತ್ತು ಕಬ್ಬಲಿಗ ಸಮುದಾಯದ ಮಧ್ಯದಲ್ಲಿ ಇದು ಹೆಚ್ಚಾಗಿ ಕಾಣುತ್ತದೆ. ಕುರುಬ ಸಮುದಾಯ ಕೃಷಿ ಮತ್ತು ಕುರಿಸಾಕಾಣಿಕೆಯಲ್ಲಿ ಸ್ವಾವಲಂಬನೆ ಕಂಡುಕೊಂಡಿದೆ. ಇದರಿಂದ ಈ ಸಮುದಾಯದ ವರಮಾನ ಹೆಚ್ಚಾಗಿದೆಯಲ್ಲದೆ, ಅವರನ್ನು ಆರ್ಥಿಕವಾಗಿ ಸದೃಢರನ್ನಾಗಿಸಿದೆ. ಈ ಪ್ರಯೋಗಗಳು ಕುರುಬ ಸಮುದಾಯದ ಬದುಕನ್ನು ಒಂದು ಚೌಕಟ್ಟಿನಲ್ಲಿರುವಂತೆ ಮತ್ತು ಸಮಾಜಮುಖಿಯಾಗುವಂತೆ ಹಾಗೂ ಸಮಾಜದ ಮುಖ್ಯವಾಹಿನಿಗೆ ಬರುವಂತೆ ಮಾಡಿದೆ. ಕುರಿ ಸಾಕುವುದು, ಕೃಷಿ ಅಲ್ಲದೇ, ಸಮುದಾಯದ ಯುವಜನತೆ ಅಲ್ಪ ಶಿಕ್ಷಣದಿಂದ ವ್ಯಾಪಾರ ವಹಿವಾಟುಗಳಲ್ಲಿ ತೊಡುಗಿಸಿಕೊಂಡು ಆರ್ಥಿಕ ಸ್ವಾವಲಂಬನೆ ಸಾಧಿಸಿದ್ದಾರೆ. ಸರ್ಕಾರದಿಂದ ದೊರಕುವ ಕೃಷಿ ಸಂಬಂಧಿತ ಯೋಜನೆಗಳನ್ನು ಪಡೆಯುವಲ್ಲಿ ಸಫಲತೆ ಕಂಡಿದೆ.

ಬ್ಯಾಂಕ್ ಸಾಲ ಹಿಂದುಳಿದ ವರ್ಗನಿಗಮದಿಂದ ಸಿಗುವ ಸೌಲತ್ತು ಅವುಗಳನ್ನು ನಿರಾತಂಕವಾಗಿ ಈ ಸಮುದಾಯ ಬಳಸಿಕೊಂಡಿದೆ. ಆದರೆ ಇದು ಸಮುದಾಯದ ಎಲ್ಲಾ ಜನರಿಗೂ ಅನ್ವಯಿಸುವುದಿಲ್ಲ. ಅವರಲ್ಲಿಯೇ ಕೆಲವರು ಆರ್ಥಿಕವಾಗಿ ದುರ್ಬಲರಿದ್ದಾರೆ. ಕುರುಬ ಸಮುದಾಯವು ಒಂದು ಶ್ರಮಿಕ ವರ್ಗವಾಗಿದ್ದು, ಇಡೀ ಕುಟುಂಬ ಆರ್ಥಿಕ ಸ್ವಾವಲಂಬನೆಗೆ ಒತ್ತು ನೀಡುತ್ತದೆ. ಇದರಿಂದ ಇದರ ಜೀವನ ಕ್ರಮದಲ್ಲಿ ಬದಲಾವಣೆ ಕಂಡುಬಂದಿದೆ. ಮೊದಲೆಲ್ಲಾ ದೇಶೀಯ ಉಪಕರಣಗಳಿಂದ ಕೃಷಿ ಚಟುವಟಿಕೆಯಲ್ಲಿ ತೊಡುಗುತ್ತಿದ್ದ ಇವರು ಇಂದು ಬ್ಯಾಂಕ್‌ಗಳಿಂದ ಸಾಲ ಪಡೆದು ಟ್ರಾಕ್ಟರ್ ಹಾಗೂ

ಆಧುನಿಕ ಕೃಷಿ ಉಪಕರಣಗಳನ್ನು ಪಡೆದುಕೊಂಡಿದ್ದಾರೆ. ಹೀಗಾಗಿ ಕೃಷಿಯಿಂದ ಒಳ್ಳೆಯ ಲಾಭ ಗಳಿಸುತ್ತಿದ್ದಾರೆ. ಇಲ್ಲಿನ ನೀರಾವರಿ ವ್ಯವಸ್ಥೆಯು ಈ ಸಮುದಾಯವನ್ನು ಆರ್ಥಿಕವಾಗಿ ಬಲಗೊಳಿಸಿದೆ. ಒಟ್ಟಿನಲ್ಲಿ ದೊಡ್ಡಿಗಳಲ್ಲಿ ಬದುಕುವ ಕುರುಬ ಸಮುದಾಯ ಕಬ್ಬಲಿಗ ಸಮುದಾಯಕ್ಕಿಂತ ಆರ್ಥಿಕವಾಗಿ ಸದೃಢವಾಗಿದೆ ಎನ್ನಬಹುದು.

ಕಬ್ಬಲಿಗ ಸಮುದಾಯವು ಕುರುಬ ಸಮುದಾಯದ ಆರ್ಥಿಕ ಹೋಲಿಕೆಯಲ್ಲಿ ಸಾಮ್ಯತೆ ಕಾಣದೆ ಅದು ಆರ್ಥಿಕವಾಗಿ ದುರ್ಬಲವಾಗಿದ್ದು, ಈ ತುಲನೆಯಲ್ಲಿ ಭಿನ್ನವಾಗಿ ಕಾಣುವ ಸಮುದಾಯವಾಗಿದೆ. ಕಬ್ಬಲಿಗರ ಕುಲಕಸುಬು ಮೀನುಗಾರಿಕೆ, ರಾಯಚೂರು ಜಿಲ್ಲೆಯ ಸೀಮಿತ ಪ್ರದೇಶದಲ್ಲಿರುವ ದೊಡ್ಡಿಗಳಲ್ಲಿ ಕಬ್ಬಲಿಗ ಸಮುದಾಯವಿದೆ. ಕೆಲವು ದೊಡ್ಡಿಗಳು ಕೃಷ್ಣಾ ಮತ್ತು ತುಂಗಾಭದ್ರಾ ನದಿ ದಡದಲ್ಲಿವೆ. ಇಂಥ ಪ್ರದೇಶದಲ್ಲಿ ಮೀನುಗಾರಿಕೆಗೆ ಅವಕಾಶವಿರುವುದರಿಂದ ಕುಲಕಸುಬಾದ ಮೀನುಗಾರಿಕೆ ಇವರ ಶ್ರಮಕ್ಕೆ ತಕ್ಕಂತೆ ಆರ್ಥಿಕವಾಗಿ ಸ್ವಲ್ಪ ಮಟ್ಟಿಗೆ ಮೇಲಕ್ಕೆತ್ತಿದೆ ಇನ್ನೂ ಕೆಲವು ದೊಡ್ಡಿಗಳಲ್ಲಿ ಕೆರೆ–ಕಟ್ಟೆಗಳಿವೆ. ಇಲ್ಲಿಯೂ ಇವರಿಗೆ ಆರ್ಥಿಕ ಸ್ವಾವಲಂಬನೆಗೆ ದಾರಿಯಿದೆ. ಆದರೆ ಕೆಲವೆಡೆ ನೀರಿಲ್ಲದ ದೊಡ್ಡಿಗಳಿವೆ. ಇಂಥ ಪ್ರದೇಶದಲ್ಲಿ ಕಬ್ಬಲಿಗ ಸಮುದಾಯವು ತಮ್ಮ ಕುಲಕಸುಬಿನಿಂದ ವಿಮುಖರಾಗದೆ, ನೀರಿರುವ ಪ್ರದೇಶಗಳಿಗೆ ವಲಸೆ ಹೋಗುತ್ತಾರೆ. ಈ ವಲಸೆಯಿಂದ ಬದುಕಿನ ದಾರಿಕಾಣುತ್ತಾರೆ. ಇದು ಅವರ ಹೊಟ್ಟೆತುಂಬಿಸುತ್ತದೆ. ಆದರೆ ಇವರನ್ನು ಆರ್ಥಿಕವಾಗಿ ಪ್ರಬಲರನ್ನಾಗಿಸಲಾರದು.

ಕಬ್ಬಲಿಗ ಸಮುದಾಯದಲ್ಲಿ ಕುಲಕಸುಬನ್ನು ನಂಬಿದವರು ಇದ್ದಾರೆ. ಅಲ್ಲದೆ ಕೆಲವರು ಅದರಿಂದ ವಿಮುಖರಾದವರೂ ಇದ್ದಾರೆ. ಹೀಗೇಕೆಂದರೆ ಮೀನುಗಾರಿಕೆ ನಡೆಯುವುದು ವರ್ಷದಲ್ಲಿ ನಾಲ್ಕೈದು ತಿಂಗಳು ಮಾತ್ರ ಇನ್ನುಳಿದ ದಿನಗಳಲ್ಲಿ ಇವರು ನಿರುದ್ಯೋಗಿಗಳಾಗಿರುತ್ತಾರೆ. ಈ ಪರಿತಪಿಸುವ ಸಂಕಟದಿಂದ ತಪ್ಪಿಸಿಕೊಂಡವರು ಕೃಷಿಯೆಡೆಗೆ ಮುಖಮಾಡುತ್ತಾರೆ. ಕಬ್ಬಲಿಗ ಸಮುದಾಯದಲ್ಲಿ ಕೃಷಿಕರ ಸಂಖ್ಯೆ ಕಡಿಮೆ. ಇದಕ್ಕೆ ಕಾರಣ ಅವರಿಗೆ ತಲೆಮಾರಿನಿಂದ ಯಾವುದೇ ಕೃಷಿ ಭೂಮಿ ದಕ್ಕದಿರುವುದು ಹೀಗಾಗಿ ಅಲ್ಪ ಭೂಮಿಯನ್ನು ಹೊಂದಿದ ಕಬ್ಬಲಿಗ ಸಮುದಾಯದ ಕೆಲವರು ತಮ್ಮ ಮೂಲ ವೃತ್ತಿ ಬಿಟ್ಟು ಕೃಷಿಯಲ್ಲಿ ತೊಡಗಿದ್ದಾರೆ. ದೊಡ್ಡಿಗಳಲ್ಲಿ ಕೆಲವು ನೀರಾವರಿ ವ್ಯವಸ್ಥೆಯನ್ನು ಕೆಲವು ಕೊಳವಿ ಭಾವಿ ವ್ಯವಸ್ಥೆಯನ್ನು ಹೊಂದಿದ್ದಾರೆ. ಇನ್ನೂ ಕೆಲವು ದೊಡ್ಡಿಗಳು ಮಳೆಯಾಶ್ರಿತ ಪ್ರದೇಶಗಳಾಗಿವೆ. ಮಳೆ ಇಲ್ಲದಿದ್ದರೆ ಇಲ್ಲಿ ಬರಗಾಲ ತಪ್ಪಿದ್ದಲ್ಲ ಇಂಥ ಸಂಕಷ್ಟ ಸ್ಥಿತಿಯನ್ನು ಎದುರಿಸುವ ಸಮುದಾಯಗಳಲ್ಲಿ ಕಬ್ಬಲಿಗ ಸಮುದಾಯವೂ ಒಂದು. ಕಬ್ಬಲಿಗ ಸಮುದಾಯ ಕೃಷಿಯಿಂದ ಆರ್ಥಿಕವಾಗಿ ಸದೃಢವಾಗಿರುವುದು ಅಷ್ಟಕಷ್ಟೇ ಏಕೆಂದರೆ ಇವರಿಗೆ ಬೇಸಾಯಕ್ಕೆ ಯೋಗ್ಯವಾದ ಭೂಮಿಯ ಕೊರತೆಯಿದೆ. ಇನ್ನೂ ಕೆಲವು ಯುವಕರು ವ್ಯಾಪಾರ ವಹಿವಾಟಿನಲ್ಲಿ ತೊಡಗಿದ್ದಾರೆ. ಕೆಲವು ಕಾರ್ಮಿಕರಾಗಿ ದುಡಿಯುತ್ತಾರೆ. ಒಟ್ಟಿನಲ್ಲಿ ಎರಡೂ

ಸಮುದಾಯಗಳ ಆರ್ಥಿಕ ತುಲನೆಯಲ್ಲಿ ಕುರುಬ ಸಮುದಾಯ ತನ್ನಷ್ಟಕ್ಕೆ ಸದೃಢವಾಗಿ ಕಾಣುತ್ತದೆ. ಕಬ್ಬಲಿಗ ಸಮುದಾಯ ಈ ಸಮುದಾಯದಂತೆ ಆರ್ಥಿಕವಾಗಿ ಅಷ್ಟೇನು ಪ್ರಬಲವಾಗಿಲ್ಲ.

ಶೈಕ್ಷಣಿಕ ಹೋಲಿಕೆ ಮತ್ತು ವ್ಯತ್ಯಾಸಗಳು

ದೊಡ್ಡಿಗಳಲ್ಲಿ ಕುರುಬ ಮತ್ತು ಕಬ್ಬಲಿಗ ಸಮುದಾಯಗಳು ಸ್ವಾವ್ಯವಾಗಿ ಕಂಡುಬರುವುದು ಬಹಳ ವಿರಳ. ಈ ಮಾತು ಯಾಕೆಂದರೆ ಕುರುಬ ಸಮುದಾಯ ಸಾಮಾಜಾರ್ಥಿಕ ವ್ಯವಸ್ಥೆಯಲ್ಲಿ ಮೇಲಸ್ತರದಲ್ಲಿದ್ದರೆ, ಶೈಕ್ಷಣಿಕ ವಿಷಯ ಬಂದಾಗ ತನ್ನ ಮೆಲಿನ ಸ್ಥಾನದಿಂದ ಪಲ್ಲಟ್ಟಗೊಳ್ಳುತ್ತದೆ. ಕಬ್ಬಲಿಗಕ ಸಮುದಾಯದ ಹೋಲಿಕೆಯಲ್ಲಿ ಶೈಕ್ಷಣಿಕವಾಗಿ ಕುರುಬ ಸಮುದಾಯ ಕೆಳನೂಕಲ್ಪಡುತ್ತದೆ. ಇದಕ್ಕೆ ಹಲವಾರು ಕಾರಣಗಳುಂಟು. ಕಬ್ಬಲಿಗ ಸಮುದಾಯ ಸಾಮಾಜಾರ್ಥಿಕವಾಗಿ ತೀರ ಹಿಂದುಳಿದರೂ ಯಾವ ವೈರುದ್ಯಗಳಿಗೂ ಸಿಲುಕದೆ ಅದು ಸಮಾಜದ ಮುಖ್ಯವಾಹಿನಿಗೆ ಮರಳಲು ನಿರಂತರವಾಗಿ ಯತ್ನಿಸುತ್ತದೆ. ಈ ರೀತಿಯ ಪ್ರಯತ್ನದ ಮಾರ್ಗವನ್ನು ಶೈಕ್ಷಣಿಕ ವ್ಯವಸ್ಥೆಯಲ್ಲಿ ಹುಡಕಲಾಗಿದೆ. ಅಂದರೆ ತೀರಾ ಹಿಂದುಳಿದ ಕಬ್ಬಲಿಗ ಸಮುದಾಯ ಯಾವುದೇ ಕಟ್ಟುಪಾಡುಗಳಿಗೆ ಒಳಗಾಗದೆ ತನ್ನ ಇಂದಿನ ಪೀಳಿಗೆಗೆ ಶಿಕ್ಷಣ ದೊರಕಿಸಿಕೊಡುವಲ್ಲಿ ಶತಪ್ರಯತ್ನದಲ್ಲಿದೆ. ಈ ಕಾರಣದಿಂದ ಅವರಲ್ಲಿ ಸಾಮಾಜಿಕ ಸಾಂಸ್ಕೃತಿಕ ಬದುಕಿನ ಅರಿವಿದೆ. ಹೆಣ್ಣು-ಗಂಡೆಂಬ ಲಿಂಗ ತಾರತಮ್ಯವಿಲ್ಲದೆ ಕಲಿಕೆಗೆ ಮಹತ್ವ ನೀಡಿದ್ದಾರೆ. ಇದರಿಂದ ಸಮುದಾಯವು ಸರಿಕರೊಂದಿಗೆ ಸಮಾನವಾಗಿ ಗುರುತಿಸಿಕೊಳ್ಳುತ್ತಿದೆ. ಅಕ್ಷರದ ಅರಿವಿನಿಂದ ನವತಲೆಮಾರು ದೂರದೃಷ್ಟಿ ಹೊಂದಿದೆ. ಹೀಗಾಗಿ ಈ ಸಮುದಾಯಗಳಲ್ಲಿ ಕಂದಾಚಾರಗಳಿಗೆ ಮೌಢ್ಯತೆಗೆ ಅವಕಾಶ ಕಡಿಮೆ.

ಕುರುಬ ಸಮುದಾಯವು ದೊಡ್ಡಿಗಳಲ್ಲಿರುವ ಇನ್ನುಳಿದ ಸಮುದಾಯಗಳಿಗಿಂತ ಸಮಾಜಾರ್ಥಿಕವಾಗಿ ಮೇಲಿದೆ ಆದರೆ ಶೈಕ್ಷಣಿಕ ವಿಷಯಕ್ಕೆ ಬಂದಾಗ ಇದು ವ್ಯತಿರೀಕ್ತವಾಗಿ ಕಾಣುತ್ತದೆ. ಹುಟ್ಟುವ ಮಗು ನಾಲ್ಕೈದು ವರ್ಷ ಕಳೆದಿರುವಾಗಲೇ ಶಾಲೆಗೆ ಹೋಗಬೇಕಾದವನು ಮುಳ್ಳುಕಂಟಿಯ ಮಧ್ಯ ನಿಂತು ಕುರಿಮೇಯಿಸುತ್ತಾನೆ. ಚಿಕ್ಕಂದಿನಲ್ಲಿಯೇ ಮಕ್ಕಳನ್ನು ಕುಲವೃತ್ತಿಗೆ ತಳ್ಳುವ ಪರಿಪಾಠ ಕುರುಬ ಸಮುದಾಯದಲ್ಲಿದೆ. ಈ ವಿಚಿತ್ರಗಳು ದೊಡ್ಡಿಗಳಲ್ಲಿ ಎದ್ದು ಕಾಣುತ್ತವೆ. ಕೆಲವು ಕುಟುಂಬಗಳಲ್ಲಿ ಗಂಡು ಮಕ್ಕಳು ಶಾಲೆ ಕಂಡವರಿದ್ದಾರೆ. ಆದರೆ ಹೆಣ್ಣು ಮಕ್ಕಳು ಶಾಲೆಯ ಹೊಸ್ತಿಲಿಂದ ಹೊರಗುಳಿದಿದ್ದಾರೆ. ಈ ರೀತಿಯ ತಾರತಮ್ಯಕ್ಕೆ ಬಾಲ್ಯ ವಿವಾಹದಂತಹ ಅನಿಷ್ಟ ಪದ್ಧತಿ ಒಂದುಕಾರಣ ಹಾಗೆಯೇ ಮಕ್ಕಳು ಶಾಲೆ ಕಲೆತು ಉದ್ಯೋಗ ಗಿಟ್ಟಿಸಬೇಕು ಎಂಬ ಋಣಾತ್ಮಕ ಭಾವನೆ ಚಿಕ್ಕವರಿರುವಾಗಲೇ ಶ್ರಮ ಸಂಸ್ಕೃತಿಯ ಅರಿವು ಮೂಡಿಸುವುದು ಕುರುಬ ಸಮುದಾಯದಲ್ಲಿ ಕಂಡುಬರುತ್ತದೆ. ಈ ಎಲ್ಲಾ ಕಾರಣಗಳಿಂದ ಮಕ್ಕಳು ಶಾಲೆಯಿಂದ ದೂರ ಉಳಿಯುತ್ತವೆ. ಇದಕ್ಕೆ

ಪರಿಹಾರಗಳನ್ನು ಕಂಡುಕೊಳ್ಳಲು ಇರುವ ಮಾರ್ಗಗಳೆಂದರೆ ಸರ್ಕಾರ ಕೊಡಮಾಡಿದ ಶೈಕ್ಷಣಿಕ ಸವಲತ್ತುಗಳನ್ನು ಇವರ ಮನೆಬಾಗಿಲಿಗೆ ತರುವುದಾಗಿದೆ.

ರಾಜಕೀಯ ಹೋಲಿಕೆ ಮತ್ತು ವ್ಯತ್ಯಾಸಗಳು

ಸಿಂಧನೂರು, ದೇವದುರ್ಗ, ಮಾನವಿ, ಲಿಂಗಸೂಗೂರು, ರಾಯಚೂರು ತಾಲ್ಲೂಕುಗಳಲ್ಲಿ ದೊಡ್ಡಿಗಳಿವೆ. ಇಲ್ಲಿ ಪ್ರತಿಯೊಂದು ದೊಡ್ಡಿಯು ರಾಜಕೀಯ ಸೋಂಕನ್ನು ತಾಗಿಸಿಕೊಂಡಿದೆ. ರಾಜಕೀಯವಾಗಿ ಇಲ್ಲಿಯಾರೂ ಪ್ರಬಲರಲ್ಲ ಹಾಗಂತ ದುರ್ಬಲರೂ ಅಲ್ಲ. ದೊಡ್ಡಿಯ ಎಲ್ಲಾ ಸಮುದಾಯಗಳ ಜನರು ರಾಜಕೀಯ ವಿಚಾರವಂತಿಕೆಯನ್ನು ಪಡೆದವರಲ್ಲ. ಅಲ್ಲಿರುವ ಸಮುದಾಯದ ಕೆಲ ಮನೆ(ಗುಡಿಸಲು)ಗಳಲ್ಲಿ ರಾಜಕೀಯ ತಿಳುವಳಿಕೆ ಇದ್ದವರು ಇದ್ದಾರೆ. ಹಾಳೂರಿಗೆ ಒಬ್ಬನೆ ಗೌಡ ಅನ್ನುವಂತೆ ದೊಡ್ಡಿಯ ಒಬ್ಬಿಬ್ಬರು ರಾಜಕೀಯ ವ್ಯವಸ್ಥೆಯಲ್ಲಿ ಇರುವರು. ನಾವು ಶೋಧಿಸಿದ ದೊಡ್ಡಿಗಳಲ್ಲಿ ಬೇಡ ಮತ್ತು ಕುರುಬ ಸಮುದಾಯ ಅಧಿಕ ಸಂಖೆಯಲ್ಲಿದೆ. ಕಬ್ಬಲಿಗರು, ಇಲ್ಲಿ ಅಲ್ಪ ಸಂಖ್ಯಾತರು ದೊಡ್ಡಿಯ ಜನಸಂಖ್ಯೆ ಬೇಡ ಸಮುದಾಯದ್ದು, ಮೊದಲಸ್ಥಾನ ಎರಡನೆಯ ಸಾಲಿನಲ್ಲಿರುವವರು ಕುರುಬ ಸಮುದಾಯದವರು. ಕಬ್ಬಲಿಗರು ಮೂರನೆಯವರು ಕುರುಬ ಸಮುದಾಯದ ಜನರು ರಾಜಕೀಯವಾಗಿ ಮುಂದಿದ್ದಾರೆ. ಇವರಲ್ಲಿ ಕೆಲವರು ಗ್ರಾಮಪಂಚಾಯ್ತಿಯ ಸದಸ್ಯರು ಅಧ್ಯಕ್ಷರು ಆದವರಿದ್ದಾರೆ. ಆದರೆ ಈ ಸಮುದಾಯದ ಒಂದು ದೌರ್ಬಲ್ಯವೆಂದರೆ ರಾಜಕೀಯವಾಗಿ ಯಾವುದೇ ಸೌಲಭ್ಯ ಪಡೆಯದಿರುವುದು ಸರ್ಕಾರದ ಯೋಜನೆಗಳನ್ನು ಪಯೋಗಿಸಿಕೊಳ್ಳುವಲ್ಲಿ ಇವರು ವಿಫಲರಾಗಿದ್ದಾರೆ. ಇದಕ್ಕೆ ಕಾರಣವೆಂದರೆ ರಾಜಕೀಯ ಪರಿಜ್ಞಾನ ಇರದೇ ಇರುವುದು. ಸರ್ಕಾರದಿಂದ ತಮಗೆ ಬೇಕಾದ ಸೌವಲತ್ತುಗಳನ್ನು ಸರಿಯಾಗಿ ಬಳಸಿಕೊಳ್ಳಲು ಇವರಿಂದ ಸಾಧ್ಯವಾಗದೇ ಇರುವುದಕ್ಕೆ ಕಾರಣ ಸಾಕ್ಷರತೆಯ ಪ್ರಮಾಣ ಕಡಿಮೆ ಇರುವುದು. ಹಾಗೂ ಇವರು ತಮ್ಮ ಕಸಬುಗಳಲ್ಲಿ ಅಧಿಕ ಆಸಕ್ತಿ ಹೊಂದಿರುವುದು. ಪಡಿತರ ಪಡೆಯುವಲ್ಲಿಯೂ ಇವರು ಹಿಂದಿದ್ದಾರೆ. ಏಕೆಂದರೆ ಪಡಿತರ ಅಂಗಡಿ ದೊಡ್ಡಿಯಿಂದಾಚೆ ಇರುವುದು. ಕುರುಬ ಸಮುದಾಯ ತನ್ನ ಜನಸಂಖ್ಯೆಗೆ ಅನುಗುಣವಾಗಿ ಚನಾವಣಾ ರಾಜಕೀಯದಲ್ಲಿ ಸ್ಥಾನಗಿಟ್ಟಿಸಿಕೊಳ್ಳುತ್ತದೆ. ಆದರೆ ಅದರಿಂದ ಒದುಗುವ ಪ್ರಯೋಜನಗಳನ್ನು ಪಡೆಯಲು ಅದಕ್ಕೆ ಸಾಧ್ಯವಾಗಿಲ್ಲ. ಎಲ್ಲಾ ಪ್ರಯೋಜನಗಳ ಊರು ಕೇಂದ್ರಿತ ರಾಜಕೀಯವಾಗಿ ಬುದ್ಧಿವಂತರಾದ ಜನರ ಪಾಲಾಗುವುದು.

ಕುರುಬ ಸಮುದಾಯ ರಾಜಕೀಯದಲ್ಲಿ ಸ್ಥಾನ ಗಿಟ್ಟಿಸಿಕೊಳ್ಳುತ್ತದೆ. ಆದರೆ ಸರ್ಕಾರದ ಯೋಜನೆಗಳನ್ನು ಪಡೆಯಲಾರದು. ಇದರ ಪ್ರಯೋಜನ ಪಡೆದವರು ಕಬ್ಬಲಿಗ ಸಮುದಾಯದವರು. ಕಬ್ಬಲಿಗ ಸಮುದಾಯದವರು ಜನಸಂಖ್ಯೆಯಲ್ಲಿ ಕಡಿಮೆ ಇರುವುದರಿಂದ ಚುನಾವಣಾ ರಾಜಕೀಯದಲ್ಲಿ ಗೆದ್ದು ಬರಲಾರರು. ಆದರೂ ಮೀಸಲಾತಿಯಲ್ಲಿಸ್ಥಾನ ಗಿಟ್ಟಿಸಿಕೊಳ್ಳುತ್ತಾರೆ. ತಿಳುವಳಿಕೆಯುಳ್ಳ ಇವರು ಸರ್ಕಾರದ ಯೋಜನೆಗಳನ್ನು ಫಲಪ್ರದವಾಗಿ

ಬಳಸಿಕೊಳ್ಳುತ್ತಾರೆ. ಆಸರೆ ಯೋಜನೆ, ಗ್ರಾಮಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ ಜಿಲ್ಲಾ ಪಂಚಾಯ್ತಿಗಳಿಂದ ದಕ್ಕುವ ಕೆಲಸಗಳನ್ನು ಚಾಕಚಕ್ಯತೆಯಿಂದ ಬಳಸಿಕೊಳ್ಳುತ್ತಾರೆ. ಹೀಗಾಗಿ ಕುರುಬ ಸಮುದಾಯಕ್ಕಿಂತ ಇಲ್ಲಿ ಹೆಚ್ಚು ರಾಜಕೀಯ ಪ್ರಜ್ಞೆ ಉಳ್ಳವರು ಕಬ್ಬಲಿಗ ಸಮುದಾಯದವರು ಎಂದರೆ ತಪ್ಪಾಗಲಾರದು. ಇದು ಎರಡು ಸಮುದಾಯಗಳಲ್ಲಿನ ರಾಜಕೀಯ ತೌಲನಿಕ ವಿವೇಚನೆಯಾಗಿದೆ.

ಕಬ್ಬಲಿಗ ಮತ್ತು ಕುರುಬ ಸಮುದಾಯ ಸಾಮಾಜಾರ್ಥಿಕ, ಶೈಕ್ಷಣಿಕ, ರಜಕೀಯ ವಲಯದಲ್ಲಿ ಸ್ವಾಮ್ಯತೆ ಹೊಂದದೆ ಭಿನ್ನತೆಯನ್ನು ಹೆಚ್ಚಾಗಿ ಹೊಂದಿದೆ. ಎರಡು ಸಮುದಾಯಗಳು ಯಾವುದೇ ರೀತಿಯಿಂದ ಮುಖ್ಯವಾಹಿನಿಗೆ ಬರಲು ಹೆಣಗುತ್ತಿವೆ. ಈ ಸಮುದಾಯಗಳಿಗೆ ಅರಿವಿನ ಸಮಸ್ಯೆಯಿದೆ. ಇದನ್ನು ಕಲ್ಪಿಸಿಕೊಡಲು ವಿದ್ಯಾವಂತ ಯುವ ಜನತೆ ಮುಂದೆ ಬರಬೇಕಿದೆ. ಸಮಾಜದ ಸಹಭಾಗಿತ್ವವೂ ಅಷ್ಟೇ ಮುಖ್ಯವೆನಿಸುತ್ತದೆ.

ಅಡಿಟಿಪ್ಪಣಿಗಳು

೧. ಭರೇಗೌಡ ಎಂ, ೨೦೦೫, ಕಾಡುಬಿಡಲೊಲ್ಲದವರು, ಪು.ಸಂ. ೮೪

೨. ಅದೇ, ಪು.ಸಂ. ೨೩೩

೩. ಅದೇ, ಪು.ಸಂ. ೨೫೫

೪. ಮೀರಾಸಾಬಿಹಳ್ಳಿ ಶಿವಣ್ಣ, ೧೯೯೯, ಗೊಲ್ಲಕಡಗ, ಪು.ಸಂ. ೮೫

೫. ಅದೇ, ಪು.ಸಂ. ೯೩

೬. ಪಾರ್ವತಮ್ಮ ಸಿ, ೨೦೦೭, ಆದಿವಾಸಿ ಸಮುದಾಯ, ಪು.ಸಂ. ೫೮

೭. ಅದೇ, ಪು.ಸಂ. ೬೩

೮. ಅದೇ, ಪು.ಸಂ. ೭೧

ಅಧ್ಯಾಯ ಎಂಟು

ಸಮಾರೋಪ

೮.೧. ಅಧ್ಯಯನದ ಫಲಿತಗಳು

೮.೨. ಸಲಹೆಗಳು

ಅಧ್ಯಾಯ ಎಂಟು

ಸಮಾರೋಪ

ರಾಯಚೂರು ಜಿಲ್ಲೆಯ ಪ್ರಮುಖ ಸಮುದಾಯಗಳಲ್ಲಿ ಬೇಡ, ಕುರುಬ ಮತ್ತು ಕಬ್ಬಲಿಗ ಸಮುದಾಯಗಳು ಪ್ರಮುಖವಾದವುಗಳು. ಈ ಸಮುದಾಯಗಳು ಇಂದಿಗೂ ತಮ್ಮ ಅನನ್ಯತೆಯನ್ನು ಉಳಿಸಿಕೊಂಡಿವೆ. ಅವರ ಜೀವನ ವಿಧಾನವನ್ನು ಕುರಿತು ಅಧ್ಯಯನ ಮಾಡಿದಾಗ ಈ ಅಂಶ ಸ್ಪಷ್ಟವಾಗುತ್ತದೆ. ಪ್ರಾಚೀನ ಕಾಲದಿಂದ ಇಂದಿನವರೆಗೂ ದಟ್ಟವಾದ ಕುರುಚಲ ಗುಡ್ಡಗಾಡು ಪ್ರದೇಶದಲ್ಲಿ ಈ ಸಮುದಾಯಗಳು ತಮ್ಮದೇ ಆದ ಪ್ರತ್ಯೇಕವಾದ ನೆಲೆಗಳನ್ನು ಕಟ್ಟಿಕೊಂಡು ನೆಲೆಸಿರುವುದು ಕಂಡುಬರುತ್ತದೆ. ಆದರೆ ಆಧುನಿಕತೆಯ ಪರಿಣಾಮದಿಂದಾಗಿ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುವ ಪರಿಸ್ಥಿತಿಗೆ ಇಂತಹ ನೆಲೆಯಲ್ಲಿ ವಾಸಿಸುತ್ತಿರುವ ಸಮುದಾಯಗಳು ಬಂದು ನಿಂತಿರುವುದು ಶೋಚನೀಯ. ಯಾವುದೇ ಮೂಲಭೂತ ಸೌಲಭ್ಯವಿಲ್ಲದೇ ಸರ್ಕಾರದ ಅರಿವಿಗೆ ಬಾರದೆ ಅಥವಾ ಅರಿವಿಗೆ ಬಂದರು ಸೌಲಭ್ಯಗಳನ್ನು ಹಂಚುವುದರಲ್ಲಿ ಆ ತಾರತಮ್ಯದಿಂದ ಅತಂತ್ರ ಸ್ಥಿತಿಗೆ ಬಂದು ನಿಂತಿವೆ. ಬೇಡ, ಕುರುಬ ಮತ್ತು ಕಬ್ಬಲಿಗ ಸಮುದಾಯಗಳ ಪ್ರತ್ಯೇಕವಾದ ನೆಲೆಗಳನ್ನು ಅಧ್ಯಯನ ಮಾಡಿ ಗಮನಿಸಿದಾಗ ಸಮುದಾಯಗಳ ಸಮಸ್ಯೆಗಳು ಹೆಚ್ಚು ಕಡಿಮೆ ಏಕರೂಪದಲ್ಲಿ ಕಂಡುಬಂದರೂ ಆಂತರಿಕವಾದ ವೈರುಧ್ಯಗಳನ್ನು ಗಮನಿಸಬಹುದಾಗಿದೆ. ಈ ಸಮುದಾಯಗಳು ತಾವು ನೆಲೆಸಿರುವ ದೊಡ್ಡಿಗಳ ವ್ಯವಸ್ಥೆಯೊಂದಿಗೆ ಹಲವು ಬಗೆಯ ವೈರುಧ್ಯಗಳನ್ನು ಎದುರಿಸುತ್ತಿದ್ದರೂ ಸಾಮುದಾಯಿಕ ಜೀವನದಲ್ಲಿ ಹಾಗೂ ಇತರೆ ಸಮುದಾಯಗಳೊಂದಿಗೆ ಅನನ್ಯ ಜೀವನ ನಡೆಸುತ್ತಿವೆ. ಹಾಗೆಂದ ಮಾತ್ರಕ್ಕೆ ಇವರಿಗೆ ಸಮಸ್ಯೆಗಳು ಕಾಡುತ್ತಿಲ್ಲವೆಂದರ್ಥವಲ್ಲ ಎಂಬುದು ಮುಖ್ಯ ಸಂಗತಿಯಾಗಿದೆ.

ರಾಯಚೂರು ಜಿಲ್ಲೆ ಮಾನ್ವಿ, ಸಿಂಧನೂರು ತಾಲೂಕುಗಳ ನೆಲೆಗಳನ್ನು ಗಮನಿಸಿದಾಗ ದೇವದುರ್ಗ, ಲಿಂಗಸ್ಗೂರು ಸಮುದಾಯಗಳ ನೆಲೆಗಳ ಪರಿಸ್ಥಿತಿ ಶೋಚನೀಯವಾಗಿದೆ. ಅದರಲ್ಲೂ ದೇವದುರ್ಗ ತಾಲೂಕಿನಲ್ಲಿ ಕಂಡುಬರುವ ಕೆಲವು ದೊಡ್ಡಿಗಳ ಪರಿಸ್ಥಿತಿ ತುಂಬಾ ಗಂಭೀರ ಸ್ವರೂಪದ ಸಮಸ್ಯೆಗಳನ್ನು ಎದುರಿಸುತ್ತಿವೆ. ರಾಯಚೂರು ಜಿಲ್ಲೆಯಲ್ಲಿ

ಬೇಡ ಸಮುದಾಯ ಹೆಚ್ಚಾಗಿ ಕಂಡುಬರುವ ಪ್ರಮುಖ ಬುಡಕಟ್ಟು ಸಮುದಾಯವಾಗಿದೆ. ಈ ಸಮುದಾಯವು ಕುರುಬ, ಕಬ್ಬಲಿಗ ಸಮುದಾಯಗಳಿಗಿಂತ ಭಿನ್ನವಾಗಿ ಕಾಣುತ್ತವೆ. ಬೇಡ ಸಮುದಾಯದ ನೆಲೆಗಳು ಪ್ರಾಚೀನ ಕಾಲದಿಂದಲೂ ಪ್ರತ್ಯೇಕವಾಗಿರುವುದರ ಜೊತೆಗೆ ತಮ್ಮದೇ ಆದ ಭಾಷೆ ಸಂಸ್ಕೃತಿ ಹೊಂದಿದೆ. ಆದ್ದರಿಂದ ಇವರನ್ನು ಮತ್ತಷ್ಟು ಅಧ್ಯಯನ ಮಾಡಲು ಸಹಾಯಕವಾಗಿದೆ. ಬೇಡ, ಕುರುಬ ಮತ್ತು ಕಬ್ಬಲಿಗ ಸಮುದಾಯಗಳು ತಮ್ಮ ದೊಡ್ಡಿಗಳಿಗೆ ಪ್ರಾಥಮಿಕ ಮೂಲಭೂತ ಅವಶ್ಯಕತೆಗಳಿಗಾಗಿ ಇಂದಿಗೂ ಉತ್ತಮ ಜೀವನ ನಿರ್ವಹಣೆಗಾಗಿ ಹೋರಾಟ ಮಾಡುತ್ತಿರುವ ಸನ್ನಿವೇಶ ಸೃಷ್ಟಿಯಾಗಿರುವುದನ್ನು ನಾವುಗಳು ಗಮನಿಸಬಹುದು. ಹಾಗೆಯೇ ದೊಡ್ಡಿಗಳಲ್ಲಿ ವಾಸಿಸುವ ಮೂರು ಸಮುದಾಯಗಳಿಗೆ ವಾಸ್ತವಿಕ ಬದುಕಿನ ಸಮಸ್ಯೆ ಮತ್ತು ಸವಾಲುಗಳಿಗೆ ಒಗ್ಗಿಕೊಳ್ಳುವಂತೆ ಮತ್ತು ಭವಿಷ್ಯದ ಬದುಕನ್ನು ರೂಪಿಸಿಕೊಳ್ಳುವ ಶಕ್ತಿ ಸಾಮರ್ಥ್ಯದ ಕೊರತೆ ಕಾಡುತ್ತಿದೆ. ಅಧ್ಯಯನದಲ್ಲಿ ತಿಳಿಸಿರುವಂತೆ ದೊಡ್ಡಿಗಳು ಒಂದೇ ರೀತಿಯಾಗಿ ಕಂಡುಬಂದರು ಸಮುದಾಯದ ಜೀವನ ಮಟ್ಟದ ಸೌಲಭ್ಯ, ಆರ್ಥಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ತುಂಬಾ ವೈರುಧ್ಯ ಕಂಡುಬರುತ್ತವೆ. ದೊಡ್ಡಿಗಳಲ್ಲಿಯೇ ಸ್ವಚ್ಛಂದ ಬದುಕು ಮತ್ತು ಕುರಿಸಾಕಾಣಿಕೆ, ಕೃಷಿ ಚಟುವಟಿಕೆ, ಹೈನುಗಾರಿಕೆ, ಮೀನುಗಾರಿಕೆ ಮುಂತಾದ ಉದ್ಯೋಗ ಮಾಡುತ್ತಿರುವ ಯಾವುದೇ ಸಮುದಾಯದ ಮನೆಗಳನ್ನು ಅವಲೋಕನ ಮಾಡಿದಾಗ ತುಂಬಾ ಸದೃಢವಾದ ನೆಮ್ಮದಿ ಜೀವನ ನಡೆಸುತ್ತಿದ್ದಾರೆ. ಅದೇ ದೊಡ್ಡಿಗಳಲ್ಲಿ ವಾಸಿಸುವ ಯಾವುದೇ ಆಸ್ತಿ ಇಲ್ಲದೇ ಪ್ರಾಣಿ ಸಾಕಾಣಿಕೆ ಅಲ್ಪಸ್ವಲ್ಪ ಇದ್ದವರೂ ಅತಂತ್ರ ಸ್ಥಿತಿಗೆ ಬಂದು ನಿಂತಿರುವುದು ಕಂಡುಬರುತ್ತದೆ. ಪ್ರತ್ಯೇಕವಾದ ನೆಲೆಗಳಲ್ಲಿ ವಾಸಿಸುವ ಸಮುದಾಯಗಳನ್ನು ಅಧ್ಯಯನ ಮಾಡಿದಾಗ ಕುಲಕಸುಬು ಜೊತೆಗೆ ಬೇರೆ ಬೇರೆ ಉದ್ಯೋಗ ಮಾಡುವವರು ಆರ್ಥಿಕವಾಗಿ ಸಬಲವಾಗಿದ್ದಾರೆ. ಯಾವುದೇ ಕುಲಕಸುಬು ಇಲ್ಲದೆ ಆಸ್ತಿ, ಇಲ್ಲವೇ ಅಲ್ಪಸ್ವಲ್ಪ ಒಣ ಬೇಸಾಯ ನಂಬಿಕೊಂಡು ಸಾಲದಲ್ಲಿ ಹುಟ್ಟಿ ಸಾಲದಲ್ಲಿ ಸಾಯುತ್ತಿರುವ ಅನೇಕ ದೊಡ್ಡಿಗಳ ನಿವಾಸಿಗರ ನೈಜ ದರ್ಶನ ಕಣ್ಣಿಗೆ ಕಾಣುತ್ತದೆ. ಇವು ಯಾವುವು ಬೇಡ ಎಂದವರು ರಾಜ್ಯದ ರಾಜಧಾನಿ ಬೆಂಗಳೂರಿಗೆ ಕೆಲಸವನ್ನು ಹರಸಿ ವಲಸೆ ಹೋಗುವುದು ಇಲ್ಲಿನವರ ವಾಸ್ತವ ಸ್ಥಿತಿ ಸಹಜವಾಗಿ ಕಾಣುತ್ತದೆ. ವಲಸೆ ಹೋದ ಮಾತ್ರಕ್ಕೆ ಇವರಿಗೆ ಯಾವುದೇ ದೊಡ್ಡ ಕೆಲಸ ಕೊಡುವುದಿಲ್ಲ. ಇವರ ಪ್ರತಿಭೆ ತಕ್ಕಂತೆ ಕೆಲಸ, ವಿದ್ಯೆ ಇಲ್ಲದಿದ್ದರೆ ನೈವೇದ್ಯ ಎನ್ನುವಂತೆ ಕೂಲಿ ಕೆಲಸ ಮಾತ್ರ ಸಮಾದಾನಕರ ಬಹುಮಾನದಂತೆ ಸಿಗುತ್ತದೆ.

ದೊಡ್ಡಿಗಳನ್ನು ಕಾಡುತ್ತಿರುವ ಜಲ್ವಂತ ಸಮಸ್ಯೆ ಎಂದರೆ ವಲಸೆ ಹೋಗುವುದರ ಜೊತೆಗೆ ಆಗಾಗ ಬರಗಾಲ ಇವರನ್ನು ಕಾಡುತ್ತದೆ. ಇದರಿಂದ ಇಂತಹ ಗಂಭೀರ ಸ್ವರೂಪದ ಸಮಸ್ಯೆಗಳನ್ನು ಗಮನದಲ್ಲಿ ಇಟ್ಟುಕೊಂಡು ಸರ್ಕಾರ ಹಣವನ್ನು ಬಿಡುಗಡೆ ಮಾಡಿದರೆ ಕೆಲವು ರಾಜಕೀಯ ಹಿಂಬಾಲಕರು ತಮ್ಮ ಸ್ವಾರ್ಥಕ್ಕಾಗಿ ದೊಡ್ಡಿಗಳ ಹಾಗೂ

ಗ್ರಾಮೀಣ ಪ್ರದೇಶಕ್ಕೆ ಇರುವ ಅನುದಾನವನ್ನು ಸ್ವಾರ್ಥಕ್ಕಾಗಿ ಬಳಸಿಕೊಳ್ಳುತ್ತಿರುವುದು ಕಂಡುಬರುತ್ತಿದೆ. ಅದೇ ರೀತಿ ದೊಡ್ಡಿಗಳಲ್ಲಿ ವಾಸಿಸುವ ಸಮುದಾಯಗಳ ಅಭಿವೃದ್ಧಿ ಹೆಸರಿನಲ್ಲಿ ಸಿದ್ದಗೊಳ್ಳುತ್ತಿರುವ ಯೋಜನೆಗಳನ್ನು ಯಾವ ವರ್ಗದ ಜನರು ರೂಪಿಸುತ್ತಿದ್ದಾರೆ. ಎಂಬುದನ್ನು ಗಮನಿಸಬೇಕಾಗಿದೆ. ಏಕೆಂದರೆ ಇದರ ಹಿಂದೆ ಅಧಿಕಾರಶಾಹಿ ಶಕ್ತಿಗಳು ಹಾಗೂ ಉಳ್ಳವರು ಪ್ರಭಾವ ಬೀರುವುದನ್ನು ಪರೋಕ್ಷವಾಗಿ ಕಾಣಬಹುದು. ಹಾಗೆಯೇ ಅವುಗಳು ಕಾರ್ಯರೂಪಕ್ಕೆ ತರುವವರ ಕಾರ್ಯದ ಬಗ್ಗೆ ಗಮನಹರಿಸಬೇಕಾಗಿದೆ. ಯಾವುದೇ ಕ್ಯಾಂಪ್‌ಗಳಿಗೆ ಹೋದರೆ ಸರಿಯಾದ ರಸ್ತೆ, ವಿದ್ಯುತ್, ಕುಡಿಯುವ ನೀರು ಮುಂತಾದ ಎಲ್ಲಾ ಸೌಲಭ್ಯಗಳ ಕೊರತೆ ಕಾಣುತ್ತದೆ. ಹಳ್ಳಿ ಬಿಟ್ಟು ಎರಡು ಮೂರು ಮೈಲು ದೂರದಲ್ಲಿ ರಸ್ತೆಗೆ ಹೊಂದಿಕೊಂಡಿರುವ ಕ್ಯಾಂಪ್‌ಗಳ ಸ್ಥಿತಿ ಈ ರೀತಿಯಾಗಿದೆ. ಆದರೆ ಶತಮಾನಗಳಲ್ಲಿ ಹಳ್ಳಿಗಳು ಬಿಟ್ಟು ಪ್ರತ್ಯೇಕವಾದ ದೊಡ್ಡಿಗಳಲ್ಲಿ ನೆಲೆಸಿರುವ ನಿವಾಸಿಗಳಿಗೆ ಇಂತಹ ಸೌಲಭ್ಯ ಇಲ್ಲವೆಂದು ಹೇಳಿದರೆ ತಪ್ಪಾಗಲಾರದು. ಒಟ್ಟಾರೆಯಾಗಿ ಹೇಳುವುದಾದರೆ ದೊಡ್ಡಿಗಳ ಬಗ್ಗೆ ಅಧ್ಯಯನ ನಡೆದಿರುವುದು ಅಲ್ಪ ಸ್ವಲ್ಪ. ಅದು ದಿನ ಪತ್ರಿಕೆಯಲ್ಲಿ ವರದಿಯಾಗಿರುವ ಲೇಖನಗಳನ್ನು ಬಿಟ್ಟರೆ ಯಾವುದೇ ಅಧ್ಯಯನ ಆಗಿರುವುದಿಲ್ಲ. ದೊಡ್ಡಿಗಳಲ್ಲಿ ನೆಲೆಸಿರುವ ಸಮುದಾಯಗಳು ಅತ್ಯಂತ ಬಡ ಕುಟುಂಬಗಳಾಗಿರುವುದು ಕಂಡುಬರುತ್ತದೆ. ಸರ್ಕಾರದ ಯಾವುದೇ ಮೂಲಭೂತ ಅವಶ್ಯಕ ಸೌಲಭ್ಯಗಳಿಲ್ಲದೇ ಆಧುನಿಕ ಕಾಲದಲ್ಲಿ ಪ್ರಾಚೀನ ಕಾಲದ ಜೀವನ ನಡೆಸುತ್ತಿರುವುದು ತಿಳಿದುಬರುತ್ತದೆ.

ಕರ್ನಾಟಕದಲ್ಲಿ ಪ್ರತ್ಯೇಕವಾಗಿ ನೆಲೆಸಿರುವ ವಿವಿಧ ಸಮುದಾಯಗಳ ವಾಸಸ್ಥಾನಕ್ಕೆ ಹೋಲಿಸಿದರೆ ರಾಯಚೂರು ಜಿಲ್ಲೆಯ ದೊಡ್ಡಿಗಳ ಸ್ಥಿತಿ ತುಂಬಾ ಗಂಭೀರ ಸ್ವರೂಪದ ಸಮಸ್ಯೆಗಳ ಕೊಂಪೆ ಎಂದು ಅಧ್ಯಯನ ಮುಖಾಂತರ ಅರಿತುಕೊಳ್ಳಲಾಗಿದೆ. ಅದೇ ರೀತಿ ರಾಯಚೂರು, ಜಿಲ್ಲೆಯಲ್ಲಿ ಕುರುಬ, ಕಬ್ಬಲಿಗ ಸಮುದಾಯದ ದೊಡ್ಡಿಗಳಿಗೆ ಬೇಡ ಸಮುದಾಯದವರನ್ನು ಹೋಲಿಕೆ ಮಾಡಿದರೆ ನಿಕೃಷ್ಟ ಜೀವನ ಮಟ್ಟ ಹಂದಿ ಗೂಡಿನಂತಿರುವ ಗುಡಿಸಲು ಸಹಜವಾಗಿ ಅಧ್ಯಯನಕ್ಕೆ ಹೋದಾಗ ಕಂಡುಬಂದಿವೆ.

* ಕೌಟುಂಬಿಕ ಮಟ್ಟದಲ್ಲಿ ಮಹಿಳೆ ಮತ್ತು ಪುರುಷ ಇಬ್ಬರೂ ಸರಿಸಮಾನರು ಮತ್ತು ಸ್ವತಂತ್ರರು.
* ನಾನು ಎಂಬ ಪ್ರವೃತ್ತಿಗಿಂತ ನಾವು, ನಮ್ಮದು ಎಂಬ ವಿಶಾಲ ಮನೋಭಾವ ಇವರಲ್ಲಿ ಕಂಡುಬರುವ ಪ್ರಮುಖ ಅಂಶವಾಗಿದೆ.
* ಬೇಡ ಸಮುದಾಯ ಕಂದೆಲಗು ಅಥವಾ ಗದ್ವಾಲ್ ತೆಲುಗು ಮಾತುನಾಡಿದರೆ ಹೆಚ್ಚು ಈ ನೆಲೆಯಲ್ಲಿ ಉಳಿದವರು ಹೆಚ್ಚು ಸಂಖ್ಯೆಯಲ್ಲಿ ಕನ್ನಡ ಮಾತನಾಡುತ್ತಾರೆ.

* ಕುರುಬ, ಕಬ್ಬಲಿಗ ಸಮುದಾಯದವರು ಕನ್ನಡ ಬಿಟ್ಟು ಬೇರೆ ಭಾಷೆ ಮಾತಾಡುವುದಿಲ್ಲ.
* ಈ ಮೂರು ಸಮುದಾಯಗಳ ಆಹಾರ ಜೋಳದ ರೊಟ್ಟಿ, ಸಜ್ಜೆ ರೊಟ್ಟಿ, ನವಣೆ ಅನ್ನ ಹಾಗೂ ಅನ್ನ ಸಾರು ಆಹಾರ ಇಂದಿಗೂ ರೂಢಿಯಲ್ಲಿದೆ.
* ಜೀವನ ನಿರ್ವಹಣೆಗಾಗಿ ೫–೬ ತಿಂಗಳು ಬೆಂಗಳೂರಿಗೆ ವಲಸೆ ಹೋಗುವುದು ಹೆಚ್ಚಿನ ಸಂಖ್ಯೆ ಬೇಡ ಸಮುದಾಯದಲ್ಲಿ ಕಂಡುಬಂದರೆ ಅಲ್ಪಸ್ವಲ್ಪ ಕುರುಬ ಕಬ್ಬಲಿಗರು ಕಂಡುಬರುತ್ತಾರೆ.
* ಪ್ರತಿಯೊಂದು ದೊಡ್ಡಿಯಲ್ಲಿ ಹಿರಿಯರು ಎಂಬ ನೀತಿಯಿಂದ ಯಾವುದೇ ಗುಂಪುಗಾರಿಕೆ ಕಂಡುಬರುವುದಿಲ್ಲ.
* ಕೆಲವು ದೊಡ್ಡಿಗಳಲ್ಲಿ ಬೇಡ, ಕುರುಬ ಸಮುದಾಯಗಳು ಒಟ್ಟಿಗೆ ಇದ್ದರೆ ಎರಡು ಸಮುದಾಯದ ಹಿರಿಯರ ಮಾತು ಒಂದೇ ಆಗಿರುತ್ತವೆ.
* ದೊಡ್ಡಿಗಳಲ್ಲಿ ಆರೋಗ್ಯ, ಶಿಕ್ಷಣ, ವಸತಿ, ಕುಡಿಯುವ ನೀರಿನಂತಹ ಮೂಲಭೂತ ಸಮಸ್ಯೆಗಳಿಗೆ ಪರಿಹಾರ ದೊರೆತಿಲ್ಲ.
* ಕೆಲವು ದೊಡ್ಡಿಗಳಲ್ಲಿ ಶಾಲೆ ಇದ್ದರೆ ಶಿಕ್ಷಕರು ಇರುವುದಿಲ್ಲ. ಕೆಲವು ದೊಡ್ಡಿಗಳಲ್ಲಿ ಶಾಲೆ ಮತ್ತು ಶಿಕ್ಷಕರು ಇದ್ದರೂ ಸಂಪರ್ಕ ಕೊರತೆಯಿಂದ ಸಮಯಕ್ಕೆ ಬರಲು ಆಗುತ್ತಿಲ್ಲ.

೮.೧ ಅಧ್ಯಯನದ ಫಲಿತಗಳು

೧. ಆಶ್ರಮ ಶಾಲೆಗಳ ಕೊರತೆ ಇರುವುದು ಅಧ್ಯಯನ ಮುಖಾಂತರ ತಿಳಿದುಬಂದಿದೆ.

೨. ದೊಡ್ಡಿಗಳಲ್ಲಿ ಸರ್ಕಾರದ ಯೋಜನೆಗಳು ಪ್ರಭಾವಿತರ ಪಾಲಾಗಿವೆ.

೩. ಬಹುತೇಕ ದೊಡ್ಡಿಗಳು ಚಿಕ್ಕ ಚಿಕ್ಕ ಹುಲ್ಲಿನ ಗುಡಿಸಲುಗಳೇ ಅಧಿಕ ಸಂಖ್ಯೆಗಳಲ್ಲಿ ಇರುವುದು ಕಂಡುಬರುತ್ತದೆ.

೪. ಆರ್ಥಿಕ ತೊಂದರೆಯಿಂದ ದೊಡ್ಡಿಗಳಲ್ಲಿ ನೆಲಸಿರುವವರು ವಲಸೆ ಹೋಗುವುದನ್ನು ಅಧ್ಯಯನ ಮುಖಾಂತರ ಕಂಡುಕೊಳ್ಳಲಾಗಿದೆ.

೫. ದೊಡ್ಡಿಗಳಲ್ಲಿ ಬೇಸಿಗೆ ಸಂದರ್ಭದಲ್ಲಿ ನೀರಿನ ಸಮಸ್ಯೆ ಗಂಭೀರ ಸ್ವರೂಪ ಪಡೆದುಕೊಳ್ಳುತ್ತದೆ.

೬. ನ್ಯಾಯಬೆಲೆ ಅಂಗಡಿಗಳಲ್ಲಿ ಆಹಾರ ವಿತರಣೆ ತಾರತಮ್ಯ ಕಂಡುಬರುತ್ತದೆ.

೭. ದೊಡ್ಡಿಗಳಲ್ಲಿ ಅನಕ್ಷರಸ್ಥರ ಸಂಖ್ಯೆ ಹೆಚ್ಚಾಗಿ ಇರುವುದು ಅಧ್ಯಯನದಿಂದ ತಿಳಿದುಕೊಳ್ಳಲಾಗಿದೆ.

೮. ವಿದ್ಯುತ್ ಕೊರತೆ ಎದ್ದು ಕಾಣುತ್ತದೆ.

೯. ಕೆಲವು ದೊಡ್ಡಿಗಳಲ್ಲಿ ಶಾಲೆ ಇದ್ದರೂ ಶಿಕ್ಷಕರ ಕೊರತೆ ಇರುವುದು ಇಲ್ಲಿನ ಮಕ್ಕಳ ಶಿಕ್ಷಣ ಕುಂಠಿತವಾಗಲು ಕಾರಣವಾಗಿದೆ ಎಂಬುದು ಅಧ್ಯಯನದ ಮುಖಾಂತರ ಮನವರಿಕೆಯಾಗಿದೆ.

೧೦. ದೊಡ್ಡಿಗಳಲ್ಲಿ ವಾಸಿಸುವ ಕಬ್ಬಲಿಗ ಸಮುದಾಯದವರು ಕುಲ ಕಸುಬು ಕೃಷಿ ಚಟುವಟಿಕೆ ಮಾಡುವುದರಿಂದ ಆರ್ಥಿಕವಾಗಿ ಉತ್ತಮ ಸ್ಥಿತಿಗೆ ಬರುತ್ತಿದ್ದಾರೆ.

೧೧. ಬ್ಯಾಂಕ್ ಮುಖಾಂತರ ಸಾಲ ಸೌಲಭ್ಯ ಪಡೆದುಕೊಂಡಿದ್ದು ತೀರ ಕಡಿಮೆ ಪ್ರಮಾಣದಲ್ಲಿ ಕಂಡುಬರುತ್ತದೆ.

೧೨. ದೊಡ್ಡಿಗಳಲ್ಲಿ ನೆಲೆಸಿರುವ ಕುರುಬ ಸಮುದಾಯದವರು ಕುಲ ಕಸುಬು ಒಕ್ಕಲುತನ ಮಾಡುವುದರಿಂದ ಆರ್ಥಿಕವಾಗಿ ಸದೃಢವಾದ ಬದುಕು ಸಾಗಿಸುತ್ತಿದ್ದಾರೆ.

೧೩. ದೊಡ್ಡಿಗಳಲ್ಲಿ ಮೂಲದಿಂದಲೂ ನೆಲೆಸಿರುವ ಬೇಡ ಸಮುದಾಯದವರು ಯಾವುದೇ ಕುಲ ಕಸುಬು ಇಲ್ಲ. ಅತಿ ಕಡಿಮೆ ಭೂಮಿ ಹೊಂದಿದ್ದು ಒಕ್ಕಲುತನ ಅಲ್ಪಸ್ವಲ್ಪ ಮೇಕೆ ಸಾಕಿಕೊಂಡು ಅತ್ಯಂತ ನಿಕೃಷ್ಟವಾದ ಜೀವನ ನಡೆಸುತ್ತಿದ್ದಾರೆ.

೧೪. ರೇಷನ್‌ಕಾರ್ಡ್ ವಿತರಣೆಯಲ್ಲಿ ತಾರತಮ್ಯ ಕಂಡುಬರುತ್ತದೆ.

೧೫. ಆರ್ಥಿಕ ತೊಂದರೆಯಿಂದ ಬೇಡ ಸಮುದಾಯದ ದೊಡ್ಡಿಗಳಲ್ಲಿ ವಲಸೆ ಪ್ರಮಾಣ ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುತ್ತದೆ.

೧೬. ಸರ್ಕಾರದ ಅಭಿವೃದ್ಧಿ ಯೋಜನೆಗಳು ಹಳ್ಳಿಗಳಿಗೆ ಸರಿಯಾಗಿ ತಲುಪುತ್ತಿಲ್ಲ. ಇನ್ನೂ ದೊಡ್ಡಿಗಳಿಗೆ ಸರಿಯಾದ ರೀತಿಯಲ್ಲಿ ತಲುಪುವ ಮಾತು ದೂರ.

೧೭. ಆರ್ಥಿಕ ಅನುಕೂಲ ಪರ್ಯಾಯ ಉದ್ಯೋಗ ಇರುವ ದೊಡ್ಡಿಗಳಲ್ಲಿ ಅಲ್ಪ ಪ್ರಮಾಣದಲ್ಲಿ ವಲಸೆ ಕಾಣಬಹುದು.

೧೮. ಆರ್ಥಿಕ ಭದ್ರತೆಯಿಂದ ಕುರುಬ ಸಮುದಾಯದ ದೊಡ್ಡಿಗಳಲ್ಲಿ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಿದ್ದಾರೆ.

೧೯. ಆರ್ಥಿಕವಾಗಿ ಅಲ್ಪ ಸ್ವಲ್ಪ ಸುಭದ್ರವಾಗಿ ಕಂಡುಬರುವ ಕಬ್ಬಲಿಗ ಸಮುದಾಯದವರು ಅವರ ಮಕ್ಕಳಿಗೆ ಶಿಕ್ಷಣ ಕೊಡಿಸುತ್ತಿರುವುದು ಅಧ್ಯಯನ ಸಂದರ್ಭದಲ್ಲಿ ಕಂಡುಬಂದಿದೆ.

೨೦. ಬೇಡ ಸಮುದಾಯದ ಆರ್ಥಿಕ ಸ್ಥಿತಿ ಅತ್ಯಂತ ನಿಕೃಷ್ಟವಾಗಿರುವುದರಿಂದ ಆ ಸಮುದಾಯದ ಮಕ್ಕಳು ದುಡಿದು ಬದುಕು ಸಾಗಿಸುತ್ತಿದ್ದಾರೆ. ಹೀಗಾಗಿ ಇವರ ಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆಂಬುದು ಅಧ್ಯಯನದಿಂದ ಕಂಡುಬಂದಿದೆ.

೨೧. ಸೌಲಭ್ಯಗಳ ಕುರಿತಾಗಿ ಮಾಹಿತಿಯ ಕೊರತೆ ಇರುವುದು ತಿಳಿದುಬರುತ್ತದೆ.

೮೨. ಸಲಹೆಗಳು

೧. ದೊಡ್ಡಿಗಳಲ್ಲಿ ವಾಸಿಸುವ ಸಮುದಾಯಗಳಿಗೆ ಸರ್ಕಾರದ ವತಿಯಿಂದ ಆಶ್ರಯ ಮನೆಗಳನ್ನು ಕಲ್ಪಿಸುವುದು.

೨. ದೊಡ್ಡಿಗಳಿಗೆ ನಾಗರೀಕ ಸೌಲಭ್ಯ ಕಲ್ಪಿಸಬೇಕು.

೩. ಉಚಿತ ಆರೋಗ್ಯ ಸೌಲಭ್ಯವನ್ನು ಕಲ್ಪಿಸಬೇಕು.

೪. ಈ ನೆಲೆಗಳಿಗೆ ಮೂಲಭೂತ ಸೌಲಭ್ಯಗಳ ಒದಗಿಸಬೇಕು.

೫. ಸ್ಥಳೀಯ ಸರ್ಕಾರದ ಯೋಜನೆಗಳಲ್ಲಿ ಒಂದಾದ ಉದ್ಯೋಗ ಖಾತ್ರಿಯೋಜನೆಯನ್ನು ದೊಡ್ಡಿಗಳಲ್ಲಿ ಅನುಷ್ಠಾನಗೊಳಿಸಬೇಕು.

೬. ಪ್ರತಿಯೊಂದು ದೊಡ್ಡಿಗಳಿಗೆ ಅಂಗನವಾಡಿ ಕೇಂದ್ರಗಳನ್ನು ಪ್ರಾರಂಭಿಸಬೇಕು.

೭. ದೊಡ್ಡಿಗಳ ಅಭಿವೃದ್ಧಿ ಮಂಡಳಿ ರಚನೆ ಮಾಡಬೇಕು.

೮. ಸರ್ಕಾರದ ವತಿಯಿಂದ ಇಂತಹ ನೆಲೆಗಳಲ್ಲಿ ಇರುವ ಜನರಿಗಾಗಿ ಜಾಗೃತಿ ಕಾರ್ಯಕ್ರಮ ಸರ್ಕಾರದ ವತಿಯಿಂದ ಆಯೋಜಿಸಬೇಕು.

೯. ಕೇಂದ್ರ ಸರ್ಕಾರದ ಯೋಜನೆಗಳಲ್ಲಿ ಒಂದಾದ ಗ್ರಾಮವನ್ನು ದತ್ತಕ್ಕೆ ತೆಗೆದುಕೊಳ್ಳುವ ಮಾದರಿಯಲ್ಲಿ ದೊಡ್ಡಿಗಳನ್ನು ಆಯ್ಕೆ ಮಾಡಿಕೊಳ್ಳಬೇಕು.

೧೦. ಸರ್ಕಾರಿ ದಾಖಲೆಗಳು ಒದಗಿಸಬೇಕು ಇಂದಿನ ನಾಗರೀಕ ಸಮಾಜದಲ್ಲಿ ಬದುಕಲು ಪ್ರಮುಖವಾಗಿ ಸರ್ಕಾರಿ ದಾಖಲೆಗಳು ಇರಬೇಕು. ಆದ್ದರಿಂದ ಸಮಾಜದಲ್ಲಿ ಗುರುತಿನ ಚೀಟಿಗಳ ವಿತರಣೆ ಸಮರ್ಪಕವಾಗಿ ಆಗಬೇಕು. ಈ ಪ್ರತಿ ಕುಟುಂಬಕ್ಕೆ ಅಂತ್ಯೋದಯ ಪಡಿತರ ಚೀಟಿ ದೊರೆಯಬೇಕು.

ಸಮುದಾಯದ ನೆಲೆಗಳಲ್ಲಿ ವಯಸ್ಕರ ಶಿಕ್ಷಣ ಕೇಂದ್ರಗಳು ಜಾರಿಯಾಗಬೇಕು.

ಅನುಬಂಧಗಳು

ಪರಾಮರ್ಶನ ಗ್ರಂಥಗಳು

ವಕ್ತೃಗಳ ವಿವರ

ಪತ್ರಿಕಾ ವರದಿಗಳು

ಛಾಯಾಚಿತ್ರಗಳು

ಪರಾಮರ್ಶನ ಗ್ರಂಥಗಳು

೧. ಅಕ್ಕ ಮಹಾದೇವಿ, ೧೯೮೪, **ಬುಡಕಟ್ಟು ನ್ಯಾಯ**, ಪ್ರಸಾರಾಂಗ; ಮೈಸೂರು ವಿಶ್ವವಿದ್ಯಾಲಯ, ಮೈಸೂರು

೨. ಇಂದಿರಾ ಆರ್, ೨೦೦೨, **ಮಹಿಳೆ ಸಮಾಜ ಮತ್ತು ಸಂಸ್ಕೃತಿ**, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩. ಇಂದಿರಾ ಆರ್(ಸಂ), ೧೯೯೪, **ಸಮಾಜಶಾಸ್ತ್ರ**, ಸುಭಾ ಪಬ್ಲಿಕೇಷನ್, ಬೆಂಗಳೂರು

೪. ಈಶ್ವರಪ್ಪ ಎಂ.ಜಿ. ೧೯೮೨, **ಮ್ಯಾಸಬೇಡರು**, ಐ.ಬಿ.ಎಚ್. ಪ್ರಕಾಶನ ಬೆಂಗಳೂರು

೫. ಎಚ್ಚಾರ್ಕೆ, ೨೦೦೨, **ಭಾರತ ಆರ್ಥಿಕ ವ್ಯವಸ್ಥೆ**, ಸ್ವಪ್ನ ಬುಕ್ ಹೌಸ್, ಬೆಂಗಳೂರು

೬. ಎಫ್.ಟಿ ಹಳ್ಳಿಕೇರಿ(ಸಂ), ೨೦೧೧, **ಹಾಲುಮತ ವ್ಯಾಸಂಗ-೩**, ಪ್ರಸಾರಾಂಗ; ಕನ್ನಡ ವಿಶ್ವವಿದ್ಯಾಲಯ, ಹಂಪಿ

೭. ಎಫ್.ಟಿ.ಹಳ್ಳಿಕೇರಿ, (ಸಂ) ೨೦೧೦, **ಹಾಲುಮತ ಅಧ್ಯಯನಗಳು**, ಪ್ರಸಾರಾಂಗ; ಕನ್ನಡ ವಿಶ್ವವಿದ್ಯಾಲಯ, ಹಂಪಿ

೮. ಐನಾಪುರ ಎಲ್, ೧೯೭೦, **ಮಾನವಶಾಸ್ತ್ರ ಪರಿಚಯ**, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೯. ಒಡೆಯರ ಡಿ ಹೆಗ್ಗಡೆ, ೨೦೦೫, **ಹಾಲುಮತ ಕುರುಬ ಜನಾಂಗದ ಚರಿತ್ರೆ**, ಅಖಿಲಾ ಏಜೆನ್ಸಿಸ್; ಮೈಸೂರು

೧೦. ಕಂಠೀರಾವ್, ೧೯೭೮, **ಭಾರತೀಯ ನ್ಯಾಯ ಪದ್ಧತಿ**, ಕನ್ನಡ ಅಧ್ಯಯನ ಸಂಸ್ಥೆ; ಮೈಸೂರು

೧೧. ಕರಿಶೆಟ್ಟಿ ರುದ್ರಪ್ಪ, ೧೯೯೫, **ಮ್ಯಾಸ ನಾಯಕ ಒಂದು ಜನಾಂಗೀಯ ಅಧ್ಯಯನ**, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು

೧೨. ಕಲ್ಲೂರು ಎಂ.ಎನ್, ೨೦೦೦, **ಕೃಷಿ ಅರ್ಥಶಾಸ್ತ್ರ**, ಕಲಾ ಪ್ರಕಾಶನ ಬೆಂಗಳೂರು

೧೩. ಕಾಳೇಗೌಡ ನಾಗವಾರ, ೧೯೮೪, **ಕಾಡುಗೊಲ್ಲರಕ ಜನಪದ ಒಂದು ಅಧ್ಯಯನ**, ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪಿಎಚ್.ಡಿ ಮಹಾ ಪ್ರಬಂಧ

೧೪. ಕುಮುದ ಬಿ. ಸುಶೀಲಪ್ಪ, **ಹಕ್ಕಿಪಿಕ್ಕಿಯರು**, ಕನ್ನಡ ಭಾರತಿ ಕುವೆಂಪು ವಿಶ್ವವಿದ್ಯಾಲಯ, ಮೈಸೂರು

೧೫. ಕೃಷ್ಣಮೂರ್ತಿ ಎನ್, ೨೦೦೯, **ಒಡಿಗ ಬುಡಕಟ್ಟು ಸಮುದಾಯ**, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು

೧೬. ಕೃಷ್ಣ ಅಯ್ಯಂಗಾರ್ ಡಿ, ೧೯೫೬, **ಕನ್ನಡ ನಾಡಿನ ಆದಿವಾಸಿಗಳು**, ಮೈಸೂರು ರಾಜ್ಯ ವಾರ್ತಾ ಇಲಾಖೆ ಬೆಂಗಳೂರು

೧೭. ಕೃಷ್ಣಮೂರ್ತಿ ಹನೂರು, ೧೯೯೩, **ಮ್ಯಾಸಬೇಡರ ಸಂಸ್ಕೃತಿ**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೧೮. ಗಂಗಾನಾಯ್ಕ, ೨೦೦೪, **ಲಂಬಾಣಿಗರು,** ಕನ್ನಡ ಭಾರತಿ ಕುವೆಂಪು ವಿ.ವಿ. ಶಿವಮೊಗ್ಗ

೧೯. ಗುರುಲಿಂಗಯ್ಯ ಎಂ, ೨೦೦೫, **ಕರ್ನಾಟಕದ ಗೊಲ್ಲ ಸಮುದಾಯ,** ಶಕ್ತ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಬೆಂಗಳೂರು

೨೦. ಗುರುಲಿಂಗಯ್ಯ ಎಂ.ವಿ.ನಾಗಪ್ಪ, ೨೦೦೪, **ಕಾಡುಗೊಲ್ಲ,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

೨೧. ಗೋವಿಂದರಾಜು ಟಿ. **ಹಳ್ಳಿಮನೆ,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೨೨. ಚಂದ್ರು ಕಾಳೇನಹಳ್ಳಿ, ೧೯೯೨, **ಸೋಲಿಗರ ಸಂಸ್ಕೃತಿ,** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೨೩. ಚಂದ್ರಪ್ಪ ಎನ್, **ಮೊಂಡರ ಸಂಸ್ಕೃತಿ,** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೨೪. ಚಂದ್ರಪ್ಪ ಬಿ.ಎನ್. ೧೯೯೦, **ಸೋಲಿಗರ ಒಂದು ಅಧ್ಯಯನ ಪಿಎಚ್.ಡಿ** ಮೈಸೂರು ವಿಶ್ವವಿದ್ಯಾಲಯ, ಮೈಸೂರು

೨೫. ಚಂದ್ರಪ್ಪ ಅಜ್ಜಂಪುರ ಹೆಚ್. ೨೦೧೧, **ಕುರುಬರ ಕುರುಹುಗಳು,** ವಿದ್ಯಾನಿಧಿ ಪ್ರಕಾಶನ, ಗದಗ.

೨೬. ಚಂದ್ರಶೇಖರ ಟಿ.ಆರ್. ಮತ್ತು ಚಂದ್ರಪೂಜಾರಿ ಎಂ, ೨೦೦೨, **ಅಭಿವೃದ್ಧಿ ಅಧ್ಯಯನ ಸಂಪುಟ-೩ ಸಂಚಿಕೆ-೧,** ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೭. ಚಂದ್ರಶೇಖರ್ ಟಿ.ಆರ್, ೨೦೦೦ **ಕರ್ನಾಟಕ ಅಭಿವೃದ್ಧಿ ಸಾಮಾಜಿಕ ನೆಲೆಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೮. ಚನ್ನಬಸಪ್ಪ ಗೊ.ರು. ೧೯೭೯, **ಗ್ರಾಮ ಜ್ಯೋತಿ ಕೆ.ಆರ್.ಲಿಂಗಪ್ಪ ಅವರ ಅಭಿನಂದನ ಗ್ರಂಥ,** ಬೆಂಗಳೂರು

೨೯. ಚಂದ್ರಕಾಂತ ಬಿಜ್ಜರಗಿ, ೨೦೦೬, **ಕುರುಬರ ದರ್ಪಣ,** ಶೈಲಚಂದ್ರ ಪ್ರಕಾಶನ, ಬಿಜಾಪುರ

೩೦. ಚಿನ್ನಸ್ವಾಮಿ ಸೋಸಲೆ ಎನ್, **ನಮ್ಮ ಗ್ರಾಮಗಳು : ಅಂದು-ಇಂದು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩೧. ಜವರೇಗೌಡ ದೇ, ೧೯೯೦, **ಸ್ಥಳನಾಮ ವ್ಯಾಸಂಗ,** ಸಹ್ಯಾದ್ರಿ ಪ್ರಕಾಶನ ಕುವೆಂಪು, ವಿದ್ಯಾವರ್ಧಕ ಟ್ರಸ್ಟ್, ಮೈಸೂರು

೩೨. ಜಾಜಿ ದೇವೇಂದ್ರಪ್ಪ, ೨೦೦೪, **ಆಂಧ್ರ ಕರ್ನಾಟಕ ಗಡಿ ಪ್ರದೇಶದ ಸ್ಥಳನಾಮಗಳು,** ವಿಕಾಸ ಪ್ರಕಾಶನ, ಹೊಸಪೇಟೆ

೩೩. ಜೋಗನ್ ಶಂಕರ್, ೧೯೯೫, **ಗ್ರಾಮ ಸಮಾಜ,** ಜೀವ ಪ್ರಕಾಶನ ಮೈಸೂರು

೩೪. ಥಂಗ್ ಡಿ.ಬಿ, ೧೯೮೮, **ಬೇಡಜನಾಂಗ ಪರಿಚಯ,** ಸಪ್ತಪುರು ಪೆರಿಯಾರ ಪ್ರಕಾಶನ, ಧಾರವಾಡ

೩೫. ತಾರಿಹಳ್ಳಿ ಹನುಮಂತಪ್ಪ, ೨೦೧೦, **ಕರ್ನಾಟಕ ಬುಡಕಟ್ಟು ಸಮುದಾಯಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩೬. ತಾರಿಹಳ್ಳಿ ಹನುಮಂತಪ್ಪ, ೨೦೧೨, **ನಾಯಕರ ಮಹಾಸಂಸ್ಥಾನ ಸುರಪುರ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩೭. ದುರುಗಪ್ಪ ಎಂ.ಕೆ, **ವಿಜಯನಗರೋತ್ತರ ಕಾಲೀನ ಬೇಡ ಜನಾಂಗ ಚಾರಿತ್ರಿಕ ಅಧ್ಯಯನ ವಾಲ್ಮೀಕಿ ಸಾಹಿತ್ಯ ಸಂಪದ**, ಹರ್ತಿಕೋಟೆ

೩೮. ನಂಜಮ್ಮಣ್ಣಿ ಎಂ. ೧೯೭೪, **ಸಾಮಾಜಿಕ ಮಾನವಶಾಸ್ತ್ರ**, ಪ್ರಸಾರಾಂಗ ಮೈಸೂರು, ವಿಶ್ವವಿದ್ಯಾಲಯ, ಮೈಸೂರು

೩೯. ನಂಜಮ್ಮಣ್ಣಿ, ಸಾಮಾಜಿಕ ಸಂಸ್ಥೆಗಳು, ೨೦೦೨, **ಕುವೆಂಪು ಅಧ್ಯಯನ ಸಂಸ್ಥೆ** ಮ.ವಿಮೆ

೪೦. ನಾಯಕ ಹಾ.ಮಾ, ೧೯೭೭, **ಕನ್ನಡ ರತ್ನಕೋಶ**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೪೧. ನಾಗರಾಜ ಬಿ.ವಿ, ೧೯೯೮, **ಗೊಲ್ಲರ ಹಟ್ಟಿ ಆಪ್ತ**, ಪ್ರಕಾಶನ, ಬೆಂಗಳೂರು

೪೨. ನಾಯ್ಕರ್ ಬ.ಪ, ೨೦೦೬ **ಹಾಲುಮತಸ್ಥರು**, ವಿದ್ಯಾನಿಧಿ, ಪ್ರಕಾಶನ, ಗದಗ

೪೩. ನಿಂಗಣ್ಣ ಸಣ್ಣಕ್ಕಿ, ೨೦೦೬, ಹಾಲುಮತ ಪುರಾಣ ವಿದ್ಯಾನಿಧಿ, ಪ್ರಕಾಶನ, ಗದಗ

೪೪. ಪಾರ್ವತಮ್ಮ ಸಿ, ೨೦೦೨, **ಆದಿವಾಸಿ ಸಮುದಾಯಗಳ ಅಭಿವೃದ್ಧಿ**, ಕನ್ನಡ ವಿಶ್ವವಿದ್ಯಾಲಯ, ಹಂಪಿ

೪೫. ಪ್ರಭಾಕರ ಎ.ಎಸ್. ೨೦೦೭, **ಆದಿವಾಸಿ ಆಖ್ಯಾನ**, ಸಿದ್ಧಾರ್ಥ ಪ್ರಕಾಶನ, ಹೊಸಪೇಟೆ

೪೬. ಪ್ರಭಾಕರ ಎ.ಎಸ್. ೨೦೦೦, **ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೪೭. ಬಸವರಾಜು, ೧೯೭೫, **ಜೇನು ಕುರುಬರು**, ಕ್ಷೇತ್ರ ಕಾರ್ಯವರದಿ ಮೈಸೂರು ಮೈಸೂರು

೪೮. ಮರುಳು ಸಿದ್ದಯ್ಯ ಎಚ್.ಎಂ. ೧೯೭೦, **ಮಾನವ ಸಮಾಜ ಮತ್ತು ಸಮಾಜಶಾಸ್ತ್ರ**, ಭಾರತ ಪ್ರಕಾಶನ, ಧಾರವಾಡ

೪೯. ಮಂಜುನಾಥ ಬೇವಿನಕಟ್ಟಿ, ೨೦೦೭, **ಆದಿವಾಸಿ**, ಸಾಹಿತ್ಯ ನಂದನ, ಬೆಂಗಳೂರು

೫೦. ಮಂಜುನಾಥ ಬೇವಿನಕಟ್ಟಿ ೧೯೯೬, **ಜನಪದ ನಂಬಿಕೆಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೫೧. ಮಂಜುನಾಥ ಬೇವಿನಕಟ್ಟಿ (ಸಂ) ೨೦೦೭, **ವ್ಯಾದ ಚರಿತೆ:ಬೇಡ ಕುಲಮೂಲದ ಕಥನಗಳು**, ಕನ್ನಡ ವಿಶ್ವವಿದ್ಯಾಲಯ, ಹಂಪಿ

೫೨. ಮಂಜುನಾಥ ಬೇವಿನಕಟ್ಟಿ ಮತ್ತು ತಾರಿಹಳ್ಳಿ ಹನುಮಂತಪ್ಪ (ಸಂ) ೨೦೦೬, **ವಾಲ್ಮೀಕಿ ಸಂಪದ**, ವಾಲ್ಮೀಕಿ ಮಹಾಸಂಸ್ಥಾನ, ರಾಜನಹಳ್ಳಿ

೫೩. ಮಲ್ಲಿನಾಥಯ್ಯ ಡಿ.ಎಚ್. ೧೯೭೪, **ಸಾಂಸ್ಕೃತಿಕ ಮಾನವಸಾಸ್ತ್ರ**, ಕನ್ನಡ ಅಧ್ಯಯನ ಸಂಸ್ಥೆ ಮೈಸೂರು

೫೪. ಮೀರಾಸಾಬಿಹಳ್ಳಿ ಶಿವಣ್ಣ, ೨೦೦೩, **ಮ್ಯಾಸ ಮಂಡಲ**, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

೫೫. ಮೀರಾಸಾಬಿಹಳ್ಳಿ ಶಿವಣ್ಣ, ೧೯೯೯. **ಕಾಡುಗೊಲ್ಲರ ಸಂಸ್ಕೃತಿ,** ಸಿವಿಜಿ. ಪಬ್ಲಿಕೇಷನ್, ಬೆಂಗಳೂರು

೫೬. ಮೀರಾಸಾಬಿಹಳ್ಳಿ ಶಿವಣ್ಣ ೧೯೯೯, **ಗೊಲ್ಲ ಕಡಗ,** ಸಿವಿಜಿ. ಪಬ್ಲಿಕೇಷನ್, ಬೆಂಗಳೂರು

೫೭. ಮೇತ್ರಿ ಕೆ.ಎಂ. ೨೦೦೩, **ಬುಡಕಟ್ಟು ಕುಲಕಸುಬುಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೫೮. ಯೆರ್ರಪ್ಪ ಡಿ ೨೦೦೮, **ಅಲೆಮಾರಿ ಕುರುಬ,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು

೫೯. ರಮೇಶ ಸ.ಚಿ. **ಅಲೆಮಾರಿಗಳ ಸ್ಥಿತಿಗತಿ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೬೦. ರವೀಂದ್ರ ಕೊಪ್ಪದ, **ಭಾರತೀಯ ಸಮಾಜ ಅಧ್ಯಯನ,** ಸುರೇಶ, ಪಬ್ಲಿಕೇಷನ್ಸ್, ಗದಗ

೬೧. ರಾಜರಾಮ ಹೆಗಡೆ (ಸಂ) ೧೯೮೬, **ಭಾರತೀಯ ಇತಿಹಾಸ: ಸಮಾಜ ಮತ್ತು ಸಂಸ್ಕೃತಿ,** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೬೨. ಲಕ್ಕಪ್ಪಗೌಡ ಎಚ್.ಜಿ. ೧೯೯೮ (ಪ್ರ.ಸಂ.) **ಕರ್ನಾಟಕ ಬುಡಕಟ್ಟುಗಳು,** ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು

೬೩. ಲಕ್ಷ್ಮಣ್ ತೆಲಗಾವಿ (ಸಂ) ಹರತಿಸಿರಿ ಎಚ್..ವಿ **ವೀರನಾಯಕ,** ನೆನಪಿನ ಸಂಪುಟ ವಾಲ್ಮೀಕಿ ಸಾಹಿತ್ಯ ಸಂಪದ ಹರ್ತಿಕೋಟೆ

೬೪. ಲಲಿತಾ ಎ.ಸಿ. **ಕಾಡುಕುರುಬರ ಮತ್ತು ಜೇನು ಕುರುಬರ ಸಂಸ್ಕೃತಿ,** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೬೫. ವಿರೂಪಾಕ್ಷಿ ಪೂಜಾರಿಹಳ್ಳಿ (ಸಂ) ೨೦೦೮, **ಬೇಡ ಬುಡಕಟ್ಟಿನ ಚರಿತ್ರೆ ಮತ್ತು ಸಂಸ್ಕೃತಿ** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೬೬. ವಿರೂಪಾಕ್ಷಿ ಪೂಜಾರಿ ಹಳ್ಳಿ, ೨೦೦೬, **ಬೇಟೆ ಮತ್ತು ಬೇಡರು,** ಚಿನ್ನಗರಿ ಪ್ರಕಾಶನ, ಪೂಜಾರಿ ಹಳ್ಳಿ

೬೭. ವಿಮಲಾ ಅಮಲಪ್ಪ, ೨೦೦೯, **ಕಾಡುಗೊಲ್ಲರ ಆರ್ಥಿಕ ಸ್ಥಿತಿಗತಿಗಳು**

೬೮. ವೆಂಕಟಸುಬ್ಬಯ್ಯ ಜಿ. (ಸಂ), **ಕನ್ನಡ,** ಕನ್ನಡ ಇಂಗ್ಲಿಷ ನಿಘಂಟು ಐ.ಬಿ.ಎಚ್. ಪ್ರಕಾಶನ, ಬೆಂಗಳೂರು

೬೯. ಶಂಕರ ನಾರಾಯಣ, ೧೯೮೮, **ಕಾಡುಗೊಲ್ಲರ,** ಐ.ಬಿ.ಎಚ್. ಪ್ರಕಾಶನ, ಬೆಂಗಳೂರು

೭೦. ಶಂಕರ ನಾರಾಯಣ ತೀ.ನ.ಂ ೧೯೯೪, **ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು,** ಪ್ರಸಾರಾಂಗ, ಮೈಸೂರು, ವಿಶ್ವವಿದ್ಯಾಲಯ, ಮೈಸೂರು

೭೧. ಶಂ.ಬಾ. ಜೋಶಿ ೧೯೯೬, **ಕರ್ನಾಟಕ ಸಂಸ್ಕೃತಿಕ ಪೂರ್ವ** ಪೀಠಿಕೆ ಸಮಾಜ ಪುಸ್ತಕಾಲಯ,

೭೨. ಶಂ.ಬಾ. ಜೋಶಿ, ೧೯೪೭., **ಎಡೆಗಳು ಹೇಳುವ ಕಂನಾಡ ಕತೆ,** ಮಾದವ ಬಲ್ಲಾಳ ಬಂಧುಗಳು, ಧಾರವಾಡ

೭೩. ಶಿವನಂದ ಗುಬ್ಬಣ್ಣನವರ ೧೯೯೩, **ಕರ್ನಾಟಕದ ಕುರುಬರು,** ಅಕ್ಷಯ ಪ್ರಕಾಶನ, ಧಾರವಾಡ

೭೪. ಶ್ರೀನಿವಾಸ ರಿತ್ತಿ (ಸಂ), **ಕರ್ನಾಟಕ ಗ್ರಾಮ ಸೂಚಿ**, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು

೭೫. ಶ್ಯಾಂಪಿಂಗ್ ಶಲಿ ಬಿ.ಕೆ.ರವಿ. ೨೦೦೫, **ಭಾರತದ ಕುರುಬರು ರಾಜಪರಂಪರೆಯ ಬುಡಕಟ್ಟು**, ಅಂಕಿತ ಪ್ರಕಾಶನ, ಬೆಂಗಳೂರು

೭೬. ಸತ್ಯಲಿಂಗರಾಜು ಬಿ.ಆರ್. **ಮಾನವಶಾಸ್ತ್ರ ಮೂಲಾಂಶಗಳು**, ಚೇತನ ಬುಕ್ ಹೌಸ್, ಮೈಸೂರು

೭೭. ಸೋಮೇಶ್ವರ ಅಮೃತ, ೧೯೮೨, **ಕೊರಗರು**, ಐ.ಬಿ. ಹೆಚ್ ಪ್ರಕಾಶನ, ಬೆಂಗಳೂರು

೭೮. ಹನುಮಂತಯ್ಯ ವಿ.ಆರ್. ೧೯೨೬, **ಭಾರತ ದೇಶದ ಕುರುಬರ ಚರಿತ್ರೆ**, ವಿಥಿಕ್ ಸೊಸೈಟಿ, ಬೆಂಗಳೂರು

೭೯. ಹನುಮಂತಯ್ಯ ವಿ.ಆರ್. (ಸಂ) ೧೯೯೬, **ಕುರುಬರ ಚರಿತ್ರೆ**, ಪ್ರತಿಭಾ ಪ್ರಕಾಶನ, ಮೈಸೂರು

೮೦. ಹರ್ತಿಕೋಟೆ ವೀರೇಂದ್ರ ಸಿಂಹ ಮತ್ತು ಅಮರೇಶ ಯತಗಲ್ (ಸಂ) ೨೦೦೮, **ವಾಲ್ಮೀಕಿ ಮಂದಾರ**, ವಾಲ್ಮೀಕಿ ಸಾಹಿತ್ಯ ಸಂಪದ ಹರ್ತಿಕೋಟೆ

೮೧. ಹಿರೇಮಲ್ಲೂರು ಈಶ್ವರನ ೧೯೭೨, **ಭಾರತ ಹಳ್ಳಿಗಳು** ಮೈಸೂರು ವಿಶ್ವವಿದ್ಯಾಲಯ, ಮೈಸೂರು

ಪಿಎಚ್.ಡಿ. ಮಹಾಪ್ರಬಂಧ

೦೧. ಕಾಳೇಗೌಡ ನಾಗವಾರ, ಕಾಡುಗೊಲ್ಲರ ಹಟ್ಟಿಯೊಂದರ ಅಧ್ಯಯನ, ೧೯೭೫, ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಅಪ್ರಕಟಿತ ಪಿಎಚ್.ಡಿ ಪ್ರಬಂಧ

೦೨. ಕೃಷ್ಣೇಗೌಡ, ೨೦೧೦, ಗಂಗಾಮತಸ್ಥರ ಜಾನಪದ ಅಧ್ಯಯನ, ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ ಕನ್ನಡ ವಿಶ್ವವಿದ್ಯಾಲಯ ಹಂಪಿ.

೦೩. ಜಗದೀಶ ಕುಮಾರ, ೨೦೦೯, ಬೇಡ ಸಮುದಾಯದ ಮಹಿಳೆ ಅಪ್ರಕಟಿತ ಪಿಎಚ್.ಡಿ, ಮಹಾಪ್ರಬಂಧ

೦೪. ನೇಗಿನಹಾಳ ಎಂ.ಬಿ, ನೆಗಿನಹಾಳ ಅಪ್ರಕಟಿತ ಪಿಎಚ್.ಡಿ, ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೦೫. ಬಾಳಪ್ಪ ಎ.ಬಿ. ಕರ್ನಾಟಕ ಕುರುಬರ ಒಳ ಪಂಗಡಗಳು ಸಾಂಸ್ಕೃತಿಕ ಅಧ್ಯಯನ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ

೦೬. ಸಣ್ಣ ಓಬ್ಬಯ್ಯ ಎಸ್.ಕೆ. ೨೦೦೨, ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟು : ಒಂದು ಸಮಾಜಶಾಸ್ತ್ರೀಯ ಅಧ್ಯಯನ (ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪಿಎಚ್.ಡಿ ಅಪ್ರಕಟಿತ ಮಹಾಪ್ರಬಂಧ

೦೭. ಸುದರ್ಶನ ಕುಮಾರ (ಸಂ) ೨೦೦೮ ಕರ್ನಾಟಕದ ಮೂಲ ನಿವಾಸಿ ಬುಡಕಟ್ಟು ಸಮುದಾಯಗಳ ಪರಿಸರ ಮತ್ತು ಅಭಿವೃದ್ಧಿ : ಅರ್ಥಶಾಸ್ತ್ರೀಯ ಅಧ್ಯಯನ ಕನ್ನಡ ವಿಶ್ವವಿದ್ಯಾಲಯ, ಹಂಪಿಗೆ ಸಾದರ ಪಡಿಸಿದ ಅಪ್ರಕಕಟಿತ ಪಿಎಚ್.ಡಿ ಮಹಾ ಪ್ರಬಂಧ

ಒಂದನೇ

1. Anantakrisha Iyer, Nanjundapp, H.V. (edt), "The Mysore Tribes and castes", Vol-1 to IV, Mysore Govt, press, Bangalore-1926-1935
2. Bose Nirmol Kumar, "Tribal life in India" National book Trust, New Delhi, 1971
3. Chakraborthi M. Mulkerji D, (edt) "Indian Tribes" saraswot Library, Calcutta, 1971
4. Desai A.R. " Rural sociology in India, The Indian society of Argricltural Economics" Bombay, 1961
5. Dumont Lovies 1986 A South Indian subcastes, Oxford University press.
6. Ghuru G.S. 1990, Caste and Rane in India, Popular prakashana, Bombay
7. Havanur L.G. 1975 Karnataka Backward class commission Report, Government Press
8. Mujumdar D.N. 1950 the Affairs of Tribe - A study in Tribe Dynamics, Universan publisher, Lucknow
9. Nagangowda-1979 Mysore Backward class Commission Press Bangalore
10. Singh K.S. 1994 The Scheduled Tribes (Vol-III and XXVI) Anthropological survy of India, Oxford, University press, Delhi.
11. Singh K.P. 1988 Tribol Development in India Uppal Publishing House, New Delhi
12. Sikider sujit 1990 Economics Development of Tribol India Ashish Publishing House New Delhi
13. Verrier Elwin, 1992 Leaves from the Jungle Oxford, University press, Delhi.
14. Venkataswamy T. 1986 Karnataka Backward class commission Report.

ವಕ್ತೃಗಳ ವಿವರ

ಮಾಹಿತಿದಾರರ ಹೆಸರು	ವಯಸ್ಸು	ಲಿಂಗ	ಕಸುಬು	ಜಾತಿ	ವಿಳಾಸ
ಆದಪ್ಪ	೬೦	ಗಂಡು	ಕೃಷಿ	ಕಬ್ಬಲಿಗ	ಅಂಬಿಗೇರ ದೊಡ್ಡಿ, ಗುರುಗುಂತ ಗ್ರಾಮ, ಲಿಂಗಸ್ಗೂರು, ರಾಯಚೂರು ಜಿಲ್ಲೆ.
ಆದಪ್ಪ	೪೫	ಗಂಡು	ಡ್ರೈವರ್	ಕಬ್ಬಲಿಗ	ಅಂಬಿಗೇರ ದೊಡ್ಡಿ, ಗುರುಗುಂತ ಗ್ರಾಮ, ಲಿಂಗಸ್ಗೂರು, ರಾಯಚೂರು ಜಿಲ್ಲೆ.
ಗಂಗಪ್ಪ	೬೫	ಗಂಡು	ಕೃಷಿ	ಕಬ್ಬಲಿಗ	ಅಂಬಿಗೇರ ದೊಡ್ಡಿ, ಗುರುಗುಂತ ಗ್ರಾಮ, ಲಿಂಗಸ್ಗೂರು, ರಾಯಚೂರು ಜಿಲ್ಲೆ.
ಗಂಗಮ್ಮ	೪೦	ಹೆಣ್ಣು	ಕೃಷಿ	ಕಬ್ಬಲಿಗ	ಅಂಬಿಗೇರ ದೊಡ್ಡಿ, ಗುರುಗುಂತ ಗ್ರಾಮ, ಲಿಂಗಸ್ಗೂರು, ರಾಯಚೂರು ಜಿಲ್ಲೆ.
ಹೊನ್ನಮ್ಮ	೩೫	ಹೆಣ್ಣು	ಕೃಷಿ	ಕಬ್ಬಲಿಗ	ಅಂಬಿಗೇರ ದೊಡ್ಡಿ, ಗುರುಗುಂತ ಗ್ರಾಮ, ಲಿಂಗಸ್ಗೂರು, ರಾಯಚೂರು ಜಿಲ್ಲೆ.
ಅಮರೇಶ	೩೬	ಗಂಡು	ಕುರಿಗಾರಿಕೆ	ಕುರುಬ	ಕುರುಬರ ದೊಡ್ಡಿ, ಗೌಡೂರು ಗ್ರಾಮ, ಲಿಂಗಸ್ಗೂರು, ರಾಯಚೂರು
ಬಾಲಾಜಿ	೩೮	ಗಂಡು	ಕುರಿಸಾಕಾಣಿಕೆ	ಕುರುಬ	ಕುರುಬರ ದೊಡ್ಡಿ, ಗೌಡೂರು ಗ್ರಾಮ, ಲಿಂಗಸ್ಗೂರು, ರಾಯಚೂರು
ಮಾದಮ್ಮ	೪೨	ಹೆಣ್ಣು	ಗೃಹಿಣಿ	ಕುರುಬ	ಕುರುಬರ ದೊಡ್ಡಿ, ಗೌಡೂರು ಗ್ರಾಮ, ಲಿಂಗಸ್ಗೂರು, ರಾಯಚೂರು
ರಾಜು	೧೬	ಗಂಡು	ಕುರಿಸಾಕಾಣಿಕೆ	ಕುರುಬ	ಕುರುಬರ ದೊಡ್ಡಿ, ಗೌಡೂರು ಗ್ರಾಮ, ಲಿಂಗಸ್ಗೂರು, ರಾಯಚೂರು
ದೇವಪ್ಪ	೩೩	ಗಂಡು	ಕೃಷಿಕೂಲಿ	ಕುರುಬ	ಕುರುಬರ ದೊಡ್ಡಿ, ಗೌಡೂರು ಗ್ರಾಮ, ಲಿಂಗಸ್ಗೂರು, ರಾಯಚೂರು

ಸಾಬಣ್ಣ	೫೩	ಗಂಡು	ಕೃಷಿಕೂಲಿ	ಕುರುಬ	ಕುರುಬರ ದೊಡ್ಡಿ, ಗೌಡೂರು ಗ್ರಾಮ, ಲಿಂಗಸ್ಗೂರು, ರಾಯಚೂರು
ಮದುರುಗಪ್ಪ	೪೬	ಗಂಡು	ಕೃಷಿ	ನಾಯಕ	ಮುತ್ಲರದೊಡ್ಡಿ, ಲೇಕಿಮಚೇರಿ ಗ್ರಾಮ, ಲಿಂಗಸ್ಗೂರು, ರಾಯಚೂರು ಜಿಲ್ಲೆ.
ಶಿವಪ್ಪ	೧೯	ಗಂಡು	ವಿದ್ಯಾರ್ಥಿ	ನಾಯಕ	ಮುತ್ಲರದೊಡ್ಡಿ, ಲೇಕಿಮಚೇರಿ ಗ್ರಾಮ, ಲಿಂಗಸ್ಗೂರು, ರಾಯಚೂರು ಜಿಲ್ಲೆ.
ಅಡೆವಪ್ಪ	೪೫	ಗಂಡು	ಕೃಷಿ	ನಾಯಕ	ಮುತ್ಲರದೊಡ್ಡಿ, ಲೇಕಿಮಚೇರಿ ಗ್ರಾಮ, ಲಿಂಗಸ್ಗೂರು, ರಾಯಚೂರು ಜಿಲ್ಲೆ.
ಹನುಮಂತಮ್ಮ	೫೪	ಹೆಣ್ಣು	ಗೃಹಿಣಿ	ನಾಯಕ	ಮುತ್ಲರದೊಡ್ಡಿ, ಲೇಕಿಮಚೇರಿ ಗ್ರಾಮ, ಲಿಂಗಸ್ಗೂರು, ರಾಯಚೂರು ಜಿಲ್ಲೆ.
ಫಕ್ಕೀರಪ್ಪ	೫೩	ಗಂಡು	ವ್ಯವಸಾಯ	ನಾಯಕ	ಕಲ್ದೇರ ದೊಡ್ಡಿ, ಲೇಕಿಮಚೇರಿ ಗ್ರಾಮ, ಲಿಂಗಸ್ಗೂರು, ರಾಯಚೂರು ಜಿಲ್ಲೆ.
ಗಂಗಪ್ಪ	೪೫	ಗಂಡು	ಕೃಷಿ	ಕುರುಬ	ಯರಮಲ ದೊಡ್ಡಿ, ಮಾನ್ವಿ ತಾಲೂಕು, ರಾಯಚೂರು ಜಿಲ್ಲೆ.
ದೊಡ್ಡ ಹನುಮಂತ	೫೩	ಗಂಡು	ಕೃಷಿಕೂಲಿ	ಕುರುಬ	ಯರಮಲ ದೊಡ್ಡಿ, ಮಾನ್ವಿ ತಾಲೂಕು, ರಾಯಚೂರು ಜಿಲ್ಲೆ.
ಹೇಮಲತಾ	೩೬	ಹೆಣ್ಣು	ಗೃಹಿಣಿ	ಕುರುಬ	ಯರಮಲ ದೊಡ್ಡಿ, ಮಾನ್ವಿ ತಾಲೂಕು, ರಾಯಚೂರು ಜಿಲ್ಲೆ.
ಜಯಪ್ಪ	೩೯	ಗಂಡು	ವ್ಯವಸಾಯ	ಕುರುಬ	ಯರಮಲ ದೊಡ್ಡಿ, ಮಾನ್ವಿ ತಾಲೂಕು, ರಾಯಚೂರು ಜಿಲ್ಲೆ.
ವೀರೇಶ	೨೪	ಗಂಡು	ಟೈಲರ್	ಕಬ್ಬಲಿಗ	ತಪ್ಪಲದೊಡ್ಡಿ, ಮಾನ್ವಿ ತಾಲೂಕು, ರಾಯಚೂರು ಜಿಲ್ಲೆ.

ಯಂಕೋಬ	೪೦	ಗಂಡು	ವ್ಯವಸಾಯ	ನಾಯಕ	ಗೋವಿಂದದೊಡ್ಡಿ ಗ್ರಾಮ, ಮಾನ್ವಿ ತಾಲೂಕು, ರಾಯಚೂರು ಜಿಲ್ಲೆ.
ದೊಡ್ಡ ಯಂಕಯ್ಯ	೨೮	ಗಂಡು	ಕೃಷಿಕೂಲಿ	ನಾಯಕ	ಗೋವಿಂದದೊಡ್ಡಿ ಗ್ರಾಮ, ಮಾನ್ವಿ ತಾಲೂಕು, ರಾಯಚೂರು ಜಿಲ್ಲೆ.
ಹನುಮಪ್ಪ	೪೨	ಗಂಡು	ಪಶುಪಾಲನೆ	ನಾಯಕ	ಗೋವಿಂದದೊಡ್ಡಿ ಗ್ರಾಮ, ಮಾನ್ವಿ ತಾಲೂಕು, ರಾಯಚೂರು ಜಿಲ್ಲೆ.
ಬಾಗಯ್ಯನಾಯಕ	೨೨	ಗಂಡು	ಬಿ.ಎ. ವಿದ್ಯಾರ್ಥಿ	ನಾಯಕ	ಗೋವಿಂದದೊಡ್ಡಿ ಗ್ರಾಮ, ಮಾನ್ವಿ ತಾಲೂಕು, ರಾಯಚೂರು ಜಿಲ್ಲೆ.
ಹುಸೇನಿ	೫೦	ಗಂಡು	ಕೃಷಿಕೂಲಿ	ನಾಯಕ	ಕೋತ್ತದೊಡ್ಡಿ, ರಾಯಚೂರು ತಾ. ಜಿಲ್ಲೆ
ತಾಯಪ್ಪ	೪೮	ಗಂಡು	ಕೃಷಿ	ನಾಯಕ	ಕೋತ್ತದೊಡ್ಡಿ, ರಾಯಚೂರು ತಾ. ಜಿಲ್ಲೆ
ಶಂಕ್ರಮ್ಮ	೨೪	ಹೆಣ್ಣು	ಕೃಷಿಕೂಲಿ	ನಾಯಕ	ಕೋತ್ತದೊಡ್ಡಿ, ರಾಯಚೂರು ತಾ. ಜಿಲ್ಲೆ
ಶಿವಬಸಮ್ಮ	೪೩	ಹೆಣ್ಣು	ಕೃಷಿ	ಕಬ್ಬಲಿಗ	ಹನುಮಾನದೊಡ್ಡಿ, ರಾಯಚೂರು ತಾ. ಜಿಲ್ಲೆ.
ಬಸವರಾಜ	೬೮	ಗಂಡು	ಕಿರಾಣಿ ಅಂಗಡಿ	ಕಬ್ಬಲಿಗ	ಹನುಮಾನದೊಡ್ಡಿ, ರಾಯಚೂರು ತಾ. ಜಿಲ್ಲೆ.
ಚನ್ನರೆಡ್ಡಿ	೫೨	ಗಂಡು	ವಕೀಲರು	ಕಬ್ಬಲಿಗ	ಹನುಮಾನದೊಡ್ಡಿ, ರಾಯಚೂರು ತಾ. ಜಿಲ್ಲೆ.
ಸಣ್ಣಹುಚ್ಚಪ್ಪ	೪೦	ಗಂಡು	ಕೃಷಿ	ಕುರುಬ	ಉಪ್ಪಲದೊಡ್ಡಿ, ಸಿಂಧನೂರು ತಾಲೂಕು, ರಾಯಚೂರು ಜಿಲ್ಲೆ.
ನಿಂಗಮ್ಮ	೫೫	ಹೆಣ್ಣು	ಕೃಷಿಕೂಲಿ	ಕುರುಬ	ಉಪ್ಪಲದೊಡ್ಡಿ, ಸಿಂಧನೂರು ತಾಲೂಕು, ರಾಯಚೂರು ಜಿಲ್ಲೆ.
ಬಂಡೆಮ್ಮ	೨೧	ಹೆಣ್ಣು	ಬಿ.ಎ. ವಿದ್ಯಾರ್ಥಿನಿ	ಕುರುಬ	ಉಪ್ಪಲದೊಡ್ಡಿ, ಸಿಂಧನೂರು ತಾಲೂಕು, ರಾಯಚೂರು ಜಿಲ್ಲೆ.
ಯಮನಪ್ಪ	೩೨	ಗಂಡು	ಕೃಷಿ	ಕುರುಬ	ಉಪ್ಪಲದೊಡ್ಡಿ, ಸಿಂಧನೂರು ತಾಲೂಕು, ರಾಯಚೂರು ಜಿಲ್ಲೆ.
ಯಂಕೋಬ	೪೬	ಗಂಡು	ಮೀನುಗಾರಿಕೆ	ಕಬ್ಬಲಿಗ	ಚಿಂತಮಾನದೊಡ್ಡಿ, ಸಿಂಧನೂರು, ರಾಯಚೂರು ಜಿಲ್ಲೆ.
ಶಿವಮ್ಮ	೩೯	ಹೆಣ್ಣು	ಮೀನುಗಾರಿಕೆ	ಕಬ್ಬಲಿಗ	ಚಿಂತಮಾನದೊಡ್ಡಿ, ಸಿಂಧನೂರು, ರಾಯಚೂರು ಜಿಲ್ಲೆ.
ಹುಸೇನಪ್ಪ	೩೩	ಗಂಡು	ಕೃಷಿ	ಕಬ್ಬಲಿಗ	ಚಿಂತಮಾನದೊಡ್ಡಿ, ಸಿಂಧನೂರು, ರಾಯಚೂರು ಜಿಲ್ಲೆ.
ಪರಶುರಾಮ	೫೨	ಗಂಡು	ಮೀನುಗಾರಿಕೆ	ಕಬ್ಬಲಿಗ	ಚಿಂತಮಾನದೊಡ್ಡಿ, ಸಿಂಧನೂರು, ರಾಯಚೂರು ಜಿಲ್ಲೆ.

ಯಶೋಧ	೧೮	ಹೆಣ್ಣು	ಪಿಯುಸಿ ವಿದ್ಯಾರ್ಥಿನಿ	ಕಬ್ಬಲಿಗ	ಚಿಂತಮಾನದೊಡ್ಡಿ, ಸಿಂಧನೂರು, ರಾಯಚೂರು ಜಿಲ್ಲೆ.
ದೇವೇಂದ್ರಪ್ಪ	೪೬	ಗಂಡು	ಕೃಷಿಕೂಲಿ	ವಾಲ್ಮೀಕಿ	ಯದ್ದಲದೊಡ್ಡಿ, ಸಿಂಧನೂರು, ರಾಯಚೂರು ಜಿಲ್ಲೆ.
ಹನುಮಂತಿ	೩೮	ಹೆಣ್ಣು	ಕೃಷಿಕೂಲಿ	ವಾಲ್ಮೀಕಿ	ಯದ್ದಲದೊಡ್ಡಿ, ಸಿಂಧನೂರು, ರಾಯಚೂರು ಜಿಲ್ಲೆ.
ಮೌನೇಶ	೩೦	ಗಂಡು	ಕೃಷಿಕೂಲಿ	ವಾಲ್ಮೀಕಿ	ಯದ್ದಲದೊಡ್ಡಿ, ಸಿಂಧನೂರು, ರಾಯಚೂರು ಜಿಲ್ಲೆ.
ಮಲ್ಲಯ್ಯ	೩೯	ಗಂಡು	ಕೃಷಿ	ಕುರುಬ	ಬುಂಕಲದೊಡ್ಡಿ, ದೇವದುರ್ಗ ತಾಲೂಕು, ರಾಯಚೂರು ಜಿಲ್ಲೆ.
ಅಯ್ಯಪ್ಪ	೨೬	ಗಂಡು	ಕೃಷಿ	ಕುರುಬ	ಬುಂಕಲದೊಡ್ಡಿ, ದೇವದುರ್ಗ ತಾಲೂಕು, ರಾಯಚೂರು ಜಿಲ್ಲೆ.
ಉಪ್ಪಳೆಪ್ಪ	೬೩	ಗಂಡು	ಕುರಿಸಾಕಾಣಿಕೆ	ಕುರುಬ	ಬುಂಕಲದೊಡ್ಡಿ, ದೇವದುರ್ಗ ತಾಲೂಕು, ರಾಯಚೂರು ಜಿಲ್ಲೆ.
ಗೋವಿಂದಮ್ಮ	೫೮	ಹೆಣ್ಣು	ಗೃಹಿಣಿ	ಕುರುಬ	ಬುಂಕಲದೊಡ್ಡಿ, ದೇವದುರ್ಗ ತಾಲೂಕು, ರಾಯಚೂರು ಜಿಲ್ಲೆ.
ವಿರೂಪಾಕ್ಷ	೨೧	ಗಂಡು	ಬಿ.ಎ. ವಿದ್ಯಾರ್ಥಿ	ಕುರುಬ	ಬುಂಕಲದೊಡ್ಡಿ, ದೇವದುರ್ಗ ತಾಲೂಕು, ರಾಯಚೂರು ಜಿಲ್ಲೆ.
ಅಮರಪ್ಪ	೭೦	ಗಂಡು	ಯಜಮಾನ	ಕುರುಬ	ಚಿಂಚೋಡಿಯರದೊಡ್ಡಿ, ಬುಂಕಲದೊಡ್ಡಿ ಗ್ರಾಮ, ದೇವದುರ್ಗ ತಾಲೂಕು, ರಾಯಚೂರು ಜಿಲ್ಲೆ.
ಅಯ್ಯಪ್ಪ	೬೫	ಗಂಡು	ಒಕ್ಕಲುತನ	ಕುರುಬ	ಚಿಂಚೋಡಿಯರದೊಡ್ಡಿ, ಬುಂಕಲದೊಡ್ಡಿ ಗ್ರಾಮ, ದೇವದುರ್ಗ ತಾಲೂಕು, ರಾಯಚೂರು ಜಿಲ್ಲೆ.
ದುರುಗಪ್ಪ	೫೫	ಗಂಡು	ಕೃಷಿಕೂಲಿ	ಕುರುಬ	ಚಿಂಚೋಡಿಯರದೊಡ್ಡಿ, ಬುಂಕಲದೊಡ್ಡಿ ಗ್ರಾಮ, ದೇವದುರ್ಗ ತಾಲೂಕು, ರಾಯಚೂರು ಜಿಲ್ಲೆ.
ಪಾಂಡುರಂಗಪ್ಪ	೬೭	ಗಂಡು	ಯಜಮಾನ	ನಾಯಕ	ಗಾಲೆರದೊಡ್ಡಿ, ದೇವದುರ್ಗ ತಾಲೂಕು, ರಾಯಚೂರು ಜಿಲ್ಲೆ.
ಸಾಬಯ್ಯ	೭೦	ಗಂಡು	ಯಜಮಾನ	ನಾಯಕ	ಗಾಲೆರದೊಡ್ಡಿ, ದೇವದುರ್ಗ ತಾಲೂಕು, ರಾಯಚೂರು ಜಿಲ್ಲೆ.
ಅಂಜಿನಮ್ಮ	೩೮	ಹೆಣ್ಣು	ಗೃಹಿಣಿ	ನಾಯಕ	ಹಳ್ಳರಾಯನದೊಡ್ಡಿ, ದೇವದುರ್ಗ ತಾಲೂಕು, ರಾಯಚೂರು ಜಿಲ್ಲೆ.

ಹನುಮಂತರಾಯ	೪೨	ಗಂಡು	ಕೃಷಿಕೂಲಿ	ನಾಯಕ	ಕುಲೆರದೊಡ್ಡಿ, ಇರಬಗೇರಿ ಗ್ರಾಮ, ದೇವದುರ್ಗ ತಾಲೂಕು, ರಾಯಚೂರು ಜಿಲ್ಲೆ.
ಯಂಕಮ್ಮ	೩೫	ಹೆಣ್ಣು	ಕೃಷಿಕೂಲಿ	ನಾಯಕ	ಕುಲೆರದೊಡ್ಡಿ, ಇರಬಗೇರಿ ಗ್ರಾಮ, ದೇವದುರ್ಗ ತಾಲೂಕು, ರಾಯಚೂರು ಜಿಲ್ಲೆ.
ಸಿದ್ಧಯ್ಯ	೫೭	ಗಂಡು	ಕೃಷಿ	ನಾಯಕ	ಕುಲೆರದೊಡ್ಡಿ, ಇರಬಗೇರಿ ಗ್ರಾಮ, ದೇವದುರ್ಗ ತಾಲೂಕು, ರಾಯಚೂರು ಜಿಲ್ಲೆ.
ಬಾಗಪ್ಪ	೩೬	ಗಂಡು	ವ್ಯವಸಾಯ	ಕಬ್ಬಲಿಗ	ಅಂಬಿಗೇರದೊಡ್ಡಿ, ವೀರಗೋಟ ಗ್ರಾಮ, ದೇವದುರ್ಗ ತಾಲೂಕು ರಾಯಚೂರು ಜಿಲ್ಲೆ.
ಬಸಪ್ಪ	೪೩	ಗಂಡು	ಮೀನುಗಾರಿಕೆ	ಕಬ್ಬಲಿಗ	ಅಂಬಿಗೇರದೊಡ್ಡಿ, ವೀರಗೋಟ ಗ್ರಾಮ, ದೇವದುರ್ಗ ತಾಲೂಕು ರಾಯಚೂರು ಜಿಲ್ಲೆ.
ಶಿವಪ್ಪ	೪೫	ಗಂಡು	ಕೃಷಿಕೂಲಿ	ಕಬ್ಬಲಿಗ	ಅಂಬಿಗೇರದೊಡ್ಡಿ, ವೀರಗೋಟ ಗ್ರಾಮ, ದೇವದುರ್ಗ ತಾಲೂಕು ರಾಯಚೂರು ಜಿಲ್ಲೆ.
ಆದಪ್ಪ	೪೫	ಗಂಡು	ಡ್ರೈವರ್	ಕಬ್ಬಲಿಗ	ಅಂಬಿಗೇರ ದೊಡ್ಡಿ, ಗುರುಗುಂತ ಗ್ರಾಮ, ಲಿಂಗಸ್ಗೂರು, ರಾಯಚೂರು ಜಿಲ್ಲೆ.
ಗಂಗಪ್ಪ	೬೫	ಗಂಡು	ಕೃಷಿ	ಕಬ್ಬಲಿಗ	ಅಂಬಿಗೇರ ದೊಡ್ಡಿ, ಗುರುಗುಂತ ಗ್ರಾಮ, ಲಿಂಗಸ್ಗೂರು, ರಾಯಚೂರು ಜಿಲ್ಲೆ.
ಗಂಗಮ್ಮ	೪೦	ಹೆಣ್ಣು	ಕೃಷಿ	ಕಬ್ಬಲಿಗ	ಅಂಬಿಗೇರ ದೊಡ್ಡಿ, ಗುರುಗುಂತ ಗ್ರಾಮ, ಲಿಂಗಸ್ಗೂರು, ರಾಯಚೂರು ಜಿಲ್ಲೆ.
ಹೊನ್ನಮ್ಮ	೩೫	ಹೆಣ್ಣು	ಕೃಷಿ	ಕಬ್ಬಲಿಗ	ಅಂಬಿಗೇರ ದೊಡ್ಡಿ, ಗುರುಗುಂತ ಗ್ರಾಮ, ಲಿಂಗಸ್ಗೂರು, ರಾಯಚೂರು ಜಿಲ್ಲೆ.

ಪತ್ರಿಕಾ ವರದಿಗಳು

ಲಿಂಗಸುಗೂರು ತಾಲ್ಲೂಕಿನ ಏಳುಮಡಿಕೇರ್ ದೊಡ್ಡಿ: ನೀರಿನ ಸಮಸ್ಯೆ ಗಂಭೀರ

ಪ್ರಜಾವಾಣಿ ಪತ್ರಿಕೆ 28-4-2016

ದುರ್ವಾಸನೆ ನೀರು ಸೇವಿಸುವ ಗ್ರಾಮಸ್ಥರು

• ಶಶಿಧರ ಗರ್ಗೇಶ್ವರಿ

ರಾಯಚೂರು: ಏಳುಮಡಿಕೇರ್ ದೊಡ್ಡಿ ಲಿಂಗಸುಗೂರು ತಾಲ್ಲೂಕಿನ ಜನವಸತಿ ಪ್ರದೇಶ. 30 ಎಕರೆ ಜಮೀನಿನಲ್ಲಿ ಕೃಷಿ ಮಾಡಿಕೊಂಡಿರುವ ಒಂದೇ ಮನೆತನಕ್ಕೆ ಸೇರಿದ 15 ಕುಟುಂಬಗಳಿದ್ದು, ಸುಮಾರು 50 ಜನರಿದ್ದಾರೆ. ರಸ್ತೆ, ವಿದ್ಯುತ್ ಸೌಕರ್ಯಗಳು ಇಲ್ಲದ ಇಲ್ಲಿ ಬರದಿಂದಾಗಿ ಕುಡಿಯುವ ನೀರಿಗೆ ತೀವ್ರ ತೊಂದರೆಯಾಗಿದೆ.

ಬೇಸಿಗೆ ದಿನಗಳಲ್ಲಿ ಇಲ್ಲಿನ ಜನರು ಗುಡ್ಡದ ಬಂಡೆಗಳ ನಡುವೆ ಇರುವ ಗುಂಡಿಗಳಲ್ಲಿ (ಸ್ಥಳೀಯರು ಗುಂಡ ಎನ್ನುತ್ತಾರೆ) ಒಸರುವ ಕಲುಷಿತ ಮತ್ತು ವಾಸನೆಯುಕ್ತ ನೀರನ್ನೆ ಕುಡಿಯಲು ಬಳಸುತ್ತಾರೆ.

ಹೈದೊಡ್ಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಯರಜಂತಿ ಗ್ರಾಮದಿಂದ ಎರಡು ಕಿಲೊಮೀಟರ್ ದೂರದಲ್ಲಿರುವ ಈ ಜನವಸತಿಗೆ ಸ್ವಲ್ಪ ದೂರ ಮಾತ್ರ ದ್ವಿಚಕ್ರ ವಾಹನ ಹೋಗುವಷ್ಟು ದಾರಿ ಇದೆ. ಕುರುಚಲು ಹಾದಿ ಗುಡ್ಡದ ಕಲ್ಲುಗಳಿಂದ ಕೂಡಿದ್ದು, ನಡೆದು ಕೊಂಡೇ ಹೋಗಬೇಕು. ಹಳ್ಳದಲ್ಲಿ ಹೆಂಗಸರು ಮಕ್ಕಳು ಬಿಸಿಲನ್ನು ಲೆಕ್ಕಿಸದೆ ಕೊಡಗಳಲ್ಲಿ ನೀರು ಸಂಗ್ರಹಿಸಿ ಮನೆಗೆ ಒಯ್ಯುತ್ತಾರೆ.

'ಏನ್ ಮಾಡಬೇಕ್ರಿ ನೀರು ವಾಸ್ನೆ ಇದೆ. ಇದನ್ನಿತ್ರ ಬೇರೆ ನೀರಿಲ್ಲ ಇದ್ದನ್ನ ಕುಡಿತೇವು' ಎಂದು ದೊಡ್ಡಿಯ ತಿಮ್ಮಣ್ಣ ಮತ್ತು ಶಾಂತಮ್ಮ ಹೇಳುತ್ತಾರೆ.

'ಊರಿನಲ್ಲಿ ಯಾರಿಗಾದರೂ ಜಡ್ಡು ಬಂದರೆ ಅವರನ್ನು ಯರಜಂತಿವರೆಗೆ ಹೊತ್ತುಕೊಂಡೇ ಬರಬೇಕು. ಗ್ರಾಮದಲ್ಲಿ ವಿದ್ಯುತ್ ಇಲ್ಲದ ಕಾರಣ ಯರಜಂತಿಗೆ ಮೊಬೈಲ್ ತಂದು ಚಾರ್ಜ್ ಮಾಡಬೇಕು' ಎಂದು ರಂಗಪ್ಪ ಹೇಳುತ್ತಾರೆ.

ಲಿಂಗಸುಗೂರು ತಾಲ್ಲೂಕಿನಲ್ಲಿ ನೀರು, ವಿದ್ಯುತ್ ಸಮಸ್ಯೆ ಇರುವ ಇಂತಹ ನೂರು ದೊಡ್ಡಿಗಳು ಇವೆ.





ಲಿಂಗಸುಗೂರು ತಾಲ್ಲೂಕಿನ ಏಳುಮಡಿಕೇರ್ ದೊಡ್ಡಿಯಲ್ಲಿ ಕಲ್ಲುಬಂಡೆಗಳ ನಡುವೆ ಇರುವ ಗುಂಡಿಯಲ್ಲಿನ ಕಲುಷಿತ ನೀರನ್ನು ಸಂಗ್ರಹಿಸುವ ಹೆಣ್ಣು ಮಕ್ಕಳು (ಎಡಚಿತ್ರ) ಲಿಂಗಸುಗೂರು ತಾಲ್ಲೂಕಿನ ಆಡವಿಬಾವಿಯರ್ ದೊಡ್ಡಿಯಲ್ಲಿ ಗುಂಡಿಯಲ್ಲಿನ ನೀರು ಸಂಗ್ರಹಕ್ಕಾಗಿ ಸರತಿ

ಮುಖ್ಯಾಂಶಗಳು

- ವಿದ್ಯುತ್, ರಸ್ತೆ ಸಂಪರ್ಕವಿಲ್ಲದ ಜನವಸತಿ
- ಜನರು– ಜಾನುವಾರುಗಳಿಗೆ ಗುಂಡಿ ನೀರೇ ಆಸರೆ
- ಹೈದೊಡ್ಡಿ ಗ್ರಾ.ಪಂ ಕೇಂದ್ರ ಸ್ಥಾನದಲ್ಲೂ ನೀರಿಗೆ ತತ್ವಾರ

'ಏಳುಮಡಿಕೇರ್ ದೊಡ್ಡಿ ಕಂದಾಯ ಗ್ರಾಮವಲ್ಲ. ಅದು ಜನವಸತಿ ಪ್ರದೇಶ. ಇಲ್ಲಿನ ಸಮಸ್ಯೆ ಗಮನಕ್ಕೆ ಬಂದಿಲ್ಲ. ಆ ದೊಡ್ಡಿಗೆ ಭೇಟಿ ನೀಡಿ ಕುಡಿಯುವ ನೀರಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸಲು ಮಾರ್ಗೋಪಾಯ ಹುಡುಕಲಾಗುವುದು' ಎಂದು ಲಿಂಗಸುಗೂರು ತಾಲ್ಲೂಕಿನ ತಹಶೀಲ್ದಾರ್ ಶಿವಾನಂದ ಸಾಗರ್ ತಿಳಿಸಿದರು.

ಗ್ರಾ.ಪಂ ಕೇಂದ್ರದಲ್ಲೇ ನೀರಿಗೆ ತತ್ವಾರ: ಹೈದೊಡ್ಡಿ ಗ್ರಾಮ ಪಂಚಾಯಿತಿ ಕೇಂದ್ರ ಸ್ಥಳವಾದರೂ ಇಲ್ಲಿನ ಜನರು ನೀರು ಸಂಗ್ರಹಿಸಲು ಕಷ್ಟ ಪಡುತ್ತಿದ್ದಾರೆ. ಗ್ರಾಮದಿಂದ ಆರು ಕಿಲೊಮೀಟರ್ ದೂರದಲ್ಲಿ ಹರಿಯುವ ಕೃಷ್ಣೆಯು ಒಣಗಿ ಬರಿದಾಗಿದೆ. ಗ್ರಾಮದಲ್ಲಿರುವ ಎರಡು ಕೊಳವೆ ಬಾವಿಗಳಲ್ಲಿ ಒಂದು ಮಾತ್ರ ಸರಿ ಇದೆ. ಆದರೆ ಫ್ಲೋರೈಡ್‌ಯುಕ್ತ ಉಪ್ಪು ನೀರು. ಆದ್ದರಿಂದ ಇದನ್ನು ಕುಡಿಯಲು ಬಳಸುವುದಿಲ್ಲ. ಹಿರಿಯರ ಬಾವಿಯಿಂದ ನೀರು ತರಬೇಕು.

'ಕೃಷ್ಣಾ ನದಿಯಿಂದ ₹ 1.60 ಕೋಟಿ ವೆಚ್ಚದ ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಮಂಜೂರಾಗಿದೆ. ಆದರೆ ಅನುಷ್ಠಾನವಾಗಿಲ್ಲ. ಇದು ಜಾರಿಯಾದರೆ ಗ್ರಾಮದ ಜನರು ಎದುರಿಸುತ್ತಿರುವ ನೀರಿನ ಬವಣೆ ತಪ್ಪುತ್ತದೆ' ಎಂದು ಗ್ರಾಮ ಪಂಚಾಯಿತಿ ಸದಸ್ಯ ಭೀಮಣ್ಣ ಹೇಳುತ್ತಾರೆ.

ನದಿ ಈಜಿ ತವರಿನಲ್ಲಿ ಹಾಯಾಗಿರುವ ಗರ್ಭಿಣಿ

ಪ್ರಜಾವಾಣಿ ದಿನ ಪತ್ರಿಕೆ 2-8-2014

'ದೇವರ ಮ್ಯಾಲ ಭಾರ ಹಾಕಿ ನದ್ಯಾಗ ಈಸಿದೆ'

ಪ್ರಜಾವಾಣಿ ವಾರ್ತೆ

ಹುಣಸಗಿ (ಯಾದಗಿರಿ ಜಿಲ್ಲೆ): 'ಸಾಹೇಬ್ರ ದೇವರ ಮ್ಯಾಲಾ ಭಾರಾ ಹಾಕಿ ನದ್ಯಾಗ ಇಳಿದೆ. ದೇವರ ನಮ್ಮನ್ನ ಕಾಯ್ತು. ಹೆರಿಗಿ ಸಮೀಪ ಬಂದಿತ್ತು. ಹಿಂಗಾಗಿ ಊರಿಗೆ ಬರಾಕ ಬೇಕಿತ್ತು. ಅದಕ್ಕ ನದ್ಯಾಗ ಈಜಿಕೊಂಡ ತವರ ಮನಿಗೆ ಬಂದೇನ್ರಿ'–

ತುಂಬಿ ಹರಿಯುತ್ತಿರುವ ಕೃಷ್ಣಾ ನದಿಯಲ್ಲಿ ಒಂದು ಕಿಲೋ ಮೀಟರ್ ಈಜಿ ದಡ ಸೇರಿದ ಗರ್ಭಿಣಿ ಯಲ್ಲಮ್ಮ, ತನ್ನ ತವರೂರಾದ ಗೊಲ್ಲಪಲ್ಲೇರದೊಡ್ಡಿಯಲ್ಲಿ ಶುಕ್ರವಾರ ಹಾಯಾಗಿ ಕುಳಿತು ಹೇಳಿದ ಮಾತಿದು.

ಹೆರಿಗೆಗಾಗಿ ತುಂಬಿದ ಕೃಷ್ಣೆಯನ್ನು ಈಜಿ ದಡ ಸೇರಿದ ಮಹಿಳೆ ಯಲ್ಲಮ್ಮ ಗಡ್ಡಿ, ಆರೋಗ್ಯವಾಗಿದ್ದು, ಎಂದಿನ ನಿತ್ಯದ ಕೆಲಸ ಕಾರ್ಯದಲ್ಲಿ ನಿರತರಾಗಿ ಎಲ್ಲರನ್ನೂ ಚಕಿತರಾಗುವಂತೆ ಮಾಡಿದ್ದಾರೆ.



ಯಲ್ಲಮ್ಮ ತನ್ನ ತವರೂರಾದ ಗೊಲ್ಲಪಲ್ಲೇರದೊಡ್ಡಿಯಲ್ಲಿ ಶುಕ್ರವಾರ ಮನೆಯ ಮುಂದೆ ಕುಳಿತಿರುವುದು

ಎರಡು ವಾರಗಳಿಂದ ನಾರಾಯಣಪುರದ ಬಸವಸಾಗರ ಜಲಾಶಯದಿಂದ ಕೃಷ್ಣಾ ನದಿಗೆ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿಬಿಡಲಾಗುತ್ತಿದೆ.

ಇದರಿಂದ ಕಕ್ಕೇರಾ ಸಮೀಪದ ಕೆಲ ಗ್ರಾಮ, ಗಡ್ಡಿಗಳನ್ನು ನೀರು ಆವರಿಸಿದೆ. ಇದರಲ್ಲಿ ನೀಲಕಂಠರಾಯನಗಡ್ಡಿಯೂ ಒಂದಾಗಿದ್ದು, ನದಿಗೆ ಹೆಚ್ಚಿನ ಪ್ರಮಾಣದ ನೀರನ್ನು ಬಿಟ್ಟಾಗ ಇದು ನಡುಗಡ್ಡೆಯಾಗಿ ಪರಿವರ್ತನೆ ಆಗುತ್ತದೆ.

ನೀಲಕಂಠರಾಯನಗಡ್ಡೆಯ ನಿವಾಸಿಯಾದ ಯಲ್ಲಮ್ಮ ಗಡ್ಡಿ, ತುಂಬು ಗರ್ಭಿಣಿಯಾಗಿದ್ದು, ಹೆರಿಗೆಯ ಸಮಯ ಹತ್ತಿರಕ್ಕೆ ಬಂದಿತ್ತು. ಯಾವುದೇ ಸಂದರ್ಭದಲ್ಲಿ ಹೆರಿಗೆಯಾಗಬಹುದು ಎಂದು ತಿಳಿದು ಸಹೋದರ ಮತ್ತು ಇತರರೊಂದಿಗೆ ಈಜುಗಾಯಿ ಸಹಾಯದಿಂದ ನದಿ ಈಜಿ ದಡ ಸೇರಿದರು. ಪಕ್ಕದಲ್ಲಿರುವ ತವರು ಮನೆಯಾದ ಗೊಲ್ಲಪಲ್ಲೇರದೊಡ್ಡಿಗೆ ಸುರಕ್ಷಿತವಾಗಿ ಸೇರಿದ್ದಾರೆ. ಹೊಟ್ಟೆಯಲ್ಲಿನ ಕಂದನನ್ನು ಕಾಪಾಡಲು ಗುರುವಾರ ಬೆಳಿಗ್ಗೆ ನದಿ ಈಜಿರುವುದಾಗಿ ತಮ್ಮದೇ ಮಾತಿನಲ್ಲಿ ತಿಳಿಸಿದರು.

ಆರೋಗ್ಯವಂತೆ ಯಲ್ಲಮ್ಮ: 'ಯಲ್ಲಮ್ಮ ಶುಕ್ರವಾರ ಕಕ್ಕೇರಾ ಗ್ರಾಮದ ಆಸ್ಪತ್ರೆಗೆ ಬಂದಿದ್ದು, ಗರ್ಭಿಣಿ ಮತ್ತು ಶಿಶುವಿಗೆ ಯಾವುದೇ ತೊಂದರೆ ಇಲ್ಲ. ನದಿ ಈಜಿದ ನಂತರವೂ ಆರೋಗ್ಯವಾಗಿದ್ದಾರೆ' ಎಂದು ವೈದ್ಯಾಧಿಕಾರಿ ಡಾ. ಸತೀಶಕುಮಾರ ಮಾಧವಾನಿ ತಿಳಿಸಿದರು.

'ಜು.30ರಂದು ಜಿಲ್ಲಾಧಿಕಾರಿ ಬಂದಾಗ ಒಂದು ಬೋಟ್ ತಂದಿಟ್ಟಿದ್ದಾರೆ. ಆದರೆ ಇದುವರೆಗೂ ಬೋಟ್ ಚಾಲಕನನ್ನು ನೀಡಿಲ್ಲ' ಎಂದು ಗ್ರಾಮದ ಅಮರೇಶ ತಿಳಿಸಿದರು.

ವಿಜಯ ಕರ್ನಾಟಕ ಪತ್ರಿಕೆ

9 ಆಗಸ್ಟ್ 2015, ಗಂಗಾವತಿ

ಶಾಲೆಯಲ್ಲಿ ನಾನಾ ಕೆಲಸಗಳಿಗೆ ಮಕ್ಕಳ ಬಳಕೆ!

ವಿಕ ಸುದ್ದಿಲೋಕ, ದೇವದುರ್ಗ

ಸಮೀಪದ ಆಲ್ಕೋಡ್ ಗ್ರಾ.ಪಂ.ವ್ಯಾಪ್ತಿಗೆ ಬರುವ ಗಡಿ ಭಾಗದ ಸಿಂಗೇರದೊಡ್ಡಿ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳೇ ನೀರು ತಂದು ಶೌಚಗೃಹಗಳನ್ನು ಸ್ವಚ್ಛಗೊಳಿಸುವ ಅನಿಷ್ಟ ಪದ್ಧತಿ ಜಾರಿಯಿದೆ!

ಸರಕಾರ ಶೈಕ್ಷಣಿಕ ಪ್ರಗತಿಗಾಗಿ ಕೋಟ್ಯಂತರ ರೂ. ಅನುದಾನ ಮಂಜೂರು ಮಾಡುತ್ತಿದೆ. ಶಾಲೆ ನಿರ್ವಹಣೆ, ಸ್ವಚ್ಛತೆಗಾಗಿ ಲಕ್ಷಾಂತರ ರೂ. ವಾರ್ಷಿಕ ಅನುದಾನ ಬಿಡುಗಡೆ ಮಾಡುತ್ತಿದೆ. ಅಲ್ಲದೇ ಪ್ರತಿ ತಿಂಗಳು ಶೌಚಗೃಹಗಳ ಸ್ವಚ್ಛತೆಗಾಗಿ 300 ರೂ. ನೀಡುತ್ತಿದೆ. ಇಷ್ಟೆಲ್ಲ ಹಣ ಶಾಲೆಗಳ ನಿರ್ವಹಣೆಗಾಗಿ ಬಂದರೂ, ಶಿಕ್ಷಕರು ಮಕ್ಕಳನ್ನು ಕೆಲಸ ಕಾರ್ಯಗಳಿಗೆ ಬಳಕೆ ಮಾಡಿಕೊಳ್ಳುತ್ತಿರುವುದು ಅಸಮಾಧಾನಕ್ಕೆ ಕಾರಣವಾಗಿದೆ.

200 ಮೀಟರ್: ಸಿಂಗೇರದೊಡ್ಡಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ನಾಮ್‌ಕೆವಾಸ್ತೆ ಕುಡಿವ ನೀರಿನ ಟ್ಯಾಂಕ್ ಅಳವಡಿಸಲಾಗಿದೆ. ಹನಿ ನೀರು ಇಂದಿಗೂ ಸರಬರಾಜಾಗಿಲ್ಲ, 200 ಮೀಟರ್ ದೂರದ ಖಾಸಗಿ ಹೊಲ ದಿಂದ ಮಕ್ಕಳು ನೀರು ಹೊತ್ತು ತಂದು, ಶೌಚಗೃಹಕ್ಕೆ ಬಳಕೆ ಮಾಡಿಕೊಳ್ಳಬೇಕಾದ ದುಸ್ಥಿತಿ ಎದುರಾಗಿದೆ.

ಕ್ರಮ: ಯಾವುದೇ ಕಾರಣಕ್ಕೂ ಬಾಲಕರನ್ನು ಕೂಲಿ ಕೆಲಸಗಳಿಗೆ ಬಳಕೆ ಮಾಡಿಕೊಳ್ಳುವುದು ಕಾನೂನಿನಲ್ಲಿ ಅವಕಾಶ ಇಲ್ಲದಿದ್ದರೂ, ಸಮಾಜದ ಜವಾಬ್ದಾರಿ ಸ್ಥಾನದಲ್ಲಿ ಇರುವ ಶಿಕ್ಷಕರೇ ಕಾನೂನು ನಿಯಮಗಳನ್ನು ಉಲ್ಲಂಘಿಸುತ್ತಿರುವುದು ಅತ್ಯಂತ ದುರದೃಷ್ಟಕರ ಸಂಗತಿಯಾಗಿದೆ. ಕೂಡಲೇ ಮೇಲಧಿಕಾರಿಗಳು ಶಿಕ್ಷಕರ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ. ಇಲ್ಲಿ ನೀರಿನ ಸಮಸ್ಯೆ ತೀರ ಇರುವುದ ರಿಂದ ಮಕ್ಕಳೇ ಒಮ್ಮೊಮ್ಮೆ ನೀರು ತರುತ್ತಾರೆ. ಹೆಚ್ಚಾಗಿ ಅಡುಗೆ ಸಹಾಯಕಿಯರೇ ನೀರು ತರುತ್ತಾರೆ. ಮುಂದೆ ಹೀಗಾದಂತೆ ನೋಡಿಕೊಳ್ಳುತ್ತೇನೆ ಎಂದು ಮುಖ್ಯ ಶಿಕ್ಷಕ ಶಿವಶಂಕರ ಪ್ರತಿಕ್ರಿಯಿಸಿದ್ದಾರೆ.

ಕುಡಿವ ನೀರು, ಶೌಚಗೃಹ, ಶಾಲಾ ನಿರ್ವಹಣೆಗಾಗಿ ಸರಕಾರದ ವಾರ್ಷಿಕ 5 ಸಾವಿರ ರೂ. ಹಾಗೂ ಶೌಚಗೃಹಗಳ ಸ್ವಚ್ಛತೆಗಾಗಿ ಪ್ರತಿ ತಿಂಗಳು 300 ರೂ. ಪ್ರತಿ ಶಾಲೆ ನೀಡಲಾಗುತ್ತದೆ. ಸಿಂಗೇರದೊಡ್ಡಿಯಲ್ಲಿ ಮಕ್ಕಳನ್ನು ಕೆಲಸಕ್ಕೆ ಬಳಕೆ ಮಾಡಿಕೊಂಡಿರುವುದು ಕಾನೂನು ಅಪರಾಧ ಶಿಸ್ತು ಕ್ರಮಕ್ಕೆ ಶಿಫಾರಸು ಮಾಡುತ್ತೇನೆ.

- ಎಚ್.ಬಿ.ಹುನಗುಂದ,
ಬಿಇಒ ದೇವದುರ್ಗ.

ಮಹಮದ್ ರಫೀ




ದೇವದುರ್ಗ ತಾಲೂಕಿನ ಆಲ್ಕೋಡ್ ಗ್ರಾ.ಪಂ.ವ್ಯಾಪ್ತಿಗೆ ಬರುವ ಸಿಂಗೇರದೊಡ್ಡಿ ಸರಕಾರಿ ಶಾಲೆ ಮಕ್ಕಳು 200 ಮೀಟರ್ ದೂರದ ಖಾಸಗಿ ಹೊಲದಿಂದ ಶೌಚಗೃಹ ತೊಳೆಯಲು ನೀರು ತಲೆ ಮೇಲೆ ಹೊತ್ತು ತರಲಾಗುತ್ತಿದೆ.

ಪ್ರಜಾವಾಣಿ ಪತ್ರಿಕೆ
8-2-2013

ಸೌಕರ್ಯ ವಂಚಿತ ದೊಡ್ಡಿ



ಗ್ಯಾಡರ್ ದೊಡ್ಡಿಗೆ ಹೋಗುವ ರಸ್ತೆ



ಹುಬ್ಬೇರ್ ದೊಡ್ಡಿಯಲ್ಲಿ ಗುಡಿಸಲುಗಳಲ್ಲಿ ವಾಸವಾಗಿದ್ದ ಕುಟುಂಬಗಳು



ಯರಜಂತಿ ಗ್ರಾಮದ ಪ್ರಾಥಮಿಕ ಶಾಲೆ ಪಕ್ಕದಲ್ಲಿ ನಿಂತಿರುವ ಚರಂಡಿ ನೀರು

ಪ್ರಜಾವಾಣಿ ವಾರ್ತೆ

ಹಟ್ಟಿ ಚಿನ್ನದ ಗಣಿ: ಗುರುಗುಂಟಾ ಹೋಬಳಿ ವ್ಯಾಪ್ತಿಯಲ್ಲಿ ಇರುವ ಯರಜಂತಿ ಗ್ರಾಮ ಮತ್ತು ಸುತ್ತಲಿನ ದೊಡ್ಡಿಗಳಲ್ಲಿ ಜನರು ಮೂಲ ಸೌಕರ್ಯಗಳಿಲ್ಲದೆ ಪರದಾಡುತ್ತಿದ್ದಾರೆ.

ಸರ್ಕಾರ ಗ್ರಾಮಗಳ ಅಭಿವೃದ್ಧಿಗಾಗಿ ಪ್ರತಿ ವರ್ಷ ವಿವಿಧ ಯೋಜನೆಗಳನ್ನು ಜಾರಿಗೆ ತಂದು ಕೋಟ್ಯಂತರ ರೂಪಾಯಿ ವ್ಯಯ ಮಾಡುತ್ತಿದೆ. ಆದರೆ ಇನ್ನೂ ಬಹಳಷ್ಟು ಗ್ರಾಮಗಳಲ್ಲಿ ರಸ್ತೆ, ಚರಂಡಿ, ಕುಡಿಯುವ ನೀರು ಸೇರಿದಂತೆ ಶಿಕ್ಷಣ, ನೈರ್ಮಲ್ಯದಂತಹ ಮೂಲ ಸೌಕರ್ಯಗಳಿಂದ ವಂಚಿತರಾಗಿದ್ದಾರೆ.

ಯರಜಂತಿ ಗ್ರಾಮದ ಸುತ್ತ 34 ದೊಡ್ಡಿಗಳಿವೆ. ಇಲ್ಲಿಂದ ಒಟ್ಟು 6 ಜನ ಗ್ರಾಪಂ ಸದಸ್ಯರು ಆಯ್ಕೆಯಾಗುತ್ತಾರೆ. ಒಂದು ದೊಡ್ಡಿಯಲ್ಲಿ 80 ರಿಂದ 120 ಜನ ಸಂಖ್ಯೆ ಇದೆ. 18 ದೊಡ್ಡಿಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. ಇಲ್ಲಿಯ ನಿವಾಸಿಗಳು ಅಸ್ವಸ್ಥರಾದರೆ ಆಸ್ಪತ್ರೆಗಳಿಗೆ ಹೋಗಲು ರಸ್ತೆಗಳಿಲ್ಲ. ವಿದ್ಯುತ್ ಸಂಪರ್ಕ ಇಲ್ಲ. ಈ ದೊಡ್ಡಿಯ ಮಕ್ಕಳು ಪ್ರಾಥಮಿಕ ಶಿಕ್ಷಣಕ್ಕೆ 3ರಿಂದ 4 ಕಿ.ಮೀ. ದೂರ ಹೋಗಬೇಕು ಎಂದು ಕಬ್ಬೇರ ದೊಡ್ಡಿಯ ಗಂಗಪ್ಪ ಅಂಬಿಗೇರ ಹೇಳುತ್ತಾರೆ.

ದೊಡ್ಡಿ ನಿವಾಸಿಗಳು ರಸ್ತೆ ನಿರ್ಮಿಸಲು ಸಹಕರಿಸದ ಕಾರಣ ರಸ್ತೆ ಅಭಿವೃದ್ಧಿ ಕಾಮಗಾರಿ ನಡೆಯುತ್ತಿಲ್ಲ ಎಂಬುದು ಗ್ರಾಪಂ ಅಧ್ಯಕ್ಷ ಹನುಮಯ್ಯ ಹಾಗೂ ಸದಸ್ಯ ತಿಮ್ಮಯ್ಯ ಹೇಳುತ್ತಾರೆ.

ಈ ದೊಡ್ಡಿಗಳ 250 ಕುಟುಂಬಗಳು ಇನ್ನೂ ಗುಡಿಸಲುಗಳಲ್ಲಿ ವಾಸವಿದ್ದಾರೆ. ಸರ್ಕಾರ ಗುಡಿಸಲು ಮುಕ್ತ ಗ್ರಾಮ ಮಾಡಲು ಹಲವು ವಸತಿ ಯೋಜನೆಗಳನ್ನು ಜಾರಿಗೆ ತಂದಿದೆ. ಆದರೆ ಈ ಯೋಜನೆಗಳು ಸರಿಯಾಗಿ ಮುಟ್ಟುತ್ತಿಲ್ಲ ಎಂಬ ಆರೋಪ ನಿವಾಸಿಗಳು ಮಾಡುತ್ತಾರೆ.

ಸಾರಿಗೆ ಬಸ್‌ಗಳು ದಿನಕ್ಕೆ 2 ಅಥವಾ 3 ಬಾರಿ ಮಾತ್ರ ಬರುತ್ತದೆ. ಅದೂ ಸಮಯಕ್ಕೆ ಸರಿಯಾಗಿ ಬರುವುದಿಲ್ಲ. ಹೋಬಳಿ ಹಾಗೂ ತಾಲ್ಲೂಕು ಕೇಂದ್ರಗಳಿಗೆ ಹೋಗಲು ಖಾಸಗಿ ವಾಹನಗಳೆ ಗತಿ ಎಂದು ಹೇಳುತ್ತಾರೆ.

ಶಿಕ್ಷಕರ ಕೊರತೆ: ಯರಜಂತಿ ಗ್ರಾಮದಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 152 ಮಕ್ಕಳಿದ್ದಾರೆ. ಇವರಿಗೆ ಪಾಠ ಮಾಡಲು ಕೇವಲ 4 ಜನ ಶಿಕ್ಷಕರಿದ್ದಾರೆ. ಇವರಲ್ಲಿ ಒಬ್ಬರಿಬ್ಬರು ರಜೆ ಮೇಲೆ ಹೋದರೆ ಅಂದು ಪಾಠಗಳು ಸರಿಯಾಗಿ ನಡೆಯುದಿಲ. ಶಿಕ್ಷಕರ ಕೊರತೆ ಕುರಿತು ಹಲವು ಬಾರಿ ಸಂಪನ್ಮೂಲ ಅಧಿಕಾರಿಗಳ ಗಮನಕ್ಕೆ ತಂದರೂ ಪ್ರಯೋಜನವಾಗಿಲ್ಲ ಎಂದು ಗ್ರಾಮಸ್ಥರು ಹೇಳುತ್ತಾರೆ.

ಕಾಮಗಾರಿ ವಿಳಂಬ: ಸುವರ್ಣ ಗ್ರಾಮ ಯೋಜನೆಯಡಿ ಯರಜಂತಿ ಗ್ರಾಮದಲ್ಲಿ ಸುಮಾರು 85 ಲಕ್ಷ ರೂಪಾಯಿ ಮೊತ್ತದಲ್ಲಿ ಸಮುದಾಯ ಭವನ, ಅಂಗನವಾಡಿ, 5 ಸಿ.ಸಿ. ರಸ್ತೆಗಳ ಕಾಮಗಾರಿಗೆ ಶಂಕುಸ್ಥಾಪನೆ ಮಾಡಲಾಯಿತು. ಎರಡು ತಿಂಗಳುಗಳು ಕಳೆದರೂ ಇನ್ನೂ ಕಾಮಗಾರಿ ಆರಂಭಿಸಿಲ್ಲ. ಸಂಬಂಧಿಸಿದ ಅಧಿಕಾರಿಗಳು ಹಾಗೂ ಜನ ಪ್ರತಿನಿಧಿಗಳು ಕೂಡಲೇ ಕ್ರಮಕ್ಕೆ ಮುಂದಾಗಬೇಕೆಂದು ಗ್ರಾಮದ ಜನರು ಒತ್ತಾಯಿಸಿದ್ದಾರೆ.

-ಎಂ. ಖಾಸಿಂ ಅಲಿ ಹಟ್ಟಿ

ವಿಜಯ ಕರ್ನಾಟಕ
5-4-2015

ಬೇಸಿಗೆ ಕುಡಿವ ನೀರಿನ ಸಮಸ್ಯೆ / 45 ಲಕ್ಷ ರೂ ಪ್ರಸ್ತಾವನೆ /29 ಹಳ್ಳಿಗಳಲ್ಲಿ ಸಮಸ್ಯೆ

ಆಡಳಿತದ ಕಣ್ಣಿಗೆ ಕಾಣದ ಕುಡಿವ ನೀರಿನ ಸಮಸ್ಯೆ !

ವಿಕ ಸುದ್ದಿಲೋಕ, ಲಿಂಗಸುಗೂರು

[illegible]



ಲಿಂಗಸುಗೂರು ತಾಲೂಕಿನ ಮೇದಿನಾಪುರ ಗ್ರಾಮದಲ್ಲಿ ಟ್ಯಾಂಕರ್ ಮೂಲಕ ನೀರು ಪೂರೈಕೆ ಮಾಡಲಾಗುತ್ತಿದೆ. ನೀರು ಪಡೆಯಲು ಜನ ಮುಗಿಬಿದ್ದಿದ್ದಾರೆ.

[illegible]

45 ಲಕ್ಷ ರೂ. ಪ್ರಸ್ತಾವನೆ: [illegible]

ಪ್ರಸ್ತಾವನೆ ವಿವರ: [illegible]

ಶಾಸಕರ ಅಧ್ಯಕ್ಷತೆಯಲ್ಲಿ ನಡೆದ ಟಾಸ್ಕ್‌ಫೋರ್ಸ್ ಸಮಿತಿ ಸಭೆಯಲ್ಲಿ ಈಗಾಗಲೇ 28 ಗ್ರಾಮಗಳಲ್ಲಿ ಕುಡಿವ ನೀರಿನ ಸಮಸ್ಯೆ ಗುರುತಿಸಲಾಗಿದೆ. ತುರ್ತು ಕ್ರಮ ಕೈಗೊಳ್ಳಲು 45 ಲಕ್ಷ ರೂ. ಅನುದಾನಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಹಳ್ಳಿಗಳಲ್ಲಿ ಸಮಸ್ಯೆ ಉಲ್ಬಣವಾದರೆ ತುರ್ತು ಕ್ರಮ ಕೈಗೊಳ್ಳಲು ಹೆಚ್ಚಿನ ಅನುದಾನಕ್ಕೆ ಮನವಿ ಮಾಡಲಾಗುತ್ತದೆ. ಕುಡಿವ ನೀರಿನ ಸಮಸ್ಯೆಗೆ ಅನುದಾನದ ಕೊರತೆ ಇಲ್ಲ.

- [illegible] ರಾವ್, ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿ

[illegible]

ವಿಜಯ ಕರ್ನಾಟಕ ದಿನ ಪತ್ರಿಕೆ

ಕೂಡಗಿ ಸ್ಥಾವರ ವಿರೋಧಿಸಿ ಸೆ.15 ರಿಂದ ಧರಣಿ: ಚಾಮರಸ ಮಾಲಿ ಪಾಟೀಲ್

ಡೆಂಗೆಗೆ ನಲುಗಿದ ನಾಗನದೊಡ್ಡಿ

ಮೂವರು ಮಕ್ಕಳ ಸಾವು: ಜನತೆ ಆತಂಕ

ವಿಕ ಸುದ್ದಿಲೋಕ, ರಾಯಚೂರು

ತಾಲೂಕಿನ ಚಂದ್ರಬಂಡಾ ಪ್ರಾಥಮಿಕ ಆರೋಗ್ಯ ಕೇಂದ್ರ ವ್ಯಾಪ್ತಿಯ ನಾಗನದೊಡ್ಡಿ ಗ್ರಾಮದಲ್ಲಿ ಕಳೆದ ಒಂದು ವಾರದಿಂದ ಶಂಕಿತ ಡೆಂಗೆಯಿಂದ ಬಳಲುತ್ತಿದ್ದ ಮೂವರು ಮಕ್ಕಳು ಬಲಿಯಾಗಿದ್ದಾರೆ. ಇನ್ನೂ ಮೂವರು ಮಕ್ಕಳು ಚಿಕಿತ್ಸೆಗೆ ದಾಖಲಾಗಿದ್ದು, ಗ್ರಾಮಸ್ಥರು ಆತಂಕದಲ್ಲಿದ್ದಾರೆ.

ಈರಮ್ಮ (10), ಐಶ್ವರ್ಯ (8) ವಿಶ್ವಿತಾ (4) ಮೃತರು. ಡೆಂಗೆಯಿಂದ ಬಳಲುತ್ತಿರುವ ಒಬ್ಬ ಬಾಲಕನನ್ನು ಸ್ಥಳೀಯ ಒಪೆಕ್‌ಗೆ ಹಾಗೂ ಮತ್ತಿಬ್ಬರನ್ನು ಬಳ್ಳಾರಿಯ ವಿಮ್ಸ್‌ಗೆ ದಾಖಲಿಸಲಾಗಿದೆ.

ಜ್ವರಪೀಡಿತರಿಗೆ ಚಿಕಿತ್ಸೆ ನೀಡಲು ಗ್ರಾಮದಲ್ಲಿ ಜಿಲ್ಲಾಡಳಿತ ಆರೋಗ್ಯ ಕ್ಯಾಂಪ್ ಆರಂಭಿಸಿದೆ. ವೈದ್ಯರು ಹಾಗೂ ಸಹಾಯಕರ ತಂಡ ಕ್ಯಾಂಪ್‌ನಲ್ಲಿದ್ದಾರೆ. ತುರ್ತು ಆರೋಗ್ಯ ಚಿಕಿತ್ಸಾ ವಾಹನವೂ ಗ್ರಾಮದಲ್ಲಿದೆ.

"ಕರುಣಾ ಟ್ರಸ್ಟ್ ಸಹಯೋಗದ ಸ್ಥಳೀಯ ಪ್ರಾಥಮಿಕ ಆರೋಗ್ಯ ಕೇಂದ್ರದ ವಿರುದ್ಧ ಕ್ರಮಕೈಗೊಳ್ಳುವಂತೆ ಆರೋಗ್ಯ ಇಲಾಖೆಗೆ ಪತ್ರ ಬರೆಯಲಾಗುವುದು" ಎಂದು ಜಿ.ಪಂ. ಸಿಇಒ ಎ.ವಿಜಯ ಜ್ಯೋತ್ಸ್ನಾ ತಿಳಿಸಿದ್ದಾರೆ. ಗ್ರಾಮೀಣ ಕ್ಷೇತ್ರದ ಶಾಸಕ ತಿಪ್ಪರಾಜು ಹವಾಲ್ದಾರ್, ಜಿಲ್ಲಾಧಿಕಾರಿ ಎಸ್.ಸುಕಾಂತ ಸೆಂಥಿಲ್ ಹಾಗೂ ಡಿಎಚ್‌ಒ ಆರ್.ನಾರಾಯಣ ಗ್ರಾಮಕ್ಕೆ ಭೇಟಿನೀಡಿ, ಪರಿಸ್ಥಿತಿ ಪರಿಶೀಲಿಸಿದರು.

ವಿಕ ಚಿತ್ರಲೋಕ



ರಾಯಚೂರು ತಾಲೂಕಿನ ನಾಗನದೊಡ್ಡಿ ಗ್ರಾಮದಲ್ಲಿ ಶಂಕಿತ ಡೆಂಗೆಯಿಂದ ಮೃತಪಟ್ಟ ವಿಶ್ವಿತಾ ಕುಟುಂಬ ದವರ ಆಕ್ರಂದನ.

ನಾಗನದೊಡ್ಡಿ ಗ್ರಾಮದಲ್ಲಿ ಆರೋಗ್ಯ ಕ್ಯಾಂಪ್ ಆರಂಭಿಸಲಾಗಿದೆ. ವೈದ್ಯರಿಂದ ಜ್ವರಪೀಡಿತರ ಆರೋಗ್ಯ ಪರೀಕ್ಷೆ ನಡೆಸಲಾಗುತ್ತಿದೆ. ಸೊಳ್ಳೆಗಳ ನಿಯಂತ್ರಣಕ್ಕೆ ಕ್ರಮ ಕೈಗೊಂಡಿದ್ದು, ಸ್ವಚ್ಛತೆಗಾಗಿ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

-ಎ.ವಿಜಯ ಜ್ಯೋತ್ಸ್ನಾ, ಸಿಇಒ, ರಾಯಚೂರು

ನಾಗನದೊಡ್ಡಿ ಗ್ರಾಮದ ಇಬ್ಬರು ಶಂಕಿತ ಡೆಂಗೆಯಿಂದ ಮೃತಪಟ್ಟಿರುವುದು ದೃಢಪಟ್ಟಿದೆ. ಮತ್ತೊಬ್ಬರದು ಇನ್ನೂ ದೃಢಪಟ್ಟಿಲ್ಲ. ಸದ್ಯ ಒಬ್ಬರು ಒಪೆಕ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಮೃತರ ಕುಟುಂಬಗಳಿಗೆ ಪರಿಹಾರ ಒದಗಿಸುವಂತೆ ಜಿಲ್ಲಾಧಿಕಾರಿಗೆ ಮನವಿ ಮಾಡಿರುವೆ.

-ತಿಪ್ಪರಾಜು ಹವಾಲ್ದಾರ್, ಶಾಸಕ, ಗ್ರಾಮೀಣ ಕ್ಷೇತ್ರ, ರಾಯಚೂರು

ವಿದ್ಯಾರ್ಥಿನಿ ಕಟ್ಟಿಹಾಕಿ ಲೂಟಿ

ಮಂಗಳೂರು: ಮೂಡುಶೆಡ್ಡೆ ದೊಟ್ಟರ ಸಮೀಪ ಗುರುವಾರ ಬೆಳಗ್ಗೆ ವಿದ್ಯಾರ್ಥಿನಿಯೊಬ್ಬಳ ಮಾನಭಂಗಕ್ಕೆ ಯತ್ನಿಸಿ ಮರಕ್ಕೆ ಕಟ್ಟಿಹಾಕಿ ಲೂಟಿ ಮಾಡಿದ ಘಟನೆ ನಡೆದಿದ್ದು ಸಂಜೆ 7 ಗಂಟೆ ಸುಮಾರಿಗೆ ಬೆಳಕಿಗೆ ಬಂದಿದೆ. ಮಂಗಳೂರಿನ ಕಾಲೇಜೊಂದರಲ್ಲಿ ನರ್ಸಿಂಗ್ ವಿದ್ಯಾರ್ಥಿನಿಯಾಗಿರುವ ಯುವತಿಯನ್ನು ನಿರ್ಜನ ಪ್ರದೇಶದಲ್ಲಿ ಇಬ್ಬರು ಮುಸುಕುಧಾರಿಗಳು ಅಡ್ಡಗಟ್ಟಿ ಈ ಕೃತ್ಯ ಎಸಗಿದ್ದಾರೆ. ವಿದ್ಯಾರ್ಥಿನಿಯ ಕತ್ತಿನಲ್ಲಿದ್ದ ಚಿನದ ಸರ, ಮೊಬೈಲ್ ಹಾಗೂ ಪರ್ಸ್‌ನಲ್ಲಿದ್ದ ನಗದನ್ನು ದೋಚಿದ್ದಾರೆ. ನಿರ್ಜನ ಪ್ರದೇಶದಲ್ಲಿ ಈ ಘಟನೆ ನಡೆದಿದ್ದರಿಂದ ಸಂಜೆ ವರೆಗೂ ಇದು ಯಾರ ಅರಿವಿಗೂ ಬರಲಿಲ್ಲ. ಸಂಜೆ 7 ಗಂಟೆ ಸುಮಾರಿಗೆ ವ್ಯಕ್ತಿಯೊಬ್ಬರು ಆ ದಾರಿಯಾಗಿ ನಡೆದುಕೊಂಡು ಹೋಗುತ್ತಿದ್ದ ಸಂದರ್ಭ ಯುವತಿಯ ಕೂಗು ಕೇಳಿ ಆಕೆಯನ್ನು ರಕ್ಷಿಸಿದ್ದಾರೆ. "ಮೊದಲು ಮುಖಕ್ಕೆ ಸ್ಪ್ರೇ ಮಾಡಿ ಪ್ರಜ್ಞೆ ತಪ್ಪಿಸಿ ಈ ಕೃತ್ಯ ನಡೆಸಿದ್ದಾರೆ" ಎಂದು ಆಕೆ ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿ ತಿಳಿಸಿದ್ದಾಳೆ.

ಬಾಲಕಿ ಮೇಲೆ ಅತ್ಯಾಚಾರ

ರಾಯಬಾಗ: ಮನೆಯಲ್ಲಿ ಯಾರೂ ಇಲ್ಲದ ಸಮಯದಲ್ಲಿ ಅಪ್ರಾಪ್ತ ಬಾಲಕಿ ಮೇಲೆ ಅತ್ಯಾಚಾರಕ್ಕೆ ಯತ್ನಿಸಿದ ಘಟನೆ ಕುಡಚಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಗುರುವಾರ ಬೆಳಗ್ಗೆ ನಡೆದಿದೆ.

ಏಳನೇ ತರಗತಿಯಲ್ಲಿ ಓದುತ್ತಿರುವ ಬಾಲಕಿ ಒಬ್ಬಳೇ ಮನೆಯಲ್ಲಿರುವುದನ್ನು ಮನಗಂಡ ಹಣಮಂತ ಲಕ್ಷ್ಮಣ ಭಜಂತ್ರಿ (45) ಎಂಬಾತ ಬಾಲಕಿ ಮೇಲೆ ಅತ್ಯಾಚಾರಕ್ಕೆ ಯತ್ನಿಸಿ ಈಗ ಕುಡಚಿ ಪೊಲೀಸರ ಅತಿಥಿ ಯಾಗಿದ್ದಾನೆ.

ಛಾಯಾಚಿತ್ರಗಳು



ದೊಡ್ಡಿ ಜನರು ವಾಸಿಸುತ್ತಿರುವ ಮನೆ



ಕೃಷಿ ಕೆಲಸ ಮುಗಿಸಿ ಮನೆಗೆ ತೆರಳುತ್ತಿರುವ ದೊಡ್ಡಿಯ ರೈತ



ಅಡಿಕೇರ ದೊಡ್ಡಿಯ ನಿವಾಸಿಗಳು ದಿನನಿತ್ಯ ಓಡಾಡುವ ದಾರಿ









ಕುಡಿಯುವ ನೀರಿನ ವ್ಯವಸ್ಥೆಯಿಲ್ಲದೆ ಹಳ್ಳದ ನೀರನ್ನು ಅವಲಂಬಿಸಿರುವ ಚಿಕ್ಕಲೇರ ದೊಡ್ಡಿಯ ಜನರು



ತಳವಾರ ದೊಡ್ಡಿ ಜನರ ವಾಸದ ಮನೆಗಳು



ಚಿಂಚೋಡರ ದೊಡ್ಡಿಗೆ ಸಂಪರ್ಕ ಕಲ್ಪಿಸುವ ರಸ್ತೆ



ಅಂಬಿಗರ ದೊಡ್ಡಿಗೆ ಸಂಪರ್ಕ ಕಲ್ಪಿಸುವ ರಸ್ತೆ



ನಾಯಕ ಸಮುದಾಯ ವಾಸಿಸುತ್ತಿರುವ ಟಣಮಕಲ್ ದೊಡ್ಡಿಯ ನಿವಾಸದ ಮನೆಗಳು



ಕಬ್ಬಲಿಗ ಸಮುದಾಯ ವಾಸಿಸುತ್ತಿರುವ ಅಂಬಿಗರ ಗುರುಗುಂಟ ವ್ಯಾಪ್ತಿಯ ಅಂಬಿಗರ ದೊಡ್ಡಿ








ಕುರುಬದೊಡ್ಡಿಯ ನಿವಾಸಿಗಳ ಕುರಿ ಮತ್ತು ಮೇಕೆಗಳು


ಶಾಲೆಬಿಟ್ಟು ಕುರಿಕಾಯುತ್ತಿರುವ ದೊಡ್ಡಿಯ ಬಾಲಕ ಮತ್ತು ಬಾಲಕಿ


ಶಿಥಿಲಗೊಂಡಿರುವ ದ್ಯಾಮರ ದೊಡ್ಡಿಯ ನಿವಾಸ



ಎಳ್ಳಿನ ಗೂಡು ಕಟ್ಟುತ್ತಿರುವ ಮುಂಡರಗಿ ದೊಡ್ಡಿಯ ರೈತರು




ಸಜ್ಜೆಯ ಕಟಾವು ಮಾಡುತ್ತಿರುವ ದೇಸಾಯಿ ದೊಡ್ಡಿಯ ಮಹಿಳೆಯರು



ಬಸ್ ಸಂಚಾರವಿಲ್ಲದೆ ಖಾಸಗಿ ವಾಹನದಲ್ಲಿ ತೆರಳುತ್ತಿರುವ ತಪ್ಪಲದೊಡ್ಡಿಯ ಜನರು









ಹೊಲದಲ್ಲಿ ಉಳುಮೆ ಮಾಡುತ್ತಿರುವ ಬೆಂಚಲದೊಡ್ಡಿಯ ರೈತ



ಅಂಗಡಿ ವ್ಯಾಪಾರದಲ್ಲಿ ತೊಡಗಿರುವ ದೋಣೇರದೊಡ್ಡಿಯ ವೃದ್ಧ



ಟಣಮಕಲ್ ದೊಡ್ಡಿ ಜನರ ಬಸ್ ತಂಗುದಾಣ

ಪ್ರಶ್ನಾವಳಿ

೧. ಸಾಮಾನ್ಯ ಮಾಹಿತಿ

೧. ಸಂದರ್ಶನದ ದಿನಾಂಕ:

೨. ಸಂದರ್ಶಿಸಲ್ಪಟ್ಟವರು:

೩. ಗ್ರಾಮ

೪. ತಾಲೂಕು:

೫. ಜಿಲ್ಲೆ:

೬. ದೂರವಾಣಿ ಸಂಖ್ಯೆ

೭. ನೆಲಸಿರುವ ಸ್ಥಳ

೮. ಮಾತೃ ಭಾಷೆ

೯. ಆಡುವ ಇತರೆ ಭಾಷೆಗಳು

೧೦. ಕುಲಕಸುಬು/ ಕಸುಬು

೧೧. ಸಾರಿಗೆ ಸಂಪರ್ಕದ ಸೌಲಭ್ಯ ಇದೆ/ಇಲ್ಲ

ಅ. ಖಾಸಗಿ ವಾಹನ

ಆ. ಸರ್ಕಾರಿ ಬಸ್ಸು

೧೨. ಭೂ ಹಿಡುವಳಿ (ಎಕರೆಗಳಲ್ಲಿ)

ಅ. ಒಣಭೂಮಿ

ಆ ನೀರಾವರಿ

೧೩. ನಿವೇಶನ ಇಲ್ಲ, ಮನೆ ಇಲ್ಲ

೧೪. ನಿವೇಶನ ಇದೆ, ಮನೆ ಇಲ್ಲ

* ನೆಲಸಿರುವ ಸಮುದಾಯ

* ಶಾಲೆ ಇದೆ/ಇಲ್ಲ

ಅ. ಕಿರಿಯ ಪ್ರಾಥಮಿಕ ಶಾಲೆ

ಆ. ಹಿರಿಯ ಪ್ರಾಥಮಿಕ ಶಾಲೆ

ಇ. ಪ್ರೌಢಶಾಲೆ

* ನೆಲೆಸಲು ಕಾರಣ

೧೯. ನಿವೇಶನ

ಅ. ಸಂತದ್ದು

ಆ. ಸರಕಾರದ್ದು

೨೦. ಮನೆ ವಿವರ

೧. ಗುಡಾರ

೨. ಗುಡಿಸಲು

೩. ಟಿನ್ ಮನೆ

೪. ಧಾಬಾ/ ಮಾಳಿಗೆ

೫. ಆರ್‌ಸಿಸಿ ಮನೆ

೬. ಹೆಂಚಿನ ಮನೆ

೭. ಆಶಯ ಮನೆ

೮. ಬಾಡಿಗೆ ಮನೆ

ಕ್ರ. ಸಂ.	ಕುಟುಂಬದ ಸದಸ್ಯರ ಹೆಸರು	ಸಂಬಂಧ/ ಮುಖ್ಯಸ್ಥರು	ಲಿಂಗ	ವಯಸ್ಸು	ವೈವಾಹಿಕ ಸ್ಥಾನಮಾನ	ಶಿಕ್ಷಣ	ಕಸುಬು	ಅಂಗವೈಕಲ್ಯ	ಸರ್ಕಾರಿ ಸೌಲಭ್ಯಗಳು				
									ಟಿಪನ ಕಾರ್ಡ್	ವಿಧವಾ	ಅಂಗವಿಕಲ	ವೃದ್ಧಾಪ್ಯ	ಶಿಷ್ಯವೇತನ
೧	೨	೩	೪	೫	೬	೭	೮	೯	೧೦	೧೧	೧೨	೧೩	೧೪
೧.													
೨.													
೩.													
೪.													
೫.													
೬.													
೭.													
೮.													
೯.													
೧೦.													
೧೧.													
೧೨.													

೨೧. ಪಶು ಸಂಪತ್ತು (ಸಂಖ್ಯೆಗಳಲ್ಲಿ)

೧. ಎತ್ತು, ಹೋರಿ

೨. ಆಕಳು, ಕರು

೩. ಎಮ್ಮೆ, ಕೋಣ

೪. ಕುರಿ

೫. ಮೇಕೆ

೬. ಕೋಳಿ

೨೨. ಇತರೆ ಸೌಲಭ್ಯಗಳು

೧. ಪಡಿತರ ಚೀಟಿ

೨. ವಿದ್ಯುತ್ ಸಂಪರ್ಕ

೩. ಭಾಗ್ಯ/ ಕುಟೀರ ಜ್ಯೋತಿ

೪. ಗ್ಯಾಸ್

೫. ನಲ್ಲಿ

೬. ಶೌಚಾಲಯ

೭. ಸ್ನಾನಗೃಹ

೮. ಟೀವಿ

೯. ದೂರವಾಣಿ

ಯಲ್ಲಪ್ಪ
ಸಂಶೋಧನಾ ವಿದ್ಯಾರ್ಥಿ
ಮಾನವಶಾಸ್ತ್ರ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಡಾ. ತಾರಿಹಳ್ಳಿ ಹನುಮಂತಪ್ಪ
ಮಾರ್ಗದರ್ಶಕರು
ಮಾನವಶಾಸ್ತ್ರ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸಮೀಕ್ಷೆದಾರರ ಹೆಸರು ಮತ್ತು ಸಹಿ

* ಯಾವುದಾದರೂ ಪ್ರಶ್ನೆಗಳಿಗೆ ವಕ್ತೃಗಳು ಹೆಚ್ಚಿನ ಮಾಹಿತಿ ಕೊಟ್ಟಲ್ಲಿ ಪ್ರತ್ಯೇಕ ಹಾಳೆಯೊಂದರಲ್ಲಿ ಬರೆದು ಅದೇ ಪ್ರಶ್ನಾವಳಿ ಹಿಂದೆ ಅಂಟಿಸುವುದು

ಮಾನವಶಾಸ್ತ್ರ ವಿಭಾಗ